ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾದ ಮಹಾಪ್ರಬಂಧ

"ಚಿತ್ರದುರ್ಗ ಜಿಲ್ಲೆಯ ಜನಪದ ವೈದ್ಯ : ಒಂದು ಅಧ್ಯಯನ"

ಸಂಶೋಧನ ವಿದ್ಯಾರ್ಥಿ

ಮು. ಹಾಲಪ್ಪ

ಮಾರ್ಗದರ್ಶಕರು

ಡಾ. ಎಂ.ಎಲ್. ಲಲಿತಮ್ಮ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ ಸ್ಮಾರಕ ಸಂಸ್ಥಾನ

ಮೂರನೇ ಮುಖ್ಯರಸ್ತೆ, ಎನ್.ಆರ್. ಕಾಲೋನಿ, ಬೆಂಗಳೂರು-೫೬೦೦೧೯

೨೦೦೯

(311)

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪಿಎಚ್.ಡಿ. ಅಧ್ಯಯನದ ಮಹಾಪ್ರಬಂಧ

"ಚಿತ್ರದುರ್ಗ ಜಿಲ್ಲೆಯ ಜನಪದ ವೈದ್ಯ : ಒಂದು ಅಧ್ಯಯನ"

ಸಂಶೋಧನ ವಿದ್ಯಾರ್ಥಿ

ಮು. ಹಾಲಪ್ಪ

ಮಾರ್ಗದರ್ಶಕರು

ಡಾ. ಎಂ.ಎಲ್. ಲಲಿತಮ್ಮ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಮೂರನೇ ಮುಖ್ಯರಸ್ತೆ, ಎನ್.ಆರ್. ಕಾಲೋನಿ, ಬೆಂಗಳೂರು-560009.

2009

ದೃಢೀಕರಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2008 ನೇ ಸಾಲಿನ ಪಿಎಚ್.ಡಿ. ಪದವಿಗಾಗಿ ಬೆಂಗಳೂರಿನ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ **"ಚಿತ್ರದುರ್ಗ ಜಿಲ್ಲೆಯ ಜನಪದ ವೈದ್ಯ : ಒಂದು ಅಧ್ಯಯನ"** ಎನ್ನುವ ಮಹಾಪ್ರಬಂಧವನ್ನು ಡಾ॥ ಎಂ.ಎಲ್. ಲಲಿತಮ್ಮ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ನನ್ನ ಸ್ವಂತ ಬರವಣಿಗೆಯಾಗಿದ್ದು ಈ ಮೊದಲು ಬೇರೆ ಯಾವುದೇ ಪದವಿಗಾಗಿ ಸಾದರಪಡಿಸಿಲ್ಲವೆಂದು ಹಾಗೂ ಈ ಮಹಾಪ್ರಬಂಧದ ಯಾವುದೇ ಭಾಗವನ್ನು ಬೇರೆಲ್ಲೂ ಪ್ರಕಟಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : 28.04.09
ಸ್ಥಳ : ಬೆಂಗಳೂರು

ಮು. ಹಾಲಪ್ಪ
ಸಂಶೋಧನ ವಿದ್ಯಾರ್ಥಿ

ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೮ ನೆಯ ಸಾಲಿನ ಪಿಎಚ್.ಡಿ. ಪದವಿಗಾಗಿ ಬೆಂಗಳೂರಿನ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ "ಚಿತ್ರದುರ್ಗ ಜಿಲ್ಲೆಯ ಜನಪದ ವೈದ್ಯ: ಒಂದು ಅಧ್ಯಯನ" ಎಂಬ ಮಹಾಪ್ರಬಂಧವನ್ನು ಮು. ಹಾಲಪ್ಪ ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು ಈ ಮೊದಲು ಇವರು ಯಾವುದೇ ಪದವಿಗಾಗಿ ಸಾದರಪಡಿಸಿಲ್ಲವೆಂದು ಹಾಗೂ ಈ ಮಹಾಪ್ರಬಂಧದ ಯಾವುದೇ ಭಾಗವನ್ನು ಬೇರೆಲ್ಲೂ ಪ್ರಕಟಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಡಾ|| ಎಂ.ಎಲ್. ಲಲಿತಮ್ಮ
ಎಂ.ಎ., ಎಂ.ಬಿ.ಬಿ.ಎಸ್., ಪಿಎಚ್.ಡಿ

ದಿನಾಂಕ: ೦೪ ೦೪ ೨೦೦೯
ಸ್ಥಳ: ಬೆಂಗಳೂರು.

ಕೃತಜ್ಞತೆಗಳು

"ಚಿತ್ರದುರ್ಗ ಜಿಲ್ಲೆಯ ಜನಪದ ವೈದ್ಯ : ಒಂದು ಅಧ್ಯಯನ" ಎಂಬ ವಿಷಯದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಅಧ್ಯಯನ ಮಾಡಲು ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನದ ಮೂಲಕ ಮಾರ್ಗದರ್ಶಕರಾಗಿ ಒಪ್ಪಿ, ಎಲ್ಲಾ ರೀತಿಯ ಸಹಕಾರ ನೀಡಿದ ನನ್ನ ಗುರುಗಳಾದ ಡಾ. ಎಂ.ಎಲ್. ಲಲಿತಮ್ಮ ಅವರಿಗೆ, ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರದ ನಿರ್ದೇಶಕರಾದ ಪ್ರೊ. ನಾ. ಗೀತಾಚಾರ್ಯರವರಿಗೆ, ಅಧ್ಯಕ್ಷ ಪಿ.ವಿ. ನಾರಾಯಣರವರಿಗೆ, ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ನನ್ನ ಸಂಶೋಧನೆ ಆರಂಭಗೊಳ್ಳಲು ಕಾರಣರಾದ ಪತ್ರಕರ್ತ ಶೀ ಆರ್.ಪಿ. ಜಗದೀಶ್‌ರವರಿಗೆ, ಸಂಶೋಧನೆಯ ವಿಧಾನಗಳನ್ನು ತಿಳಿಸಿ ನನ್ನ ಬರವಣಿಗೆಯ ಬಗ್ಗೆ ಕಾಳಜಿ ವಹಿಸಿದ ಪೂಜ್ಯರಾದ ಸಮಾಜ ವಿಜ್ಞಾನಿ ಡಾ. ಎಚ್.ಎಂ. ಮರುಳಸಿದ್ದಯ್ಯ ಅವರಿಗೆ, ಜನಪದ ವೈದ್ಯರು ಹೇಳಿದ್ದನ್ನೆಲ್ಲ ನಂಬದೆ ವಿಮರ್ಶಿಸಿ ನೋಡುವಂತೆ ಪ್ರೋತ್ಸಾಹಿಸಿದ ಇಟಗಿ ಕ್ಷೇತ್ರದ ಮಾಜಿ ಶಾಸಕರಾದ ಶ್ರೀ ಅಂದಾನಪ್ಪನವರಿಗೆ, ನನ್ನ ಅಧ್ಯಯನಕ್ಕೆ ನಿರಂತರವಾದ ಆರ್ಥಿಕ ಸಹಾಯವನ್ನು ನೀಡಿದ ತಂದೆ, ತಾಯಿ ಹಾಗೂ ಸಹೋದರರಿಗೆ ನನ್ನ ಅನಂತ ಕೃತಜ್ಞತೆಗಳು.

ಅಧ್ಯಯನದ ಪ್ರಾರಂಭದಲ್ಲಿ ಸೂಕ್ತಸಲಹೆಗಳನ್ನು ನೀಡಿದ ಡಾ. ಹಿ.ಶಿ. ರಾಮಚಂದ್ರೇಗೌಡ, ಶ್ರೀ ಚಕ್ಕರೆ ಶಿವಶಂಕರ್, ಪ್ರೊ. ಡಿ. ಲಿಂಗಯ್ಯ, ವಿ.ಎನ್. ಶಿವರಾಮು, ಡಾ. ಟಿ. ಗೋವಿಂದ ರಾಜು, ಕರ್ನಾಟಕ ಗೆಜಟಿಯರ್ ವಿಭಾಗದ ಡಿ. ರಾಜೇಂದ್ರಪ್ಪ, ನನ್ನ ಗುರುಗಳು ಹಾಗೂ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ. ಎಂ. ಸುಮಿತ್ರ, ಡಾ. ಕಾರ್ಲೋಸ್‌ರವರಿಗೆ, ಬರವಣಿಗೆಯ ಕಡೆ ನನ್ನ ಗಮನ ಸೆಳೆದ ನಮ್ಮ ಪಕ್ಕದ ಹಳ್ಳಿಯವರೂ ಆದ ಡಾ. ವಿರೂಪಾಕ್ಷಿ ಪೂಜಾರಹಳ್ಳಿಯವರಿಗೆ, ಚಿತ್ರದುರ್ಗ ಭಾಗದ ವೈದ್ಯರ ಕುರಿತು ಮಾಹಿತಿ ನೀಡಿ ಉತ್ತಮ ಸಲಹೆಗಳನಿತ್ತ ಶ್ರೀಲಕ್ಷ್ಮಣ ತೆಲಗಾವಿಯವರಿಗೆ, ಬಿ. ರಾಜಶೇಖರಪ್ಪನವರಿಗೆ, ಡಾ. ಮೀರಾಸಾಬಿಹಳ್ಳಿ ಶಿವಣ್ಣರಿಗೆ, ಪ್ರೊ. ಶ್ರೀಶೈಲ ಆರಾಧ್ಯರಿಗೆ, ಬೆಳಗೆರೆ ಕೃಷ್ಣಶಾಸ್ತ್ರೀಯವರಿಗೆ, ಚಿತ್ರದುರ್ಗ ಜಿಲ್ಲಾ ಸಂಶೋಧನಾ ತಂಡದ ಅಧ್ಯಕ್ಷರಾದ ಶ್ರೀನಾಗರಾಜ ಹೊಯ್ಸಳರವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ವೈಜ್ಞಾನಿಕ ಅಧ್ಯಯನಕ್ಕೆ ಪ್ರೊತ್ಸಾಹಿಸಿದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಎಸ್.ಐ.ಡಿ ವಿಭಾಗದ ಎ.ವಿ. ಸುಬ್ಬಣ್ಣನವರಿಗೆ, ಬಿ.ಎಸ್. ವೆಂಕಟರಾಮ್‌ರವರಿಗೆ, ಬೆಂಗಳೂರು

ವಿಶ್ವವಿದ್ಯಾಲಯದ ಸಸ್ಯಶಾಸ್ತ್ರದ ಪ್ರಧ್ಯಾಪಕರಾದ ಶ್ರೀ ನಿಜಗುಣಯ್ಯ, ಶ್ರೀಮತಿ ತೇಜಾವತಿ, ಜಿ.ಕೆ.ವಿ.ಕೆಯ ತೋಟಗಾರಿಕಾ ವಿಭಾಗದ ಪ್ರದ್ಯಾಪಕಿಯಾದ ಡಾ. ಎಂ. ವಸುಂಧರಾ, ಬೆಂಗಳೂರು ಆಯುರ್ವೇದ ಕಾಲೇಜಿನ ಪ್ರದ್ಯಾಪಕರಾದ ಡಾ. ನಾಗೇಂದ್ರಯ್ಯ, ಡಾ. ಆಶಾಲತಾ ಹಾಗೂ ಅವರ ವಿದ್ಯಾರ್ಥಿಗಳಿಗೆ ನನ್ನ ಕೃತಜ್ಞತೆಗಳು.

ಸಸ್ಯಲೋಕದ ಬಗ್ಗೆ ನನ್ನ ಆಸಕ್ತಿಯನ್ನು ಹೆಚ್ಚಿಸಿ ಅವುಗಳ ಸಂಗ್ರಹ ಮಾಡುವುದನ್ನು ಮತ್ತು ಛಾಯಾಚಿತ್ರ ತಗೆಯುವುದನ್ನು ತಿಳಿಸಿಕೊಟ್ಟ ಸಸ್ಯಶಾಸ್ತ್ರದ ಪ್ರದ್ಯಾಪಕರಾದ ಡಾ. ಮಾಗಡಿ ಆರ್. ಗುರುದೇವ ರವರಿಗೆ, ಸುಮಾರು 70ಸಸ್ಯಗಳನ್ನು ಹರ್ಬೇರಿಯಂ ಮಾಡಲು ನೆರವಾದ ಮತ್ತು ಅವುಗಳ ಹುಡುಕಾಟದಲ್ಲಿ ಜೊತೆಯಾಗಿದ್ದ ಅಬ್ಬೇನಹಳ್ಳಿಯ ಶ್ರೀಪಾಲಯ್ಯ, ಶ್ರೀನಲ್ಲಜರವಯ್ಯ, ಕೃಷ್ಣ, ನಾಗಣ್ಣ, ತಿಪ್ಪೇಸ್ವಾಮಿ(ಗಡ್ಡ), ದೇವರಾಜ, ಅಣ್ಣನಾದ ಸಿದ್ದಪ್ಪ ಇವರೆಲ್ಲರಿಗೂ ನಾನು ಹೆಚ್ಚು ತೊಂದರೆಯನ್ನು ಕೊಟ್ಟಿದ್ದೇನೆ ಎನಿಸುತ್ತಿದೆ. ಇದೇ ರೀತಿಯಾಗಿ ಕುಂಬಳಕುಂಟೆಯ ಸೋದರರಾದ ಶ್ರೀ ಹನುಮಂತಪ್ಪ, ಕುಬೇರಗೌಡ, ಜಂಬನಗೌಡ, ನಾಗೇಶ್, ಪ್ರಸನ್ನಕುಮಾರ್ ಮತ್ತು ನನ್ನ ಹುಚ್ಚು ತಿರುಗಾಟದ ಜೊತೆಯಲ್ಲಿ ಕಾಡು, ಗುಡ್ಡಗಳನ್ನೆಲ್ಲ ತಿರುಗುತ್ತಿದ್ದ ಕೆ. ಇಂದ್ರಪ್ಪ ಮತ್ತು ಇದೇ ಊರಿನ ಸಮಾಜ ಕಾರ್ಯಕರ್ತರಾದ ಶ್ರೀ ಹೆಚ್.ಬಿ. ಕಣ್ಣಿಯವರಿಗೆ, ಶ್ರೀ ಉದಯಕುಮಾರ್ ರಾವ್ ಬೇಕಲ್, ಎಸ್. ರಮಾನಂದ ಹಾಗೂ ಸಮುಚ್ಚಯದ (ಮಂಗಳೂರು) ಎಲ್ಲಾ ಮಿತ್ರರಿಗೆ, ಜನಪದ ವೈದ್ಯರ ಬಗ್ಗೆ ಕಾಳಜಿ ಇರುವ ಮತ್ತು ಅವರ ಸಂಘಟನೆಯಲ್ಲಿ ಆಸಕ್ತಿ ಹೊಂದಿರುವ ಎಸ್.ಎಂ. ಕೊಟ್ರಯ್ಯನವರಿಗೆ ನನ್ನ ಹೃದಯಪೂರ್ವಕ ಕೃತಜ್ಞತೆಗಳು.

ಮೊಳಕಾಲ್ಮೂರು ಭಾಗದ ಕ್ಷೇತ್ರಕಾರ್ಯದಲ್ಲಿ ನೆರವಾದ ಗುಂಡುಮುಣುಗಿನ ಶ್ರೀ ಸಿದ್ದನಗೌಡ್ರು, ಹಾನಗಲ್‌ನ ಶ್ರೀ ವೀರಣ್ಣ ಹಾಗೂ ಇವರ ಮಗ ಶ್ರೀರಾಮಕೃಷ್ಣ, ಚಳ್ಳಕೆರೆ ತಾಲ್ಲೂಕಿನ ಕ್ಷೇತ್ರಕಾರ್ಯದಲ್ಲಿ ಜೊತೆಗಿರುತ್ತಿದ್ದ ಅಬ್ಬೇನಹಳ್ಳಿಯ ಶ್ರೀಪಾಲಯ್ಯ, ರೇವಣ್ಣಮಾಮ, ಗುಂತು ಕೋಲಮ್ಮನಹಳ್ಳಿಯ ಪಾಲಣ್ಣ, ಓಬಯ್ಯನಹಟ್ಟಿಯ ಮಲ್ಲೇಶಣ್ಣ, ಈಶಣ್ಣ, ಪಿ. ಮಹದೇವಪುರ ಕ್ಲಸ್ಟರ್‌ನ ಸಿ.ಆರ್.ಪಿ ಆದ ಶ್ರೀ ತಿಪ್ಪೇಸ್ವಾಮಿಯವರ ಸಹಾಯ, ಸ್ನೇಹಿತ ಸಿ. ನಾಗರಾಜ ರವರು ವಾರಗಟ್ಟಲೆ ಕ್ಷೇತ್ರಕಾರ್ಯದಲ್ಲಿ ಜೊತೆಯಾಗಿರುತ್ತಿದ್ದುದನ್ನು ಮರೆಯುವಂತಿಲ್ಲ ಈ ಎಲ್ಲಾ ಬಾಂಧವರಿಗೆ ನನ್ನ ಕೃತಜ್ಞತೆಗಳು.

ಹಿರಿಯೂರು ತಾಲ್ಲೂಕಿನ ಕ್ಷೇತ್ರಕಾರ್ಯಕ್ಕೆ ನೆರವಾದ ಶ್ರೀ ದಸ್ತಗೀರ್ ಸಾಹೇಬರು, ಮಾಯಸಂದ್ರದ ವೈದ್ಯ ಗೌಡ್ರು ಸಿದ್ದಲಿಂಗಣ್ಣ ಹೊಸದುರ್ಗ ತಾಲ್ಲೂಕಿನ ಕ್ಷೇತ್ರಕಾರ್ಯದಲ್ಲಿ ನೆರವಾದ ಗೆಳೆಯ ಮಂಜುನಾಯ್ಕ ಹಾಗೂ ಮಿತ್ರರು, ಹೊಸದುರ್ಗ ಮತ್ತು ಹೊಳಲ್ಕೆರೆ ಎರಡೂ ತಾಲ್ಲೂಕುಗಳ

ಕ್ಷೇತ್ರಕಾರ್ಯದಲ್ಲಿ ನೆರವಾದ ಶ್ರೀ ಮಹಂತೇಶ್ ಮತ್ತು ಅವರ ಕುಟುಂಬದವರು, ಚಿತ್ರದುರ್ಗ ತಾಲ್ಲೂಕಿನ ಕ್ಷೇತ್ರಕಾರ್ಯದಲ್ಲಿ ನೆರವಾದ ವಕೀಲ ಮಿತ್ರರಾದ ಶ್ರೀ ಮಾರಣ್ಣ ಮತ್ತು ರಮೇಶ್ ಇವರುಗಳಲ್ಲ ತೋರಿದ ಪ್ರೀತಿ, ನೀಡಿದ ಸಹಕಾರ ಅವಿಸ್ಮರಣೀಯವಾದುದು ಇವರೆಲ್ಲರಿಗೆ ನನ್ನ ಕೃತಜ್ಞತೆಗಳು.

ಕ್ಷೇತ್ರಕಾರ್ಯದ ತಿರುಗಾಟದಲ್ಲಿ ರಾತ್ರಿ ಎಷ್ಟೇ ತಡವಾಗಿ ಬಂದರೂ, ಬೆಳಿಗ್ಗೆ ಹೊತ್ತು ಮೂಡುವುದರೊಳಗೆ ಹೊರಡುವಾಗಲೂ ಊಟದ ವ್ಯವಸ್ಥೆ ಮಾಡುತ್ತಿದ್ದ ಅತ್ತಿಗೆ ನಾಗರತ್ನ ತಾಯಿ ಬಸಮ್ಮ, ಚಳ್ಳಕೆರೆಯ ಸಿದ್ದಕ್ಕ, ಮೊಳಕಾಲ್ಮೂರು ಭಾಗದಲ್ಲಿದ್ದಾಗ ತಂಗಿ ಕರಿಬಸಮ್ಮ ಹಾಗೂ ತಾಯಿ ಗೌರಮ್ಮ, ಹೊಳಲ್ಕೆರೆ ಭಾಗದಲ್ಲಿದ್ದಾಗ ಸ್ನೇಹಿತ ಮಹೆಂತೇಶ್‌ರ ತಾಯಿ ಸರೋಜಮ್ಮ, ರತ್ನಕ್ಕ, ಹೊಸದುರ್ಗ ಭಾಗದಲ್ಲಿರುವಾಗ ಜಮಾಪುರದ ಶ್ರೀ ಈಶಣ್ಣ ಹಾಗೂ ಅನುಸೂಯ ಚಿಕ್ಕಮ್ಮ ಇವರೆಲ್ಲರೂ ಕ್ಷೇತ್ರಕಾರ್ಯಕ್ಕೆ ಎಲ್ಲಾ ರೀತಿಯ ಸಹಕಾರ ನೀಡಿದ್ದಾರೆ ಇವರಿಗೆ ನನ್ನ ಅನಂತ ಕೃತಜ್ಞತೆಗಳು.

ನನಗೆ ಮತ್ತು ವಕ್ತೃಗಳ ನಡುವೆ ವಿಶ್ವಾಸವನ್ನು ಮೂಡಿಸಲು ಜಿಲ್ಲೆಯ ವಿವಿಧ ಭಾಗದ ಸರ್ಕಾರಿ ಶಾಲಾ ಶಿಕ್ಷಕರು ಪ್ರಯತ್ನವನ್ನು ಮಾಡಿದ್ದಾರೆ. ಇವರ ನೆರವನ್ನು ನಾನೆಂದೂ ಮರೆಯುವಂತಿಲ್ಲ. ಇದಕ್ಕಾಗಿ ಜಿಲ್ಲೆಯ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ, ಎಸ್.ಡಿ.ಎಂ.ಸಿ ಯವರಿಗೆ ಹಾಗೂ ಸಿ.ಆರ್.ಪಿ ಯವರಿಗೆ ನನ್ನ ಕೃತಜ್ಞತೆಗಳು.

ನನ್ನ ತಪ್ಪುಗಳನ್ನು ವಿಮರ್ಶಿಸಿ, ಬರವಣಿಗೆಯನ್ನು ತಿದ್ದಿ ಸೂಕ್ತ ಸಲಹೆಗಳನ್ನು ಮತ್ತು ಸಹಕಾರವನ್ನು ನೀಡಿರುವ ಗೆಳೆಯರಾದ ಜಿ.ಎಲ್. ವಿಜಯೇಂದ್ರ ಕುಮಾರ್, ಆರ್.ಡಿ. ವೆಂಕಟೇಶ್, ಶಾಂತಾ ಇವರುಗಳ ನೆರವನ್ನು ಮರೆಯಲಾಗದು. ಹಾಗೆಯೆ ಗೆಳೆಯ ರವಿಕುಮಾರ್‌ಬಾಗಿ ಪ್ರಕಾಶ್, ಕೆ.ಎನ್. ಕೃಷ್ಣಪ್ಪ, ಎಂ. ನಾಗರಾಜ, ಇವರುಗಳಿಗೆ ನನ್ನ ಕೃತಜ್ಞತೆಗಳು.

ಕ್ಷೇತ್ರಕಾರ್ಯದಲ್ಲಿ ಮಾಹಿತಿಯನ್ನು ನೀಡಿ ಸಹಕರಿಸಿದ ಎಲ್ಲಾ ವಕ್ತೃಗಳಿಗೂ, ಪ್ರತ್ಯಕ್ಷವಾಗಿ ಪರೋಕ್ಷವಾಗಿ ನೆರವಾದ ಎಲ್ಲಾ ಬಂಧುಗಳಿಗೂ, ಡಿ.ಟಿ.ಪಿಯನ್ನು ಅಚ್ಚುಕಟ್ಟಾಗಿ ಮಾಡಿಕೊಟ್ಟು ಉತ್ತಮ ಸಲಹೆಗಳನ್ನು ನೀಡಿರುವ ಯಶ್ ಕ್ರಿಯೇಶನ್ಸ್‌ನ ಮಾಲೀಕರಾದ ಡಾ. ಮಂಜುನಾಥ ಅವರಿಗೂ ಮತ್ತು ಕೆ.ಎಸ್. ಮಹಾದೇವ ಪ್ರಸಾದ್ ರವರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಮು. ಹಾಲಪ್ಪ
ಸಂಶೋಧನ ವಿದ್ಯಾರ್ಥಿ

ಪರಿವಿಡಿ

ಅಧ್ಯಾಯ – 1

ಅಧ್ಯಯನದ ಉದ್ದೇಶ ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಯನದ ಉದ್ದೇಶ

ಜಾನಪದವೆನ್ನುವುದು ಮೌಖಿಕ ರೂಪದ ಕ್ಷೇತ್ರ ವಿಜ್ಞಾನ. ಅದರ ಕ್ಷೇತ್ರಗಳು ದಿನದಿಂದ ದಿನಕ್ಕೆ ಬೆಳೆಯುತ್ತಲೇ ಇವೆ. ಅಂತಹ ಕ್ಷೇತ್ರಗಳಲ್ಲೊಂದು ಈ ಜನಪದ ವೈದ್ಯ. ಇದು ವೈಜ್ಞಾನಿಕ ಬಗೆಯಲ್ಲಿ ಬರುತ್ತದೆ. ಜನಪದ ವೈದ್ಯ ಪ್ರಾಚೀನರ ಜ್ಞಾನ. ಅದು ಮನುಷ್ಯನ ವಿಚಾರ ಶಕ್ತಿಯ ಫಲ. ಈ ವಿಚಾರ ಧಾರೆ ತಲೆಮಾರಿನಿಂದ ತಲೆಮಾರಿಗೆ ಮೌಖಿಕ ರೂಪದಲ್ಲಿ ಸಾಗಿ ಬಂದಿರುವಂತಹುದು. ಇದರಲ್ಲಿ ಹಲವರ ಜ್ಞಾನ ಮತ್ತು ಅನುಭವಗಳು ಒಟ್ಟುಗೂಡಿ ಒಂದು ಆಕಾರವನ್ನು ಪಡೆದುಕೊಂಡಿದೆ. ಇದರ ಹುಟ್ಟನ್ನು ನಿಖರವಾಗಿ ಹೇಳಲು ಆಗುವುದಿಲ್ಲವಾದರೂ ಮನುಷ್ಯನಿಗೆ ಕಾಯಿಲೆಗಳು ಕಾಣಿಸಿಕೊಂಡಂದಿನಿಂದ ಈ ವೈದ್ಯ ಪದ್ಧತಿ ಹುಟ್ಟಿಕೊಂಡಿರಬಹುದೆಂದು ತಿಳಿಯಲಾಗಿದೆ. ಇದನ್ನು ಹಳ್ಳಿ ವೈದ್ಯ, ಗ್ರಾಮೀಣ ವೈದ್ಯ, ನಾಡ ಔಷಧ, ನಾಟಿ ಔಷಧ, ಮನೆವೈದ್ಯ, ಊರೌಷಧಿ, ಕಾಡುಮದ್ದು, ಅಜ್ಜಿಮದ್ದು, ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಇಂದು ಶಾಸ್ತ್ರೀಯವಾಗಿ 'ಜನಪದ ವೈದ್ಯ' ಎಂಬ ಹೆಸರಿನಿಂದ ಪ್ರಸಿದ್ಧಿಯಾಗುತ್ತಿದೆ.

ಜನಪದ ವೈದ್ಯ ಹೆಚ್ಚು ಸಾಂಪ್ರದಾಯಿಕತೆಯನ್ನು ಒಳಗೊಂಡಿರುವಂತಹುದು. ಆದ್ದರಿಂದ ಆಧುನಿಕ ಸಂದರ್ಭದಲ್ಲಿ ಅದು ನಿರ್ಲಕ್ಷ್ಯಕ್ಕೆ ಒಳಗಾಗುತ್ತಿದೆ ಮತ್ತು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆ ಎಂಬ ಭಾವನೆ ಸಾಮಾನ್ಯವಾಗಿದೆ. ಅದಕ್ಕಾಗಿ ನಾವಿಂದು ಮೌಢ್ಯ ಭೂಯಿಷ್ಠದಿಂದ ಅದನ್ನು ಮುಕ್ತಗೊಳಿಸಿ ಅದರ ಸತ್ಯಾಸತ್ಯತೆಗಳನ್ನು ಅರಿಯಬೇಕಾಗಿದೆ. ಈ ಹಿನ್ನೆಲೆಯಲ್ಲಿ ಮಾಡುತ್ತಿರುವ ಒಂದು ಕಿರುಪ್ರಯತ್ನವೇ ಪ್ರಸ್ತುತ ಅಧ್ಯಯನ.

'ಆರೋಗ್ಯ ಭಾಗ್ಯವೇ ಭಾಗ್ಯ'. ಈ ಭಾಗ್ಯ ಸದಾ ನನ್ನದಾಗಿರಲೆಂದೇ ಮನುಷ್ಯಜೀವಿ ಬಯಸುತ್ತಾನೆ. ಸ್ವಪ್ನದಲ್ಲಿಯೂ ಆತ ಅನಾರೋಗ್ಯವನ್ನು ಅನುಭವಿಸಲಿಚ್ಛಿಸುವುದಿಲ್ಲ. ಆದಕಾರಣ ಆರೋಗ್ಯವಂತ ಬದುಕನ್ನು ಕಾಯ್ದುಕೊಳ್ಳಲು ಪೂರ್ವದಿಂದಲೂ ಮಾನವನು ಪ್ರಯತ್ನವನ್ನು ಮಾಡುತ್ತಲೇ ಬಂದಿದ್ದಾನೆ. ಇಂಥ ಪ್ರಯತ್ನದ ಫಲವೇ ಜನಪದ ವೈದ್ಯ. ಈ ಸಂದರ್ಭದಲ್ಲಿ ಅದನ್ನು ಅರಿಯುವುದರಿಂದ ಮತ್ತು

ವೈಜ್ಞಾನಿಕ ಪ್ರಯೋಗಕ್ಕೊಳಪಡಿಸುವುದರಿಂದ ಆಧುನಿಕ ವೈದ್ಯ ಕ್ಷೇತ್ರದ ವ್ಯಾಪ್ತಿಯನ್ನು ಹೆಚ್ಚಿಸಬಹುದು.

ಭಾರತ ಹಳ್ಳಿಗಳ ದೇಶ. ಶೇ. 75ರಷ್ಟು ಜನ ಹಳ್ಳಿಗಳಲ್ಲಿಯೇ ವಾಸಿಸುತ್ತಿದ್ದಾರೆ. ಈ ಜನರು ತಮ್ಮ ಅನೇಕ ಕಾಯಿಲೆಗಳಿಗೆ ಇಂದಿಗೂ ಸಾಂಪ್ರದಾಯಿಕ ವೈದ್ಯ ಪದ್ಧತಿಯಲ್ಲೇ ಪರಿಹಾರವನ್ನು ಕಂಡುಕೊಳ್ಳುತ್ತಾರೆ. ಅಂದರೆ, ನಮ್ಮ ದೇಶದ ಜನರು ಜನಪದ ವೈದ್ಯವನ್ನು ಹೆಚ್ಚಿನ ಪ್ರಮಾಣದಲ್ಲಿ ಅವಲಂಬಿಸಿದ್ದಾರೆ. ಆದ್ದರಿಂದ ಇದನ್ನು ಸಂಗ್ರಹಿಸುವ ಮತ್ತು ವಿಶ್ವಾಸಾರ್ಹವಾದದ್ದನ್ನು ಬೆಳಕಿಗೆ ತರುವ ಪ್ರಯತ್ನಗಳನ್ನು ಮಾಡಬೇಕಾಗಿದೆ.

ಪ್ರಾಚೀನರ ಜನಪದ ವೈದ್ಯಜ್ಞಾನವನ್ನು ಮತ್ತು ಅದರ ಬಳಕೆಯನ್ನು ಅವಲೋಕಿಸಿದಾಗ,ಆರೋಗ್ಯ ಕ್ಷೇತ್ರದಲ್ಲಿ ಅದು ವಹಿಸಿರುವ ಪಾತ್ರವೆಂತಹುದೆಂಬುದನ್ನು ಅರಿಯಬಹುದಾಗಿದೆ. ವ್ಯವಸ್ಥಿತವಾದ ಅಧ್ಯಯನದಿಂದ ಅದರ ಮಹತ್ವವನ್ನು ಮತ್ತು ಇತಿ ಮಿತಿಗಳನ್ನು ಅರ್ಥೈಸಿಕೊಳ್ಳಲು ಸಾಧ್ಯವಿದೆ. ಜನಪದ ವೈದ್ಯದಲ್ಲಿ ನಿಸ್ವಾರ್ಥದಿಂದ ವೈದ್ಯೋಪಚಾರ ಮಾಡುವ ವೈದ್ಯರು ಮತ್ತು ಅವರ ಸೇವಾಧರ್ಮ ಯಾವ ಕಾಲಕ್ಕೂ ಅನುಕರಣೀಯವಾದುದು. ಜನರ ಸೇವೆಯಲ್ಲಿ ಜೀವನವನ್ನು ಸವೆಸಿ, ಋಷಿ ಮುನಿಗಳ ಮಾರ್ಗದಲ್ಲಿ ಸಾಗಿ, ತಮ್ಮ ಬದುಕನ್ನು ಸಾರ್ಥಕಪಡಿಸಿಕೊಂಡ ಜನಪದ ವೈದ್ಯರು ಸ್ಮರಣೀಯರಾದವರು. ಅವರ ವೈದ್ಯಜ್ಞಾನ ಮತ್ತು ಔಷಧಿಗಾಗಿ ಬಳಸುವ ಗಿಡಮೂಲಿಕೆಗಳು ಕುತೂಹಲವನ್ನು ಮೂಡಿಸುವಂಥವು. ಬದುಕಿಗೆ ಚೈತನ್ಯವನ್ನು ನೀಡುವ ಇಂತಹ ಸಸ್ಯಸಂಪತ್ತಿನ ಬಗ್ಗೆ ಪ್ರೀತಿಯ ಜೊತೆ ವಿಶ್ವಾಸವೂ ಮೂಡುತ್ತದೆ. ಈ ಬಗೆಯ ಒಲವು ವೈದ್ಯ ಸಂಸ್ಕೃತಿಯ ಅಧ್ಯಯನಕ್ಕೆ ಪ್ರೇರಣೆಯಾಗಬಹುದಲ್ಲವೇ!

ಎಂ.ಎ(ಕನ್ನಡ)ದಲ್ಲಿ ಜಾನಪದವನ್ನು ವಿಶೇಷವಾಗಿ ಅಧ್ಯಯನ ಮಾಡಲು ಆಯ್ಕೆ ಮಾಡಿಕೊಂಡಾಗ ಜಾನಪದವನ್ನು ವೈದ್ಯಕೀಯ ಹಿನ್ನೆಲೆಯಲ್ಲಿ ಗ್ರಹಿಸುವ ವಿಸ್ತೃತ ಆಯಾಮಗಳು ಅರಿವಿಗೆ ಬಂದುವು; ಜಾನಪದವನ್ನು ಅಂದಿನಿಂದ ವಿಶೇಷವಾಗಿ ಅವಲೋಕಿಸತೊಡಗಿದೆ. ಅದರಲ್ಲೂ ಹಳ್ಳಿಯ ಗಿಡಮೂಲಿಕೆಗಳ ಪಂಡಿತರು, ಮಾಟ-ಮಂತ್ರ-ಮೋಡಿ ಬಲ್ಲವರು, ಸೂಲಗಿತ್ತಿಯರು, ವೈದ್ಯವನ್ನು ಬಲ್ಲ ಕುಟುಂಬದ ಹಿರಿಯರು ಈ ಮೊದಲಾದವರು ನನ್ನ ಮೇಲೆ ಪ್ರಭಾವವನ್ನು ಬೀರಿದರು. ನೋಟದಿಂದಲೇ ಮನುಷ್ಯ ಅಥವಾ ಪ್ರಾಣಿಯ ಅನಾರೋಗ್ಯಕ್ಕೆ ಕಾರಣ ತಿಳಿಯುವ ಅವರ ಅನುಭವ ವಿಸ್ಮಯ ತರುವಂತಹುದು. ಕಾಲದ ಗತಿಯಲ್ಲಿ ಇಂತಹ ಅನೇಕ ಅನುಭವಿಗಳು ಬಂದು ಹೋಗಿದ್ದಾರೆ. ಅಂತಹ ವೈದ್ಯರ

ಕುಟುಂಬದಲ್ಲಿ ಮತ್ತೊಬ್ಬ ಆ ಬಗೆಯ ವೈದ್ಯ ಉದಯವಾಗದಿರುವುದನ್ನು ಕಂಡು ಸೋಜಿಗವಾಯಿತು. ಒಂದು ವೇಳೆ ಉದಯಿಸಿದರೂ, ಪೂರ್ವಿಕರಲ್ಲಿದ್ದಂತಹ ಪಾಂಡಿತ್ಯ, ಅನುಭವ, ಶ್ರದ್ಧೆ-ಶಿಸ್ತು ಮತ್ತು ಪ್ರಾಮಾಣಿಕತೆಗಳು ಶಿಥಿಲಗೊಳ್ಳತೊಡಗಿದವು. ಸ್ವತಃ ನಮ್ಮ ಕುಟುಂಬದಲ್ಲಿಯೇ ಪಶು ವೈದ್ಯನಾಗಿದ್ದ ದೊಡ್ಡಪ್ಪನು ಕಾಲವಾದ ನಂತರ ಆತನ ಸ್ಥಾನವನ್ನು ಯಾರೂ ತುಂಬಲಿಲ್ಲ. ಸಂಸ್ಕೃತಿಯೊಳಗಿನ ಈ ವ್ಯಾಪಾರವನ್ನೆಲ್ಲ ಕಾಣುತ್ತಿದ್ದ ಕಣ್ಣಿಗೆ ಏನನ್ನೋ ಕಳೆದುಕೊಳ್ಳುತ್ತಿರುವಂತೆ ಭಾಸವಾಯಿತು. ಸ್ವಾವಲಂಬಿಯಾಗಿದ್ದ ಮನುಷ್ಯ ಪರಾವಲಂಬಿಯಾಗುತ್ತಿರುವ ಅನುಭವವಾಯಿತು. ಪೂರ್ವಿಕರ ಸ್ವಾವಲಂಬನೆಗೆ ಕಾರಣವೇನೆಂಬುದನ್ನು ಮನಸ್ಸು ಆಲೋಚಿಸತೊಡಗಿತು. ವೈದ್ಯೋಪಚಾರಕ್ಕೆ ಬೇಕಾದ ಪರಿಕರಗಳನ್ನು ತಮ್ಮ ಸುತ್ತಲಿನ ಪರಿಸರದಿಂದಲೇ ಪಡೆಯುವುದು ಜನಪದ ವೈದ್ಯದ ವಿಶೇಷವೂ ಹೌದು ಮತ್ತು ಅದು ಸ್ವಾವಲಂಬನೆಯ ಸಂಕೇತವೂ ಹೌದು. ಇದರಿಂದಾಗಿ ಅವರ ವೈದ್ಯಜ್ಞಾನವನ್ನು ದಾಖಲೀಕರಣ ಮಾಡಬೇಕೆಂಬ ಮಹತ್ವಾಕಾಂಕ್ಷೆ ಮನದಲ್ಲಿ ಹುಟ್ಟಿಕೊಂಡಿತು.

ಈ ವೈದ್ಯ ಪದ್ಧತಿಯು ಜೀವಸಂಕುಲದ ರೋಗ ಬಾಧೆಯನ್ನು ನಿವಾರಿಸಲು ಹುಟ್ಟಿಕೊಂಡಿರುವಂತಹುದು. ಇದರ ಅಧ್ಯಯನದಿಂದ ಸ್ಥಳೀಯ ಗಿಡಮೂಲಿಕೆಗಳ ಔಷಧೀಯ ಗುಣ ಮತ್ತು ಅವುಗಳ ಬಹೂಪಯೋಗತೆಯನ್ನು ತಿಳಿಯಬಹುದಾಗಿದೆ. ಅಂದರೆ, ಕೆಲವೊಂದು ಸಸ್ಯಗಳು ಒಂದಕ್ಕಿಂತ ಹೆಚ್ಚು ರೋಗಗಳನ್ನು ಗುಣಪಡಿಸುವ ಸಾಮರ್ಥ್ಯವನ್ನು ಹೊಂದಿರುತ್ತವೆ. ಇದನ್ನು ಅರಿಯಲು ಪ್ರಾದೇಶಿಕ ಹಿನ್ನೆಲೆಯ ಈ ಬಗೆಯ ಅಧ್ಯಯನದಿಂದ ಸಾಧ್ಯವಿದೆ. ಹಾಗೆಯೇ ಗಿಡಮೂಲಿಕೆಗಳ ಬಗ್ಗೆ ಜನಪದರು ಹೊಂದಿರುವ ನಂಬಿಕೆ ಹಾಗೂ ಪೂಜ್ಯ ಭಾವನೆಯನ್ನು ಮತ್ತು ಅದರ ಹಿಂದಿರುವ ಉದ್ದೇಶವನ್ನು ಅರಿಯಬಹುದಾಗಿದೆ.

ಜನಪದ ವೈದ್ಯದ ಅಧ್ಯಯನ ಒಂದು ರೀತಿಯಲ್ಲಿ ಸಾಂಸ್ಕೃತಿಕ ಅಧ್ಯಯನವೂ ಆಗುತ್ತದೆ. ಅಂದರೆ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು ಮನುಷ್ಯನ ಆರೋಗ್ಯ ಜೀವನದಲ್ಲಿ ಯಾವ ಪಾತ್ರ ವಹಿಸುತ್ತವೆ ಎಂಬುದನ್ನು ತಿಳಿಯಬಹುದಾಗಿದೆ. ಧಾರ್ಮಿಕ ಜೀವನದಲ್ಲಿಯ ನಂಬಿಕೆ, ಆಚರಣೆ ಮತ್ತು ಸಂಪ್ರದಾಯಗಳು ಆರೋಗ್ಯ ಬದುಕಿನೊಂದಿಗೆ ತಳುಕು ಹಾಕಿಕೊಂಡು ಸಾಗಿಬರುತ್ತಿವೆ. ಇವುಗಳ ವಿಮರ್ಶೆ ಮತ್ತು ವಿಶ್ಲೇಷಣೆಯಿಂದ ಜನಪದ ವೈದ್ಯವನ್ನು ವೈಜ್ಞಾನಿಕ ನೆಲೆಗೆ ಕೊಂಡೊಯ್ಯಲು ಈ ಬಗೆಯ ಪ್ರಾದೇಶಿಕವಾದ ಅಧ್ಯಯನ ಹೆಚ್ಚು ಸಹಕಾರಿಯಾಗಬಹುದು.

ಜನಪದ ವೈದ್ಯ ಮಾಹಿತಿಯನ್ನು ವ್ಯವಸ್ಥಿತವಾಗಿ ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸುವ ಕಾರ್ಯ ತುರ್ತಾಗಿ ನಡೆಯಬೇಕಾಗಿದೆ. ಯಾಕೆಂದರೆ ಪ್ರಸ್ತುತ ಸಂದರ್ಭದಲ್ಲಿ ಈ ವೈದ್ಯ ಪದ್ಧತಿಯೂ ಅವನತಿಯ ಹಾದಿಯಲ್ಲಿದೆ. ಈ ಅನುಭವ ವಿದ್ಯೆಯ ಮುಂದಿನ ವಾರಸುದಾರರು ಯಾರಾಗಬೇಕು? ಮತ್ತು ಆ ಬಗ್ಗೆ ಕಾಳಜಿ ಮಾಡುವವರು ಯಾರು? ಎಂಬ ಪ್ರಶ್ನೆಗಳು ಯಾಂತ್ರೀಕರಣ-ಜಾಗತೀಕರಣದ ಈ ಸಂದರ್ಭದಲ್ಲಿ ಉದ್ಭವಿಸುತ್ತಿವೆ. ಇಂಥ ವೇಳೆಯಲ್ಲಿ ಮೊದಲನೆಯದಾಗಿ ವೈದ್ಯ ಮಾಹಿತಿಯ ಸಂಗ್ರಹಕ್ಕೆ ಆದ್ಯತೆಯನ್ನು ಕೊಡಬೇಕಾಗಿದೆ. ನಂತರ ಅದರ ಸತ್ಯಾಸತ್ಯತೆಗಳನ್ನು ಅರಿಯುವ ಪ್ರಯತ್ನವನ್ನು ಮಾಡಬಹುದು. ಒಂದು ವೇಳೆ ಮಾಹಿತಿಯೇ ಕೈತಪ್ಪಿ ಹೋದಾಗ ಏನೂ ಮಾಡಲು ಸಾಧ್ಯವಾಗುವುದಿಲ್ಲ.

ವೈದ್ಯರು ಗೋಪ್ಯತೆಯನ್ನು ಕಾಪಾಡಿಕೊಂಡು, ವೈದ್ಯಕ್ಕೆ ಬಳಸುವ ಗಿಡಮೂಲಿಕೆಗಳ ಹೆಸರುಗಳನ್ನು ಹೇಳದಿರುವುದು, ಒಂದು ವೇಳೆ ಹೇಳಿದರೆ ವೈದ್ಯ ಫಲಿಸುವುದಿಲ್ಲ ಮತ್ತು ಅದರ ಶಕ್ತಿ ಹೊರಟು ಹೋಗುತ್ತದೆ ಎಂಬ ನಿಲುವು ಜನಪದರಲ್ಲಿದೆ. ಈ ಬಗೆಯ ನಿಲುವುಗಳ ಹಿಂದಿರುವ ಉದ್ದೇಶ ವೇನೆಂಬುದನ್ನು ಅರಿಯಬೇಕಾಗಿದೆ. ಇದರಿಂದ ಆಧುನಿಕ ಸಂದರ್ಭದಲ್ಲಿ ಅದರ ಬಗ್ಗೆ ಆಸಕ್ತಿ ಮೂಡಿಸುವ ಮತ್ತು ಅರ್ಥೈಸಿಕೊಳ್ಳುವ ಪ್ರಯತ್ನವನ್ನು ಸಾಧಿಸಲು ಸಾಧ್ಯವಿದೆ.

ಯಾವುದೇ ಸಂಶೋಧನೆಯು ತಾನು ಕಂಡುಕೊಂಡ ಒಳನೋಟಗಳನ್ನು ಆಧರಿಸಿ ಪ್ರಮುಖವಾದ ಹಾಗೂ ನಿಗೂಢವಾದ ಕೆಲವು ಸಂಗತಿಗಳ ಮೇಲೆ ಬೆಳಕನ್ನು ಚೆಲ್ಲುತ್ತದೆ. ಅದರಂತೆ ಈ ಅಧ್ಯಯನದಲ್ಲಿ ವೈದ್ಯಕ್ಕೆ ಬಳಸುವ ಗಿಡಮೂಲಿಕೆಗಳು ಮತ್ತು ಅವುಗಳ ಸಾಂಸ್ಕೃತಿಕ ಮುಖವನ್ನು ಪರಿಚಯಿಸುವ ಉದ್ದೇಶವನ್ನು ಇಟ್ಟುಕೊಳ್ಳಲಾಗಿದೆ. ವೃತ್ತಿಯಾಗಿಯೋ ಪ್ರವೃತ್ತಿಯಾಗಿಯೋ ವೈದ್ಯಸೇವೆಯನ್ನು ಮಾಡುವವರು ಯಾರು? ಅವರ ವೈಶಿಷ್ಟ್ಯವೇನು? ಆದಾಯ ರಹಿತ ಪರಿಶ್ರಮದ ಹಿಂದೆ ಯಾವ ಮಹತ್ತರವಾದ ಧ್ಯೇಯವಿದೆ ಎಂಬುದನ್ನು ತಿಳಿಯುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಆರೋಗ್ಯಕರವಾದ ಜೀವನಕ್ಕಾಗಿ ಆಹಾರ ಸೇವನೆಯಲ್ಲಿ ಒಂದು ಶಿಸ್ತುಕ್ರಮವನ್ನು ಅನುಸರಿಸುವ ಅಗತ್ಯವಿದೆ. ಅಂದರೆ ಆಹಾರದಲ್ಲಿಯೇ ಔಷಧವಿದೆ ಎನ್ನುವುದನ್ನು ಜನಪದರು ತಿಳಿದಿದ್ದಾರೆ. ಈ ಕಾರಣದಿಂದಾಗಿ ರೋಗವನ್ನು ಗುಣಪಡಿಸುವ ಸಂದರ್ಭದಲ್ಲಿ ಕ್ರಮ ಬದ್ಧವಾದ, ಶಿಸ್ತುಬದ್ಧವಾದ ಆಹಾರ ಕ್ರಮಕ್ಕೆ ಔಷಧೀಯ ಸೇವನೆಯ ವೇಳೆ ಒತ್ತು ಕೊಡಲಾಗುವುದು. ಇದರಿಂದ ಆಹಾರ ಮತ್ತು ಆರೋಗ್ಯದ ನಡುವಿನ ಸಂಬಂಧವನ್ನು ತಿಳಿಯಬಹುದಾಗಿದೆ.

ಜನಪದ ವೈದ್ಯದ ಪ್ರಸ್ತುತತೆ ಮತ್ತು ಅದರ ಮಹತ್ವವನ್ನು ನಾವಿಂದು ಅರಿಯಬೇಕಾಗಿದೆ. ಅದರ ಒಟ್ಟು ಸ್ವರೂಪವನ್ನು ಒಂದು ಜಿಲ್ಲೆಯ ಜನಪದ ವೈದ್ಯ ಪದ್ಧತಿಯ ಅವಲೋಕನದ ಮೂಲಕ ಕಟ್ಟಿಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ವೈದ್ಯನ ಆಪ್ತರು, ಸಂಬಂಧಿಕರು ಮತ್ತು ಕುಟುಂಬದವರೊಡನೆ ಪ್ರೀತಿ ವಿಶ್ವಾಸವನ್ನು ಗಳಿಸುವುದರ ಮೂಲಕ ಅವರಲ್ಲಿನ ವೈದ್ಯ ವಿಚಾರವನ್ನು ಹಾಗೂ ವಿಶೇಷವೆನಿಸುವ ಔಷಧೀಯ ಸಸ್ಯಗಳನ್ನು ಆಧುನಿಕ ಸಮಾಜಕ್ಕೆ ಪರಿಚಯಿಸುವ ಮಹತ್ತರವಾದ ಉದ್ದೇಶವನ್ನು ಇಟ್ಟುಕೊಳ್ಳಲಾಗಿದೆ.

ಸ್ವರೂಪ

ಒಂದು ಸಂಶೋಧನಾ ಕಾರ್ಯದ ಗುಣಮಟ್ಟ ಅದರ ಅಧ್ಯಯನದ ವಿಧಾನವನ್ನು ಅವಲಂಬಿಸಿರುತ್ತದೆ ಎಂದರೆ ತಪ್ಪಾಗಲಾರದು. ಆದಕಾರಣ ಅಧ್ಯಯನಕಾರ ಕಾಲ, ಸಂದರ್ಭ ಮತ್ತು ಆಯ್ಕೆಮಾಡಿಕೊಂಡಿರುವ ವಿಷಯಗಳಿಗೆ ಅನುಗುಣವಾಗಿ ತನ್ನ ಅಧ್ಯಯನದ ಸ್ವರೂಪವನ್ನು ರೂಪಿಸಿ ಕೊಳ್ಳಬೇಕಾಗುತ್ತದೆ. ಹೀಗೆ ರೂಪಿಸಿಕೊಂಡಿದ್ದು ಶಾಶ್ವತವೆಂದೇನೂ ಅಲ್ಲ; ಸಂಶೋಧನೆಯ ಪ್ರಕ್ರಿಯೆಯಲ್ಲಿ ಅದು ನಿರಂತರ ಬದಲಾವಣೆಯಾಗುತ್ತಿರಲೂ ಬೇಕಾಗುತ್ತದೆ. ಪ್ರಸ್ತುತ ಅಧ್ಯಯನಕ್ಕೆ ಸಹಕಾರಿಯಾಗಬಲ್ಲ ಹಲವಾರು ಕೃತಿಗಳನ್ನು ಅವಲೋಕಿಸುವುದು, ಸಂಬಂಧಿಸಿದ ವಿಷಯ ತಜ್ಞರ ಭೇಟಿ ಮಾಡುವುದು– ಇದೆಲ್ಲವೂ ಅಧ್ಯಯನಕಾರನಿಗೆ ಮಾರ್ಗಸೂಚಿ ಮಾತ್ರವಾಗಿರುತ್ತದೆ. ಹೆಚ್ಚಿನ ಅನುಭವವನ್ನು ಅಧ್ಯಯನಕಾರನೇ ಅದರಲ್ಲಿ ಸಂಪೂರ್ಣ ತೊಡಗಿಕೊಳ್ಳುವುದರ ಮೂಲಕ ಕಂಡುಕೊಳ್ಳಬೇಕಾಗುತ್ತದೆ. ಒಟ್ಟಿನಲ್ಲಿ ಒಂದು ಅಧ್ಯಯನದ ವಿಧಾನ ಅಧ್ಯಯನದ ಧ್ಯೇಯವನ್ನು ಅವಲಂಬಿಸಿ ರೂಪುಗೊಳ್ಳುವಂತಹುದಾಗಿರುತ್ತದೆ.

ಜಾನಪದಕ್ಕೂ ಮತ್ತು ಕ್ಷೇತ್ರಕಾರ್ಯಕ್ಕೂ ಅವಿನಾಭಾವ ಸಂಬಂಧವಿದೆ. ಜನಪದ ವೈದ್ಯವನ್ನು ಕುರಿತು ಕ್ಷೇತ್ರಾಧ್ಯಯನ ಕೈಗೊಳ್ಳುವವರು ವ್ಯವಸ್ಥಿತವಾಗಿ ಮಾಹಿತಿಯನ್ನು ಸಂಗ್ರಹಿಸಲು ಸಾಕಷ್ಟು ಕಸರತ್ತುಗಳನ್ನು ಮಾಡಬೇಕಾಗುತ್ತದೆ. ಮೊದಲನೆಯದಾಗಿ, ಸ್ಥಳೀಯರಿಂದಲೇ ಜನಪದ ವೈದ್ಯರನ್ನು ಪತ್ತೆ ಮಾಡಿಕೊಳ್ಳಬೇಕು. ನಂತರ ವೈದ್ಯರ ಸಂಬಂಧಿಕರು, ಆಪ್ತರು, ಗ್ರಾಮದ ಹಿರಿಯರು ಮತ್ತು ಶಾಲಾ ಶಿಕ್ಷಕರು – ಈ ಮೊದಲಾದವರ ನೆರವಿನಿಂದ ವೈದ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾಹಿತಿ ಸಂಗ್ರಹಿಸುವ ಉದ್ದೇಶವನ್ನು ಮನಗಾಣಿಸಬೇಕು. ವೈದ್ಯರ ಬಿಡುವಿನ ವೇಳೆ ಮತ್ತು ಅವರ ಮಾನಸಿಕ

ಸ್ಥಿತಿಯನ್ನು ಗಮನಿಸಿ ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ. ಪ್ರಶ್ನೆಗಳು ಬಾಯಿ ಪಾಠವಾಗಿದ್ದು ಕೇಳುಗರಿಗೆ ಬೇಸರ ತರಿಸುವಂತಿರಬಾರದು. ಹೀಗೆ ಪ್ರಶ್ನಾವಳಿಯನ್ನು ಸಿದ್ಧಪಡಿಸಿಕೊಳ್ಳುವುದರಿಂದ ಉದ್ದೇಶಿತ ಮಾಹಿತಿಯ ಸಂಗ್ರಹ ಸಾಧ್ಯವಾಗುತ್ತದೆ. ಸಾಧ್ಯವಾದಷ್ಟು ಸಂದರ್ಶನ ಏಕಾಂತವಾಗಿರಬೇಕು. ಈ ಬಗೆಯ ವಿಧಾನವನ್ನು ಪ್ರಾರಂಭದಿಂದಲೂ ಅನುಸರಿಸಬೇಕಾಗುತ್ತದೆ.

ವೈದ್ಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಮಾಹಿತಿ ಸಂಗ್ರಹಿಸಲು ಸಾಧ್ಯವಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ಎರಡು ಅಥವಾ ಮೂರನೆಯ ಬಾರಿ ಸಂದರ್ಶನವನ್ನು ಕೈಗೊಂಡು, ಗಿಡಮೂಲಿಕೆಗಳ ಪರಿಚಯವನ್ನು ಮತ್ತು ಅವುಗಳ ಛಾಯಾ ಚಿತ್ರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಪ್ರಾದೇಶಿಕವಾಗಿ ವಿಶೇಷವೆಂದು ಕಂಡುಬರುವ ಸಸ್ಯಗಳನ್ನು ಹರ್ಬೇರಿಯಮ್' ಮಾಡುವುದರ ಮೂಲಕ ಸಂರಕ್ಷಿಸಬೇಕಾಗುತ್ತದೆ. ಇದರಿಂದಾಗಿ ಕೆಲವು ಸಸ್ಯಗಳ ಸಸ್ಯ ಶಾಸ್ತ್ರೀಯ ಹೆಸರುಗಳನ್ನು ಪತ್ತೆ ಮಾಡಲು ಸಹಕಾರಿಯಾಗುತ್ತದೆ.

ಸಸ್ಯದ ಯಾವ ಭಾಗವನ್ನು ಮತ್ತು ಎಷ್ಟು ಪ್ರಮಾಣದಲ್ಲಿ ಔಷಧಿಗೆ ಬಳಸಲಾಗುವುದೆಂಬುದನ್ನು ವೈದ್ಯರು ಮಾಡುವುದನ್ನು ನೋಡಿ ದಾಖಲಿಸಬೇಕಾಗುತ್ತದೆ. ಬಾಯಿಬಡಕ ವೈದ್ಯರೂ ಇರುತ್ತಾರೆ, ಇಂಥವರು ಯಾವುದೇ ಕಾಯಿಲೆಯಾಗಿರಲಿ ನಿಮಿಷಾರ್ಧದಲ್ಲಿ ವಾಸಿ ಮಾಡಿಬಿಡುತ್ತೇವೆಂದು ಉತ್ತರ ಕುಮಾರನಂತೆ ತಮ್ಮ ವೈದ್ಯದ ಬಗ್ಗೆ ಜಂಬ ಕೊಚ್ಚಿಕೊಳ್ಳುತ್ತಾರೆ. ಇಂತಹ ಸಂದರ್ಭಗಳಲ್ಲಿ ಇವರ ವೈದ್ಯೋಪಚಾರದ ಗುಣಮಟ್ಟವನ್ನು ಅರಿಯಲು ಸಮುದಾಯದವರೊಂದಿಗೆ ಸಂವಹನ ಮಾಡಬೇಕಾಗುತ್ತದೆ. ಅಂದರೆ, ಊರಿನ ನಾಲ್ಕು ಜನರೊಂದಿಗೆ ಮತ್ತು ಕುಟುಂಬದ ಹಿರಿಯರೊಂದಿಗೆ ಸೇರಿ ಸಾಮಾನ್ಯವಾದ ಆರೋಗ್ಯ ಸಮಸ್ಯೆಗಳಿಗೆ ಏನು ಮಾಡುವಿರಿ ಎಂದು ಪ್ರಸ್ತಾಪಿಸಬೇಕಾಗುತ್ತದೆ. ಆಗ ಅವರು ತಮ್ಮ ಪೂರ್ವಿಕರಿಂದ ಬಂದಿರುವ ವೈದ್ಯ ಮಾಹಿತಿಯ ವಿವರಣೆಯನ್ನು ಕೊಡುತ್ತಾರೆ. ಇಂಥ ವಿವರಣೆ ಸಾಮಾನ್ಯವಾಗಿ ಜನಪದ ವೈದ್ಯರಾದವರೆಲ್ಲರಿಗೂ ತಿಳಿದಿರುತ್ತದೆ. ಈ ನಿಟ್ಟಿನಲ್ಲಿ ಮುಂದುವರಿದು ವೈದ್ಯೋಪಚಾರಕ್ಕೆ ಸಂಬಂಧಿಸಿದಂತೆ ಗ್ರಾಮಸ್ಥರು ಮತ್ತು ರೋಗಿಗಳಿಂದ ಕಾಯಿಲೆ ಗುಣವಾಗಿರುವುದಕ್ಕೆ ಮತ್ತು ಆಗದಿರುವುದಕ್ಕೆ ಕೆಲವು ಪ್ರಮಾಣ ಪತ್ರಗಳನ್ನು ಪಡೆಯಬೇಕಾಗುತ್ತದೆ. ಒಟ್ಟಿನಲ್ಲಿ ಹೀಗೆ ರೋಗಿ ಮತ್ತು ಗ್ರಾಮಸ್ಥರನ್ನು ಸಂದರ್ಶನ ಮಾಡಿದರೆ ಚಿಕಿತ್ಸೆಯ ಗುಣಮಟ್ಟವನ್ನು ತಿಳಿಯಲು ಬಹಳ ಸಹಕಾರಿಯಾಗುತ್ತದೆ.

ವೈದ್ಯರನ್ನು ಗುರುತಿಸುವಲ್ಲಿ ಆಯಾ ಹಳ್ಳಿಗಳ ಜನತೆಯ ನೆರವನ್ನು ಪಡೆಯಬೇಕಾಗುತ್ತದೆ. ಗ್ರಾಮಸ್ಥರು ಯಾರನ್ನು ವೈದ್ಯರೆಂದು ಗುರುತಿಸಿರುತ್ತಾರೋ ಮತ್ತು ಯಾರು ವೈದ್ಯೋಪಚಾರ ಮಾಡಬಲ್ಲವರೆಂದು ಪರಿಗಣಿಸಲ್ಪಟ್ಟಿರುತ್ತಾರೆಯೋ ಅವರನ್ನೆಲ್ಲ ಸಂಪರ್ಕಿಸಿ ಮಾಹಿತಿ ಪಡೆಯಬೇಕಾಗುತ್ತದೆ. ಏಕಮೂಲಿಕಾ ವೈದ್ಯ ಮತ್ತು ಅನೇಕ ಮೂಲಿಕಾ ವೈದ್ಯರಿಬ್ಬರೂ ಈ ಅಧ್ಯಯನದಲ್ಲಿ ಮುಖ್ಯವಾಗುತ್ತಾರೆ. ಆದುದರಿಂದ ಯಾರೂ ಇಲ್ಲಿ ಗೌಣ ಅಲ್ಲ. ಲಭ್ಯವಿರುವ ಎಲ್ಲಾ ವರ್ಗದ ವೈದ್ಯರನ್ನು ಸಂದರ್ಶಿಸುವ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಕ್ಷೇತ್ರಕಾರ್ಯ ಮಾಡುತ್ತಾ ಊರಿಂದೂರಿಗೆ ಪಯಣ ಮಾಡುವಾಗ 'ನಿಮ್ಮೂರಲ್ಲಿ ಮನುಷ್ಯರಿಗೆ ಮತ್ತು ದನಕರುಗಳಿಗೆ ಗಿಡ ಕೊಡುವವರು ಇದ್ದಾರೆಯೇ?' ಎಂದು, ಕೆಲವೊಮ್ಮೆ 'ನಿಮ್ಮೂರಲ್ಲಿ ಕಾಡುಗಿಡ ಹೊಯ್ಯೋರು ಯಾರಿದ್ದಾರೆ'? ಎಂದೋ ಕೇಳುವುದರ ಮೂಲಕ ಜನರಿಂದಲೇ ವೈದ್ಯರ ಸುಳಿವನ್ನು ತಿಳಿಯಬೇಕಾಗುತ್ತದೆ.

ಸಂದರ್ಶನದಲ್ಲಿ ಪರಿಚಯ ಮಾಡಿಕೊಳ್ಳುವುದು ಬಹಳ ಮುಖ್ಯವಾಗಿರುತ್ತದೆ. ಇದು ಸಂದರ್ಶನದ ಕೇಂದ್ರ ಬಿಂದು. ಈ ವೇಳೆಯಲ್ಲೇ ನಾವು ವೈದ್ಯರ ಮನಸ್ಸನ್ನು ಗೆಲ್ಲಬೇಕು. ಕೆಲವು ವೈದ್ಯರು ಸಂದರ್ಶನಕ್ಕೆ ಒಪ್ಪಿಕೊಂಡು ಮಾಹಿತಿ ನೀಡುತ್ತಾರೆ. ಕೆಲವರು ಹಿಂದು ಮುಂದು ಯೋಚಿಸಿ ಸತಾಯಿಸುತ್ತಾರೆ. ಕೆಲವರು ಕಡ್ಡಿ ಮುರಿದಂತೆ 'ಹೇಳುವುದೇ ಇಲ್ಲ' ಎಂದುಬಿಡುತ್ತಾರೆ. ಅಂತಹ ಸಂದರ್ಭಗಳಲ್ಲಿ ಯಾಕೆ ಹೇಳುವುದಿಲ್ಲವೆಂಬುದಕ್ಕೆ ಕಾರಣಗಳನ್ನು ತಿಳಿಯುವ ಸಲುವಾಗಿಯೂ ಸಂದರ್ಶನವನ್ನು ಮಾಡಬೇಕಗುತ್ತದೆ. ಇಂಥ ಸಂದರ್ಭದಲ್ಲಿ ವೈದ್ಯರ ಮನಸ್ಸು ಪ್ರೇರಣೆಗೊಂಡು ಮಾಹಿತಿಯನ್ನು ನೀಡುವ ಸಾಧ್ಯತೆಗಳೂ ಸಹ ಇರುತ್ತವೆ. ಒಬ್ಬ ವೈದ್ಯನ ಔಷಧೋಪಚಾರದ ಎಲ್ಲಾ ಮಾಹಿತಿಯನ್ನು ಮೊದಲ ಸಂದರ್ಶನದಲ್ಲಿಯೇ ಸಂಗ್ರಹಿಸಲು ಕೆಲವೊಮ್ಮೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಪುನಃ ಪುನಃ ಸಂದರ್ಶನವನ್ನು[2] ಮಾಡಬೇಕು. ಸಾಧ್ಯವಾದರೆ ಒಂದೆರಡು ದಿನಗಳು ವೈದ್ಯನೊಂದಿಗೆ ಇರಬೇಕಾಗುತ್ತದೆ. ಹೀಗೆ ವೈದ್ಯರೊಂದಿಗೆ ಒಂದೆರಡು ದಿನಗಳು ಜೊತೆಯಾಗಿದ್ದು ಅವರ ವೈದ್ಯ ಚಟುವಟಿಕೆಗಳನ್ನು ಅರ್ಥೈಸಿಕೊಳ್ಳಬೇಕಾಗುತ್ತದೆ. ಈ ಸಂದರ್ಭದಲ್ಲಿ ಸಸ್ಯಗಳನ್ನು ನಿಖರವಾಗಿ ಗುರುತಿಸಿಕೊಳ್ಳಲು ಸಾಧ್ಯವಿದೆ.

ಪ್ರಸ್ತುತ ಅಧ್ಯಯನದ ಮೂಲ ಆಕರ ಕ್ಷೇತ್ರಕಾರ್ಯ. ಅಲ್ಲಿ ದೊರೆಯುವ ಮಾಹಿತಿಯೇ ಈ ಮಹಾಪ್ರಬಂಧದಲ್ಲಿ ಪ್ರಧಾನವಾಗಿರುತ್ತದೆ. ಯಾಕೆಂದರೆ ಜನಪದ ವೈದ್ಯರು ಮತ್ತು ಜನಪದ ವೈದ್ಯ

ಮಾಹಿತಿ ಸದ್ಯದ ಪರಿಸ್ಥಿತಿಯಲ್ಲಿ ಕ್ಷೀಣಿಸುತ್ತಿರುವ ಹಂತದಲ್ಲಿದೆ. ಅಂದರೆ, ಮಾಹಿತಿಯ ಕ್ರೋಡೀಕರಣ ಅಗತ್ಯವಾಗಿ ಮಾಡಬೇಕಾಗುತ್ತದೆ. ಅದಕ್ಕಾಗಿ ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಪ್ರಾದೇಶಿಕ ಹಿನ್ನೆಲೆಯಲ್ಲಿ ಎಲ್ಲಾ ಭಾಗಗಳ ವೈದ್ಯರನ್ನು ಆಯಾ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಸಂದರ್ಶಿಸುವ ಯೋಜನೆಯಿದ್ದು. ಸಂದರ್ಶನದಲ್ಲಿ ಟೇಪ್‌ರೇಕಾರ್ಡ್‌ರ್, ಕ್ಯಾಮೆರಾ ಮತ್ತು ವೀಡಿಯೋವನ್ನು ಬಳಸಿಕೊಳ್ಳಲಾಗುತ್ತದೆ.

ಗಿಡಮೂಲಿಕೆಗಳ ಸಸ್ಯಶಾಸ್ತ್ರೀಯ ಹೆಸರುಗಳನ್ನು ಗುರುತಿಸಲು ಹಲವು ವ್ಯಕ್ತಿಗಳ ಹಾಗೂ ವಿಷಯ ತಜ್ಞರ ನೆರವನ್ನು ಪಡೆದು. ಹೂವು ಮತ್ತು ಕಾಯಿಗಳಿರುವಾಗಲೇ ಗಿಡಗಳ ಸಂಗ್ರಹವನ್ನು ಮಾಡಬೇಕಾಗುತ್ತದೆ. ಇದಕ್ಕಾಗಿ ಕೆಲವನ್ನು ಸಂಗ್ರಹಿಸಲು ಹೆಚ್ಚು ಸಮಯ ಕಾಯಬೇಕಾಗುತ್ತದೆ. ಎಷ್ಟೋ ವೇಳೆ ಪ್ರಾದೇಶಿಕವಾಗಿ ವಿಶಿಷ್ಟವೆನಿಸುವ ಸಸ್ಯಗಳನ್ನು ಗುರುತಿಸಲು ವಿಷಯ ತಜ್ಞರನ್ನು ಕ್ಷೇತ್ರಕಾರ್ಯಕ್ಕೆ ಕರೆದೊಯ್ಯಬೇಕಾಗುತ್ತದೆ. ಒಬ್ಬ ವೈದ್ಯ ತೋರಿಸುವ ಸಸ್ಯ ಮತ್ತು ಅದರ ಹೆಸರನ್ನು ಇನ್ನೂ ಖಚಿತ ಪಡಿಸಿಕೊಳ್ಳಲು ಅಕ್ಕ ಪಕ್ಕದ ಊರುಗಳ ವೈದ್ಯರಿಗೆ ಆ ಸಸ್ಯವನ್ನು ತೋರಿಸಿ ಸ್ಪಷ್ಟಪಡಿಸಿಕೊಳ್ಳಬೇಕಾಗುತ್ತದೆ. ಇದರಿಂದ ಸಸ್ಯದ ಹೆಸರು ಮತ್ತು ಅದರ ಬಳಕೆಯಲ್ಲಿರುವ ಗೊಂದಲಗಳು ನಿವಾರಣೆಯಾಗುತ್ತವೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ವೈದ್ಯರು ಮನೆಯಲ್ಲಿ, ಹೊಲದಲ್ಲಿ ಮತ್ತು ಅಡವಿಯಲ್ಲಿ ಎಲ್ಲೇ ಇರಲಿ ಅಲ್ಲಿಗೆ ಅವರನ್ನು ಹುಡಿಕಿಕೊಂಡು ಹೋಗಿ ಸಂದರ್ಶನ ಮಾಡಬೇಕಾಗುತ್ತದೆ. ವೈದ್ಯರ ಇರುವಿಕೆಯನ್ನು ಆಯಾ ತಾಲ್ಲೂಕುಗಳಲ್ಲಿರುವ ಗ್ರಂಥಿಗೆ ಅಂಗಡಿಗಳಿಂದಲೂ ತಿಳಿಯುವ ಸಾಧ್ಯತೆಗಳಿರುತ್ತವೆ. ಸಾಮಾನ್ಯವಾಗಿ ಗ್ರಂಥಿಗೆ ಅಂಗಡಿಯವರು ತಮ್ಮ ಅಂಗಡಿಗೆ ಬರುವ ವೈದ್ಯರುಗಳ ಹೆಸರುಗಳನ್ನು ಹೇಳುತ್ತಾರೆ. ಗ್ರಂಥಿಗೆ ಅಂಗಡಿಯ ವಸ್ತುಗಳೇ ಅಲ್ಲದೆ ಸ್ಥಳೀಯ ವಸ್ತುಗಳನ್ನು ಬಳಸಿ ಔಷಧೋಪಚಾರ ಮಾಡುವವರನ್ನು ಹುಡುಕಬೇಕಾದರೆ ಆಯಾ ಹಳ್ಳಿಯವರ ಸಹಾಯವನ್ನು ಪಡೆಯಬೇಕಾಗುತ್ತದೆ. ಕ್ಷೇತ್ರಕಾರ್ಯದಲ್ಲಿ ಹಲವು ಸಸ್ಯಗಳ ಛಾಯಾಚಿತ್ರಗಳನ್ನು ಸದಾ ಇಟ್ಟುಕೊಳ್ಳಬೇಕಾಗುತ್ತದೆ. ಯಾಕೆಂದರೆ ಒಂದೇ ಗಿಡಕ್ಕೆ ಪ್ರಾದೇಶಿಕವಾಗಿ ಭಿನ್ನ ಹೆಸರುಗಳು ಇರುತ್ತವೆ. ಆ ವೇಳೆಯಲ್ಲಿ ಸಸ್ಯದ ಚಿತ್ರ ತೋರಿಸಿ ಇದು ಹೌದೇ ಅಥವಾ ಅಲ್ಲವೇ ಎಂದು ತಿಳಿಯಲು ಸಹಾಯವಾಗುತ್ತದೆ. ಆದರೂ ಹಲವು ಬಾರಿ ಯಾವುದೋ ಹೊಸ ಗಿಡವಿರಬೇಕೆಂದು ವೈದ್ಯರು ಹೊಲಗಳ ಬದುಗಳನ್ನೆಲ್ಲ ಮತ್ತು ಅಡವಿಯನ್ನೆಲ್ಲ ತಿರುಗಿಸುವುದೂ

ಉಂಟು. ಇದರಿಂದ ಎರಡೂ ಸಾಧ್ಯತೆಗಳಿರುತ್ತದೆ. ಕೆಲವೊಮ್ಮೆ ಹೊಸಗಿಡ ಸಿಗುತ್ತದೆ, ಇನ್ನೂ ಕೆಲವು ಬಾರಿ ನೋಡಿದ ಗಿಡವನ್ನೇ ನೋಡುವಂತಾಗುತ್ತದೆ. ಇದರಿಂದ ಗಿಡಗಳ ಬಹೂಪಯೋಗತೆಯನ್ನು ತಿಳಿದಂತಾಗುತ್ತದೆ.

ಈ ಬಗೆಯ ಸಮಸ್ಯೆಗಳೇ ಉದ್ದೇಶಿತ ವಿಷಯವನ್ನು ಹೆಚ್ಚು ಅರ್ಥೈಸಿಕೊಳ್ಳಲು ಸಹಾಯವಾಗುವುದು. ಅಲ್ಲದೆ ವೈದ್ಯೋಪಚಾರದ ವಿವರಗಳನ್ನು ವ್ಯವಸ್ಥಿತವಾಗಿ ದಾಖಲಿಸಲು ಇವು ನೆರವಾಗುತ್ತವೆ. ಔಷಧಿ ತಯಾರಿಕೆಗೆ ಬಳಸುವ ವಿವಿಧ ವಸ್ತುಗಳ ಪ್ರಮಾಣವನ್ನು ಮತ್ತು ಔಷಧೀಯ ಸೇವನೆಯ ಪ್ರಮಾಣವನ್ನು ವೈದ್ಯರು ಹೇಳಿರುವಂತೆಯೇ ಮಾಹಿತಿ ನೀಡುವ ಉದ್ದೇಶವಿದೆ. ಈ ಅಧ್ಯಯನದ ಸ್ವರೂಪವನ್ನು ಸ್ಪಷ್ಟಪಡಿಸಲು ಸಮಾಜ ವಿಜ್ಞಾನಿ ಡಾ. ಎಚ್. ಎಂ. ಮರುಳಸಿದ್ಧಯ್ಯ ಅವರು ನೀಡಿರುವ ಅಧ್ಯಯನದ ವಿನ್ಯಾಸಗಳನ್ನು ಇಲ್ಲಿ ಪ್ರಸ್ತಾಪಿಸುವುದು ಸೂಕ್ತವೆನಿಸುತ್ತದೆ. ಸಂಶೋಧನೆಯಲ್ಲಿ ಐದು ವಿನ್ಯಾಸಗಳನ್ನು ಗುರುತಿಸುತ್ತಾರೆ.

1) ಪರಿಶೋಧನಾತ್ಮಕ ವಿನ್ಯಾಸ – Exploretory study (Design)

2) ವಿಶ್ಲೇಷಣಾತ್ಮಕ ವಿನ್ಯಾಸ – Descriptive study

3) ವರ್ಣನಾತ್ಮಕ ವಿನ್ಯಾಸ – Analytical study

4) ನಿದಾನಾತ್ಮಕ ವಿನ್ಯಾಸ – Diagnostic study

5) ಪ್ರಯೋಗಾತ್ಮಕ ವಿನ್ಯಾಸ – Experimental study

ಈ ಐದು ಬಗೆಯ ವಿಧಾನಗಳಲ್ಲಿ ನಮ್ಮ ಅಧ್ಯಯನವು ಪರಿಶೋಧನಾತ್ಮಕ ವಿನ್ಯಾಸದಲ್ಲಿದೆ ಎನಿಸುತ್ತದೆ. ಈ ಪರಿಶೋಧನಾತ್ಮಕ ವಿನ್ಯಾಸದಲ್ಲಿ ಪುನಃ ಎರಡು ಕವಲು ಮಾರ್ಗಗಳನ್ನು ಗುರುತಿಸಬಹುದು.

1. ವಿಷಯದ ಸಮೀಕ್ಷೆ (Making a survey) : ಜನಪದ ವೈದ್ಯರು ಯಾರು? ಎಲ್ಲಿದ್ದಾರೆ. ಎಂಬುದನ್ನು ಮೊದಲು ಗುರುತಿಸಿಕೊಳ್ಳುವ ಕಾರ್ಯ ನಡೆಯುತ್ತದೆ. ಇದು ವೈದ್ಯರ ಇರುವಿಕೆಯನ್ನು ತಿಳಿಯಲು ಮಾಡುವ ಸಮೀಕ್ಷೆಯಾಗಿದೆ.

2. ವಿಷಯದ ಸಂಶೋಧನೆ (Making a Research) : ವೈದ್ಯರನ್ನು ಗುರುತಿಸಿಕೊಂಡ ನಂತರ, ಯಾವ ಕಾಯಿಲೆಗಳಿಗೆ ಔಷಧವನ್ನು ಕೊಡುತ್ತಾರೆ. ಹೇಗೆ ಕೊಡುತ್ತಾರೆ ಮತ್ತು ಏನನ್ನು ಕೊಡುತ್ತಾರೆ ಎಂಬುದನ್ನು ಶೋಧಿಸುವುದರ ಮೂಲಕ ತಿಳಿಯುವುದು. ಇದು ಸಮೀಕ್ಷೆಯ ಮುಂದುವರಿದ ಹಂತ. ಈ ಬಗೆಯ ಪರಿಶೋಧನಾ ವಿನ್ಯಾಸವನ್ನು ಅಧ್ಯಯನ ಒಳಗೊಂಡಿದ್ದು, ಜನಪದ ವೈದ್ಯವನ್ನು ಸೂಕ್ಷ್ಮವಾಗಿ ಪರಿಶೀಲಿಸುವುದರ ಮೂಲಕ ಅದರ ಶೋಧನೆಯ ಕಾರ್ಯವನ್ನು ಮಾಡಲಾಗುವುದು. ಇದೆಲ್ಲವೂ ಅಧ್ಯಯನದ ಸ್ವರೂಪವನ್ನು ತಿಳಿಸಿಕೊಡುವ ಸ್ಥೂಲ ಚಿತ್ರಣವಾಗಿದೆ.

ವ್ಯಾಪ್ತಿ

ಭೌಗೋಳಿಕವಾಗಿ ಚಿತ್ರದುರ್ಗ ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇಲ್ಲಿ ಆರು ತಾಲ್ಲೂಕುಗಳಿವೆ. ಬೇರೆ ಬೇರೆ ಸಂದರ್ಭಗಳಲ್ಲಿ ಕ್ಷೇತ್ರಕಾರ್ಯವನ್ನು ಈ ಆರು ತಾಲ್ಲೂಕುಗಳಲ್ಲಿ ಕೈಗೊಳ್ಳಲಾಗುತ್ತದೆ. ಜಿಲ್ಲೆಯಲ್ಲಿನ ಸುಮಾರು ಇನ್ನೂರು ವೈದ್ಯರನ್ನು ಸಂದರ್ಶಿಸುವ ಯೋಜನೆಯಿದೆ ಸಾಮಾನ್ಯವಾಗಿ, ವೈದ್ಯರಲ್ಲಿ ಪುರುಷ ವೈದ್ಯರ ಸಂಖ್ಯೆಯೇ ಹೆಚ್ಚಾಗಿರಬಹುದು. ಆದರೂ ಲಭ್ಯವಿರುವಷ್ಟು ವೈದ್ಯೆಯರನ್ನು ಸಂದರ್ಶಿಸಲಾಗುತ್ತದೆ. ಎರಡು ಮೂರು ಕಾಯಿಲೆಗಳಿಗೆ ಔಷಧ ಕೊಡುವವರಿಂದ ಹಿಡಿದು ಅರವತ್ತು ಕಾಯಿಲೆಗಳವರೆಗೆ ಔಷಧೋಪಚಾರ ಮಾಡುವವರನ್ನು ಭೇಟಿ ಮಾಡಲಾಗುತ್ತದೆ.

ಜನಪದ ವೈದ್ಯ ಪ್ರಕಾರಗಳನ್ನು ಪ್ರಮುಖವಾಗಿ ಮನುಷ್ಯ ವೈದ್ಯ, ಪ್ರಾಣಿವೈದ್ಯ ಮತ್ತು ಕೃಷಿವೈದ್ಯ[3] ಎಂದು ಈಗಾಗಲೇ ಗುರುತಿಸಲಾಗಿದೆ. ಕ್ಷೇತ್ರಕಾರ್ಯದಲ್ಲಿ ಮನುಷ್ಯ ಹಾಗೂ ಪ್ರಾಣಿವೈದ್ಯ ಈ ಪ್ರಕಾರಗಳ ಮಾಹಿತಿ ಅಧಿಕವಾಗಿ ದೊರಕಿರುತ್ತದೆ. ಸ್ವಲ್ಪ ಪ್ರಮಾಣದಲ್ಲಿ ಕೃಷಿ ವೈದ್ಯ ಮಾಹಿತಿಯೂ ಲಭ್ಯವಾಗಿರುತ್ತದೆ. ಆದರೆ ಪ್ರಸ್ತುತ ಅಧ್ಯಯನದಲ್ಲಿ ಮನುಷ್ಯ ವೈದ್ಯ ಪ್ರಕಾರವನ್ನು ಮಾತ್ರ ಚರ್ಚೆಗೆ ಒಳಪಡಿಸಲಾಗುತ್ತದೆ. ಸಂದರ್ಭೋಚಿತವಾಗಿ ಪಶುವೈದ್ಯ ಪ್ರಕಾರವನ್ನು ಉದಾಹರಣೆಗಾಗಿ ಮತ್ತು ಜನಪದ ವೈದ್ಯದ ವಿಶ್ಲೇಷಣೆಯ ಸ್ಪಷ್ಟತೆಗಾಗಿ ಬಳಸಿಕೊಳ್ಳಲಾಗುತ್ತದೆ ಅಷ್ಟೆ.

ಅಧ್ಯಯನದ ಒಟ್ಟು ಸ್ವರೂಪವನ್ನು ತಿಳಿಸುವ ಕೋಷ್ಟಕ				
ಕ್ಷೇತ್ರಕಾರ್ಯ ಕೈಗೊಂಡ ಒಟ್ಟು ದಿನಗಳು	ಭೇಟಿ ಮಾಡಿದ ಹಳ್ಳಿಗಳು	ಜಿಲ್ಲೆಯಲ್ಲಿ ಸಂದರ್ಶಿಸಿದ ಒಟ್ಟು ವೈದ್ಯರು	ಅಧ್ಯಯನದಲ್ಲಿ ಬರುವ ಒಟ್ಟು ಸಸ್ಯಗಳು	ಈ ಅವಧಿಯಲ್ಲಿ ಸುತ್ತಿದ ಕಿ.ಮೀ.ಗಳು
102	124	205	406	ಸು. 5,700

ಈ ಅಧ್ಯಯನದಲ್ಲಿ ಎಲ್ಲೆಲ್ಲಿ ವೈದ್ಯರು, ವೈದ್ಯ ಎಂಬ ಪದಗಳು ಬಂದಿರುವವೋ ಅವುಗಳನ್ನು ಜನಪದ ವೈದ್ಯರು ಜನಪದ ವೈದ್ಯ ಎಂದು ಭಾವಿಸಿಕೊಳ್ಳುವುದು. ಚಿಕಿತ್ಸೆ ಔಷಧಿ ಎಂಬ ಪದಗಳನ್ನು ಜನಪದ ವೈದ್ಯರು ಬಳಸುವುದಿಲ್ಲ ಬದಲಿಗೆ ಹಸಿರು ಗಿಡ ಕಾಡುಗಿಡ ಗಿಡಹುಯ್ಯೋದು ಮುಂತಾದ ಪದಗಳನ್ನು ಉಪಯೋಗಿಸುತ್ತಾರೆ. ಅಕಾರಾದಿಯಾಗಿ ವೈದ್ಯರುಗಳಿಗೆ ಸಂಖ್ಯೆಗಳನ್ನು ಕೊಡಲಾಗಿದೆ. ವಿವಿಧ ಅಧ್ಯಾಯಗಳಲ್ಲಿ ವೈದ್ಯರ ಪ್ರಸ್ತಾಪ ಮತ್ತು ಔಷಧದ ವಿವರಣೆ ಬಂದಾಗ ಅಕಾರದಿಯಾಗಿ ಕೊಟ್ಟಿರುವ ಸಂಖ್ಯೆಗಳನ್ನು ವೈದ್ಯರು ಹಾಗೂ ವಿವರಣೆಯ ನಂತರ ಆವರಣದ ಒಳಗೆ ಕೊಡಲಾಗಿದೆ. ಅಡಿಟಿಪ್ಪಣಿಗಳನ್ನು ಅಯಾ ಅಧ್ಯಾಯದ ಕೊನೆಯಲ್ಲಿ ಕೊಡಲಾಗಿದೆ.

ಟಿಪ್ಪಣಿಗಳು :

1. ಹರ್ಬೇರಿಯಂ : ಮರ, ಗಿಡ, ಬಳ್ಳಿಗಳಿಂದ ಸುಮಾರು ಹತ್ತು ಇಂಚಿನಷ್ಟು ಉದ್ದದ ಹೂ ಇರುವ ಟಿಸಿಲನ್ನು ಕತ್ತರಿಸಿ ಅದನ್ನು ದಿನ ಪತ್ರಿಕೆಯಲ್ಲಿ ಮಡಚಿ ಅದರ ಮೇಲೆ ಭಾರವಾದ ಹಲಗೆಯಂತಹ ವಸ್ತುವನ್ನು ಇಡುವುದು. ಅದು ಒಣಗುವವರೆಗೆ ಪ್ರತಿದಿನ ಹಾಳೆಯನ್ನು ಬದಲಾಯಿಸುವುದು. ಒಣಗಿದ ನಂತರ ದಪ್ಪನೆಯ (ಕೆ.ಜಿ.ಶೀಟ್) ಹಾಳೆಗೆ ಆ ಟಿಸಿಲನ್ನು ಅಂಟಿಸುವುದು.

2. ಈ ಕೆಳಗಿನ ವೈದ್ಯರನ್ನು ಎರಡು – ಮೂರು ಬಾರಿ ಸಂದರ್ಶನವನ್ನು ಕೈಗೊಳ್ಳಲಾಗಿದೆ. ರಾವುಲಗುಂಟೆ ಬಸಣ್ಣ(ಚಳ್ಳಕೆರೆ), ಔಷಧಿ ರಾಜಣ್ಣ(ಚಳ್ಳಕೆರೆ), ತಿಪ್ಪಜ್ಜಿ(ಚಳ್ಳಕೆರೆ), ಮುರಿಗಜ್ಜಿರ ನಿಂಗಪ್ಪ(ಹೊಳಲ್ಕೆರೆ), ಆನಂದಜ್ಜ(ಚಳ್ಳಕೆರೆ), ಕಂಚಿ ವರದಯ್ಯ(ಚಳ್ಳಕೆರೆ), ಜಮಾಪುರ ರಂಗಪ್ಪ(ಹೊಸದುರ್ಗ), ಸುಣ್ಣಗಾರ ಶಾಮಣ್ಣ(ಹೊಳಲ್ಕೆರೆ), ಗೌರಕ್ಕರ ಈಶ್ವರಪ್ಪ(ಹೊಳಲ್ಕೆರೆ), ಗಿರಿಯಪ್ಪ(ಹೊಸದುರ್ಗ), ಮಾದಪ್ಪ(ಹೊಸದುರ್ಗ), ನಾಗಪ್ಪ(ಹೊಸದುರ್ಗ), ಕರಿಯಪ್ಪ(ಹೊಳಲ್ಕೆರೆ), ಚಲುಮಪ್ಪ(ಚಳ್ಳಕೆರೆ), ಗೋವಿಂದಪ್ಪ(ಹೊಳಲ್ಕೆರೆ), ದೊಡಚೆನ್ನಯ್ಯ(ಮೊಳಕಾಲ್ಮೂರು), ವೀರಣ್ಣ(ಮೊಳಕಾಲ್ಮೂರು), ರಾಮಲಿಂಗಪ್ಪ(ಹೊಳಲ್ಕೆರೆ), ರಾಜಣ್ಣ(ಹಿರಿಯೂರು), ಹನುಮಂತಪ್ಪ(ಹಿರಿಯೂರು), ಅಜ್ಜಪ್ಪಗಳ ವೀರಣ್ಣ(ಚಿತ್ರದುರ್ಗ), ಈಶ್ವರಪ್ಪ(ಚಿತ್ರದುರ್ಗ), ತಿಮ್ಮರಾಯಶೆಟ್ಟಿ(ಚಿತ್ರದುರ್ಗ), ಇತ್ಯಾದಿ.

3. ಡಾ. ಟಿ. ಗೋವಿಂದರಾಜು, 2003. ಜನಪದ ವೈದ್ಯ, ಪುಟ–xx.

* * *

ಅಧ್ಯಾಯ – 2

ಜನಪದ ವೈದ್ಯದ ಪರಿಕಲ್ಪನೆ

2.1 ಜಿಲ್ಲೆಯ ಭೌಗೋಳಿಕ ಹಾಗೂ ನೈಸರ್ಗಿಕ ವಿವರಗಳು

ಜನಪದ ವೈದ್ಯದ ಪರಿಕಲ್ಪನೆ

ಜಾನಪದ ಎನ್ನುವುದು ಮೌಖಿಕ ಸಂಸ್ಕೃತಿ. ಇದು ಮಾನವನ ಹುಟ್ಟಿನೊಡನೆ ಬೆಳೆದು ಬಂದಿರುವಂತಹುದು. ಅವನ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ಒಳಗೊಂಡಿರುವುದು, ಜಾನಪದದ ಮೂಲವನ್ನು ಇಲ್ಲಿಂದ ಗುರುತಿಸಬೇಕಾಗುತ್ತದೆ. ಇದನ್ನೇ ಬಿ.ಎಂ.ಶ್ರೀ ಯವರು "ಜನವಾಣಿ ಬೇರು ಕವಿವಾಣಿ ಹೂವು" ಎಂದಿರುವುದು. ಅಂದರೆ ಮಾನವನು ಸಾಗಿಬಂದ ದಾರಿ, ಆಡಿದ ಮಾತು, ಕಂಡುಕೊಂಡ ಶೋಧನೆ, ಪಡೆದುಕೊಂಡ ಅನುಭವ ಇವೆಲ್ಲವುಗಳು ಮಾನವನ ಬದುಕಿನೊಂದಿಗೆ ವಿಕಾಸವಾಗುತ್ತಾ ಬಂದವು; ಜನಪದ ಸಂಸ್ಕೃತಿಯಲ್ಲಿನ ಜ್ಞಾನ ಶಾಖೆಗಳಾಗಿ ಉಳಿದುಕೊಂಡು ಬಂದವು.

ಜರ್ಮನಿಯ ಜೇಕಬ್ ಗ್ರಿಂ ಹಾಗೂ ವಿಲ್‌ಹೆಲ್ಮ್ ಗ್ರಿಂ ಎಂಬ ಹೆಸರಿನ ಸೋದರರನ್ನು ಜಾನಪದ ಅಧ್ಯಯನದ ಮೊದಲಿಗರು ಎಂದು ಕರೆಯಲಾಗಿದೆ. ನಂತರ 1846ರಲ್ಲಿ ವಿಲಿಯಂ ಜೆ ಥಾಂಸ್ ಎಂಬುವವನು 'Popular Antiquities' ಎಂಬ ಪದಕ್ಕೆ ಬದಲಾಗಿ 'Folklore' ಎಂಬ ಪದವನ್ನು ಬಳಸಬೇಕೆಂದು ಸೂಚಿಸಿದ. ನಂತರ ಜಾನಪದ ಎಂದರೇನು ಎಂಬುದನ್ನು "Standard Dictionary of Folklore Mythology and Legend" ಎಂಬ ಜಾನಪದ ವಿಶ್ವಕೋಶದಲ್ಲಿ ಇಪ್ಪತ್ತೊಂದು ಮಂದಿ ಜಾನಪದ ವಿದ್ವಾಂಸರಿಂದ ಜಾನಪದವನ್ನು ಕುರಿತ ವ್ಯಾಖ್ಯಾನಗಳಿವೆ. ಅದೆಲ್ಲದರ ಸಾರಾಂಶ : "Folklore, ಒಂದು ಜನತೆಯ ಗ್ರಂಥಸ್ಥವಲ್ಲದ ಸಂಪ್ರದಾಯದ ಮೊತ್ತ; ಹಾಗೂ ಅದನ್ನು ಕುರಿತ ವಿಜ್ಞಾನ. ಇದನ್ನೇ ಇನ್ನೊಂದು ಮಾತಿನಲ್ಲಿ ಹೇಳುವುದಾದರೆ Folklore ಎನ್ನುವುದು ಸಂಪ್ರದಾಯವನ್ನು ಕುರಿತ ವಿಜ್ಞಾನ" ಎನ್ನುವಲ್ಲಿ ಜಾನಪದವೆನ್ನುವುದು ಪ್ರಾಚೀನರ ಸಂಸ್ಕೃತಿ ಎಂದು ಹೇಳಲಾಗಿದೆ. ಸಿ.ಎಫ್. ಪಾಟರ್ ಜಾನಪದ ಎನ್ನುವುದು ಸಂಪ್ರದಾಯದ ಮೊತ್ತ ಮಾತ್ರವಲ್ಲ, ಅದು ಚಲನಶೀಲವಾದುದು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಈತನ ಜಾನಪದ ನಿರೂಪಣೆ – "Folklore is lively fossil which refuses to die. It is a precipitate of the Scientific and cultural lag of centuries and millennia of human experience": "ಜಾನಪದ ಒಂದು ಜೀವಂತ ಪಳೆಯುಳಿಕೆ,

ಅದು ಸಾಯಲು ನಿರಾಕರಿಸುತ್ತದೆ. ಇದು ಅನೇಕ ಶತಮಾನಗಳ ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಸಂಪತ್ತು ಮತ್ತು ಮಾನವನ ಅನುಭವ"[2] ಈತನ ನಿರೂಪಣೆಯನ್ನು ಪರಿಶೀಲಿಸಿದರೆ ಜಾನಪದ ಕೇವಲ ಪಳೆಯುಳಿಕೆ ಅಲ್ಲ, ಅದು ಕ್ರಿಯಾಶೀಲವಾದುದು. ಇದರಿಂದಾಗಿ ಅದು ಸಾವನ್ನು ನಿರಾಕರಿಸಿ ಜೀವಂತಿಕೆಯನ್ನು ಮೈಗೂಡಿಸಿ ಕೊಂಡಿರುವುದು ಎನ್ನುವ ಅರ್ಥ ಗ್ರಾಹ್ಯವಾಗುತ್ತದೆ.

ಮೇಲಿನ ಜಾನಪದ ವ್ಯಾಖ್ಯಾನಗಳನ್ನು ಗಮನಿಸಿದಾಗ ಜಾನಪದವು ಮಾನವನ ಎಲ್ಲಾ ಸಾಂಸ್ಕೃತಿಕ ಮುಖಗಳನ್ನು ಒಳಗೊಂಡಿರುವಂತಹುದು. ಅದು ಒಳ್ಳಗೊಳ್ಳದ ಪ್ರಕಾರವೇ ಇಲ್ಲವೇನೋ ಎಂಬಂತೆ ಅದರ ಹರವು ವಿಸ್ತರಿಸುತ್ತಲೇ ಇದೆ. ಆರ್. ಎಸ್. ಬಾಗ್ಸ್ ರವರು ಜಾನಪದವನ್ನು ನಾಲ್ಕು ಭಾಗಗಳನ್ನಾಗಿ ವರ್ಗೀಕರಿಸಿದ್ದಾರೆ. ಅವುಗಳು : ಸಾಹಿತ್ಯಕ ಬಗೆಗಳು, ಭಾಷಿಕ ಬಗೆಗಳು, ವೈಜ್ಞಾನಿಕ ಬಗೆಗಳು ಮತ್ತು ಕ್ರಿಯಾತ್ಮಕ ಬಗೆಗಳು. ಈ ಬಗೆಯ ವರ್ಗೀಕರಣದಲ್ಲಿ ಜನಪದ ವೈದ್ಯವು ಕ್ರಿಯಾತ್ಮಕ ಬಗೆಯಲ್ಲಿ ಬರುತ್ತದೆ.

ಪ್ರಾಚೀನ ಮಾನವನ ಆರೋಗ್ಯದಲ್ಲಿ ಏರುಪೇರಾದಾಗ, ನೋವು, ಸಂಕಟಗಳು ಕಾಣಿಸಿಕೊಂಡಾಗ, ವಿಲಕ್ಷಣವಾದ ದೈಹಿಕ ತೊಂದರೆಗಳು ಎದುರಾದಾಗ ಅವುಗಳ ಪರಿಹಾರಕ್ಕೆ ವಿವಿಧ ಉಪಾಯಗಳನ್ನು ಹುಡುಕ ತೊಡಗಿದ. ತನ್ನ ಸುತ್ತಲಿನ ಗಿಡಮರಬಳ್ಳಿಗಳ ಎಲೆಯನ್ನೋ, ಬೇರನ್ನೋ ಇಲ್ಲವೇ ಕಾಯಿ-ಹಣ್ಣುಗಳನ್ನೋ ಕಿತ್ತು ತಿನ್ನಲು ಮೊದಲು ಮಾಡಿದ. ಇದರಿಂದ ಅವನ ನೋವು ಸುಧಾರಿಸಿದರೆ ಅದನ್ನೇ ಮುಂದುವರಿಸುವ ಪ್ರವೃತ್ತಿಯನ್ನು ಬೆಳಸಿಕೊಂಡ. ಆಹಾರಕ್ಕಾಗಿ ಪ್ರಾಣಿ, ಪಕ್ಷಿಗಳನ್ನು ಬೇಟೆಯಾಡಿ ಸೇವಿಸುವಾಗ ಅವನ ಯಾವುದೋ ದೈಹಿಕ ಸಮಸ್ಯೆ ಉಪಶಮನವಾಗಿರಬಹುದು. ಇದು ಅವನ ಶೋಧನೆಗೆ ಮತ್ತಷ್ಟು ಪುಷ್ಟಿಯನ್ನು ನೀಡಿರಬಹುದು. ಹಸಿವೆಯೇ ಮನುಷ್ಯನ ಮೊದಲ ರೋಗ ಎಂದು ಹೇಳುವುದುಂಟು, ಇದರ ನಿವಾರಣೆಗಾಗಿ ಆದಿ ಮಾನವ ಏನೆಲ್ಲ ಪ್ರಯೋಗಗಳನ್ನು ನಡೆಸಿದ. ಸಸ್ಯಸಂಪತ್ತು, ಪ್ರಾಣಿ ಸಂಪತ್ತು ಸೇರಿದಂತೆ ಪ್ರಕೃತಿಯ ಎಲ್ಲಾ ಸಂಪನ್ಮೂಲಗಳು ಅವನ ಪ್ರಯೋಗಕ್ಕೆ ಪರಿಕರಗಳಾದಾವು. ಅಂದರೆ ಹಸಿವು ತೃಷೆಯಂತಹ ಮೂಲಭೂತ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದರ ಮೂಲಕ ಆಹಾರ ಜ್ಞಾನವನ್ನು ಪಡೆದುಕೊಂಡನು. ಇದೇ ವೇಳೆಯಲ್ಲಿ ದೈಹಿಕ ಬಾಧೆಗಳನ್ನು ನೀಗಿಸಲು ಅಗತ್ಯವಾದ ವೈದ್ಯಜ್ಞಾನದ ಅರಿವೂ ಮೂಡಿರಬಹುದು. ಅಂದರೆ, ಅದನ್ನು

ಕಂಡುಕೊಂಡನು. ಆಹಾರ ಮತ್ತು ವೈದ್ಯಜ್ಞಾನಗಳ ಶೋಧನೆ ಜೊತೆಯಾಗಿಯೇ ನಡೆದಿರುವ ಸಾಧ್ಯತೆ ಇದೆ.

ಹೀಗೆ ಅನಿವಾರ್ಯವಾಗಿ ಹುಟ್ಟಿಕೊಂಡ ವೈದ್ಯದ ಪರಿಕಲ್ಪನೆ ಅನಾರೋಗ್ಯಕ್ಕೆ ಕೊಡುವ ಮದ್ದು ಎಂಬ ಅರಿವು ಆಗಿನವರಲ್ಲಿ ಇರದೇ ಹೋಗಿರಬಹುದು. ಕಾಲಕ್ರಮೇಣ ಇದು ಒಂದು ಜ್ಞಾನಶಾಖೆಯಾಗಿ ಬೆಳೆಯುತ್ತ ಬಂದಿರಬಹುದು. ಹೀಗೆ ಬೆಳೆಯಲು ಮನುಷ್ಯ ಮಾತ್ರ ಕಾರಣವಾಗಿರದೇ ಪ್ರಕೃತಿಯಲ್ಲಿನ ಪ್ರತಿಯೊಂದು ವಸ್ತುವೂ ಆ ವೈದ್ಯಜ್ಞಾನ ಬೆಳೆಯಲು ಪ್ರೇರಣೆಯನ್ನು ಕೊಟ್ಟಿವೆ.

ನರಿ, ನಾಯಿ, ಮಂಗ, ಕೋಳಿ, ಕಾಗೆ, ನವಿಲು ಮುಂತಾದ ಪ್ರಾಣಿ-ಪಕ್ಷಿಗಳು ಕೆಲವೊಮ್ಮೆ ತಮ್ಮ ದಿನನಿತ್ಯದ ಆಹಾರ ಕ್ರಮಕ್ಕಿಂತಲೂ ಭಿನ್ನವಾದ ಆಹಾರ ಸೇವೆಯಲ್ಲಿ ತೊಡಗುತ್ತವೆ. ಗರಿಕೆ, ದರ್ಬೆಹುಲ್ಲುಗಳನ್ನು ಕಡಿಯುವುದು, ಕಹಿ, ಒಗರು ಎಂದು ತಿಳಿಯದೇ ಬೇವಿನ ಕಾಯಿ, ಹತ್ತಿಕಾಯಿಗಳನ್ನು ತಿಂದು ತಿಂದು ಉಗುಳುವುದು. ನೀರಿನಲ್ಲಿ ಮುಳುಗೆದ್ದು ಬಿಸಿಲಿನಲ್ಲಿ ಬಂದು ನಿಲ್ಲುವುದು, ಈ ಮೊದಲಾದ ಚಟುವಟಿಕೆಗಳಿಂದ ವಿವಿಧ ಬಗೆಯ ಅನುಕೂಲಗಳನ್ನು ಅವು ಪಡೆಯುತ್ತವೆ. ಗರಿಕೆ ಮತ್ತು ದರ್ಬೆ ಹುಲ್ಲುಗಳ ಸೇವನೆಯಿಂದ ಅಜೀರ್ಣತೆ ಪರಿಹಾರವಾದರೆ, ಅದೇ ಹುಲ್ಲುಗಳು ಮಳೆಗೆ ನೆನೆದಾಗ ಆ ಹುಲ್ಲಿಗೆ ಅಂಟಿದ ನೀರನ್ನು ಹೀರುವುದರಿಂದ ತಾತ್ಕಾಲಿಕವಾಗಿ ಹಸಿವು ಕಣ್ಮರೆಯಾದರೂ ಅದರಿಂದ ಜೀರ್ಣಕ್ರಿಯೆ ವೃದ್ಧಿಗೊಳ್ಳುತ್ತದೆ. ಬೇವು ಮತ್ತು ಹತ್ತಿಯ ಕಾಯಿಗಳ ಸೇವನೆಯಿಂದ ಬಾಯಿಯ ಅರುಚಿಯು ನಿವಾರಣೆಯಾದರೆ, ನೀರಲ್ಲಿ ಮುಳುಗಿ ಬಿಸಿಲಿನಲ್ಲಿ ನಿಲ್ಲುವುದರಿಂದ ದೈಹಿಕ ಸ್ವಚ್ಛತೆಯ ಪಾಠವನ್ನು ಕಲಿಯಲು ಪ್ರೇರಣೆಯಾಗುತ್ತದೆ. ಕಾಡ್ಗಿಚ್ಚಿನಿಂದ ವನವೆಲ್ಲ ಸುಟ್ಟು ಬೂದಿಯಾದಾಗ ಅದರಲ್ಲಿ ಪ್ರಾಣಿ, ಪಕ್ಷಿಗಳು, ಗಡ್ಡೆ ಗೆಣಸು ಮತ್ತು ಕಾಯಿಗಳು ಬೆಂದಿರುತ್ತವೆ. ಹೀಗೆ ಬೆಂದ ಮಾಂಸ ಮತ್ತು ಕಾಯಿ ಪಲ್ಯಗಳನ್ನು ಮನುಷ್ಯನು ಸೇವಿಸಿದಾಗ ಹೊಸರುಚಿಯು ಆಹಾರದಲ್ಲಿ ಕಂಡಿರುವುದರ ಜೊತೆಗೆ ಆರೋಗ್ಯದ ಪ್ರಜ್ಞೆಯನ್ನು ಮೂಡಿಸಿರಬಹುದು.

ಈ ರೀತಿಯ ಪ್ರಕೃತಿಯಲ್ಲಿನ ವ್ಯಾಪಾರಗಳು ಮನುಷ್ಯನ ಜ್ಞಾನ ದಾಹವನ್ನು ಇಮ್ಮಡಿಗೊಳಿಸಿವೆ. ಇದಕ್ಕೆ ಇನ್ನೆರಡು ಉದಾಹರಣೆಗಳನ್ನು ನೋಡಬಹುದು. 'ಇರುವೆ ಗೂಡಿನ ಹತ್ತಿರ ಬೆಲ್ಲ ಮತ್ತು ಸಕ್ಕರೆಗಳೆರಡನ್ನು ಹಾಕಿದಾಗ ಬೆಲ್ಲಕ್ಕೆ ಇರುವೆಗಳು ಮುತ್ತಿಕೊಳ್ಳುತ್ತಾವೆಯೇ ಹೊರತು ಸಕ್ಕರೆಯ ಸಮೀಪ

ಹೋಗುವುದಿಲ್ಲ.'[3] ರಾಸಾಯನಿಕಯುಕ್ತ ಸಕ್ಕರೆಗಿಂತಲೂ ಬೆಲ್ಲವೇ ಆರೋಗ್ಯಕ್ಕೆ ಸೂಕ್ತವೆಂದು ಅವು ನಿರ್ಧರಿಸುತ್ತವೆ. ಕಡಿದಾಳ್ ಶಾಮಣ್ಣನವರು ಸನ್‌ಬರ್ಡ್ ಸೂರಕ್ಕಿಯ ಪೋಟೋ ತಗೆಯುವಾಗ ಗೂಡಿನಲ್ಲಿದ್ದ ಮರಿಗಳಿಗೆ ಇರುವೆಗಳು ಮುತ್ತಿಕೊಳ್ಳುತ್ತವೆ. ಆಗ ಮರಿಗಳು ಒದ್ದಾದುತ್ತಿರುತ್ತವೆ. ಆ ವೇಳೆಯಲ್ಲಿ 'ತಂದೆ ತಾಯಿ ಎರಡೂನು, ಒಂದ್ಯೆದು ನಿಮಿಷದೊಳಗೆ ಎಂಥದೊ ಈ ಹಾವಿನ್ ಪೊರೆತರಹ ಬಿಳೀ ಪುಡಿ ತಗೋಬಂದು ಗೂಡುತುಂಬ ಹಚ್ಚಿಬಿಟ್ವು ಕಂಡ್ರಿ, ಇರುವೆಗಳು ಬರೋವು ಟೊಂಯ್ ಅಂತ ವಾಪಾಸ್ ಹೋಗೋವು! ಅದು ಯಾವ ಸಂಜೀವಿನಿನೋ ಯಾವ್ ಗಿಡ ಮೂಲಿಕೇನೋ ನಮ್ಗೇನ್ ಗೊತ್ತು? ಇರುವೆಗಳಿಗೆ ಗೂಡ್ಹತ್ರ ಹೋಗಾಕ್ಕಾಗಲೇ ಇಲ್ಲ ನೋಡ್ರಿ. ಮರಿ ಉಳ್ಕೊಸ್ಕೊಂಬಿಟ್ವು. ಇದು ನಾನು ಹತ್ರದಿಂದ ಪೋಟೋ ತೆಗೀತಾ ಕಂಡಂತಹ ಒಂದು ವಿಚಿತ್ರ.'[4] ಇಲ್ಲಿ ಪಕ್ಷಿಗಳು ತಮ್ಮ ಸಮಸ್ಯೆಯನ್ನು ಪರಿಹರಿಸಿಕೊಂಡ ಬಗೆ ವಿಸ್ಮಯವಾದುದು. ತಾಯಿ ಹೊಟ್ಟೆಯಿಂದ ಹೊರಬಂದ ಕರು ಕಲವೇ ನಿಮಿಷಗಳಲ್ಲಿ ಕೆಚ್ಚಲನ್ನು ಹುಡುಕಿಕೊಳ್ಳುತ್ತದೆ. ಮೊಟ್ಟೆಯಿಂದ ಹೊರಬಂದ ಪಕ್ಷಿಗೆ ಕಣ್ಣು ಕಾಣದಿದ್ದರೂ ಗುಟುಕಿಗಾಗಿ ಬಾಯಿಯನ್ನು ತೆರೆಯುತ್ತದೆ. ಇಂಥ ಅದೆಷ್ಟೋ ಘಟನೆಗಳನ್ನು ನೋಡಿದ ಮಾನವನು ಅವುಗಳನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಳ್ಳತೊಡಗಿದ. ಇದಕ್ಕಾಗಿ ಮಾನವನನ್ನು ಪ್ರಕೃತಿಯ ಕೂಸು ಎಂದು ಕರೆಯುವುದೂ ಉಂಟು.

ಪ್ರಕೃತಿಯಲ್ಲಿನ ಈ ಬಗೆಯ ವೈಚಿತ್ರಗಳು ಮನುಷ್ಯನು ಅನೇಕ ಆವಿಷ್ಕಾರಗಳನ್ನು ಕೈಗೊಳ್ಳಲು ಪ್ರೇರಣೆಯನ್ನು ನೀಡಿವೆ. ಋಷಿ–ಮುನಿಗಳು ಪ್ರಕೃತಿಯನ್ನು ಚೆನ್ನಾಗಿಯೇ ಅರ್ಥೈಸಿಕೊಂಡಿದ್ದರು. ತಪಸ್ವಿಗಳಾದ ಅವರು ಪ್ರಕೃತಿಯೊಡನೆ ತಾದಾತ್ಮ್ಯ ಸಂಬಂಧವನ್ನು ಹೊಂದಿದ್ದರು. ಅದರೊಡನೆ ಸಂವಹನ ಮಾಡುವಷ್ಟು ಸಿದ್ಧಿಯನ್ನು ಸಂಪಾದಿಸಿದ್ದರು. ಸ್ವಾಮಿ ರಾಮ 'ಹಿಮಾಲಯದ ಮಹಾತ್ಮರ ಸನ್ನಿಧಿಯಲ್ಲಿ' ಎಂಬ ತಮ್ಮ ಆತ್ಮಚರಿತ್ರೆಯಲ್ಲಿ "ಭಾರತದ ಪರ್ವತಗಳು ಹಾಗೂ ಕಾಡುಗಳಲ್ಲಿ ವರ್ಷಗಟ್ಟಲೆ ಸುತ್ತಾಡಿರುವ ನನ್ನ ಅನುಭವದಲ್ಲಿ, ಯಾವ ಸಾಧು, ಸ್ವಾಮಿ ಅಥವಾ ಯೋಗಿ ಎಂದಾದರೂ ಕ್ರೂರ ಮೃಗಗಳ ಆಕ್ರಮಣಕ್ಕೆ ಈಡಾಗಿರುವುದನ್ನು ಕೇಳಿಲ್ಲ. ಅಲ್ಲದೆ ಪ್ರಾಣಿಗಳು ಸಹಜವಾಗಿ ಸೂಕ್ಷ್ಮ ಪ್ರವೃತ್ತಿಯವು ಹಾಗೂ ದ್ವೇಷ ಅಥವಾ ಪ್ರೀತಿ ಎರಡನ್ನೂ ಗ್ರಹಿಸುವ ಸ್ವಭಾವದವು"[5] ಎನ್ನುವ ಅಭಿಪ್ರಾಯ ಮನುಷ್ಯ ಪ್ರಕೃತಿಯನ್ನು ಅರಿತುಕೊಳ್ಳುವುದರಿಂದಾಗುವ ಅನುಕೂಲಗಳನ್ನು ಹೇಳುತ್ತವೆ.

ಇಂಥ ಸಾಧು-ಸಂತರು ಪ್ರಕೃತಿಯನ್ನು ತಿಳಿದಿರುವುದರಿಂದ ರೋಗನಿವಾರಣೆಗಾಗಿ ಪ್ರಕೃತಿಯ ಶಕ್ತಿಯನ್ನೇ ಬಳಸಿಕೊಳ್ಳುತ್ತಾರೆ. ಗಿಡಮೂಲಿಕೆಗಳ ಗುಣಾವಗುಣಗಳನ್ನು ತಿಳಿದಿರುವ ಅವರು ನಿರ್ದಿಷ್ಟ ಕಾಯಿಲೆಗೆ ಇಂಥದ್ದೇ ವನಸ್ಪತಿಯನ್ನು ಬಳಸಿದರೆ ಅದರಿಂದ ಕಾಯಿಲೆ ಗುಣವಾಗಬಲ್ಲದು ಎಂಬುದನ್ನು ನಿರ್ಧರಿಸುವ ಜ್ಞಾನವನ್ನು ಪಡೆದಿರಬಹುದು. ಇದು ಸಾಧ್ಯವಾದುದು ಅವರು ಪ್ರಕೃತಿಯಲ್ಲಿಯೇ ಹುಟ್ಟಿ ಅದರೊಂದಿಗೇ ಬದುಕುವುದರ ಮೂಲಕ ಮತ್ತು ಅದರ ಎಲ್ಲಾ ಮುಖಗಳನ್ನು ಅರಿತುಕೊಂಡಿರುವುದರಿಂದ ಎಂದು ಭಾವಿಸಬಹುದು.

ಆದಿ ಮಾನವ ಕಾಡು-ಕಣಿವೆ, ಗುಡ್ಡ-ಬೆಟ್ಟಗಳಲ್ಲಿ ಹುಟ್ಟಿ ಬೆಳೆದವನು ಇವು ಅವನ ಎಲ್ಲಾ ನೋವು-ನಲಿವುಗಳಿಗೆ, ದುಃಖ-ಸುಖಗಳಿಗೆ ದನಿಯಾದವು ಮತ್ತು ಜೊತೆಯಾದವು. ಇದರಿಂದ ಅವನು ಪ್ರಕೃತಿಯನ್ನು ಆರಾಧಿಸಲು ಪ್ರಾರಂಭಿಸಿದ. ತನ್ನ ಹಸಿವನ್ನು ನೀಗಿಸಿ ಆರೋಗ್ಯವನ್ನು ಸುಧಾರಿಸಿದ ಗಿಡ, ಮರ ಬಳ್ಳಿಗಳೇ ಅವನ ಪೂಜೆಗೆ ವಸ್ತುವಾದವು. ಹಾಗೆಯೇ ತನ್ನ ಕಷ್ಟಗಳನ್ನು ಪರಿಹರಿಸಿದ ಋಷಿಗಳು, ಸಿದ್ಧರು, ಸಂತರು ಮತ್ತು ಕುಟುಂಬದ ಹಿರಿಯರು, ಈ ಮೊದಲಾದವರನ್ನು ಮೂರ್ತಿರೂಪದಲ್ಲಿ ಆರಾಧಿಸುವ ಕ್ರಮವನ್ನು ಹುಟ್ಟುಹಾಕಿದ.

ಈ ಆರಾಧಿಸುವ ಕ್ರಮ ಬುಡಕಟ್ಟುಗಳ ಹಂತದಲ್ಲಿ ಒಂದು ಸ್ಪಷ್ಟರೂಪವನ್ನು ಪಡೆದುಕೊಂಡಿತು. ಇದರೊಂದಿಗೆ ಆರೋಗ್ಯ ರಕ್ಷಣೆಗಾಗಿ ಒಂದು ಜ್ಞಾನ ವೃದ್ಧಿಯಾಗುತ್ತ ಬಂದಿತು. ಹೀಗೆ ವಿವಿಧ ರೂಪಗಳಲ್ಲಿ ಬೆಳೆದುಬಂದಿರುವುದೇ ವೈದ್ಯಜ್ಞಾನ. ಇದು ಗಿಡಮೂಲಿಕೆಗಳ ವೈದ್ಯೋಪಚಾರ ಮಾತ್ರವಾಗಿರಲಿಲ್ಲ. ಪ್ರಕೃತಿಯಲ್ಲಿನ ಪ್ರತಿಯೊಂದು ವಸ್ತುವೂ ಅದರಲ್ಲಿ ಸೇರಿದ್ದಿತು. ಅಂದರೆ, ಜನಪದ ವೈದ್ಯಜ್ಞಾನ ಎಂಬುದು ದೇವರು, ನಂಬಿಕೆ, ಆಚರಣೆ, ಸಂಪ್ರದಾಯ, ಯಂತ್ರ-ಮಂತ್ರ ಈ ಮೊದಲಾದವುಗಳೆಲ್ಲ ಸೇರಿ ಆಗಿರುವಂತಹುದು.

ಇದರಿಂದಾಗಿ ಜನಪದ ವೈದ್ಯವೆಂಬುದು ಬುಡಕಟ್ಟುಗಳ ಸಂಸ್ಕೃತಿಯೊಳಗೆ ಬೆರತುಕೊಂಡಿರು ವಂತಹುದು. ಈ ಬುಡಕಟ್ಟುಗಳಲ್ಲಿದ್ದ ಸಾಂಸ್ಕೃತಿಕ ನಾಯಕರು ಜನರ ಕಲ್ಯಾಣಕ್ಕಾಗಿ ತಮ್ಮ ಅತಿ ಮಾನುಷ ಶಕ್ತಿಯಿಂದ ಮಳೆ ತರಿಸುವುದು, ಜೀವ ಸಂಕುಲದ ರೋಗಬಾಧೆಯನ್ನು ನಿವಾರಿಸುವುದು, ದುಷ್ಟಶಕ್ತಿಯಿಂದ ರಕ್ಷಿಸುವುದು, ಈ ಮೊದಲಾದ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಇವರು ತಮ್ಮ

ಪರಿಸರದಲ್ಲಿ ಲಭ್ಯವಿರುವ ಗಿಡಮೂಲಿಕೆಗಳ ಸಹಾಯದಿಂದ ಜನ ಮತ್ತು ಜಾನುವಾರುಗಳಿಗೆ ಔಷಧೋಪಚಾರವನ್ನೂ ಮಾಡುತ್ತಿದ್ದರು.

ಮಲೆಮಹದೇಶ ಮಕ್ಕಳ ಭಾಗ್ಯಕ್ಕಾಗಿ ಪ್ರಸಾದವನ್ನು ಕೊಡುವುದು. ಮಂಟೇಸ್ವಾಮಿ ಗಿಡಮೂಲಿಕೆಗಳ ಮೂಲಕ ವೈದ್ಯ ಮಾಡುವುದು, 'ಜುಂಜಪ್ಪನ ತಾಯಿ ಮಕ್ಕಳ ಸಂತಾನಕ್ಕೆ ಶಿವನಿಂದ ಪ್ರಸಾದ ಪಡೆದು ಅದನ್ನು ಹೋರಿಗೆ ತಿನ್ನಿಸಿ ನಂತರ ಅದು ಹಾಕುವ ಸಗಣಿಯನ್ನು ಸಂಗ್ರಹಿಸುತ್ತಾಳೆ. ಆ ಸಗಣಿಯ ಗೊಬ್ಬರದಿಂದ ಬೆಳೆದ ಕಿರುಕುಸಾಲೆ ಸೊಪ್ಪನ್ನು ಸೇವಿಸಿದಾಗ ಮಕ್ಕಳಾಗುತ್ತವೆ.'[6] ಮೈಲಾರಲಿಂಗ ಭಂಡಾರವನ್ನು ಕೊಡುವುದರ ಮೂಲಕ ರೋಗರುಜಿನಗಳನ್ನು ವಾಸಿಮಾಡುತ್ತಾನೆ.

ಈ ಮೇಲಿನ ಸಾಂಸ್ಕೃತಿಕ ನಾಯಕರು ಮಾಡುವ ಮತ್ತು ಅವರ ಕಾವ್ಯಗಳಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ವೈದ್ಯ ವಿವರಣೆಗಳು ಅಂದಿನ ಕಾಲದ ಬುಡಕಟ್ಟು ಜನರಲ್ಲಿ ಪ್ರಚಲಿತವಿದ್ದ ವೈದ್ಯೋಪಚಾರಗಳಾಗಿವೆ. ಮೇಲಿನವುಗಳಲ್ಲಿ ಒಂದನ್ನು ಇಲ್ಲಿ ಅಗತ್ಯವಾಗಿ ಪ್ರಸ್ತಾಪಮಾಡಲೇಬೇಕು, ಚಿನ್ನಮ್ಮ ಗೊಬ್ಬರದ ಮೇಲೆ ಬೆಳೆದ ಕಿರುಕುಸಾಲೆ ಸೊಪ್ಪನ್ನು ಸೇವಿಸಿದ ನಂತರ ಗರ್ಭದರಿಸಿ ಜುಂಜಪ್ಪನಿಗೆ ಜನ್ಮನೀಡುತ್ತಾಳೆ. ಈಗಲೂ ಜನಪದ ವೈದ್ಯದಲ್ಲಿ ಈ ಔಷಧಿ ಪ್ರಯೋಗದಲ್ಲಿದೆ. ಕಿರುಕುಸಾಲೆ ಮತ್ತು ಕಿರುನಲ್ಲಿ ಸೊಪ್ಪಗಳನ್ನು ಒಂಭತ್ತು ಮೆಣಸು ಒಂಭತ್ತು ಬೆಳ್ಳುಳ್ಳಿಗಳೊಂದಿಗೆ ಅರೆದು ಮುಟ್ಟಾದ ವೇಳೆ ದಿನಕ್ಕೆ ಮೂರು ಸಾರಿಯಂತೆ (ಗಜ್ಜುಗದಗಾತ್ರಗುಳಿಗೆ) ಮೂರು ದಿವಸ ಸೇವಿಸಬೇಕು (93) ಕಿರುಕುಸಾಲೆಯ ಪ್ರಸಂಗವನ್ನು ಗಮನಿಸಿದಾಗ ಬುಡಕಟ್ಟುಗಳ ಜನರು ಮೂಲಿಕಾ ವೈದ್ಯವನ್ನು ವ್ಯವಸ್ಥಿತವಾಗಿ ಬಳಸುತ್ತಿದ್ದರು ಎಂಬುದು ತಿಳಿಯುತ್ತದೆ. [ಕಾವ್ಯಗಳನ್ನು ಹಾಡಿರುವ ವಕ್ತೃಗಳಿಗೆ ಗಿಡಮೂಲಿಕೆಗಳ ವೈದ್ಯಪರಿಚಯ ಇರುವುದು ಈ ಘಟನೆಯಿಂದ ತಿಳಿದು ಬರುತ್ತದೆ.] ಈ ಬುಡಕಟ್ಟುಗಳಲ್ಲಿ ಜನಪದ ವೈದ್ಯಸಂಸ್ಕೃತಿಯೇ ಪ್ರಧಾನವಾಗಿದ್ದು, ಕಾಲದಿಂದ ಕಾಲಕ್ಕೆ ಅದು ವಿಕಾಸಗೊಳ್ಳುತ್ತ ಬಂದಿದೆ ಎಂಬುದು ಮನದಟ್ಟಾಗುತ್ತದೆ.

ಜನಪದ ವೈದ್ಯವೆಂಬುದು ಮಾನವನ ರೋಗ ನಿವಾರಣೆಗೆ ಸಹಜವಾಗಿ ಉದ್ಭವಿಸಿದ ವೈದ್ಯ ವಿಜ್ಞಾನವಾಗಿದೆ. ಇದು ಯಾವುದೋ ಒಂದು ಸ್ಥಳದಲ್ಲಿ ಉದಯಿಸಿತು ಎಂದು ಭಾವಿಸುವುದಕ್ಕಿಂತ ಹಲವು ಭಾಗಗಳಲ್ಲಿ ಹಲವಾರು ಜನರಿಂದ ವಿವಿಧ ರೂಪಗಳಲ್ಲಿ ಉಗಮವಾಗಿದೆ ಎಂದು ಹೇಳಬಹುದು. ಇದಕ್ಕೆ ಒಂದು ಉದಾಹರಣೆಯನ್ನು ನೋಡುವುದಾದರೆ,

ಉಗುರು ಸುತ್ತು ಅಥವಾ ಉಗುರು ಹುಣ್ಣು ಎಂಬುದು ಕೈಬೆರಳುಗಳ ಉಗುರಿನ ಸಮೀಪ ಏಳುವಂತಹುದು. ಈ ಸಮಸ್ಯೆಗೆ ವಿವಿಧ ವೈದ್ಯರ ಔಷಧೋಪಚಾರಗಳು ಹೀಗಿವೆ.

* ಮುಳ್ಳುಪಾಪಡೆ ಕಾಯಿಯನ್ನು ಕೆಂಡದಲ್ಲಿ ಬಿಸಿ ಮಾಡಿ ನಂತರ ಕಾಯಿಯ ಸ್ವಲ್ಪಭಾಗದಲ್ಲಿ ರಂಧ್ರಮಾಡಿ ಗಾಯದ ಬೆರಳನ್ನು ಅದರೊಳಗಿಟ್ಟು ಬಟ್ಟೆಸುತ್ತುವುದು.(1)
* ಕುಲ್ಬಿಗನ ಸೊಪ್ಪನ್ನು ಬೆಣ್ಣೆಯಲ್ಲಿ ಬೇಯಿಸಿ ಬಿಸಿಯಾದದ್ದನ್ನು ಹುಣ್ಣಿಗೆ ಕಟ್ಟಬೇಕು. (74)
* ಅಡ್ಡಿಕೆ ಸೊಪ್ಪನ್ನು ಕುಟ್ಟಿ ಅದಕ್ಕೆ ಸ್ವಲ್ಪ ಅರಿಶಿಣ ಸೇರಿಸಿ ಗಾಯಕ್ಕೆ ಕಟ್ಟುವುದು (70)
* ನಿಂಬೆ ಹಣ್ಣು ಕೊಯ್ದು ಬೆರಳಿಗೆ ತೂರಿಸುವುದು (103)
* ಕಕ್ರೆಕಾಯಿ ತೊಪ್ಪಲು, ಚಕ್ಕಡಿಕಾಯಿ ತೊಪ್ಪಲು, ಮೆಣಸು ಬೆಳ್ಳುಳ್ಳಿ, ಹಿಪ್ಲಿ, ಮೋಡಿ ಸೇರಿಸಿ ಸಣ್ಣಗೆ ಅರೆದು ಬೆರಳಿಗೆ ಕಟ್ಟುವುದು (99)
* ನಂಜುನಾರಾಯಣ ಸೊಪ್ಪನ್ನು ಅರೆದು ಸ್ವಲ್ಪಗಟ್ಟಿ ಮೊಸರನ್ನು ಸೇರಿಸಿ ಗಾಯಕ್ಕೆ ಕಟ್ಟುವುದು(8)
* ಬುಡ್ಡುಕಡ್ಲೆ ಸೊಪ್ಪನ್ನು ಸಕ್ಕರೆಯಲ್ಲಿ ಅರೆದು ಹಚ್ಚುವುದು (2)
* ಬೇವಿನ ಎಲೆಗೆ ಜೇನು ತುಪ್ಪ ಹಚ್ಚಿ ನಂತರ ಹುರಿದು ಭಸ್ಮ ಮಾಡಿ ಆ ಭಸ್ಮವನ್ನು ಹಚ್ಚುವುದು (129)
* ಅರಳೆಕಾಯಿ ಚೂರ್ಣವನ್ನು ಜೇನು ತುಪ್ಪದಲ್ಲಿ ಹಚ್ಚುವುದು (187)
* ಮೆಹಂದಿ ಸೊಪ್ಪನ್ನು ಉಪ್ಪಿನ ಹರಳಿನೊಂದಿಗೆ ಅರೆದು ಕಟ್ಟುವುದು (168)
* ಕರೆಮೂತಿ ಎಲೆ ಮತ್ತು ಬೆಣ್ಣೆಯನ್ನು ಅರೆದು ಹಚ್ಚುವುದು (143)
* ಆಕಳದ ಬೆಣ್ಣೆ, ಅಂಟ್ರಿಕೆ ಸೊಪ್ಪು, ಸುಣ್ಣ ಈ ಮೂರನ್ನು ಅರೆದು ಮೂರು ದಿವಸ ಹಚ್ಚಬೇಕು(30)

ಮೇಲಿನ ಔಷಧಿಯ ವಿವರಣೆಗಳು ಒಂದೇ ಸಮಸ್ಯೆಗೆ ಜಿಲ್ಲೆಯ ವಿವಿಧ ಭಾಗಗಳ ಹನ್ನೆರಡು ಜನ ವೈದ್ಯರು ಮಾಡುವ ವೈದ್ಯೋಪಚಾರದ ವಿವರಣೆಗಳಾಗಿವೆ. ಇಲ್ಲಿ ಒಟ್ಟು ಹದಿಮೂರು ಗಿಡ

ಮೂಲಿಕೆಗಳು ಬಳಕೆಯಾಗಿವೆ. ಇವುಗಳ ಜೊತೆಗೆ ಸೇರಿಸುವ ಇತರ ವಸ್ತುಗಳೂ ಬೇರೆ ಬೇರೆಯಾಗಿವೆ. ಒಂದು ಜಿಲ್ಲೆಯಲ್ಲಿ ಒಂದು ಸಮಸ್ಯೆಯ ಪರಿಹಾರಕ್ಕೆ ಈ ಬಗೆಯ ವೈವಿಧ್ಯತೆ ಇರುವಾಗ, ರಾಜ್ಯ ಮತ್ತು ದೇಶಗಳಲ್ಲಿ ಎಂಥ ವಿಭಿನ್ನತೆ ಇದ್ದಿರಬಹುದು. ಈ ಕಾರಣದಿಂದಾಗಿ ಜನಪದ ವೈದ್ಯ ಅನೇಕ ಸ್ಥಳಗಳಲ್ಲಿ ಅಸಂಖ್ಯೆ ವ್ಯಕ್ತಿಗಳಲ್ಲಿ ವಿವಿಧ ರೂಪಗಳಲ್ಲಿ ಹುಟ್ಟಿರವಂತಹುದು.

ಆವಶ್ಯಕತೆಯೇ ಸಂಶೋಧನೆಗೆ ಮೂಲವಾಗಿರುತ್ತದೆ. ಅಂದರೆ, ಜನಪದ ವೈದ್ಯದ ಉಗಮವನ್ನು ಮನುಷ್ಯನ ಸಂಶೋಧನೆಯ ಪ್ರವೃತ್ತಿಯ ಹಿನ್ನೆಲೆಯಲ್ಲಿ ನೋಡಬೇಕಾಗಿದೆ. ಉದಾಹರಣೆಗೆ, ಹಾವು-ಮುಂಗಸಿಗಳ ಕಚ್ಚಾಟದ ನಂತರ ಮುಂಗಸಿಯು ಜಯಶಾಲಿಯಾಗಿ ನಂಜುನಿವಾರಣೆಗೆ ಗಂಡುಕಾರೆಯ ಬೇರನ್ನೋ, ಆಡುಮುಟ್ಟದ ಬೇರನ್ನೋ ಅಥವಾ ಈಶ್ವರಿಯ ಬೇರನ್ನೋ ಜಗಿದು ತಿನ್ನುತ್ತದೆ. ಇಲ್ಲಿ ಮುಂಗಸಿಯ ಚಟುವಟಿಕೆಯನ್ನು ಗಮನಿಸಿದ ಮನುಷ್ಯ ಹಾವಿನ ವಿಷಕ್ಕೆ ಪರಿಹಾರವೊಂದನ್ನು ತಿಳಿದುಕೊಂಡನು. ಆದರೆ ಈ ಮೊದಲೇ ಹಾವಿನ ವಿಷದಿಂದ ಅನೇಕ ಜನರು ಮಡಿದಿರುತ್ತಾರೆ. ಆ ಸಂದರ್ಭಗಳಲ್ಲಿ ಅವರನ್ನು ಬದುಕಿಸುವ ಪ್ರಯತ್ನಗಳೂ ನಡೆದಿರುತ್ತವೆ. ಆದರೂ ಪ್ರತಿಫಲ ದೊರೆಯದೇ ಹೋಗಿರಬಹುದು. ಇಂಥ ಸಂದರ್ಭದಲ್ಲಿ ಮುಂಗಸಿಯ ಘಟನೆ ಆತನಿಗೆ ವರದಾನವಾಗುತ್ತದೆ. ಅಂದರೆ, ಒಂದು ಸಮಸ್ಯೆಗೆ ಒಂದು ಔಷಧಿಯನ್ನು ಕಂಡುಕೊಳ್ಳುವುದರ ಹಿಂದೆ ಹಲವರ ಚಿಂತನಾ ಶ್ರಮ ಅಡಗಿರುತ್ತದೆ. ಹೀಗೆ ಇತರ ಕಾಯಿಲೆಗಳಿಂದ ಪ್ರಾಚೀನರು ನರಳಿದ್ದಾರೆ. ಆ ನಂತರವೇ ಅವರ ಶೋಧನಾ ಕಾರ್ಯ ಮುಂದುವರಿದಿರುತ್ತದೆ. ಆದ್ದರಿಂದ ಪ್ರಾಚೀನರ ಆವಿಷ್ಕಾರಗಳು ಆಕಸ್ಮಿಕಗಳೆಂದು ನಾವು ಭಾವಿಸುವಂತಿಲ್ಲ.

ಹಣ್ಣು ಕಾಯಿಗಳನ್ನೋ, ಚಿಗುರು-ಬೇರುಗಳನ್ನೋ, ಗಡ್ಡೆಗಳನ್ನೋ ಹಿಂದೆ ಹಸಿವಿಗಾಗಿ ತಿಂದಿರಬಹುದು. ಉದಾ: ಅಶ್ವಗಂಧಿ, ಶತಾವರಿ, ನೆಲತೆಂಗು, ಕಾಡುಗಂಜಿರಿ, ಸುವರ್ಣಗೆಡ್ಡೆ ಮುಂತಾದವುಗಳನ್ನು ಸೇವಿಸಿದಾಗ: ಹೊಟ್ಟೆಹೊಳಗಿನ ಕರುಳುಬೇನೆ, ಹುಣ್ಣು, ಹೊಟ್ಟೆ ನೋವು, ಉಬ್ಬರ, ಅಜೀರ್ಣ ಈ ಮೊದಲಾದ ತೀವ್ರತರ ಕಾಯಿಲೆಗಳು ಹೊರಟುಹೋಗಿರಬಹುದು. ಏಕೆಂದರೆ, ಇಂಥ ಸಮಸ್ಯೆಗಳನ್ನು ನಿವಾರಿಸುವ ಗುಣಗಳು ಆ ಮೂಲಿಕೆಗಳಲ್ಲಿದೆ. ಹೀಗೆ ಹಣ್ಣು ಕಾಯಿ, ಚಿಗುರುಗಳನ್ನು ಅನಿವಾರ್ಯವಾಗಿ ಆಹಾರಕ್ಕಾಗಿ ಸೇವಿಸತ್ತಿದ್ದರು. ಆಗ ಅವುಗಳ ಗುಣಾವಗುಣಗಳ ವಿವೇಚನೆ ನಡೆದಿರುತ್ತದೆ.

ಜನಪದ ವೈದ್ಯದ ವಿಕಾಸದಲ್ಲಿ ಸಾಧು–ಸಂತರ ಪಾತ್ರವೂ ಇದೆ. ಹಿಂದೆ ಪ್ರಸ್ತಾಪಿಸಿದಂತೆ ಅವರು ಪ್ರಕೃತಿಯನ್ನು ಅರಿತವರಾಗಿದ್ದು, ಯಾವ ಗಿಡಮೂಲಿಕೆ ಯಾವ ಉದ್ದೇಶಕ್ಕೆ ಬಳಸಬಹುದು ಎಂಬುದನ್ನು ತಾವೂ ತಿಳಿದಿದ್ದರು ಮತ್ತು ಇತರರಿಗೂ ಅದನ್ನು ಪರಿಚಯಿಸಿದ್ದರು. ಚಿತ್ರದುರ್ಗದ ಗುಹೆಗಳಲ್ಲಿ ವಾಸಿಸುತ್ತಿದ್ದ ಸಿದ್ಧರು ಯಾರಿಗಾದರೂ ದರ್ಶನ ಕೊಟ್ಟಾಗ ಸಿದ್ಧಮೂಲಿಕೆಗಳನ್ನು ಪ್ರಸಾದಂತೆ ಕೊಡುತ್ತಿದ್ದರಂತೆ, ತಿಮ್ಮಣ್ಣನಾಯಕನು ಚಿತ್ರದುರ್ಗದ ನಾಯಕನಾಗುವ ಸಂದರ್ಭದಲ್ಲಿ ಆತನಿಗೆ ಇಂಥ ಸಿದ್ಧರ ದರ್ಶನವಾಗುತ್ತದೆ. ದರ್ಶನದ ವೇಳೆಯಲ್ಲಿ ಸಿದ್ಧರು "ಬಾರೈ ಮಗನೆ, ಮುಂದೆ ನಿನಗೆ ಈ ಸ್ಥಳದಲ್ಲಿ ಮಹಾ ಪದವಿ ಬರುವುದು. ಅರಿತು ನಡೆದರೆ ಆರು ಪಟ್ಟ, ಮರೆತು ನಡೆದರೆ ಮೂರು ಪಟ್ಟ" 'ಎಂದು ಹೇಳಿ ತಿಮ್ಮಣ್ಣ ನಾಯಕನಿಗೆ ದೆಸೆಗಟ್ಟಿನ ದೂಳಿತ, ಸಿದ್ಧಮೂಲಿಕೆ, ಕೈಅಂಬು ಇವುಗಳನ್ನು ಕೊಟ್ಟು ಹೊರಟು ಹೋದರು.'[7] ಇಲ್ಲಿ ಸಿದ್ಧರು ನಾಯಕನಿಗೆ ಹಿತವಚನವನ್ನು ಹೇಳಿ ಆರೋಗ್ಯವನ್ನು ರಕ್ಷಿಸುವ ಹತಾರಗಳನ್ನು ಕೊಡುತ್ತಾರೆ.

ಅಂದರೆ, ಹಿತವಚನಗಳು ಮನಸ್ಸಿನ ಆರೋಗ್ಯವನ್ನು ರಕ್ಷಿಸಿದರೆ, ಸಿದ್ಧಮೂಲಿಕೆಗಳು ದೈಹಿಕ ಆರೋಗ್ಯವನ್ನು ರಕ್ಷಿಸುತ್ತವೆ. ಬಹುಶಃ ಈ ಉದ್ದೇಶದಿಂದಾಗಿ ಜನಪದ ವೈದ್ಯರು ಜ್ವರ, ಚಳಿ, ತಲೆನೋವು, ಭ್ರಮೆ, ಉನ್ಮಾದ ಮುಂತಾದ ಕಾಯಿಲೆಗಳಿಗೆ ಎಲೆ, ಹೂವು, ಹಣ್ಣು ಮತ್ತು ಬೇರುಗಳನ್ನು ಹಾಗೆಯೇ ಸೇವಿಸಲು ಕೊಡುತ್ತಿರಲಿಲ್ಲ, ಮೇಲೆ ಎರಡು ಹಿತವಚನಗಳನ್ನು ಹೇಳುತ್ತಿದ್ದರು, ಹೀಗೆ ಮಾಡುವುದರಿಂದ ದೈಹಿಕ, ಮಾನಸಿಕಗಳೆರಡಕ್ಕೂ ಚಿಕಿತ್ಸೆ ದೊರೆಯುತ್ತಿತ್ತು. ಇಂಥ ಚಿಕಿತ್ಸಾ ಪರಂಪರೆ ಚಿತ್ರದುರ್ಗದ ಸಿದ್ಧರು, ಹಿಮಾಲಯದ ಸಂತರು ಮತ್ತು ಬುಡಕಟ್ಟಿನ ಜನರು, ಈ ಮೊದಲಾದವರಿಂದ ಬೆಳೆದು ಬಂದಿರುಬಹುದು.

ಭಾರತೀಯ ಪರಂಪರೆಯಲ್ಲಿ ಈ ರೀತಿಯ ತಪಸ್ವಿಗಳು ನಾಡಿಗೆ ಸದಾ ಕ್ಷೇಮವನ್ನೇ ಬಯಸುವವರಾಗಿರುತ್ತಾರೆ. ಇವರ ಸಿದ್ಧಮೂಲಿಕೆಯ ಜ್ಞಾನ ಅಪಾರವಾದುದು. ಇಂಥವರು ಹಾಕಿದ ತಳಪಾಯದಿಂದಾಗಿ ಜನಪದ ವೈದ್ಯ ಅಮೂಲ್ಯವಾದ ಸಿದ್ಧಮೂಲಿಕೆಗಳನ್ನು ಹೊಂದಿದೆ. ಹೀಗೆ ಸಾಧು–ಸಂತರ ಹಾಗೆ ಮೂಲಿಕಾ ಜ್ಞಾನವನ್ನು ಮತ್ತು ಅವರ ಗುಣಗಳನ್ನು ಹೊಂದಿರುವ ವ್ಯಕ್ತಿಗಳು ಈಗಲೂ ಕಾಣಸಿಗುತ್ತಾರೆ. ಇಂಥ ಅಪರೂಪದ ವ್ಯಕ್ತಿಗಳನ್ನು ಸಂದರ್ಶನ ಮಾಡುವ ಸುಯೋಗವೂ ಒದಗಿಬಂದಿತ್ತು.[8] ಹೀಗೆ ವಿವಿಧ ವ್ಯಕ್ತಿಗಳ ಜ್ಞಾನ ಮತ್ತು ಅನುಭವಗಳ ಸಾರವೇ ಜನಪದ ವೈದ್ಯ ಎಂದು ಹೇಳಬಹುದು.

ಅ) ಜನಪದ ವೈದ್ಯ ಎಂದರೇನು?

ಜನಪದ ವೈದ್ಯ ಎಂಬುದು ಮೌಖಿಕ ರೂಪದ ವಿಶೇಷವಾದ ಜ್ಞಾನ. ಹಿಂದೆ ಪ್ರಸ್ತಾಪಿಸಿದಂತೆ ಇದನ್ನು ಹಳ್ಳಿವೈದ್ಯ, ಮನೆವೈದ್ಯ, ಕಾಡೌಷಧಿ, ಈ ಮುಂತಾಗಿ ಕರೆಯಲಾಗುತ್ತದೆ. ಜನಪದ ಎಂದರೆ ದೇಶ,ನಾಡು, ಜನಾಂಗ ಎಂಬರ್ಥಗಳಿವೆ, ವೈದ್ಯ ಎಂಬುದು ರೋಗಕ್ಕೆ ಚಿಕಿತ್ಸೆ ಮಾಡುವುದನ್ನು ಹೇಳುತ್ತದೆ. ಆದ್ದರಿಂದ ಈ ನಾಡು ಮತ್ತು ಅಲ್ಲಿಯ ಜನಾಂಗಕ್ಕೆ ಸಂಬಂಧಿಸಿದ ವೈದ್ಯಜ್ಞಾನ ಅಥವಾ ವೈದ್ಯೋಪಚಾರ ಎಂಬ ಅರ್ಥವನ್ನು ಜನಪದ ವೈದ್ಯ ಎನ್ನುವ ಕೂಡುಪದ ಪ್ರತಿನಿಧಿಸುತ್ತದೆ.

ಜನಪದ ವೈದ್ಯವನ್ನು ಕುರಿತು ವಿದ್ವಾಂಸರ ಅಭಿಪ್ರಾಯಗಳು: "ಜನಪದ ವೈದ್ಯ ಬಹಳ ಮಟ್ಟಿಗೆ ನೈಸರ್ಗಿಕವಾದುದು; ನಿಸರ್ಗ ಮಾನವನ ಜೀವಿತದ ಮೂಲಾಧಾರ; ಮಾನವ ಮೂಲತಃ ತನ್ನ ಕಾಯಿಲೆಗಳಿಗೆ ಪರಿಹಾರವನ್ನು ಸಸ್ಯ ಪ್ರಾಣಿ ಖನಿಜ ಮುಂತಾದ ನೈಸರ್ಗಿಕ ವಸ್ತುಗಳಲ್ಲಿ ಕಂಡುಕೊಳ್ಳಲು ಪ್ರಯತ್ನಿಸಿದ."[9]

"ಜನಪದ ವೈದ್ಯವು ಮಾನವನ ಬದುಕಿನೊಂದಿಗೆ ನೇರ ಸಂಬಂಧಪಟ್ಟದ್ದು. ಅನೂಚಾನವಾಗಿ ಬಂದ ಸಂಸ್ಕೃತಿಯ ಹಿನ್ನೆಲೆಯಲ್ಲಿ ಬೆಳೆದು ಬಂದದ್ದು. ಒಟ್ಟಿನಲ್ಲಿ ಜನಪದರ ಕಾಯಿಲೆಗಳು ಮತ್ತು ಅವುಗಳನ್ನು ಗುಣಪಡಿಸುವ ವಿಧಾನಗಳನ್ನು ಕುರಿತ ಪರಂಪರಾಗತ ದೃಷ್ಟಿಕೋನಗಳ ಸಾರಸರ್ವಸ್ವವನ್ನೇ ಜನಪದ ವೈದ್ಯ ಎಂದು ಕರೆಯಬಹುದು."[10] ಮೇಲಿನ ವಿದ್ವಾಂಸರು ಜನಪದ ವೈದ್ಯವನ್ನು ಸ್ಥಳೀಯವಾದುದು ಮತ್ತು ಮನುಷ್ಯನ ಜೀವನದೊಂದಿಗೆ ಬೆಳೆದುಕೊಂಡು ಬಂದಿರುವಂತಹುದು ಎಂದಿದ್ದಾರೆ. ಅಂದರೆ, ಮನುಷ್ಯ ತನ್ನ ಸುತ್ತಲಿನ ನಿಸರ್ಗದಲ್ಲಿ ಔಷಧೀಯ ಪರಿಕರಗಳನ್ನು ಶೋಧಿಸುತ್ತಲೇ ಬಂದಿದ್ದಾನೆ ಅದರಿಂದ ರೋಗ ನಿರೋಧಕ ತಂತ್ರೋಪಾಯಗಳನ್ನು ಕಂಡುಕೊಂಡಿದ್ದಾನೆ. ಈ ಪ್ರಯತ್ನದ ಫಲವೇ ಜನಪದ ವೈದ್ಯ ಎಂದು ಹೇಳಬಹುದು.

ಅನುಭವ ವೈದ್ಯ : ಜನಪದ ವೈದ್ಯ ಎನ್ನುವುದು ಅನುಭವ ವಿದ್ಯೆ, ಅದು ಅನುಭವಿಗಳ ಜ್ಞಾನ ಭಂಡಾರ. ಈ ಬಗೆಯ ವೈದ್ಯ ಅನಕ್ಷರಸ್ಥ ಸಮುದಾಯಗಳಿಂದ ಹುಟ್ಟಿರುವಂತಹುದು. ಇದನ್ನು ಗುರುವಿನ ಮೂಲಕ ಮೌಖಿಕ ರೂಪದಲ್ಲಿ ಕಲಿಯಲಾಗುತ್ತದೆ. ಹಿರಿಯರು ಮತ್ತು ಅನುಭವಿಗಳು

ಮಾಡುವುದನ್ನು ನೋಡುವುದರಿಂದ ಹಾಗೂ ಅವರೊಂದಿಗೆ ಹಂತ ಹಂತವಾಗಿ ವೈದ್ಯೋಪಚಾರದಲ್ಲಿ ಪಾಲ್ಗೋಳ್ಳುವುದರ ಮೂಲಕ ಇದನ್ನು ಕಲಿಯುತ್ತಾರೆ. ಹೀಗೆ ಒಬ್ಬರಿಂದ ಮತ್ತೊಬ್ಬರಿಗೆ ಇದು ವರ್ಗಾವಣೆಯಾಗುತ್ತದೆ. ಇಂಥ ಸಂದರ್ಭದಲ್ಲಿ ವೈದ್ಯಜ್ಞಾನವು ಅನೇಕ ಬದಲಾವಣೆಗಳಿಗೆ ಒಳಗಾಗುತ್ತದೆ. ಅಂದರೆ, ಹೊಸ ಪ್ರಯೋಗಗಳಿಗೂ ಅಲ್ಲಿ ಅವಕಾಶವಿರುತ್ತದೆ.

ಪ್ರತಿಯೊಬ್ಬ ಕ್ರಿಯಾಶೀಲ ವೈದ್ಯನೂ ನಿರಂತರ ತನ್ನನ್ನು ಅನ್ವೇಷಣೆಯಲ್ಲಿ ತೊಡಗಿಸಿಕೊಂಡಿರುತ್ತಾನೆ. ಇದರಿಂದ ತನ್ನ ವೈದ್ಯೋಪಚಾರದಲ್ಲಿ ಹೆಚ್ಚಿನ ಅನುಭವವನ್ನು, ವಿಶ್ವಾಸವನ್ನು ಮತ್ತು ಖಚಿತತೆಯನ್ನು ಕಂಡುಕೊಳ್ಳುತ್ತಾನೆ. ಇಂಥ ಅನ್ವೇಷಣೆ ಮತ್ತು ಅನುಭವಗಳ ಒಟ್ಟು ಮೊತ್ತವೇ ಜನಪದ ವೈದ್ಯ. ರಂಜಾನ್ ದರ್ಗಾರು "ನಾಟಿ ವೈದ್ಯರಿಗೆ ಇತರ ವೈದ್ಯರ ಹಾಗೆ ಪುಸ್ತಗಳ ಆಧಾರ ಇರುವುದಿಲ್ಲ, ಹಿರಿಯರಿಂದ ಕಲಿತ ಅನುಭವಕ್ಕೆ ತಮ್ಮ ಅನುಭವವನ್ನು ಸೇರಿಸುತ್ತಾರೆ. ನಾಟಿ ವೈದ್ಯ ಪದ್ಧತಿಯನ್ನು ಹೀಗೆ ಬೆಳೆಸುತ್ತಾರೆ."[11] ಎಂದು ಅಭಿಪ್ರಾಯ ಪಡುತ್ತಾರೆ. ಅಂದರೆ, ಅನುಭವದಿಂದ ಪಡೆಯುವ ಜ್ಞಾನ ಸತ್ವಯುತವಾದದ್ದು, ಏಕೆಂದರೆ ಅನುಭವಿಸಿದ ನಂತರವಷ್ಟೇ ಅದು ಹೊರಬರುತ್ತದೆಯಲ್ಲವೇ?

ಸ್ಥಳೀಯ ಜ್ಞಾನ : ಜನಪದ ವೈದ್ಯ ಪರಿಸರ ಸಂಬಂಧಿಯಾದ ಸ್ಥಳೀಯ ಜ್ಞಾನವಾಗಿದೆ. ಅಂದರೆ, ಒಂದು ಪ್ರದೇಶದಲ್ಲಿ ಕಂಡುಬರುವ ರೋಗರುಜಿನೆಗಳಿಗೆ ಪರಿಹಾರೋಪಾಯಗಳನ್ನು ಆ ಭೂಪ್ರದೇಶದಲ್ಲಿ ಲಭ್ಯವಿರುವ ಸಂಪನ್ಮೂಲಗಳಿಂದ ಮಾಡಿಕೊಳ್ಳುವಂತಹುದಾಗಿದೆ. ಸ್ಥಳೀಯ ಗಿಡಮರಗಳು, ಬಳ್ಳಿಪೊದೆಗಳು ವೈದ್ಯೋಪಚಾರಕ್ಕೆ ಮುಖ್ಯವಾಗಿ ಬಳಕೆಯಾಗುತ್ತವೆ. ಜಾನುವಾರುಗಳ ಗಂಜಳ, ಮನುಷ್ಯನ ಎಂಜಲು, ಮೂತ್ರ, ಕಲ್ಲು, ಮಣ್ಣು, ಒಣಕಟ್ಟಿಗೆ, ಪ್ರಾಣಿ ಪಕ್ಷಿಜನ್ಯ ವಸ್ತುಗಳು ಮತ್ತು ಖನಿಜ ಮೂಲ ವಸ್ತುಗಳು ಈ ವೈದ್ಯಕ್ಕೆ ಬಳಸಲ್ಪಡುವ ಔಷಧೀಯ ಪರಿಕರಗಳಾಗಿವೆ.

ಜನಪದ ವೈದ್ಯೋಪಚಾರ ಯಾವುದೇ ನಿರ್ದಿಷ್ಟ ವ್ಯಕ್ತಿ, ಗುಂಪು, ವರ್ಗಕ್ಕೆ ಸೀಮಿತವಾದುದಲ್ಲ, ಯಾಕೆಂದರೆ, ನಿಸರ್ಗ ಜ್ಞಾನವಾದ ಅದಕ್ಕೆ ಯಾವುದೇ ನಿಯಮ-ನಿಬಂಧನೆಗಳು ಇರಲಿಲ್ಲ. ಆದ್ದರಿಂದ ಸ್ಥಳೀಯರು ಬಹುತೇಕ ಆ ಜ್ಞಾನವನ್ನು ಹೊಂದಿರುತ್ತಿದ್ದರು. ಅಂದರೆ, ಪ್ರತಿಮನೆಯಲ್ಲೂ ಒಂದಲ್ಲಾ ಇನ್ನೊಂದು ತೆರನ ವೈದ್ಯದ ಅನುಭವವುಳ್ಳ ಹಿರಿಯರು ಇರುತ್ತಿದ್ದರು. ಅವರು ತಮಗೆ ಬೇಕಾದ

ಔಷಧೋಪಚಾರವನ್ನು ತಾವೇ ಮಾಡಿಕೊಳ್ಳುತ್ತಿದ್ದರು. ಜೊತೆಗೆ ಮನೆಮಂದಿಗೆಲ್ಲ ಅದರ ಪರಿಚಯವನ್ನು ಮಾಡಿಕೊಡುತ್ತಿದ್ದರು. ಇದರಿಂದ ಅದು **ಮನೆಯ ಔಷಧವೂ** ಆಗಿತ್ತು.

ಹೀಗೆ ಮನೆ ಮಂದಿಯೆಲ್ಲ ಸುಲಭವಾಗಿ ಮಾಡಿಕೊಳ್ಳಲು ಸಾಧ್ಯವಿರುವ ಮತ್ತು ಖರ್ಚಿನ ಹೊರೆ ಇಲ್ಲದಿರುವುದರಿಂದಲೋ ಏನೋ ಅದಕ್ಕೆ **ಸುಲಭ ಚಿಕಿತ್ಸೆ** ಎಂಬ ಹೆಸರೂ ಬಂದಿದೆ. ಅಂದಿನವರು ತಮಗೆ ಅಗತ್ಯವಿದ್ದ ಮೂಲಭೂತ ಸೌಕರ್ಯಗಳನ್ನು ತಾವೇ ಒದಗಿಸಿಕೊಳ್ಳುತ್ತಿದ್ದರು. ಅಂದರೆ, ಅವರಿಗೆ ಆವಶ್ಯಕವಾದ ವೈದ್ಯೋಪಚಾರವನ್ನು ಅವರೇ ಮಾಡಿಕೊಳ್ಳುತ್ತಿದ್ದರು. ಇದರಿಂದ ಅವರು ಹೆಚ್ಚು ಸ್ವಾವಲಂಬಿಗಳಾಗಿದ್ದರೆಂದು ತಿಳಿಯಬಹುದಾಗಿದೆ.

ಮರ್ಮ ವಿಚಾರವಿದು : ಮಾಹಿತಿಯನ್ನು ದಾಖಲಿಸಲು ಹೋದಾಗ ಅನೇಕ ವೈದ್ಯರು 'ಅಯ್ಯೋ ಮರ್ಮ ವಿಚಾರವಿದು ಹಾಗೆಲ್ಲ ಹೇಳೋಕೆ ಬರೋದಿಲ್ಲ!' ಎಂದು ಕೈ ಹಿಚುಕಿಕೊಳ್ಳುತ್ತಿದ್ದರು. ಹಿಂದಿನಿಂದಲೂ ಗೋಪ್ಯತೆಯಿಂದ ವೈದ್ಯಮಾಡಬೇಕೆಂಬ ನಂಬಿಕೆ ಜನಪದ ವೈದ್ಯರಲ್ಲಿ ಬಲವಾಗಿ ಬೇರೂರಿದೆ. 'ವೈದ್ಯಗುಟ್ಟು ವ್ಯಾಧಿ ರಟ್ಟು' ಎಂಬ ಗಾದೆಯಂತೆ ವೈದ್ಯ ಮಾಹಿತಿಯನ್ನು ಬಹಿರಂಗ ಪಡಿಸುವುದರಿಂದ ವೈದ್ಯೋಪಚಾರ ಫಲಕಾರಿಯಾಗುವುದಿಲ್ಲ ಎಂದು ವೈದ್ಯರು ನಂಬಿದ್ದಾರೆ. ಅಲ್ಲದೇ ಔಷಧಿಗೆ ಬಳಸುವ ಗಿಡಗಳನ್ನು ಇತರರಿಗೆ ತೋರಿಸುವುದಿಲ್ಲ ಮತ್ತು ಅವುಗಳ ಹೆಸರುಗಳನ್ನು ಸಹ ಹೇಳಲು ಹಿಂಜರಿಯುತ್ತಾರೆ. ಗಂಡಮಾಲೆ ಹುಣ್ಣಿಗೆ ಬಳಸುವ ಸಸ್ಯದ ಹೆಸರನ್ನು ಹೇಳಲು ಸತಾಯಿಸಿ ಕೊನೆಗೆ 'ಬೇಲೆ ಮೇಲೆ ಇರುತ್ತಲ್ಲ! ಬಳ್ಳಿ ಅದು' ಎಂದರು "ಸಾಕಷ್ಟು ಬಳ್ಳಿ ಇರುತ್ತವೆ ಅದರ ಹೆಸರು ಹೇಳಿ" ಎಂದಾಗ 'ಅದೇ ರೀ ಮಕ್ಕಳು ಸ್ಲೇಟಿಗೆ ಹಚ್ಚುತರಲ್ಲ...' "ಓ ತೊಂಡೆ ಬಳ್ಳಿನಾ" ಎಂದಾಗ 'ಅಯ್ಯೋ ಹೆಸ್ರು ಹೇಳೇ ಬಿಟ್ರಲ್ಲರೀ' ಎಂದ ವೈದ್ಯರು (109) ಹೆಸರು ಹೇಳುವುದು ಅಶುಭವೆಂದೇ ಭಾವಿಸುತ್ತಾರೆ.

ಈ ಗೋಪ್ಯತೆಯ ಹಿಂದಿರುವ ಕಾರಣಗಳು: ವಿದ್ಯೆ ಇತರರಿಗೆ ತಿಳಿಯಬಾರದೆಂದು, ಜನರ ಎದರು ತಾನೊಬ್ಬನೇ ವೈದ್ಯನೆಂದು ಹೆಸರು ಪಡೆಯಬೇಕೆಂದು, ಅನರ್ಹರಿಂದ ಅಪಾಯಗಳು ಎದುರಾಗಬಹುದೆಂದು, ಔಷಧೀಯ ವಸ್ತುಗಳನ್ನು ಪರಿಚಯಿಸುವುದರಿಂದ ಅವುಗಳ ಕುರಿತು ರೋಗಿಯಲ್ಲಿ ನಿರ್ಲಕ್ಷಭಾವ ಮೂಡಬಹುದೆಂದು, ಈ ಮೊದಲಾದ ಉದ್ದೇಶಗಳಿರಬಹುದು. ಆದರೆ ಈ ರೀತಿಯ

ನಿಗೂಢತೆ ಎಂದಿಗೂ ಶ್ರೇಷ್ಠವಾಗುವುದಿಲ್ಲ. ಒಂದು ವೇಳೆ ಪೂರ್ವದಲ್ಲಿ ಮುಕ್ತತೆ ಇದ್ದಿರಬಹುದು. ಏಕೆಂದರೆ ವೈದ್ಯ ಮಾಹಿತಿಯನ್ನು ಮುಕ್ತವಾಗಿ ಇತರರೊಂದಿಗೆ ಹಂಚಿಕೊಳ್ಳುವ ವೈದ್ಯರು ಈಗಲೂ ಇದ್ದಾರೆ.

ಜನಪದ ವೈದ್ಯದಲ್ಲಿ ಗಿಡಮೂಲಿಕೆಯ ವೈದ್ಯೋಪಚಾರವೇ ಮುಖ್ಯವಾದದ್ದು. ಇದರ ಜೊತೆಗೆ ಯಂತ್ರ-ಮಂತ್ರಗಳ ವಿಚಾರವಿದೆ, ದೇವರು ದೆವ್ವಗಳ ವಿಚಾರವಿದೆ. ಮೂಲಿಕಾ ವೈದ್ಯೋಪಚಾರವನ್ನು ಹೊರತು ಪಡಿಸಿದರೆ, ಯಂತ್ರ-ಮಂತ್ರ-ಮಾಟ, ಧೂಳಿ, ಪತ್ರೆ ಮುಂತಾದವನ್ನು ಒರೆಗೆ ಹಚ್ಚುವುದು ಕಷ್ಟ. ಆದರೆ ಬೂಟಾಟಿಕೆ ವೈದ್ಯರು ಮತ್ತು ಮಂತ್ರವಾದಿಗಳು ದೇವರು ಮತ್ತು ದೆವ್ವಗಳ ಹೆಸರಿನಲ್ಲಿ ಜನರನ್ನು ನಂಬಿಸುವುದರ ಮೂಲಕ ಇದು **ನಂಬಿಕೆಯ ವೈದ್ಯ** ಎಂಬಂತೆ ಜನಪದ ವೈದ್ಯವನ್ನು ಬಿಂಬಿಸಿ ಹಣ ಸುಲಿಗೆ ಮಾಡುತ್ತಾರೆ. ಇಂಥವರ ಕೈಯಲ್ಲಿ ಸಿಲುಕಿರುವ ಈ ವೈದ್ಯವನ್ನು ಅನುಮಾನದಿಂದ ನೋಡಲು ಎಡೆಮಾಡಿಕೊಟ್ಟಿದೆ.

ಹೀಗೆ ಜನಪದ ವೈದ್ಯಕ್ಕೆ ಒಂದು ಕಡೆ ಅನುಮಾನದ ಪೀಡೆ ಬೆನ್ನು ಹತ್ತಿದ್ದರೆ, ಮತ್ತೊಂದು ಕಡೆ ವೈದ್ಯೋಪಚಾರದಲ್ಲಿ ಶಿಸ್ತುಕ್ರಮವನ್ನೇ ಮರೆತವರಿದ್ದಾರೆ. "ಜನಪದ ವೈದ್ಯದಲ್ಲಿ ಪರಿಷ್ಕರಣ ಮತ್ತು ಶುದ್ಧೀಕರಣ ಬಹಳ ಕಡಿಮೆ. ಜನಪದ ಔಷಧಿಗಳಲ್ಲಿ ಒಟ್ಟಾರೆ ಗುಣಗಳಿದ್ದಂತೆ ದೋಷಗಳು ಸಹ ಇವೆ. ಪ್ರಕೃತಿ ದತ್ತ ವಸ್ತುಗಳನ್ನು ಬಹಳ ಮಟ್ಟಿಗೆ ನೇರವಾಗಿ ಉಪಯೋಗಿಸುತ್ತಾರೆ". ಎಂಬ ಅಭಿಪ್ರಾಯ ವೈದ್ಯೋಪಚಾರದ ಪೂರ್ವಾಪರವನ್ನು ಯೋಚಿಸದೇ ಇರುವುದನ್ನು ಹೇಳುತ್ತದೆ. ಇದಕ್ಕೆ ಉದಾಹರಣೆಯೆಂದರೆ, ಪಥ್ಯಾಪಥ್ಯವಿಚಾರವನ್ನು ಕೆಲವು ವೈದ್ಯರು ಸರಿಯಾಗಿ ತಿಳಿದಿರುವುದಿಲ್ಲ, ಔಷಧಿ ಪ್ರಮಾಣದಲ್ಲಿ ನಿರ್ದಿಷ್ಟತೆ ಇರುವುದಿಲ್ಲ, ಔಷಧಿಯ ಪ್ರಯೋಗ ಪರಿಣಾಮವೇನು ಎನ್ನುವುದನ್ನು ಯೋಚಿಸುವುದಿಲ್ಲ, ಇತ್ಯಾದಿ.

ಜನಪದ ವೈದ್ಯದಲ್ಲಿ ಪಥ್ಯಾಪಥ್ಯದ ವಿಚಾರ ಬಹಳ ಮುಖ್ಯವಾಗುತ್ತದೆ. ಸಕಾಲದಲ್ಲಿ ಕಾಯಿಲೆ ಗುಣವಾಗಬೇಕಾದರೆ ಇದು ಬಹಳ ಅಗತ್ಯವೆಂಬುದನ್ನು ಜನಪದರು ತಿಳಿದಿದ್ದಾರೆ. 'ಈಗಿನವರು ಸರಿಯಾಗಿ ಪಥ್ಯವನ್ನು ಇರುವುದಿಲ್ಲ, ಇದಕ್ಕಾಗಿ ವೈದ್ಯ ಮಾಡಲು ಮನಸ್ಸು ಬರುವುದಿಲ್ಲ' (181) ಎನ್ನುವಲ್ಲಿ ಜನಪದರು ಆಹಾರ ಮತ್ತು ಆರೋಗ್ಯದ ನಡುವಿನ ನಂಟನ್ನು ಬಹುಮುಖ್ಯವಾಗಿ ಪರಿಗಣಿಸುವುದನ್ನು ಕಾಣಬಹುದು.

ಆ) ಜನಪದ ವೈದ್ಯರು ಯಾರು ?

ಜನಪದ ವೈದ್ಯನು ಮಿತ್ರ-ಶತ್ರಗಳೆಂಬ ಭೇದವನ್ನು ತೋರದೆ ಜನರ ಅನಾರೋಗ್ಯವನ್ನು ನಿವಾರಿಸುವವನು. ಇಂಥವವನ್ನು ಹಳ್ಳಿಗಳಲ್ಲಿ ಗಿಡಕೊಡುವವನು, ಕಾಡುಗಿಡಹೊಯ್ಯುವವನು, ಓದ್ಯಕಾರ, ಪಂಡಿತ, ನಾಟಿವೈದ್ಯ, ಹಳ್ಳಿವೈದ್ಯ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಪೂರ್ವಿಕರಿಂದ ಬಂದಿರುವ ಸಾಂಪ್ರದಾಯಿಕ ವೈದ್ಯಜ್ಞಾನವನ್ನು ಕಲಿತು ಅದರಲ್ಲಿ ತೊಡಗಿಕೊಂಡವನು; ವೈದ್ಯೋಪಚಾರವನ್ನಷ್ಟೇ ಮಾಡುವುದಿಲ್ಲ ಕುಟುಂಬದ ಇತರ ಸದಸ್ಯರಂತೆ ಮನೆ ಮತ್ತು ಊರಿನ ಜವಾಬ್ದಾರಿಗಳನ್ನು ವಹಿಸಿಕೊಂಡಿರುತ್ತಾನೆ. ಹಾಗೂ ಕೃಷಿಕನಾಗಿ ಇಲ್ಲವೇ ಕೂಲಿಕಾರನಾಗಿ ಜೀವನಕ್ಕೊಂದು ಕಸುಬನ್ನೂ ಮಾಡುತ್ತಾನೆ. ಹಾಗೆಯೇ ಒಬ್ಬ ಮನುಷ್ಯ, ಪಶು ಮತ್ತು ಬೆಳೆ ವೈದ್ಯವನ್ನೂ ತಿಳಿದಿರುವ ಉದಾಹರಣೆಗಳಿವೆ. ಪ್ರತಿ-ಫಲಾಪೇಕ್ಷೆ ಇಲ್ಲದೇ ವೈದ್ಯ ಸೇವೆಯಲ್ಲಿ ತೊಡಗುವವನು ಮತ್ತು ಅದರಲ್ಲಿ ದೈವತ್ವವನ್ನು ಕಾಣುವವನು. ಅವಿದ್ಯಾವಂತನಾಗಿದ್ದರೂ ಅಹಂಕಾರವನ್ನು ತ್ಯಜಿಸಿದವನು. ವೈದ್ಯಜ್ಞಾನವನ್ನು ಬಲ್ಲವನಾಗಿದ್ದರೂ ತಾನು ವೈದ್ಯನೆಂದು ಹೇಳಿಕೊಳ್ಳದವನು. ಮೊಳಕಾಲ್ಮೂರು ತಾಲ್ಲೂಕಿನ ಯರಪೋತಜೋಗಿಹಳ್ಳಿ ಎಂಬ ಊರಿನ ವ್ಯಕ್ತಿಗೆ 'ನಿಮ್ಮ ಊರಲ್ಲಿ ಯಾರಾದರೂ ಗಿಡ ಕೊಡುವ ವೈದ್ಯರಿದ್ದಾರೆಯೇ' ಎಂದು ಕೇಳಿದಾಗ ಯಾರೂ ಇಲ್ಲವೆಂಬ ಉತ್ತರಬಂದಿತು. 'ಹಾಗಾದರೆ ಮನುಷ್ಯರಿಗೆ, ದನ-ಕುರಿಗಳಿಗೆ ರೋಗ ಬಂದರೆ ಏನ್ ಮಾಡ್ತೀರಿ' ಎಂದಾಗ 'ನಾವೇ ಯಾವ್ದೋ ಗಿಡ-ಗಂಟೆ, ಸೊಪ್ಪು-ಸೆದೆಯಿಂದ ಏನೋ ಒಂದು ಮಾಡ್ತೀವಿ' ಎಂದನು. ಆತನಿಂದ ಮಾಹಿತಿ ಪಡೆದ ನಂತರ 'ಅನುಭವಿ ವೈದ್ಯರು?' ಎಂದಾಗ, 'ಹೆ! ಬಿಡ್ರಿ ನಮ್ಮಜ್ಜಿ ಮಾಡೋದ್ನೇ ನಾನ್ ಮಾಡ್ತಿದ್ದೀನಿ ಅದೇನ್ ದೊಡ್ಡ ವಿದ್ಯೆ' (53) ಎಂದ ಆತ ತಾನೊಬ್ಬ ವೈದ್ಯ ಎಂಬುದನ್ನು ಒಪ್ಪುವುದಿಲ್ಲ. ಇವರಿಗೆ ವೈದ್ಯಜ್ಞಾನ ಸಹಜವಾಗಿ ವಂಶಪಾರಂಪರ್ಯದಿಂದ ಬಂದಿರುತ್ತದೆ. ಇದರಿಂದಾಗಿ ಜನಪದ ವೈದ್ಯರು ತಮ್ಮಲ್ಲಿ ವಿಶೇಷಜ್ಞಾನವಿದ್ದರೂ ಇಲ್ಲದವರ ಹಾಗೆ ಇದ್ದು ಬಿಡುತ್ತಾರೆ, ಇದು ಅವರ ಸ್ವಭಾವ.

ಇದಕ್ಕೆ ವಿರುದ್ಧವಾಗಿ ತಾವು ವೈದ್ಯರೆಂದು ಹೇಳಿಕೊಳ್ಳುವವರೂ ಇದ್ದಾರೆ. ಇಂಥವರು ಆಸಕ್ತಿ ಮತ್ತು ಕುತೂಹಲದಿಂದ ಬೇರೆ ಭಾಗಗಳಿಂದಲೂ ವೈದ್ಯವನ್ನು ಕಲಿತಿರುತ್ತಾರೆ. ಅಕ್ಷರ ಬಲ್ಲವರಾಗಿದ್ದರೆ ಇತರ ವೈದ್ಯ ಗ್ರಂಥಗಳನ್ನೂ ಓದಿಕೊಂಡಿರುತ್ತಾರೆ. ಇವರು ಪತ್ರಿಕೆಗಳಲ್ಲಿ ಮತ್ತು ಗ್ರಂಥಗಳಲ್ಲಿರುವ

ಚಿಕಿತ್ಸೆಯನ್ನು ಹಿಂದು ಮುಂದು ಯೋಚಿಸದೇ ಪ್ರಯೋಗ ಮಾಡುವವರೂ ಆಗಿರುತ್ತಾರೆ. ಇನ್ನೊಂದು ವರ್ಗದ ವೈದ್ಯರಿದ್ದಾರೆ, ಅವರು ರಸವೈದ್ಯರು. ಮೇಲು ನೋಟಕ್ಕೆ ಮೂಲಿಕಾ ವೈದ್ಯರಂತೆ ಇದ್ದರೂ ರಸವೈದ್ಯಕ್ಕಾಗಿ ಮನೆ ಮಠ ಕಳೆದುಕೊಂಡವರಿದ್ದಾರೆ. ಇನ್ನು ಮನೆಯ ಹಿರಿಯರು ಅನುಭವಿಗಳು ಮತ್ತು ಸೂಲಗಿತ್ತಿಯರು ತಾವು ವೈದ್ಯರೆಂದು ಭಾವಿಸದೆಯೇ ವೈದ್ಯೋಪಚಾರಗಳನ್ನು ಮಾಡುವವರಾಗಿರುತ್ತಾರೆ.

ಕೆಲವು ರೋಗಗಳನ್ನು ವಾಸಿಮಾಡುವುದರಲ್ಲಿ ಪ್ರಸಿದ್ಧಿಯನ್ನು ಪಡೆದವರಿದ್ದಾರೆ. ಇವರ ಸಾಧನೆಗಳನ್ನು ಜನ ಬಣ್ಣಕಟ್ಟಿ ಕೊಂಡಾಡುತ್ತಾರೆ. ಅಷ್ಟು ಮಾತ್ರವಲ್ಲ ಸತ್ತನಂತರ ಇವರು ಅತಿಮಾನುಷ ವ್ಯಕ್ತಿಗಳಾಗಿ ಕೊನೆಗೆ ಐತಿಹ್ಯವೂ ಆಗುತ್ತಾರೆ. ಚಳ್ಳಕೆರೆ ತಾಲ್ಲೂಕಿನ ಚಟ್ಟೇಕಂಬ ಗ್ರಾಮದ ಕುರಿಗಾಹಿ ಆಗಿದ್ದ ಶೀ ವೀರಪ್ಪತಾತ ಬದುಕಿದ್ದಾಗ ಜನಪದ ವೈದ್ಯರಾಗಿದ್ದರು. ಇವರಿಂದ ಔಷಧಿ ಪಡೆದು ಗುಣಹೊಂದಿದವರು ಅವರು ದಿವಂಗತರಾದ ಮೇಲೆ ಅವರ ಸಮಾಧಿಗೆ ಹರಕೆ ಮಾಡಿಕೊಳ್ಳುವುದರ ಮೂಲಕ ಕಾಯಿಲೆಗಳಿಗೆ ಪರಿಹಾರವನ್ನು ಕಂಡುಕೊಳ್ಳುತ್ತಿದ್ದಾರೆ.

ವೈದ್ಯನಾದವನಿಗೆ ಸಮಾಜದಲ್ಲಿ ಗೌರವ ಸ್ಥಾನವೇನೋ ಇರುತ್ತದೆ. ಆದರೆ ವೈದ್ಯೋಪಚಾರ ಮಾಡುವುದು ಸುಲಭವಾದ ಕಾರ್ಯವಲ್ಲ. ಕೆಲವು ಸಂದರ್ಭದಲ್ಲಿ ಅಪರಿಚಿತ ರೋಗಿಗಳು ವೈದ್ಯರು ಕೊಡುವ ಔಷಧಿಯನ್ನು ಸೇವಿಸಲು ಹಿಂಜರಿಯುತ್ತಾರೆ. ಏಕೆಂದರೆ ಮದ್ದು ಅರೆಯುವವರನ್ನು ಅನುಮಾನದಿಂದ ನೋಡುವ ಪ್ರವೃತ್ತಿಯೂ ಇದೆ. ಆಗ ಸ್ವತಃ ವೈದ್ಯರೇ ಔಷಧವನ್ನು ಸೇವಿಸಿ ನಂತರ ರೋಗಿಗಳಿಗೆ ಕೊಡುತ್ತಾರೆ. 'ಮೂರ್ಛೆವಾಯು ಬಂದವರಿಗೆ ನುಂಗಲು ಗುಳಿಗೆ ಕೊಟ್ಟಾಗ ಅನುಮಾನ ಮಾಡ್ತಾರೆ, ಆಗ ನನ್ ಮೊಮ್ಮಗನಿಗೆ ನುಂಗಿಸಿ ಬಳಿಕ ಅವರಿಗೆ ಕೊಡ್ತೇನೆ' (74) ಔಷಧಿ ಕೊಡುವಾಗ ಈ ಬಗೆಯ ಸಮಸ್ಯೆ ಇದ್ದರೆ, ವೈದ್ಯನಾಗಿರುವುದರಿಂದ ಕಡ್ಡಾಯವಾಗಿ ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಎಲ್ಲಾ ವೈದ್ಯರಿಗೂ ಈ ರೀತಿಯ ನಿಯಮಗಳಿರುವುದಿಲ್ಲ.

ಕುಟುಂಬದ ಸ್ತ್ರೀಯರು ಮುಟ್ಟಾದಾಗ, ಮನೆಯಲ್ಲಿ ಮತ್ತು ಊರಿನಲ್ಲಿ ಯಾರಾದರೂ ಮರಣ ಹೊಂದಿದಾಗ ಹಾಗೂ ಗ್ರಹಣ ಇದ್ದಾಗ ಈ ಮೂರು ಸಂದರ್ಭಗಳಲ್ಲಿ ವೈದ್ಯನಾದವನು ತನ್ನ ಮನೆಬಿಟ್ಟು ಹೊರಗೆ ಹೋಗಬೇಕು. ಆ ವೇಳೆಯಲ್ಲಿ ಊಟವನ್ನು ಹೊರಗಡೆಯೇ ಮಾಡಬೇಕು. 'ಗ್ರಹಣವಿದ್ದಾಗ ಒಂದು ದಿನ, ಮರಣವಾದಾಗ ಮಣ್ಣು ಮಾಡುವ ತನಕ, ಮುಟ್ಟಾದಾಗ ಮೂರು

ದಿನಗಳು, ಈ ದಿನಗಳಲ್ಲಿ ವಾಸ್ಥವ್ಯವನ್ನೂ ಹೊರಗೇ ಮಾಡಬೇಕು' (124) ಇವು ಒಬ್ಬ ವೈದ್ಯನ ನಿಯಮಗಳಾದರೆ, ಮತ್ತೊಬ್ಬ ವೈದ್ಯನ ನಿಯಮಗಳು ಈ ಕೆಳಗಿನಂತಿವೆ 'ವೈದ್ಯನಾದವನು ಸೌತೆಕಾಯಿ, ಕರಬೂಜದ ಹಣ್ಣು, ಪುಂಡೆಪಲ್ಲೆ ಇವನ್ನು ಜೀವ ಇರುವವರೆಗೆ ತಿನ್ನಬಾರದು. ಒಂದು ವೇಳೆ ತಿಂದರೆ ಗಿಡಕೊಟ್ಟಾಗ ಅದು ಹಿಡಿಯುವುದಿಲ್ಲ' (73) ಮೇಲಿನ ನಿಯಮಗಳ ಹಿಂದೆ ಯಾವುದೋ ಉದ್ದೇಶಗಳಿರಬಹುದು. ಅವುಗಳನ್ನು ಅರಿಯುವ ಪ್ರಯತ್ನವನ್ನು ಮಾಡಬೇಕಿದೆ. ಮರಣವಾದಾಗ ಮನೆಯಿಂದ ಹೊರಗೆ ಹೋಗುವುದರ ಹಿಂದೆ ಒಂದು ಉದ್ದೇಶವಿದೆ, ದುಃಖದ ಮನೆಯಿಂದ ದೂರವಿದ್ದಾಗ ಹಾವು ಕಚ್ಚಿದ ವ್ಯಕ್ತಿ ಅಥವಾ ಬೇರೆ ಯಾವುದೋ ತೀವ್ರತರ ತೊಂದರೆಗೆ ಒಳಗಾದವರು ಬಂದಾಗ ಯಾವ ವಿಳಂಬವಿಲ್ಲದೆಯೇ ಔಷಧಿಯನ್ನು ಕೊಡಬಹುದಾಗಿದೆ. ದುಃಖದ ಮನೆಯೊಳಗಿದ್ದಾಗ ಹೀಗೆ ಕ್ಷಿಪ್ರವಾಗಿ ಔಷಧಿ ಕೊಡುವುದು ಸಾಧ್ಯವಾಗದೇ ಹೋಗಬಹುದು. ಹೀಗೆ ಹಣ್ಣು, ಕಾಯಿ, ಸೊಪ್ಪುಗಳನ್ನು ವೈದ್ಯನಾದವನು ಜೀವನವೆಲ್ಲ ತಿನ್ನಬಾರದು ಎನ್ನುವುದರ ಹಿಂದೆ ಯಾವುದೋ ಕಾರಣ ಇರಬಹುದೆ!

ಜನಪದ ವೈದ್ಯರ ವೈದ್ಯೋಪಚಾರದಲ್ಲಿ ವೈವಿಧ್ಯತೆ ಇರುತ್ತದೆ. ಒಂದೇ ಕಾಯಿಲೆಗೆ ಬೇರೆ ಬೇರೆ ವೈದ್ಯರು ವಿವಿಧ ಗಿಡಗಳನ್ನು ಬಳಸುತ್ತಾರೆ. ಕೆಲವರು ಹಸಿಯ ಗಿಡವನ್ನು ಬಳಸಿದರೆ ಇನ್ನೂ ಕೆಲವರು ಒಣಗಿಡವನ್ನು ಬಳಸುತ್ತಾರೆ. ಗಿಡಗಳನ್ನು ಸಂಗ್ರಹಿಸುವಾಗ, ಔಷಧಿಯನ್ನು ಕೊಡುವಾಗ ನಿರ್ದಿಷ್ಟ ಸಮಯವನ್ನು ಪರಿಗಣನೆಗೆ ತಗೆದುಕೊಳ್ಳುತ್ತಾರೆ. ಭಕ್ತಿ ಮತ್ತು ಗೌರವಗಳಿಂದ ವೈದ್ಯವನ್ನು ಮಾಡುತ್ತಾರೆ. ವಿದ್ಯೆ ಕಲಿಸಿದ ಗುರುವನ್ನು ಹಾಗೂ ದೈವವನ್ನು ಸ್ಮರಿಸಿಯೇ ಮುಂದಡಿ ಇಡುತ್ತಾರೆ. ಮನೆಯಲ್ಲಿರುವ ಅನುಭವಿಗಳಲ್ಲಿ ಈ ಬಗೆಯ ಭಕ್ತಿಯನ್ನು ಕಾಣುವುದು ಅಪರೂಪವಾದರೂ ಅದನ್ನು ಒಂದು ಶಿಸ್ತುಕ್ರಮದಲ್ಲಿ ಮಾಡುವುದನ್ನು ರೂಢಿಸಿಕೊಂಡಿರುತ್ತಾರೆ.

ಜನಪದ ವೈದ್ಯನಾಗಲು ಯಾವುದೇ ರೀತಿಯ ಮಾನದಂಡಗಳನ್ನು ನಿಗದಿ ಮಾಡಿರುವುದಿಲ್ಲ. ಇದರಿಂದಾಗಿ ಒಂದು ಪ್ರದೇಶದ ಜನರು ಯಾರನ್ನು ವೈದ್ಯರೆಂದು ಕರೆಯುತ್ತಾರೋ ಅಂಥವರನ್ನು ಜನಪದ ವೈದ್ಯರೆಂದು ಭಾವಿಸಬಹುದು. ಇವರಲ್ಲಿ **ಅನುಭವಿ ವೈದ್ಯರು, ವೃತ್ತಿನಿರತ ವೈದ್ಯರು** ಮತ್ತು **ಹವ್ಯಾಸಿ ವೈದ್ಯರು** ಎಂದು ವಿಭಾಗಿಸಬಹುದು. ಈ ಕುರಿತ ಹೆಚ್ಚಿನ ವಿಶ್ಲೇಷಣೆಯನ್ನು ಗುರುಪರಂಪರೆಯ ಭಾಗದಲ್ಲಿ ಕಾಣಬಹುದಾಗಿದೆ.

ಜನಪದ ವೈದ್ಯರು ರೋಗ ನಿದಾನದ ನಂತರ ಆ ರೋಗಕ್ಕೆ ಒಂದು ಹೆಸರನ್ನು ಕೊಡುವುದು, ರೋಗವನ್ನು ವಾಸಿ ಮಾಡಲು ಗಿಡಕೊಡುವುದು; ಕೊಟ್ಟ ಔಷಧದಿಂದ ಅಡ್ಡಪರಿಣಾಮ ಸಂಭವಿಸಿದರೆ ಅದಕ್ಕೂ ಒಂದು ಗಿಡ ಸಿದ್ಧಮಾಡುವುದು. ಇದೆಲ್ಲವನ್ನೂ ಮಾಡಬೇಕಾದರೆ ವೈದ್ಯನ ಹಸ್ತಗುಣ ಪವಿತ್ರವಾಗಿರಬೇಕು. ಈ ಮೊದಲಾದ ವಿಷಯಗಳನ್ನು ಈ ಕೆಳಗಿನಂತೆ ಚರ್ಚಿಸಲಾಗಿದೆ.

ಆ.1 ಬ್ಯಾನೆಗೊಂದು ಹೆಸರು : ಯಾವುದೇ ರೋಗಗಳಿಗೆ ಹೆಸರಿಡುವುದರಲ್ಲಿ ಜನಪದ ವೈದ್ಯರು ತುಂಬ ಜಾಣತನವನ್ನು ತೋರಿಸುತ್ತಾರೆ. ರೋಗವನ್ನು ಗುರುತಿಸಿದ ವೈದ್ಯನಿಗೆ, ಆ ರೋಗಕ್ಕೆ ಈಗಾಗಲೇ ಇತರ ಪ್ರದೇಶಗಳಲ್ಲಿರುವ ಹೆಸರು ಗೊತ್ತಿರದಿದ್ದರೆ ತಾನೇ ಅದಕ್ಕೆ ಹೊಸ ಹೆಸರೊಂದನ್ನು ಸೃಷ್ಟಿಸುತ್ತಾನೆ. ಹೀಗೆ ಕರೆದಾಗ ಕೆಲವು ರೋಗಗಳ ಹೆಸರುಗಳೇ ರೋಗದ ಲಕ್ಷಣವನ್ನೂ ಹೇಳುತ್ತವೆ. ಅಂದರೆ ಲಕ್ಷಣವೇ ರೋಗದ ಹೆಸರಾಗಿರುತ್ತದೆ. ಬಹುಶಃ ಈ ಬಗೆಯ ಹೆಸರುಗಳು ಸಮುದಾಯಕ್ಕೂ ಪರಿಚಿತವಾಗಿರುತ್ತವೆ. ಪರಿಣಾಮವಾಗಿ ರೋಗದ ಚಿಹ್ನೆಗಳನ್ನು ಗಮನಿಸಿದ ಸಮುದಾಯದವರು ಅದಕ್ಕೆ ಇರುವ ಹೆಸರನ್ನೂ ಕರೆಯುತ್ತಾರೆ. ಉದಾಹರಣೆಗೆ, ಯಾರಾದರೂ ಹಗಲ್ಲೆಲ್ಲ ಕೆರೆದುಕೊಳ್ಳುತ್ತಿರುವುದನ್ನು ನೋಡಿದವರು ಅವನಿಗೆ ಕಜ್ಜಿ ಬಂದಿರಬೇಕೆಂದು ತೀರ್ಮಾನಿಸುತ್ತಾರೆ. ಇದನ್ನು ಪುರಂದರದಾಸರು ತಮ್ಮ ಹಾಡಿನಲ್ಲಿ 'ಸಿರಿಹೋದ ಮರುದಿನ ಬಡತನ ಬಂದರೆ ಹುರುಕು ಹತ್ತಿದಂತೆ ಕೆರಕೊಂಬರಯ್ಯ' ಎಂದಿದ್ದಾರೆ. ಅಂದರೆ ಕೆರೆದುಕೋಳುವುದುನ್ನು ಬಹುಹಿಂದೆಯೇ ಜನರು 'ಹುರುಕು' ಎಂಬ ಹೆಸರಿನಿಂದ ಕರೆಯುವುದನ್ನು ಇಲ್ಲಿ ನೋಡಬಹುದು. ಇದೇ ರೀತಿಯಾಗಿ ಸಮುದಾಯದಲ್ಲಿ 'ತೊನ್ನು, ಕುಷ್ಠ, ಫಿಟ್ಸ್, ಮೂರ್ಛೆರೋಗ, ಆಸ್ತಮಾ, ಇಸುಬು, ಹುಳುಕಡ್ಡಿ, ಗಂಡಮಾಲೆ ಮತ್ತು ಮುಖ ಕೈ ಕಾಲುಗಳಲ್ಲಿ ಬರುವ ವಿವಿಧ ಹುಣ್ಣುಗಳು ಈ ಮೊದಲಾದವುಗಳ ಲಕ್ಷಣವನ್ನು ಗಮನಿಸಿ ಅವುಗಳ ಹೆಸರುಗಳನ್ನು ಕರೆಯಲಾಗುವುದು. ಹೀಗೆ ರೋಗಗಳಿಗೆ ಕರೆಯುವ ಹೆಸರುಗಳಲ್ಲಿ ವೈವಿಧ್ಯತೆಯಿದೆ. ಒಂದೇ ರೋಗಕ್ಕೆ ವಿವಿಧ ಭಾಗಗಳಲ್ಲಿ ಭಿನ್ನವಾದ ಹೆಸರುಗಳಿವೆ. ಕೆಲವು ವೈದ್ಯರು ಅವಸರದಿಂದಲೋ ಅಥವಾ ಅನುಭವದ ಕೊರತೆಯಿಂದಲೋ ರೋಗನಾಮವನ್ನು ನಿರ್ಧರಿಸಿಬಿಡುತ್ತಾರೆ. ಇದು ಹೇಗೆಂದರೆ, 'ಪುಣ್ಯವಂತ ಹಾಡಿದ್ದೇ ರಾಗ, ವೈದ್ಯ ಹೇಳಿದ್ದೇ ರೋಗ' ಎಂಬ ಗಾದೆಯಂತೆ, ಆದರೆ, ಇಂತಹ ರೋಗನಾಮದಿಂದ ಕೆಲವೊಮ್ಮೆ ಅವಾಂತರ ಸೃಷ್ಟಿಯಾಗಲೂಬಹುದು. ಅಂದರೆ, ಕೇವಲ ಕೆಮ್ಮು, ಗೂರಲು ಇರುವವನಿಗೆ, 'ನಿನಗೆ ಕ್ಷಯ ಬಂದಿದೆ' ಎಂದೋ, ಹೊಟ್ಟೆನೋವು ಇರುವವನಿಗೆ, 'ನಿನ್ನ ಹೊಟ್ಟೆಯಲ್ಲಿ ಕಲ್ಲಿದೆ

ಅಥವಾ ಗಡ್ಡೆಯಿದೆ' ಎಂದೋ ಹೇಳುವುದರ ಮೂಲಕ ರೋಗದ ಹೆಸರಿನಿಂದಲೇ ರೋಗಿಯನ್ನು ಮಾನಸಿಕವಾಗಿ ಘಾಸಿಗೊಳಿಸುವ ಪ್ರಸಂಗಗಳಿವೆ. "ಮೊನ್ನೆ ಏಡ್ಸ್ ಬಂದವನೊಬ್ಬ ಬಂದಿದ್ದ ಅವನ ಮರ್ಮಭಾಗ ಸುಟ್ಟಂತೆ ಆಗಿತ್ತು. ಹೂಡಿಗೆ ಚಕ್ಕೆ, ಹಾಗಲಸೊಪ್ಪು, ಹಿಪ್ಲಿ, ಮೋಡಿ ಜಾಕಾಯಿ ಇವನ್ನೆಲ್ಲ ಕುಟ್ಟಿ ಎಳ್ಳೆಣ್ಣೆಯಲ್ಲಿ ಕುದಿಸಿ ಹಚ್ಚಿದಾಗ ಉಪ್ಪು ಉದುರಿದಂತೆ ಉದುರೋಯ್ತು" (21). ಇಲ್ಲಿ ಚರ್ಮಸಂಬಂಧಿ ರೋಗಕ್ಕೆ ಔಷಧಿಯನ್ನು ನಿರ್ಧರಿಸಿ ಅದರಂತೆ ಗುಣಪಡಿಸಲಾಗಿದೆ. ಆದರೆ ರೋಗಕ್ಕೆ ಸೂಕ್ತವಲ್ಲದ ಹೆಸರನ್ನಿಡಲಾಗಿದೆ. ಈ ರೋಗವನ್ನು ಇತರ ವೈದ್ಯರು ಮೇಹಸಂಬಂಧಿ ಕಾಯಿಲೆ, ಹೆಣ್ಮಕ್ಕಳ ಕಾಯಿಲೆ, ಗುಪ್ತರೋಗ, ಚರ್ಮಸೆಲ್ದಿ ಮುಂತಾದ ಹೆಸರುಗಳಿಂದ ಕರೆಯುತ್ತಾರೆ.

ಯಾರೂ ಗುಣಪಡಿಸಲಾಗದ ದೊಡ್ಡಕಾಯಿಲೆಯನ್ನು ಗುಣಪಡಿಸಿದ್ದೇನೆಂದು ಹೆಸರು ಪಡೆಯುವ ಸಲುವಾಗಿ ಮತ್ತು ಹೆಚ್ಚು ರೋಗಿಗಳನ್ನು ಆಕರ್ಷಿಸುವುದಕ್ಕಾಗಿ ಸಂಬಂಧವಿರದ ರೋಗನಾಮವನ್ನು ಕರೆಯುವ ಸಾಧ್ಯತೆಯಿದೆ. ಈ ಬಗೆಯ ಪ್ರಚಾರದ ಗೀಳಿರುವ ವೈದ್ಯರ ಸಂಖ್ಯೆ ಅತಿ ಕಡಿಮೆಯೆಂದು ಹೇಳಬಹುದು. ಏನೇ ಆದರೂ ವೈದ್ಯರು ಬ್ಯಾನೆಗೊಂದು ಹೆಸರನ್ನು ನಿರ್ಧರಿಸಲೇ ಬೇಕು ಅದು ಅವರ ಕರ್ತವ್ಯವೂ ಹೌದು. ಈ ಬಗೆಯ ಕಾರ್ಯ ಪ್ರಾಚೀನರಿಂದಲೂ ನಡೆದುಕೊಂಡು ಬಂದಿದೆ.

ಇಂಥ ವಿವಿಧ ರೋಗನಾಮಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಗಲ್ಲದ ಕೆಳಭಾಗದಲ್ಲಿ ಬರುವ ವಿವಿಧ ಗಡ್ಡೆಗಳಿಗೆ ಗಂಡ ಮಾಲೆ, ಸರಗಂಡ ಮಾಲೆ, ಲಾಳ್ ಸಂಕೋಲೆ, ಗಂಟ್ಲಗಾಣ, ಗುರುಮಗಂಟು, ಮಂಗನ ಗಡ್ಡೆ, ಶೀತದ ಗಡ್ಡೆ, ಕರ್ನಮಲ್ಲು ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ದೇಹದ ಯಾವ ಭಾಗದಲ್ಲಿ ಹುಣ್ಣು ಬರುವುದೋ ಆ ಅಂಗದ ಹೆಸರಿನಿಂದಲೂ ಅದನ್ನು ಕರೆಯುವ ಉದಾಹರಣೆಗಳಿವೆ.

ನೂತಿ : ಕಣ್ಣು, ಮೂಗು, ಕೆನ್ನೆಯ ಮೇಲೆ ಬರುತ್ತವೆ (1)

ನೆತ್ತಿಹುಣ್ಣು : ತಲೆಯ ಮೇಲೆ ಬರುವುದು (118)

ಮೊಲೆ ಹುಣ್ಣು : ಮೊಲೆಹೀಡು, ಎದೆಹುಣ್ಣು ಎಂದೂ ಕರೆಯುತ್ತಾರೆ. ಸ್ತನಗಳ ಹತ್ತಿರ ಬರುತ್ತದೆ. (114)

ಹರಿಣೆ : ಉಷ್ಣದಿಂದ ತೊಡೆಯ ಭಾಗದಲ್ಲಿ ಬರುತ್ತವೆ (127)

ಬೆನ್ನುಫಣಿ : ಬೆನ್ನಿನ ಮೇಲೆ ಬರುವುದು, ಬೆನ್ನಿನ ಭಾಗದಲ್ಲಿ ಬರುವ ಇತರ ಹುಣ್ಣುಗಳನ್ನು ಪಚ್ಚುಣ್ಣು, ಜಲ್ಡಿಹುಣ್ಣುಗಳೆಂದು ಕರೆಯುತ್ತಾರೆ. (34)

ಸಂಕದಾಳು : ಭುಜದ ಕೆಳಭಾಗದಲ್ಲಿ ಬರುತ್ತದೆ (9)

ತೊಡೆಬಾಳ : ಮರ್ಮಾಂಗಗಳ ಆಸುಪಾಸಿನಲ್ಲಿ ಬರುತ್ತದೆ. ಇದಕ್ಕೆ **ಒಡೆದೋಳ** ಎಂದೂ ಕರೆಯುತ್ತಾರೆ. (108)

ಆಸ್ಗಂಡ ಮಾಲೆ : ಗುದಭಾಗದಲ್ಲಿ ಬರುವುದು. (203)

ಅಂಗೈಫಣಿ : ಅಂಗೈಯಲ್ಲಿ ಬರುವ ಹುಣ್ಣು. (173)

ಅರ್‌ಪತಿ : ಕೆನ್ನೆ, ತೊಡೆ, ಹೊಟ್ಟೆಗಳ ಸ್ಥಾನದಲ್ಲಿ ಬರುತ್ತದೆ. (164)

ಸರ್ಪಹುಣ್ಣು : ಹೊಟ್ಟೆ, ತೊಡೆ, ಬೆನ್ನು, ಕತ್ತುಗಳ ಭಾಗದಲ್ಲಿ ಬರುವುದು. (34)

ಹೊಟ್ಟೆಹುಣ್ಣು : ಹೊಟ್ಟೆಯ ಒಳಗೆ ಬರುವುದು (64)

ಮೇಲಿನ ವಿವಿಧ ಹುಣ್ಣುಗಳಲ್ಲಿ ಕೆಲವು ನಿರ್ದಿಷ್ಟವಾಗಿ ಅವು ಬರುವ ಸ್ಥಳವನ್ನೇ ತಮ್ಮ ಹೆಸರುಗಳಲ್ಲಿ ಸೂಚಿಸುತ್ತವೆ. ಎದೆಹುಣ್ಣು, ಅಂಗೈಪಣಿ, ಬೆನ್ನುಪಣಿ, ಹೊಟ್ಟೆಹುಣ್ಣು, ನತ್ತಿಹುಣ್ಣು ಮೊದಲಾದವುಗಳನ್ನು ನೋಡಬಹುದು. ಕೆಲವು ಹುಣ್ಣುಗಳ ಆಕಾರವೇ ರೋಗದ ಹೆಸರನ್ನು ಪಡೆದುಕೊಂಡಿದೆ. ಜಲ್ಡಿಹುಣ್ಣು, ಸರ್ಪಹುಣ್ಣು, ಲಾಳ್ ಸಂಕೋಲೆ, ಮಂಗನ ಗಡ್ಡೆ ಮುಂತಾದವು ಇಲ್ಲಿ ಬೇರೊಂದು ವಸ್ತುವಿನ ಮತ್ತು ಪ್ರಾಣಿಯ ಹೆಸರುಗಳೇ ರೋಗದ ಹೆಸರುಗಳಾಗಿವೆ. ಅಂದರೆ, ಆಕಾರದಲ್ಲಿ ಅವುಗಳನ್ನು ಹೋಲುತ್ತವೆ. ಜಲ್ಡಿಯಾಕಾರ ಇರುವುದು, ಸರ್ಪದಂತೆ ಹಬ್ಬುವುದು, ಲಾಳದಂತೆ ಬಂಧಿಸುವುದು ಮತ್ತು ಮಂಗ ತಾನು ತಿಂದದ್ದನ್ನು ದವಡೆಯಲ್ಲಿಟ್ಟುಕೊಳ್ಳುತ್ತದೆ. ಆಗ ಅದರ ದವಡೆಯಲ್ಲಿ ಗಡ್ಡೆಗಳು ಕಾಣುತ್ತವೆ. ಆ ರೀತಿಯ ಗಡ್ಡೆಗಳನ್ನು ಹೋಲುವುದು. ರೋಗದ ಹೆಸರಿನಿಂದಲೇ ಆ ರೋಗದ ಚಿತ್ರಣವನ್ನು ಕಟ್ಟಿಕೊಡುವ ಕಲೆಗಾರಿಕೆ ಈ ಹೆಸರುಗಳಲ್ಲಿದೆ. ಇದೇ ರೀತಿಯಲ್ಲಿ ಇತರ ರೋಗಗಳಿಗೆ ಕರೆಯುವ ಹೆಸರುಗಳಲ್ಲಿ ವೈಚಿತ್ರ್ಯವಿದೆ. ಹೆಸರಿನಿಂದಲೇ ರೋಗದ ಸ್ವರೂಪವನ್ನು ಅರಿಯಲು ಸಾಧ್ಯವಿದೆ.

'ಕುದುರೆ ಕುಟ್ಟು, ಸೂತಕ ಕುಟ್ಟು, ಸೆರಗುಕುಟ್ಟು, ಹೊಟ್ಟೆಕುಟ್ಟು, ಹೊಟ್ಟೆಮುರಿತ, ಮುಟ್ಟುದೋಷ ಮೊದಲಾದ ಹೆಸರುಗಳು ಋತುಸ್ರಾವದ ವೇಳೆ ಮತ್ತು ಇತರ ಸಂದರ್ಭಗಳಲ್ಲಿ ಬರುವ ಕಿಬ್ಬೊಟ್ಟೆಯ ನೋವಿನ ಲಕ್ಷಣವನ್ನು ಮತ್ತು ಅದರ ತೀವ್ರತೆಯನ್ನು ಹೇಳುತ್ತವೆ. ಇಲ್ಲಿ ವೈದ್ಯರು 'ಹೊಟ್ಟೆನೋವು' ಎಂಬ ಪರಿಚಯದ ಪದವನ್ನು ಕರೆಯುವುದಿಲ್ಲ. ಯಾಕೆಂದರೆ, ಅದಕ್ಕಿಂತಲೂ ಭಿನ್ನವಾದದ್ದು ಈ 'ಸೆರಗು ಕುಟ್ಟು' ಎಂಬುದನ್ನು ವೈದ್ಯರು ಗುರುತಿಸುತ್ತಾರೆ. ಇದರಿಂದಾಗಿ ಜನಪದರು ರೋಗಕ್ಕೊಂದು ಹೆಸರನ್ನು ಇಡುವಾಗ ಆ ರೋಗಕ್ಕೂ ಅದರ ಹೆಸರಿಗೂ ಸಂಬಂಧ ಬೆಸೆದಿರುವಂತೆ ಕರೆಯುತ್ತಾರೆ. ಉದಾಹರಣೆಗೆ, 'ಕುದುರೆ ಕುಟ್ಟು' ಎಂಬ ಹೆಸರು, ನೋವನ್ನು ಮೀರಿದ ಸಂಕಟವನ್ನು ಸೂಚಿಸುತ್ತದೆ. ಕುದುರೆ ಕುಕ್ಕರಲು ಓಟದಲ್ಲಿರುವಾಗ ಸವಾರಿನಿಗಾಗುವ ಕುಕ್ಕುವಿಕೆಯ ನೋವನ್ನು ಈ ರೋಗದ ಹೆಸರು ಕಟ್ಟಿಕೊಡುತ್ತದೆ. ಅಂದರೆ, ಇಂಥ ರೋಗದ ಹೆಸರು ಅನುಭವದಿಂದಲೂ ಬಂದಿರಬಹುದು.

ಹೆದರಿಕೆ ಮತ್ತು ಎಲ್ಲಿಯಾದರೂ ಬೀಳುವುದರಿಂದುಂಟಾಗುವ ಸಮಸ್ಯೆಗಳಿಗೆ : ಭೂಮಿರಾವು, ಗಾಳಿಸೋಕು, ದೆವ್ವದಕಾಟ, ಪೀಡೆ ಪಿಶಾಚಿಕಾಟ, ಗ್ರಹಚೇಷ್ಟೆ, ಬ್ರಹ್ಮರಾಕ್ಷಸಿ, ಮೋಹಿನಿಕಾಟ ಇತ್ಯಾದಿ (64) ಹೆಸರಿಡುತ್ತಾರೆ. ಈ ಬಗೆಯ ಸಮಸ್ಯೆಗಳು ಮಕ್ಕಳಲ್ಲಿ ಕಾಣಿಸಿಕೊಂಡಾಗ 'ಬಾಲಗ್ರಹ'ಗಳೆಂದು ಕರೆಯುತ್ತಾರೆ. ಇಲ್ಲಿನ ವಿಶೇಷವೆಂದರೆ ರೋಗಕ್ಕೆ ಕಾರಣವಾದದ್ದು ಯಾವುದೆಂದು ನಂಬುತ್ತಾರೋ ಅದರ ಹೆಸರಿನಲ್ಲಿಯೇ ರೋಗವನ್ನು ಗುರುತಿಸುತ್ತಾರೆ.

ಮತಿಭ್ರಮಣೆಯಾದಾಗ : ಹುಚ್ಚು, ತಲೆಕ್ರಾಕ್, ಬುಗುಲು ಸೊನ್ನೆ, ಸನ್ನಿ ಬುಗುಲ್, ಬಾಣಂತಿ ಸನ್ನಿ (148) ಎನ್ನುವ ಹೆಸರುಗಳು ರೋಗಿಯ ವರ್ತನೆಯ ಹಿನ್ನೆಲೆಯಲ್ಲಿ ಬಂದಿವೆ. ಇಲ್ಲಿ ಸಮಸ್ಯೆ ಒಂದೇ ಆಗಿದ್ದರೂ, ಅದಕ್ಕಿರುವ ಹೆಸರುಗಳು ಬೇರೆ ಬೇರೆಯಾಗಿವೆ.

'ಗಂಡ–ಹೆಂಡರಿಗೆ ಸಮಾಧಾನ' (24) ಎನ್ನುವುದು ಸಮಸ್ಯೆಯೊಂದರ ಹೆಸರಾಗಿದೆ. ಅಸಮದಾನಕ್ಕೆ ಕೊಡುವ ಔಷಧವೇ ಸಮಾಧಾನ ಎಂಬ ಹೆಸರನ್ನು ಪಡೆದಿದೆ. ಇದೇ ಔಷಧವನ್ನು ಯುವಕರಿಗೆ ಕೊಟ್ಟಾಗ ಅದು 'ವಶೀಕರಣ ಮದ್ದು' ಎಂಬ ಹೆಸರನ್ನು ಪಡೆಯುತ್ತದೆ.

ಹಿಂದೆ ಪ್ರಸ್ತಾಪಿಸಿದಂತೆ, ರೋಗದ ಲಕ್ಷಣ ಕಾರಣ ಮತ್ತು ಸ್ಥಳಗಳೇ ರೋಗದ ಹೆಸರನ್ನು

ಪಡೆಯುತ್ತವೆ. 'ಕಣ್ಣಿಗೆ ಬಂದಾಗ, ಮಲಮೂತ್ರ ಕಟ್ಟಾದರೆ, ಋತುಮತಿ ಆಗಲು, ಋತುಕಾಲ ಮುಂದೆ ಹೋಗಲು, ಉರಿಮೂತ್ರ, ಕೈಕಾಲು ಕಳಿಯಲು, ರಕ್ತಭೇದಿ, ಹಾಲು ಇಸುಬು, ಒಣ ಇಸುಬು, ಎದೆಯಲ್ಲಿ ರಕ್ತ ಬೀಳುವುದು, ಕಿವಿ ಇರಿತ, ಕೀಲುನೋವು, ಮಂಡಿಊತ, ಹಲ್ಲುನೋವು ಮುಳ್ಳುತುಳಿದಾಗ, ಇಕ್ಕುಮದ್ದು, ಕೊಯ್ದುಗಾಯ, ಇರಿದಗಾಯ ಇತ್ಯಾದಿಗಳು.

ರೋಗಿಯನ್ನು ಮುಟ್ಟಿದಾಗ ಮೈಬಿಸಿ ಇದ್ದರೆ ಜ್ವರವೆಂದು ತಿಳಿಯುವ ವೈದ್ಯರು ದೇಹದಲ್ಲಿ ಹುಟ್ಟಿರಬಹುದು ಅಥವಾ ಮನಸ್ಸಿನ ಭೀತಿಯಿಂದ ಬಂದಿರಬಹುದು ಎಂದು ಊಹಿಸುತ್ತಾರೆ. ಅವುಗಳ ಲಕ್ಷಣವನ್ನು ಗಮನಿಸಿ ಒಳಜ್ವರ, ಹೊರಜ್ವರ, ಕರುಳಿಗೆ ಹತ್ತಿದ ಜ್ವರ, ಭಯಜ್ವರ, ಭೀತಿಜ್ವರ, ವಾಯಿದೆ ಜ್ವರ ಮಾದಲಾದ ಹೆಸರುಗಳಿಂದ ಕರೆಯುತ್ತಾರೆ.

ಜನಪದ ರೋಗಗಳ ಹೆಸರುಗಳಿಂದ ಸಾಂಸ್ಕೃತಿಕ ಆಯಾಮವನ್ನು ತಿಳಿಯಬೇಕಾಗಿದೆ. 'ಗಂಡ-ಹೆಂಡರಿಗೆ ಸಮಾಧಾನ' ಎಂಬ ಹೆಸರು ಒಡೆದ ಮನಸುಗಳನ್ನು ಕೂಡಿಸುವುದರ ಸೂಚನೆಯಾಗಿದೆ. 'ಮಂಗನ ಗಡ್ಡೆ' ಎಂಬ ಹೆಸರು ದೈವವನ್ನು ನೆನಪಿಸುತ್ತದೆ. ಅದರ ಪರಿಹಾರಕ್ಕೆ ಅಂಜನೇಯನಿಗೆ ಪೂಜೆಯನ್ನು ಸಲ್ಲಿಸುತ್ತಾರೆ. 'ದನಗಳ ಬಾಲದ ತುದಿಗೆ ಪೆಟ್ಟುಬಿದ್ದಾಗ ಬೂಸ್ಟ್ ವರ್ಗಕ್ಕೆ ಸೇರಿದ ರೋಗಾಣುವಿನಿಂದ ಬರುವ ಕಾಯಿಲೆ'[13]ಗೆ 'ಕೋತಿಬಾಲ', 'ಬಾಲದ ನೂತಿ' ಎಂಬ ಹೆಸರುಗಳಿಂದ ಕರೆಯುತ್ತಾರೆ. ಕೋತಿ ಬಾಲದ ತುದಿಯಲ್ಲಿ ಕೂದಲ ಕುಚ್ಚು ಇರುವುದಿಲ್ಲ, ಆದರೆ ದನಗಳಿಗೆ ಇರುತ್ತದೆ ದನಗಳ ಬಾಲದ ಕೂದಲ ಕುಚ್ಚು ಉದುರಿದಾಗ ಅದು ಕೋತಿ ಬಾಲದಂತೆ ಕಾಣುತ್ತದೆ. ಪರಿಣಾಮವಾಗಿ ಆ ಬಗೆಯ ಹೆಸರನ್ನು ಪಡೆಯುತ್ತದೆ. ಅಂದರೆ, ಹೆಸರಿಗೂ ಮತ್ತು ರೋಗಕ್ಕೂ ಸಂಬಂಧವೇ ಇರದಿದ್ದರೂ ಹೋಲಿಕೆಯಿಂದ ರೋಗಕ್ಕೆ ಅಂಥ ಹೆಸರು ಇಡುವುದನ್ನು ಕಾಣಬಹುದು.

2. ಗಿಡಕೊಡುವ ಸಾಧ್ಯಾಸಾಧ್ಯತೆ : ಜನಪದ ವೈದ್ಯರು ಯಾವುದೇ ರೋಗಕ್ಕೆ ಔಷಧೋಪಚಾರವನ್ನು ಮಾಡುವ ಮೊದಲು ಅದನ್ನು ವಾಸಿಮಾಡಬಹುದೇ ಅಥವಾ ಇಲ್ಲವೇ ಎಂಬುದನ್ನು ಕುರಿತು ಪುನಾರವಿಮರ್ಶಿಸಿ ನೋಡುತ್ತಾರೆ. ಆ ನಂತರವೇ ಗಿಡ ಕೊಡುವ ನಿರ್ಧಾರವನ್ನು ಕೈಗೊಳ್ಳುತ್ತಾರೆ. ಗಿಡ ಕೊಡುವುದೆಂದರೆ ಜನಪದರ ದೃಷ್ಟಿಯಲಿ ಔಷಧಿ ಕೊಡುವುದು ಎಂದರ್ಥ. 'ಪಕ್ಕದ ಊರಲ್ಲಿ ಮೂಲವ್ಯಾಧಿಗೆ ಗಿಡ ಕೊಡ್ತಾರೆ. ನಮ್ಮೂರಜ್ಜ ಸರಗಂಡ ಮಾಲೆಗೆ ಕಿವಿಯಲ್ಲಿ ಗಿಡ ಹಿಂಡ್ತನೆ. ದನಗಳಿಗೆ

ಕುಂದಾದರೆ ಆ ಊರಲ್ಲಿ ಒಳ್ಳೆಯ ಗಿಡ ಹೊಯ್ಯುತ್ತಾರೆ, ಇಸುಬಿಗೆ ಆ ಮನೆಯ ಅಜ್ಜಿ ಗಿಡ ಹಚ್ಚುತ್ತೆ. ಕಾಮಾಲೆ ಬಂದ್ರೆ ಕೊರಳಲ್ಲಿ ಗಿಡ ಕಟ್ಟುತ್ತಾರೆ. ಸುಟ್ಟಗಾಯಕ್ಕೆ ಏನೋ ಹಸರು ಮಾಡಿ ಹಚ್ಚುತ್ತಾರೆ. ಅರ್ಧಲೆನೋವಿಗೆ ಯಾವ್ದೊಗಿಡದ ರಸ ಹಿಂಡ್ತರೆ'. ಗ್ರಾಮೀಣ ಭಾಗದಲ್ಲಿ ಔಷಧಿ ಕೊಡುವ ಕ್ರಿಯೆಯನ್ನು ಈ ಮೊದಲಾದ ರೀತಿಯಲ್ಲಿ ಕರೆಯುತ್ತಾರೆ. ಇಲ್ಲಿ ಗಿಡ ಎಂಬ ನಾಮಪದಕ್ಕೆ ಹಚ್ಚು, ಕೊಡು, ಕಟ್ಟು, ಹಿಂಡು, ಹುಯ್ಯು, ಅರೆದು, ತೇದು, ಕುಡಿಸು ಎಂಬ ಕ್ರಿಯಾಪದಗಳು ಸೇರಿ ಔಷಧಿ ಕೊಡುವುದನ್ನು ತಿಳಿಸುತ್ತವೆ.

ಆ. 2.1 ಸಕಾಲಿಕ ವೈದ್ಯೋಪಚಾರ : ಯಾವುದೇ ಕಾಯಿಲೆ ಬಂದಾಗ ಅದು ಮಿತಿಮೀರುವ ಮೊದಲೇ ವೈದ್ಯರ ಬಳಿಗೆ ಹೋಗುವುದು ಕ್ಷೇಮವಾದುದು. ವೈದ್ಯರೂ ಇದನ್ನೇ ಬಯಸುತ್ತಾರೆ. ಹೀಗಿದ್ದರೂ ಅವಧಿ ಮೀರಿ ಬರುವವರಿದ್ದಾರೆ, ಅಂಥವರಿಗೆ ನಮ್ಮಿಂದ ಆಗುವುದಿಲ್ಲ ಎಂದು ನಿಷ್ಠುರವಾಗಿ ಹೇಳುವ ವೈದ್ಯರೂ ಇದ್ದಾರೆ. ಆದರೂ ರೋಗಿಯ ಕಡೆಯವರು ಅಷ್ಟಕ್ಕೇ ಸುಮ್ಮನೆ ಆಗುವುದಿಲ್ಲ. ಗಿಡವನ್ನು ಕೊಡಲೇ ಬೇಕೆಂದು ಒತ್ತಾಯಪಡಿಸುತ್ತಾರೆ. ಆ ವೇಳೆಯಲ್ಲಿ ನಿರ್ವಾಹವಿಲ್ಲದೆ ದೇವರು ಮತ್ತು ವಿದ್ಯೆ ಕಲಿಸಿದ ಗುರುವಿನ ಮೇಲೆ ಭಾರಹಾಕಿ ಗಿಡಕೊಡಲು ವೈದ್ಯರು ನಿಶ್ಚಯಿಸುತ್ತಾರೆ. ಅವಧಿ ಮೀರಿದ ಮತ್ತು ಇತರ ಸಂದರ್ಭದಲ್ಲಿನ ಕಾಯಿಲೆಗಳಿಗೆ ಮಾಡುವ ವೈದ್ಯೋಪಚಾರದ ಸಾಧ್ಯತೆಗಳನ್ನು ಈಗ ನೋಡಬಹುದು. 'ಜಾಂಡಿಸ್ ಕಾಯಿಲೆ ಮಿತಿಮೀರಿ ಆಸ್ಪತ್ರೆಯಲ್ಲೂ ವಾಸಿಯಾಗಲಿಲ್ಲ, ಹೀಗಿದ್ದರೂ ರೋಗಿ ಕಡೆಯವರ ಒತ್ತಾಯಕ್ಕೆ ಗಿಡಕೊಟ್ಟೆ, ಆಮೇಲೆ ರೋಗಿ ಆರು ವರ್ಷಗಳವರೆಗೆ ಬದುಕಿದ್ದಳು.'(116) ಮೇಲಿನ ಘಟನೆಯಲ್ಲಿ ಔಷಧಿಕೊಡುವಂತೆ ರೋಗಿಯ ಕಡೆಯವರು ಒತ್ತಾಯಿಸುತ್ತಾರೆ. ಪರಿಣಾಮ ರೋಗಿಗೆ ಅನುಕೂಲವೇ ಆಗಿದೆ.

"ಮೂರು ತಿಂಗಳ ಒಳಗೆ ಇದ್ದರೆ ಮಾತ್ರ ಗರ್ಭಪಾತಕ್ಕೆ ಔಷಧಿಯನ್ನು ಕೊಡುತ್ತೇನೆ. ಅದರ ಮೇಲೆ ಬಂದ್ರೆ ಆಸ್ಪತ್ರೆ ಎಂದು ಬಿಡುತ್ತೇನೆ."(26) "ದನದ ಕಣ್ಣು ಬೆಳ್ಳಗಾದ ಒಂದು ವಾರದೊಳಗೆ ಬರಬೇಕು. ಆಗ ಬೆಳ್ಳಗಾಗಿರುವ ಕಣ್ಣಿನ ವಿರುದ್ಧ ದಿಕ್ಕಿನ ಕಿವಿಯಲ್ಲಿ ತೊಂಡೆ ಸೊಪ್ಪಿನ ರಸಕ್ಕೆ ಒಂದು ಉಪ್ಪಿನ ಹಳ್ಳನ್ನು ಸೇರಿಸಿ ಹಿಂಡುತ್ತೇನೆ. ವಾರ ಮೀರಿದರೆ ಈ ಔಷಧಿ ಕೆಲ್ಸ ಮಾಡೊಲ್ಲ'.(95)

ಈ ಎರಡೂ ಘಟನೆಗಳಲ್ಲಿ ನಿರ್ದಿಷ್ಟ ಹಂತದಲ್ಲಿ ಗಿಡಕೊಟ್ಟರೆ ರೋಗ ವಾಸಿಯಾಗುತ್ತದೆ. ಆ ಅವಧಿ ಮೀರಿದಾಗ ತಮ್ಮಿಂದ ಸಾಧ್ಯವಾಗುವುದಿಲ್ಲ ಎಂಬುದನ್ನು ವೈದ್ಯರು ಮನಗಂಡಿರುತ್ತಾರೆ. ಹೊತ್ತು ಹೋಗದ ಮುನ್ನ ರೋಗಿ ಬಂದರೆ ವೈದ್ಯರು ತುಂಬ ಖುಷಿಪಡುತ್ತಾರೆ. ಹೂತ್ತು ಮೀರಿ ಬಂದಾಗ ಚಿಂತೆಗೆ ಬೀಳುತ್ತಾರೆ. ಅಂದರೆ, ಗಿಡ ಕೊಡುವ ಬಗ್ಗೆ ಯೋಚಿಸುತ್ತಾರೆ. ಈ ಕಾರಣದಿಂದಾಗಿಯೇ ಗುರುಪರಂಪರೆಯಲ್ಲಿ ಅವಧಿಗೆ ಮುನ್ನ ವೈದ್ಯ ಮಾಡುವುದನ್ನು ಕುರಿತಾಗಿ ಒತ್ತುಕೊಟ್ಟು ಹೇಳಲಾಗಿರುತ್ತದೆ.

2.2 ಗಿಡಗಳ ಶಕ್ತಿಯಲ್ಲಿ ವಿಶ್ವಾಸ : ಔಷಧಿಗೆ ಬಳಸುವ ಗಿಡಗಳ ಮೇಲೆ ವೈದ್ಯರಿಗೆ ಪ್ರೀತಿ, ಗೌರವ ಮತ್ತು ವಿಶ್ವಾಸವಿರುತ್ತದೆ. ಪರಿಣಾಮವಾಗಿ ಕೆಲವರು ಯಾವ ಕಾಯಿಲೆಗೆ ಯಾವ ಗಿಡವನ್ನು ಬಳಸಿದರೆ ರೋಗ ಗುಣವಾಗುತ್ತದೆ ಎಂಬುದನ್ನು ಮನಗಂಡಿರುತ್ತಾರೆ. ಇನ್ನೂ ಕೆಲವರು ಪಂಥವನ್ನು ಕಟ್ಟಿಯಾದರೂ ಕಾಯಿಲೆಯನ್ನು ಗುಣಪಡಿಸುವಷ್ಟು ಅದಮ್ಯ ವಿಶ್ವಾಸವನ್ನು ಹೊಂದಿರುತ್ತಾರೆ. ಇಂತಹ ವಿಶ್ವಾಸ ಹುಟ್ಟುವುದು ಗಿಡಗಳ ಶಕ್ತಿಯ ಅರಿವಿದ್ದಾಗ ಮಾತ್ರ.

'ನಮ್ಮೂರಿನ ಸರ್ಕಾರಿ ಶಾಲೆಗೆ ಒಬ್ಬ ಶಿಕ್ಷಕಿ ಬರುತ್ತಿದ್ರು. ಅವರು ಯಾವಾಗ್ಲೂ ತಮ್ಮ ತಲೆಗೆ ಕರವಸ್ತ್ರ ಕಟ್ಟಿರುತ್ತಿದ್ರು. ಒಂದು ದಿವಸ ಹೋಟಲ್ ಮನೆಯಲ್ಲಿ ಟೀ ಕುಡಿಯುತ್ತಿದ್ದೆ, ಆ ವೇಳೆ ಆಯಮ್ಮ ಶಾಲೆಗೆ ಹೋಗುತ್ತಿತ್ತು, 'ಯಾಕೆ ಆ ಟೀಚರ್ ತಲೆಗೆ ಬಟ್ಟೆ ಕಟ್ಟಿರ್ತಾರೆ' ಎಂದೆ. ಅದಕ್ಕೆ ಅಲ್ಲಿದ್ದವರು 'ತಲೆ ಕೂದಲು ಉದುರಿ ಹೋಗಿವೆಯಂತೆ' ಎಂದರು. ಆಗ ನಾನು 'ಒಂದು ತೊಲ ಬಂಗಾರ ಕೊಟ್ಟರೆ ಕೂದಲು ಬರಂಗೆ ಮಾಡ್ತಿನಿ' ಎಂದೆ. ಅದನ್ನು ಯಾರೋ ಟೀಚರ್‌ಗೆ ಹೇಳಿದಾಗ 'ಹೆ! ಹೋಗ್ರಿ ನಾವು ಬೆಂಗ್ಳೂರು ಮಣಿಪಾಲ ಆಸ್ಪತ್ರೆಯಲ್ಲಿ ತೋರಿಸುತ್ತಿದ್ದೇವೆ' ಎಂದರಂತೆ. ಅಂಗೆ ಹೇಳಿದ್ದನ್ನು ಕೇಳಿದ ನಾನು ಸುಮ್ನೆ ಆದೆ. ಕೆಲವು ತಿಂಗಳುಗಳ ಮೇಲೆ ಆಯಮ್ಮ ಯಾರೋ ಜೊತೆಯಲ್ಲಿ 'ಆ ವಜ್ಜ ಕೇಳಿದ ಒಂದು ತೊಲ ಬಂಗಾರ ಕೊಡ್ತಿನಿ ಕೂದಲು ಬರೋ ಔಷಧಿ ಕೊಡುತ್ತೇನು ಕೇಳಿ' ಎಂದಿತು. ಅವರು ಬಂದು ನನಗೆ ಹೇಳಿದರು. ಆಗ ನಾನು ಕಿರುನಲ್ಲಿ ಸೊಪ್ಪು, ದತ್ತೂರಿ ಸೊಪ್ಪು, ಕುಪ್ಪೆಸೊಪ್ಪು, ಹರದಾಳ, ಗಂಧಕ ಇವನ್ನೆಲ್ಲ ಅರೆದು ನಿಂಬೆ ಹುಳಿಯಲ್ಲಿ ಐದಿನೈದು ದಿವಸ ಹಚ್ಚಿದೆ ಕೂದಲು ಬಂದವು. ಕೊಟ್ಟಮಾತಿನಂತೆ ಮೊಣಕಾಲ್ಮೂರಿಗೆ ನನ್ನ ಕರಕೊಂಡು ಹೋಗಿ ಒಂದು ತೊಲದ ಉಂಗುರ ಮಾಡಿಸಿಕೊಟ್ಟರು'(32).

'ಪಕ್ಕದ ಊರಿನ ಒಂದು ಎತ್ತಿಗೆ ರಕ್ತ ಭೇದಿ ಹಿಡಿದಿತ್ತು. ವೆಟರ್ನರಿ ಡಾಕ್ಟ್ರು ಮೂರುದಿನಗಟ್ಲೆ ಗ್ಲೂಕೊಸ್ ಹಾಕಿದ್ರೂ ರಕ್ತಭೇದಿ ಕಡಿಮೆಯಾಗಿರಲಿಲ್ಲ. ಹೋರಿ ಉಳಿಯುವ ಆಸೆ ಕಡಿಮೆಯಾಗಿತ್ತು. ಇಂಥಾ ವೇಳೆಯಲ್ಲಿ ಎತ್ತಿನ ಒಡೆಯರು ಬೈಕ್ ತಂದು ನನ್ನನ್ನು ಕರೆದೊಯ್ದರು. ಆಗ ಹೋರಿಯನ್ನು ಗಮನಿಸಿದ ನಾನು ಕೂಡಲೇ ಅವರೆ ಬೇಳೆ ನೆನೆಹಾಕಿ ಬಿಲ್ವಪತ್ರೆ ಎಲೆ, ಕೋಲಣ್ಣೆ ಬೇರು ಸಂಗ್ರಹಿಸಿದೆ. ನಂತರ ಇವನ್ನೆಲ್ಲ ರುಬ್ಬಿ ಐದು ಲೀಟರ್ ಮಜ್ಜಿಗೆಯಲ್ಲಿ ಕಲಸಿ ಗೊಟ್ಟದಲ್ಲಿ ಎತ್ತಿದೆ, ಹೋರಿ ಒಂದೇ ದಿನಕ್ಕೆ ಎದ್ದು ನಿಂತಿತು'(45).

ಮೇಲಿನ ಘಟನೆಗಳಲ್ಲಿ ಔಷಧಿಯನ್ನು ಕೊಡಲು ಅನುಮಾನ ಪಡುವ ಪ್ರಸಂಗವೇ ಬರುವುದಿಲ್ಲ. ಯಾಕೆಂದರೆ ರೋಗವನ್ನು ಗುಣಪಡಿಸುವ ಸಾಧ್ಯತೆಯನ್ನು ವೈದ್ಯರು ತಿಳಿದಿದ್ದಾರೆ. ಅದರಂತೆ ಸಾಧಿಸುವ ಛಲವೂ ಅವರಲ್ಲಿರುತ್ತದೆ. ಇದಕ್ಕೆ ಕಾರಣ ಇಂಥ ಗಿಡದಿಂದ ಈ ರೀತಿಯ ಸಮಸ್ಯೆಯನ್ನು ಬಗೆಹರಿಸಬಲ್ಲೆನೆಂಬ ವಿಶ್ವಾಸ ವೈದ್ಯರಿಗಿರುತ್ತದೆ. ಕೆಲವು ಸಂದರ್ಭಗಳಲ್ಲಿ ವೈದ್ಯರಿಗೆ ಅರಿಯದ ಕಾಯಿಲೆಗಳಿದ್ದಾಗ ಮತ್ತು ಸಮಯಕ್ಕೊದಗದ ಔಷಧೀಯ ಪರಿಕರಗಳ ಅಭಾವ ಎದುರಾದಾಗ ಗಿಡ ಕೊಡುವ ಸಾಧ್ಯತೆಯನ್ನು ಕುರಿತು ಯೋಚಿಸುತ್ತಾರೆ. ಇಂತಹ ಸಂದರ್ಭದಲ್ಲಿ ವೈದ್ಯರ ಅನುಭವವನ್ನು ಒರೆಗಲ್ಲಿಗೆ ಹಚ್ಚುವ ಪ್ರಸಂಗವೂ ಬರುತ್ತದೆ.

ಆ. 3 ಮುರಿತ : ಮುರಿ ಎಂದರೆ ತುಂಡರಿಸು, ಒಡೆ, ಹಾಳಾಗು, ಮುಗಿಸು ಎಂಬ ಅರ್ಥವನ್ನು 'ಕನ್ನಡ ಜಾನಪದ ಕೋಶ'ದಲ್ಲಿ ಕೊಡಲಾಗಿದೆ. ಜನಪದ ವೈದ್ಯದಲ್ಲಿ ಮುರಿತವೆಂದರೆ; ತಡೆಯುವುದು, ಒಡೆಯುವುದು, ನಿಯಂತ್ರಿಸುವುದು ಮತ್ತು ನಿವಾರಿಸುವುದು ಎಂಬರ್ಥದಲ್ಲಿ ಬಳಕೆಯಾಗುತ್ತದೆ. ಯಾವುದೇ ಗಿಡಮೂಲಿಕೆಯ ಸೇವನೆಯಿಂದ ಅಡ್ಡಪರಿಣಾಮ ಉಂಟಾದರೆ ಅದನ್ನು ಉಪಶಮನಗೊಳಿಸುವ ವಿಧಾನಕ್ಕೆ ಜನಪದರು ಮುರಿತ ಎಂದು ಕರೆಯುತ್ತಾರೆ. ಹಾಗೆಯೇ ಸೇವಿಸಿದ ಔಷಧಿಯನ್ನು ಕೆಡಿಸಬೇಕೆಂದಾಗಲೂ ಈ ಮುರಿತದ ಗಿಡವನ್ನು ಕೊಡುತ್ತಾರೆ. ವೈದ್ಯನಾದವನಿಗೆ ಮುರಿತ ಮಾಡುವುದು ತಿಳಿದಿರಲೇ ಬೇಕೆಂಬುದು ಅನುಭವಿಗಳ ಅಭಿಮತವಾಗಿದೆ. ಎಲ್ಲಾ ವೈದ್ಯರೂ ಇದನ್ನು ಅರಿತಿರುತ್ತಾರೆ. ಎಂದು ಹೇಳಲಾಗದಿದ್ದರೂ ಕೆಲವರಾದರೂ ತಿಳಿದಿರುತ್ತಾರೆ ಎಂದು ಹೇಳಬಹುದು. ಸುಶ್ರುತ ಸಂಹಿತೆಯಲ್ಲಿ ಅಡ್ಡಪರಿಣಾಮಗಳನ್ನು ನಿವಾರಿಸುವುದು ವೈದ್ಯನಾದವನ ಹೊಣೆಯಾಗಿರುತ್ತದೆ ಎಂದು ಹೇಳಲಾಗಿದೆ.

ಕೆಲವು ವೈದ್ಯರು ಯಾವುದೇ ಔಷಧಿಯನ್ನು ಕೊಡುವ ಮೊದಲು ಈ ಮುರಿತದ ಗಿಡವನ್ನು ರೋಗಿಗೆ ತಿನ್ನಿಸಿ ನಂತರ ಔಷಧವನ್ನು ಕೊಡುತ್ತಾರೆ. ಹೀಗೆ ಮಾಡುವುದರಿಂದ ದೇಹಕ್ಕೆ ಔಷಧ ಚೆನ್ನಾಗಿ ಹಿಡಿಯುತ್ತದೆ ಮತ್ತು ಯಾವುದೇ ದೋಷ ಉಂಟಾಗುವುದಿಲ್ಲವೆಂದು ಭಾವಿಸುತ್ತಾರೆ. "ಇಂಜಕ್ಷನ್ ಅಥವಾ ಮಾತ್ರೆ ತೆಗೊಂಡಿದ್ದವರು ನನ್ನ ಬಳಿ ಔಷಧಿಗೆ ಬಂದಾಗ ಮೊದಲು ಕಿರುಕುಸಾಲೆ ಬೇರನ್ನು ಜಗಿಸುತ್ತೇನೆ, ಅಲ್ಲಿಗೇ ಅವುಗಳ ಪವರ್ ಹೊರಟೋಗುತ್ತೆ. ಆಮೇಲೆ ನಮ್ಮ ಔಷಧಿ ಕೊಡ್ತೇನೆ."(74)

ಪಥ್ಯದ ದಿನಗಳ ಕೊನೆಯಲ್ಲಿ ಪಥ್ಯವನ್ನು ಕೆಡಿಸಲು ಮುರಿತದ ಗಿಡವನ್ನು ಕೊಡುತ್ತಾರೆ. ಇದರಿಂದ ಪಥ್ಯದ ಆಹಾರ ಮತ್ತು ಇತರ ಆಹಾರದ ನಡುವೆ ವ್ಯತ್ಯಾಸವಾಗದಂತೆ ಇದು ಸಮತೋಲನವನ್ನು ಕಾಯ್ದುಕೊಳ್ಳುತ್ತದೆ ಎಂದು ವೈದ್ಯರು ಹೇಳುತ್ತಾರೆ. "ಈ ಸರ್ವಲಿಂಗನ ಬೇರಿದೆಯಲ್ಲ ಅದು ಗಿಡಗಳರಾಜ; ಯಜಮಾನ ಎಂದರೂ ತಪ್ಪಲ್ಲ. ಯಾವುದೇ ಔಷಧದಿಂದ ಅನಾಹುತ ಆಗಿದ್ದರೂ ಇದರ ಬೇರನ್ನು ಜಗಿಸಿದರೆ ಆ ತೊಂದರೆ ನಿವಾರಣೆಯಾಗುತ್ತದೆ. ಮಕ್ಕಳ ಫಲಕ್ಕೆ ಒಡವಿನ ತೊಪ್ಪಲು, ಮೆಣಸು, ಬೆಳ್ಳುಳ್ಳಿಗಳನ್ನು ಅರೆದು ಮುಟ್ಟಾದ ನಂತರದ ಮೂರು ದಿನ ಬೆಳಗ್ಗೆ ಕುಡಿಸುತ್ತೇನೆ. ಅದಕ್ಕೆ ಮೂರು ದಿನ ಪಥ್ಯ ಇರಬೇಕು. ಮೂರು ದಿನದ ನಂತರ ಪಥ್ಯಬಿಡುವಾಗ ಸರ್ವಲಿಂಗನ ಬೇರಿನ ರಸವನ್ನು ಕುಡಿದರೆ ಪಥ್ಯಕೆಡಿಸಿದಂತೆ"(64). ಇದೇ ವೈದ್ಯರು ಹಾವಿನ ವಿಷಕ್ಕೆ ಔಷಧಿಯನ್ನು ಕೊಟ್ಟು ಮೂರು ದಿನದ ನಂತರ ಪಥ್ಯಕೆಡಿಸಲು ಎಕ್ಕೆ ಎಲೆಯನ್ನು ತೊಳೆದ ನೀರನ್ನು ಕುಡಿಯಲು ಕೊಡುತ್ತಾರೆ. ಇಲ್ಲಿ ಮುರಿತಕ್ಕೆ ಕೊಡುವ ಗಿಡ ಭಿನ್ನವಾಗಿದೆ. ಇದಕ್ಕೆ ಕಾರಣ ರೋಗವಾಗಿರಬಹುದು ಅಥವಾ ಅದಕ್ಕಾಗಿ ಉಪಯೋಗಿಸಿದ ವಿವಿಧ ಬಗೆಯ ಗಿಡಗಳಾಗಿರಬಹುದು.

ತಾವು ಕೊಟ್ಟ ಔಷಧದಿಂದ ಅಡ್ಡಪರಿಣಾಮವುಂಟಾದಾಗ ಪಲಾಯನ ಮಾಡುವ ಅರೆಬರೆವೈದ್ಯರೂ ಇದ್ದಾರೆ. ಆದರೆ ನಿಜವಾದ ವೈದ್ಯ ಅದನ್ನು ಸಮರ್ಥವಾಗಿ ಎದುರಿಸುತ್ತಾನೆ. "ನಾನು ಯಾವುದೋ ಗಿಡಕೊಟ್ಟು ಹೆಚ್ಚು ಕಡಿಮೆ ಆದಾಗ ನನ್ನಿಂದ ಆಗೊಲ್ಲ ಡಾಕ್ಟ್ರ ಹತ್ತಿರ ಹೋಗಿ ಎಂದು ಕೈತೊಳೆದು ಕೊಳ್ಳುವುದಿಲ್ಲ. ನಾನು ಇದ್ದೇನೆ ಇನ್ನೊಂದು ಗಿಡ ಕೊಟ್ಟು ಸರಿ ಮಾಡ್ತೇನೆ ಎಂದು ಹೇಳಿ ಅದರಂತೆ ಗುಣಮಾಡುತ್ತೇನೆ". (24) ಮುರಿತಕ್ಕೆ ಬಹುತೇಕ ವೈದ್ಯರು ಕಿರುಕುಸಾಲೆ ಬೇರನ್ನು ಬಳಸುತ್ತಾರೆ. ಅದೂ ಗೊತ್ತಿಲ್ಲದವರು ಏಲಕ್ಕಿಯನ್ನು ತಿನ್ನಲು ಕೊಡುತ್ತಾರೆ.

ಆ. 3.1 ಇಳಿಕೆ : ಇಳಿಕೆ ಎಂದರೆ, ಇಳಿಸುವುದು, ಇಳಿಸಿಕೊಳ್ಳುವುದು, ಶಾಂತಿ ಮಾಡುವುದು ಎಂದರ್ಥ. ಮುರಿತಕ್ಕಿಂತಲೂ ಭಿನ್ನವಾದ ಅರ್ಥದಲ್ಲಿ ಇದರ ಬಳಕೆಯಿದೆ. ಯಾರಾದರೂ ಕೆಡುಕರು, ಅಂದರೆ, ವಾಮವಿದ್ಯೆಯನ್ನು ಬಲ್ಲವರು ಮನುಷ್ಯರಿಗೋ, ಜಾನುವಾರುಗಳಿಗೋ ಅಥವಾ ಮನೆ, ಹೊಲಗಳಿಗೋ ಏನಾದರೂ ಕೆಟ್ಟದ್ದನ್ನು ಮಾಡಿಸಿದ್ದರೆ ಅಂತಹುದನ್ನು ನಿರ್ಮೂಲಗೊಳಿಸುವ ಕ್ರಿಯೆಗೆ ಇಳಿಸುವುದು ಎಂದು ಜನಪದ ವೈದ್ಯರು ಕರೆಯುತ್ತಾರೆ. ಮಾಟ-ಮಂತ್ರ ಮಾಡಿದ್ದನ್ನು ಉಲ್ಬಣಗೊಳಿಸುವುದು ಏರಿಕೆಯಾದರೆ ಅದನ್ನು ಇಳಿಸುವುದು ಇಳಿಕೆಯಾಗುತ್ತದೆ. ಇಳಿಕೆ ಮಾಡಬಲ್ಲ ವೈದ್ಯನೇ ಏರಿಕೆಯನ್ನೂ ತಿಳಿದಿರುತ್ತಾನೆ. ಇಳಿಸುವ ವಿಧಾನದ ವಿವರಣೆ ಹೀಗಿದೆ: 'ಎತ್ತು, ಕುರಿ, ಮೇಕೆಗಳಿಗೆ ಮಾಟ ಮಾಡಿಸಿದ್ದರೆ, ಪಿತೇಪಿಸೊಪ್ಪ, ಬನ್ನಿಸೊಪ್ಪು, ಸಿಲಕೇಸರಿಸೊಪ್ಪು, ಅಮ್ಮನ ಪತ್ರೆ, ಸಿಟ್ಗೋವಿಸೊಪ್ಪು ಇವನ್ನೆಲ್ಲ ಆತ್ಮಶುದ್ಧಿಯಿಂದ ಸಂಗ್ರಹಿಸಿ, ಕುಟ್ಟಿ ಗೋಮೂತ್ರದಲ್ಲಿ ಹಟ್ಟಿಯ ಸುತ್ತ ಚಲ್ಲಿದರೆ ಇಳುವು ಆಗುತ್ತದೆ'. (200) 'ಗಾಳಿಸೋಕಿದ್ದರೆ ರಂಗ ಹತ್ತಿಸಿ ನೀರನ್ನು ಮಂತ್ರಿಸಿ ಹಾಕಿ ದೆವ್ವಪೀಡೆಗಳನ್ನೆಲ್ಲ ಗದುಮುತ್ತೇನೆ(ಓಡಿಸುತ್ತೇನೆ), ಮನೆ, ಹೊಲಗಳಿಗೆ ಮಾಟ ಮಾಡಿಸಿದ್ದರೆ ದಿಗ್ಬಂಧನ ಮಾಡುತ್ತೇನೆ.' (72)

ಮೇಲಿನ ವಿವರಣೆಯಲ್ಲಿ ಇಳಿಕೆ ಮಾಡುವ ವಿಧಾನ ಗಿಡಮೂಲಿಕೆಗಳಿಂದ ಕೂಡಿರುವಂತಹುದು. ಕೆಲವು ವೈದ್ಯರು ಇಳಿಕೆ ಮಾಡುವುದಕ್ಕೆ ದಿಗ್ಬಂಧನ ಮಾಡುವುದು. ಕಟ್ಟುಮಾಡುವುದು ಎಂದೂ ಸಹ ಕರೆಯುತ್ತಾರೆ. ಆದರೆ ಇಳಿಕೆ ಮಾಡುವ ಕ್ರಮ ಆ ಎರಡು ಕ್ರಮಗಳಿಗಿಂತಲೂ ಭಿನ್ನವಾದುದು. ಇಳಿಕೆ ಮಾಡಲು; ಗಿಡಗಳು, ಗಲ್ಲೆನೀರು, ದೇವಿಯ ಪತ್ರೆ ಅಥವಾ ಭಂಡಾರ, ನಿಂಬೆಹಣ್ಣು, ಗೋಮೂತ್ರ ಮುಂತಾದವನ್ನು ಮಂತ್ರ ಇಲ್ಲಿದೆಯೇ ಬಳಸುವ ಉದಾಹರಣೆಗಳಿವೆ. ದಿಗ್ಬಂಧನ ಮತ್ತು ಕಟ್ಟುಮಾಡಲು ಗಿಡಮೂಲಿಕೆಗಳ ಬಳಕೆ ಇದ್ದರೂ ಮಂತ್ರಗಳು ಪ್ರಧಾನವಾಗಿರುತ್ತವೆ. ಇಳಿಕೆ ಮಾಡುವ ಉದ್ದೇಶವೇ ಒಳ್ಳೆಯದಾಗ ಬೇಕೆಂಬುದಾಗಿರುತ್ತದೆ. ಆದರೆ ಕಟ್ಟು ಮತ್ತು ದಿಗ್ಭಂಧನಗಳನ್ನು ಒಳ್ಳೆಯದಲ್ಲದ ಕಾರ್ಯಕ್ಕೂ ಮಾಡಲಾಗುತ್ತದೆ.

ಗಿಡಮೂಲಿಕೆಗಳಿಂದ ಉಂಟಾದ ಸಮಸ್ಯೆಗೆ ಗಿಡಮೂಲಿಕೆಗಳಿಂದಲೇ ಪರಿಹಾರವನ್ನು ಕಂಡುಕೊಳ್ಳುವುದು ಜನಪದ ವೈದ್ಯದ ವೈಶಿಷ್ಟ್ಯವೆಂದೇ ಹೇಳಬೇಕು. ಇಳಿಕೆಯು ಮುರಿತಕ್ಕಿಂತಲೂ

ಭಿನ್ನವಾದುದು ಮತ್ತು ಸಂಕೀರ್ಣವಾದುದು. ಯಾಕೆಂದರೆ ಅಲ್ಲಿ ಕೆಲವೊಮ್ಮೆ ಮಂತ್ರಗಳ ಬಳಕೆಯೂ ಆಗುತ್ತದೆ. ಗುರುಮುಖೇನ ಅದನ್ನು ಆರ್ಜಿಸಿಕೊಳ್ಳಬೇಕೆಂದು ವೈದ್ಯರು ಹೇಳುತ್ತಾರೆ. ಅದೇನೆ ಇರಲಿ, ಇಳಿಕೆಯನ್ನು ಬರಿ ಗಿಡಗಳಿಂದಲೇ ಮಾಡುವ ಉದಾಹರಣೆಗಳಿವೆ. ಇದು ಗಿಡಗಳ ಮಹತ್ವವನ್ನು ಹೆಚ್ಚಿಸುವಂತಹುದಾಗಿದೆ. ಮುರಿತ ದೈಹಿಕವಾಗಿ ಕೆಲಸ ಮಾಡಿದರೆ, ಇಳಿಕೆ ಮಾನಸಿಕವಾಗಿ ಕೆಲಸ ಮಾಡುತ್ತದೆ ಎಂದು ಹೇಳಬಹುದೇನೋ!

ಆ. 4 ಕೈಗುಣ ಎಂದರೇನು : ಕೈಗುಣ ಎನ್ನುವುದು ಶಿಸ್ತುಬದ್ಧವಾದ ವೈದ್ಯೋಪಚಾರಕ್ಕೆ ಹೇಳುವ ಪದವಾಗಿದೆ. ಇದರ ಸಂಸ್ಕೃತದ ಹೆಸರುಗಳು : ಹಸ್ತಗುಣ, ಹಸ್ತಶುದ್ಧಿ, ಶುದ್ಧಹಸ್ತ ಇತ್ಯಾದಿ. ಕೈಗುಣ ಎಂದರೆ, ರೋಗವನ್ನು ನಿಖರವಾಗಿ ಗುರುತಿಸುವುದು, ಅದಕ್ಕೆ ಸೂಕ್ತವಾದ ಗಿಡವನ್ನು ಆಯ್ಕೆಮಾಡುವುದು. ಗಿಡದ ಯಾವ ಭಾಗವನ್ನು ಮತ್ತು ಎಷ್ಟು ಪ್ರಮಾಣದಲ್ಲಿ ಬಳಸಬೇಕೆಂಬುದರ ಅರಿವು, ತಯಾರಿಸುವ ಕ್ರಮ, ಸೇವನೆಯ ಸಮಯ ಮತ್ತು ಅವಧಿ, ಪಥ್ಯಾಪಥ್ಯಗಳ ವಿಚಾರವನ್ನು ತಿಳಿದಿರುವುದು ಈ ಮೊದಲಾದವುಗಳಲ್ಲಿ ಅನುಭವವನ್ನು ಪಡೆದು ಯಾರು ಶ್ರದ್ಧಾಭಕ್ತಿಗಳಿಂದ ವೈದ್ಯವನ್ನು ಮಾಡುವರೋ ಅವರ ವೈದ್ಯ ಫಲಕಾರಿಯಾಗುವ ಸಂಭವವೇ ಹೆಚ್ಚಾಗಿರುತ್ತದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ರೋಗವನ್ನು ಖಚಿತವಾಗಿ ಗುರುತಿಸುವುದರಲ್ಲಿ ಮತ್ತು ಅದಕ್ಕೆ ತಕ್ಕ ಔಷಧಿಯನ್ನು ನಿರ್ಧರಿಸುವುದರಲ್ಲಿಯೇ ಕೈಗುಣದ ಮಹತ್ವ ಅಡಗಿದೆ. ಇದನ್ನು ಹೊರತುಪಡಿಸಿ ಬೇರೆ ಯಾವುದೇ ಚಮತ್ಕಾರ ಕೈಗುಣದಲ್ಲಿ ಇಲ್ಲ.

ವೈದ್ಯನ ಔದರ್ಯ, ಧೈರ್ಯ ಮತ್ತು ಪರೀಕ್ಷಕ ಗುಣಗಳು ವೈದ್ಯೋಪಚಾರದಲ್ಲಿ ಬಹಳ ಮುಖ್ಯವಾಗುತ್ತವೆ. ಇವುಗಳ ಇರುವಿಕೆಯನ್ನು ಸೂಚಿಸುವುದೇ ಕೈಗುಣ ಎಂದು ಅರ್ಥೈಸಬಹುದು. ಬಹುಶಃ ಇದಕ್ಕಾಗಿಯೇ 'ವೈದ್ಯನಿಗೆ ಸಿಂಹದ ಗುಂಡಿಗೆ, ಹೆಣ್ಣಿನಕೈ, ಹದ್ದಿನ ಕಣ್ಣು ಈ ಮೂರು ಅಗತ್ಯವಾಗಿರಬೇಕು' ಎಂಬ ಹೇಳಿಕೆಯೊಂದಿದೆ. ಇಲ್ಲವಾದರೆ 'ಭ್ರಾಂತಿ ಹಿಡಿದರೆ ವಾಂತಿಗೆ ಕೊಟ್ಟರೆ ಹೋದೀತೆ' ಎಂಬ ಗಾದೆಯಂತಾಗುತ್ತದೆ ವೈದ್ಯೋಪಚಾರ. ಜನಪದರಲ್ಲಿ ಕೆಲವರಾದರೂ ಕೈಗುಣ ಎನ್ನುವುದು ಬೇರೆನೋ ಆಗಿರದೇ ಅದು ವೈದ್ಯನ ಜಾಣ್ಮೆ ಎಂಬುದನ್ನು ತಿಳಿದವರಿದ್ದಾರೆ. ಆದರೆ ಹೆಚ್ಚಿನವರು ಅದೊಂದು ವರ, ಅದೃಷ್ಟ ಮತ್ತು ಎಲ್ಲರಿಗೂ ಅದು ಒಲಿಯುವುದಿಲ್ಲ ಎಂಬ ನಂಬಿಕೆಯನ್ನು ಇಟ್ಟುಕೊಂಡಿದ್ದಾರೆ.

ಕೈಗುಣ ಉಳ್ಳವರಲ್ಲಿ ಕೆಲವು ಲಕ್ಷಣಗಳನ್ನು ಕಾಣುವ ರೂಢಿಯಿದೆ; ಆ ವ್ಯಕ್ತಿ ಅಶ್ವಿನಿ ನಕ್ಷತ್ರದಲ್ಲಿ ಹುಟ್ಟಿದ್ದಾನೆ. ಅವನ ಅಂಗೈ ರಚನೆ ಇತರರಿಗಿಂತ ಬೇರೆ ರೀತಿಯಾಗಿದೆ; ರೇಖೆಗಳು ಭಿನ್ನವಾಗಿವೆ, ಅವು ವೈದ್ಯವಿದ್ಯೆಯ ರೇಖೆಗಳಾಗಿವೆ. ಬೆರಳು ನೀಳವಾಗಿದ್ದು ಅವುಗಳ ಕೊನೆಯಲ್ಲಿ ಆರು ಅಥವಾ ಹತ್ತು ಚಕ್ರಗಳಿವೆ ಕಾಲು ಅಥವಾ ಕೈಯಲ್ಲಿ ಆರು ಬೆರಳುಗಳಿರುವುದು ಈ ಮೊದಲಾದ ಲಕ್ಷಣಗಳಿರುವುದರಿಂದ ಅವನು ಮುಟ್ಟಿದ್ದೆಲ್ಲ ಗುಣವಾಗುತ್ತದೆ ಎಂದು ಹೇಳುವುದನ್ನು ಎಲ್ಲಾ ಭಾಗದಲ್ಲೂ ಕಾಣಬಹುದು. ಈ ಬಗೆಯ ನಂಬಿಕೆಯಿಂದಾಗಿ ಜನರು 'ಆ ವೈದ್ಯನ ಕೈಗುಣ ಚೆನ್ನಾಗಿದೆ. ಅವನಿಂದ ಔಷಧಿಯನ್ನು ಪಡೆದರೆ ನನ್ನ ಕಾಯಿಲೆ ಗುಣವಾಗುತ್ತದೆ' ಎಂಬ ನಂಬಿಕೆಯು ರೋಗವನ್ನು ಗುಣಪಡಿಸುವಲ್ಲಿ ಸಹಕಾರಿಯಾಗುತ್ತದೆ. ಅಂದರೆ, ರೋಗಿಯ ಮನಸ್ಸಿನ ಮೇಲೆ ಹೆಚ್ಚಿನ ಪರಿಣಾಮವನ್ನು ಬೀರುತ್ತದೆ. ಈ ಕೈಗುಣದ ಬಗ್ಗೆ ಜನಪದ ವೈದ್ಯರ ಅನಿಸಿಕೆಗಳನ್ನು ನೋಡುವುದಾದರೆ

'ನನ್ನ ಎರಡೂ ಕೈಗಳ ಬೆರಳುಗಳಿಂದ ಐದು ಚಕ್ರಗಳಿವೆ. ಹೀಗೆ ಇದ್ದವರು ಯಾವ ಕಾರ್ಯಕ್ಕೆ ಕೈಹಾಕಿದರೂ ಫೇಲಾಗಲ್ಲ. ಇದೊಂದು ನಶೀಬು'.(116)

'ನಮ್ಮಪ್ಪನಿಗೆ ಐದು ಜನ ಮಕ್ಕಳು ವೈದ್ಯ ಮಾಡುವುದನ್ನು ಎಲ್ಲರಿಗೂ ತೋರಿಸಿಕೊಟ್ಟ ಆದ್ರೆ ಅವರ್‍ಯಾರಿಗೂ ಇದು ಹಿಡಿಯಲಿಲ್ಲ, ನನಿಗೆ ಮಾತ್ರ ಹಿಡೀತು ಕಣ್‌ಸ್ವಾಮಿ'.(194) 'ಹಾವಿನ ವಿಷಕ್ಕೆ ನಮ್ಮ ಅಣ್ಣನ ಮಗ ಕೊಟ್ಟಾಗ ವಾಂತಿಯಾಗದಿದ್ದರೆ ನನ್ನ ಕೈಯಿಂದ ಕೊಡಿಸುತ್ತಾನೆ. ನಾನು ಕೊಟ್ಟಾಗ ವಾಂತಿಯಾಗುತ್ತದೆ. ನನ್ನ ಕೈಗುಣ ಚೆನ್ನಾಗಿದೆ ಎಂದು ಜನ ಹೇಳುತ್ತಾರೆ.' (19) 'ಹಸ್ತಗುಣದ ಮೇಲೆ ವೈದ್ಯನಿಂತಿದೆ. ಹಸ್ತಗುಣ ಅರಿದ್ರೆ; ರೋಗ ನಿದಾನ, ಗಿಡಮೂಲಿಕೆಗಳ ಪರಿಚಯ, ನಿಷ್ಠೆ, ಪ್ರಮಾಣಿಕತೆ'. (166).

ಮೇಲಿನ ಉದಾಹರಣೆಗಳಲ್ಲಿ ಕೈಗುಣ ಎಂಬುದು ಯಾರೋ ಕೆಲವರಲ್ಲಿ ಇರುವಂತಹುದು ಎಂದು ತಿಳಿಯುವುದನ್ನು ಕಾಣಬಹುದು. ಈ ನಂಬಿಕೆಯಿಂದ ವೈದ್ಯರೂ ತಮ್ಮ ಕೈಗುಣ ಚೆನ್ನಾಗಿದೆ ಎಂದು ಭ್ರಮಿಸುತ್ತಾರೆ. ತಮ್ಮ ಪ್ರಾಮಾಣಿಕತೆ ಮತ್ತು ಪರಿಶ್ರಮಗಳು ಅದಕ್ಕೆ ಕಾರಣವಾಗುತ್ತವೆ ಎಂಬ ವಾಸ್ತವವನ್ನು ಅವರು ಅರಿಯದೇ ಇರುವ ಉದಾಹರಣೆಗಳಿವೆ.

ಇ) ಜನಪದ ವೈದ್ಯದ ಸ್ವರೂಪ ಮತ್ತು ಪ್ರಕಾರಗಳು

ಜನಪದ ವೈದ್ಯ ಎನ್ನುವುದು ಗಿಡಮೂಲಿಕೆಗಳ ಔಷಧಿ, ದೇವರು ಗಿಡ ಮರ ಪ್ರಾಣಿ ಪಕ್ಷಿಗಳ ಆರಾಧನೆ, ಯಂತ್ರ-ಮಂತ್ರಗಳ ವಿಚಾರ, ನಂಬಿಕೆ ಸಂಪ್ರದಾಯ ಆಚರಣೆಗಳ ಸಂಸ್ಕೃತಿ ಈ ಮೊದಲಾದವುಗಳಿಂದ ಕೂಡಿರುವಂತಹುದು. ಇವು ದೈಹಿಕ ಮತ್ತು ಮಾನಸಿಕ ಕಾಯಿಲೆಗಳನ್ನು ಗುಣಪಡಿಸುವಲ್ಲಿ ತಮ್ಮದೇ ಆದ ಪಾತ್ರವನ್ನು ವಹಿಸುತ್ತವೆ. ಆದರೆ ಅವನ್ನು ಯಾವ ಕಾಯಿಲೆಗೆ ಹೇಗೆ ಬಳಸುತ್ತಾರೆ ಎನ್ನುವುದನ್ನು ತಿಳಿಯುವುದರಿಂದ ಜನಪದ ವೈದ್ಯದ ಸ್ವರೂಪವನ್ನು ಅರ್ಥೈಸಿಕೊಳ್ಳಲು ಸಾಧ್ಯವಿದೆ.

ನಿಸರ್ಗದತ್ತವಾದ ಉತ್ಪನ್ನಗಳನ್ನು ನಿರ್ದಿಷ್ಟ ಸಮಯ ಹಾಗೂ ಶಿಸ್ತುಬದ್ಧವಾಗಿ ಸಂಗ್ರಹಿಸಿ ಉಪಯೋಗಿಸುವುದರಿಂದ ಅವುಗಳ ಕಾರ್ಯ ಫಲಪ್ರದವಾಗುತ್ತದೆ ಎಂದು ಜನಪದರು ಭಾವಿಸಿದ್ದಾರೆ. ಅಂದರೆ, ಗಿಡಮೂಲಿಕೆಗಳನ್ನು ಸಂಗ್ರಹಿಸುವಾಗ ಮತ್ತು ಅವನ್ನು ಅರೆದು ಸೇವಿಸಲು ಕೊಡುವಾಗ ಪೂಜೆ ಮಾಡುವುದು, ಮಂತ್ರಗಳನ್ನು ಹೇಳುವುದು, ವಿಶಿಷ್ಟವಾದ ಆಚರಣೆಯನ್ನು ಮಾಡುವುದು ಈ ಮೊದಲಾದ ಚಟುವಟಿಕೆಗಳಿಂದ ಗಿಡಗಳ ಶಕ್ತಿ ಹೆಚ್ಚಿ ದೇಹಕ್ಕೆ ಔಷಧಿ ಹಿಡಿಯುತ್ತದೆ ಎಂದು ಭಾವಿಸಲಾಗುತ್ತದೆ. ಮಾನಸಿಕ ಕಾಯಿಲೆಗಳನ್ನು ಹೊಡೆದೋಡಿಸಲೂ ಈ ಬಗೆಯ ಆಚರಣೆಗಳು ನೆರವಾಗುತ್ತವೆಂದು ಹೇಳಬಹುದು. ಪ್ರಸ್ತುತ ಭಾಗದಲ್ಲಿ ಗಿಡಮೂಲಿಕೆಯ ವೈದ್ಯೋಪಚಾರದ ಸ್ವರೂಪವನ್ನು ಚರ್ಚಿಸಲಾಗುವುದು. ಇದರಲ್ಲಿಯೇ ಪೂಜೆ, ಯಂತ್ರ-ಮಂತ್ರ, ನಂಬಿಕೆ ಸಂಪ್ರದಾಯ ಆಚರಣೆಗಳು ಸಮ್ಮಿಳಿತವಾಗಿರುವುದನ್ನು ಕಾಣಬಹುದಾಗಿದೆ.

ಗಿಡಗಳ ಆಯ್ಕೆ : ರೋಗ ನಿಶ್ಚಯವಾದ ಮೇಲೆ ಯಾವ ಗಿಡವನ್ನು ಈ ರೋಗಕ್ಕೆ ಕೊಡಬೇಕೆಂದು ವೈದ್ಯರು ಯೋಚಿಸುತ್ತಾರೆ. ಅಷ್ಟುಮಾತ್ರವಲ್ಲಿ ಯಾವ ಮಣ್ಣಿನಲ್ಲಿ ಬೆಳೆದ ಗಿಡವನ್ನು ಈ ಕಾಯಿಲೆಗೆ ಬಳಸಿದರೆ ರೋಗ ಬಹುಬೇಗ ಗುಣವಾಗುತ್ತದೆ ಎಂದೂ ಯೋಚಿಸುವ ವೈದ್ಯರಿದ್ದಾರೆ. 'ಹೆಂಗಸರ ಹೊಟ್ಟೆಕುಟ್ಟಿಗೆ: ಮರಳು ಮಣ್ಣಿನಲ್ಲಿ ಬೆಳೆದ ಹೊಂಗೆ ಮರದ ಚಕ್ಕೆ(ತೊಗಟೆ)ಯನ್ನು ತೊಟ್ಟಿಲು ಬಳ್ಳಿಯಕಾಂಡದ ತೊಗಟೆ ಇವುಗಳನ್ನು ಒಂಭತ್ತು ಮೆಣಸು ಒಂಭತ್ತು ಬೆಳ್ಳುಳ್ಳಿಯೊಂದಿಗೆ ಕುಟ್ಟಿ

ಮೂರು ದಿವಸ ಕುಡಿಸುವುದು' (11) 'ಹುಳುಕಲ್ಲಿಗೆ ಸುಣ್ಣಗಟಕು ನೆಲದಲ್ಲಿರುವ ಕಿರುನಲ್ಲಿ ಗಿಡವನ್ನು ಕೊಟ್ಟರೆ ನಂಬರ್ ಒನ್ ಕೆಲ್ಸ ಮಾಡುತ್ತೆ' (8). ಹೀಗೆ ನಿರ್ದಿಷ್ಟ ಮಣ್ಣಿನಲ್ಲಿ ಬೆಳೆಯುವ ಗಿಡ, ಮರಗಳನ್ನು ಬಳಸುವುದರಿಂದ ರೋಗ ನಿಶ್ಚಿತವಾಗಿ ಗುಣವಾಗುತ್ತದೆಂದು ವೈದ್ಯರು ಹೇಳುತ್ತಾರೆ.

ಹಲವು ವೈದ್ಯರು ಕೆಲವು ಗಿಡಮೂಲಿಕೆಗಳಲ್ಲಿ ಗಂಡು ಹೆಣ್ಣುಗಳನ್ನು ಗುರುತಿಸುತ್ತಾರೆ. ಎಲೆ ಉದ್ದವಾಗಿದ್ದರೆ ಗಂಡೆಂದು; ದುಂಡಾಗಿದ್ದರೆ ಹೆಣ್ಣೆಂದು ಕರೆಯುತ್ತಾರೆ. 'ಕುಂದಲಿ ಗಡ್ಡೆಯ ಎಲೆ ದುಂಡಾಗಿದ್ದರೆ ಹೆಣ್ಣು; ಎಲೆ ಉದ್ದವಾಗಿದ್ದರೆ ಗಂಡು' (118) ಈ ಕುಂದಲಿ ಬಳ್ಳಿಯ ಎಲೆಗಳ ಆಕಾರವನ್ನು ಹೊರತು ಪಡಿಸಿದರೆ ಉಳಿದೆಲ್ಲ ಲಕ್ಷಣಗಳು ಒಂದೇ ಆಗಿರುತ್ತವೆ. ಇದೇ ರೀತಿ ಎಕ್ಕೆಯ ಗಿಡದ ಎಲೆ ದುಂಡಾಗಿದ್ದರೆ ಹೆಣ್ಣು; ಎಲೆ ಉದ್ದವಾಗಿದ್ದರೆ ಗುಂಡು ಎಂದು ನಿರ್ಧರಿಸುತ್ತಾರೆ. ಕೆಲವು ಗಿಡಗಳ ಎಲೆಗಳ ಗಾತ್ರವನ್ನು ಗಮನಿಸಿ ಗಂಡು-ಹೆಣ್ಣುಗಳನ್ನು ತಿಳಿಯುತ್ತಾರೆ. 'ಹಚ್ಚೆ(ಶ್ರೀಮುದ್ರೆ) ಗಿಡದ ಎಲೆ ದೊಡ್ಡದಾಗಿದ್ರೆ ಅದು ಹೆಣ್ಣು, ಎಲೆ ಸಣ್ಣದಾಗಿದ್ರೆ ಗಂಡು, 'ಈ ಗಂಡು ಇದೆಯಲ್ಲ ಅದು ಕೆಲ್ಸಕ್ಕೆ ಬರೊಲ್ಲ ಹೆಣ್ಣೇ ಶ್ರೇಷ್ಠ' (117) 'ಗಿಣಿಮೂತಿ ಗಡ್ಡೆ ಉದ್ದವಾಗಿದ್ದರೆ ಗಂಡು ಗಡ್ಡೆ ದುಂಡಾಗಿದ್ದರೆ ಹೆಣ್ಣು ಇವುಗಳಲ್ಲಿ ಯಾವುದಾದ್ರೂ ಔಷಧಿಗೆ ಬಳಸಬಹುದು' (108) ಇಲ್ಲಿ ವೈದ್ಯರು ಗಂಡು-ಹೆಣ್ಣುಗಳೆಂದು ಗುರುತಿಸುವುದು ಅವುಗಳ ಔಷಧೀಯ ಗುಣದಲ್ಲಿ ವ್ಯತ್ಯಾಸವಿದೆಯೇ ಎಂಬುದನ್ನು ತಿಳಿಯಬೇಕಾಗಿದೆ. ಸಾಮಾನ್ಯವಾಗಿ ಹೆಣ್ಣು ಗಿಡವನ್ನೇ ಔಷಧಿಗೆ ಬಳಸುತ್ತಾರೆ. ಈ ಬಗ್ಗೆ ಸಸ್ಯ ಶಾಸ್ತ್ರಜ್ಞರು ಹೇಳುವುದೆಂದರೆ 'ಅಂಥ ಭೇದವೇನಿಲ್ಲ ಎರಡಲ್ಲೂ ಸಾಮಾನ್ಯವಾಗಿ ಒಂದೇ ಔಷಧಿಗುಣವಿರುತ್ತದೆ'[14] ಎನ್ನುತ್ತಾರೆ. ಆದರೂ ಈ ಬಗ್ಗೆ ತಳಮಟ್ಟದ ಅಧ್ಯಯನ ನಡೆಯಬೇಕಿದೆ.

ಗಿಡ ಮರಗಳಲ್ಲಿಯ ಭೇದವನ್ನು ಗುರುತಿಸಲು ಇನ್ನೂ ಕೆಲವು ಲಕ್ಷಣಗಳನ್ನು ವೈದ್ಯರು ತಿಳಿದಿದ್ದಾರೆ. ಎಲೆ ಅಥವಾ ಕಾಂಡದ ಬಣ್ಣ ಕಪ್ಪು ಇಲ್ಲವೇ ಬಿಳಿಯಾಗಿದ್ದರೆ, ಈ ಹಿನ್ನೆಲೆಯಲ್ಲಿ ಬಿಳಿಯದು, ಕರಿಯದು ಎಂದು ಕರೆಯುತ್ತಾರೆ. ಉದಾಹರಣೆಗೆ, ಬಿಳಿಸುಪ್ಪತ್ತಿಗೆ, ಕರೆಸುಪ್ಪತ್ತಿಗೆ, ಬಿಳಿ ತೊಟ್ಟಿಲಬಳ್ಳಿ, ಕರೆ ತುಂಬೆ, ಬಿಳಿತುಂಬೆ ಇತ್ಯಾದಿ. ಊರಲ್ಲಿಯ ಗಿಡ ಮರಗಳನ್ನು ಹೋಲುವುದರಿಂದಲೋ ಅಥವಾ ಅವು ಕಾಡಲ್ಲಿ ಬೆಳೆದಿರುವುದರಿಂದಲೋ ಕಾಡು ನುಗ್ಗೆ, ಕಾಡು ಜೀರಿಗೆ, ಕಾಡು ಹುರುಳಿ, ಕಾಡು ಎಳ್ಳು, ಕಾಡು ಮೆಣಸು, ಕಾಡು ಹತ್ತಿಗಿಡ, ಕಾಡು ತೊಗರಿ ಎಂದು ಕರೆಯುತ್ತಾರೆ. ಇವುಗಳು ಊರಲ್ಲಿ

ಇರುವವುಗಳಿಗಿಂತ ಸ್ವಲ್ಪ ಗುಣ ಲಕ್ಷಣಗಳಲ್ಲಿ ವ್ಯತ್ಯಾಸವನ್ನು ಹೊಂದಿವೆ. ಆದರೆ ಇವುಗಳನ್ನೇ ಜನಪದರು ಔಷಧಿಗಾಗಿ ಬಳಸುವುದರ ಹಿಂದೆ ಯಾವುದೋ ಒಂದು ಉದ್ದೇಶ ಇದ್ದಿರಬಹುದು. ಜನ ಸಂಪರ್ಕದಿಂದ ದೂರ ಇರುವ ಇವುಗಳು ಪರಿಶುದ್ಧವಾದ ಗಾಳಿ, ನೀರು ಮತ್ತು ಮಣ್ಣುಗಳನ್ನು ಪಡೆದು ಔಷಧಿಗಾಗಿ ಬಳಸಲು ಹೆಚ್ಚು ಶಕ್ತವಾಗಿವೆ ಎಂಬ ಯೋಚನೆ ಇರಬಹುದು. ಈ ಬಗೆಯ ಕಾಡುಗಿಡಗಳನ್ನೇ ಬಳಸಿ ವಿಶೇಷವಾದ ಕಾಯಿಲೆಗಳನ್ನು ಗುಣಪಡಿಸುವವರೂ ಇದ್ದಾರೆ. ಬಹುಶಃ ಇದಕ್ಕಾಗಿ ಇರಬಹುದು ಹಳ್ಳಿವೈದ್ಯವನ್ನು ಕಾಡುಮದ್ದು, ಕಾಡು ಔಷಧಿ ಎಂದೂ ಕರೆಯುತ್ತಾರೆ.

ಗಿಡಗಳನ್ನು ಆಯ್ಕೆ ಮಾಡುವಾಗ ಅವುಗಳ ಪ್ರಾಯವನ್ನು ಗಮನಿಸುತ್ತಾರೆ. ಅಂದರೆ, ಎಳೆಯದಾದ ಅಥವಾ ತುಂಬ ಬಲಿತ ಗಿಡಮರಗಳನ್ನು ಆಯ್ಕೆ ಮಾಡುವುದಿಲ್ಲ. ಗಿಡ ಮತ್ತು ಬಳ್ಳಿಗಳನ್ನು ಹೂವು ಅರಳುವ ಮೊದಲು ಸಂಗ್ರಹಿಸುತ್ತಾರೆ. ಮರಗಳಾದರೆ ಒಳ್ಳೆಯ ಪ್ರಾಯದವನ್ನು ಆಯ್ಕೆಮಾಡಿಕೊಳ್ಳುತ್ತಾರೆ. ಉದಾಹರಣೆಗೆ, ಬೇವಿನ ಮರಕ್ಕೆ ಮೂವತ್ತು ವರ್ಷವಾಗಿದ್ದರೆ ಅದು ಪ್ರಾಯದ ಮರ ಎಂದು ಪರಗಣಿಸುತ್ತಾರೆ. ಕಳ್ಳಿ ಮರದ ಮೇಲೆ ಹಬ್ಬಿರುವ ಅಮೃತ ಬಳ್ಳಿಯನ್ನು ಔಷಧಿಗೆ ಬಳಸುವುದಿಲ್ಲ. ಬೇವಿನ ಮರಕ್ಕೆ ಹಬ್ಬಿರುವುದು ಶ್ರೇಷ್ಠವೆಂದು ಅದನ್ನೇ ಆಯ್ಕೆಮಾಡಿಕೊಳ್ಳುತ್ತಾರೆ. ಇದರಂತೆ ಬೇವಿನ ಮರದಲ್ಲಿರುವ ಈಶ್ವರಿ ಬಳ್ಳಿಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ ಹೀಗೆ ಜನಪದರ ಗಿಡಗಳ ಆಯ್ಕೆಯ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಗಿಡ ಸಂಗ್ರಹಿಸುವ ವಿಧಾನ : ಆಯಾ ಋತುಮಾನಗಳಲ್ಲಿ ಲಭ್ಯವಿರುವ ಗಿಡಗಳನ್ನು ಆ ಸಮಯದಲ್ಲಿಯೇ ಸಂಗ್ರಹಿಸಿ ನೆರಳಲ್ಲಿ ಒಣಗಿಸಿ ಬಟ್ಟೆಯ ಗಂಟುಗಳಲ್ಲಿ, ಮಣ್ಣಿನ ಮಡಿಕೆಗಳಲ್ಲಿ, ಮರದ ಪೆಟ್ಟಿಗೆಗಳಲ್ಲಿ, ಎಲೆ ಪೆಟ್ಟಿಗೆ (ಬಿದಿರಿನದು) ಯಲ್ಲಿ, ಜಾಕಾಯಿ ಪೆಟ್ಟಿಗೆಯಲ್ಲಿ ಶೇಖರಿಸಿ ಇಡುತ್ತಾರೆ. ನೀರಿನಂಶವಿದ್ದು ಸದಾ ಹಸಿಯಾಗಿದ್ದು ಚಿಗುರುತ್ತಿರುವ ಗಿಣಿಮೂತಿಗಡ್ಡೆ, ಕಾಕ್ ಮಾಕನಗಡ್ಡೆ ಮತ್ತು ಲೋಳೆಸರಗಳನ್ನು ಚಪ್ಪರದ ಗಳಗಳಿಗೆ ಅಥವಾ ಮನೆಯ ಜಂತಿಗಳಿಗೆ ಕಟ್ಟುತ್ತಾರೆ.

ಹೀಗೆ ಶೇಖರಿಸಿ ಇಡುವ ಮೊದಲು ಅವುಗಳನ್ನು ವ್ಯವಸ್ಥಿತವಾಗಿ ಸಂಗ್ರಹಿಸುತ್ತಾರೆ. 'ಭಾನುವಾರ ಅಮವಾಸೆ ಬಂದ ದಿನ ಬೆಳಗಿನ ಜಾವ ಪಾತಾಳಗರುಡ ಬೇರಿಗೆ (ಬಳ್ಳಿಗೆ) ಪೂಜೆ ಮಾಡಿ

ಪೂರ್ವಾಭಿಮುಖವಾಗಿ ಹೋಗಿರುವ ಬೇರನ್ನು ಅಗೆದು ಕೋರಿ ಹುಡುಗನು ಹುಟ್ಟು ಮಾರ್ಗದಲ್ಲಿ ಒಂದೇ ಏಟಗೆ ಬೇರನ್ನು ಕಡಿಯಬೇಕು, ಹೀಗೆ ಕಡಿದು ತಂದದ್ದನ್ನು ಅರ್ಧವರ್ಷದವರೆಗೆ ಬಳಸುತ್ತೇವೆ.' (12) ಇಷ್ಟು ಕ್ರಮವಾಗಿ ತರುವುದರಿಂದಲೇ ಯಾವುದೇ ಹಾವಿನ ವಿಷಕ್ಕೆ ಔಷಧಿ ಹೊಯ್ದರೂ ಗುಣವಾಗಿದೆ ಎಂದು ವೈದ್ಯರು ಅಭಿಪ್ರಾಯಪಡುತ್ತಾರೆ. ಈ ಸಂದರ್ಭದಲ್ಲಿ ಉಪವಾಸವನ್ನೂ ಮಾಡುತ್ತಾರೆ.

ರಕ್ತಮೂಲವ್ಯಾಧಿಗೆ ಉತ್ತರಾಣಿ ಬೀಜಗಳನ್ನು ಬಾಣಲೆಯಲ್ಲಿ ಹುರಿದ ನಂತರ ಸಣ್ಣಗೆ ಅರೆದು ಎಳ್ಳೆಣ್ಣೆಯೊಂದಿಗೆ ರಕ್ತಬೀಳುವ ಭಾಗಕ್ಕೆ ನಾಲ್ಕು ದಿನ ಕೋಳಿ ಪುಕ್ಕದಿಂದ ಹಚ್ಚಬೇಕು. ಈ ಚಿಕಿತ್ಸೆಯಲ್ಲಿ ಔಷಧಿ ತಯಾರಿಸಲು ಮತ್ತು ಬಳಿಸಲು ಹೆಚ್ಚು ಸಮಯ ಬೇಕಾಗುವುದಿಲ್ಲ. ಆದರೆ ಗಿಡವನ್ನು ಸಂಗ್ರಹಿಸಲು ಹೆಚ್ಚು ಸಮಯ ಮತ್ತು ಶ್ರದ್ಧಾ ಭಕ್ತಿಗಳು ಬೇಕಾಗುತ್ತದೆ. 'ಶನಿವಾರದಂದು ಸಾಯಂಕಾಲದ ವೇಳೆಯಲ್ಲಿ ಉತ್ತರಾಣಿ ಗಿಡಕ್ಕೆ ಪೂಜೆ ಮಾಡಿ ಹಂಗುದಾರ (ಕಂಕಣ) ಕಟ್ಟಿ, ನಾಳೆ ಹೊತ್ತುಂಟೆ ಬಂದು ನಿನ್ನನ್ನು ಇಂಥ ಕಾರ್ಯಕ್ಕಾಗಿ ಕೊಂಡ್ಯೋಯ್ಯುತ್ತೇನೆ ಎಂದು ಸಂಕಲ್ಪ ಮಾಡಿ ಕೈಮುಗಿದು ಬಂದಿರಬೇಕು. ಅದರಂತೆ ಭಾನುವಾರ ನಸುಕಿನಲ್ಲೇ (ಬೆಳಗಿನಲ್ಲಿ/ಮುಂಜಾನೆ) ಹೋಗಿ ಯಾರು ನೋಡಂತೆ ತರುವುದು' (125)

'ಸ್ನಾನ ಮತ್ತು ಪೂಜೆಯನ್ನು ಮಾಡಿಕೊಂಡು ಕುಮಾರಸ್ವಾಮಿ ಬೆಟ್ಟ ಹತ್ತುವಾಗ ಮಂತ್ರ ಹೇಳುತ್ತಾ ಏರಿಗೆ ಕೈಗೆ ಸಿಕ್ಕ ಎಲೆಗಳನ್ನು ಕಿತ್ತುಕೊಂಡು ಹೋಗಿ, ಹಿಂತಿರುಗುವಾಗ ಮಂತ್ರ ಹೇಳುತ್ತಾ ಇಳುವಿಗೆ ಕೈಗೆ ಸಿಕ್ಕ ಎಲೆಗಳನ್ನು ಕಿತ್ತುಕೊಂಡು ಇಳಿಯಬೇಕು' (7). ವಾಮಾಚಾರದ ಭೀತಿಯಿಂದ ಅಸ್ವಸ್ಥನಾದ ರೋಗಿಗೆ ಹೀಗೆ ಸಂಗ್ರಹಿಸಿದ ಎಲೆಗಳನ್ನು ಹಸಿ ಇರುವ ಅಥವಾ ಒಣಗಿದ ಎಲೆಗಳನ್ನು ಕೆಂಡದ ಮೇಲೆ ಹಾಕಿ ಅದಕ್ಕೆ ಲೋಬಾನ ಸೇರಿಸಿ ರೋಗಿಗೆ ಹೊಗೆ ಹಾಯುವಂತೆ ಮಾಡಿದರೆ ರೋಗ ಗುಣವಾಗುತ್ತದೆ ಎಂದು ವೈದ್ಯರು ಹೇಳುತ್ತಾರೆ. ಇದೇ ರೀತಿ ಚೇಳಿನ ವಿಷಕ್ಕೆ 'ಎಲೆ ಸಂಗ್ರಹಿಸುವಾಗ ಗಿಡದ ಕೊನೆ ಹಿಡಿದುಕೊಂಡು ಎಲೆಗಳನ್ನು ಕೆಳಮುಖವಾಗಿ ಕಿತ್ತುಕೊಂಡರೆ ರೋಗ (ಚೇಳಿನ ವಿಷ) ಇಳಿದು ಹೋಗುತ್ತದೆ. ಒಂದು ವೇಳೆ ಮೇಲ್ಮುಖವಾಗಿ ಕಿತ್ತುಕೊಂಡರೆ ರೋಗ ಉಲ್ಬಣಗೊಳ್ಳುತ್ತದೆ'. (114) ಹೀಗೆ ಸಂಗ್ರಹಿಸಿದ ಉತ್ತರಾಣಿ ಎಲೆಗಳನ್ನು ಕೈಯಲ್ಲಿ ಉಜ್ಜಿ ಸ್ವಲ್ಪ ಹೊಟ್ಟೆಗೆ ತಿನ್ನಿಸಿ ಚೇಳು ಕಡಿದಿರುವ ಜಾಗಕ್ಕೆ ಉಜ್ಜಿದ ರಸವನ್ನು ಹಚ್ಚಬೇಕು. ಆ ನಂತರ ಚೇಳಿನ ವಿಷ ಹತ್ತು ನಿಮಿಷದಲ್ಲಿ

ಇಳಿದು ಹೋಗುತ್ತದೆ. ಇಲ್ಲಿ ಕೆಳಮುಖವಾಗಿ ಎಲೆಗಳನ್ನು ಕೀಳುವುದು ವಿಷ ಇಳಿಯಬೇಕೆಂಬ ದೃಡಸಂಕಲ್ಪವನ್ನು ಹೇಳುತ್ತದೆ. ಹೊಟ್ಟೆಗೂ ಎಲೆಗಳನ್ನು ತಿನ್ನಿಸುವುದರಿಂದ ಅದು ದೈಹಿಕವಾಗಿಯೂ ಪರಿಣಾಮವನ್ನು ಬೀರಬಹುದು.

ಹೀಗೆ ಕ್ರಮಬದ್ಧವಾಗಿ ಗಿಡಗಳನ್ನು ಸಂಗ್ರಹಿಸುವುದರಿಂದ ರೋಗ ಗುಣವಾಗಲು ಸಹಕಾರಿಯಾಗಿದೆ ಎಂದು ಜನಪದ ವೈದ್ಯರು ನಂಬಿದ್ದಾರೆ. ಎಲ್ಲಾ ಕಾಯಿಲೆಗಳಿಗೆ ಹೀಗೆ ಪೂಜೆ, ಮಂತ್ರ, ಸಮಯ, ವಾರಗಳನ್ನು ಅನುಸರಿಸುತ್ತಾರೆ ಎಂದು ಹೇಳಲಾಗುವುದಿಲ್ಲ. ಕೆಲವರು ರೋಗಿಗಳು ಯಾವ ವೇಳೆಯಲ್ಲಿ ಬಂದಿರುತ್ತಾರೋ ಆಗಲೇ ಹೊಲಗಳಿಗೋ, ಕಾಡಿಗೋ ಹೊಗಿ ಹಸಿಗಿಡಗಳನ್ನು ತಂದು ಔಷಧಿ ಮಾಡಿಕೊಡುತ್ತಾರೆ. ಆದರೆ ಕೆಲವೊಂದು ಕಾಯಿಲೆಗಳಿಗೆ ಗಿಡ ಸಂಗ್ರಹಿಸುವ ವಿಧಾನಗಳನ್ನು ಅನುಸರಿಸಲೇ ಬೇಕಾಗಿರುತ್ತದೆ. ಬೆಳಗು-ಬೈಗುಗಳಲ್ಲಿ, ಹುಣ್ಣಿಮೆ-ಅಮವಾಸೆಗಳಲ್ಲಿ, ಗುರುವಾರ ಭಾನುವಾರಗಳಲ್ಲಿ ಪೂಜೆ ಮಾಡಿ ಮಂತ್ರಗಳನ್ನು ಹೇಳಿ ನಂತರ ಗಿಡಕ್ಕೆ ಮೂರು ಬಾರಿ ಪ್ರದಕ್ಷಿಣೆ ಬಂದು ಆ ಬಳಿಕ ಗಿಡವನ್ನು ಸಂಗ್ರಹಿಸುತ್ತಾರೆ.

ಔಷಧಿಗಾಗಿ ಗಿಡ, ಮರ, ಬಳ್ಳಿಗಳ ಎಲೆ, ಹೂವು, ಕಾಯಿ, ಬೇರುಗಳನ್ನು ಸಂಗ್ರಹಿಸುವಾಗ ರಸ್ತೆ ಬದಿಯ, ಊರಿನ ಸಮೀಪದ ಮತ್ತು ಜನರು ಓಡಾಡುವ ಸ್ಥಗಳಲ್ಲಿರುವವುಗಳಿಂದ ಸಂಗ್ರಹಿಸುವುದಿಲ್ಲ. ಜನರ ಒಡನಾಟದಿಂದ ದೂರ ಇರುವ ಸ್ವಚ್ಛವಾದ ಪರಿಸರದಲ್ಲಿ ಇರುವವುಗಳಿಂದ ಸಂಗ್ರಹಿಸುತ್ತಾರೆ. ಕೆಲವು ಸಂದರ್ಭಗಳಲ್ಲಿ ಅಂದರೆ ಮಾಟ-ಮದ್ದುಗಳಿಂದ ಉಂಟಾದ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ದೇವರ ಮರಗಳೆಂದು ಪೂಜಿಸುವ, ಬನ್ನಿಮರ, ಬಿಲ್ವ ಪತ್ರೆಮರ, ಬೇವಿನ ಮರ, ಅರಳಿಮರ ಈ ಮೊದಲಾದವುಗಳಿಂದ ಔಷಧಿಗೆ ಅಗತ್ಯವಾದ ಭಾಗವನ್ನು (ಎಲೆ, ತೊಗಟೆ, ಹೂವು, ಕಾಯಿ, ಬೇರು) ಸಂಗ್ರಹಿಸುತ್ತಾರೆ.

ಔಷಧಿ ತಯಾರಿಸುವ ಮತ್ತು ಸೇವಿಸುವ ಕ್ರಮ : ಜನಪದ ವೈದ್ಯರು ಔಷಧಿ ತಯಾರಿಸುವಲ್ಲಿ ಅವರದೇ ಆದ ವಿಧಾನಗಳನ್ನು ಅನುಸರಿಸುತ್ತಾರೆ. ಬೇರು, ಎಲೆ, ತೊಗಟೆ, ಹೂವು, ಕಾಯಿ ಹಾಗೂ ಬೀಜಗಳನ್ನು ನೀರಿನಿಂದ ತೊಳೆದು ಸ್ವಚ್ಛವಾದ ಕಲಬತ್ತು, ಒಳಕಲ್ಲು ಇಲ್ಲವೇ ಬಂಡೆಯ ಮೇಲೆ ಅರೆಯುತ್ತಾರೆ. 'ಮಕ್ಕಳ ನಾಯಿ ಕೆಮ್ಮಿಗೆ ಬೇವಿನ ಮರದ ತೊಗಟೆಯನ್ನು ತಂದು ಮೆಣಸು, ಬೆಳ್ಳುಳ್ಳಿಗಳನ್ನು

ಸೇರಿಸಿ ಅರೆದು ನಂತರ ಅದಕ್ಕೆ ಪೊಂಗುಮಾಡಿ (ಪುಟಕೊಡುವುದು) ಮೂರು ದಿವಸ ಕುಡಿಸುವುದು.' (64) ಔಷಧಿ ದ್ರವರೂಪದಲ್ಲಿ ಇದ್ದರೆ ಕಬ್ಬಿಣದ ಪುಟವನ್ನು ಕೊಡುತ್ತಾರೆ. ಹೀಗೆ ಮಾಡುವಾಗ ಕಬ್ಬಿಣದ ಅಂಶ ಆ ಔಷಧಿಗೆ ಸೇರುತ್ತದೆ. ಕೆಲವೊಂದು ಔಷಧಿಗಳನ್ನು ನಿರ್ದಿಷ್ಟವಾಗಿ ಕಬ್ಬಿಣ ಪಾತ್ರೆ ಮತ್ತು ಮಣ್ಣಿನ ಪಾತ್ರೆಗಳಲ್ಲೇ ತಯಾರಿಸುತ್ತಾರೆ.

ದೇಹದ ಯಾವುದೇ ಭಾಗದಲ್ಲಿ ಉಸಿರು ಸಿಕ್ಕಿಕೊಂಡಾಗ ಔಷಧಿ ಕೊಡುವ ವಿಧಾನ ಹೀಗಿದೆ: 'ಸೂರ್ಯ ಹುಟ್ಟುವ ಮುಂಚೆ ಹಚ್ಚೆಗಿಡದ ಎರಡು ಕುಡಿಗಳನ್ನು ಬಾಯಿಯಿಂದ ಕಿತ್ತುಕೊಂಡು ಜಡಿಮಿ (ಅಗಿದು) ಉಸಿರು ಸಿಕ್ಕಿಕೊಂಡಿರುವ ವಿರುದ್ಧ ದಿಕ್ಕಿನ ಕಿವಿಯಲ್ಲಿ ಊದುವುದು' (117) ಬಾಯಲ್ಲಿ ಅಗಿದಿರುವುದನ್ನು ಉಗುಳಿ ನಂತರ ಗಾಳಿಯನ್ನಷ್ಟೇ ಕೆಲವರು ಕಿವಿಯಲ್ಲಿ ಊದುತ್ತಾರೆ. ಹಚ್ಚೆಗಿಡದ ಎಲೆಗಳನ್ನು ಜಗಿದು ಊದುವುದರಿಂದ ಸಿಕ್ಕಿಕೊಂಡಿರುವ ಉಸಿರು ಹೊರಟು ಹೋಗುತ್ತದೆ; ಗಾಳಿಯಲ್ಲಿ ಎಲೆಗಳ ಸಾರ ಸೇರಿರುತ್ತದೆ ಇದರಿಂದ ಸಮಸ್ಯೆ ಪರಿಹಾರವಾಗುತ್ತದೆ ಎಂದು ವೈದ್ಯರು ಹೇಳುತ್ತಾರೆ.

ಹಾವಿನ ವಿಷಕ್ಕೆ ಔಷಧಿಯನ್ನು ತಯಾರಿಸುವ ವಿಧಾನ ಹೀಗಿದೆ. 'ಹದಕ್ಕೆ ಬಂದಿರುವ ಬಿಳಿ ಎಕ್ಕೆಯ ಆರು ಹಿಡಿ ಎಲೆಗಳು, ಸ್ಟ್ರಾಂಗ್ ಆದ ನಾಲ್ಕು ಹಿಡಿ ಹೊಗೆ ತಪ್ಪಲು, ಇಂಗ್ಟಾರದ ಹತ್ತು ಕಾಯಿಗಳು ಇವನ್ನೆಲ್ಲ ಚೆನ್ನಾಗಿ ಕುಟ್ಟಿ ಹೊಸ ಸ್ವಾರೆಯಲ್ಲಿ ತುಂಬಿ ಅಂಟು ಬರುವ ತನಕ ಟಂಗಟೆ ಕಟ್ಟಿಗೆಯ ಬೆಂಕಿಯಿಂದ ಕುದಿಸಬೇಕು. ನಂತರ ಭಟ್ಟಿ ಇಳಿಸಿದಂತೆ ಇಳಿಸಿಗೊಂಡು ಒಂದು ವರ್ಷದವರೆಗೆ ಔಷಧವನ್ನು ಇಟ್ಟುಕೊಳ್ಳಬಹುದು; ಹೀಗೆ ತಯಾರಿಸಿದ ಔಷಧದಿಂದ ಜೋಳದ ಕಾಳಿನಷ್ಟು ಪ್ರಮಾಣ ತಗೆದುಕೊಂಡು ನೀರಲ್ಲಿ ರಂಗಳಿಸಿ ಮೂಗಲ್ಲಿ ಎರಡು ಹನಿ ಹುಯ್ಯಬೇಕು. ರಂಗಳಿಸಿದ ಸ್ವಲ್ಪಭಾಗವನ್ನು ಬಾಯಲ್ಲಿ ಹಾಕಿ ತಿಕ್ಕಬೇಕು. ಇದರಿಂದ ನಾಲಿಗೆ ದಪ್ಪವಾಗಿರುವುದು ತೆಳುವಾಗುತ್ತದೆ. ಹೀಗೆ ಮಾಡಿದಾಗ ವಾಂತಿ ಆಗಿ ವಿಷ ಹೊರಬರುತ್ತದೆ.' (113) ಎಂದು ತಮ್ಮ ಔಷಧಿಗೆ ವೈದ್ಯರು ವಿವರಣೆ ಕೊಡುತ್ತಾರೆ. ಇಲ್ಲಿ ಔಷಧಿಯನ್ನು ಕುದಿಸಲು ಟಂಗಟೆಯ ಕಡ್ಡಿಗಳನ್ನೇ ಉಪಯೋಗಿಸಬೇಕೆಂಬ ನಿಯಮವಿದೆ. ಬಹುಶಃ ಟಂಗಟೆ ಕಟ್ಟಿಗೆಯ ಬೆಂಕಿ ಮತ್ತು ಹೊಗೆಗಳು ಔಷಧೀಯ ಪಾವಿತ್ರ್ಯವನ್ನು ಹಾಳು ಮಾಡದೇ ಮತ್ತುಷ್ಟು ಪರಿಶುದ್ಧವಾಗುವುದಕ್ಕೆ ಸಹಕಾರಿಯಾಗಬಹುದೇ ಎಂದು ಯೋಚಿಸಬಹುದಾಗಿದೆ.[15]

ಬಾಯಿಬಸಲಿಗೆ ಕೊಡುವ ಔಷಧೀಯ ಕ್ರಮ ಹೀಗಿದೆ: 'ಕರೇ ಮೇಕೆಯ ಹಾಲನ್ನು ಮೂರು ಬೋರು ಬಾಯಿಗೆ ನೇರವಾಗಿ ಹಿಂಡಿ (ಮೇಕೆಯ ಮೊಲೆಯಿಂದ) ರಾಗಿ ಹಿಟ್ಟನ್ನು ಬಾಯಿಒಳಗೆ ಹಾಕಿ ನಂತರ ಅದೇ ಮೇಕೆ ಬಾಲದಲ್ಲಿ ಬಾಯಿಯನ್ನು ಚೆನ್ನಾಗಿ ತಿಕ್ಕಬೇಕು. ಹೀಗೆ ಮೂರು ದಿವಸ ಮಾಡಿದರೆ ಬಾಯಿ ಬಸಲು ಹೊರಟು ಹೋಗುತ್ತದೆ' (113). ಇಲ್ಲಿ ಮೇಕೆಯ ನೊರೆ ಹಾಲು, ರಾಗಿ ಹಿಟ್ಟು ಬಳಸುವುದರಿಂದ ಬಾಯಿ (ಒಳಭಾಗ) ಮೃದುವಾಗಿ ಒಡೆದಿರುವುದು ಹಾಗೂ ಗುಳ್ಳೆ ಬಂದಿರುವುದು ಗುಣವಾಗಲು ನೆರವಾಗಬಹುದು. ಆದರೆ ಮೇಕೆ ಬಾಲದಿಂದ ಬಾಯಿ ತಿಕ್ಕುವ ಕ್ರಮ ವಿಚಿತ್ರವಾದದ್ದು.

ಹಲವಾರು ಕಾಯಿಲೆಗಳಿಗೆ ಔಷಧಿಯನ್ನು ತಯಾರಿಸುವ ಅಗತ್ಯವೇ ಇರುವುದಿಲ್ಲ. ಏಕೆಂದರೆ ಗಿಡವನ್ನು ನೇರವಾಗಿ ತಿನ್ನಲು ಕೊಡುವುದು, ಎಲೆ, ಕಾಂಡಗಳಿಂದ ಹಿಂಡಿದ ರಸವನ್ನು ಕುಡಿಸುವುದು; ಗಾಯ, ಹುಣ್ಣುಗಳಿಗೆ ಎಲೆಗಳನ್ನು ಅರೆದು ಹಚ್ಚುವುದು ಇಲ್ಲವೇ ಕಾಯಿಸಿ ಕಟ್ಟುವುದು; ಹಾವಿನ ವಿಷಕ್ಕೆ ಬೇರು-ಗಡ್ಡೆಗಳನ್ನು ಜಗಿದು ತಿನ್ನುವುದು, ಈ ಮೊದಲಾದ ಸರಳ ವಿಧಾನವೇ ಜನಪದ ವೈದ್ಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿದೆ.

ಯಾವುದು ಸರಳವೊ ಅದು ಅಧಿಕವಾಗಿ ಪ್ರಯೋಗದಲ್ಲಿರುತ್ತದೆ. ಉದಾಹರಣೆಗೆ, ಕಾಲು, ಕೈಗಳಲ್ಲಿ ಬರುವ ಗುಳ್ಳೆ-ಕುರುಗಳಿಗೆ ಕಳ್ಳಿಹಾಲು; ಬುಡದ ಮಣ್ಣು ಹಚ್ಚುವುದು, ಕೆಲವೊಮ್ಮೆ ಎಂಜಲನ್ನು ಹೆಚ್ಚಿಕೊಳ್ಳುತ್ತಾರೆ.

* ಹುಳುಕಡ್ಡಿ ನಿವಾರಣೆಗೆ ಸ್ವಮೂತ್ರ ಹಚ್ಚುವುದು, ಇಲ್ಲವೇ ಹುಳುಕಡ್ಡಿ ಗಿಡದ ಹಾಲು ಹಚ್ಚುವುದು.
* ತಲೆನೋವಿಗೆ ತಲೆನೋವಿನ ಗಿಡದ ಕಾಯಿ ಅಥವಾ ಎಲೆಯನ್ನು (ಉಜ್ಜಿ) ಕಿವಿಯಲ್ಲಿ ಇಟ್ಟುಕೊಳ್ಳುವುದು.
* ಕಡಿದ ಕೊಯ್ದು ಗಾಯಗಳಿಗೆ ಬಾಳೆ ಕರೆ ಬಿಡುವುದು.
* ಕೆಮ್ಮಿಗೆ ತುಳಸಿ ಎಲೆ ತಿನ್ನುವುದು, ವೀಳೆದೆಲೆಯ ಕಾಯಿಗಳನ್ನು ತಿನ್ನುವುದು

* ಕಾಲಲ್ಲಿ ಮುಳ್ಳು ತುಳಿದಾಗ ಎಕ್ಕೆಯ ಹಾಲು ಬಿಡುವುದು.

* ರೋಗ ನಿರೋಧಕ ಶಕ್ತಿಗೆ ಬೇವಿನ ಕುಡಿಗಳನ್ನು ತಿನ್ನುವುದು.

ಈ ಮೊದಲಾದ ಸುಲಭೋಪಾಯಗಳನ್ನು ಗ್ರಾಮೀಣ ಭಾಗದ ಮಕ್ಕಳು ಸಹ ಮಾಡುತ್ತಾರೆ. ಇಲ್ಲಿಯ ವಿಶೇಷವೆಂದರೆ ಇತರ ಯಾವ ವಸ್ತುಗಳ ಸಂಯೋಗ ಇಲ್ಲದಯೇ ನೇರವಾಗಿ ಬಳಸುವುದು. ಇಂದು ಆಧುನಿಕ ವಸ್ತುಗಳಾದ ಪೇಪರ್, ಬೆಂಕಿ ಪೆಟ್ಟಿಗೆಯ ರಂಜಕ ಭಾಗ, ಪೆನ್ನಿನ ಇಂಕು ಇವುಗಳನ್ನು ಬಿದ್ದಗಾಯ, ಗುಳ್ಳೆಗಳಿಗೆ ಮಕ್ಕಳು ಅಂಟಿಸುತ್ತಾರೆ ಇದೇ ಸಮಸ್ಯೆಗೆ ಹಿರಿಯರು ಸೀಮೆ ಎಣ್ಣೆಯನ್ನು ಸವರುತ್ತಾರೆ. ಚಿತ್ರಮೂಲದ ಬೇರನ್ನು ನಿಂಬೆ ಹಣ್ಣಿನ ರಸದೊಂದಿಗೆ ಇಸುಬು ಕಜ್ಜಿಗಳಿಗೆ ಹಚ್ಚಿದಾಗ ಉರಿ ವಿಪರೀತವಾಗಿರುತ್ತದೆ. ಆ ಉರಿಯನ್ನು ಶಮನಮಾಡಲು ವ್ಯಾಸಲಿನ್‌ನನ್ನು ಉಪಯೋಗಿಸುತ್ತಾರೆ. ಚೇಳು ಕಡಿದ ಭಾಗಕ್ಕೆ ನ್ಯೂಟ್ರಲ್ ತಾಗಿಸುವುದು, ಹೀಗೆ ಮಾಡುವುದರಿಂದ ವಿಷ ಪರಿಹಾರವಾಗುತ್ತದೆಂದು ಹೇಳುತ್ತಾರೆ. ಹುಳುಕಡ್ಡಿಗೆ ಸರಾಯಿಯನ್ನು ಮೂರು ದಿನ ಹಚ್ಚಿದರೆ ಗುಣವಾಗಿಬಿಡುತ್ತದೆ (64) ಮೂಳೆ ಕಟ್ಟಲು ಬ್ಯಾಂಡೇಜ್ ಬಟ್ಟೆಯನ್ನು ಬಳಸುವುದು. ಮಂಡಕ್ಕಿ ಒಗ್ಗರಣೆ ಮತ್ತು ಮೊಸರು ತಿನ್ನುವುದರಿಂದ ಭೇದಿ ನಿಲ್ಲುತ್ತದೆ. ಹೀಗೆ ಅನೇಕ ಸಣ್ಣ ಪುಟ್ಟ ಸಮಸ್ಯೆಗಳಿಗೆ ಕಂಪನಿ ಉತ್ಪಾದಿಸಿದ ವಸ್ತುಗಳನ್ನು ಬಳಸಲಾಗುತ್ತದೆ. ಇದೆಲ್ಲವೂ ಸಹ ಜನಪದವೇ. ಅದನ್ನು ಆಧುನಿಕ ಜನಪದ ವೈದ್ಯ ಎಂದು, ಬೇಕಾದರೆ ಕರೆಯಬಹುದು.

ಔಷಧಿ ತಯಾರಿಕೆಗೆ ಬಳಸುವ ಇತರ ಜೀವಿಗಳು ಮತ್ತು ವಸ್ತುಗಳು : ಜನಪದ ವೈದ್ಯದಲ್ಲಿ ಔಷಧಿಯನ್ನು ತಯಾರಿಸಲು ಔಷಧೀಯ ಗಿಡಮೂಲಿಕೆಗಳ ಜೊತೆಗೆ, ಪ್ರಾಣಿ, ಪಕ್ಷಿ, ಕೀಟ ಜನ್ಯವಸ್ತುಗಳು ಹಾಗೂ ಧಾತು ಲವಣಗಳು ಉಪಯೋಗಿಸಲ್ಪಡುತ್ತವೆ. ಆದಿಮಾನವ ತನ್ನ ಪರಿಸರದ ವಿವಿಧ ಜೀವಿಗಳು ಮತ್ತು ವಸ್ತುಗಳಲ್ಲಿ ಔಷಧೀಯ ಗುಣವನ್ನು ಅರಸಿದ ಪರಿ ಇದಾಗಿದೆ. ಉದಾಹರಣೆಗೆ,

ಇಸುಬಿಗೆ : ಕತ್ತೆಯ ಲದ್ದಿಯನ್ನು ಸುಡುವುದರಿಂದ ಬರುವ ಕಪ್ಪನ್ನು ತಾಮ್ರದ ಪಾತ್ರೆಯಲ್ಲಿ ಸಂಗ್ರಹಿಸಿದರೆ ಕಿಲುಬಾಗುತ್ತದೆ. ಆ ಕಿಲುಬನ್ನು ಇಸುಬಿಗೆ ಹಚ್ಚುವುದು. (118)

ಲಕ್ವಾಕ್ಕೆ : ಲಕ್ವ ಹೊಡೆದ ಭಾಗಕ್ಕೆ ಕೆಳಗಿನಿಂದ ಮೇಲಕ್ಕೆ ಅಡವಿಪಾರಿವಾಳದ ರಕ್ತವನ್ನು ಲೇಪನ ಮಾಡಬೇಕು; ಅದೇ ರಕ್ತವನ್ನು ಒಂದು ಬಾರಿಗೆ ಹತ್ತು ಹನಿಯಷ್ಟು ಎರಡು ದಿನ ಕುಡಿಯಬೇಕು (117)

ಹೆರಿಗೆ ನಿಧಾನವಾದಾಗ : ವೀಳೆದೆಲೆಗೆ ಔಡಲ ಎಣ್ಣೆಯನ್ನು ಸವರಿ, ಒಂದು ತೊಣಚೆಯನ್ನು ಹಿಡಿದು ಎಲೆಯಲ್ಲಿ ಇಟ್ಟು ಮಂತ್ರಿಸಿ ತಿನ್ನಿಸಿದರೆ ಹೆರಿಗೆ ಬೇಗ ಆಗುತ್ತದೆ (175)

ಸ್ಥಳಾವಕಾಶದ ಕೊರತೆಯಿಂದ ಕೇವಲ ಮೂರು ಉದಾಹರಣೆಗಳನ್ನು ಪ್ರಸ್ತಾಪಿಸಲಾಗಿದೆ. ದಾತು ಮತ್ತು ಲವಣಗಳಾದ ಇಲ್ಲಣ, ಪೆಟ್ಲುಪ್ಪು, ಚೌಳುಮಣ್ಣು, ಸುಣ್ಣ, ಮರದ ಉಪ್ಪು ಇತ್ಯಾದಿ ಹಾಗೂ ಪ್ರಾಣಿ ಜನ್ಯ ದ್ರವ್ಯಗಳಾದ ಕವಡೆ, ಕಸ್ತೂರಿ, ಜೇನು ಮೇಣ, ಗೋರೋಜನ, ಶಂಖ ಮುಂತಾದ ವಸ್ತುಗಳ ಔಷಧೀಯ ಬಳಕೆಯನ್ನು ಸಂಕ್ಷಿಪ್ತವಾಗಿ ಅನುಬಂಧದಲ್ಲಿ ಕೊಡಲಾಗಿದೆ.

ಔಷಧಿಯನ್ನು ಅನುಪಾನಗಳೊಂದಿಗೆ ಸೇವಿಸಲು ಕೊಡುವುದನ್ನು ಜನಪದರು ಪೂರ್ವದಿಂದಲೂ ಅನುಸರಿಸಿಕೊಂಡು ಬಂದಿದ್ದಾರೆ. ಅನುಪಾನಗಳೊಂದಿಗೆ ಔಷಧಿಯನ್ನು ಕೊಟ್ಟಾಗ ಔಷಧೀಯ ಕಾರ್ಯಯಶಸ್ವಿಯಾಗಲು ಅದು ಸಹಾಯವಾಗುತ್ತದೆ ಎಂದು ತಿಳಿದಿದ್ದಾರೆ. ಕಹಿ, ಖಾರ, ಹುಳಿ, ಒಗರಿನಂಥ ರಸಗಳು ದೇಹಕ್ಕೆ ಅತಿಯಾಗಿ ಸೇರದಂತೆ; ಸೇವಿಸಲು ಹಿತವಾಗಿರುವಂತೆ ಮಾಡುವಲ್ಲಿ ಅನುಪಾನಗಳು ಮುಖ್ಯವಾಗುತ್ತವೆ.

ಅನುಪಾನಗಳಿಗೆ ಉದಾಹರಣೆಗಳು : ಕೈಮಸುಗಿಗೆ 'ಬೇಟೆಚಕ್ಕೆ (ತೊಗಟೆ) ಏಲಕ್ಕಿಗಳನ್ನು ಪುಡಿಮಾಡಿ ಪುಟ್ಟುಬಾಳೆ ಹಣ್ಣಿನ ಮಧ್ಯದಲ್ಲಿ ಇಟ್ಟು ದಿನಕ್ಕೆ ಮೂರು ಬಾರಿಯಂತೆ ಮೂರು ದಿವಸ ತಿನ್ನಿಸುವುದು.' (87). ಬೇಟೆಗಿಡ, ಏಲಕ್ಕಿಗಳು ಜೀರ್ಣ ಶಕ್ತಿಯನ್ನು ವೃದ್ಧಿಸುವ ಶಕ್ತಿಯನ್ನು ಹೊಂದಿವೆ. ಪುಟ್ಟು ಬಾಳೆಹಣ್ಣು ಸಹ ಇದೇ ಕೆಲಸವನ್ನೇ ಮಾಡುತ್ತದೆ.

ಮಕ್ಕಳ ಅಳ್ಳೆಕಾಯಿಲೆಗೆ 'ಆಡುಮುಟ್ಟದ ಬೇರು, ಕುಲ್ಪಿಗನ ಬೇರು, ತುಂಬೆ ಬೇರು ಇವನ್ನು ಮೇಕೆ ಹಾಲಿನಲ್ಲಿ ಗಂಧದಂತೆ ತೇದು ಅದೇ ಮೇಕೆಯ ಹಾಲಿನಲ್ಲಿ ಒಂದು ಚಮಚದಷ್ಟು ಹುಯ್ಯಬೇಕು'

(131). ಮೇಕೆ ಹಾಲು ಆರೋಗ್ಯಕ್ಕೆ ಅತ್ಯುತ್ತಮವಾದುದು. ಬೇರುಗಳ ಔಷಧಿ ಸೇವಿಸಲು ಕಹಿಯಾಗಿರುತ್ತದೆ, ಇದರ ಪರಿಹಾರಕ್ಕೆ ಮತ್ತು ಔಷಧಿ ರಕ್ತಗತವಾಗುವುದಕ್ಕೆ ಅನುಪಾನವಾಗಿ ಹಾಲನ್ನು ಸೇರಿಸಲಾಗುತ್ತದೆ.

ಭೇದಿಯಾಗುವುದಕ್ಕೆ 'ನೆಲಸಂಪಿಗೆ ಸೊಪ್ಪು, ನೆಲತಂಗಡಿಕುಡಿ ಇವುಗಳನ್ನು ಅರೆದು ಮೊಸರಲ್ಲಿ ಕಲಸಿ ಬೆಳಗಿನ ವೇಳೆ ಕುಡಿಸುವುದು' (138). ಮೊಸರು ಮಜ್ಜಿಗೆಗಳು ಭೇದಿಯನ್ನು ನಿಯಂತ್ರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆಂದು ಈಗಾಗಲೇ ತಿಳಿದ ವಿಚಾರವಾಗಿದೆ. ಸಸ್ಯಗಳ ಜೊತೆ ಇದು ಅನುಪಾನವಾಗಿ ಸೇರಿಸಿದರೆ ಔಷಧೀಯ ಕಾರ್ಯ ಇನ್ನೂ ಶಕ್ತವಾಗುತ್ತದೆಂದು ಜನಪದ ವೈದ್ಯರು ತೀರ್ಮಾನಿಸಿರುವಂತಿದೆ.

ಔಷಧಿ ಕೊಡುವ ಸಮಯ ಮತ್ತು ಅವಧಿ : ಔಷಧಿಯನ್ನು ಕೊಡಲು ಗುರುವಾರ ಮತ್ತು ಭಾನುವಾರಗಳನ್ನು ಪ್ರಮುಖವಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ಕೆಲವರು ಯಾವ ವಾರ ಬೇಕಾದರೂ ಕೊಡುವ ಅಭ್ಯಾಸವನ್ನು ರೂಢಿಸಿಕೊಂಡಿದ್ದಾರೆ. ಆದರೆ ಕೊಡುವ ಸಮಯವನ್ನು ಯಾರೂ ನಿರ್ಲಕ್ಷಿಸುವುದಿಲ್ಲ. ಅಂದರೆ ಬೆಳಿಗ್ಗೆ ಮತ್ತು ಸಾಯಂಕಾಲ ಈ ಸಂಧ್ಯಾಸಮಯದಲ್ಲೇ ಔಷಧಿಯನ್ನು ಕೊಡುವ ಸಂಪ್ರದಾಯವಿದೆ. ಹೊಟ್ಟೆನೋವು, ತಲೆನೋವು, ಕಾಮಾಲೆ, ಮಕ್ಕಳ ಫಲ, ಭೇದಿ, ಜ್ವರ, ಕೆಮ್ಮು ಮುಂತಾದವುಗಳಿಗೆ ಬೆಳಗಿನ ವೇಳೆ ಔಷಧಿಯನ್ನು ಕೊಟ್ಟರೆ, ಕಿವಿನೋವು, ಮೂಗಿನ ತೊಂದರೆ, ವಿವಿಧ ಹುಣ್ಣುಗಳಿಗೆ, ಹಲ್ಲುನೋವು, ಕಣ್ಣಿನ ತೊಂದರೆಗಳಿಗೆ, ಗುಪ್ತಕಾಯಿಲೆ, ಮುಲವ್ಯಾಧಿ ಮುಂತಾದವುಗಳಿಗೆ ರಾತ್ರಿ ವೇಳೆ ಔಷಧಿಯನ್ನು ಕೊಡುತ್ತಾರೆ. ಏಕೆಂದರೆ ಹಗಲಿನ ವೇಳೆಯಲ್ಲಿ ಕೊಟ್ಟರೆ ದೈನಂದಿನ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತದೆ, ಅಲ್ಲದೆ ಔಷಧಿಯನ್ನು ಹೊರಭಾಗಕ್ಕೆ ಲೇಪಿಸುವುದರಿಂದ ಬೇಗ ಉದುರಿಹೋಗಬಹುದು, ಹಾಗೆಯೇ ಕಿವಿ, ಮೂಗು, ಕಣ್ಣುಗಳಿಗೆ ಉಪಯೋಗಿಸಿದ ಔಷಧ ಬೇಗ ಹೊರಬರುತ್ತದೆ. ಇದರಿಂದ ಔಷಧೀಯ ಕಾರ್ಯ ಯಶಸ್ವಿ ಆಗದಿರಬಹುದೆಂದು ಜನಪದರ ತರ್ಕವಿರಬಹುದು.

ಜನಪದ ವೈದ್ಯರು ಔಷಧಿಕೊಡುವ ಸಮಯದ ಬಗ್ಗೆ ಹೀಗೆ ಹೇಳುತ್ತಾರೆ. 'ಸಾಯಿಂಕಾಲ ಗಿಡವನ್ನು ತಂದು ರಾತ್ರಿಗೆ ಹಿಂಡಬೇಕು. ಆಗ ಗಿಡ ನರಕ್ಕೆಲ್ಲ ಹೋಗುತ್ತದೆ' (109) ಅಂದರೆ, ಗಂಡ ಮಾಲೆ, ನೂತಿ ಹುಣ್ಣುಗಳಿಗೆ ತೊಂಡೆಸೊಪ್ಪಿನ ರಸವನ್ನು ಐದು ಮೆಣಸು, ಐದು ಬೆಳ್ಳುಳ್ಳಿಗಳೊಂದಿಗೆ

ಮಲಗುವಾಗ ಕಿವಿಯಲ್ಲಿ ಹಿಂಡುವುದು ಔಷಧೀಯ ವಿವರಣೆಯಾಗಿದೆ. ಹೀಗೆ ಹಿಂಡುವುದರಿಂದ ಔಷಧಿ ಚೆನ್ನಾಗಿ ಕೆಲಸ ಮಾಡುತ್ತದೆ. ಏಕೆಂದರೆ, ರೋಗಿ ಮಲಗಿರುತ್ತಾನೆ, ಆ ವೇಳೆ ರಕ್ತಸಂಚಾರ ಸಲೀಸಾಗಿರುತ್ತದೆ. ಇದರಿಂದ ಹುಣ್ಣಿನಲ್ಲಿರುವ ಹುಳುಗಳು (ವೈರಸ್) ಸೊಪ್ಪಿನ ರಸವನ್ನು ಕುಡಿದು ಸಾಯುತ್ತವೆ. ಕೆಲವು ವೈದ್ಯರು ಹೀಗೆ ಗಿಡಹಿಂಡುವ ಮೊದಲ ಎರಡು ದಿನಗಳಲ್ಲಿ ಬೆಲ್ಲದ ನೀರನ್ನು ಅದೇ ಕಿವಿಯಲ್ಲಿ ಹಿಂಡಿರುತ್ತಾರೆ. ಬೆಲ್ಲದ ನೀರಿನ ಸವಿಗೆ ಆಕರ್ಷಿತವಾದ ಹುಳು ಮೂರನೆಯ ದಿನದಲ್ಲಿ ಸೊಪ್ಪಿನ ರಸವನ್ನು ಬಹುಬೇಗ ಕುಡಿದು ಸಾಯುತ್ತದೆ ಎಂಬುದು ಜನಪದ ವೈದ್ಯರ ಉಪಾಯವಾಗಿದೆ.

ಅರೆತಲೆನೋವಿಗೆ 'ಸುಗ್ಗಿ ಸೊಪ್ಪಿನ ರಸವನ್ನು ನೋವಿರುವ ಭಾಗದ ವಿರುದ್ಧ ಕಿವಿಯಲ್ಲಿ ಮುಂಜಾನೆ ನೀರು ಮುಟ್ಟುವ ಮೊದಲೇ ಮೂರು ಹನಿಗಳನ್ನು ಹಿಂಡಬೇಕು. ಒಂದು ಸಾರಿ ಹಿಂಡಿದರೆ ತಲೆನೋವು ಗುಣವಾಗಿ ಬಿಡುತ್ತಾದೆ' (138)

ಎಲ್ಲಾ ಸಂದರ್ಭಗಳಲ್ಲೂ ಗಿಡ ಕೊಡುವ ಸಮಯವನ್ನು ವೈದ್ಯರು ಪರಿಗಣಿಸುವುದಿಲ್ಲ. ಉದಾಹರಣೆಗೆ, ಹಾವಿನ ವಿಷಕ್ಕೆ ಒಳಗಾದವರು, ಪಾರ್ಶ್ವವಾಯುವಿಗೆ ತುತ್ತಾದವರು, ಮೂರ್ಛೆ, ಮಕ್ಕಳ ಕಾಯಿಲೆಗಳು, ಗರ್ಭಿಣಿ ಮತ್ತು ಬಾಣಂತಿಯರ ತೊಂದರೆಗಳಿಗೆ ತಕ್ಷಣವೇ ಸ್ಪಂದಿಸುವ ಎಚ್ಚರಿಕೆಯನ್ನು ಜನಪದರು ಅರಿತ್ತಿದ್ದಾರೆ.

ಕಾಯಿಲೆಯ ತೀವ್ರತೆಯನ್ನು ಗಮನಿಸಿ ಔಷಧಿಯನ್ನು ಒಂದು ದಿನದಲ್ಲಿ ಒಂದು, ಎರಡು ಅಥವಾ ಮುರು ಬಾರಿ ಕೊಡುತ್ತಾರೆ. ಹೀಗೆ ಎರಡು ದಿನ, ಮೂರು ದಿನ, ಐದು, ಏಳು, ಒಂಭತ್ತು ಐದಿನ್ನೈದು ದಿನಗಳು, ಒಂದು ತಿಂಗಳು, ಒಂದು ಮಂಡಲ, ಅರ್ಧವರ್ಷ ಈ ಕ್ರಮದಲ್ಲಿ ಔಷಧಿ ಸೇವನೆಯ ಅವಧಿ ವಿಸ್ತರಣೆಯಾಗುತ್ತದೆ. ಔಷಧಿ ಸೇವನೆಯ ಅವಧಿ ಮುಗಿದಿದ್ದರೂ ಪಥ್ಯದ ಅವಧಿ ಮುಗಿದಿರುವುದಿಲ್ಲ. ಇದು ಎಷ್ಟು ದೀರ್ಘವಾಗಿರುತ್ತದೆ ಎಂದರೆ ಮೂರು ವರ್ಷ, ಅಷ್ಟೇ ಅಲ್ಲ ಸಾಯುವವರೆಗೂ ಕೆಲವು ಪದಾರ್ಥಗಳನ್ನು ತಿನ್ನಬಾರದೆಂಬ ನಿಯಮವಿದೆ.

ಪ್ರಮಾಣ ಅಥವಾ ಅಳತೆ : ವೈದ್ಯರು ಔಷಧಿಯನ್ನು ರೋಗಿಗಳಿಗೆ ಕೊಡುವಾಗ ರೋಗಿಯ ವಯಸ್ಸು, ದೈಹಿಕ ಸಾಮರ್ಥ್ಯಗಳನ್ನು ಗಮನಿಸಿ ಔಷಧಿಯ ಪ್ರಮಾಣವನ್ನು ನಿರ್ಧರಿಸುತ್ತಾರೆ. ಸಾಮಾನ್ಯವಾಗಿ ಪ್ರಮಾಣವನ್ನು ಇತರ ವಸ್ತುಗಳ ಗಾತ್ರಕ್ಕೆ ಹೋಲಿಸಿ ಹೇಳುತ್ತಾರೆ. ಉದಾಹರಣೆಗೆ, ಘನರೂಪದ ಔಷಧಿಯಾಗಿದ್ದರೆ ಕುರಿ ಪಿಚ್ಚಿಗೆ ಗಾತ್ರ, ಗುಲಗಂಜಿ ಗಾತ್ರ, ಜೋಳ-ರಾಗಿ ಕಾಳುಗಳಷ್ಟು, ಕಡ್ಲೆಕಾಳು ಗಾತ್ರ, ಗಜ್ಜುಗದ ಗಾತ್ರ, ನಿಂಬೆ ಹಣ್ಣಿನಷ್ಟು, ಎರಡು ಆಣೆ ತೂಕ, ಒಂದು ಚಟಾಕು ಇತ್ಯಾದಿ. ಔಷಧಿ ದ್ರವರೂಪದಲ್ಲಿದ್ದರೆ, ಒಂದು ಚಮಚ (ಒಳಲೆ ಎನ್ನುತ್ತಾರೆ), ಕಾಫಿ ಕಪ್ಪಿನಷ್ಟು, ಎರಡು ಗುಟುಕು, ಒಂದು ಗಿಂಡಿಯ ತುಂಬ, ಹೀಗೆ ದ್ರವರೂಪದ ಔಷಧಿಯ ಪ್ರಮಾಣವನ್ನು ತೀರ್ಮಾನಿಸುತ್ತಾರೆ. ಔಷಧಿ ಪುಡಿರೂಪದಲ್ಲಿದ್ದರೆ, ಎರಡು ಬೆರಳಿಗೆ ಬಂದಷ್ಟು, ಮೂರು ಬೆರಳಿಗೆ ಬಂದಷ್ಟು, ಅಂಗೈಕುಣಿ ತುಂಬ, ಒಂದು ಸೆರೆ, ಒಂದು ಬೊಗಸೆ ಈ ಮೊದಲಾಗಿ ಅಳತೆಯನ್ನು ಕಂಡುಕೊಳ್ಳುತ್ತಾರೆ.

ಪ್ರಕೃತಿಯಲ್ಲಿನ ವೈಚಿತ್ರ್ಯಗಳು ಮನುಷ್ಯನಲ್ಲಿ ಭಯ, ಭಕ್ತಿಗಳನ್ನು ಉಂಟುಮಾಡಿದವು. ಪರಿಣಾಮವಾಗಿ ಗಿಡ, ಮರ, ಕಲ್ಲುಗಳು ಸೇರಿದಂತೆ ಪಂಚಭೂತಗಳನ್ನು ಅವನು ಆರಾಧಿಸತೊಡಗಿದನು. ಇದರಿಂದ ತನಗೆ ಒದಗಿದ ಮಾನಸಿಕ ಕ್ಲೇಶಗಳನ್ನೋ; ದೈಹಿಕ ತೊಂದರೆಗಳನ್ನೋ ಪರಿಹರಿಸಿಕೊಳ್ಳಲು ಪ್ರಯತ್ನಿಸಿದನು. ಇದಕ್ಕಾಗಿ ಹರಕೆ ಹೋರುವ ಸಂಪ್ರದಾಯ ಬೆಳೆದು ಪ್ರಾಣಿ, ಪಕ್ಷಿಗಳನ್ನು ಬಲಿಕೊಡುವ ಆಚರಣೆ ಹುಟ್ಟಿಕೊಂಡಿತು. ಇಂದಿಗೂ ರೋಗನಿವಾರಣೆಗಾಗಿ, ಮಳೆ ಬೆಳೆಗಾಗಿ, ಊರಿನ ಕ್ಷೇಮಕ್ಕಾಗಿ ಗ್ರಾಮ ದೇವತೆಯಲ್ಲಿ ಹರಕೆ ಹೊರುವ ಪದ್ಧತಿ ರೂಢಿಯಿದೆ. ಪ್ರಾಣಿ, ಪಕ್ಷಿಗಳ ಬಲಿ, ಬೇವಿನ ಸೀರೆ ಸೇವೆ, ಬಾಯಿಬೀಗದ ಸೇವೆ, ಅಗ್ನಿ ಹಾಯ್ದುವ ಸೇವೆ, ಬೆಳೆ ರಕ್ಷಿಸಿ ಮಳೆ ತರಿಸಿದ್ದಕ್ಕಾಗಿ ದೇವಿಗೆ ದವಸ-ಧಾನ್ಯಗಳನ್ನು ಅರ್ಪಿಸುವುದು, ಉಪವಾಸ ವ್ರತಾಚರಣೆಯ ಸೇವೆ ಈ ಮೊದಲಾದ ಹರಕೆಗಳು ಮಾನವನ ಬದುಕಿನಲ್ಲಿ ಯಾವುದೋ ಒಂದು ಬದಲಾವಣೆಗೆ ಕಾರಣವಾದವು ಮತ್ತು ಸಮಸ್ಯೆಯನ್ನು ನಿವಾರಿಸಿದವು. ಇವೆಲ್ಲವು ಜನಪದ ವೈದ್ಯದ ಸ್ವರೂಪವನ್ನು ಹೇಳುವಂಥವುಗಳು.

ಜನಪದ ವೈದ್ಯದ ಪ್ರಕಾರಗಳು

ಅಲೆನ್ ಡೆಂಡಸ್‌ರವರು ಜಾನಪದ ಎಂದರೇನು ಎನ್ನುವುದಕ್ಕಿಂತ ಅದು ಏನೇನನ್ನು ಒಳಗೊಳ್ಳತ್ತೆ ಎಂಬುದನ್ನು ಹೇಳಿಬಿಡುವುದೆ ವಾಸಿ ಎನ್ನುತ್ತಾ ಸುಮಾರು ಎಪ್ಪತ್ತು ಎಂಭತ್ತು ಪ್ರಕಾರಗಳನ್ನು ಪಟ್ಟಿ

ಮಾಡಿಕೊಡುತ್ತಾರೆ. ಅವುಗಳಲ್ಲಿ ಜನಪದ ವೈದ್ಯ ಪ್ರಕಾರವೂ ಒಂದಾಗಿದೆ. ಈಗಾಗಲೇ ಈ ಪ್ರಕಾರದಲ್ಲಿ ಅಧ್ಯಯನಗಳು ಪ್ರಾರಂಭಗೊಂಡು ಅದರ ಕ್ಷೇತ್ರವನ್ನು ವಿಸ್ತರಿಸತೊಡಗಿವೆ.

ಮನುಷ್ಯನು ತನ್ನ ಆರೋಗ್ಯ ಸಂಪತ್ತಿಗಾಗಿ ಏನೆಲ್ಲಾ ಪ್ರಯತ್ನಗಳನ್ನು ಮಾಡುತ್ತಿರುತ್ತಾನೆ. ಏಕೆಂದರೆ ಆತನದು ಮೂಲತಃ ಅನ್ವೇಷಣೆಯ ಮನಸ್ಸು. ಹೀಗಾಗಿ ತನ್ನ ಅನುಕೂಲಕ್ಕಾಗಿ ಪ್ರಾಣಿಗಳನ್ನು ಸಾಕತೊಡಗಿದನು. ಇದರಿಂದಾಗಿ ಅವನು ಪ್ರಾಣಿಗಳ ಆರೋಗ್ಯವನ್ನು ಕುರಿತು ಕಾಳಜಿ ವಹಿಸುವ ಅನಿವಾರ್ಯತೆ ಉಂಟಾಯಿತಲ್ಲದೆ ತನ್ನ ಅನುಕೂಲಕ್ಕಾಗಿ ಸುತ್ತು ಮುತ್ತಲಿನ ಪರಿಸರವನ್ನು ಅಭ್ಯಸಿಸತೊಡಗಿದ. ಅದರಲ್ಲೂ ಆತನ ಗಮನ ಸಸ್ಯಸಂಪತ್ತಿನ ಬಗೆಗೆ ವಿಶೇಷ ಕುತೂಹಲ ಮತ್ತು ಆಸಕ್ತಿಯನ್ನು ಕೆರಳಿಸಿತು. ಆತನ ಈ ಬಗೆಯ ಅನ್ವೇಷಣೆಯಿಂದ ಹಿಂದೆ ಹೇಳಿದಂತೆ ಆಹಾರ ಮತ್ತು ಆರೋಗ್ಯಗಳೆರಡೂ ದಕ್ಕಿದವು. ಇಷ್ಟಕ್ಕೆ ಸುಮ್ಮನಾಗದ ಆತನ ಮನಸ್ಸು ಆಹಾರದ ದೃಷ್ಟಿಯಿಂದ ಇನ್ನೂ ಕೆಲವು ಸಸ್ಯಗಳನ್ನು ಬೆಳೆಯಲು ಮುಂದಾಯಿತಲ್ಲದೆ, ಬೆಳೆಯುವ ಅವಧಿಯಲ್ಲಿ ಸಂಭವಿಸುವ ರೋಗಗಳಿಗೆ ಮದ್ದನ್ನು ವಿವಿಧ ತಂತ್ರೋಪಾಯಗಳ ಮೂಲಕ ಹುಡುಕ ತೊಡಗಿತು. ಹೀಗೆ ಮನುಷ್ಯನು ತನ್ನ ಆರೋಗ್ಯ, ಸಾಕು ಪ್ರಾಣಿಗಳ ಆರೋಗ್ಯ ಮತ್ತು ಆಹಾರ ಬೆಳೆಗಳ ಆರೋಗ್ಯ ಈ ಮುಂತಾದವುಗಳ ರಕ್ಷಣೆಯನ್ನು ಮಾಡುವ ಯೋಚನೆಯೂ ಯೋಜನೆಯಾಗಿ ಅನುಷ್ಠಾನಗೊಳ್ಳುತ್ತಾ ಸಾಗಿ ಬರುತ್ತಿದೆ.

ಜನಪದ ವೈದ್ಯದಲ್ಲಿ ಮನುಷ್ಯವೈದ್ಯ, ಪ್ರಾಣಿವೈದ್ಯ ಮತ್ತು ಕೃಷಿವೈದ್ಯ ಎಂಬ ಮೂರು ರೀತಿಯ ಪ್ರಕಾರಗಳನ್ನು ವಿದ್ವಾಂಸರು ಈಗಾಗಲೇ ಗುರುತಿಸಿದ್ದಾರೆ. ಪ್ರಸ್ತುತ ಅಧ್ಯಯನದಲ್ಲಿ ಈ ಮೂರು ರೀತಿಯ ಪ್ರಕಾರಗಳನ್ನೇ ಇರಿಸಿಕೊಳ್ಳಲಾಗಿದೆಯಾದರೂ ಕೃಷಿವೈದ್ಯ ಎಂಬುದಕ್ಕೆ ಬದಲಾಗಿ ಇಲ್ಲಿ 'ಬೆಳೆವೈದ್ಯ' ಎಂದು ಪರ್ಯಾಯವಾಗಿ ಕರೆದುಕೊಳ್ಳಲಾಗಿದೆ.

ಏಕೆಂದರೆ ಕೃಷಿವೈದ್ಯ ಎಂಬುದು ಕೃಷಿಯ ಎಲ್ಲ ರೀತಿಯ ಚಟುವಟಿಕೆಗಳನ್ನು ಒಳಗೊಳ್ಳುವಂತಥದ್ದು. ಉದಾಹರಣೆಗೆ ಜಾನುವಾರುಗಳು, ಮನುಷ್ಯರು, ಸಸ್ಯ, ಭೂಮಿ, ನೀರು ಸೇರಿದಂತೆ ಪರಿಸರವೇ ಅಲ್ಲಿ ಸಮಷ್ಟಿಗೊಂಡಿರುತ್ತದೆ. ಹೀಗೆ ಸಮಷ್ಟಿಗೊಂಡದ್ದೆಲ್ಲವನ್ನು ಈಗಾಗಲೇ ಕೃಷಿ ಜಾನಪದ ಎಂಬ ಹೆಸರಿನಿಂದ ಗುರುತಿಸಿಕೊಳ್ಳಲಾಗಿದೆ, ಮತ್ತು ಹಾಗೆ ಗುರುತಿಸಿರುವುದು ಸೂಕ್ತವೂ ಆಗಿದೆ.

ಅಂದರೆ ವೈದ್ಯ ಎನ್ನುವುದು ನಿರ್ದಿಷ್ಟವಾಗಿ ರೋಗಗಳಿಗೆ ಮಾಡುವ ಉಪಚಾರವನ್ನು ಕುರಿತು ಹೇಳುವಂತಹ ಪರಿಕಲ್ಪನೆಯಾಗಿದೆ. ಆದ ಕಾರಣ ಬೆಳೆವೈದ್ಯ ಎಂದು ಕರೆದಾಗ, ಅದು ಬೆಳೆಗಳಿಗೆ ಬರುವ ರೋಗಗಳನ್ನು ನಿಯಂತ್ರಿಸಲು ಕೈಗೊಳ್ಳುವ ವೈದ್ಯೋಪಚಾರವಾಗಿದೆ.

ಮನುಷ್ಯವೈದ್ಯ, ಪ್ರಾಣಿವೈದ್ಯ ಮತ್ತು ಬೆಳೆವೈದ್ಯ ಈ ಮೂರು ಪ್ರಕಾರಗಳಲ್ಲೂ ವಿಭಿನ್ನವಾದ ಚಿಕಿತ್ಸಾ ಕ್ರಮಗಳವೆ. ಇವುಗಳನ್ನು ಜನಪದ ವೈದ್ಯದ ಚಿಕಿತ್ಸಾ ವಿಧಾನಗಳೆಂದು ಕರೆಯಬೇಕಾಗುತ್ತದೆ. ಆ ಚಿಕಿತ್ಸಾ ವಿಧಾನಗಳೆಂದರೆ : ಪ್ರಕೃತಿ ಚಿಕಿತ್ಸೆ, ಮನಸ್ಸಿನ ಚಿಕಿತ್ಸೆ, ಚಿಕಿತ್ಸಕರು ಹಾಗೂ ಆಧ್ಯಾತ್ಮಿಕತೆ, ಚಿಕಿತ್ಸೆಯಲ್ಲಿ ಪಥ್ಯಾಪಥ್ಯದ ಮಹತ್ವ, ಚಿಕಿತ್ಸೆಯ ಹಿನ್ನೆಲೆಯಲ್ಲಿ ರೋಗಿಗಳ ನಂಬಿಕೆಗಳು, ಪೂಜೆಗಳು, ಹರಕೆಗಳು, ಯಂತ್ರ ಮಂತ್ರಗಳು.

ಮನುಷ್ಯ ವೈದ್ಯದಲ್ಲಿ ಮುಖ್ಯವಾಗಿ ಗಿಡಮೂಲಿಕಾ ವೈದ್ಯೋಪಚಾರವಿದ್ದರೂ, ಮೇಲಿನ ಚಿಕಿತ್ಸಾ ವಿಧಾನಗಳೂ ಬಳಕೆಯಾಗುವುದನ್ನು ಮರೆಯುವಂತಿಲ್ಲ. ಮನಸ್ಸಿನ ಚಿಕಿತ್ಸಾ ವಿಧಾನವೊಂದನ್ನು ಹೊರತುಪಡಿಸಿದರೆ, ಉಳಿದ ಚಿಕಿತ್ಸಾ ವಿಧಾನಗಳು ಪ್ರಾಣಿ ಮತ್ತು ಬೆಳೆ ವೈದ್ಯಗಳಲ್ಲಿ ಬಳಕೆಯಾಗುವುದನ್ನು ಕಾಣಬಹುದು. ಹೀಗೆ ಬಳಕೆಯಾಗುವುದನ್ನು ಆಯಾ ಪ್ರಕಾರಗಳ ಹಿನ್ನೆಲೆಯಲ್ಲಿ ಈಗ ನೋಡೋಣ :

1) ಮನುಷ್ಯ ವೈದ್ಯ : ಪ್ರಸ್ತುತ ಮಹಾಪ್ರಬಂಧದಲ್ಲಿ ಮನುಷ್ಯ ಸಂಬಂಧಿ ವೈದ್ಯೋಪಚಾರವನ್ನು ಕುರಿತು ಚರ್ಚಿಸಲಾಗಿದೆ. ಅದರಲ್ಲೂ ಗಿಡ ಮೂಲಿಕೆಯ ಚಿಕಿತ್ಸೆಯನ್ನೇ ಪ್ರಮುಖವಾಗಿ ವಿಶ್ಲೇಷಣೆಗೊಳಪಡಿಸಲಾಗಿದೆ. ಹಾಗಾಗಿಯೇ ಬೇರೆ ಬೇರೆ ಅಧ್ಯಾಯಗಳಲ್ಲಿ ಮನುಷ್ಯ ವೈದ್ಯದ ಚರ್ಚೆಯನ್ನೇ ಕಾಣಬಹುದಾಗಿದೆ.

2) ಪ್ರಾಣಿವೈದ್ಯ : ಮನುಷ್ಯ ತನ್ನ ಆರೋಗ್ಯದ ಬಗ್ಗೆ ಎಷ್ಟು ಕಾಳಜಿಯನ್ನು ವಹಿಸುವನೋ ಅಷ್ಟೇ ಕಾಳಜಿಯನ್ನು ತನ್ನ ಒಡನಾಡಿಗಳಾದ ಜಾನುವಾರುಗಳ ಬಗ್ಗೆಯೂ ವಹಿಸುತ್ತಾನೆ. ಮನುಷ್ಯನಿಗೆ ಕಾಯಿಲೆ ಬಂದರೆ ಬಾಯಿ ತೆಗೆದು ಹೇಳಿಕೊಳ್ಳುತ್ತಾನೆ. ಅದೇ ಮೂಕ ಪ್ರಾಣಿಗಳಿಗೆ ಬಂದರೆ ಅವು ಏನು ಹೇಳುತ್ತವೆ ಎಂದು ಯೋಚಿಸುವ ಜನಪದರು ತಮ್ಮ ಸಾಕುಪ್ರಾಣಿಗಳ ಅನಾರೋಗ್ಯವನ್ನು ನಿವಾರಿಸಲು ಗಿಡಮೂಲಿಕೆಯ ವೈದ್ಯೋಪಚಾರವನ್ನು ಕಂಡುಕೊಂಡರು.

ಮನುಷ್ಯನ ಹಾಗೂ ಪ್ರಾಣಿಗಳ ವೈದ್ಯಕ್ಕೆ ಬಳಸುವ ಗಿಡ ಮೂಲಿಕೆಗಳಲ್ಲಿ ವ್ಯತ್ಯಾಸವು ಇರುವಂತೆ ಸಾಮ್ಯತೆಯೂ ಇದೆ. ಉದಾಹರಣೆಗೆ ದನಗಳ ರಕ್ತ ಗಂಜಲಕ್ಕೆ ಸಂಬಂಧಪಟ್ಟ ಕಾಯಿಲೆಗೆ ದಾಗಡಿ ಬಳ್ಳಿಸೊಪ್ಪನ್ನು ಮಜ್ಜಿಗೆಯಲ್ಲಿ ಅರೆದು ಕುಡಿಸುತ್ತಾರೆ. ಭೇದಿ(ಉಚ್ಚುವುದು) ಯಾದರೆ ಹಚ್ಚೆ ಸೊಪ್ಪನ್ನು ತಿನ್ನಿಸುತ್ತಾರೆ. ಮನುಷ್ಯ ವೈದ್ಯದಲ್ಲಾದರೆ ಈ ದಾಗಡಿ ಬಳ್ಳಿಯನ್ನು ಮನುಷ್ಯನ ಹೊಟ್ಟೆನೋವಿಗೆ ನೇರವಾಗಿ ಸೇವಿಸಲಾಗುತ್ತದೆ. (190) ಹಚ್ಚೆ ಸೊಪ್ಪನ್ನು ಮೂಲವ್ಯಾಧಿಗೆ ಉಪಯೋಗಿಸುತ್ತಾರೆ (133). ಇಲ್ಲಿ ಪ್ರಾಣಿಗಳ ಕಾಯಿಲೆಗಳಿಗೆ ಬಳಸುವ ಗಿಡಗಳನ್ನು ಮನುಷ್ಯರ ಕಾಯಿಲೆಗಳಿಗೂ ಉಪಯೋಗಿಸಲಾಗುತ್ತದೆ. ಆದರೆ ಗಿಡ ಒಂದೇ ಆಗಿದ್ದರೂ ಅವುಗಳ ಬಳಕೆಯಲ್ಲಿ ಮತ್ತು ಕಾಯಿಲೆಗಳಲ್ಲಿ ವ್ಯತ್ಯಾಸವಿದೆ.

ಜನಪದ ವೈದ್ಯರು ಪ್ರಾಣಿ ಮತ್ತು ಮನುಷ್ಯರಿಗೆ ಪ್ರತ್ಯೇಕವಾಗಿಯೇ ಗಿಡಗಳ ಶೋಧನೆ ಮಾಡಿರುವ ಸಾಧ್ಯತೆಯೂ ಇದೆ. ಮೇಲಿನವುಗಳಿಗಿಂತಲೂ ಭಿನ್ನವಾದದ್ದೆಂದರೆ, ದನಗಳ ಹೊಟ್ಟೆ ಉಬ್ಬಿದರೆ ಎಕ್ಕೆಕೊನೆ ಅಥವಾ ಬೇಲಿ ಜಾಡಲದ ಕೊನೆಗಳನ್ನು ಜಗಿಸುತ್ತಾರೆ ಮತ್ತು ಗಳಲ ಬಾವಿಗೆ ಕಬ್ಬಿಣದಿಂದ ಬರೆ ಹಾಕುತ್ತಾರೆ. ಈ ಬಗೆಯ ಚಿಕಿತ್ಸೆಗಳು ಮನುಷ್ಯ ವೈದ್ಯದಲ್ಲಿ ಕಾಣಲಾಗುವುದಿಲ್ಲ.

ಸಾಮ್ಯತೆಗೆ ಹೆಚ್ಚಿನ ಸಂಖ್ಯೆಯ ಉದಾಹರಣೆಗಳಿವೆ. ದನಗಳ ರಕ್ತವೃದ್ಧಿಗೆ ಮತ್ತು ನಿಃಶಕ್ತಿ ನಿವಾರಣೆಗೆ ಅಶ್ವಗಂಧಿಯನ್ನು ಬಳಸುತ್ತಾರೆ. ಗಾಯಗಳಾದರೆ ಅಡ್ಡಿಕೆ ಸೊಪ್ಪಿನ ರಸವನ್ನು ಹಿಂಡುತ್ತಾರೆ. ಹಾಲು ಅಧಿಕವಾಗಲು ಶತಾವರಿಯನ್ನು ತಿನ್ನಿಸಿದರೆ, ಹಾವಿನ ವಿಷಕ್ಕೆ ಆಡುಮುಟ್ಟದ ಬಳ್ಳಿ ಮತ್ತು ಈಶ್ವರಿ ಬೇರುಗಳನ್ನು ಉಪಯೋಗಿಸುತ್ತಾರೆ. ಮೂಳೆ ಮುರಿದರೆ ಕೂಡುಮದ್ದಿನ ಮರ ಮತ್ತು ಹರದಚ್ಚುಗವನ್ನು ಬಳಸುತ್ತಾರೆ. ಇದೇ ಗಿಡಗಳನ್ನು ಈ ಬಗೆಯ ರೋಗಗಳಿಗೆ ಮನುಷ್ಯನ ವೈದ್ಯದಲ್ಲೂ ಬಳಸಲಾಗುತ್ತದೆ. ಆದರೆ ಔಷಧಿ ಸೇವಿಸುವ ಕ್ರಮ ಮತ್ತು ಪ್ರಮಾಣದಲ್ಲಿ ಮಾತ್ರ ವ್ಯತ್ಯಾಸವಿರುತ್ತದೆ.

ಆಧ್ಯಾತ್ಮಿಕ ಶಕ್ತಿಯನ್ನು ಸಂಪಾದಿಸಿದವರು ಸಹ ಕಾಯಿಲೆಗಳನ್ನು ಗುಣಪಡಿಸಬಲ್ಲವರಾಗಿರುತ್ತಾರೆ; ಇಂಥವರು ಪಶುರೋಗಗಳನ್ನು ನಿಯಂತ್ರಿಸುವ ಶಕ್ತಿಯನ್ನು ಪಡೆದಿರುವಂತಹ ಉದಾಹರಣೆಗಳಿವೆ. ಪಥ್ಯಾಪಥ್ಯದ ಕ್ರಮದಲ್ಲಿ ವ್ಯತ್ಯಾಸವುಂಟಾದಾಗ ಅಂದರೆ ದನಗಳಿಗೆ ಪೌಷ್ಟಿಕ ಆಹಾರದ ಕೊರತೆ,

ಋತುಮಾನಕ್ಕೆ ವಿರುದ್ಧವಾದ ಆಹಾರ ಪದ್ಧತಿಯಿಂದಲೂ ರೋಗ ಉಂಟಾಗುವ ಸಂಭವ ಇರುತ್ತದೆ. ಈ ರೋಗಗಳ ನಿವಾರಣೆಗಾಗಿ ಗ್ರಾಮದೇವತೆಯಲ್ಲಿ ಹರಕೆಯನ್ನು ಹೊರುತ್ತಾರೆ ಮತ್ತು ವಿಶೇಷವಾದ ಪೂಜೆಯನ್ನು ಸಲ್ಲಿಸುತ್ತಾರೆ.

3) ಬೆಳೆವೈದ್ಯ : ಮನುಷ್ಯನ ಹಾಗೆ ಗಿಡಮರಗಳಿಗೂ ಸಹ ರೋಗಗಳ ಹಾವಳಿ ಮೊದಲಿನಿಂದಲೂ ಇದ್ದದ್ದೇ. ಈ ರೋಗಗಳ ನಿಯಂತ್ರಣಕ್ಕಾಗಿ ಮನುಷ್ಯ ಹಿಂದಿನಿಂದಲೂ ತನ್ನ ಪ್ರಯತ್ನವನ್ನು ಮಾಡುತ್ತಲೇ ಬಂದಿದ್ದಾನೆ.

ಕ್ರಿ.ಶ. 10ನೆ ಶತಮಾನದಲ್ಲಿ ಜೀವಿಸಿದ್ದ ಸುರಪಾಲನು 'ವೃಕ್ಷಾಯುರ್ವೇದ' ಎಂಬ ತನ್ನ ಸಂಸ್ಕೃತ ಕೃತಿಯಲ್ಲಿ ಮರಗಳ ಸಂರಕ್ಷಣೆ ಮತ್ತು ರೋಗ ನಿಯಂತ್ರಣವನ್ನು ಕುರಿತು ವಿವೇಚಿಸಿದ್ದಾನೆ. ಇದಕ್ಕೂ ಪೂರ್ವದಲ್ಲಿ ಚರಕ, ಸುಶ್ರುತ ಸಂಹಿತೆಗಳಲ್ಲೂ ಪ್ರಸ್ತಾಪಿಸಲಾಗಿದೆ ಹಾಗೂ 6ನೆಯ ಶತಮಾನದ ವರಾಹಮಿಹಿರನ 'ಬೃಹತ್ಸಂಹಿತಾ' ಎಂಬ ಗ್ರಂಥದಲ್ಲಿ ಇರುವ ವೃಕ್ಷಾಯುರ್ವೇದ ಎಂಬ ಅಧ್ಯಾಯದಲ್ಲಿ ಮರಗಳು ಮತ್ತು ಸಸ್ಯಗಳನ್ನು ಹೇಗೆ ಸಂರಕ್ಷಿಸಬೇಕು ಎಂಬುದನ್ನು ವಿವರಿಸಲಾಗಿದೆ. ಇದರಿಂದಾಗಿ ಮರಗಳ ಹಾಗೂ ಸಸ್ಯಗಳ ರೋಗದ ಪ್ರಾಚೀನತೆಯನ್ನು ತಿಳಿಯಬಹುದಾಗಿದೆ.

ರೈತನ ಹೊಲದಲ್ಲಿಯ ಮರಗಳು ಮತ್ತು ಬೆಳೆಗಳು ಗೊತ್ತಿಲ್ಲದ ಕಾಯಿಲೆಗಳಿಗೆ ಈಡಾದರೆ, ರೈತನು ತಾನು ಪೂಜಿಸುವ ದೇವರ ಪ್ರಸಾದ(ಅನ್ನ)ವನ್ನು ತಂದು ಹೊಲದ ಸುತ್ತ ಚೆಲ್ಲುತ್ತಾನೆ ಯಲ್ಲದೆ(ಸರುಗ), ದೇವರ ಭಂಡಾರವನ್ನೋ, ಮಂತ್ರಿಸಿದ ತಾಯಿತವನ್ನೋ, ಅಥವಾ ನೀರನ್ನೋ ಬೆಳೆಯ ರಕ್ಷಣೆಗಾಗಿ ಬಳಸುತ್ತಾನೆ. ಇವಿಷ್ಟೇಯಲ್ಲದೆ ಫಸಲು ಉತ್ತಮವಾಗಿ ಲಭಿಸಲೆಂದು ದೇವರಿಗೆ ಹರಕೆ ಹೊರುವುದು, ಇದಕ್ಕಾಗಿ ಮೊದಲು ಬಂದ ಜೋಳದ ತೆನೆ, ಮೆಣಸಿನ ಕಾಯಿ, ಕುಂಬಳಕಾಯಿ, ಹಲಸು, ಮಾವುಗಳನ್ನು ತಂದು ದೇವರಿಗೆ ಅರ್ಪಿಸುತ್ತಾರೆ. "ಫಸಲಿಗೆ ಬರುತ್ತಿದ್ದ ಕೆಲ ರೋಗ ಅಥವಾ ಉಪದ್ರವದ ಕೀಟಗಳ ನಿವಾರಣೆಗಾಗಿಯೇ ಕೆಲವು 'ದೈವ'ಗಳನ್ನು ಕೃಷಿಕರು ಕಲ್ಪಿಸಿ ಕೊಂಡಿರುವುದು ಉಂಟು. ಕರಾವಳಿಯ ಆಟಿಕಳೆಂಟ ಅಂತಹ ಒಂದು ದೈವ"[16]

ಇದೇ ರೀತಿಯ ಆಚರಣೆಯ ಹಿನ್ನೆಲೆಯಲ್ಲಿ ಜೋಕುಮಾರನ ಹುಣ್ಣಿಮೆಯನ್ನು ನೋಡಬಹುದು.

ಜೋಕಪ್ಪನು ಬೆಳೆಯನ್ನು ರಕ್ಷಿಸಿ ಮಳೆಯನ್ನು ತರಿಸುವ ದೈವವೆಂಬ ಕಾರಣದಿಂದ ಜನಪದರು ಆತನನ್ನು ವಿಶೇಷ ಭಕ್ತಿಯಿಂದ ನೆನೆದು ಆರಾಧಿಸುತ್ತಾರೆ. ಹೊಲದಲ್ಲಿರುವ ಎಲ್ಲ ಫಸಲುಗಳಿಂದ ಎಲೆಗಳನ್ನು ತಂದು ಜೋಕುಮಾರನ ಒಕ್ಕಲಿನವರು ಕೊಟ್ಟ ವಿವಿಧ ಸಸ್ಯಗಳ ಎಲೆಗಳನ್ನು ಇದರೊಂದಿಗೆ ಸೇರಿಸಿ; ಅವುಗಳನ್ನು ಬೇಯಿಸಿ ಸೂರ್ಯ ಮೂಡುವ ಮುನ್ನವೇ ಎಲ್ಲಾ ಬೆಳೆಗಳಿಗೆ 'ಸರುಗ'ವನ್ನು ಚೆಲ್ಲಿ ಉಳಿದಿರುವುದನ್ನು ಹೊಲದ ಒಂದು ಭಾಗದಲ್ಲಿ ಹೂಳುತ್ತಾರೆ. ಇದೇ ಸಂದರ್ಭದಲ್ಲಿ ತಳದ ಹೊರ ಭಾಗಕ್ಕೆ ಸುಣ್ಣ ಬಳಿದ ಮಡಕೆಯೊಂದನ್ನು ಹಂಗುದಾರ ಸುತ್ತಿ ಪೂಜಿಸಿದ ಮೂರು ಕಲ್ಲುಗಳ ಮೇಲೆ ದಬ್ಬು ಹಾಕುತ್ತಾರೆ ಮತ್ತು ಕರಿಭಂಟನ ದೊಡ್ಡ ರಂಬೆಯೊಂದನ್ನು ಫಸಲಿನ ಮಧ್ಯ ಸಿಕ್ಕಿಸುತ್ತಾರೆ. ಇದು ಬೆಳೆಗಳಿಗೆ ಬರುವ ರೋಗವನ್ನು ತಡೆಗಟ್ಟುತ್ತದೆ ಎಂಬ ನಂಬಿಕೆ ಜನಪದರಲ್ಲಿ ಇರುವುದರಿಂದ ಪ್ರತಿವರ್ಷವೂ ಇದನ್ನು ಆಚರಿಸಿಕೊಂಡು ಬರುತ್ತಾರೆ.

ಮನುಷ್ಯನು ಪಥ್ಯಾಪಥ್ಯದಿಂದ ಕೆಲವು ಕಾಯಿಲೆಗಳನ್ನು ನಿವಾರಿಸಿಕೊಳ್ಳುವ ಹಾಗೆ ಮಣ್ಣಿನ ಫಲವತ್ತತೆಯನ್ನು ಕಾಯ್ದುಕೊಂಡರೆ ಬೆಳೆ ಸಮೃದ್ಧಿಯಾಗಿ ಬರುವುದು ಮಾತ್ರವಲ್ಲ ರೋಗದಿಂದ ಮುಕ್ತವೂ ಆಗುತ್ತದೆಯೆಂದು ಭಾವಿಸುವ ಜನಪದರು ವಿವಿಧ ಬಗೆಯ ಎಲೆಗಳನ್ನು ಹೊಲಕ್ಕೆ ಹಾಕುವುದು, ಕುರಿಮಂದೆಯನ್ನು ಮಲಗಿಸುವುದು – ಮೊದಲಾದ ಚಟುವಟಿಕೆಗಳನ್ನು ಮಾಡುತ್ತಾರೆ.

'ಈ ಬುಡ್ ರಾಕ್ಷಿ ಸೊಪ್ಪನ್ನು ಅಡಿಕೆ, ತೆಂಗಿನ ಮರಗಳ ಬುಡಕ್ಕೆ ಹಾಕಿದರೆ ಗೊಬ್ಬರವೂ ಆಗುತ್ತದೆ, ಯಾವುದೇ ರೋಗ ಬರದಂತೆ ತಡೆಗಟ್ಟುತ್ತದೆ' (101) ಇದರಂತೆ ಹೊಂಗೆ ಮರದ ಎಲೆ ತಂಗಟೆ ಗಿಡದ ಎಲೆಗಳನ್ನು ಹಾಕುತ್ತಾರೆ. ಚಂಡು ಹೂವಿನ ಗಿಡಗಳನ್ನು ಫಸಲಿನ ಸುತ್ತ ಹಾಕುವುದರಿಂದ ಯಾವುದೇ ಕೀಟ ಬಂದರೂ ಮೊದಲು ಚಂಡು ಹೂವಿನ ಮೇಲೆ ಕುಳಿತುಕೊಳ್ಳುತ್ತದೆ. ಇದರಿಂದ ಬೆಳೆಗೆ ರೋಗ ಹರಡುವುದಿಲ್ಲ (101) ಈ ಕುರಿ ಮಂದೆಯನ್ನು ಮಲಗಿಸುವುದರಿಂದ ಮಣ್ಣಿಗೆ ಹೆಚ್ಚಿನ ಫಲವತ್ತತೆ ಸಿಗುತ್ತದೆ. ಕುರಿ ಮೇಕೆಗಳ ಹಿಕ್ಕೆಯಿಂದ ಮತ್ತು ಗಂಜಲದಿಂದ ಮಣ್ಣಿನ ರೋಗ ನಿರೋಧಕಶಕ್ತಿ ಅಧಿಕಗೊಂಡು ಫಲವತ್ತತೆ ಹೆಚ್ಚಾಗುತ್ತದೆ. ಅಂದರೆ ಅವುಗಳು ವಿವಿಧ ಬಗೆಯ ಗಿಡ ಬಳ್ಳಿಗಳನ್ನು ತಿನ್ನುವುದರಿಂದ ಅವುಗಳ ಹಿಕ್ಕೆ ಮತ್ತು ಗಂಜಲದಲ್ಲಿ ಆ ಶಕ್ತಿ ಇದೆ ಎಂದು ಹೇಳುತ್ತಾರೆ.

ಈ) ಜನಪದ ವೈದ್ಯದ ಪರಂಪರೆ

ಪುರಾಣ, ಕಾವ್ಯ, ಶಾಸನ ಹಾಗೂ ಇತಿಹಾಸ : ಜನಪದ ವೈದ್ಯ ಪರಂಪರೆ ಬೆಳೆದು ಬಂದಿರುವ ಹಾದಿ ತುಂಬ ಧೀರ್ಘವಾದುದು. ಅಂದರೆ, ಮನುಷ್ಯನಿಗೆ ಕಾಯಿಲೆಗಳು ಕಾಣಿಸಿಕೊಂಡ ದಿನದಿಂದಲೇ ಅದರ ಬೆಳವಣಿಗೆಯಾಯಿತು. ಪ್ರಾಚೀನ ಕಾವ್ಯಗಳಲ್ಲಿ ಪುರಾಣಗಳಲ್ಲಿ ವೈದ್ಯವನ್ನು ಬಲ್ಲ ದೇವತೆಗಳನ್ನು (ಅಶ್ವಿನಿದೇವತೆಗಳು) ಹಾಗೂ ಅವರು ಮಡುವ ವೈದ್ಯ ವಿವರಗಳನ್ನು ಕಾಣಬಹುದಾಗಿದೆ. ಇದಕ್ಕೆ ಉದಾಹರಣೆಯಾಗಿ ಜಮದಗ್ನಿ ಮತ್ತು ರೇಣುಕೆಯ ಪ್ರಸಂಗವನ್ನು ನೆನಪಿಸಿಕೊಳ್ಳಬಹುದು. "ಗಂಧರ್ವರ ಜಲಕ್ರೀಡೆಯನ್ನು ನೋಡಿದ ರೇಣುಕೆಯ ಚಿತ್ತ ಚಂಚಲವಾಗಿ, ಅಂದು ತಡವಾಗಿ ಆಶ್ರಮಕ್ಕೆ ಬರುತ್ತಾಳೆ. ಇದರಿಂದ ಕೋಪಗೊಂಡ ಜಮದಗ್ನಿ ಕುಷ್ಠರೋಗಿಯಾಗೆಂದು ಶಾಪಕೊಡುತ್ತಾನೆ. ಆಗ ಎಕ್ಕಯ್ಯ ಮತ್ತು ಜೋಗಯ್ಯ ಎಂಬ ಮುನಿಗಳು ಇವಳನ್ನು ನೀರಿನ ಕುಂಡದಲ್ಲಿ ಸ್ನಾನ ಮಾಡಿಸಿ ರೋಗವನ್ನು ಗುಣಪಡಿಸುತ್ತಾರೆ."[17] ನೀರಿನ ಕುಂಡದಲ್ಲಿ ಈಗಾಗಲೇ ಅನೇಕ ಕುಷ್ಠರೋಗಿಗಳು ಸ್ನಾನ ಮಾಡಿರುತ್ತಾರೆ. ಇದರಿಂದ ಆ ನೀರಿನಲ್ಲಿ ಕುಷ್ಠರೋಗದ ವೈರಸ್‌ಗಳು ಸೇರಿಕೊಂಡಿರುತ್ತವೆ. ಇಂಥಾ ನೀರಿನಲ್ಲಿ ಕುಷ್ಠರೋಗ ಇರುವವರು ಸ್ನಾನಮಾಡಿದರೆ ಈಗಾಗಲೇ ಆ ಕುಂಡದಲ್ಲಿದ್ದ ವೈರಸ್‌ಗಳು ಕುಷ್ಠರೋಗಿಯ ದೇಹದಲ್ಲಿರುವ ವೈರಸ್‌ಗಳನ್ನು ಕೊಲ್ಲುತ್ತವೆ ಎನ್ನುವುದನ್ನು ಇತ್ತೀಚಿನ ವೈಜ್ಞಾನಿಕ ಅದ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಮೇಲಿನ ಉದಾಹರಣೆಯ ಜೊತೆಗೆ, ಮಹಾಭಾರತದ ಘಟನೆಯನ್ನು ಇಲ್ಲಿ ಪ್ರಸ್ತಾಪಿಸುವುದು ಸೂಕ್ತವೆನಿಸುತ್ತದೆ. ಸರ್ಪಯಾಗದಿಂದ ಜನಮೇಜಯ ರಾಜನಿಗೆ ಕುಷ್ಠರೋಗವು ಪ್ರಾಪ್ತವಾಗಿತ್ತು. ಇದರ ಪರಿಹಾರಕ್ಕಾಗಿ ವೈಶಂಪಾಯನಮುನಿ ಹಾಗೂ ಜೈಮಿನಿ ಮುನಿಯಿಂದ ಮಹಾಭಾರತದ ವಾಚನವನ್ನು ಆಲಿಸಿದನು. ಇದರಿಂದ ರಾಜನ ರೋಗ ಪರಿಹಾರವಾಯಿತು. ಇದೇ ರೀತಿ ಸೂರ್ಯಶತಕವನ್ನು ಹಾಡಿದ ಮಯೂರ ಕವಿಯು ತನಗೆ ಬಂದಿದ್ದ ಮರಣಾಂತಿಕ ರೋಗವನ್ನು ಪರಿಹರಿಸಿಕೊಂಡನಂತೆ ಈ ಮೊದಲಾದ ಐತಿಹ್ಯ ಘಟನೆಗಳನ್ನು ಕೇಳಿ ತಿಳಿದಿದ್ದೇವೆ. ಜನಪದ ಕಾವ್ಯಗಳಲ್ಲಿ ಇಂತಹ ಘಟನೆಗಳನ್ನು ಕಾಣಬಹುದಾಗಿದೆ. "ತೊಗಲುಗೊಂಬೆಯಾಟ ಆಡಿಸುವುದರಿಂದ ದನಕರುಗಳಿಗೆ ಬರುವ ರೋಗ ನಿವಾರಣೆಯಾಗುತ್ತದೆ."[18] ಎಂದು ಜನರು ನಂಬಿದ್ದರು. ಹೀಗೆ ಪ್ರಾಚೀನರು ತಮಗೆ ಬರುವ ರೋಗಗಳನ್ನು ವಾಸಿಮಾಡಿಕೊಳ್ಳಲು ನಾಗಮಂಡಲದಂತಹ ಆಚರಣೆ, ಸಿಡಿ ಆಡುವುದು, ಬೇವಿನ ಸೀರೆ ತೊಡುವುದು ಈ ಮುಂತಾದವುಗಳನ್ನು ಮಾಡುವುದರ ಮೂಲಕ ಸಮಾಧಾನವನ್ನು ಹೊಂದುತ್ತಿದ್ದರು.

ಇನ್ನೂ ಇತಿಹಾಸ ಮತ್ತು ಶಾಸನಗಳನ್ನು ಅವಲೋಕಿಸಿದರೆ ಜನರು ತಮ್ಮ ಆರೋಗ್ಯ ಸುಧಾರಣೆಗಾಗಿ ಯಾವ ಪ್ರಯತ್ನಗಳನ್ನು ಮಾಡುತ್ತಿದ್ದರು ಎಂಬುದು ತಿಳಿದುಬರುತ್ತದೆ. "ಅಶೋಕನ ಶಾಸನಗಳಲ್ಲಿ, 'ದೇವಾನಾಂಪ್ರಿಯನು ಹೇಳುವನು ತಾಯಿ ತಂದೆಯರಿಗೆ, ಗುರುಗಳಿಗೆ ಹಾಗೆಯೇ ಪ್ರಜೆಗಳಿಗೆ ಶುಶ್ರೂಷೆ ಮಾಡತಕ್ಕದ್ದು......' ಎಂಬ ನೀತಿ ಭೋಧೆಯನ್ನು ಪ್ರಾಕೃತದಲ್ಲಿ ಆತ್ಮೀಯ ಶೈಲಿಯಲ್ಲಿ ನಿರೂಪಿಸಲಾಗಿದೆ."[19] ಇದೇ ರೀತಿಯಾಗಿ ಮತ್ತೊಂದು ಶಾಸನದಲ್ಲಿ, "ಬಿಜ್ಜಳನ ಕಾಲದ 'ಕೋಡಿಮಠ'ದ ಶಾಸನವು ಬೆಳಗಾಂ ಪ್ರಾಂತ್ಯದಲ್ಲಿ ರೋಗದಿಂದ ನರಳುತ್ತದ್ದವರಿಗೆ ಚಿಕಿತ್ಸೆ ದೊರೆಯುತ್ತಿತ್ತು ಎಂದು ಹೇಳಿದರೆ, ಕ್ರಿ.ಶ. 1158ರ ಮತ್ತೊಂದು ಶಾಸನದಲ್ಲಿ ಅಲ್ಲಿ ಮೂರು ವೈದ್ಯಕೀಯ ಚಿಕಿತ್ಸಾಲಗಳಿದ್ದವು ಎಂಬುದನ್ನು ಹೇಳುತ್ತದೆ." ಬಿಜಾಪುರ ಭಾಗದ ಐವೂರು ಶಾಸನದಲ್ಲಿ "ಹಾವು ಚೇಳುಗಳ ವಿಷಗಳನ್ನು, ಸುಟ್ಟಗಾಯಗಳನ್ನು ಅಲ್ಲಿಯ ಸ್ವಯಂಭುದೇವರು ನಿಮಿಷ ಮಾತ್ರದಲ್ಲಿ ಪರಿಹರಿಸುತ್ತದೆ."[20] ಎಂದು ಹೇಳಲಾಗಿದೆ. ಚಿತ್ರದುರ್ಗ ಕಾಟಿಹಳ್ಳಿ ಶಾಸನದಲ್ಲಿ "ಮಾದರಸ ದಣ್ಣಾಯಕನು ಅರವಟ್ಟಿಗೆಯೊಂದಕ್ಕೆ ಒಂದು ಭೂಮಿಯನ್ನು ದಾನವಾಗಿ ಇತ್ತನೆಂಬುದು ಈ ಶಾಸನದ ವಿಷಯ. ಸಿದ್ದಾಪುರ ಹಡವನಹಳ್ಳಿ ರಾಜ್ಯದಲ್ಲಿ ಉಭಯ ನಾನಾ ದೇಶಿ ಸಮಸ್ತರು ಹಲವರು ಓಡಾಡುತ್ತಿದ್ದ ಮಾರ್ಗದಲ್ಲಿ ಇದ್ದ ಆ ಅರವಟ್ಟಿಗೆಯಲ್ಲಿ ಅಂಬಕಳವನ್ನು (= ಮಜ್ಜಿಗೆ ಅಂಬಲಿ, ಹುಳೀ ಅಂಬಲಿ) ಮತ್ತು ಸಿದ್ಧೌಷಧಿಗಳನ್ನು ಸಹಾ ಶಿವಾರ್ಥವಾಗಿ ಎಂದು ನೀಡುತ್ತಿದ್ದರು"[21] ಎನ್ನುವುದು ಬಹು ಮುಖ್ಯವಾದ ಸಂಗತಿ. ಬಳಲಿದ ಪ್ರಯಾಣಕರಿಗೆ ನೀರು, ಮಜ್ಜಿಗೆ, ಪಾನಕ, ಅನ್ನದಾನ ನೀಡುವುದು ಸಾಮಾನ್ಯವಾದ ಸಂಗತಿ, ಆದರೆ ಔಷಧಗಳನ್ನು ನೀಡುತ್ತಿದ್ದರು ಎನ್ನುವುದು ಜನರ ಆರೋಗ್ಯ ಕಲ್ಯಾಣಕ್ಕೆ ನೀಡದ ಒತ್ತು ಎನ್ನಬಹುದು. ಹಳ್ಳಿ ಮದ್ದು, ನಾಡಮದ್ದು ಎಂದು ಶಾಸನದಲ್ಲಿ ಪ್ರಸ್ತಾಪಿಸಿಲ್ಲವಾದರೂ ಸಿದ್ಧೌಷಧ ಎನ್ನುವುದು ಬಹುಜನರು ತಿಳಿದಿದ್ದ ಜನಪದ ವೈದ್ಯವೂ ಯಾಕೆ ಆಗಿರಬಾರದು ಎಂದು ಯೋಚಿಸಲು ಅವಕಾಶವಿದೆ. ಹೀಗೆ ಶಾಸನಗಳಲ್ಲಿ ರೋಗ ನಿವಾರಣೆಗಾಗಿ ಕೈಗೊಳ್ಳುವ ಔಷಧೋಪಚಾರದ ವಿವರಣೆಯನ್ನು ನೋಡಿದಾಗ, ಇವುಗಳಲ್ಲ ಜನಪದ ವೈದ್ಯ ಮಾಹಿತಿಗಳೆಂದೇ ಭಾವಿಸಬಹುದು.

ಒಟ್ಟಿನಲ್ಲಿ ಇತಿಹಾಸದಲ್ಲಿ ಹಾಗೂ ಕಾವ್ಯ ಕೃತಿಗಳಲ್ಲಿ ವೈದ್ಯ ವಿವರಗಳು ಹೇರಳವಾಗಿ ಉಲ್ಲೇಖಗೊಂಡಿವೆ. ಚಿಕಿತ್ಸೆಯ ಮಹತ್ವವರಿತ ಅಶೋಕನು ಮನುಷ್ಯರಿಗೂ ಪಶುಗಳಿಗೂ ಚಿಕಿತ್ಸಾಲಯಗಳನ್ನು ಪ್ರಾರಂಭಿಸಿದ್ದಲ್ಲದೆ ಅದಕ್ಕೆ ಬೇಕಾದ ಔಷಧೀಯ ಸಸ್ಯಗಳನ್ನು ವಿದೇಶಗಳಿಂದ ತರಿಸಿ ನಟ್ಟು ಬೆಳೆಸಲು

ಪ್ರೋತ್ಸಾಹಿಸಿದನಂತೆ ಎಂದು ಇತಿಹಾಸದಲ್ಲಿ ಓದುತ್ತೇವೆ. ಜನಪದ ವೈದ್ಯದ ಚಿಕಿತ್ಸಾ ವಿವರಣೆಗಳನ್ನು ಶಿವಕೋಟ್ಯಾಚಾರ್ಯನ 'ವಡ್ಡಾರಾಧನೆ', 'ಕೆಳದಿ ನೃಪ ವಿಜಯಂ', 'ಶಿವತತ್ವ ರತ್ನಾಕರ', 'ಗಾತ ಸಪ್ತಪದಿ', 'ಕಂಠೀರವ ನರಸರಾಜ ವಿಜಯ', ಕೌಟಲ್ಯನ ಅರ್ಥಶಾಸ್ತ್ರ', ನಿಜಗುಣ ಶಿವಯೋಗಿಗಳ 'ವಿವೇಕ ಚಿಂತಾಮಣಿ' ಈಮೊದಲಾದ ಕೃತಿಗಳಲ್ಲಿ ಕಾಣಬಹುದು. ಇವುಗಳೆಲ್ಲ ಸಂಪೂರ್ಣ ವೈದ್ಯ ಕೃತಿಗಳು ಅಲ್ಲದಿದ್ದರೂ ವೈದ್ಯ ವಿವರರಣೆಗಳನ್ನು ಒಳಗೊಂಡಿವೆ. ಇಂಥ ಕೃತಿಗಳಲ್ಲಿ ಸ್ವಲ್ಪ ಪ್ರಮಾಣದ ವೈದ್ಯ ವಿಚಾರಗಳು ದೊರೆತರೆ, ವೈದ್ಯವನ್ನು ಕುರಿತೇ ಕೆಲವು ಗ್ರಂಥಗಳು ರಚನೆ ಆಗಿರುವುದನ್ನು ಗಮನಿಸಬಹುದು.

ಅಂಥವುಗಳಲ್ಲಿ 'ಕೀರ್ತಿವರ್ಮನ 'ಗೋವೈದ್ಯ' (ಸು.ಕ್ರಿ.ಶ 1070)ವು ಮೊದಲಿನೆಯದಾಗಿದೆ. ತದನಂತರದಲ್ಲಿ ಜಗದ್ದಳ ಸೋಮನಾಥನ 'ಕಲ್ಯಾಣ ಕಾರಕ' (ಸು.ಕ್ರಿ.ಶ. 1175), ಒಂದನೆಯ ಮಂಗರಸನ 'ಖಗೇಂದ್ರ ಮಣಿದರ್ಪಣ' (ಸು.ಕ್ರಿ.ಶ. 1360)ವು ವಿಷವೈದ್ಯವನ್ನು ವಿಸ್ತಾರವಾಗಿ ನಿರೂಪಿಸುತ್ತದೆ. ಇವರುಗಳೆಲ್ಲದೆ ಕ್ರಿ.ಶ. 12ರಿಂದ 18ನೇ ಶತಮಾನದ ನಡುವಿನ ಕಾಲಮಾನದಲ್ಲಿ ದೇವೇಂದ್ರ ಮುನಿ(ಬಾಲಗ್ರಹ ಚಿಕಿತ್ಸೆ) ಶ್ರೀಧರದೇವ (ವೈದ್ಯ ಶಾಸ್ತ್ರ) ಸಾಳ್ವ (ವೈದ್ಯಸಾಂಗತ್ಯ) ಚನ್ನರಾಜ (ವೈದ್ಯಸಾರ ಸಂಗ್ರಹ), ವೀರಭದ್ರರಾಜ (ಹಸ್ತಾಯುರ್ವೇದ) ನಂಜರಾಜ(ಸಕಲ ವೈದ್ಯ ಸಂಹಿತಾ ಸಾರಾರ್ಣವ) ಬ್ರಹ್ಮ (ವೈದ್ಯಕಂದ), ತಿಮ್ಮರಾಜ ಗೌಡ (ಸ್ತ್ರೀ ವೈದ್ಯ) ಚಾವುಂಡ ರಾಯನ (ಲೋಕೋಪಕಾರ)'[22] ಮುಂತಾದ ಕೃತಿಗಳು ಸಂಸ್ಕೃತ ವೈದ್ಯ ಗ್ರಂಥಗಳ ಪ್ರೇರಣೆಯಿಂದ ಬಂದಿದ್ದರೂ ಸಮಕಾಲೀನ ವೈದ್ಯ ವಿವರಣೆಗಳನ್ನು ಅವು ಒಳಗೊಂಡಿವೆ. ಉದಾಹರಣೆಗೆ 'ಮುಳ್ಳು ಕಾಲಲ್ಲಿ ಸೇರಿದಾಗ ಅದಕ್ಕೆ ಎಕ್ಕೆಹಾಲು ಹಾಕಿ ಕಲ್ಲಿನಿಂದ ಶಾಖ ಕೊಟ್ಟರೆ ಬಾಧೆ ಇಂಗುವುದು. ಇದು ಅಪ್ಪಟ ಜನಪದ ವೈದ್ಯ ಸಂಗತಿ'[23] ಈ ಮಾದರಿಯ ಸಂಗತಿಗಳಿಂದ ಇದರಿಂದ ಜನಪದ ವೈದ್ಯವು ನಿರಂತರವಾಗಿ ಜನರ ಆರೋಗ್ಯದಲ್ಲಿ ವಹಿಸಿರುವ ಪಾತ್ರವನ್ನು ತಿಳಿಯಬಹುದಾಗಿದೆ.

ಹಿಂದೆ ಪ್ರಸ್ತಾಪಿಸಿದಂತೆ ಮೌಖಿಕ ಸಂಪ್ರದಾಯದ ಕಾವ್ಯಗಳಾದ ಮೈಲಾರಲಿಂಗನ ಕಾವ್ಯ, ಮಾದಪ್ಪನ ಕಾವ್ಯ, ಜುಂಜಪ್ಪನ ಕಾವ್ಯ, ಮಂಟೇಸ್ವಾಮಿ ಕಾವ್ಯ, ಎಲ್ಲಮ್ಮನ ಕಾವ್ಯ, ತುಳುವಿನಸಿರಿ, ಮೊದಲಾದವುಗಳು ಸಾಂಸ್ಕೃತಿಕ ಚರಿತ್ರೆಗಳು ಆಗಿರುವುದರಿಂದ ಸಹಜವಾಗಿ ಇತರ ಎಲ್ಲಾ ಸಂಗತಿಗಳು ಅಲ್ಲಿ ಪ್ರಸ್ತಾಪಿಸಿರುವಂತೆ ಜನಪದ ವೈದ್ಯ ವಿಚಾರವೂ ಪ್ರಾಸಂಗಿಕವಾಗಿ ಬಂದಿರುತ್ತದೆ.

ಆಧುನಿಕ ಸಂದರ್ಭದಲ್ಲಿ ಜನಪದ ವೈದ್ಯದ ಅಧ್ಯಯನ : ಆಧುನಿಕ ಸಂದರ್ಭದಲ್ಲಿ ಜನಪದ ವೈದ್ಯ ಪರಂಪರೆಯನ್ನು ಕುರಿತು ಹೇಳುವ ಮೊದಲು ಒಂದು ಸಂಗತಿಯನ್ನು ಇಲ್ಲಿ ಗಮನಿಸಬೇಕು. 'ಕರ್ನಾಟಕದಲ್ಲಿ ನಡೆದಿರುವ ಬಹುಮಟ್ಟಿನ ಜಾನಪದ ಅಧ್ಯಯನವೆಲ್ಲಾ ಸಾಹಿತ್ಯಿಕ ಬಗೆಗಳಿಗೆ ಸಂಬಂಧ ಪಡುತ್ತದೆ ಆದರೂ ಜನಪದ ವೈಜ್ಞಾನಿಕ ಬಗೆಗಳಾದ ವೈದ್ಯ, ಮಾಟ, ಮಂತ್ರ, ಭವಿಷ್ಯವಾಚನ, ಚಮತ್ಕಾರ, ಗಣಿತ ಮತ್ತು ನಂಬಿಕೆಗಳಿಗೆ ಸಂಬಂಧಿಸಿದಂತೆ ನಡೆದಿರುವ ಪರಿವೀಕ್ಷಣೆ ಹಾಗೂ ಸಂಗ್ರಹಕಾರ್ಯ ಗಣನೀಯವಾದುದಲ್ಲವಾದರೂ ಸಾಕಷ್ಟು ಪ್ರೋತ್ಸಾಹದಾಯಕವಾಗಿದೆ ಎನ್ನಬಹುದು'[24] ಈ ವೈಜ್ಞಾನಿಕ ಬಗೆಗಳಲ್ಲಿ ಜನಪದ ವೈದ್ಯ ಮೊದಲ ಸ್ಥಾನದಲ್ಲಿದೆ, ಆದರೂ ಇದರ ಅಧ್ಯಯನ ಗಂಭೀರವಾಗಿ ನಡೆಯಬೇಕಾಗಿದೆ. ಇತ್ತೀಚಿಗೆ ಈ ಕ್ಷೇತ್ರದ ಅಧ್ಯಯನವು ಹಲವರ ಆಸಕ್ತಿಯನ್ನು ಸೆಳೆಯುತ್ತಿದೆ.

ಇದುವರೆಗಿನ ಜನಪದ ವೈದ್ಯದ ಅಧ್ಯಯನವನ್ನು ಮೂರು ವಿಭಾಗಗಳಲ್ಲಿ ವಿಂಗಡಿಸಬಹುದು. ಒಂದನೆಯದು ನಿರ್ದಿಷ್ಟವಾಗಿ ಜನಪದ ವೈದ್ಯವನ್ನು ಕುರಿತ ಅಧ್ಯಯನಗಳು, ಎರಡನೆಯದು ಬುಡಕಟ್ಟು ಹಾಗೂ ಪ್ರಾದೇಶಿಕ ಹಿನ್ನೆಲೆಯ ಅಧ್ಯಯನಗಳು, ಮೂರನೆಯದು ಅನುಭವಗಳನ್ನು ದಾಖಲಿಸಿರುವ ಜನಪ್ರಿಯ ವೈದ್ಯ ಕೃತಿಗಳು. ಈ ಬಗೆಯ ಮೂರು ನೆಲೆಗಳಲ್ಲಿ ನಾವು ಜನಪದ ವೈದ್ಯವನ್ನು ಗ್ರಹಿಸಬೇಕಾಗಿದೆ ಇಲ್ಲದಿದ್ದಲ್ಲಿ ಜನಪದ ವೈದ್ಯ ಎಂದರೆ ಯಾವುದು ಎಂಬಂತಹ ಗೊಂದಲ ಶುರುವಾಗುತ್ತದೆ.

ಕ್ಷೇತ್ರಾಧ್ಯಾಯನದಿಂದ ಬಂದ ಕೃತಿಗಳು : ನಿರ್ದಿಷ್ಟವಾಗಿ ಜನಪದ ವೈದ್ಯವನ್ನು ಕುರಿತು ನಡೆದಿರುವ ಅಧ್ಯಯನಗಳು ತುಂಬ ಕಡಿಮೆ. ಈ ನಿಟ್ಟಿನಲ್ಲಿ ಆಗಿರುವ ಪ್ರಯತ್ನಗಳೆಂದರೆ, 1981ರಲ್ಲಿ ಪ್ರಕಟವಾದ ಎಲ್. ಆರ್. ಹೆಗಡೆ ಅವರ 'ಜನಪದ ವೈದ್ಯ' ಎಂಬ ಕೃತಿ ಜನಪದ ವೈದ್ಯ ಸಂಗ್ರಹದಿಂದಲೇ ಬಂದಿರುವುದಾಗಿದೆ. ಉತ್ತರ ಕನ್ನಡ ಜಿಲ್ಲೆ ಮತ್ತು ಮಂಗಳೂರು ಪ್ರದೇಶಗಳಿಂದ ಮಾಹಿತಿಯನ್ನು ದಾಖಲಿಸಿದ್ದಾರೆ. 219 ಜನ ವಕ್ತೃಗಳನ್ನು ಸಂದರ್ಶಿಸಿರುವುದು ಒಂದು ಸಾಹಸವೆಂದು ಹೇಳಬಹುದು. 2006ರಲ್ಲಿ ಪ್ರಕಟವಾದ ಮಳಲಿ ವಸಂತಕುಮಾರ್ ಅವರ 'ಕರ್ನಾಟಕ ಜನಪದ ವೈದ್ಯ' ಕೃತಿಯು ಹಾಸನ ಭಾಗದ ಮಾಹಿತಿಯನ್ನು ನೀಡುತ್ತದೆ. ಈ ಕೃತಿಗೆ ದೀರ್ಘವಾದ ಪ್ರಸ್ತಾವನೆಯನ್ನು ಬರೆದು ಜನಪದ ವೈದ್ಯ ಎಂದರೇನು ಎಂಬುದನ್ನು ವಿಶ್ಲೇಷಣೆ ಮಾಡಿರುವುದು ಬಹಳ ಉಪಯುಕ್ತವಾಗಿದೆ.

1993ರಲ್ಲಿ ಪ್ರಕಟವಾದ ಡಾ. ಸಿ.ಆರ್. ರಂಗೇಗೌಡ ಹಾಗೂ ಡಾ.ಮಾಗಡಿ ಆರ್. ಗುರುದೇವ ಅವರ 'ಜನಪದ ಪಶುರೋಗ ಚಿಕಿತ್ಸೆ, ಎಂಬ ಕೃತಿಗಾಗಿ ಮಾಗಡಿ ಪ್ರದೇಶದಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಇಲ್ಲಿ ಮಾಹಿತಿಯನ್ನು ವ್ಯವಸ್ಥಿತವಾಗಿ ಕೊಡಲಾಗಿದೆ. ಇದರ ವಿಶೇಷವೆಂದರೆ, 49 ಔಷಧೀಯ ಸಸ್ಯಗಳ ಉತ್ತಮವಾದ ಛಾಯಚಿತ್ರ ಹಾಗೂ ಅವುಗಳ ಸಸ್ಯಶಾಸ್ತ್ರೀಯ ಹೆಸರುಗಳನ್ನು ನೀಡಿರುವುದು; ಜನಪದ ವೈದ್ಯವನ್ನು ವೈಜ್ಞಾನಿಕ ದೃಷ್ಟಿಯಲ್ಲಿ ಅಧ್ಯಯನ ಮಾಡ ಹೊರಟಿರುವುದು ಸ್ವಾಗತಾರ್ಹವಾದುದು. ಔಷಧಿಗೆ ಬಳಸುವ ಗಿಡಮೂಲಿಕೆಗಳನ್ನು ಛಾಯಾಚಿತ್ರದ ಸಮೇತ ಸ್ಪಷ್ಟವಾಗಿ ಗುರುತಿಸದೇ ಹೋದರೆ ಬರಿ ಮಾಹಿತಿಯಿಂದ ಈ ವೈದ್ಯ ಪದ್ಧತಿಯನ್ನು ಮತ್ತಷ್ಟು ಗೊಂದಲದಲ್ಲಿ ಸಿಕ್ಕಿಸಿದಂತೆ ಆಗುತ್ತದೆ.

1995ರಲ್ಲಿ ಪ್ರಕಟವಾದ ಡಾ. ಎಲ್.ಆರ್. ಹೆಗಡೆರವರ 'ಪಶುವೈದ್ಯ ರತ್ನಾಕರ', ಕೃತಿಯು ಪಶುರೋಗಗಳನ್ನ ಕುರಿತ ವಿಷಯ ಸಂಗ್ರಹವಾದರೆ, 'ಊರೌಷಧಿಗಳ ಚಿಕಿತ್ಸೆ' ಎಂಬ ಕೃತಿಯಲ್ಲಿ ಸುಮಾರು 113 ಕಾಯಿಲೆಗಳಿಗೆ ಚಿಕಿತ್ಸೆಯನ್ನು ಒದಗಿಸಿದ್ದಾರೆ. 1997ರಲ್ಲಿ ಪ್ರಕಟಗೊಂಡ ಡಾ. ಪಿ. ಸತ್ಯನಾರಾಯಣ ಭಟ್‌ರ 'ಬೆಂಗಳೂರು ಜಿಲ್ಲೆಯ ಬರಿಗಾಲ ವೈದ್ಯರು' ಎಂಬ ಕೃತಿಯಲ್ಲಿ ಬೆಂಗಳೂರು ಜಿಲ್ಲೆಯ ವ್ಯಾಪ್ತಿಯಲ್ಲಿ 24 ವಕ್ತೃಗಳಿಂದ ಮಾಹಿತಿ ಸಂಗ್ರಹಿಸಿರುವುದನ್ನು ಕೊಡಲಾಗಿದೆ. ಇದು ಜನಪದ ವೈದ್ಯ ಪದ್ಧತಿ ಮತ್ತು ಜನಪದ ವೈದ್ಯರ ಪರಿಸ್ಥಿತಿಯನ್ನು ಪರಿಚಯಿಸುತ್ತದೆ. 2006ರಲ್ಲಿ ಪ್ರಕಟವಾದ 'ಗ್ರಾಮೀಣ ಸಸ್ಯ ಸಿರಿ' ಎಂಬ ಕೃತಿಗಾಗಿ ಡಾ. ಪೂರ್ಣಿಮ, ಡಾ. ಸತ್ಯನಾರಾಯಣ ಭಟ್. ಡಾ. ವಸುಂಧರ ಎಂ ಎನ್ನುವವರು ಕುಣಿಗಲ್ ಭಾಗದಿಂದ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಇಲ್ಲಿ ಸಸ್ಯಗಳಿಗೆ ಶಾಸ್ತ್ರೀಯ ಹೆಸರುಗಳನ್ನು ಕೊಡಲಾಗಿದೆ. ಆಶ್ಚರ್ಯ ವೆಂದರೆ ಮಾಹಿತಿ ನೀಡಿರುವ ವಕ್ತೃಗಳ ಪರಿಚಯವನ್ನೇ ಇಲ್ಲಿ ಕೊಡಲಾಗಿಲ್ಲ. 2000ರಲ್ಲಿ ಪ್ರಕಟಗೊಂಡ 'ಮೂಲಿಕಾ ಪಶುವೈದ್ಯ' ಎಂಬ ಕೃತಿ 'ಬೈಫ್ ಗ್ರಾಮೀಣ ಅಭಿವೃದ್ಧಿ ಸಂಸ್ಥೆ'ಯಿಂದ ಸಂಗ್ರಹವಾಗಿದೆ. ಇದರಲ್ಲಿ ಜನಪದ ಪಶುವೈದ್ಯರು ನೀಡಿರುವ ಮಾಹಿತಿಯನ್ನು ವೈಜ್ಞಾನಿಕ ಬಗೆಯಲ್ಲಿ ವಿಶ್ಲೇಷಿಸಲಾಗಿದೆ. ರೋಗದ ಲಕ್ಷಣಗಳು, ಕಾರಣಗಳು ಮತ್ತು ನಿಯಂತ್ರಿಸುವ; ಔಷಧಿ ತಯಾರಿಸುವ ಕ್ರಮವನ್ನು ಅಳತೆಗಳ ಮೂಲಕ ಕೋಷ್ಟಕದಲ್ಲಿ ಕೊಡಲಾಗಿದೆ. ಔಷಧಿಗೆ ಬಳಪಲ್ಪಡುವ ಸಸ್ಯಗಳಿಗೆ ಛಾಯಾಚಿತ್ರ ಮತ್ತು ಸಸ್ಯಶಾಸ್ತ್ರೀಯ ಹೆಸರುಗಳನ್ನು ಕೊಡುತ್ತಿರುವುದರಿಂದ ಜನಸಾಮಾನ್ಯರಿಗೆ ಇದೊಂದು ಕೈಪಿಡಿಯ ಹಾಗೆ ನೆರವಾಗುತ್ತದೆ.

2003ರಲ್ಲಿ ಡಾ. ಟಿ. ಗೋವಿಂದರಾಜು ರವರ ಸಂಪಾದಕತ್ವದಲ್ಲಿ ಹೊರಬಂದ 'ಜನಪದ ವೈದ್ಯ' ಎಂಬುದು ಜನಪದ ವೈದ್ಯವನ್ನು ಕುರಿತ ವಿವಿಧ ಲೇಖನಗಳ ಸಂಕಲನ ಕೃತಿ. ಇದರಲ್ಲಿ ಜನಪದ ವೈದ್ಯ ನಡೆದು ಬಂದಿರುವ ದಾರಿಯನ್ನು ಪರಿಚಯಿಸುವ ಲೇಖನಗಳಿವೆ. ಬಹುತೇಕ ಲೇಖನಗಳು ಮಾಹಿತಿ ಪ್ರಧಾನವಾಗಿವೆ. ಹಾಗೆಯೇ ವೈಜ್ಞಾನಿಕ ಲೇಖನಗಳನ್ನು ಸಹ ಕೊಡಲಾಗಿದೆ. 'ಕರ್ನಾಟಕ ಜನಪದ ವೈದ್ಯ ಆದದ್ದು–ಆಗಬೇಕಾದದ್ದು' ಎಂಬ ಲೇಖನ ಜನಪದ ವೈದ್ಯದಲ್ಲಿ ಆಗಿರುವ ಅಧ್ಯಯನದ ಸ್ಥೂಲ ಚಿತ್ರವನ್ನು ಕೊಡುತ್ತದೆ. ಈ ಕೃತಿಯನ್ನು ಹೊರತು ಪಡಿಸಿದರೆ ಲೇಖನಗಳ ರೂಪದಲ್ಲಿ ವಿ.ಎನ್.ಶಿವರಾಮು (ಕೈಮುಸುಗು, ಅಡಿಗೆ) ಡಾ. ಅಂಬಳಿಕೆ ಹಿರಿಯಣ್ಣ, ಡಾ. ಟಿ. ಗೋವಿಂದ ರಾಜು (ಮಕ್ಕಳ ಚಿಕಿತ್ಸೆ ಮತ್ತು ತಿಂಡಿ ತಿನಿಸುಗಳು). ಕ್ಯಾತನಹಳ್ಳಿ ರಾಮಣ್ಣ, ಸಿಂಪಿ ಲಿಂಗಣ್ಣ, ಎಂ.ಎನ್. ವಾಲಿ, ದೇ. ಜವರೇಗೌಡ–ಈ ಮುಂತಾದವರು ವಿವಿಧ ವೈದ್ಯವಿಚಾರಗಳ ಲೇಖನಗಳನ್ನು ಬರೆದಿದ್ದಾರೆ. 2002ರಲ್ಲಿ 'ಜಾನಪದ ಜಗತ್ತು' ಪತ್ರಿಕೆಯು 'ರೋಗ ಜಾನಪದ' ಎಂಬ ವಿಶೇಷ ಸಂಚಿಕೆಯನ್ನು ಪ್ರಕಟಿಸಿತು. ಇದರಲ್ಲಿ ಪ್ರೊ. ಡಿ.ಲಿಂಗಯ್ಯನವರು ರೋಗ ಜಾನಪದದ ಅಧ್ಯಯನ ಎಂಬ ಲೇಖನದಲ್ಲಿ ಮಾನವ ರೋಗ, ಪ್ರಾಣಿ ಪಕ್ಷಿ ಕೃಷಿರೋಗ ಸಾಮಾಜಿಕ ರೋಗ, ಆರ್ಥಿಕ ರೋಗ, ಧಾರ್ಮಿಕ ರೋಗ ಪರಿಸರ ರೋಗ–ಮುಂತಾದ 14 ವಿಭಾಗಗಳನ್ನು ಮತ್ತು ಅವುಗಳ ನಿವಾರಣೆಗೆ ಜನಪದ ಮನಸ್ಸು ಹೇಗೆ ಪ್ರತಿಕ್ರಿಯಿಸುತ್ತದೆ ಎಂಬುದನ್ನು ಚರ್ಚಿಸಿದ್ದಾರೆ.

ಬುಡಕಟ್ಟು ಅಧ್ಯಯನಗಳಲ್ಲಿ ವೈದ್ಯ ವಿಚಾರ : ಬುಡಕಟ್ಟು ಹಾಗೂ ಪ್ರಾದೇಶಿಕ ಹಿನ್ನೆಲೆಯಿಂದ ಬಂದಿರುವ ಜನಪದ ವೈದ್ಯ ವಿವರಣೆಗಳನ್ನು ಒಳಗೊಂಡಿರುವ ಬುಡಕಟ್ಟು ಅಧ್ಯಯನ ಕೃತಿಗಳಲ್ಲಿ ವೈದ್ಯ ಮಾಹಿತಿ ಪ್ರಾದೇಶಿಕ ಹಿನ್ನೆಲೆಯಿಂದ ಬಂದಿರುತ್ತದೆ. ಉದಾಹರಣೆಗೆ 1875ರಲ್ಲಿ 'ಮೆಕೆಂಜಿ ಕಲೆಕ್ಷನ್ಸ್' ಗಳಲ್ಲಿ ಜನಪದ ವೈದ್ಯ ಮಾಹಿತಿಯನ್ನು ದಾಖಲಿಸಿದ್ದಾರೆ. ಡಾ. ಕೆ.ಎಂ. ಮೈತ್ರಿಯವರ 'ಬುಡಕಟ್ಟು ಕುಲಕಸುಬುಗಳು' ಎಂಬ ಕೃತಿಯಲ್ಲಿ ಜೇನು ಕುರುಬರ ಗಿಡಮೂಲಿಕೆಗಳ ವೈದ್ಯೋಪಚಾರವನ್ನು ಪ್ರಸ್ತಾಪಿಸುತ್ತಾ, ಹಲವಾರು ಕಾಯಿಲೆಗಳಿಗೆ ಇವರು ಮೂಲಿಕಾ ಔಷಧಿಯನ್ನು ಅರೆದು ಸೇವಿಸುತ್ತಾರೆ. ಕೆಲವು ರೋಗಗಳನ್ನು ದೇವರು ಗುಣಪಡಿಸುವನೆಂಬ ನಂಬಿಕೆಯಿಂದ ಕೈಗೊಳ್ಳುವ ವಿವಿಧ ಆಚರಣೆಗಳನ್ನು ದಾಖಲಿಸಿದ್ದಾರೆ. ಇದೇ ರೀತಿಯ ಕೃತಿಗಳೆಂದರೆ, ಡಾ. ಹಿ.ಚಿ. ಬೋರಲಿಂಗಯ್ಯರವರ 'ಹಾಲಕ್ಕಿ ಒಕ್ಕಲಿಗರ ಜ್ಞಾನಪರಂಪರೆ', ಎಲ್.ಜಿ.ಭಟ್‌ರ 'ಹಾಲಕ್ಕಿ ಒಕ್ಕಲಿಗರು', ಎಲ್.ಆರ್. ಹೆಗಡೆಯವರ

'ಉತ್ತರ ಕನ್ನಡದ ಸಿದ್ಧಿ ಜನರು,' ಡಾ. ಅಂಬಳಿಕೆ ಹಿರಿಯಣ್ಣರ 'ಕಚ್ಚೆಗೌಳಿಗರು' ಮತ್ತು 'ಕಚ್ಚೆಗೌಳಿಗರ ಸಂಸ್ಕೃತಿ', ಥಾಕು ಸುಕ್ರುಗೌಡರ 'ಉತ್ತರಕನ್ನಡದ ಹಾಲಕ್ಕಿ ಒಕ್ಕಲಿಗರು,' ಸುಕ್ರುಗೌಡರು ತಮ್ಮ ಕೃತಿಯಲ್ಲಿ ಬುಡಕಟ್ಟು ಜನರಲ್ಲಿ ಇರುವ ಔಷಧೀಯ ಸಸ್ಯಗಳನ್ನು ವೈಜ್ಞಾನಿಕ ಅಧ್ಯಯನದ ನಿಟ್ಟಿನಲ್ಲಿ ವಿಶ್ಲೇಷಿಸಿರುವುದು ಒಳ್ಳೆಯ ಕಾರ್ಯವಾಗಿದೆ. ಡಾ. ಬಿ. ಶಿವರಾಮಶೆಟ್ಟಿಯವರ 'ಸಸ್ಯಜಾನಪದ' ಕೃತಿಯು ಸಸ್ಯಗಳ ಸಾಂಸ್ಕೃತಿಕ ಆಯಾಮಗಳನ್ನು ಕಟ್ಟಿಕೊಡುತ್ತದೆ. ಔಷಧಿಗೆ ಉಪಯೋಗಿಸುವ ವೇಳೆ ಸಸ್ಯಕ್ಕೆ ಪೂಜಿಸುವ ಮತ್ತು ಅದನ್ನು ಸಂಗ್ರಹಿಸುವ ವಿಧಾನಗಳ ಹಿಂದಿನ ಉದ್ದೇಶವನ್ನು ತಾರ್ಕಿಕವಾಗಿ ವಿಶ್ಲೇಷಣೆಯನ್ನು ಮಾಡಿದ್ದಾರೆ.

ಬುಡಕಟ್ಟು ಸಂಸ್ಕೃತಿಯನ್ನು ಕುರಿತು ಡಾ. ಚಂದ್ರಕಾಳೇನಹಳ್ಳಿ ಯವರು 'ಸೋಲಿಗರ ಸಂಸ್ಕೃತಿ' ಎಂಬ ಕೃತಿಯಲ್ಲಿ ಗಿಡಗಳ ಸರಳವಾದ ಬಳಕೆಯಿಂದ ರೋಗ ಗುಣವಾಗುವ ಪರಿಯನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಡಾ. ಎಂ. ಬೈರೆಗೌಡರ 'ಇರುಳಿಗರು : ಜಾನಪದ ಅಧ್ಯಯನ' ಕೃತಿಯಲ್ಲಿ ಇರುಳಿಗರಲ್ಲಿ ಪ್ರಚಲಿತವಿರುವ ವೈದ್ಯ ಮಾಹಿತಿಯನ್ನು ಒದಗಿಸಿದ್ದಾರೆ. ಡಾ. ಸವಿತಾ ನಾಯಕರ 'ಬುಡಕಟ್ಟು ಮಹಿಳೆಯರ ಪ್ರಸಾಧನ ಕಲೆ' ಎಂಬ ಕೃತಿಯು ಮಹಿಳೆ ಹಾಗೂ ಮಕ್ಕಳ ವೈದ್ಯೋಪಚಾರವನ್ನು ವಿವರಿಸುತ್ತದೆ. ಡಾ. ಮಂಗಳಾ ಶ್ರೀಧರ್ ರವರ 'ಬುಡಕಟ್ಟು ವೈದ್ಯ ಸಂಸ್ಕೃತಿ' ಯಲ್ಲಿ ಬುಡಕಟ್ಟುಗಳ ವೈದ್ಯ ವ್ಯವಸ್ಥೆಯನ್ನು ಪರಿಚಯಿಸುತ್ತಾರೆ. ಡಾ. ಎಂ. ಸುಮಿತ್ರರವರ 'ಕಣಿಯ ಸಂಸ್ಕೃತಿ' ಎಂಬ ಕೃತಿಯಲ್ಲಿ ಗಿಡಮೂಲಿಕೆಗಳ ಔಷಧಿಯನ್ನು ಮತ್ತು ನಾಡೀಜ್ಞಾನವನ್ನು ಬಲ್ಲ ಕಣಿಯರು ರೋಗಗಳ ಲಕ್ಷಣಗಳು ಮತ್ತು ಅವುಗಳಿಗೆ ನೀಡುವ ಚಿಕಿತ್ಸೆಗಳನ್ನು ಕನ್ನಡ ಪದಗಳ ಮೂಲಕ ನೆನಪಿನಲ್ಲಿಟ್ಟುಕೊಳ್ಳುತ್ತಾರೆ.

"ಅಂಗರಗೆಡ್ಡೆ ಮಂಗರವಳ್ಳಿ
ಭಂಗಿ ಬೀಜ ವಚ ಕರ್ಪೂರವು
ಹೊಂಗೆಣ್ಣೆಯೊಳರೆದು ಹಚ್ಚಲು ಬೇಗನೆ
ಬಂಗು ಚಿಬ್ಬು ಕ್ರಿಮಿ ಹರಹುವು"[25]

ಈ ಎಲ್ಲಾ ಕೃತಿಗಳು ನಿರ್ದಿಷ್ಟವಾಗಿ ಬುಡಕಟ್ಟು ಪರಂಪರೆಯನ್ನು ಕುರಿತು ಅಧ್ಯಯನ ಮಾಡಿರುವಂತಹವು.

ಅನುಭವಿಗಳ ವೈದ್ಯ ಕೃತಿಗಳು : ಸ್ವತಃ ಆಯುರ್ವೇದ ವೈದ್ಯರು; ಇತರ ವೈದ್ಯಪದ್ಧತಿಗಳ ಅಧ್ಯಯನ ಮತ್ತು ವಂಶಪಾರಂಪರ್ಯವಾಗಿ ಬಂದಿರುವ ಜನಪದ ವೈದ್ಯದ ತಿಳುವಳಿಕೆ; ಅನುಭವಗಳಿಂದ ಕೆಲವರು ವೈದ್ಯ ಗ್ರಂಥಗಳನ್ನು ಬರೆದು ಆಧುನಿಕ ಜನಪದ ವೈದ್ಯ ಕ್ಷೇತ್ರವನ್ನು ವಿಸ್ತರಿಸಿದ್ದಾರೆ. ಶ್ರೀಮತಿ ಶಾಂತಿನಾಯಕರು (1998–2000) 'ಸಿಂಕೋನಾ' ಎಂಬ ಕೃತಿಯಲ್ಲಿ ಮಹಿಳೆಯರ ಮನೆಮದ್ದುಗಳನ್ನು ಸಂಪಾದಿಸಿದ್ದಾರೆ. ಇಲ್ಲಿ ನಾಡಮದ್ದುಗಾರರು, ಮನೆಮದ್ದುಗಾರರು ಎಂದು ವೈದ್ಯ ಬಲ್ಲವರನ್ನು ವಿಂಗಡಿಸಿದ್ದಾರೆ. ಇವರು 'ಜನಪದ ವೈದ್ಯಕೀಯ ಅಡುಗೆಗಳು' ಎಂಬ ಕೃತಿಯಲ್ಲಿ ಆಹಾರದಲ್ಲಿ ಇರುವ ಔಷಧೀಯ ಮಹತ್ವವನ್ನು ಹೇಳಿದ್ದಾರೆ. ಇವರ ಇನ್ನೆರಡು ಕೃತಿಗಳೆಂದರೆ 'ಆಸರ' ಮತ್ತು 'ಜೀವ ಉಳಿಸುವ ಕಳೆಗಳು', ಒಂದರಲ್ಲಿ ಜನಪದ ಪಾನೀಯಗಳನ್ನು ಕುರಿತು ಹೇಳಿದ್ದರೆ, ಮತ್ತೊಂದರಲ್ಲಿ ಜನಪದ ತೃಣ ಸಸ್ಯಗಳ ಪರಿಚಯವಿದೆ.

'ಹಸಿರು ಕೊಳಲು' 1996ರಲ್ಲಿ ಚಿ.ಎಸ್. ವಿವೇಕಾನಂದ ಹಾಗೂ ಎಂ.ವಿ. ಸೇತು ಮಾಧವರವರ ಕೃತಿಯಾಗಿದೆ. ಇಲ್ಲಿ ಸಸ್ಯಗಳನ್ನು ಜಾನಪದೀಯ ಅಧ್ಯಯನದಿಂದ ನೋಡಲಾಗಿದೆ. ಇವುಗಳ ಜೊತೆಗೆ ಇನ್ನೂ ಅನೇಕ ಜನಪ್ರಿಯ ವೈದ್ಯ ಕೃತಿಗಳ ದೊಡ್ಡ ಪಟ್ಟಿಯನ್ನು ಕೊಡಬಹುದು. "ಮನೆ ಔಷಧಿಗಳು" (ಡಾ. ಮಾಗಡಿ ಆರ್. ಗುರುದೇವ್) "ಮನೆಯಲ್ಲೇ ಔಷಧಿ" (ಚಂದಶೇಖರಶಾಸ್ತ್ರಿ) "ಜನಪದ ವೈದ್ಯ (ಕೃಷ್ಣಯಜುರ್ವೇದಿ) "ಮನೆಮದ್ದು" (ಡಾ. ಕೊರಡ್ಕಲ್ ವೆಂಕಟ್ರಾವ್) ಹೀಗೆ ಅನುಭವ ವೈದ್ಯ, ಗೃಹ ಸಂಜೀವಿನಿ, ಹಿತ್ತಲ ಗಿಡ–ಮುಂತಾದ ಕೃತಿಗಳು ಇಂದು ಶ್ರೀಸಾಮನ್ಯರಿಗೂ ಆರೋಗ್ಯದ ಮಹತ್ವವನ್ನು ತಿಳಿಯುವಂತೆ ಮಾಡುತ್ತಿವೆ.

ಆಯುರ್ವೇದ ವೈದ್ಯರ ಕೃತಿಗಳು : ಆಯುರ್ವೇದ ವೈದ್ಯರಾಗಿದ್ದವರು ತಮ್ಮ ಅನುಭವದಿಂದ ಉತ್ತಮವಾದ ವೈದ್ಯಗ್ರಂಥಗಳನ್ನು ರಚಿಸಿದ್ದಾರೆ. ಇಂಥ ಕೃತಿಗಳು ಆಯುರ್ವೇದ ವೈದ್ಯದೊಂದಿಗೆ ಜನಪದ ವೈದ್ಯವನ್ನು ಮೈಗೂಡಿಸಿಕೊಂಡು ಹೊರಬಂದವುಗಳಾಗಿವೆ. ಅವುಗಳೆಂದರೆ,

ಸ್ವಯಂ ವೈದ್ಯ (1978) : ವೈದ್ಯರಾಗಿದ್ದ ತಿರುಕರು ತಮ್ಮ ವಿಶಾಲವಾದ ಆಯುರ್ವೇದದ ಅಧ್ಯಯನ ಮತ್ತು ಅನುಭವಗಳೊಂದಿಗೆ ಜನಪದ ವೈದ್ಯದ ಉದಾಹರಣೆಗಳನ್ನು ಸೇರಿಸಿಕೊಂಡು ಕನ್ನಡ ನಾಡಿನ ಜನತೆಗೆ ನೀಡಿದ ಅಮೂಲ್ಯವಾದ ವೈದ್ಯಕೃತಿ ಇದಾಗಿದೆ. ತಿರುಕರು 'ವನೌಷಧಿಗಳ

ಗುಣಧರ್ಮ ಮತ್ತು ವಿವಿಧ ಶಬ್ದಕೋಶ', 'ಅಭ್ಯಂಜನ' ಎನ್ನುವ ಕೃತಿಗಳನ್ನೂ ರಚಿಸಿ ಆರೋಗ್ಯ ಕ್ಷೇತ್ರಕ್ಕೆ ಮರೆಯಲಾಗದ ಕೊಡುಗೆಯನ್ನು ನೀಡಿದ್ದಾರೆ.

ಆರೋಗ್ಯದರ್ಪಣ (1943) : ಇದು ಪಂಡಿತ ಶಿವಕುಮಾರಸ್ವಾಮಿಗಳು ಆರೋಗ್ಯ ಕ್ಷೇತ್ರಕ್ಕೆ ಅರ್ಪಿಸಿದ ಮಹತ್ವದ ಕೃತಿ. ಸ್ವತಃ ವೈದ್ಯರಾಗಿದ್ದ ಸ್ವಾಮಿಗಳು ಆರೋಗ್ಯದ ಮಹತ್ವವನ್ನು ಆಯುರ್ವೇದದ ಶಿಸ್ತು ಕ್ರಮದಲ್ಲಿ ವಿವರಿಸಿದ್ದಾರೆ. ಔಷಧೀಯ ಸಸ್ಯಗಳ ಮೂಲಕ ರೋಗಗಳಿಗೆ ಚಿಕಿತ್ಸೆ ನೀಡುವುದು ಹೇಗೆ ಎಂಬುದನ್ನು ವಿಶ್ಲೇಷಿಸಿದ್ದಾರೆ.

ಆಯುರ್ವೇದ ದ್ರವ್ಯಗುಣ ಸಾರಸಂಗ್ರಹ (1998) : ವಂಶಪಾರಂಪರ್ಯವಾಗಿ ವೈದ್ಯಕಲಿತ ಡಾ. ಕಿದಿಯೂರು ಗುರುರಾಜ ಭಾಗವತರು. ಔಷಧಿಗೆ ಬಳಸುವ ಸಸ್ಯಗಳು ಸೇರಿದಂತೆ ಇತರ ವಸ್ತುಗಳ ದ್ರವ್ಯಗುಣ ಏನೆಂಬುದನ್ನು ತಮ್ಮ ಅನುಭವದ ಹಿನ್ನೆಲೆಯಲ್ಲಿ ಈ ಕೃತಿಯಲ್ಲಿ ತಿಳಿಸಿಕೊಟ್ಟಿದ್ದಾರೆ.

1973ರಲ್ಲಿ ಪ್ರಕಟಗೊಂಡ 'ಬಡವರ ವೈದ್ಯ' ಎಂಬುದು ಡಾ. ಮ.ಗೋಪಾಲ ಕೃಷ್ಣರಾವ್‌ರ ಕೃತಿ. ರೋಗಗಳ ಒಳಭೇದಗಳ ಲಕ್ಷಣಗಳನ್ನು ವಿವರಿಸಿ ಸುಮಾರು 78ಕಾಯಿಲೆಗಳಿಗೆ ಚಿಕಿತ್ಸೆಯನ್ನು ಹೇಳಿದ್ದಾರೆ.

ಗ.ನೀ. ಪಟವರ್ಧನ ಅವರ "ಅನುಭವಿಕ ವೈದ್ಯ" ಕೃತಿಯು ವಿಶಿಷ್ಟವಾದುದು. ಆಯುರ್ವೇದವನ್ನು ಕುರಿತು ಇಲ್ಲಿ ಬರೆಯಲಾಗಿದ್ದರೂ ಜನಪದ ವೈದ್ಯದ ಚಿಕಿತ್ಸೆಗಳನ್ನುಇದರಲ್ಲಿ ಕಾಣಬಹುದಾಗಿದೆ. ಏಕೆಂದರೆ ಲೇಖಕರು ಅನುವಂಶಿಕ ವೈದ್ಯರು. 1941ರಲ್ಲಿ 'ಪ್ರಸಿದ್ಧ ರಸೌಷಧಿಗಳು', 1939ರಲ್ಲಿ 'ಸುಲಭ ಚಿಕಿತ್ಸೆ' ಎಂಬ ಎರಡು ಕೃತಿಗಳನ್ನು ಪಂಡಿತ ತಾರಾನಾಥರು ರಚಿಸಿದ್ದಾರೆ. ರಸೌಷಧಿಗಳ ಬಳಕೆ ಆಯುರ್ವೇದ ಮತ್ತು ಜನಪದ ವೈದ್ಯ ಎಂಬ ಭೇದ ವಿಲ್ಲದೆ ಬಳಕೆಯಾಗುವದನ್ನು ಇವರ ಕೃತಿಗಳಿಂದ ತಿಳಿಯಬಹುದು. ನೀರು, ಗಾಳಿ, ಭೂಮಿಗಳಿಂದ ಉತ್ಪನ್ನವಾದ ಔಷಧೀಯ ಪರಿಕರಗಳು ಜನಪದ ವೈದ್ಯದಲ್ಲೂ ಬಳಕೆಯಾಗುವುದನ್ನು ಪ್ರಸ್ತಾಪಿಸಿದ್ದಾರೆ.

ಸಸ್ಯಶಾಸ್ತ್ರಜ್ಞರ ಕೃತಿಗಳು : 'ಕರ್ನಾಟಕದ ಔಷಧೀಯ ಸಸ್ಯಗಳು' ಮಾಲಿಕೆ 1,2(1998–2004) ಡಾ. ಮಾಗಡಿ ಆರ್. ಗುರುದೇವರವರ ಕೃತಿಗಳು. ಇವರು ಸಸ್ಯಶಾಸ್ತ್ರದ ಪ್ರಾಧ್ಯಾಪಕರು. ಸಸ್ಯಶಾಸ್ತ್ರ

ಮತ್ತು ಆಯುರ್ವೇದಗಳ ಹಿನ್ನೆಲೆಯಲ್ಲಿ ಸಸ್ಯಗಳನ್ನು ಪರಿಚಯಿಸುವಾಗ ಜನಪದ ಜ್ಞಾನವನ್ನೂ ಸಹ ಬಳಸಿಕೊಂಡಿದ್ದಾರೆ. ಈ ಎರಡೂ ಮಾಲಿಕೆಗಳ ವಿಶೇಷವೆಂದರೆ ಸಸ್ಯಗಳನ್ನು ಶ್ರೀಸಾಮಾನ್ಯನೂ ಗುರುತಿಸಲು ಸಾಧ್ಯವಿರುವ ಹಾಗೆ ರಚಿಸಿ ಸ್ಥಳೀಯ ಹೆಸರುಗಳನ್ನು ಕೊಟ್ಟಿರುವುದು.

ಚಿತ್ರದುರ್ಗ ಜಿಲ್ಲೆಯಲ್ಲಿ ಜಾನಪದದ ಇತರ ಪ್ರಕಾರಗಳಾದ ಹಾಡು, ಕತೆ, ಗಾದೆ, ವ್ಯವಸಾಯ ಜಾನಪದ, ಮ್ಯಾಸ ಬೇಡರು ಹಾಗೂ ಕಾಡುಗೊಲ್ಲರ ಕುರಿತು ಅಧ್ಯಯನಗಳು ನಡೆದಿವೆ. ಆದರೆ ವೈದ್ಯಕ್ಕೆ ಸಂಬಂಧಿಸಿದ ವಿಶೇಷವಾದ ಅಧ್ಯಯನಗಳು ನಡೆದಿರುವುದಿಲ್ಲ. ಆದರೂ ಶೀ.ನಂ. ಶಂಕರನಾರಾಯಣರು ಈ ಭಾಗದ ಕಾಡುಗೊಲ್ಲರನ್ನು ಕುರಿತು ಪಿಎಚ್.ಡಿ ಅಧ್ಯಯನವನ್ನು ಮಾಡಿದ್ದಾರೆ. ಈ ಕೃತಿಯಲ್ಲಿ ಕಾಡುಗೊಲ್ಲರ ವೈದ್ಯ ಮಾಹಿತಿಯನ್ನು ಅವರು ಸಂಗ್ರಹಿಸಿ ನೀಡಿರುವುದನ್ನು ನಾವು ನೆನೆಯಬಹುದು. ನಂತರ ಡಾ. ಮೀರಾ ಸಾಬಿಹಳ್ಳಿ ಶಿವಣ್ಣ, ಡಾ. ಕೃಷ್ಣಮೂರ್ತಿ ಹನೂರು, ಡಾ. ವಿರೂಪಾಕ್ಷ ಪೂಜಾರಹಳ್ಳಿ, ಡಾ. ಜೀಶಂಪ ಮೊದಲಾದ ವಿದ್ವಾಂಸರು ಮ್ಯಾಸ ಬೇಡರ ಸಂಸ್ಕೃತಿ ಮತ್ತು ಕಾಡುಗೊಲ್ಲರ ಸಂಸ್ಕೃತಿಗಳನ್ನು ಕುರಿತು ವಿಶೇಷವಾದ ಅಧ್ಯಯನಗಳನ್ನು ಮಾಡಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿಗೆ ಸಂಬಂಧಿಸಿದಂತೆ ಡಾ. ನಾಗೇಂದ್ರಯ್ಯರವರು 1994ರಲ್ಲಿ ಎಂ.ಡಿ ಪದವಿಗಾಗಿ "Folklore Medicinal Plants used in Hiriyuru Taluku" ಎಂಬ ಶೀರ್ಷಿಕೆಯ ಅಡಿಯಲ್ಲಿ ಜನಪದ ವೈದ್ಯವನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಇದರಲ್ಲಿ 40 ಔಷಧೀಯ ಸಸ್ಯಗಳನ್ನು ಜನಪದ ವೈದ್ಯದ ಹಿನ್ನೆಲೆಯಿಂದ ವಿಶ್ಲೇಷಿಸಿದ್ದಾರೆ.

2.1 ಜಿಲ್ಲೆಯ ಭೌಗೋಳಿಕ ಹಾಗೂ ನೈಸರ್ಗಿಕ ವಿವರಗಳು

ಚಿತ್ರದುರ್ಗ ಜಿಲ್ಲೆ ಮಧ್ಯಕರ್ನಾಟಕದಲ್ಲಿದೆ. ಐತಿಹಾಸಿಕ ಕೋಟೆಗಳಿಂದ ಪ್ರಸಿದ್ಧಿಯನ್ನು ಪಡೆದಿದೆ. ಏಷ್ಯಾದಲ್ಲೇ ಅತಿದೊಡ್ಡದಾದ ಕೋಟೆ ಎಂದು ಹೆಸರು ಪಡೆದಿರುವ ಏಳುಸುತ್ತಿನ ಕೋಟೆ ದೇಶದ ಅಪರೂಪದ ಐತಿಹಾಸಿಕ ಸ್ಮಾರಕವಾಗಿದೆ. ಇಂಥ ಶ್ರೀಮಂತ ಇತಿಹಾಸವನ್ನು ಹೊಂದಿದ್ದು ಸಮೃದ್ಧ ಜಾನಪದ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿದೆ. ಶಿಲಾಯುಗ ಕಾಲದಿಂದಲೂ ಜನವಸತಿ ಇರುವ ಅಪರೂಪದ ಪ್ರದೇಶ ಎಂದು ತಿಳಿಯಲಾಗಿದೆ.

ಚಿತ್ರದುರ್ಗವನ್ನು ಪ್ರಾಚೀನ ಕಾಲದಿಂದ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗಿದೆ. ಚಂದ್ರವಳ್ಳಿ, ಸೂಳ್ಗಲ್ಲು, ಬೆಮ್ಮತ್ತನೂರ, ಮಲ್ಲರಾಯನದುರ್ಗ, ಚಿಂತರಕಲ್ಲು, ಚಿನ್ಮೂಲಾದ್ರಿ, ಚಿಮ್ಮತ್ತನ ಕಲ್ಲು, ಚಿತ್ರಕಲ್ಲು ದುರ್ಗ – ಮುಂತಾದ ಹೆಸರುಗಳಿದ್ದವು ಎಂದು ವಿದ್ವಾಂಸರ ಸಂಶೋಧನೆಯಿಂದ ತಿಳಿದು ಬಂದಿದೆ. ರಾಷ್ಟ್ರಕೂಟರು, ಚೋಳರು, ಪಲ್ಲವರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರು ಆಳಿದ ನಂತರ ಪಾಳಯಗಾರರ ಶೌರ್ಯ, ಸಾಹಸ, ಉದಾತ್ತತೆಯಿಂದ ಪ್ರಖ್ಯಾತಿಯನ್ನು ಪಡೆಯಿತು. ಪಾಳೆಯಗಾರರಲ್ಲಿ ಅತ್ಯಂತ ಶಕ್ತಿಶಾಲಿ ಹಾಗೂ ಪ್ರಸಿದ್ಧಿ ಪಡೆದವರು ಮದಕರಿನಾಯಕರು.

ಪ್ರಾಚೀನಕಾಲದಿಂದಲೂ ಸಾಂಸ್ಕೃತಿಕ ಹಾಗೂ ಸಮಾಜ ಮುಖಿ ಕಾರ್ಯಗಳಿಗೆ ಹೆಸರಾದ ಮುರುಘಾಮಠ, ಸಿರಿಗೆರೆಯ ತರಳಬಾಳು ಮಠ, ಮಲ್ಲಾಡಿಹಳ್ಳಿಯ ಅನಾಥಸೇವಾಶ್ರಮ, 'ಶಿವಸಂಚಾರ' ರಂಗ ಚಟುವಟಿಕೆಯಿಂದ ಪ್ರಸಿದ್ಧಿಯಾದ ಸಾಣೇಹಳ್ಳಿ ಮಠ, ಈ ಸಾಣೇಹಳ್ಳಿಯಲ್ಲಿ ಕರ್ನಾಟಕ್ಕೇ ವಿಶಿಷ್ಟವೆನಿಸಿದ ರಂಗಮಂದಿರವನ್ನು ನಿರ್ಮಾಣ ಮಾಡಲಾಗಿದೆ. ಸಾಮಾಜಿಕ ಪ್ರಜ್ಞೆ ಮತ್ತು ಜನಜಾಗೃತಿಯ ಕಾರ್ಯಕ್ರಮಗಳಿಂದ ಈ ಮಠಗಳು ಬಹಳ ಪ್ರಮುಖವೆನಿಸಿವೆ.

ಬಯಲು ವಸ್ತು ಸಂಗ್ರಹಾಲಯದಂತೆ ಇರುವ ಏಳು ಸುತ್ತಿನ ಕೋಟೆ ಬುರುಜು, ಬತೇರಿಗಳಿಂದ ರೋಮಾಂಚನ ಗೊಳಿಸುತ್ತದೆ. ಇದು ಒನಕೆ ಓಬವ್ವನಿಂದ ಪ್ರಸಿದ್ಧಿಯನ್ನು ಪಡೆದಿದೆ. ಇಂಥ ಐತಿಹಾಸಿಕ ಜಿಲ್ಲೆಯ ವಿಸ್ತೀರ್ಣ 10.835 ಚ.ಕಿ.ಮೀ ಇದ್ದು, ಉತ್ತರ ದಕ್ಷಿಣವಾಗಿ 88 ಮೈಲಿ, ಪೂರ್ವ ಪಶ್ಚಿಮವಾಗಿ 100 ಮೈಲಿ ಇದೆ. ಜಿಲ್ಲೆಯ ಉತ್ತರ ದಿಕ್ಕಿಗೆ ಬಳ್ಳಾರಿ ಪೂರ್ವಕ್ಕೆ ಆಂಧ್ರಪ್ರದೇಶ ಆಗ್ನೇಯಕ್ಕೆ ತುಮಕೂರು, ದಕ್ಷಿಣಕ್ಕೆ ಚಿಕ್ಕಮಗಳೂರು, ಪಶ್ಚಿಮಕ್ಕೆ ದಾವಣಗೆರೆ ಜಿಲ್ಲೆಗಳಿಂದ ಸುತ್ತುವರಿಯಲ್ಪಟ್ಟಿದೆ.

ಜಿಲ್ಲೆಯಲ್ಲಿ ಒಟ್ಟು ಆರು ತಾಲ್ಲೂಕುಗಳಿವೆ. ಅವುಗಳು, ಚಳ್ಳಕೆರೆ, ಮೊಳಕಾಲ್ಮೂರು, ಚಿತ್ರದುರ್ಗ, ಹೊಳಲ್ಕೆರೆ, ಹೊಸದುರ್ಗ ಹಿರಿಯೂರು, ಇವುಗಳಲ್ಲಿ ಹೊಳಲ್ಕೆರೆ ಮತ್ತು ಹೊಸದುರ್ಗ ತಾಲ್ಲೂಕುಗಳು ಮಲೆನಾಡಿನ ಸೆರಗಿನಂಚಿನಲ್ಲಿವೆ. ಉಳಿದ ನಾಲ್ಕು ತಾಲ್ಲೂಕುಗಳಿಗಿಂತಲೂ ಈ ಎರಡಲ್ಲಿ ಮಳೆಯ ಸ್ಥಿತಿ ಉತ್ತಮವಾಗಿದೆ. ಆದರೂ ಜಿಲ್ಲೆಯ ದಖ್ಖನ್ ಪ್ರಸ್ಥಭೂಮಿಯ ಭಾಗವಾಗಿದ್ದು, ರಾಜ್ಯದಲ್ಲಿ ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಇದು ಎರಡನೆಯ ಸ್ಥಾನದಲ್ಲಿದೆ. ಬಯಲು ಸೀಮೆ ಮತ್ತು ಬರದ ಜಿಲ್ಲೆ ಎಂದು ಹೆಸರು ಪಡೆದಿದೆ.

ಚಿತ್ರದುರ್ಗವೆಂದರೆ ಬೆಟ್ಟಗುಡ್ಡಗಳಿಂದ ಕೂಡಿರುವಂತಹುದು. ಬೆಟ್ಟಗಳಿಗೆ ಸ್ಥಳೀಯವಾದ ಹೆಸರುಗಳಿವೆ. ಚಿತ್ರದುರ್ಗ ತಾಲ್ಲೂಕಿನ ಜೋಗಿಮಟ್ಟಿ, ಧವಳಪ್ಪನಗುಡ, ಈಚಲುಗುಡ್ಡ, ಮೊಳಕಾಲ್ಮೂರು ತಾಲ್ಲೂಕಿನ ಜಟಿಂಗರಾಮೇಶ್ವರ ಬೆಟ್ಟ, ಬ್ರಹ್ಮಗಿರಿ, ನುಂಕಪ್ಪನ ಗುಡ್ಡ, ಹೊಸದುರ್ಗ ತಾಲ್ಲೂಕಿನ ಕೊಟಕಲ್ ಗುಡ್ಡ, ಹಾಲುರಾಮೇಶ್ವರ, ಹಿರಿಯೂರು ತಾಲ್ಲೂಕಿನ ಸರಣಿ ಬೆಟ್ಟ, ಹೊಳಲ್ಕೆರೆ ತಾಲ್ಲೂಕಿನ ರಾಮಗಿರಿ ಬೆಟ್ಟ, ರಂಗಪ್ಪನ ಗುಡ್ಡ ಮೊದಲಾದವುಗಳು. ಜನಪದ ವೈದ್ಯರಿಗೆ ಗಿಡಮೂಲಿಕೆಗಳನ್ನು ಒದಗಿಸುವಲ್ಲಿ ಈ ಬೆಟ್ಟಗಳು ಬಹಳ ಸಹಕಾರಿಯಾಗಿವೆ.

ಜಿಲ್ಲೆಯ ಪ್ರಮುಖ ನದಿ ವೇದಾವತಿ, ಇದರೊಂದಿಗೆ ಜನ್ನಿಗೆ ಹಳ್ಳಿ ಮತ್ತು ಸುವರ್ಣ ಮುಖಿ ಹೊಳೆಗಳಿವೆ. ಜಿಲ್ಲೆಯಲ್ಲಿ, ಅರಣ್ಯ ಪ್ರದೇಶ ವಿಸ್ತಾರವಾಗಿದೆ. ಇಲ್ಲಿಯ ಅರಣ್ಯ 6ರಿಂದ 15 ಮೀ ಉತ್ತರದ ಮರಗಳು, ಸಾಮಾನ್ಯವಾಗಿ ಕುರುಚಲು ಗಿಡಗಳನ್ನೊಳಗೊಂಡ ಸಸ್ಯವರಣ. ಆದರೂ ಕಾಯ್ದಿಟ್ಟ ಅರಣ್ಯ ಪ್ರದೇಶಗಳಾದ ಜೋಗಿಮಟ್ಟಿ ಮತ್ತು ಮಾರಿಕಣಿವೆಗಳಲ್ಲಿ ದಟ್ಟವಾದ ಸಸ್ಯವರಣವನ್ನು ಕಾಣಬಹುದಾಗಿದೆ.

ಜಿಲ್ಲೆಯಲ್ಲಿ ಬೆಳೆಯುವ ಮರಗಳಲ್ಲಿ ಜಾಲಿ, ಮಾವು, ಹೊಂಗೆ, ಬೇವು, ಹಲಸು, ಸೀತಾಫಲ, ನುಗ್ಗೆ, ಸಗಸೆ, ಮರಾಲೆ, ತಾಳೆಮರ, ಗಂಧದ ಮರ, ಮುತ್ತಗ, ಈಚಲು, ಹುಣಸೆ, ಆಲ, ಬಿಲ್ವಪತ್ರೆ, ಬೇಲ, ಬ್ಯಾಲ, ಬಾಗೆಮರ, ಗ್ವಾವೆ ಮರ, ಬನ್ನಿ ಮರ, ತೊರೆಮತ್ತಿ, ಅಂಕೋಲೆ, ತಪಸಿ, ಸಿಂಕೇಸ್ರಿ, ಬಾರೆ ಮರ, ಅತ್ತಿ, ಅಶ್ವತ್ಥ, ನೇರಳೆ, ದೊಡ್ಡಮರೆ, ಮುಂತಾದವು ಪೊದರು ಗಿಡಗಳಾದ : ಎಕ್ಕೆ ಕಾರೆಗಿಡ, ಲಾಂಟಾನ, ಪಾಪಾಸ್‌ಕಳ್ಳಿ, ಕೆಡ್ಡಿಕಳ್ಳಿ, ಕಾಡು ಮೆಣಸಿನ ಗಿಡ, ಬಂದ್ರಿಕೆ ಗಿಡ, ತಂಗಟಿಗಿಡ,

ಕವಳೆ, ಹಿಪ್ಪೆ, ಎಸಿಗೆ, ಲಕ್ಕಿ, ಇಂಗ್ಳಾರ, ಕಣಗಲು, ಎಡತೆರೆ, ಜ್ಯೋತಿಷ್ಮತಿ, ಇತ್ಯಾದಿ, ಬಳ್ಳಿಗಳಾದ : ಉಗುಣಿ, ಈಶ್ವರಿ, ಹಾಲೇಬಳ್ಳಿ, ತೊಂಡೆ ಬಳ್ಳಿ, ಕುಲ್ಪಿಗೆನ ಬಳ್ಳಿ, ಕೋಣನ ಬಳ್ಳಿ ಆಡುಮುಟ್ಟದ ಬಳ್ಳಿ, ಮಧುನಶಿನಿ, ಸುಗಂಧಿ ಮುಂತಾದವು. ಚಿತ್ರಮೂಲ, ಉತ್ತರಾಣಿ, ಪಾಪಾಸಕಳ್ಳಿ ಕರಿಹೂಲಿ, ಬಿಳಿಹುಲಿ, ಹಿಟ್ಟುಳುಕ, ತುಂಬೆ, ವಿಷ್ಣಕ್ರಾಂತಿ ಶ್ರೀತುಳಸಿ, ಲೋಳೆಸರೆ, ಗರಿಕೆ, ಗರುಗ, ಹಕ್ಕರಿಕೆ – ಮುಂತಾದ ಕುರುಚಲು ಗಿಡಗಳು ಹಾಗೂ ತೃಣಸಸ್ಯಗಳನ್ನು ಕಾಣಬಹುದಾಗಿದೆ. ಜಿಲ್ಲೆಯಲ್ಲಿ ಕೆಲವು ಕಾಯ್ದಿಟ್ಟ ಸಸ್ಯಕ್ಷೇತ್ರಗಳಿವೆ, ಜೋಗಿಮಟ್ಟಿ, ಮಾರಿಕಣಿವೆ, ಮೊಣಕಾಲ್ಮೂರು ತಾಲ್ಲೂಕಿನ ಮುತ್ತಿಗಾರಹಳ್ಳಿ ಸಮೀಪದ ಸಸ್ಯಕ್ಷೇತ್ರ ಮುಂತಾದವು.

ಜಿಲ್ಲೆಯಲ್ಲಿ ಬುಡಕಟ್ಟು ಸಂಸ್ಕೃತಿಯಿಂದ ಕೂಡಿರುವ ಮ್ಯಾಸಬೇಡರು, ಲಂಬಾಣಿಯವರು ಮತ್ತು ಕಾಡುಗೊಲ್ಲರು ವಿಶೇಷವಾಗಿದ್ದಾರೆ. ಮ್ಯಾಸಬೇಡರು ಸಾಮಾನ್ಯವಾಗಿ ತೆಲಗು ಮತ್ತು ಕನ್ನಡವನ್ನು ಮಾತಾನಾಡುತ್ತಾರೆ. ಕೃಷಿ ಸಂಸ್ಕೃತಿಯ ಹಿನ್ನೆಲೆಯವರು. ಒಣಬೇಸಾಯವನ್ನು ಆಶ್ರಯಿಸಿದ್ದಾರೆ. ಹಿಂದಿನಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಆಡು ಕುರಿಗಳನ್ನು ಸಾಕುತ್ತಾರೆ. ಇಲ್ಲಿನ ಮುಖ್ಯಬೆಳೆಗಳೆಂದರೆ ಶೇಂಗಾ, ಜೋಳ, ರಾಗಿ, ಸಜ್ಜೆ, ನವಣೆ, ಸಾವೆ, ಕುರಸಾನಿ, ತೊಗರಿ, ಹುರುಳಿ ಮುಂತಾದವು, ಕೊಳವೆ ಬಾವಿ ಹೊಂದಿದ್ದವರು ಭತ್ತ, ಹತ್ತಿ, ರೇಷ್ಮೆ, ತರಕಾರಿ ಬೆಳೆ, ತೆಂಗು ಬಾಳೆ, ಅಡಿಕೆ ಮೊದಲಾದವುಗಳನ್ನು ಬೆಳೆಯುತ್ತಾರೆ.

ಚಿತ್ರದುರ್ಗ ಜಿಲ್ಲೆ ಸಾಂಸ್ಕೃತಿಕವಾಗಿ ಮಹತ್ವದ ಸ್ಥಾನವನ್ನು ಪಡೆದಿದೆ. ಬೇಟೆ ಸಂಸ್ಕೃತಿಯ ಹಿನ್ನಲೆಯುಳ್ಳ ಬೇಡರು ಬೇಟೆ ಆಡುವುದು ಒಂದು ವೀರತ್ವದ ಸಂಕೇತ ಎಂದು ಭಾವಿಸಿದ್ದಾರೆ. ಈಗಲೂ ಬಹುತೇಕ ಭಾಗಗಳಲ್ಲಿ ತಮ್ಮ ಹೊಲಗಳಲ್ಲಿ ಬುಡಕಟ್ಟುಗಳನ್ನು ನೆನಪಿಸುವ ಶೈಲಿಯಲ್ಲಿ ಗುಡಿಸಲುಗಳನ್ನು ನಿರ್ಮಿಸಿಕೊಂಡು ವಾಸಮಾಡುತ್ತಾರೆ. ಬುಡಕಟ್ಟು ವೀರರಾದ ಗಾದರಿಪಾಲನಾಯಕ, ಯರಮಂಚಿನಾಯಕ ಪಾಪನಾಯಕ ಮೊದಲಾದವರನ್ನು ಕುರಿತು ವಿಶೇಷ ಹಬ್ಬಗಳನ್ನು ಆಚರಿಸುತ್ತಾರೆ. ಇತಿಹಾಸವನ್ನು ನುಡಿಯುವ ಕೋಟೆ ಕೊತ್ತಲುಗಳನ್ನು ಜಿಲ್ಲೆಯಾದ್ಯಂತ ಕಾಣಬಹುದು. ಉದಾಹರಣೆಗೆ ಚಳ್ಳಕೆರೆ ತಾಲ್ಲೂಕಿನ ಸಿದ್ದೇಶ್ವರ ದುರ್ಗದ ಕೋಟೆ, ಮೊಳಕಾಲ್ಮೂರು ತಾಲ್ಲೂಕಿನ ಬ್ರಹ್ಮಗಿರಿ, ಜಟಿಂಗರಾಮೇಶ್ವರ, ಚಿತ್ರದುರ್ಗ ನಗರಕ್ಕೆ ಕಳಸ ಪ್ರಾಯವಾದ ಏಳು ಕೋಟೆ, ಹಾಗೆಯೇ ಪುರಾತನ ಕಾಲದ ದೇವಾಲಯಗಳು ಐತಿಹಾಸಿಕ ಹಿರಿಮೆಯನ್ನು ತಂದು ಕೊಟ್ಟಿವೆ.

ಜಿಲ್ಲೆಯಲ್ಲಿನ ಬುಡಕಟ್ಟು ಜನಾಂಗದವರೊಂದಿಗೆ ಹರಿಜನ, ರೆಡ್ಡಿ, ವಿಶ್ವಕರ್ಮ, ಉಪ್ಪಾರರು, ಕುಂಭಾರರು, ವೈಷ್ಣವ, ಜೈನರು, ಬೆಸ್ತರು, ಕುರುಬರು, ಮುಸ್ಲಿಂ, ಜೋಪಿ, ಮಡಿವಾಳರು, ಬಲಿಜ, ಕ್ಷತ್ರಿಯರು, ಹೆಳವರು ದೇವಾಂಗ ಶೆಟ್ಟರು, ಲಂಬಾಣಿಯವರು, ಸುಡುಗಾಡುಸಿದ್ದರು, ಕಿನ್ನಾರಿ ಜೋಗಿಗಳು, ಲಿಂಗಾಯತ ಮುಂತಾದ ಜನಾಂಗದವರನ್ನು ಕಾಣಬಹುದು.

ಟಿಪ್ಪಣಿಗಳು :

1. ಹಾ.ಮಾ. ನಾಯಕ, ಜನಪದ ಸ್ವರೂಪ, ಪುಟ –22
2. ಪ್ರೊ.ಹಿ.ಶಿ. ರಾಮಚಂದ್ರೇಗೌಡ, 2004, ಜಾನಪದ ಗ್ರಹಿಕೆ; ಪರಿಕಲ್ಪನೆ, ಪುಟ–15
3. ನನ್ನ ಪಿಎಚ್.ಡಿ ವಿಷಯ ಕುರಿತು ಎಸ್‌ಎಸ್‌ವೈನ ಗುರೂಜಿಯಾದ ಶ್ರೀತಿಪ್ಪಾರಡ್ಡಿಯವರೊಂದಿಗೆ ಮಾತಾಡುವ ಸಂದರ್ಭದಲ್ಲಿ ಗುರೂಜಿಯವರು ಈ ಉದಾಹರಣೆಯನ್ನು ಹೇಳಿದರು. ಇದರ ಪ್ರಯೋಗವನ್ನು ತಾವು ಮಾಡಿರುವುದಾಗಿ ತಿಳಿಸಿದರು. [ರಂಗಾಪುರ, ಹೊಳಲ್ಕೆರೆ ತಾ॥ ಚಿತ್ರದುರ್ಗ ಜಿಲ್ಲೆ]
4. ಸಂ. ರಹಮತ್ ತರೀಕೆರೆ, 2006. 'ಲೋಕ ವಿರೋಧಿಗಳ ಜತೆಯಲ್ಲಿ 15 ಮಾತುಕತೆಗಳು,' ಪುಟ–195.
5. ಸ್ವಾಮಿ ರಾಮ ರಾಮ, 1996. 'ಹಿಮಾಲಯದ ಮಹಾತ್ಮರ ಸನ್ನಿಧಿಯಲ್ಲಿ', ಪುಟ–162 ಮತ್ತು 164.
6. ಡಾ. ಮೀರಾ ಸಾಬಿಹಳ್ಳಿ ಶಿವಣ್ಣ, 1998. 'ಕರ್ನಾಟಕ ಜನಪದ ಮಹಾಕಾವ್ಯಗಳು,' ಸಂ. ಡಾ. ತೀ.ನಂ. ಶಂಕರನಾರಾಯಣ.
7. ಎಂ.ಎಸ್. ಪುಟ್ಟಣ್ಣ, 1997. 'ಚಿತ್ರದುರ್ಗದ ಪಾಳಯಗಾರರು' ಪುಟ–17.
8. ಗೌರಕ್ಕರ ಈಶ್ವರಜ್ಜ, ಔಷಧಿ ರಾಜಣ್ಣ, ತಿಪ್ಪಜ್ಜಿ, ಟಿ.ಕೆ.ಕರಿಯಪ್ಪ, ಕೃಷ್ಣಪ್ಪ(ಕೆ.ಆರ್.ಪುರಂ), ಮೂಡಲಬಾಗಿಲ ಶಂಕ್ರಜ್ಜ, ಆನಂದಜ್ಜ, ಪೂಜಾರಿ ತಿಪ್ಪೇಸ್ವಾಮಿ, ಸುಣ್ಣಗಾರ ಶಾಮಣ್ಣ ಮುಂತಾದವರು.
9. ಮಳಲಿ ವಸಂತಕುಮಾರ್, 2006. ಕರ್ನಾಟಕ ಜನಪದ ವೈದ್ಯ, ಪುಟ–17
10. ಡಾ. ದಸ್ತಗೀರ ಅಲ್ಲೀಭಾಯಿ, 2002. ರೋಗ ಜಾನಪದ, ಜಾನಪದ ಜಗತ್ತು (ವಿಶೇಷ ಸಂಚಿಕೆ) ಪುಟ–20

11. ಸಂ. ಡಾ. ಟಿ. ಗೋವಿಂದರಾಜು, 2003. ಜನಪದ ವೈದ್ಯ, ಪುಟ-122.

12. ಸಂ. ಡಾ. ಟಿ. ಗೋವಿಂದ ರಾಜು, 2003. ಜನಪದ ವೈದ್ಯ, ಪುಟ-134.

13. ಬೈಫ್ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, 2003. ಮೂಲಿಕಾ ಪಶುವೈದ್ಯ, ಪುಟ-101.

14. ಸಸ್ಯಶಾಸ್ತ್ರದ ಪ್ರಾಧ್ಯಾಪಕ ಡಾ. ಮಾಗಡಿ ಆರ್. ಗುರುದೇವ ರವರು ಗಂಡು ಹೆಣ್ಣುಗಳೆಂಬ ಭೇದವೆನಿಲ್ಲ ಎನ್ನುತ್ತಾರೆ.

15. ಗ್ರಾಮೀಣರು ಹಸುವಿನ ತುಪ್ಪವನ್ನು ಕಾಯಿಸಲು ಟಂಗಟೆ ಕಟ್ಟಿಗೆಯನ್ನೇ ಬಳಸುವ ಸಂಪ್ರದಾಯವಿತ್ತು. ಇದರಿಂದ ತುಪ್ಪ ಹೆಚ್ಚು ಸುವಾಸನೆಯನ್ನು ಪಡೆಯುತ್ತಿತ್ತು.

16. ಸಂ. ಡಾ. ಟಿ. ಗೋವಿಂದರಾಜು, 2003. ಜನಪದ ವೈದ್ಯ, ಪುಟ-220.

17. ಸಂ. ಡಾ. ಹಿ.ಚಿ. ಬೋರಲಿಂಗಯ್ಯ, 1996. ಕರ್ನಾಟಕ ಜನಪದ ಕಲೆಗಳ ಕೋಶ, ಪುಟ-78.

18. ಸಂ. ಡಾ. ಹಿ.ಚಿ. ಬೋರಲಿಂಗಯ್ಯ, 1996. ಕರ್ನಾಟಕ ಜನಪದ ಕಲೆಗಳ ಕೋಶ, ಪುಟ-276.

19. ಎಂ.ಎಂ. ಕಲುಬರ್ಗಿ, ಮಾರ್ಗ – 02, ಪುಟ-221.

20. ಎಚ್. ತಿಪ್ಪೇರುದ್ರಸ್ವಾಮಿ, 2007. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ-224,283.

21. ಬಿ. ರಾಜಶೇಖರಪ್ಪ, 2009. ದುರ್ಗಶೋಧನ, ಪುಟ-82.

22. ಡಾ. ಎ. ರಂಗಸ್ವಾಮಿ, 1996. ಚಾವುಂಡರಾಯನ ಲೋಕೋಪಕಾರ ಒಂದು ಅಧ್ಯಯನ, ಪುಟ-2.

23. ಡಾ. ಎ. ರಂಗಸ್ವಾಮಿ, 1996. ಚಾವುಂಡರಾಯನ ಲೋಕೋಪಕಾರ ಒಂದು ಅಧ್ಯಯ, ಪುಟ-296.

24. ಸಂ. ಪ್ರೊ. ಕಾಳೇಗೌಡ ನಾಗವಾರ, ಡಾ. ಅಂಬಳಿಕೆ ಹಿರಿಯಣ್ಣ, 2000. ಜೀಶಂಪ ಅವರ ಜಾನಪದ ಬರಹಗಳು, ಪುಟ-278, 279.

25. ಡಾ. ಎಂ. ಸುಮಿತ್ರ, 2002. ಕಣಿಯರ ಸಂಸ್ಕೃತಿ, ಪುಟ-51.

* * *

ಅಧ್ಯಾಯ – 3

ಜನಪದ ವೈದ್ಯದ ಗುರುಪರಂಪರೆ

3.1 ಜನಪದ ವೈದ್ಯವೃತ್ತಿ

3.2 ವೈದ್ಯ ಮತ್ತು ಕುಟುಂಬ

3.3 ವೃತ್ತಿ ಧರ್ಮ

ಜನಪದ ವೈದ್ಯದ ಗುರುಪರಂಪರೆ

ಗುರುಪರಂಪರೆ ಎಂದರೆ ಕಲಿಯುವ ಮತ್ತು ಕಲಿಸುವ ಕ್ರಿಯೆಗಳ ಒಂದು ಪ್ರಕ್ರಿಯೆ. ಇದಕ್ಕೆ ಜಾತಿ–ಮತಗಳ, ಮೇಲು–ಕೀಳುಗಳ ಭೇದವಿರುವುದಿಲ್ಲ ಮತ್ತು ವಯಸ್ಸಿನ ಮಿತಿಯೂ ಇರುವುದಿಲ್ಲ. ಅಂದರೆ ವಯಸ್ಸು ಎಷ್ಟಾದರೂ ಇರಲಿ ಕಲಿಯುವ ಆಸಕ್ತಿಯೇ ಮುಖ್ಯವಾಗಿರುತ್ತದೆ. ಈ ಗುರುಪರಂಪರೆಯಲ್ಲಿ ಕೆಲವರು ವಿದ್ಯೆಯನ್ನು ವಂಶಪಾರಂಪರ್ಯವಾಗಿ ಕಲಿತರೆ, ಇನ್ನೂ ಕೆಲವರು ವೈದ್ಯಬಲ್ಲವರನ್ನು ಹುಡುಕಿಕೊಂಡು ಹೋಗಿ ಕಲಿಯುತ್ತಾರೆ. ಹೀಗೆ ಕಲಿಯುವುದು ಅನಿವಾರ್ಯವೂ ಆಗಿರುತ್ತದೆ. ಯಾಕೆಂದರೆ ರೋಗರುಜಿನಗಳಿಂದ ಕುಟುಂಬವನ್ನೋ ಅಥವಾ ಬುಡಕಟ್ಟನ್ನೋ? ರಕ್ಷಿಸಿಕೊಳ್ಳಬೇಕಾಗುತ್ತದೆ. ವೈದ್ಯವನ್ನು ಕಲಿಯುತ್ತೇನೆಯೆಂದರೆ ಯಾರೂ ಅಷ್ಟು ಸುಲಭವಾಗಿ ಕಲಿಸುತ್ತಿರಲಿಲ್ಲ. ವೈದ್ಯವನ್ನು ಬಲ್ಲಂತಹ ಗುರುವನ್ನು ಶ್ರದ್ಧೆ–ಭಕ್ತಿಗಳಿಂದ ಒಲಿಸಿಕೊಳ್ಳಬೇಕಾಗಿತ್ತು. ಅಂಥ ಗುರುವಿನೊಡನೆ ಇದ್ದು ಆತನ ಸೇವೆಯನ್ನು ಮಾಡುವುದರ ಮೂಲಕ ವಿದ್ಯೆಯನ್ನು ಕಲಿಯಬೇಕಾಗಿತ್ತು.

ಗುರು ಎಂದರೆ ಅಜ್ಞಾನವನ್ನು ಕಳೆದು ಜ್ಞಾನದ ಬೆಳಕನ್ನು ಕೊಡುವವನೆಂದು ಭಾವಿಸಲಾಗಿದೆ. ಇಂಥ ಗುರುವು ವೈದ್ಯ ವಿದ್ಯೆಯನ್ನು ಬೋಧಿಸುವಾಗ ರೋಗವನ್ನು ಗುರುತಿಸುವುದು, ಗಿಡವನ್ನು ತೋರಿಸುವುದು, ಔಷಧಿಯನ್ನು ಅರೆಯುವುದು ಹಾಗೂ ಅದನ್ನು ಪ್ರಯೋಗಿಸುವುದು ಮತ್ತು ಮಂತ್ರ–ಯಂತ್ರಗಳನ್ನು ತಿಳಿಸುವುದು – ಈ ಮೊದಲಾದ ಸಂಗತಿಗಳನ್ನು ಕಲಿಸಿಕೊಡುವುದರ ಜೊತೆಗೆ ಜೀವನ ಶಿಕ್ಷಣವನ್ನೂ ತಿಳಿಸಿಕೊಡುತ್ತಿದ್ದರು. ಇಂತಹುದನ್ನೇ ಮಹಾತ್ಮ ಗಾಂಧೀಜಿಯವರು "ಆತ್ಮ ಸಂಸ್ಕೃತಿಯಿಲ್ಲದ ಶಿಕ್ಷಣದಿಂದ ಪ್ರಯೋಜನವಿಲ್ಲ" ಎಂದಿರುವುದು. ಅಂದರೆ ಗುರುಪರಂಪರೆಯಲ್ಲಿ ವಿಷಯ ಮತ್ತು ವ್ಯಕ್ತಿತ್ವಗಳೆರಡಕ್ಕೂ ಶಿಕ್ಷಣ ನೀಡಲಾಗುತ್ತಿತ್ತು. ಭಾರತೀಯ ಗುರುಪರಂಪರೆಯಲ್ಲಿ ಇದು ಸಹಜವೂ ಹೌದು.

ಜನಪದ ವೈದ್ಯರು ತಮ್ಮ ವಿದ್ಯೆಯನ್ನು ಮುಂದಿನ ಪೀಳಿಗೆಗೆ ಬೋಧಿಸುವ ಮೊದಲು ಅರ್ಹ ವ್ಯಕ್ತಿಯನ್ನು ಅಯ್ಕೆ ಮಾಡಿಕೊಳ್ಳುತ್ತಾರೆ. ಈ ಆಯ್ಕೆಯ ಪ್ರಕ್ರಿಯೆಯಲ್ಲಿ ವೈದ್ಯನ ಕುಟುಂಬದ ಸದಸ್ಯರು

ಮತ್ತು ಇತರರು ಸೇರಿರುತ್ತಾರೆ. ವಂಶಪಾರಂಪರ್ಯವಾಗಿ ವೈದ್ಯಕಲಿಯುವರು ಹೆಚ್ಚುಶ್ರಮ ಪಡಬೇಕಾದ ಅಗತ್ಯವಿಲ್ಲ ಹೊಸದಾಗಿ ಮತ್ತು ಹೊರಗಿನ ವ್ಯಕ್ತಿಯಿಂದ ವೈದ್ಯಕಲಿಯುವವರು ಹೆಚ್ಚು ಶ್ರಮವಹಿಸುವ ಅಗತ್ಯವಿದೆ. ಹೊರಗಿನವರೆಂದರೆ ಒಂದೇ ಊರಿನವರು, ಸ್ನೇಹಿತರು, ದೂರದ ಊರಿನ ಬಂಧುಗಳು, ಅನಾಮಿಕ ಸಾಧುಗಳು ಮತ್ತು ವಲಸಿಗರಿರಬಹುದು. ಈ ಕಲಿಕೆಯ ಪ್ರಕ್ರಿಯೆಯನ್ನು ತಿಳಿಯಲು ಉದಾಹರಣೆಗಳನ್ನು ವೈದ್ಯರ ಅಭಿಪ್ರಾಯದ ಹಿನ್ನೆಲೆಯಲ್ಲಿ ನೋಡುವುದಾದರೆ, 'ಗುರುಕಲಿಸಿದ ವಿದ್ಯೆ ಕೈಬಿಡಬಾರದೆಂದು ನಮ್ಮ ತಂದೆ ನನಗೆ ಕಲಿಸಿದರು'(16) 'ಹನ್ನೆರಡು ವರ್ಷದವನಿದ್ದೆ ಆಗಿನಿಂದಲೇ ನಮ್ಮ ತಂದೆ "ಆಗಿಡ ತಾ.... ಈ ಗಿಡ ತಾ...." ಎಂದು ಹೇಳುತ್ತಿದ್ದರು. ಹಾಗೆಯೇ ಅವರು ಮಾಡೋದನ್ನು ನೋಡುತ್ತಾ ಕಲಿತುಕೊಂಡೆ'(2)ವಂಶಪಾರಂಪರ್ಯದಲ್ಲಿ ವಿದ್ಯೆ ಸಹಜವಾಗಿ ಇಲ್ಲವೇ ಕೆಲವೊಮ್ಮೆ ಒತ್ತಾಯದ ಮೂಲಕ ವರ್ಗಾವಣೆಯಾಗುತ್ತದೆ. 'ಗುರುವಿನ ಜೊತೆ ನಾಲ್ಕು ವರ್ಷ ಇದ್ದೆ, ಅವರ ಜೊತೆ ಹೊಲ, ಕಾಡು ಸುತ್ತಾಡುವಾಗ ಗಿಡಗಳನ್ನು ಪರಿಚಯಿಸಿದರು. ಕೆಲವು ಸಾರಿ ಔಷಧಿಯನ್ನು ನನ್ನ ಕೈಯಿಂದ ಅರೆಸಿ ಕೊಡಿಸುತ್ತಿದ್ದರು, ಔಷಧಿಯು ಚೆನ್ನಾಗಿ ಹಿಡಿಯುತ್ತಿತ್ತು. ಅಂದಿನಿಂದ ಗುರುವು ಆಶೀರ್ವಾದ ಮಾಡಿ ನಿಷ್ಠೆಯಿಂದ ಇರುವಂತೆ ಹೇಳಿ ಕಳುಹಿಸಿದರು' (39) 'ತಂದೆ ಮತ್ತು ಚಿಕ್ಕಪ್ಪರಿಂದ ಸ್ವಲ್ಪ ಕಲಿತೆ, ಹೊರಗಡೆಯವರಿಂದ ಸ್ವಲ್ಪ ಕಲಿತೆ' (143) ಹೀಗೆ ಹೊರಗಿನ ವ್ಯಕ್ತಿಗಳಿಂದ ವೈದ್ಯವನ್ನು ಕಲಿಯುವಾಗ ಕಲಿಯುವವರ ಕಾಳಜಿಯೇ ಮುಖ್ಯವಾಗಿರುತ್ತದೆ. ಸಂದರ್ಶನ ಮಾಡಿರುವ ವೈದ್ಯರಲ್ಲಿ ವಂಶಪಾರಂಪರ್ಯದಿಂದ ವೈದ್ಯವನ್ನು ಕಲಿತವರು ಹೆಚ್ಚಿನ ಪ್ರಮಾಣದಲ್ಲಿ ಇದ್ದಾರೆ. [ಅನುಬಂಧದಲ್ಲಿನ ವೈದ್ಯರ ಪರಿಚಯದಲ್ಲಿ ಇದನ್ನು ಕಾಣಬಹುದಾಗಿದೆ.]

ಅ. ಗುರುಪರಂಪರೆಯ ಲಕ್ಷಣಗಳು

ಗುರುಪರಂಪರೆಗೆ ಅದರದೇ ಆದ ಲಕ್ಷಣಗಳಿವೆ. ವೈದ್ಯ ವಿದ್ಯೆಯನ್ನು ಕಲಿಯುವುದರಿಂದ ಪ್ರಾರಂಭವಾಗಿ ಅದರ ಪ್ರಯೋಗದವರೆಗೂ ಅವುಗಳ ಪ್ರಾಬಲ್ಯವನ್ನು ಕಾಣಬಹುದು. ಗುರುವಿದ್ಯೆಗೆ ವಿಧೇಯರಾದ ವೈದ್ಯರು ಗೋಪ್ಯತೆಯಿಂದ ಗಿಡಗಳ ಹೆಸರನ್ನು ಹೇಳುವುದಿಲ್ಲ ಮತ್ತು ಇತರರಿಗೆ ತೋರಿಸುವುದೂ ಇಲ್ಲ. ಮರೆಯಲ್ಲಿ ಔಷಧಿಯನ್ನು ತಯಾರಿಸುವ ವೈದ್ಯರು ಅದಕ್ಕೆ ಬೇಕಾದ ಪರಿಕರಗಳನ್ನು ನಿರ್ದಿಷ್ಟವಾದ, ಸಮಯ ಅಂದರೆ, ಅಮವಾಸೆ ಮತ್ತು ಹುಣ್ಣಿಮೆ ಬಂದಾಗ ಪೂಜೆಯನ್ನು ಮಾಡಿ, ಮಂತ್ರಗಳನ್ನು

ಹೇಳುವುದರ ಮೂಲಕ ಸಂಗ್ರಹಿಸುವುದು, ಮಂತ್ರಗಳನ್ನು ಸಿದ್ಧಿ ಮಾಡಿಕೊಳ್ಳಲು; ವಿಶೇಷ ಶಕ್ತಿಗಳನ್ನು ಅಹ್ವಾನ ಮಾಡಿಕೊಳ್ಳುವುದಕ್ಕಾಗಿ ಸೂರ್ಯೋದಯಕ್ಕೆ ಮೊದಲು; ಸೂರ್ಯಾಸ್ತವಾಗುವ ವೇಳೆ ಈ ಸಂಧಿಕಾಲಗಳಲ್ಲಿ ಯಾರೂ ನೋಡದಂತೆ ತಮ್ಮ ಕಾರ್ಯಸಿದ್ಧಿಗಳನ್ನು ಮಾಡಿಕೊಳ್ಳುತ್ತಾರೆ. ಎಡಗೈಯಿಂದ, ಬಾಯಿಯ ಮೂಲಕ, ಪೂರ್ಣ ನಗ್ನವಾಗಿ ಗಿಡಸಂಗ್ರಹಿಸುವುದು, ಕೀರ್ತಿ ಮತ್ತು ಹಣದಾಸೆಗಳಿಗೆ ಮನಸ್ಸು ಮಾಡದೆ ನಿಸ್ವಾರ್ಥದಿಂದ ವೈದ್ಯ ಮಾಡಿ, ತನ್ನ ವಿದ್ಯೆಯನ್ನು ಯಾರಾದರೊಬ್ಬರಿಗೆ ಕಲಿಸುವುದು, ಪೂರ್ವಿಕರಿಂದ ಬಂದಿರುವ ವೈದ್ಯಮಾಹಿತಿಯ ಕೈಹೊತ್ತಗೆಗಳು, ಓಲೆಗರಿಗಳನ್ನು ಪೂಜಿಸುವುದು. 'ಈ ಕಲಬತ್ತು ನಮ್ಮ ಮುತ್ತಾತನ ಕಾಲದ್ದು (166) ಇದರಲ್ಲಿ ಔಷಧಿ ಅರೆದು ಕೊಟ್ಟರೆ ಹುಸಿಯಾಗುವುದಿಲ್ಲ'. ಎಂಬ ನಂಬಿಕೆಗಳು ಈ ಮೊದಲಾದ ನಿಯಮಗಳನ್ನು ಅನುಸರಿಸುವುದರಿಂದ ತನಗೂ ಒಳ್ಳೆಯದು ಮತ್ತು ವಿದ್ಯೆ ಕಲಿಸಿದ ಗುರುವಿಗೆ ನಿಷ್ಠೆಯನ್ನು ತೋರಿದಂತೆಯೂ ಆಗುತ್ತದೆ ಎಂದು ಭಾವಿಸುತ್ತಾರೆ. ಈ ಬಗೆಯ ಲಕ್ಷಣಗಳನ್ನು ಮತ್ತು ನಿಯಮಗಳನ್ನು ತಿಳಿಯುವುದಕ್ಕಾಗಿ ಗುರುಪರಂಪರೆಯನ್ನು ಒಳಕಲಿಕೆ, ಹೊರಕಲಿಕೆ ಮತ್ತು ಗುರುಪರಂಪರೆಯ ನಿಯಮಗಳು ಎಂದು ಈ ಕೆಳಗಿನಂತೆ ವಿಂಗಡಿಸಿಕೊಂಡು ವಿಶ್ಲೇಷಿಸಲಾಗಿದೆ.

ಅ.1 ಒಳಕಲಿಕೆ : ಇಲ್ಲಿ ವಂಶಪಾರಂಪರ್ಯವಾಗಿ ವೈದ್ಯ ವಿದ್ಯೆ ವರ್ಗಾಯಿಸಲ್ಪಡುತ್ತದೆ. ವೈದ್ಯನಾದವನು ತನ್ನ ಬಂಧುಗಳಲ್ಲಿ ಯಾರಾದರೊಬ್ಬರಿಗೆ ವಿದ್ಯೆಯನ್ನು ತಿಳಿಸಿಕೊಡುತ್ತಾನೆ. ಕೆಲವರು ತಮ್ಮ ಕೊನೆಗಾಲದಲ್ಲಿ ಗುರುವಿನ ಅಣತಿಯಂತೆ ಅರ್ಹವ್ಯಕ್ತಿಗೆ ವಿದ್ಯೆಯನ್ನು ದಾನ ಮಾಡುತ್ತಾರೆ. ಇದೂ ಸಹ ಕುಟುಂಬದೊಳಗೇ ನಡೆಯುತ್ತದೆ. ಈ ಒಳಕಲಿಕೆಯ ವೈಶಿಷ್ಟ್ಯವನ್ನು ಅರಿಯಲು ಅದರ ಕಲಿಕಾ ಮಾರ್ಗಗಳನ್ನು ಹೀಗೆ ವಿಭಾಗಿಸಲಾಗಿದೆ.

ಅ.1.1 ವಿದ್ಯಾದಾನ : ಇದರಲ್ಲಿ ವೈದ್ಯನ ಜವಾಬ್ದಾರಿ ಹೆಚ್ಚಾಗಿ ಇರುತ್ತದೆ. ಯಾಕೆಂದರೆ ಅವನಿಗೆ ಕಲಿಸಿದ ಗುರು ಹೀಗೆ ಆಜ್ಞೆ ಮಾಡಿರುತ್ತಾನೆ. "ನೀನು ಸಾಯುವ ಮೊದಲು ಸೂಕ್ತ ವ್ಯಕ್ತಿಗೆ ವಿದ್ಯೆಯನ್ನು ದಾನ ಮಾಡಬೇಕು" ಎಂದು, ಇದಕ್ಕಾಗಿ ವೈದ್ಯನಾದವನು ತನ್ನ ವಂಶದಲ್ಲಿ ಯಾರಾದರೊಬ್ಬರನ್ನು ಆಯ್ಕೆ ಮಾಡಿಕೊಂಡು ಆಸಕ್ತಿಯಿಂದ ಕಲಿಸುತ್ತಾನೆ. ಇಲ್ಲಿ ಶಿಷ್ಯನಾದವನಿಗೆ ಅದರಲ್ಲಿ ಆಸಕ್ತಿ ಇರದಿದ್ದರೂ ಕಲಿಯುವ ಅನಿವಾರ್ಯತೆ ಇರುತ್ತದೆ. ಒಂದು ವೇಳೆ ತನ್ನ ಬಾಂಧವರಲ್ಲಿ ಯಾರೂ ವೈದ್ಯ ಕಲಿಯುತ್ತಿಲ್ಲ

ಎಂದು ತಿಳಿದಾಗ ಹೊರಗಿನ ವ್ಯಕ್ತಿಗೆ ಕಲಿಸುವ ಪ್ರಕ್ರಿಯೆ ನಡೆಯುತ್ತದೆ. ಕೆಲವೊಮ್ಮೆ ಹೊರಗಿನ ವ್ಯಕ್ತಿಗೆ ಕಲಿಸುವ ಪ್ರಸಂಗ ಒದಗಿಬರದಿದ್ದರೆ ಆ ತಲೆಮಾರಿಗೇ ಆ ಕುಟುಂಬದ ವೈದ್ಯಜ್ಞಾನ ಕ್ಷೀಣಿಸುತ್ತದೆ. ಇನ್ನೂ ಕೆಲವು ಸಂದರ್ಭಗಳಲ್ಲಿ ವೈದ್ಯ ಸತ್ತರೂ ಆತನ ವಿದ್ಯೆ ಅವನ ಹೆಂಡತಿಯ ಮೂಲಕ ಪ್ರಯೋಗಗೊಳ್ಳುತ್ತದೆ. ಈ ಸಂದರ್ಭದಲ್ಲಿ ವೈದ್ಯನ ಮೊಮ್ಮಕ್ಕಳು ಅಜ್ಜನ ವಿದ್ಯೆಯನ್ನು ಅಜ್ಜಿಯ ಮೂಲಕ ಕಲಿಯುತ್ತಾರೆ. ಉದಾಹರಣೆಗೆ; ಓ. ಬೋರಸ್ವಾಮಿ (124) ಯವರಿಗೆ ಹನ್ನೆರಡು ವರ್ಷದಲ್ಲಿಯೇ ವಿದ್ಯೆ ಕಲಿಯುವ ಅನಿವಾರ್ಯತೆ ಒದಗಿಬಂದಿತ್ತು, ಆಗ ಹುಡುಗನಿಗೆ ಆಸಕ್ತಿಯಿರಲಿಲ್ಲ. ಈಗ ಆತನಿಗೆ 32 ವರ್ಷಗಳಾಗಿವೆ. ಆತ ತನ್ನ ಹಿರಿಯರು ವಿದ್ಯೆ ಕಲಿಸಿರುವುದಕ್ಕಾಗಿ ಅವರ ಕುರಿತಾಗಿ ವಿಶೇಷವಾದ ಗೌರವ, ಅಭಿಮಾನಗಳನ್ನು ಹೊಂದಿದ್ದಾನೆ. ಹೀಗೆ ಕಲಿತು ಅರ್ಧಕ್ಕೇ ಬಿಡುವವರೂ ಇದ್ದಾರೆ. ಯಾಕಾದರೂ ತನಗೆ ಕಲಿಸಿದರೋ ಎಂದು ಬೈಯುವವರೂ ಇದ್ದಾರೆ.

1.2 ಸ್ವಾಭಾವಿಕ ಕಲಿಕೆ : ಇಲ್ಲಿ ವೈದ್ಯನಾದವನು ಔಷಧೋಪಚಾರಗಳನ್ನು ತನ್ನ ಮನೆಯವರಿಗೆ ಪರಿಚಯಿಸುತ್ತಲೇ ಪ್ರಯೋಗಿಸುತ್ತಿರುತ್ತಾನೆ. ಅಂದರೆ ಮಗ/ಮಗಳಿಗೆ 'ಆ ಗಿಡವನ್ನು ತಂದು ಕೊಡಿ, ಇಂತಹ ಸಾಮಾನುಗಳೊಂದಿಗೆ ಅರೆದು ಇಷ್ಟು ಪ್ರಮಾಣದಲ್ಲಿ ಕೊಡಿ' ಈ ಮುಂತಾದ ಕೆಲಸಗಳನ್ನೆಲ್ಲ ಮಕ್ಕಳು ಸೇರಿದಂತೆ ಮೊಮ್ಮಕ್ಕಳಿಂದಲೂ ಮಾಡಿಸುತ್ತಾನೆ. ಆಗ ಸಹಜವಾಗಿ ಎಲ್ಲರಿಗೂ ವೈದ್ಯಮಾಹಿತಿ ತಿಳಿಯುತ್ತದೆ. ಇವರಲ್ಲಿ ಆಸಕ್ತಿಯಿರುವವನೊಬ್ಬ ಪೂರ್ಣವಾಗಿ ವೈದ್ಯಜ್ಞಾನವನ್ನು ಜೀರ್ಣಿಸಿಕೊಳ್ಳುತ್ತಾನೆ. ಈ ರೀತಿಯ ಕಲಿಕೆಯಲ್ಲಿ ಜನಪದ ವೈದ್ಯ ಹೆಚ್ಚು ಪ್ರಸರಣವಾಗುತ್ತದೆ. ಉದಾಃ ತಂದೆಯ ವೈದ್ಯಜ್ಞಾನ ಪರಿಚಯವಿದ್ದ ಹೆಣ್ಣು ಮಗಳು ಮದುವೆಯಾಗಿ ಗಂಡನ ಮನೆಗೆ ಹೋಗಿರುತ್ತಾಳೆ. ಅಲ್ಲಿ ತಂದೆಯ ವಿದ್ಯೆಯನ್ನು ಪ್ರಯೋಗ ಮಾಡುತ್ತಾಳೆ, ಇಲ್ಲವೆ ತನ್ನ ಗಂಡ ಅಥವಾ ಮಕ್ಕಳಿಂದ ಪ್ರಯೋಗವಾಗುವಂತೆ ನೋಡಿಕೊಳ್ಳುತ್ತಾಳೆ. ಸ್ವಾಭಾವಿಕವಾದ ಈ ಕಲಿಕಾ ವಾತಾವರಣವನ್ನು ನಿರ್ಮಿಸುವ ವೈದ್ಯರು ಸ್ವಭಾವತಃ ಉದಾರಿಗಳಾಗಿದ್ದು, ಸಾಧು-ಸತ್ಪುರುಷರಂತಹ ವ್ಯಕ್ತಿತ್ವದವರಾಗಿರುತ್ತಾರೆ. ಇವರಿಂದ ಜನ, ಜಾನುವಾರುಗಳಿಗೆ ಬಹಳ ಉಪಕಾರವಾಗುತ್ತದೆ. ಇಂತಹವರ ಸಂಖ್ಯೆ ವಿರಳವಾಗಿದೆ. ಉದಾಃ ತಿಪ್ಪಜ್ಜಿ (74) ತಂದೆಯಿಂದ ವೈದ್ಯವನ್ನು ಕಲಿತು ಔಷಧೋಪಚಾರವನ್ನು ಮಾಡುತ್ತಾ ತನ್ನ ಮಕ್ಕಳಿಗೆ, ಸೊಸೆಗೆ ಮತ್ತು ಮೊಮ್ಮಕ್ಕಳಿಗೆ ಕಲಿಸಿರುತ್ತಾರೆ.

1.3 ಆಸಕ್ತಿಯಿಂದ ಕಲಿಕೆ : ಇಲ್ಲಿ ವೈದ್ಯನ ಮಕ್ಕಳು ತನ್ನ ತಂದೆ ಅಥವಾ ಅಜ್ಜನ ವಿದ್ಯೆಯನ್ನು ಆಸಕ್ತಿಯಿಂದ ಕಲಿಯಬೇಕಾಗುತ್ತದೆ. ಅಂದರೆ ತಮ್ಮ ಪೂರ್ವಿಕರ ಪರಂಪರೆಯನ್ನು ಮುಂದುವರಿಸಬೇಕೆಂಬ ಕಾಳಜಿ ಮತ್ತು ಪ್ರತಿಷ್ಠೆ ಈ ಎರಡೂ ದೃಷ್ಟಿಯಿಂದ ಕಲಿಯುತ್ತಾರೆ. ತಮ್ಮದು 'ವೈದ್ಯರ ಮನೆತನ' ಎಂಬ ಬಿರುದು ಅಳಿಸದಿರಲಿ ಮತ್ತು ಜನರಿಗೆ ನಮ್ಮ ಅಗತ್ಯವಿದೆ ಎಂಬುದು ತಿಳಿಯಲಿ ಎಂಬ ಭಾವನೆಯಿಂದಲೂ ವಿದ್ಯೆ ಕಲಿಯಲು ಪ್ರೇರಣೆ ಬಂದಿರುತ್ತದೆ. ಹೀಗೆ ಆಸಕ್ತಿ ಬರಲು ಮನೆಯ ಹಿರಿಯರು ಕಾರಣವಾಗಿರುತ್ತಾರೆ. ಆಸಕ್ತಿಯ ಪರಿಣಾಮದಿಂದ ತಂದೆಗಿಂತ ಮಗ ಅಥವಾ ಮೊಮ್ಮಗ ದೊಡ್ಡ ಪಂಡಿತ ಎಂಬ ಬಿರುದನ್ನು ಪಡೆದಿರುವ ಉದಾಹರಣೆಗಳಿವೆ. ಇಂಥವರು ಹೊರಗಿನ ವ್ಯಕ್ತಿಗಳಿಂದಲೂ ಹೆಚ್ಚಿನ ಅನುಭವವನ್ನು ಪಡೆದಿರುತ್ತಾರೆ. ಉದಾ: ಅಂಜಿನಿಮಲ್ಲಯ್ಯ (1) ತನ್ನ ತಂದೆ ಪರ್ವತ ಮಲ್ಲಯ್ಯನಿಗಿಂತ ಹೆಚ್ಚಿನ ಔಷಧೋಪಚಾರವನ್ನು ಕಲಿತಿದ್ದಾರೆ. ಮೇಲಿನ ಈ ಮೂರು ವಿಭಾಗಗಳು ಕುಟುಂಬದ ಒಳಗಡೆ ನಡೆಯುವ ವೈದ್ಯ ವಿದ್ಯೆ ಕಲಿಕೆಯ ಪ್ರಕ್ರಿಯೆಯನ್ನು ವಿವರಿಸುತ್ತವೆ. ಇನ್ನೂ ಕುಟುಂಬದ ಹೊರಗೆ ಈ ವೈದ್ಯಜ್ಞಾನ ಹೇಗೆ ಪ್ರಸರಣವಾಗುತ್ತದೆ ಎಂಬುದನ್ನು ನೋಡೋಣ.

ಅ.2 ಹೊರಕಲಿಕೆ : ಕುಟುಂಬದೊಳಗೆ ತಮ್ಮ ವಿದ್ಯೆಯನ್ನು ಕಲಿಯುವವರು ಇಲ್ಲವೆಂದಾಗ ವೈದ್ಯರು ಆಸಕ್ತಿಯಿಂದ ಹೊರಗಿನ ವ್ಯಕ್ತಿಗೆ ವಿದ್ಯೆ ಕಲಿಸುತ್ತಾರೆ. ಕೆಲವು ಉದಾರ ಮನಸ್ಸಿನ ವೈದ್ಯರು ಮನೆಯವರಿಗೂ ಕಲಿಸಿ ಹೊರಗಿನವರಿಗೂ ಕಲಿಸುತ್ತಾರೆ. ಇನ್ನೂ ಕೆಲವು ವೈದ್ಯರು ಕೊನೆಯವರೆಗೂ ಗುಟ್ಟನ್ನು ಯಾರೊಬ್ಬರಿಗೂ ಬಿಟ್ಟುಕೊಡದೆ ತಮ್ಮ ಅಂತ್ಯಕಾಲದಲ್ಲಿ ಇದನ್ನು ದಾನ ಮಾಡಿ ಸಾಯಬೇಕು ಎಂಬ ಯೋಚನೆಯಲ್ಲಿರುತ್ತಾರೆ. ಆಗಲೂ 'ಯಾರಾದ್ರೂ ಬನ್ನಿ ವೈದ್ಯ ಹೇಳುತ್ತೇನೆ' ಎಂದು ಅವರು ಯಾರನ್ನೂ ಕರೆಯುವುದಿಲ್ಲ. ಆದರೆ ಆಸಕ್ತಿಯಿಂದ ಬಂದವರಿಗೆ ಹೇಳಿ, ವೈದ್ಯನಾಗಿ ಅನುಸರಿಸಬೇಕಾದ ನಿಯಮಗಳನ್ನು ಮರೆಯದೆ ತಿಳಿಸಿ, ಗುರುವಿನ ಆಸೆಯಂತೆ ಸಾಯುವ ಮೊದಲು ಮತ್ತೊಬ್ಬರಿಗೆ ಹೇಳಿ ಜವಾಬ್ದಾರಿಯನ್ನು ಇಳಿಸಿಕೊಂಡೆ ಎಂಬ ಧನ್ಯತಾ ಭಾವನೆಯನ್ನು ಹೊಂದುತ್ತಾರೆ. ಹೊರಕಲಿಕೆಯ ಪ್ರಕ್ರಿಯೆಯನ್ನು ಹೀಗೆ ವಿಂಗಡಿಸಲಾಗಿದೆ.

ಅ.2.1 ಕುತೂಹಲದ ಕಲಿಕೆ : ಕೆಲವರಿಗೆ ವೈದ್ಯ ವಿಚಾರವಾಗಿ ಕುತೂಹಲವಿರುತ್ತದೆ. ಅದರಲ್ಲೂ ವಶೀಕರಣ, ಸರ್ವಸಿದ್ಧಿಯಂತ್ರ, ದೃಷ್ಟಿಯಂತ್ರ, ಮಂತ್ರ-ಮಾಟ ಮತ್ತು ಮೋಡಿಗಳ ಬಗ್ಗೆ ತಿಳಿಯಬೇಕು,

ಕಲಿಯಬೇಕು ಎಂಬ ಕುತೂಹಲ ಸಹಜವಾಗಿರುತ್ತದೆ. ಇಂಥವರು ಸೂಕ್ತ ಗುರುವಿನಲ್ಲಿ ವಿನಮ್ರವಾಗಿ ಕಲಿಯುತ್ತಾರೆ. ಈ ಸಂದರ್ಭದಲ್ಲಿ ಗುರುಕಾಣಿಕೆ ನೀಡಿ ಅವರ ಸೇವೆಯನ್ನು ಮಾಡಲು ಸಿದ್ಧರಿರುತ್ತಾರೆ. ಹೀಗೆ ಕಲಿತವರೆಲ್ಲ ವೈದ್ಯರಾಗುವುದಿಲ್ಲ ಅವರಲ್ಲಿ ಕೆಲವರು ಮಾತ್ರ ವೈದ್ಯರಾಗಿರುತ್ತಾರೆ. ಇನ್ನುಕೆಲವರು ಮಂತ್ರವಿದ್ಯೆ ಕಲಿತು ಪ್ರಲೋಭನೆಗಳಿಗೆ ಒಳಗಾಗಿ ವಿದ್ಯೆಯು ಅಪವ್ಯಯವಾಗಲು ಕಾರಣರಾಗುತ್ತಾರೆ.

2.2 ಅನುಭವದ ಕಲಿಕೆ : ಸ್ನೇಹ, ವಿಶ್ವಾಸದ ಮೂಲಕ ವೈದ್ಯನ ಮಿತ್ರರು ಆತ ಮಾಡುವುದನ್ನು ನೋಡಿ, ಹೇಳುವುದನ್ನು ಕೇಳಿ, ಕೆಲವೊಮ್ಮೆ ಆತನಿಗೆ ನೆರವಾಗುವುದಕ್ಕಾಗಿ ಸ್ವತಃ ವೈದ್ಯವನ್ನು ಮಾಡುವುದರ ಮೂಲಕ ಕಲಿತಿರುತ್ತಾರೆ. ಇವರಲ್ಲಿ ಕೆಲವರು ಮುಂದೆ ಸ್ವಂತಾಗಿ ವೈದ್ಯ ಮಾಡಿದರೆ, ಮತ್ತೆ ಕೆಲವರು ಇತರರಿಗೆ 'ಹೀಗೆ ಮಾಡುವುದನ್ನು ನೋಡಿದ್ದೆ' ಎಂದು ಹೇಳುವುದರ ಮೂಲಕ ತಾವು ತಿಳಿದುಕೊಂಡದ್ದನ್ನು ವರ್ಗಾಯಿಸುತ್ತಾರೆ. ಉಳಿದಂತೆ ಕೆಲವರು ಹವ್ಯಾಸಕ್ಕಾಗಿ ಮಾಡುತ್ತಿರುತ್ತಾರೆ. ಈ ಅನುಭವ ಕಲಿಕೆಯಲ್ಲಿ ಕುಟುಂಬದ ಮಹಿಳೆಯರ ಸಂಖ್ಯೆ ಹೆಚ್ಚಾಗಿರುತ್ತದೆ. ಅಂದರೆ ತಮ್ಮ ಕುಟುಂಬದ ವೈದ್ಯನಿಂದ ಸಹಜವಾಗಿ ವೈದ್ಯೋಪಚಾರವನ್ನು ಕಲಿತಿರುತ್ತಾರೆ.

2.3 ಪ್ರತಿಷ್ಠೆಗಾಗಿ : ಜನರ ನಡುವೆ ಗೌರವ ಸಿಗಲೆಂದೋ, ನನ್ನ ಕಂಡರೆ ಜನಕ್ಕೆ ಭಯವಿರಲಿಯೆಂದೋ ಅಥವಾ ನನಗೂ ಗೊತ್ತಿದೆ ಎಂದು ತೋರಿಸಿಕೊಳ್ಳುವುದಕ್ಕಾಗಿಯೆಂದೋ ಇಲ್ಲವೆ ಖರ್ಚಿಗೆ ಸ್ವಲ್ಪ ಹಣ ಬರುತ್ತದೆಯೆಂದೋ ಕಲಿಯುವವರಿದ್ದಾರೆ. ಈ ಕಾರಣಗಳಿಂದಾಗಿ ಕೆಲವು ವೈದ್ಯರಲ್ಲೇ ಸ್ಪರ್ಧೆ ಉಂಟಾಗಿ ದೊಡ್ಡ ದೊಡ್ಡ ಪಂಡಿತರಿಂದ ಇನ್ನೂ ಹೆಚ್ಚಿನ ವಿದ್ಯೆ ಕಲಿತು ಮತ್ತೊಬ್ಬರನ್ನು ಮುಗಿಸುವ ಅಥವಾ ಸೇಡು ತೀರಿಸಿಕೊಳ್ಳುವ ಕೃತ್ಯದಲ್ಲಿಯೂ ತೊಡಗುತ್ತಾರೆ. ಕೆಲವು ವೈದ್ಯರು ನನ್ನ ವಿದ್ಯೆ ನನ್ನ ಜೊತೆಯೇ ಸಮಾಧಿಯಾಗಲಿ ಮಕ್ಕಳಿಗೆ ಕಲಿಸುವುದು ಬೇಡ ಎಂದು ತೀರ್ಮಾನಿಸುತ್ತಾರೆ. ಏಕೆಂದರೆ, ಮಕ್ಕಳು ಕೆಟ್ಟಮಾರ್ಗ ಹಿಡಿಯಬಹುದು ಇಲ್ಲವೆ ದುರುಪಯೋಗ ಮಾಡಿಕೊಳ್ಳಬಹುದು ಎಂಬ ಅನುಮಾನ ಅವರನ್ನು ಕಾಡುವುದರಿಂದ ವೈದ್ಯವನ್ನು ಕಲಿಸುವುದಿಲ್ಲ. ಆ ಸಂದರ್ಭದಲ್ಲಿ ತಂದೆ ಕಾಲವಾದ ನಂತರ ಮಕ್ಕಳು ಆತನ ಪುಸ್ತಕಗಳಿಂದಲೋ ಇಲ್ಲವೆ ಬೇರೆಯವರಿಂದಲೋ ಕಲಿತು ತಂದೆಯಂತೆ ವೈದ್ಯರಾಗುವ ಮತ್ತು ಪ್ರತಿಷ್ಠೆ ಹೊಂದುವ ಬಯಕೆಯನ್ನು ತಾಳುತ್ತಾರೆ.

ಈ) ವೃತ್ತಿಗಾಗಿ : ವೈದ್ಯವನ್ನೇ ವೃತ್ತಿಯನ್ನಾಗಿ ಮಾಡಿಕೊಂಡು ಕಲಿಯುವವರು ಅಪರೂಪ; ಆಸಕ್ತಿಯಿಂದಲೇ ಹೆಚ್ಚಾಗಿ ಕಲಿಯುತ್ತಾರೆ, ಆದರೆ ವೈದ್ಯರ ಆರ್ಥಿಕ ಪರಿಸ್ಥಿತಿ ಅದನ್ನು ವೃತ್ತಿಯಾಗಿ ಮಾಡಿಬಿಡುತ್ತದೆ. ವೃತ್ತಿಯಾಗಿ ಪರಿವರ್ತನೆಯಾಗುವ ಕ್ರಿಯೆ ವೈದ್ಯರ ವ್ಯಕ್ತಿತ್ವವನ್ನು ಅವಲಂಬಿಸಿರುತ್ತದೆ. ಇಲ್ಲಿ ಹಣ, ಪ್ರತಿಷ್ಠೆ ಮತ್ತು ಕೀರ್ತಿಗಳ ಒಯ್ಯಾಟವಿರುತ್ತದೆ. ವೈದ್ಯವನ್ನೇ ವೃತ್ತಿಯಾಗಿಸಿಕೊಂಡವರು ಹಣಕ್ಕಾಗಿಯೇ ವೈದ್ಯ ಮಾಡುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ. ಇವರಲ್ಲಿ ಹೆಚ್ಚಿನವರು ಗುಣವಾದ ರೋಗಿಯೊಬ್ಬ ಹೆಚ್ಚಿನ ಹಣಕೊಟ್ಟರೆ 'ಅಷ್ಟೊಂದು ನನಗೆ ಬೇಡ ಇಷ್ಟು ಮಾತ್ರ ನನ್ನ ಕಾಣಿಕೆ" ಎಂದು ಹೇಳಿ ಉಳಿದಿದ್ದನ್ನು ಹಿಂತಿರುಗಿಸುವವರೂ ಇದ್ದಾರೆ.

ಉ) ಗ್ರಂಥಗಳಿಂದ ಕಲಿಕೆ : ವೈದ್ಯಕ್ಕೆ ಸಂಬಂಧಿಸಿದ ಕೈಬರಹಗಳು, ತಾಳೆಗರಿಗಳು ಅಥವಾ ಮುದ್ರಿತ ಹಳೆಯ ಗ್ರಂಥಗಳು ದೊರೆತಾಗ ಅವುಗಳನ್ನು ಓದಿ ಇಲ್ಲವೆ ಇತರರಿಂದ ಓದಿಸಿಕೊಂಡು ಅದರಂತೆ ಗಿಡಗಳನ್ನು ಕಂಡುಕೊಂಡು, ಅನುಭವ ಇರುವ ವ್ಯಕ್ತಿಗಳು ಮತ್ತು ವೈದ್ಯರ ಮಾರ್ಗದರ್ಶನ, ಸಲಹೆ ಮತ್ತು ಸಹಕಾರ ಪಡೆದು ವೈದ್ಯರಾಗುವವರಿದ್ದಾರೆ. ತಂದೆ ಕಲಿಸದೇ ಸತ್ತಾಗ ಆತನ ಪುಸ್ತಕಗಳನ್ನು ಓದಿ ವೈದ್ಯರಾಗುವ ಮಕ್ಕಳೂ ಇದ್ದಾರೆ. ಆದರೆ ಅನುಭವಿಗಳ ನೆರವನ್ನು ಒಂದಲ್ಲ ಒಂದು ವಿಧದಲ್ಲಿ ಪಡೆದೇ ತೀರುತ್ತಾರೆ ಎನ್ನುವುದು ಸತ್ಯಸಂಗತಿಯಾಗಿದೆ.

ಆ. ಗುರುಪರಂಪರೆಯ ನಿಯಮಗಳು

ಜನಪದ ವೈದ್ಯದ ಗುರುಪರಂಪರೆಯಲ್ಲಿ ಕೆಲವು ನಿಯಮಗಳಿವೆ. ಯಾರು ವೈದ್ಯವನ್ನು ಕಲಿತು ವೈದ್ಯೋಪಚಾರದಲ್ಲಿ ತೊಡಗುವರೋ ಅಂಥವರು ಈ ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ವೈದ್ಯ ವಿದ್ಯೆಯನ್ನು ಈ ನಿಯಮಾನುಸಾರವಾಗಿಯೇ ಕಲಿಸಿಕೊಡಲಾಗುತ್ತದೆ. ಹೀಗೆ ಮಾಡುವುದರಿಂದ ವೈದ್ಯಜ್ಞಾನದ ಪಾವಿತ್ರ್ಯವನ್ನು ಕಾಪಾಡಿದಂತೆ ಎಂದು ಭಾವಿಸುತ್ತಾರೆ. ಈ ನಿಯಮಗಳನ್ನು ಜನಪದ ವೈದ್ಯರು ಗುರುವಿನ ಅಪ್ಪಣೆಯೆಂದೂ ವೈದ್ಯೋಪಚಾರದ ಶಿಷ್ಟಾಚಾರವೆಂದೂ ತಿಳಿಯುತ್ತಾರೆ. ನಿಯಮಗಳು ಈ ಕೆಳಗಿನಂತಿವೆ.

ಆ.1 ವಿದ್ಯೆಕಲಿಯಲು ಅರ್ಹತೆ : ಅರ್ಹತೆ ನೋಡಿ ಶಿಷ್ಯನನ್ನು ಆಯ್ಕೆ ಮಾಡಿಕೊಳ್ಳಲಾಗುವುದು; ಯಾವುದೇ ಪರಿಸ್ಥಿತಿಯಲ್ಲಿ ತಾಳ್ಮೆಗೆಡದೆ ಶತ್ರು ಬಂದಾಗಲೂ ವೈದ್ಯೋಪಚಾರ ಮಾಡುವ

ಹೃದಯವಂತಿಕೆಯೂ ಶಿಷ್ಯನಲ್ಲಿರಬೇಕೆಂದು ಗುರು ಬಯಸುತ್ತಾನೆ. ಹಣ-ಕೀರ್ತಿಗಳಿಗೆ ಆಸೆ ಪಡುವವನಾಗಿರಬಾರದು, ನಡೆ-ನುಡಿ ಪರಿಶುದ್ಧವಾಗಿರಬೇಕು, ಜಾತಿ-ಮತ, ಮೇಲು-ಕೀಳುಗಳ ಭೇದವೆಣಿಸದೆ, ಶಿಷ್ಯನು ತನ್ನ ವೈದ್ಯವನ್ನು ಮುಂದುವರಿಸುತ್ತಾನೆ, ಜವಾಬ್ದಾರಿಯನ್ನು ವಹಿಸಿಕೊಂಡು ತನಗೆ ಹೆಸರು ತರುತ್ತಾನೆಂಬ ವಿಶ್ವಾಸ ಗುರುವಿಗೆ ಬರಬೇಕು ಇದು ಶಿಷ್ಯನ ಆಯ್ಕೆಯ ಮಾನದಂಡವಾಗಿದೆ.

2 ವಿದ್ಯೆಯ ಬೋಧನೆ ಮತ್ತು ಪ್ರಯೋಗ : ಇದು ಅನುಭವವಿದ್ಯೆಯಾಗಿದ್ದು ಗುರುವಿನ ಸಮ್ಮುಖದಲ್ಲಿ ಸಿದ್ಧಿಮಾಡಿಕೊಳ್ಳಬೇಕಾಗುತ್ತದೆ. ಹೊರಕಲಿಕೆಯಲ್ಲಿ ಕನಿಷ್ಠ 2 ರಿಂದ 10ವರ್ಷಗಳವರೆಗೆ ಶಿಷ್ಯನು ಗುರುವಿನ ಹತ್ತಿರವಿದ್ದರೆ, ಒಳಕಲಿಕೆಯಲ್ಲಿ ಕನಿಷ್ಠ 10 ರಿಂದ 30 ವರ್ಷಗಳವರೆಗೆ ಅನುಭವ ಪಡೆಯುತ್ತಾರೆ. ಈ ಅವಧಿಯಲ್ಲಿ ಹೊಲ-ಗದ್ದೆ, ಕಾಡು ಕಣಿವೆಗಳನ್ನು ಸುತ್ತಾಡಿ, ಗಿಡಮೂಲಿಕೆಗಳ ಪರಿಚಯ ಮಾಡಿಸಲಾಗುವುದು. ಅವುಗಳನ್ನು ಸಂಗ್ರಹಿಸುವ ವಿಧಾನ, ಬಳಕೆಯ ಪ್ರಮಾಣ ಮತ್ತು ಪ್ರಯೋಗಿಸುವ ಕ್ರಮಗಳ ಬೋಧನೆಯಾಗುತ್ತದೆ. ಗ್ರಹಣ ಕಾಲದಲ್ಲಿ ಮತ್ತು ಶುಭದಿನಗಳಲ್ಲಿ ಮಂತ್ರಗಳ ಸಿದ್ಧಿ ಮಾಡಿಸಿ ಅವುಗಳ ಪ್ರಯೋಗ ನಡೆಯುತ್ತದೆ. ಇದೆಲ್ಲವೂ ಗುರುವಿನ ಸಮ್ಮುಖದಲ್ಲಿ ನಡೆಯುತ್ತದೆ.

3 ಗುರುಸೇವೆ : ಒಳಕಲಿಕೆಯಲ್ಲಿ ಗುರುಸೇವೆ ಮಾಡುವುದು ಕಡಿಮೆ ಏಕೆಂದರೆ ತಂದೆ, ಅಜ್ಜ, ಅಜ್ಜಿ ತಾಯಿ ಇವರೇ ಮೊದಲಾದವರು ಗುರುವಿನ ಸ್ಥಾನದಲ್ಲಿರುತ್ತಾರೆಯಲ್ಲದೆ ರಕ್ತ ಸಂಬಂಧಿಗಳು ಆಗಿರುತ್ತಾರೆ. ಅಲ್ಲದೆ ತಮ್ಮ ವಿದ್ಯೆಯನ್ನು ತಮ್ಮ ಮಕ್ಕಳು ಕಲಿಯಬೇಕೆಂದು ಆಪೇಕ್ಷಪಡುತ್ತಾರೆ. ಆದ್ದರಿಂದ ಇಲ್ಲಿ ವಿದ್ಯೆಕಲಿಯುವುದಕ್ಕಾಗಿಯೇ ಸೇವೆ ಮಾಡುವ ಪ್ರಸಂಗ ಇರುವುದಿಲ್ಲ. ವ್ಯಕ್ತಿಯು ಅಪರಿಚಿತನಾಗಿರುತ್ತಾನೆ. ಅವನ ಪೂರ್ವಾಪರಗಳು ಗುರುವಿಗೆ ತಿಳಿದಿರುವುದಿಲ್ಲ. ಆದ್ದರಿಂದ ವಿದ್ಯೆಯನ್ನು ಧಾರೆಯೆರೆಲು ಈತನು ಅರ್ಹನಾಗಿದ್ದಾನೆಯೇ ಎನ್ನುವುದು ಗುರುವಿಗೆ ತಿಳಿಯಬೇಕಾದರೆ ಗುರುವಿನ ಸೇವೆಯನ್ನು ಮಾಡುವುದರ ಮೂಲಕ ತಾನೊಬ್ಬ ಯೋಗ್ಯನಾದವನು ಎಂಬುದನ್ನು ಮನವರಿಕೆ ಮಾಡಿಕೊಡಬೇಕಾಗುತ್ತದೆ. ಉದಾ: ಗುರುವಿನ ಕೆಲಸಗಳಲ್ಲಿ ನೆರವಾಗುವುದು, ಊಟ, ಉಪಚಾರ ನೋಡಿಕೊಳ್ಳುವುದು, ಹೀಗೆ ಗುರುಶಿಷ್ಯರ ನಡುವೆ ಮಧುರವಾದ ಬಾಂಧವ್ಯ ಕಂಡುಬರುತ್ತದೆ. ಗುರುಸೇವೆ ಎಷ್ಟು ಶ್ರದ್ಧೆಯಿಂದ ಇರುತ್ತದೋ ಅಷ್ಟೇ ಪ್ರೀತಿ, ಕರುಣೆಗೆ ಪಾತ್ರರಾಗುತ್ತಾರೆ. ಇಂಥ ಪ್ರೀತಿಯಿಂದಾಗಿ ಪ್ರತಿಯೊಬ್ಬ ವೈದ್ಯನು ತನಗೆ ವಿದ್ಯೆ ಕಲಿಸಿದ ಗುರುವನ್ನು ಸ್ಮರಿಸಿಯೇ ವೈದ್ಯೋಪಚಾರ ಮಾಡುವುದು.

ಕೆಲವರು ಕೊನೆಯಲ್ಲಿ ಗುರುಕಾಣಿಕೆಯನ್ನು ಶಕ್ತಿಯಾನುಸಾರ ಕೊಡುವುದೂ ಉಂಟು. ಉದಾ: ಆರ್ಥಿಕ ಸಹಾಯ, ಕುರಿ, ಆಡು, ಎಮ್ಮೆ, ಹಸು ಹಾಗೂ ಇತರೆ ವಸ್ತುಗಳಾಗಿರುತ್ತವೆ.

iv) ಗುರುವಚನ ಮತ್ತು ಶಿಷ್ಯನಿಂದ ಪ್ರಮಾಣ : ಗುರುವಚನವೆಂದರೆ: ಸಾಯುವ ಮೊದಲು ಯಾರಿಗಾದರೂ ವಿದ್ಯೆಯನ್ನು ದಾನ ಮಾಡು, ಮನೆಬಾಗಿಲಿಗೆ ಶತ್ರು ಬಂದಾಗಲೂ ಔಷಧಿಯನ್ನು ಕೊಡು; ಗುಟ್ಟಾಗಿ ವೈದ್ಯ ಮಾಡು; ಇವೇ ಮೊದಲಾದ ಹಿತವಚನವನ್ನು ಗುರುವು ಶಿಷ್ಯನಿಗೆ ತಿಳಿಸುತ್ತಾನೆ. ನಂತರ ಕೆಟ್ಟದ್ದನ್ನು ಮಾಡಬಾರದು, ಹಣಕ್ಕೆ ಆಸೆ ಪಡಬಾರದು ಮನದಲ್ಲಿ ದ್ವೇಷ ಅಸೂಯೆ ಇಟ್ಟುಕೊಳ್ಳಬಾರದು ಹೀಗೆ ಶಿಷ್ಯನಿಂದ ಹೇಳಿಸುವುದರ ಮೂಲಕ ಹಾಲು ಅಥವಾ ಬಳ್ಳಿಯೊಂದರ ಸಾಕ್ಷಿಯಲ್ಲಿ ಪ್ರಮಾಣವನ್ನು ಮಾಡಿಸಲಾಗುತ್ತದೆ.

5 ಗಿಡದ ಜೊತೆ-ಧಾರೆಯೆರೆಯುವುದು : ಕಲಿಕೆಯ ಎಲ್ಲಾ ಹಂತಗಳು ಮುಗಿದ ನಂತರ ಶುಭದಿನದಲ್ಲಿ ಸಂಧಿಕಾಲದಲ್ಲಿ ಇಲ್ಲವೆ ರಾತ್ರಿವೇಳೆ ಗಿಡ ಅಥವಾ ಬಳ್ಳಿಗೆ ಪೂಜೆ ಮಾಡಿ ಅದರ ಸಾಕ್ಷಿಯಲ್ಲಿ ಪರಿಶುದ್ಧವಾಗಿ ವೈದ್ಯ ಮಾಡಬೇಕೆಂದು ಪ್ರಮಾಣ ಮಾಡಿಸಿ ಅದರೊಂದಿಗೆ ಧಾರೆಯೆರೆದು ಆ ಗಿಡ ಅಥವಾ ಬಳ್ಳಿಯನ್ನು ಒಂದೇ ಬಾರಿಗೆ ಶಿಷ್ಯನಿಂದ ಕೀಳಿಸಿದ ಮೇಲೆ ಗುರುವು ಶಿಷ್ಯನನ್ನು ಬೀಳ್ಕೊಡುತ್ತಾನೆ.

6. ಅಪಥ್ಯ : ಕುಂಬಳಕಾಯಿ, ಪುಂಡಿಪಲ್ಲೆ, ಕರಬೂಜದ ಹಣ್ಣು ಮುಂತಾದವನ್ನು ಶಾಶ್ವತವಾಗಿ ತಿನ್ನುವುದನ್ನು ವೈದ್ಯನಾದವನು ಕೈಬಿಡಬೇಕು ಎಂಬುದಾಗಿ ಗುರು ಆಜ್ಞೆ ಮಾಡಿರುತ್ತಾನೆ. ಇದು ಎಲ್ಲಾ ಕಡೆ ಕಂಡುಬರುವುದಿಲ್ಲ. ಒಂದು ವೇಳೆ ಸೇವಿಸಿದರೆ ವೈದ್ಯ ಮಾಡಿದ್ದು ಹಿಡಿಯುವುದಿಲ್ಲವೆಂಬ ನಂಬಿಕೆ ಇದೆ (73) ಸಾವು ಸಂಭವಿಸಿದಾಗ, ಗ್ರಹಣ ಇದ್ದಾಗ, ಮನೆಯಲ್ಲಿ ಮುಟ್ಟುಚಿಟ್ಟು ಆದಾಗ –ಈ ಮೊದಲಾದ ದಿನಗಳಲ್ಲಿ ವೈದ್ಯನಾದವನು ಮನೆಯಲ್ಲಿ ಆಹಾರವನ್ನು ಸೇವಿಸುವಂತಿಲ್ಲ. ಮನೆಯ ಹೊರಗೆ ವಾಸ್ತುವ್ಯವನ್ನು ಮಾಡಬೇಕು (124) ಈ ವಿಷಯಕ್ಕೆ ಸಂಬಂಧಪಟ್ಟ ಹೆಚ್ಚಿನ ವಿಶ್ಲೇಷಣೆಯನ್ನು 'ವೈದ್ಯ ವೃತ್ತಿ' ಅಧ್ಯಾಯದಲ್ಲಿ ಮಾಡಲಾಗಿದೆ.

ಜನಪದ ವೈದ್ಯರ ಗುರುಪರಂಪರೆಯಲ್ಲಿ ವ್ಯಕ್ತಿ, ಪ್ರದೇಶ ಮತ್ತು ಸಂದರ್ಭಗಳಿಂದ ಸ್ವಲ್ಪ ವ್ಯತ್ಯಾಸವಿರುತ್ತದೆ. ಉದಾ : ಅನಾಮಿಕ ವ್ಯಕ್ತಿಯೊಬ್ಬ ಊರಿಗೆ ಬಂದಾಗ ಅವನ ಪಾಂಡಿತ್ಯ ಕಂಡವರು ಅವನ ಹಿಂದೆಯೇ ಹೋಗಿ ಜ್ಞಾನಾರ್ಜನೆ ಮಾಡಿದರೆ ಮತ್ತೆ ಕೆಲವರು ಕಲಿಯುವ ಉತ್ಸಾಹದಿಂದ ಬಾಬಾಬುಡನ್ ಗಿರಿ, ಸಿದ್ಧರ ಬೆಟ್ಟ, ಆಂಧ್ರ ಮತ್ತು ತಮಿಳುನಾಡಿನ ಭಾಗದ ವ್ಯಕ್ತಿಗಳಿಂದ ಕಲಿತು ವೈದ್ಯಮಾಡುವವರಿದ್ದಾರೆ.

ಇಷ್ಟೊಂದು ದೂರದ ಭಾಗಗಳಿಂದ ಮತ್ತು ಅತ್ಯಂತ ಶ್ರಮದಿಂದ ವೈದ್ಯವನ್ನು ಕಲಿತವರು ಗುರುಪರಂಪರೆಯ ನೆಪದಲ್ಲಿ ಯಾಕೆ ವೈದ್ಯಜ್ಞಾನವನ್ನು ಹೆಚ್ಚು ಜನರಿಗೆ ತಿಳಿಸುವುದಿಲ್ಲ ಎನ್ನುವುದರ ಹಿಂದೆ ಕೆಲವು ಒಳ್ಳೆಯ ಉದ್ದೇಶಗಳೇ ಅಡಗಿವೆ. ಒಂದು ವಿದ್ಯೆ ಅನರ್ಹರ ಕೈಗೆ ಸಿಗಬಾರದು, ಎರಡು ಔಷಧೀಯ ಮೇಲೆ ರೋಗಿಗೆ ನಿರ್ಲಕ್ಷ್ಯಭಾವ ಉಂಟಾಗಬಹುದು, ಮೂರು ಅಪರೂಪದ ಸಸ್ಯಗಳು ಬಹುಬೇಗ ನಶಿಸಿ ಹೋಗಬಹುದು–ಇತ್ಯಾದಿ. 'ಗುರುವು ಗಿಡಗಳ ಹೆಸರು ಹೇಳಬೇಡ ಎಂದಿದ್ದಾರೆಯೇ ಹೊರೆತು ತೋರಿಸಬೇಡ ಎಂದು ಹೇಳಿಲ್ಲ' (180) ಎಂಬ ವೈದ್ಯರ ಮಾತಲ್ಲಿ ಹೆಸರುಗಳ ಗೊಂದಲದಿಂದ ಯಾವುದೋ ಬೇರೆ ಗಿಡವನ್ನು ಔಷಧಿಗೆ ಬಳಸಿ ಅದರಿಂದ ಅನಾಹುತಕ್ಕೆ ಅವಕಾಶವಾಗಬಹುದು. ಆದ್ದರಿಂದ 'ಗಿಡವನ್ನು ತೋರಿಸು...' ಎಂದಿರುವುದು ಮೆಚ್ಚತಕ್ಕದ್ದೆ. ಹೀಗೆ ಗುರುಪರಂಪರೆಯಲ್ಲಿರುವ ಪ್ರತಿಯೊಂದು ನಿಯಮಗಳನ್ನು ವಿಶ್ಲೇಷಿಸಿದರೆ ಜನಪದ ವೈದ್ಯವನ್ನು ಹೆಚ್ಚು ಅಧ್ಯಯಿಸಿಕೊಳ್ಳಲು ಸಾಧ್ಯವಾಗಬಹುದು.

3.1 ಜನಪದ ವೈದ್ಯವೃತ್ತಿ

ವೃತ್ತಿ ಎಂಬ ಪದಕ್ಕೆ ಕೆಲಸ, ಉದ್ಯೋಗ, ಜೀವನದ ಕಸುಬು, ತಿರುಗುವಿಕೆ, ನಡತೆ, ರೂಢಿ ಎಂಬ ಅರ್ಥಗಳನ್ನು ನಿಘಂಟುವಿನಲ್ಲಿ ಹೇಳಲಾಗಿದೆ. ಜನಪದ ವೈದ್ಯ ಮಾಡುವುದು ಒಂದು ಉದ್ಯೋಗ ಅಥವಾ ಜೀವನದ ಒಂದು ಕಸುಬು ಎಂದು ಭಾವಿಸಿದವರು ತುಂಬ ವಿರಳ, ಏಕೆಂದರೆ ವೈದ್ಯವನ್ನು ಕಲಿತವರು ಯಾವುದೇ ಪ್ರತಿಫಲಾಪೇಕ್ಷೆಯನ್ನು ಇಟ್ಟುಕೊಳ್ಳದೆ ಅದನ್ನು ಮಾಡುವುದು ತಮ್ಮ ಕರ್ತವ್ಯವೆಂದು ಭಾವಿಸಿರುತ್ತಾರೆ. ಪ್ರಾಚೀನ ಕಾಲದಿಂದಲೂ ಆಯಾ ವೃತ್ತಿ ಮಾಡುವ ವರ್ಗಗಳಿಗೆ ಒಂದೊಂದು ಜಾತಿಯ ಪಟ್ಟವನ್ನು ಕಟ್ಟಿದ್ದರು. ಆದರೆ ವೈದ್ಯ ವೃತ್ತಿ ಮಾಡುವುದಕ್ಕೆ ಯಾವ ಜಾತಿಯ ಪಟ್ಟವನ್ನು ಕಟ್ಟಿರಲಿಲ್ಲ. ಏಕೆಂದರೆ ವೈದ್ಯ ಸಾರ್ವತ್ರಿಕವಾದುದು. ಯಾವುದೇ ನಿರ್ದಿಷ್ಟ ಜಾತಿಗೆ ಅಥವಾ ವರ್ಗಕ್ಕೆ ಅದನ್ನು ಸೀಮಿತಗೊಳಿಸಿರುವ ಉದಾಹರಣೆಗಳು ಇಲ್ಲ. ಅದು ಆಸಕ್ತಿ ಮತ್ತು ನಿಸ್ವಾರ್ಥ ಸೇವೆಯುಳ್ಳವರ ಜ್ಞಾನವಾಗಿದ್ದು, ಪ್ರತಿಫಲ ಬಯಸದ ಅನುಭವಿಗಳ ವೈದ್ಯ ಸೇವೆಯೂ ಆಗಿದೆ.

ಈ ಕಾರಣದಿಂದಾಗಿ ಜನಪದ ವೈದ್ಯರಲ್ಲಿ ವೃತ್ತಿ ವೈಭವೀಕರಣವಿಲ್ಲ. ಇಂಥ ವಾತಾವರಣ ನಿರ್ಮಾಣವಾದದ್ದು ಪ್ರಾಚೀನ ಬುಡಕಟ್ಟುಗಳಿಂದ ಬುಡಕಟ್ಟುಗಳಲ್ಲಿ ಯಾರಾದರೂ ಅನಾರೋಗ್ಯದಿಂದ ಬಳಲುತ್ತಿದ್ದರೆ ಅವರ ವೈದ್ಯೋಪಚಾರ ಮಾಡುವುದು ವೈದ್ಯಬಲ್ಲವರ ಕರ್ತವ್ಯವಾಗಿತ್ತು. ಹೀಗೆ ಮಾಡುವುದು ವೈದ್ಯ ವೃತ್ತಿ ಅಥವಾ ವೈದ್ಯಸೇವೆ ಎಂಬ ಪರಿಕಲ್ಪನೆ ಅವರಿಗಿರಲಿಲ್ಲ. ಕಷ್ಟದಲ್ಲಿರುವವರಿಗೆ ನೆರವಾಗುವುದು ಮಾತ್ರ ಅವರಿಗೆ ತಿಳಿದಿತ್ತು. ಇದು ಪೂರ್ವದ ಬುಡಕಟ್ಟುಗಳಲ್ಲಿದ್ದ ವೈದ್ಯವ್ಯವಸ್ಥೆಯಾಗಿತ್ತು. ಪರಿಣಾಮವಾಗಿ ಜನಪದ ವೈದ್ಯರು ತಮ್ಮ ಕುಟುಂಬದಲ್ಲಿ ವೈದ್ಯಸೇವೆ ಮಾಡುವುದಕ್ಕೂ ಹೊರಗಿನ ಕುಟುಂಬಗಳಲ್ಲಿ ವೈದ್ಯಸೇವೆ ಮಾಡುವುದಕ್ಕೂ ಯಾವ ಭೇದವನ್ನೂ ಎಣಿಸುವುದಿಲ್ಲ. ಇದರಿಂದ ವೈದ್ಯೋಪಚಾರ ಒಂದು ಕಸುಬಾಗಿ ಬೆಳೆಯಲೇ ಇಲ್ಲ. ಕಸುಬಿನೋಪಾದಿಯಲ್ಲಿ ನಿರಂತರವಾಗಿ ಅದರಲ್ಲಿ ತೊಡಗಿದ್ದರೂ ವ್ಯವಹಾರಿಕವಾಗಿ ಅದನ್ನು ನೋಡುತ್ತಿರಲಿಲ್ಲ. ಅದೊಂದು ಪುಣ್ಯದ ಕಾರ್ಯ, ದೇವರ ಸೇವೆ ಮತ್ತು ಪರೋಪಕಾರ ಎಂಬ ಭಾವನೆ ಅವರದಾಗಿತ್ತು.

ಸುಶ್ರುತ ಸಂಹಿತೆಯಲ್ಲಿ ಆಯುರ್ವೇದ ವೈದ್ಯವೃತ್ತಿಯನ್ನು ಕುರಿತು ಹೀಗೆ ಹೇಳಲಾಗಿದೆ: "ರೋಗಿಗಳನ್ನು ವಾಸಿ ಮಾಡುವ ವೃತ್ತಿ ಅತಿ ಶ್ರೇಷ್ಠವಾದದ್ದು, ಪರಿಶುದ್ಧವಾದದ್ದು, ಸರ್ವವ್ಯಾಪಿಯಾದದ್ದು.

ಯೋಗ್ಯ ಫಲ ನೀಡುವಂತಹುದು. ಭೂಲೋಕದಲ್ಲಿ ಕೀರ್ತಿಗಳಿಸುವ ಮೂಲ ಸಾಧನೆ. ಅದು ಸ್ವರ್ಗದ ದಯೆಗೆ ಪಾತ್ರವಾಗುವಂಥದ್ದು."[2] ಸುಶ್ರುತರ ಮಾತುಗಳು ವೈದ್ಯಸೇವೆ ಎಂಬುದು ಅಂದಿನ ಸಮಾಜದಲ್ಲಿ ಶ್ರೇಷ್ಠವಾದದ್ದು, ಭಗವಂತನಿಗೆ ಪ್ರಿಯವಾದದ್ದು ಎಂದು ಹೇಳುತ್ತವೆ. ಪ್ರಸ್ತುತ ಈ ಭಾಗದಲ್ಲಿ ಜನಪದ ವೈದ್ಯವೃತ್ತಿಯ ಸ್ವರೂಪವನ್ನು ಪರಿಚಯಿಸಲಾಗುವುದು.

ಸ್ವಲ್ಪ ಹಿಂದೆ ವೈದ್ಯವೃತ್ತಿ ಮಾಡುತ್ತ ಚಾರಣಿಗರಂತೆ ಊರೂರು ತಿರುಗುವ ವೈದ್ಯರು ಇದ್ದರು. ಇಂಥವರು ನಾಲ್ಕಾರು ಹಳ್ಳಿಗಳಿಗೊಬ್ಬರಂತೆ ಇರುತ್ತಿದ್ದರು. ಹೆಗಲ್ಲಲ್ಲಿ ಸದಾ ಮದ್ದಿನಚೀಲವನ್ನು ಹೊತ್ತುಕೊಂಡು ಊರಿಂದೂರಿಗೆ ಅಲೆಯುವ ಇವರು; ಮನುಷರಿಗಿಂತ ಹೆಚ್ಚಾಗಿ ಜಾನುವಾರುಗಳಿಗೇ ಔಷಧಿಯನ್ನು ಕೊಡುತ್ತಿದ್ದರು. ಪರಿಚಯವಿರುವ ಊರುಗಳಲ್ಲಿ ಈ ಚಾರಣಿಗ ವೈದ್ಯನು ಬಂದಿರುವ ಸೂಚನೆ ಗೊತ್ತಾದರೆ, ಜನರು ತಾವಾಗಿಯೇ ಜಾನುವಾರುಗಳನ್ನು ಹಿಡಿದು ತರುತ್ತಾರೆ. ಇಲ್ಲವೇ ವೈದ್ಯನನ್ನೇ ಕರೆದೊಯ್ಯುತ್ತಾರೆ. ಈ ಚಾರಣಿಗರು ಹಲವಾರು ದಿನಗಳವರೆಗೆ ತಿರುಗಾಟದಲ್ಲಿದ್ದರೂ ಅವರ ಊಟ, ವಸತಿಗೆ ಸಮಸ್ಯೆಯಾಗುತ್ತಿರಲಿಲ್ಲ. ಹಳ್ಳಿಗಳಲ್ಲಿ ಊಟಕ್ಕೇನು ಬರವೇ! ಯಾರೋ ಒಬ್ಬರ ಮನೆಯಲ್ಲಿ ವೈದ್ಯನ ಊಟವಾಗುತ್ತದೆ. ವಾಸವೂ ಹಾಗೇ ನಡೆಯುತ್ತದೆ. ಊಟ, ವಸತಿಗೆ ಅನುವು ಮಾಡಿಕೊಟ್ಟವರ ಜಾನುವಾರುಗಳಿಗೆ ಔಷಧಿಯನ್ನು ಕೊಟ್ಟಾಗ ಪ್ರತಿಯಾಗಿ ಯಾವ ಕಾಣಿಕೆಯನ್ನು ಸ್ವೀಕರಿಸುವುದಿಲ್ಲ. ಇವರು ಮನುಷ್ಯರ ಕೆಲವೊಂದು ಕಾಯಿಲೆಗಳಿಗೂ ಔಷಧೋಪಚಾರವನ್ನು ಮಾಡುತ್ತಾರೆ. ಉದಾಹರಣೆಗೆ: ಕೈಕಾಲುಗಳ ಉಳುಕು ತಗೆಯುವುದು; ಕಾಲಲ್ಲಿರುವ ಆಣಿ, ಕಿವಿ, ಹಲ್ಲುಗಳ ನೋವಿಗೆ ಔಷಧಿ ಕೊಡುವುದು; ತಲೆಕೂದಲು ಉದುರುವಿಕೆ (ಇಂದ್ರಲುಪ್ತ), ಇಸುಬು, ಲಕ್ವಾ ಮೊದಲಾದವುಗಳಿಗೆ ಚಿಕಿತ್ಸೆ ನೀಡುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಚಾರಣಿಗರನ್ನು ಕಾಣುವುದೇ ಅಪರೂಪವಾಗುತ್ತಿದೆ. ಮುಂದಿನ ಒಂದೆರಡು ದಶಕಗಳಲ್ಲಿ ಇಂಥವರು ಕಣ್ಮರೆಯಾದರೂ ಅಶ್ಚರ್ಯ ಪಡಬೇಕಾಗಿಲ್ಲ.

ಇನ್ನೊಂದು ರೀತಿಯಲ್ಲಿ ವೈದ್ಯವೃತ್ತಿ ಮಾಡುವವರಿದ್ದಾರೆ. ಇವರು ಸ್ವಸ್ಥಳದಲ್ಲಿಯೇ ವೈದ್ಯ ಮಾಡುತ್ತಾರಾದರೂ ಅಗತ್ಯವಿದ್ದಾಗ ಎಷ್ಟು ದೂರಬೇಕಾದರೂ ಹೋಗಿ ಔಷಧೋಪಚಾರವನ್ನು ನೀಡುತ್ತಾರೆ. ಇವರು ಗಿಡಮೂಲಿಕಾ ವೈದ್ಯವನ್ನು ಬಲ್ಲವರಾಗಿರುತ್ತಾರೆ. ಹಾಗೆಯೇ ಮಂತ್ರ ಮಾಟಗಳನ್ನು ಮಾಡುವವರೂ ಆಗಿರುತ್ತಾರೆ. ಕೆಲವು ವೈದ್ಯರು ತಮ್ಮ ಊರಲ್ಲಿ ಔಷಧಿಯ ಪ್ರಯೋಗವನ್ನು ತೋರಿಸಿಕೊಳ್ಳದೆ ಬೇರೆ ಊರುಗಳಲ್ಲಿ ಪ್ರಸಿದ್ಧಿಯನ್ನು ಪಡೆದಿರುತ್ತಾರೆ. ಇಂಥವರು ತಮ್ಮ ವೈದ್ಯಕ್ಕೆ ಸ್ಥಳೀಯವಾದ ಔಷಧೀಯ

ಗಿಡಮೂಲಿಕೆಗಳನ್ನು ಬಳಸುವುದರೊಂದಿಗೆ; ಜೋಗಿಮಟ್ಟಿ, ಮಾರಿಕಣಿವೆ, ಸಿದ್ಧರಬೆಟ್ಟ, ಕಪತ್ತುಗುಡ್ಡ, ಕುಮಾರಸ್ವಾಮಿ ಬೆಟ್ಟ, ಕಲ್ಯಾಣದುರ್ಗ, ಬಾಬಾಬುಡನ್‌ಗಿರಿ ಮೊದಲಾದ ಭಾಗಗಳಿಂದಲೂ ಸಂಗ್ರಹಿಸುತ್ತಾರೆ. ಜೊತೆಗೆ ಗ್ರಂಥಿಗೆ ಅಂಗಡಿಯನ್ನು ಅವಲಂಬಿಸಿರುತ್ತಾರೆ. ಕಾಣಿಕೆಯನ್ನು ಪಡೆಯುವ ವಿಷಯದಲ್ಲಿ ಇವರು ಚಾರಣಿಗರಷ್ಟು ಉದಾರಿಗಳಲ್ಲ. ಈ ಔಷಧಿಗೆ ಇಂತಿಷ್ಟು ಕೊಡಬೇಕೆಂದು ನಿಗಧಿ ಮಾಡಿರುತ್ತಾರೆ. ಈ ವರ್ಗದ ವೈದ್ಯರಲ್ಲಿ ಕೆಲವರು ಸಂಪೂರ್ಣ ಗಿಡಮೂಲಿಕೆಗಳಿಂದಲೇ ಔಷಧೋಪಚಾರವನ್ನು ಮಾಡುವವರಿದ್ದಾರೆ. ಇವರು ವಾಮವಿದ್ಯೆಯಲ್ಲಿ ತೊಡಗದೆ, ವಾಮವಿದ್ಯೆಯಿಂದ ಉಂಟಾದ ಕಷ್ಟವನ್ನು ಪರಿಹರಿಸಲು ನಿಸ್ವಾರ್ಥತೆಯಿಂದ ಶ್ರಮಿಸುತ್ತಾರೆ.

ಈ ಹಿಂದೆ ಪ್ರಸ್ತಾಪಿಸಿದಂತೆ ವೈದ್ಯವೃತ್ತಿ ಎಂಬುದು ಯಾವುದೇ ವರ್ಗಕ್ಕೆ ಸೀಮಿತವಾದದ್ದಲ್ಲ. ಯಾವುದೇ ವ್ಯಕ್ತಿಯು ವೈದ್ಯಜ್ಞಾನವನ್ನು ಶಕ್ತ್ಯಾನುಸಾರ ಪಡೆದು ತನ್ನ ಆಸಕ್ತಿಯ ಅನುಸಾರವಾಗಿ ಬಳಸಲು ಅವಕಾಶವಿದೆ. ಅಂದರೆ ಮುಖ್ಯ ಕಸುಬಾಗಿ, ಉಪಕಸುಬಾಗಿ, ಹವ್ಯಾಸವಾಗಿ ಅಥವಾ ಸ್ವಉಪಯೋಗಕ್ಕಾಗಿ ಬಳಸುವ ಸ್ವಾತಂತ್ರ್ಯವಿರುತ್ತದೆ. ಈ ಮೊದಲು ಎರಡು ರೀತಿಯ ವೃತ್ತಿ ಭಾಂದವರನ್ನು ನೋಡಲಾಯಿತು. ಇವರನ್ನು ಹೊರತು ಪಡಿಸಿದರೆ ಹಳ್ಳಿಗಳಲ್ಲಿರುವ ಅನುಭವಿಗಳು, ಮನೆಯ ಹಿರಿಯರು: ಪುರುಷ ಮಹಿಳೆಯರು, ಯುವಕರು, ಮಕ್ಕಳು ಹೀಗೆ ಎಲ್ಲರೂ ಯಾವುದಾದರೊಂದು ವೈದ್ಯವಿಚಾರವನ್ನು ಕಲಿತಿರುತ್ತಾರೆ ಮತ್ತು ಅದನ್ನು ಪ್ರಯೋಗಿಸುತ್ತಾರೆ. ಇದು ಅವರ ಹವ್ಯಾಸವಾಗಿರಬಹುದು; ಇದನ್ನು ತಮ್ಮ ವಂಶದಲ್ಲಿ ಹಿಂದಿನಿಂದಲೂ ಮಾಡಿಕೊಂಡು ಬರಲಾಗಿದೆ, ಅದಕ್ಕಾಗಿ ಅದನ್ನು ಕೈಬಿಡದೆ ಮಾಡಬೇಕಾಗಿದೆ ಎಂಬ ಅನಿವಾರ್ಯವೂ ಇರಬಹುದು. ಈ ಬಗೆಯ ವೈದ್ಯಬಲ್ಲವರದ್ದು ವೃತ್ತಿಯೋ ಪ್ರವೃತ್ತಿಯೋ ಎಂಬುದನ್ನು ಈ ಮುಂದೆ ಚರ್ಚಿಸಲಾಗಿದೆ.

ಅ) ವೃತ್ತಿಯೋ ಪ್ರವೃತ್ತಿಯೋ......

ಜನಪದ ವೈದ್ಯವನ್ನು ವೃತ್ತಿಯೋ ಅಥವಾ ಪ್ರವೃತ್ತಿಯೋ ಎಂದು ನಿರ್ಧರಿಸುವುದು ಬಹಳ ಸಂಕೀರ್ಣವಾದ ಕೆಲಸ. ಯಾಕೆಂದರೆ ವೃತ್ತಿಯೆಂದು ಭಾವಿಸಿರುವವರು ಕಾಲುಭಾಗಕ್ಕಿಂತಲೂ ಕಡಿಮೆ ಇದ್ದರೆ, ಪ್ರವೃತ್ತಿಯಾಗಿ ಅದರಲ್ಲಿ ತೊಡಗಿಸಿಕೊಂಡವರು ಮುಕ್ಕಾಲು ಭಾಗಕ್ಕೂ ಅಧಿಕವಾಗಿದ್ದಾರೆ. ಹೀಗಿದ್ದರೂ ಪ್ರವೃತ್ತಿಯವರಲ್ಲಿ ಅನೇಕರು ವೃತ್ತಿಯವರ ಹಾಗೆ ವರ್ತಿಸುತ್ತಾರೆ. ಸಂದರ್ಶಿಸಿದ 205 ಜನ ವೈದ್ಯರಲ್ಲಿ ಇದೊಂದು ತಮ್ಮ ವೃತ್ತಿ ಎಂದು ಮುಕ್ತವಾಗಿ ಹೇಳಿದವರು ಕೇವಲ 6 ಜನರು

ಮಾತ್ರ. 16 ಜನರು ಉಪಕಸಬು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇನ್ನುಳಿದ 180 ಜನರು ವೈದ್ಯಮಾಡುವುದನ್ನು ಒಂದು ಪ್ರವೃತ್ತಿ ಎಂದು ಭಾವಿಸಿದ್ದಾರೆ. ಇದರಿಂದ ಪ್ರವೃತ್ತಿಯವರೇ ಜನಪದ ವೈದ್ಯಪದ್ಧತಿಯಲ್ಲಿ ಸಿಂಹಪಾಲು ಎಂಬುದು ತಿಳಿಯುತ್ತದೆ. ವೈದ್ಯ ಬಲ್ಲವರ ಈ ಬಗೆಯ ವೈಶಿಷ್ಟ್ಯವನ್ನು ಈಗ ನೋಡೋಣ.

ಚಾರಣಿಗರು ವೈದ್ಯವನ್ನು ಮಾಡುವುದಕ್ಕಾಗಿಯೇ ಊರುಗಳನ್ನು ತಿರುಗುತ್ತಾರೆ ಎನ್ನುವುದನ್ನು ಈ ಮೊದಲು ಹೇಳಿದೆಯಷ್ಟೇ. ಇವರಿಗಿಂತಲೂ ಭಿನ್ನವಾದ ಚಾರಣಿಗರಿದ್ದಾರೆ. ಅವರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಂಚರಿಸುವ ಸಾಧುಗಳಿರಬಹುದು, ಯಾವುದೋ ಒಂದು ಧಾರ್ಮಿಕ ಕೇಂದ್ರದ ಜಂಗಮರಿರಬಹುದು, ಪೂಜಾರಿ ಇರಬಹುದು, ಅಲೆಮಾರಿ ಜನಾಂಗದವರಿರಬಹುದು, ಜೋಗಿಗಳಿರಬಹುದು, ಒಂದು ನಾಡಿನಿಂದ ಮತ್ತೊಂದು ನಾಡಿಗೆ ತಿರುಗುವ ವ್ಯಾಪಾರಿಗಳಿರಬಹುದು. ಈ ಮುಂತಾದವರು ಜನಪದ ವೈದ್ಯದಲ್ಲಿ ಒಂದಿಲ್ಲೊಂದು ವಿಧದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಉದಾಹರಣೆಗಳಿವೆ. ಸಾಧು ಸಂನ್ಯಾಸಿಗಳಂತೂ ಸಾಮಾನ್ಯರು ಗುಣಪಡಿಸಲು ಸಾಧ್ಯವಾಗದಂತಹ ಕಾಯಿಲೆಗಳನ್ನು ಒಂದು ಸಣ್ಣ ಗಿಡವನ್ನು ಬಳಸಿ ಗುಣಪಡಿಸುವಂತಹ ಅನುಭವಿಗಳಾಗಿರುತ್ತಾರೆ. ಇಂಥವರು ತಾವು ಉಳಿದುಕೊಂಡಿದ್ದ ಕಡೆ ಆಸಕ್ತರಿಗೆ ವಿದ್ಯಾದಾನವನ್ನು ಮಾಡಿ ಹೋಗುತ್ತಿದ್ದರು. ಇವರ ನಿಸ್ವಾರ್ಥ ಸೇವೆ ಅನೇಕರ ಮೇಲೆ ತುಂಬ ಪರಿಣಾಮವನ್ನು ಬೀರಿದೆ. ಉದಾಹರಣೆಗೆ : 'ನಮ್ಮೂರಿಗೆ ಮುತ್ತು ಮಾರಲು ಒಬ್ಬಜ್ಜ ಬಂದಿದ್ದ. ಆತನಿಂದ ಈ ವೈದ್ಯ ಕಲಿತೆ. ಹೊಲಮನೆಕೆಲ್ಸಗಳ ಜೊತೆ ಇದನ್ನೂ ಮಾಡ್ತೀನಿ. ಕೆಲವು ಸಾರಿ ಪಕ್ಕದ ಊರವರೂ ಕರಕ್ಕೊಂಡು ಹೋಗ್ತಾರೆ.' (7) 'ನಮ್ಮ ತೋಟದಬಾವಿ ಹತ್ತಿರ ಒಬ್ಬ ಹಣ್ಣಣ್ಣು ಮುದುಕ ಕೆಲವು ದಿನ ವಾಸವಾಗಿದ್ರು, ಅವರಿಂದ ಸ್ವಲ್ಪ ಕಲಿತೆ'. (138) 'ಮಧುರೆ ಎಂಬ ಊರಲ್ಲಿ ಒಂದು ಮಠ ಇದೆ, ಆ ಮಠದ ಸ್ವಾಮಿಯವರಿಂದ ಕಲಿತುಕೊಂಡಿದ್ದೆ.' (17)

ಮೇಲಿನ ಉದಾಹರಣೆಗಳಲ್ಲಿ ಬರುವ ಮುತ್ತುಮಾರುವ ಅಜ್ಜ, ಅಲೆಮಾರಿ ಮುದುಕ, ಮಠದ ಸ್ವಾಮಿ ಇವರುಗಳಲ್ಲಿ ಯಾರೂ ವೃತ್ತಿ ವೈದ್ಯರಲ್ಲ. ಇಂಥವರಿಂದ ಕಲಿತವರು ವೃತ್ತಿವೈದ್ಯರಾಗುವ ಸಂಭವ ಕಡಿಮೆ. ಏಕೆಂದರೆ ಕಲಿಸಿದ ಗುರುವಿಗೆ ಗೌರವ ತರುವ ರೀತಿಯಲ್ಲೇ ವೈದ್ಯೋಪಚಾರವನ್ನು ಮಾಡುವ ಉದ್ದೇಶವನ್ನು ಹೊಂದಿರುತ್ತಾರೆ. ಹೀಗೆ ಕಲಿತವರು ಎಷ್ಟು ಪ್ರಸಿದ್ದಿಯಾಗುತ್ತಾರೆಂದರೆ,

ಬಿಡುವಿಲ್ಲದೇ ಔಷಧಿ ಅರೆಯುವ ಕಾಯಕದಲ್ಲಿ ನಿರತರಾಗಿರುತ್ತಾರೆ. ಇಂಥವರು ವೃತ್ತಿ-ಪ್ರವೃತ್ತಿಗಳ ಎಲ್ಲೆಯನ್ನು ಮೀರಿ ಬದುಕಿನ ಸಾರ್ಥಕತೆಯನ್ನು ಅದರಲ್ಲಿ ಕಂಡುಕೊಳ್ಳುತ್ತಾರೆ.

ಜನಪದ ವೈದ್ಯರಲ್ಲಿ ಪ್ರವೃತ್ತಿಯವರೇ ಅಧಿಕವಾಗಿದ್ದಾರೆ ಎಂದು ಈ ಹಿಂದೆ ಹೇಳಲಾಯಿತು. ಈ ಪ್ರವೃತ್ತಿ ವೈದ್ಯರಲ್ಲಿ ಗಿಡಮೂಲಿಕಾ ಔಷಧೋಪಚಾರವೇ ಪ್ರಮುಖವಾಗಿರುತ್ತದೆ. ಇವರುಗಳಲ್ಲಿ ವಾಮವಿದ್ಯೆಯ ಪ್ರಯೋಗ ತುಂಬ ಕಡಿಮೆ. ಆದರೂ ಯಂತ್ರ ಮಂತ್ರಗಳನ್ನು ತಿಳಿದವರಿರುತ್ತಾರೆ. ಪ್ರವೃತ್ತಿ ಅಥವಾ ಹವ್ಯಾಸಿ ವೈದ್ಯರು ಇಂತಿಷ್ಟೇ ಜನರಿದ್ದಾರೆಂದು ಹೇಳಲು ಸಾಧ್ಯವಾಗುವುದಿಲ್ಲ. ಯಾಕೆಂದರೆ ಹೆಚ್ಚು ಅನುಭವವುಳ್ಳವರಿಂದ ಹಿಡಿದು ಅಲ್ಪ ಅನುಭವ ಇರುವವರವರೆಗೂ ಅವರ ಸಂಖ್ಯೆ ಬೆಳೆಯುತ್ತದೆ. ಒಂದು ಮೂಲಿಕೆಯಿಂದ ವೈದ್ಯ ಮಾಡುವವರೂ ಇದ್ದಾರೆ ಮತ್ತು ಅನೇಕ ಮೂಲಿಕೆಗಳಿಂದ ವೈದ್ಯ ಮಾಡುವವರೂ ಇದ್ದಾರೆ. ಇವರು ಮನೆಯ ಹಿರಿಯರಿರಬಹುದು, ಕಿರಿಯರಿರಬಹುದು, ವಂಶಪಾರಂಪರ್ಯವಾಗಿ ಕಲಿತವರಿರಬಹುದು; ಆಸಕ್ತಿಯಿಂದ ಕಲಿತವರು ಇರಬಹುದು, ದನಕುರಿಗಳನ್ನು ಸಾಕಿದವರು ಅವುಗಳ ಉಪಚಾರಕ್ಕಾಗಿಯೇ ವೈದ್ಯವನ್ನು ಕಲಿತಿರಬಹುದು, ಚಾರಣಿಗರ ಹಾಗೆ ಊರಿಂದೂರಿಗೆ ಹೆರಿಗೆ ಮಾಡಿಸಲು ಹೋಗುವ ಸೂಲಗಿತ್ತಿಯರಿರಬಹುದು, ಕುಳಿತಲ್ಲಿಗೇ ಸುತ್ತಲಿನ ಹತ್ತು ಹಳ್ಳಿಯ ಜನರು ಬಂದು ಹೋಗುವಂತಹ ವೈದ್ಯಜ್ಞಾನವನ್ನು ಪಡೆದವರಿರಬಹುದು-ಈ ಮೊದಲಾದವರೆಲ್ಲ ಪ್ರವೃತ್ತಿ ವೈದ್ಯರಾಗಿ ಕಂಡುಬರುತ್ತಾರೆ.

ಪ್ರವೃತ್ತಿ ವೈದ್ಯರ ಕ್ಲೇಶಗಳು : ಪ್ರವೃತ್ತಿ ವೈದ್ಯರು ವೃತ್ತಿ ವೈದ್ಯರಂತೆ ಊರಿಂದೂರಿಗೆ ಅಲೆಯುವ ಅಗತ್ಯವಿರುವುದಿಲ್ಲ ಎಂದು ಭಾವಿಸುವಂತಿಲ್ಲ. ಏಕೆಂದರೆ ಜನ ಬಂದು ರೋಗಿ ಇರುವಲ್ಲಿಗೇ ವೈದ್ಯನನ್ನು ಕರೆದಾಗ ಹೋಗಲೇ ಬೇಕಾಗುತ್ತದೆ. ಇಲ್ಲವಾದರೆ ಜನರಿಂದ ನಿಷ್ಠುರವಾದ ಮಾತುಗಳನ್ನು ಕೇಳ ಬೇಕಾಗುತ್ತದೆ. ಇದು ಇಕ್ಕಟ್ಟಿನ ಪರಿಸ್ಥಿತಿ, ಪ್ರಾಣಸಂಕಟ ಎಂದು ವೈದ್ಯರು ತಮ್ಮ ಅಳಲನ್ನು ತೋಡಿಕೊಳ್ಳುತ್ತಾರೆ. ಉದಾಹರಣೆಗೆ: 'ಇದನ್ನ ಕಲ್ತುಬಿಟ್ರೆ ಜನ ಕೆಲ್ಸ ಮಾಡೋಕೆ ಬಿಡೋದಿಲ್ಲ. ಆಳು ಇಡ್ತೀನಿ ಬರ್ರಿ ಅಂತಾರೆ ಆದ್ರೆ ಅದು ಸರಿಹೋಗಲ್ಲ.' (42) 'ನಮ್ಮ ಬದುಕು ಬಿಟ್ಟು ಹೋಗಬೇಕಾಗುತ್ತೆ. ಅದ್ಕೆ ಗಿಡಗಳನ್ನು ಹೇಳಿಬಿಟ್ಟು ನೀವೇ ಮಾಡ್ಕೊಳ್ಳಿ ಎನ್ನುತ್ತೇನೆ. ರಾತ್ರಿ ನೆಮ್ದಿಯಾಗಿ ನಿದ್ದೆ ಮಾಡೋದಕ್ಕೂ ಬಿಡಲ್ಲ'. (103) 'ಮನೆಯಲ್ಲಿ ಬೈತರೆ; ಯಾಕಾದ್ರೂ ಇದ್ನ ಕಲ್ತೆ! ಸಾಕು ಬಿಟ್ಟು ಬಿಡು ಅಂತಾರೆ. ಆದ್ರೆ ಮೂಕ ಪ್ರಾಣಿ ನೋಡ್ರಿ, ಬಂದು ಕರೆದಾಗ ಇಲ್ಲ ಎಂಬಕೆ ಮನ್ಸು ಬರೋದಿಲ್ಲ'(45).

ಈ ದಿನಗಳಲ್ಲಿ ಪ್ರವೃತ್ತಿಯ ವೈದ್ಯರು ಈ ಮೇಲಿನಂತಹ ಮನೋಭಾವಕ್ಕೆ ಹೆಚ್ಚು ಒಳಗಾಗುತ್ತಿದ್ದಾರೆ. ವೈದ್ಯನ ಕುಟುಂಬದವರೂ ಸಹ ವೈದ್ಯಮಾಡುವುದನ್ನು ಬಿಟ್ಟು ನೆಮ್ಮದಿಯಾಗಿ ಯಾಕಿರಬಾರದು ಎಂದು ಕಿವಿಮಾತನ್ನು ಹೇಳುತ್ತಾರೆ. ಇದಕ್ಕೆ ಕಾರಣಗಳು: ಕಾಸು ಇಲ್ಲದ ಬರಿ ಉದ್ರಿಕಾಯಕ ಯಾಕೆ! ಜನಕ್ಕೆ ಒಳ್ಳೆಯದನ್ನು ಮಾಡಿದರೂ ಕೆಟ್ಟದ್ದು ಮಾಡಿದ ಎಂಬ ಅಪವಾದ ಬರುತ್ತೆ, ಸ್ವಂತ ಕೆಲಸಗಳೆಲ್ಲ ನಿಂತುಹೋಗುತ್ತವೆ, ಕೆಲವು ಸಾರಿ ಕರೆದುಕೊಂಡು ಹೋದವರು ಬಸ್‌ಚಾರ್ಜನ್ನೂ ಕೊಡುವುದಿಲ್ಲ, ಆಗ ನಮ್ಮದೇ ಖರ್ಚಾಗುತ್ತೆ. ಇಂಥಾ ಸಂಪತ್ತಿಗೆ ಯಾಕೆ ಇದನ್ನು ಮಾಡಬೇಕು? ಎಂದು ಪ್ರಶ್ನಿಸುವ ವೈದ್ಯರು ವೈದ್ಯಮಾಡುವುದನ್ನು ಕೈಬಿಡಲೂ ಆಗದೇ; ಮುಂದುವರಿಸಲೂ ಆಗದೇ ಇರುವಂತಹ ಗೊಂದಲದಲ್ಲಿದ್ದಾರೆ. ಇಂದಿನ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳು ಸಾಂಪ್ರದಾಯಿಕ ಜ್ಞಾನವನ್ನು ವೃತ್ತಿಯಾಗಿ ಅಥವಾ ಪ್ರವೃತ್ತಿಯಾಗಿ ಉಳಿಸಿಕೊಳ್ಳಲು ಸಾಧ್ಯವಾಗದಿರುವಂತಹ ಪರಿಸ್ಥಿತಿಯನ್ನು ನಿರ್ಮಾಣಮಾಡಿವೆ. ಕೆಲವರು ವೈದ್ಯ ಮಾಡುವುದನ್ನು ಕೈಬಿಡುವ ಯೋಚನೆಯನ್ನು ಮಾಡುತ್ತಲೇ ಔಷಧಿಯನ್ನು ಕೊಡುತ್ತಿದ್ದರೆ, ಹಲವರು ಕೈಬಿಟ್ಟಿರುವ ಉದಾಹರಣೆಗಳಿವೆ.

'ನನ್ನ ತಂದೆ ಪಾಳೆಗಾರರಾಗಿದ್ದರೂ ಒಳ್ಳೆಯ ವೈದ್ಯರಾಗಿದ್ರು. ಅವರಿರುವ ತನಕ ವೈದ್ಯ ಮಾಡುತ್ತಿದ್ರು, ಆ ಮೇಲೆ ನಾನು ಸ್ವಲ್ಪದಿನ ಮಾಡಿದೆ, ನಂತರ ಕೈಬಿಟ್ಟಿದ್ದೇನೆ. ಯಾಕೆಂದ್ರೆ ಸಮಯದ ಅಭಾವ ಮತ್ತು ಈಗಿನ ಜನ ಸರಿಯಾಗಿ ಪಥ್ಯ ಇರುವುದಿಲ್ಲ'(181). 'ಈಗಿನ ಕಾಲ ಸರಿ ಇಲ್ರಿ..... ನಾನು ವೈದ್ಯ ಮಾಡುವುದನ್ನು ನಿಲ್ಲಿಸಿ ಬಿಟ್ಟಿದ್ದೀನಿ'(64).

'ನನ್ನ ಮಾವ ದೊಡ್ಡಪಂಡಿತರಾಗಿದ್ರು, ಆದರೆ ಅವರ ವಿದ್ಯೆಯನ್ನು ನಾವ್ಯಾರೂ ಕಲಿಯಲಿಲ್ಲ. ಅದಕ್ಕೆ ಮನೆಯಲ್ಲಿ ಅವಕಾಶ ಕೊಡಲಿಲ್ಲ'(48).

ಮೇಲಿನ ವೈದ್ಯರ ಅಭಿಪ್ರಾಯಗಳನ್ನು ನೋಡಿದಾಗ, ಆಧುನಿಕ ಸಮಾಜದಲ್ಲಿ ಜನಪದ ವೈದ್ಯದ ವೃತ್ತಿ ಅಥವಾ ಪ್ರವೃತ್ತಿಯನ್ನು ಮುಂದುವರಿಸಲು ಸಾಧ್ಯವಾಗುತ್ತಿಲ್ಲ, ವೈದ್ಯ ಮಾಡುವುದು ಮುಳ್ಳಿನ ಮೇಲಿನ ನಡಿಗೆ ಎಂಬ ಮನಸ್ಥಿತಿ ಕೆಲವರದಾಗಿದೆ. ಇದಕ್ಕೆ ಹಲವಾರು ಕಾರಣಗಳಿವೆ; ಬದಲಾದ ಸಾಮಾಜಿಕ ವಾತಾವರಣ; ಉಚಿತವಾಗಿ ಸಿಗುವ ವೈದ್ಯದ ಮೇಲೆ ಜನರ ಅನಾಧಾರ: ನಮ್ಮ ಮನೆ, ಹೊಲದಲ್ಲಿರುವ ಗಿಡಗಳನ್ನೇ ತಂದು ವೈದ್ಯಕೊಡುತ್ತಾರೆ, ಹಿಂದಿನ ಕಾಲದ ಜನ; ಮೂಢನಂಬಿಕೆ

ಯುಳ್ಳವರು ಎಂಬ ಮನೋಸ್ಥಿತಿ ಇಂದಿನ ಸಾಮಾಜಿಕರಲ್ಲಿದೆ. ಇದನ್ನೆಲ್ಲ ಗಮನಿಸಿದ ವೈದ್ಯರು ನಮ್ಮ ವೈದ್ಯೋಪಚಾರಕ್ಕೆ ಇಂದು ಮನ್ನಣೆಯಿಲ್ಲ ಎಂಬ ಕೀಳರಿಮೆಯನ್ನು ಹೊಂದಿ ಮೂಲೆ ಗುಂಪಾಗುತ್ತಿದ್ದಾರೆ.

ಇಂದಿನ ಪರಿಸ್ಥಿತಿಯಲ್ಲಿ ಈ ವೈದ್ಯ ಮಾಡುವುದನ್ನು ಕೈಬಿಟ್ಟು ಕುಳಿತ್ತಿದ್ದರೂ ಮನೆ ಮುಂದೆ ರೋಗಿ ಬಂದು ನಿಂತಾಗ ಅಂತಃಕರಣ ಕರಗಿ ಗುರುವಚನ ನೆನಪಾಗಿ ಔಷಧಿಯನ್ನು ಅರೆಯುವ ವೈದ್ಯರಿದ್ದಾರೆ. 'ನಾನು ಬದುಕಿರುವವರೆಗೆ ಬರುತ್ತಾರೆ ಸತ್ತಮ್ಯಾಲೆ ಯಾಕೆ ಬರ್‍ತಾರೆ'(6) ಎಂದು ತನ್ನ ಮನಸ್ಸಿಗೆ ತಾನೇ ಸಮಾಧಾನ ಹೇಳಿಕೊಂಡು ವೈದ್ಯ ಮಾಡುವುದನ್ನು ಮುಂದುವರಿಸುವವರೂ ಇದ್ದಾರೆ. ಕೆಲವರು 'ಮದ್ದು ಅರೆದವನ ಮನೆ ಮಧ್ಯಾಹ್ನಕ್ಕೆ ಲಯ' ಎಂಬ ಗಾದೆ ಮಾತಿನಂತೆ ತಮಗೆ ಕೇಡಾಗುವುದೆಂದು ಬಗೆದು ತಮ್ಮ ಪೂರ್ವಿಕರ ಜ್ಞಾನವನ್ನು ಕೈಬಿಟ್ಟವರಿದ್ದಾರೆ. ಇದು ವಾಮವಿದ್ಯೆ ಮಾಡುವವರಿಗಾಗಿ ಹುಟ್ಟಿಕೊಂಡಿರುವ ಗಾದೆಯಾಗಿದೆ. ನಮಗಲ್ಲ ಎಂದು ತಿಳಿದವರು, 'ಅರೆದವನು ಮೆರೆದ' ಎಂಬ ಗಾದೆಯ ಆಶಯದಂತೆ ವೈದ್ಯಸೇವೆಯನ್ನು ಮುಂದುವರಿಸುವವರಿದ್ದಾರೆ.

'ನಮ್ಮ ತಂದೆಯವರು ವೈದ್ಯವನ್ನು ಮಾಡುತ್ತಿದ್ರು, ಈಗ ನನ್ನ ತಾಯಿ ಮತ್ತು ನಾನು ಮಾಡ್ತೇವೆ. ಯಾರೇ ಯಾವುದೇ ಸಮಯದಲ್ಲಿ ಬಂದರೂ ಇಲ್ಲ ಎನ್ನದೆ ಕೊಡುತ್ತೇವೆ'(30). 'ಹೊಲ, ಮನೆ ಎಲ್ಲಿದ್ದರೆ ಅಲ್ಲಿಗೇ ಜನ ಬರ್‍ತಾರೆ, ಆ ವೇಳೆ ನನ್ನ ಕೆಲಸ ನಿಲ್ಲಿಸಿ ಬಂದವರ ಕಡೆ ಗಮನ ಕೊಡುತ್ತೇನೆ'(24).

ಹೀಗೆ ವೈದ್ಯೋಪಚಾರವನ್ನು ತುಂಬ ಸಂತೋಷದಿಂದ ಮಾಡುವ ವೈದ್ಯರು ಅದಕ್ಕಾಗಿ ತಮ್ಮ ಶ್ರಮ, ಹಣ ವ್ಯಯವಾದರೂ ಆ ಬಗ್ಗೆ ವ್ಯಸನ ಪಡುವುದಿಲ್ಲ. ನನ್ನಿಂದಾಗಿ ರೋಗ ಗುಣವಾಯಿತೆಂಬ ಅಹಂಭಾವ ಇವರಲ್ಲಿ ಕಡಿಮೆ. ಇದೆಲ್ಲ ದೇವರ ಮತ್ತು ಗುರುವಿನ ಆಶೀರ್ವಾದ ಎಂಬ ಭಾವನೆ ಅವರಲ್ಲಿರುತ್ತದೆ. ಇವರ ಹಾಗೆ ಉದಾರಿಗಳಾದ ಮತ್ತೊಂದು ಬಗೆಯ ಪ್ರವೃತ್ತಿ ವೈದ್ಯರಿರುತ್ತಾರೆ. ಅವರು ಎಲೆ ಮರೆಯಕಾಯಿಯಂತೆ ಇದ್ದು, ಯಾರಾದರೂ ಔಷಧಿಗಾಗಿ ಬಂದರೆ ಕೊಡುತ್ತಾರೆ. ಇಲ್ಲವಾದರೆ ಆಮೆ ತನ್ನ ಅಂಗಗಳನ್ನು ಒಳಸೇರಿಸಿಕೊಳ್ಳುವಂತೆ ತಮ್ಮ ವೈದ್ಯಜ್ಞಾನವನ್ನು ಮುಚ್ಚಿಟ್ಟುಕೊಂಡೇ ಇರುತ್ತಾರೆ. 'ಮನೆ ಹತ್ತಿರ ಬಂದ್ರೆ ಗಿಡ ಹಾಕ್ತಿನಿ ನಾನಾಗಿ ಎಲ್ಲೂ ಹೋಗಲ್ಲ(37), 'ನಮ್ಮ ತಂದೆಯವರು ತೀರಿದ ಮೇಲೆ ನಾನು ಅಲ್ಪಸ್ವಲ್ಪ ಮಾಡುತ್ತೇನೆ. ಆದರೆ ಕುಟುಂಬದಲ್ಲೇ ಕೊಡುತ್ತೇನೆ'(78). ಇದು ವೈದ್ಯರ ಸ್ವಾಭಾವವೂ ಆಗಿರಬಹುದು.

ವಿವಿಧ ಬಗೆಯ ಪ್ರವೃತ್ತಿಯುಳ್ಳ ವೈದ್ಯರ ಒಂದು ಸ್ಥೂಲವಾದ ಚಿತ್ರಣ ಇದಾಗಿದೆ. ವೈದ್ಯ ಮಾಡುವುದನ್ನು. ಮುಂದುವರಿಸಲು ಕಷ್ಟಪಡುವವರು, ನಿಲ್ಲಿಸಿಬಿಟ್ಟಿದ್ದೇವೆ ಎನ್ನುವವರು, ತೃಪ್ತಿಯಿಂದ ಮುಂದುವರಿಸುವ ಆಶಯವುಳ್ಳವರು ಮತ್ತು ಕುಟುಂಬದಲ್ಲೇ ಮಾಡುತ್ತೇವೆ ಎನ್ನುವವರು ಈ ಮೊದಲಾದ ಮನೋಭಾವವುಳ್ಳ ವೈದ್ಯರು ಇದ್ದಾರೆ ಅಲ್ಲದೆ ಇವರಿಗಿಂತ ಭಿನ್ನವಾದ ಪ್ರವೃತ್ತಿಯವರಿದ್ದಾರೆ ಅವರೆಂದರೆ; ಮನೆಯ ಅಜ್ಜಿ, ತಾಯಿ, ದೊಡ್ಡಮ್ಮಂದಿರು. ಇವರಿಗೆ ಯಾವ ಸಮಾಜ ಹೇಗೆ ಬದಲಾದರೂ ತಾವು ಮನೆಯಲ್ಲಿ ಮಾಡುವ ಔಷಧೋಪಚಾರವನ್ನು ಕೈಬಿಡದೇ ಮುಂದುವರಿಸುತ್ತಾರೆ. ಇವರಿಗೆ ವೈದ್ಯೋಪಚಾರವೆಂಬುದು ಬದುಕಿನ ಅವಿಭಾಜ್ಯ ಅಂಗವಾಗಿದೆ.

ಇದರಿಂದಾಗಿ ಜನಪದ ವೈದ್ಯ ಎಂಬುದು ಬದುಕಿನೊಂದಿಗೆ ನೇರ ಸಂಬಂಧವನ್ನು ಹೊಂದಿರುವಂತಹುದು. ವೃತ್ತಿಯಾಗಿಯೋ ಪ್ರವೃತ್ತಿಯಾಗಿಯೋ ಅದರಲ್ಲಿ ತೊಡಗಿದವರೆಲ್ಲರ ಧ್ಯೇಯ ಒಂದೇ ಆಗಿರುತ್ತದೆ; ರೋಗವನ್ನು ಗುಣಮಾಡಬೇಕು, ಸಂಕಷ್ಟದಲ್ಲಿರುವವರಿಗೆ ಸಹಾನುಭೂತಿ ತೋರಿಸಬೇಕು, ವೈದ್ಯ ಕಲಿಸಿದ ಹಿರಿಯರ ಆಶಯವನ್ನು ಈಡೇರಿಸಬೇಕು ಈ ಮುಂತಾದ ಉದ್ದೇಶಗಳೇ ವೈದ್ಯರಿಗೆ ಪ್ರಮುಖವಾಗಿರುತ್ತವೆ. ನಿಜಸ್ಥಿತಿ ಹೀಗಿರುವಾಗ ಹೊಟ್ಟೆಪಾಡಿಗಾಗಿ ವೈದ್ಯಮಾಡಿ ಜನರನ್ನು ಶೋಷಿಸುವ ಪ್ರವೃತ್ತಿ ಅತಿ ಕಡಿಮೆ ಎಂದು ಹೇಳಬಹುದು.

ಆ) ವರ್ಗಗಳ ಹಿನ್ನೆಲೆ

ಆರಂಭದಲ್ಲಿ ಹೇಳಿದಂತೆ ಜನಪದ ವೈದ್ಯವೆಂಬುದು ಸಾರ್ವತ್ರಿಕವಾದುದು. ಅಂದರೆ ಎಲ್ಲಾ ವರ್ಗಗಳ ಜನರೂ ತಿಳಿಯುವಂತಹುದು. ಆದಕಾರಣ ಅದು ಯಾವುದೋ ಒಂದು ವರ್ಗದ ಸ್ವತ್ತಾಗಿ ಉಳಿಯಲಿಲ್ಲ. ಪರಿಣಾಮವಾಗಿ ಎಲ್ಲಾ ವರ್ಗಗಳಲ್ಲೂ ಅದರ ಛಾಪನ್ನು ಗುರುತಿಸಬಹುದಾಗಿದೆ. ಆದರೂ ಚಿತ್ರದುರ್ಗ ಜಿಲ್ಲಾ ಪರಿಸರದಲ್ಲಿ ಮ್ಯಾಸಬೇಡರ ವರ್ಗವು ಈ ವೈದ್ಯ ಸಂಪತ್ತನ್ನು ವಿಶೇಷವಾಗಿ ಹೊಂದಿರುವಂತಹುದು ಎಂದರೆ ಉತ್ಪ್ರೇಕ್ಷೆಯಾಗಲಾರದು. ಈಗ ವಿವಿಧ ವರ್ಗಗಳ ನಡುವೆ ವೈದ್ಯಸೇವೆ ಮಾಡುವ, ಪಡೆಯುವ ಮತ್ತು ಕಲಿಸುವ, ಕಲಿಯುವ ಪ್ರಕ್ರಿಯೆ ಯಾವ ರೀತಿಯಾದದ್ದು, ಅದರಲ್ಲಿ ಮೇಲುಕೀಳುಗಳ ಪ್ರಶ್ನೆ ಇಲ್ಲ ಎಂದು ಭಾವಿಸಿದರೂ, ಸೂಕ್ಷ್ಮವಾಗಿ ನೋಡಿದರೆ ಅಲ್ಲಿಯೂ ವರ್ಗತಾರತಮ್ಯದ ಎಳೆಗಳನ್ನು ಕಾಣಲು ಸಾಧ್ಯವಿದೆ ಎಂಬ ಒಳನೋಟಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಕೆಲವು ವರ್ಗಗಳಲ್ಲಿರುವ ವೈದ್ಯರು ಆ ವರ್ಗವನ್ನೋ, ಇಡೀ ಹಟ್ಟಿ ಅಥವಾ ಊರನ್ನೋ ನಿರ್ದೇಶಿಸುವ ಜವಾಬ್ದಾರಿಯನ್ನು ಹೊತ್ತಿರುತ್ತಾರೆ. ಇಂಥವರು ಸಾಮಾನ್ಯವಾಗಿ ಆಯಾ ವರ್ಗದ ಕುಲದೈವದ ಪೂಜಾರಿಯೂ ಆಗಿರುತ್ತಾರೆ. ಮ್ಯಾಸಬೇಡರು ಮತ್ತು ಕಾಡುಗೊಲ್ಲರ ವರ್ಗಗಳಲ್ಲಿ ಈ ಬಗೆಯ ವ್ಯಕ್ತಿಗಳನ್ನು ಕಾಣಬಹುದು. ಇವರ ವೈದ್ಯದಲ್ಲಿ ದೈವತ್ವದ ಅಂಶವನ್ನು ಜನರು ಕಾಣುತ್ತಾರೆ. ಪರಿಣಾಮವಾಗಿ ಜನ ಜಾನುವಾರುಗಳ ಕೆಡಕುಗಳ ನಿವಾರಣೆಗಾಗಿ ಇವರ ಮೊರೆಹೋಗುತ್ತಾರೆ. ಇದು ಆಯಾ ವರ್ಗಗಳಲ್ಲಿ ನಡೆದುಕೊಂಡು ಬಂದಿರುವ ಸಂಪ್ರದಾಯವೂ ಆಗಿದೆ.

ಹಳ್ಳಿಯ ಸೂಲಗಿತ್ತಿಯೊಬ್ಬಳು ಎಲ್ಲಾ ವರ್ಗದವರ ಮನೆಗಳಿಗೆ ಹೋಗಿ ಹೆರಿಗೆ ಮಾಡಿಸುವುದು, ಮಗು ಮತ್ತು ತಾಯಿಗೆ ಸಣ್ಣಪುಟ್ಟ ವೈದ್ಯೋಪಚಾರ ಮಾಡುವುದು ಸಾಮಾನ್ಯವಾದುದು. ಆದರೆ ಅವಳ ಕಾರ್ಯವನ್ನು ಆಕ್ಷೇಪಿಸುವವರಿದ್ದಾರೆ. "ಏನವ್ವ ನೀನು, ಹೊಲೇರು ಗಿಲೇರು ಮನೆಯೊಳಗೆಲ್ಲ ಸುತ್ತಾಡಿ ತಿರುಗಿ ನಮ್ಮ ಮನೆಯೊಳಕೆ ಬರ್ತಿ" ಎಂದು ನನ್ನ ಮಕ್ಕಳು ಯಾವಾಗ್ಲಾದ್ರೂ ಅಂತಾರೆ. ಆದ್ರೆ "ಹೋಗಬೇಡ" ಅಂತ ಅವರೆಂದೂ ಹೇಳಿಲ್ಲ. ಹೇಳಿದ್ರೂ ನಾನು ಹೋಗೋದು ಬಿಡಲ್ಲ. ಯಾಕೆಂದ್ರೆ ಇದ್ನ ಕಲ್ತ ಮೇಲೆ ಎಲ್ಲಿಗಾದ್ರೂ ಹೋಗಿ ಮಾಡಬೇಕು' (176) ಎಂಬುದು ಸೂಲಗಿತ್ತಿಯ ಸಾಮಾಜಿಕ ಪ್ರಜ್ಞೆಯಾಗಿದೆ. ಆದರೆ ಈ ರೀತಿಯ ಸಾಮಾಜಿಕ ಪ್ರಜ್ಞೆ ಇತರರಲ್ಲಿ ಕಾಣದಿರುವುದು ಆಶ್ಚರ್ಯವೇ ಸರಿ. ಇದು ಸಮಾಜದ ಒಂದು ವರ್ಗ ಮತ್ತೊಂದು ವರ್ಗವನ್ನು ನೋಡುವ ದೃಷ್ಟಿಕೋನವಾಗಿದೆ. ಋಗ್ವೇದದ ಕಾಲದಲ್ಲಿ ಈ ಬಗೆಯ ತರತಮ ಭಾವನೆ ಇರಲಿಲ್ಲವೆಂದು ಹೇಳಲಾಗಿದೆ. ನಂತರದಲ್ಲಿ ಇದರ ಕಬಂಧ ಬಾಹುಗಳು ಚಾಚತೊಡಗಿದವು. "ಋಗ್ವೇದದಲ್ಲಿ ಔಷಧಗಳನ್ನು ಮಾಡುವ ವೈದ್ಯನನ್ನು ಸ್ತುತಿಸಲಾಗಿದೆ. ಆದರೆ ಋಗ್ವೇದೋತ್ತರ ವೈದಿಕ ಸಾಹಿತ್ಯದಲ್ಲಾಗಲೆ ವೈದ್ಯಕೀಯವನ್ನು ಖಂಡಿಸುವ ಪ್ರವೃತ್ತಿ ಬೆಳೆದು ತೋರುತ್ತಿತ್ತು. ವೈದ್ಯಕೀಯವೆಂದರೆ ಧರ್ಮಶಾಸ್ತ್ರಕಾರರಿಗೆ ಎಲ್ಲಿಲ್ಲದ ಸಿಟ್ಟು. ಯಾಕೆಂದರೆ ವೈದ್ಯಕೀಯವು ವರ್ಣ ವಿಂಗಡಣೆಯನ್ನು ಮೂಲಭೂತ ಸಾಮಾಜಿಕ ವ್ಯವಸ್ಥೆಯ ಅಂಗವನ್ನಾಗಿ ಸ್ವೀಕರಿಸಲ್ಲಿಲ್ಲ"[3] ವೈದ್ಯಮಾಡುವವರು ಎಲ್ಲಾ ವರ್ಗದವರ ಸೇವೆ ಮಾಡುವುದು ಕೆಲವರಿಗೆ ರುಚಿಸಲಿಲ್ಲ ಆ ಸೋಂಕು ಸೂಲಗಿತ್ತಿಯ ಘಟನೆಯಲ್ಲಿ ಇನ್ನೂ ಮುಂದುವರಿದಿರುವುದನ್ನು ಕಾಣಬಹುದಾಗಿದೆ.

ಸೂಲಗಿತ್ತಿಯ ಘಟನೆಯಲ್ಲಿ ನಡೆದ ತಾರತಮ್ಯ ಧೋರಣೆಯು ಸಮಾಜದ ಒಂದು ವರ್ಗದಿಂದ ಬಂದಿರುವುದಾಗಿದೆ. ಆದರೆ ಸೂಲಗಿತ್ತಿಯಿಂದ ಬಂದಿರುವುದಿಲ್ಲ. ಇನ್ನೂ ಕೆಲವು ಸಂದರ್ಭಗಳಲ್ಲಿ

ತಾರತಮ್ಯ ಧೋರಣೆ ಅನುಸರಿಸುವ ವೈದ್ಯರನ್ನು ಕಾಣಬಹುದು ಇದು ವೈದ್ಯಸೇವೆಯ ಮೂಲ ಧ್ಯೇಯವನ್ನೇ ಕಡೆಗಣಿಸಿದಂತೆ ಆಗುತ್ತದೆ.

'ನಮ್ಮೂರಿನ ಮಣೆಗಾರರ ಹತ್ತುವರ್ಷದ ಹುಡುಗ, ಅವನ ತಾಯಿಯ ಜೊತೆಯಲ್ಲಿ ಮನೆಯ ಹೊರಗೆ ಮಲಗಿರುವಾಗ ಮಧ್ಯರಾತ್ರಿ ಸುಮಾರಿಗೆ ಮಂಡಲ ಹಾವು ಹುಡುಗನ ಕಿವಿಗೆ ಕಚ್ಚಿದೆ. ಏನು ಕಚ್ಚಿತೆಂಬುದು ನಿದ್ದೆಗಣ್ಣಿನಲ್ಲಿ ಗೊತ್ತಾಗಿಲ್ಲ. ಬಾಳ ಹೊತ್ತಾದ ಮೇಲೆ ನೋಡ್ಕಂಡು ಗಿಡ ಹೊಯ್ಯಿರಿ ಅಂತ ಬಂದ್ರು. ಆಗ ನನ್ನ ಮಗ ಹೊಯ್ಯದಿಲ್ಲ ಎಂದ. ಯಾಕೆಂದ್ರೆ ಕಡಿದು ಬಾಳ ಟೈಮ್ ಆಗೈತೆ ಗಿಡ ಹೊಯ್ದರೂ ಹುಡುಗ ಉಳಿಯಲ್ಲ ಎಂದು. ಆಮೇಲೆ ಬೇರೆ ಕಡೆ ಹೋಗ್ಬೇಕೆಂದು ಹೊರಟಾಗ ಮಾರ್ಗಮಧ್ಯದಲ್ಲಿ ಹುಡುಗ ಸತ್ತೋಗಿ ಬಿಟ್ಟನು'(33). ಈ ಘಟನೆಯಲ್ಲಿ ಹಾವಿಗೆ ಔಷಧಿ ಕೊಡುವ ವೈದ್ಯ ಮೇಲ್ವರ್ಗದವನು. ಇದೇ ವೇಳೆಯಲ್ಲಿ ವೈದ್ಯ ಕೆಳವರ್ಗದವನಾಗಿದ್ದು ರೋಗಿ ಉಳಿಯಲ್ಲ ಎಂದು ತಿಳಿದು ಔಷಧಿ ಕೊಡುವುದಿಲ್ಲ ಎಂದಿದ್ದರೆ, ಅಲ್ಲಿ ಸೇರಿದ್ದ ಜನರೇ 'ಉಳಿಯೋದು ಬಿಡೋದು ಶಿವನಿಚ್ಚೆ ನೀನು ಕೊಡೋದನ್ನು ಕೊಡು' ಎಂದು ದಬಾಯಿಸುತ್ತಿದ್ದರು. ಇಲ್ಲಿ ವೈದ್ಯ ಮೇಲ್ವರ್ಗದವನೂ ಊರಿನ ಪ್ರಮುಖನೂ ಆಗಿದ್ದಾನೆ. ಇಂಥವನಿಗೆ ಔಷಧಿ ಕೊಡು ಎಂದು ಹೇಳುವ ಗಟ್ಟಿದನಿ ಕೆಳವರ್ಗದವರಿಗೆ ಎಲ್ಲಿದೆ?

ಇಲ್ಲಿ ಅವಧಿ ಮೀರಿರುವುದು ಔಷಧಿ ಕೊಡದಿರುವುದಕ್ಕೆ ಕಾರಣವಾಗಿದೆ. ಔಷಧಿ ಕೊಟ್ಟರೂ ರೋಗಿ ಉಳಿಯುವುದಿಲ್ಲ ಎಂಬುದು ವೈದ್ಯನ ತೀರ್ಮಾನವಾಗಿದೆ. ಆದರೆ ಇಂಥ ಸಂದರ್ಭಗಳಲ್ಲಿ ಔಷಧಿಯನ್ನು ಕೊಟ್ಟು ರೋಗಿಯನ್ನು ಉಳಿಸಿರುವ ಪ್ರಸಂಗಗಳಿವೆ. ಹಾಗೆಯೇ ಔಷಧಿಯನ್ನು ಕೊಟ್ಟರೂ ಉಳಿಯದಿರುವ ಉದಾಹರಣೆಗಳೂ ಇವೆ. ಹೀಗಿದ್ದರೂ ವೈದ್ಯನು ಔಷಧಿಯನ್ನು ಕೊಡದಿರುವುದು ಒಂದು ವರ್ಗ ಮತ್ತೊಂದು ವರ್ಗಕ್ಕೆ ತೋರಿದ ನಿರ್ಲಕ್ಷ್ಯವಿರಬಹುದೇ ಎಂಬ ಅನುಮಾನಕ್ಕೆ ಎಡೆಮಾಡಿಕೊಡುತ್ತದೆ.

ಮೇಲಿನ ಘಟನೆಯನ್ನು "ಚೋಮನ ದುಡಿ" ಕಾದಂಬರಿಯಲ್ಲಿ ಚೋಮನ ಮಗ ನೀರಿಗೆ ಬಿದ್ದು ಸಾಯುವ ಘಟನೆಯೊಂದಿಗೆ ನೋಡಬಹುದು. ಚೋಮನ ಮಗನ ನೆರವಿಗೆ ಯಾರೊಬ್ಬರೂ ಬರುವುದಿಲ್ಲ, ಎಲ್ಲರೂ ನಿಂತು ನೋಡುವವರಾಗಿರುತ್ತಾರೆ. "ಕುಸುಮಬಾಲೆ' ಕೃತಿಯಲ್ಲಿ ಎಳೆನೀರು

ಕುಡಿದವವನನ್ನು ಹಿಡಿದು ಥಳಿಸುವಾಗಲೂ ಯಾರೊಬ್ಬರೂ ಬಂದು ಬಿಡಿಸುವುದಿಲ್ಲ. ಅದೇ ಒಂದು ವೇಳೆ ಮೇಲ್ವರ್ಗದವನನ್ನು ಕಟ್ಟೆ ಹೀಗೆ ಥಳಿಸಿದ್ದರೆ, ನೋಡುವವರು ಪ್ರತಿ ಕ್ರಿಯಿಸುತ್ತಿರಲಿಲ್ಲವೆ? ಎಂಬ ಪ್ರಶ್ನೆಯನ್ನು ಎತ್ತಿದಾಗ ಉತ್ತರವನ್ನು ಕಂಡುಕೊಳ್ಳಲು ಸಾಧ್ಯವಿದೆ. ರೋಗಿಯ ಸ್ಥಿತಿ ಚಿಂತಾಜನಕವಾಗಿದ್ದು, ನಡೆಯಲಾಗದಂಥ ಪರಿಸ್ಥಿತಿಯಲ್ಲೂ 'ಇವನನ್ನು ಉಳಿಸುತ್ತೇನೆ' ಎಂಬ ದೃಢ ವಿಶ್ವಾಸದಿಂದ ಔಷಧಿ ಕೊಡುವ ವೈದ್ಯರಿದ್ದಾರೆ. 'ಅಜ್ಜನಿಗೆ ಮಧ್ಯಾಹ್ನ 12 ಗಂಟೆಗೆ ಹಾವು ಕಚ್ಚಿದೆ, ಹೊಲದಲ್ಲಿ ಕೆಲಸ ಮಾಡುವ ಆತನಿಗೆ ಹಾವು ಕಚ್ಚಿರುವುದು ಗಮನಕ್ಕೆ ಬಂದಿಲ್ಲ. ಆಮೇಲೆ ಎರಡು ತಾಸಿನ ನಂತರ ನಾಲಿಗೆ ದಪ್ಪವಾಗಿ ದೃಷ್ಟಿ ಮಸುಕಾಗಿದೆ. ತಕ್ಷಣ ಗಾಡಿಕಟ್ಟಿಗೊಂಡು ಬಂದ್ರು. ಅಜ್ಜನ ಕೈಲಿ ಗಾಡಿಯಿಂದ ಇಳಿಯಲು ಆಗಲಿಲ್ಲ ಅಷ್ಟು ಸುಸ್ತಾಗಿತ್ತು. ಆಗ ಗಿಡ ಕುಡಿಸಿದ, ಹೊಟ್ಟೆಗೆ ಹೋಯಿತು, ಆದರೆ ಅಜ್ಜ ಉಳಿಯಲಿಲ್ಲ. ಇದು ಫೇಲಾಗಬಾರದಿತ್ತು. ಆದ್ರೂ ಆಗಿಬಿಟ್ಟಿತು.' (124) ಎಂದು ಮರುಗುವ ವೈದ್ಯರು ಹೆಚ್ಚಾಗಿರುವಾಗ ಮರುಗದೇ ಕಲ್ಲಾಗಿಬಿಡುವ ಸಂಕುಚಿತ ಮನಸ್ಸನ್ನು ಅರಿಯಬೇಕಾಗಿದೆ. ವಿದ್ಯೆಯನ್ನು ಕಲಿಸಿದ ಗುರು ಈ ಬಗೆಯ ಭೇದಕ್ಕೆ ಆಸ್ಪದ ಕೊಡಬಾರದೆಂಬ ಎಚ್ಚರಿಕೆಯನ್ನು ನೀಡಿರುತ್ತಾನೆ. ಆದರೆ ಕುಲಸಂಸ್ಕಾರ ಅದನ್ನು ಮರೆಯುವಂತೆ ಮಾಡಿಬಿಡುತ್ತದೆ. ವೈದ್ಯವನ್ನು ಕಲಿಯಲು ವರ್ಗಗಳ ನಡುವೆ ಭೇದವಿರುವುದಿಲ್ಲ. ಗುರುವು ಯಾವುದೇ ಜಾತಿಯವನಾಗಿದ್ದರೂ ಅವನ ಸೇವೆಯನ್ನು ಮಾಡುವುದು; ಪೂಜ್ಯ ಭಾವನೆಯಿಂದ ಕಾಣುವುದು ವೈದ್ಯಸಂಸ್ಕೃತಿಯಲ್ಲಿನ ವಿಶೇಷವೂ ವಿಶ್ವಾತ್ಮಕವಾದ ಸಮಾನತೆಯ ಸಂದೇಶವೂ ಆಗಿದೆ. 'ಮಾದಿಗರ ಗುರು, ಆತನ ಸೇವೆಯನ್ನು ಮಾಡಿ ವಿದ್ಯೆಕಲಿತೆ. ಗುರುವಿನ ಹೇಲು, ಉಚ್ಚೆ ಬಾಚಿದೆ. ವಿದ್ಯೆ ಕಲಿಯಲು ಗುರುವಿನ ಕರುಣೆ ಬಹಳ ಮುಖ್ಯ'(85). ಅಂದರೆ ಗುರುವು ಜ್ಞಾನದ ಹೊಳೆ, ಆತನ ಅನುಗ್ರಹ ಮುಖ್ಯವಾಗುತ್ತದೆ. ಉಳಿದುದೆಲ್ಲವೂ ಗೌಣವಾಗುತ್ತದೆ. ಹೀಗಿದ್ದರೂ ವರ್ಗ ಭೇದವನ್ನು ಮನಸ್ಸಲ್ಲಿ ತುಂಬಿಟ್ಟುಕೊಂಡ ವೈದ್ಯರ ಬಗ್ಗೆ ಖೇದವೆನಿಸುತ್ತದೆ.

ವೈದ್ಯ ವಿಚಾರದಲ್ಲಿ ಮತೀಯ ಭಾವನೆ ಗೌಣವೆಂದು ಹೊರನೋಟಕ್ಕೆ ಕಂಡು ಬಂದರೂ ಅದು ಯಾವುದಾದರೂ ಒಂದು ರೂಪದಲ್ಲಿ ವ್ಯಕ್ತವಾಗುತ್ತದೆ. ವೈದ್ಯನು ಬಡವನೂ ಹಾಗೂ ಕೆಳವರ್ಗದವನೂ ಆಗಿದ್ದಲ್ಲಿ ಹೆಚ್ಚು ಶೋಷಣೆಗೆ ಒಳಗಾಗುತ್ತಾನೆ. ಭಾರಿಶ್ರಮದಿಂದ ಕಾಡು ತಿರುಗಿ ಔಷಧಿಯನ್ನು ತಯಾರಿಸಿ ರೋಗಿಗಳು ಇರುವಲ್ಲಿಗೇ ಹೋಗಿ ವೈದ್ಯೋಪಚಾರವನ್ನು ಮಾಡಬೇಕಾಗುತ್ತದೆ. ಕೆಳವರ್ಗದ ವೈದ್ಯನ ಸ್ಥಿತಿಯೇ ಹೀಗಿರುವಾಗ ರೋಗಿಯ ಪರಿಸ್ಥಿತಿ ಹೇಗಿರಬಹುದು ಎಂಬುದು ಯೋಚಿಸಬೇಕಾದ ವಿಚಾರ.

3.2 ವೈದ್ಯ ಮತ್ತು ಕುಟುಂಬ

ಪ್ರಾಚೀನರಿಂದ ಬೆಳೆದು ಬಂದ ಜನಪದ ವೈದ್ಯಜ್ಞಾನವನ್ನು ಬೆಳೆಸಿ ಪೋಷಿಸುವಲ್ಲಿ ಕುಟುಂಬಗಳ ಜವಾಬ್ದಾರಿ ಹೆಚ್ಚಿನದಾಗಿರುತ್ತದೆ. ಅಂದರೆ, ವೈದ್ಯನ ಕಾರ್ಯವ್ಯಾಪ್ತಿ ಮತ್ತು ಕಾರ್ಯಪ್ರಗತಿಗೆ ಕುಟುಂಬದ ಸಹಕಾರ ಮತ್ತು ಬೆಂಬಲ ಬಹಳ ಅಗತ್ಯವಾಗುತ್ತದೆ. ಒಂದು ವೇಳೆ ವೈದ್ಯನು ಅಲೆಮಾರಿಯಾಗಿದ್ದು, ಒಂಟಿಜೀವಿ ಆಗಿದ್ದರೆ, ಆತನಿಗೆ ಊಟವಸತಿಯನ್ನು ಒದಗಿಸುವ ಜನ ಸಮೂಹವನ್ನೂ ಸಹ ಕುಟುಂಬದಂತೆ ಭಾವಿಸಬಹುದು. ವೈದ್ಯ ಏಕಾಂಗಿಯಾಗಿದ್ದರೂ ಆತನ ವೈದ್ಯಸೇವೆ ಮಾತ್ರ ಸಮಾಜ ಮುಖಿಯಾದುದಾಗಿರುತ್ತದೆ. ಇಂಥ ವೈದ್ಯನಿಗೆ ವಸುಧೆ ಎಲ್ಲಾ ಒಂದೇ ಕುಟುಂಬ ಎಂಬ ಪರಿಕಲ್ಪನೆ ಇರುತ್ತದೆ. ವೈದ್ಯನ ಈ ಲೋಕ ದೃಷ್ಟಿಯನ್ನು ಅರಿಯಲು ಸರ್ವಜ್ಞನ ವಚನವೊಂದನ್ನು ಸ್ಮರಿಸಬಹುದು.

'ಊರೆಲ್ಲ ನೆಂಟರು ಕೇರಿಯಲ್ಲವು ಬಳಗ
ಧಾರುಣಿಯು ಎಲ್ಲ ಕುಲದೈವವಾಗಿನ್ನು
ಯಾರನ್ನು ಬಿಡಲೊ ಸರ್ವಜ್ಞ'[4]

ಎಂಬಂತಹ ವಿಶಾಲ ಹೃದಯ ಜನಪದ ವೈದ್ಯನದು. ಆತನಿಗೆ ತನ್ನದು ಪರರದು ಎಂಬ ಭೇದ ನೀತಿ ಇರುವುದಿಲ್ಲ. ಎಲ್ಲಿಯಾದರೂ ಸರಿ ಆರೋಗ್ಯದ ಸಮಸ್ಯೆಗೆ ಕೂಡಲೆ ಸ್ಪಂದಿಸುವುದು ವೈದ್ಯನ ಸಹಜವಾದ ಗುಣವಾಗಿದೆ.

ವೈದ್ಯನು ತನ್ನ ವಿದ್ಯೆಯ ವಾರಸುದಾರರು ತಮ್ಮ ಕುಟುಂಬದವರೇ ಆಗಬೇಕೆಂದು ಬಯಸುವುದು ಸ್ವಾಭಾವಿಕವಾದುದು. ಹಾಗೆಂದು ಅಪಾತ್ರರಿಗೆ ವಿದ್ಯೆಯನ್ನು ಕಲಿಸಲು ಮುಂದಾಗುವುದಿಲ್ಲ. ಊರಿನ ಜನರೂ ಸಹ ಈ ನಿಟ್ಟಿನಲ್ಲಿಯೇ ಯೋಚಿಸುತ್ತಾರೆ. ಉದಾಹರಣೆಗೆ ಹೊಸದುರ್ಗ ತಾಲ್ಲೂಕಿನ ಮಲ್ಲೇನಹಳ್ಳಿ ಎಂಬುದು ಒಂದು ಪುಟ್ಟಗ್ರಾಮ. ಅಲ್ಲಿ ಪಾರ್ವತಮ್ಮ ಎಂಬ ವೈದ್ಯ ಹಾವಿನ ವಿಷಕ್ಕೆ ಔಷಧಿ ಕೊಡುವುದರಲ್ಲಿ ಪ್ರಸಿದ್ಧಿ, ದಿನಕಳೆದಂತೆ ಪಾರ್ವತಮ್ಮನಿಗೆ ವಯಸ್ಸಾಯಿತು. ಆಗ ಕಣ್ಣುಗಳು ಮಂಜಾಗಿ ಕಿವಿಗಳು ಮಂದವಾದವು. ಈಕೆಯ ಇಬ್ಬರು ಮಕ್ಕಳೂ ಮದ್ಯವ್ಯಸನಿಗಳಾಗಿದ್ದರು. ಇದನ್ನು ಗಮನಿಸಿದ ಊರವರು

ಪಾರ್ವತಮ್ಮನ ವಿದ್ಯೆಯನ್ನು ಯಾರು ಕಲಿತು ಮುಂದುವರಿಸಬೇಕು ಎಂದು ಸಮಾಲೋಚನೆ ಮಾಡಿದರು. ಆಗ ಪಾರ್ವತಮ್ಮನ ಅಳಿಯನು ಪ್ರಮಾಣಿಕ ಎಂಬ ವಿಶ್ವಾಸ ಜನರಲ್ಲಿ ಮೂಡಿದ್ದರಿಂದ ಆ ವ್ಯಕ್ತಿಯನ್ನೇ ವಿದ್ಯೆ ಕಲಿಯಲು ಪ್ರೋತ್ಸಾಹಿಸುತ್ತಾರೆ. ಆ ವ್ಯಕ್ತಿ ವಿದ್ಯೆಯನ್ನು ಕಲಿತ ನಂತರ ಪಾರ್ವತಮ್ಮನ ಪರಂಪರೆಯನ್ನು ಮುಂದುವರಿಸಿದನು. ಅಂದರೆ ವೈದ್ಯಜ್ಞಾನವೆಂಬುದು ಯೋಗ್ಯ ವ್ಯಕ್ತಿಗೆ ಮಾತ್ರ ಸೇರಬೇಕು ಎನ್ನುವುದು ಪ್ರತಿಯೊಬ್ಬರ ಅಭಿಲಾಷೆಯು ಹೌದು, ಆದರೆ ಎಲ್ಲವೂ ಹೀಗೆ ಆಗುವುದಿಲ್ಲ. ಏಕೆಂದರೆ ವಿದ್ಯೆಯನ್ನು ಕಲಿತ ನಂತರ ಕೆಲವರ ನಡೆವಳಿಕೆಯಲ್ಲಿ ಬದಲಾವಣೆಗಳು ಕಂಡುಬರುತ್ತವೆ. ಅಂದರೆ ವಾಮಮಾರ್ಗವನ್ನೂ ಹಿಡಿಯಬಹುದಾದ ಸಾಧ್ಯತೆ ಇದೆ, ಇದರಿಂದ ವೈದ್ಯನಿಗೂ ಮತ್ತು ಅವನ ಕುಟುಂಬಕ್ಕೂ ಅಷ್ಟುಮಾತ್ರವಲ್ಲ ಇಡೀ ಊರಿಗೇ ಕಳಂಕ ಬರುವ ಸಾಧ್ಯತೆಯೂ ಇರುತ್ತದೆ. ಇಂಥ ಕುಟುಂಬದ ವೈದ್ಯನು ಕಾಲವಾದ ನಂತರ ಆತನ ವೈದ್ಯದ ಗಂಟನ್ನು ಬೆಂಕಿಯಲ್ಲಿ ಸುಡುತ್ತಾರೆ. ಇಲ್ಲವೇ ನದಿಗೆ ಎಸೆಯುತ್ತಾರೆ. ಇದರಿಂದ ತಮ್ಮ ಕುಟುಂಬಕ್ಕೆ ಅಂಟಿದ್ದ ಅನಿಷ್ಟ ತೊಲಗಿತೆಂದು ಸಮಾಧಾನ ಹೊಂದುತ್ತಾರೆ.

ವೈದ್ಯ ವಿದ್ಯೆ ಒಳ್ಳೆಯ ವ್ಯಕ್ತಿಯಲ್ಲಿ ಸೇರಿದ ಬಳಿಕ ಕುಟುಂಬದ ಹಾಗೂ ಊರಿನ ಇತರರ ಜವಾಬ್ದಾರಿ ಮುಗಿಯಿತೆಂದು ಭಾವಿಸುವುದಿಲ್ಲ. ಅವರುಗಳು ವೈದ್ಯನಿಗೆ ಒಂದಲ್ಲ ಒಂದು ವಿಧದಲ್ಲಿ ನೆರವಾಗುತ್ತಿರುತ್ತಾರೆ. ಹೇಗೆಂದರೆ ಹೊಳಲ್ಕೆರೆ ತಾಲ್ಲೂಕಿನ ಚಿಕ್ಕಜಾಜೂರಿನಲ್ಲಿ ರಂಗಪ್ಪ ಎನ್ನುವವರು ಅನುಭವಿ ವಿಷವೈದ್ಯರಾಗಿದ್ದರು. ಇವರು ಕಾಲವಾದ ನಂತರ ಅವರ ಹೆಂಡತಿ ಮತ್ತು ಮಗ; ಇವರಿಬ್ಬರೂ ಆಸಕ್ತಿಯಿಂದ ರಂಗಪ್ಪನ ವೈದ್ಯಸೇವೆಯನ್ನು ಮುಂದುವರಿಸಿದರು. ಕೆಲವೊಮ್ಮೆ ಇವರಿಬ್ಬರೂ ಮನೆಯಲ್ಲಿ ಇಲ್ಲದಿರುವ ಸಂದರ್ಭದಲ್ಲಿ ರೋಗಿಗಳು ಔಷಧಿಗಾಗಿ ಬಂದರೆ, ಆ ಕುಟುಂಬದ ಇತರ ಸದಸ್ಯರು ಔಷಧಿಯನ್ನು ಅರೆದು ಬಂದ ರೋಗಿಗಳಿಗೆ ಕೊಡುತ್ತಾರೆ. ಇನ್ನೂ ಕೆಲವು ವೇಳೆಯಲ್ಲಿ ಇಡೀ ಕುಟುಂಬವೆ ಬಂಧುಗಳ ಊರಿಗೋ, ಹೊಲದ ಕೆಲಸಕ್ಕೋ ಹೊರಟುಹೋಗಿದ್ದರೆ, ಇಂಥ ವೇಳೆಯಲ್ಲಿ ವೈದ್ಯನ ಕುಟುಂಬವು ಅರೆದ ಗುಳಿಗೆಗಳನ್ನು ಕಲಬತ್ತಿನಲ್ಲಿ ಇಟ್ಟು ಅವುಗಳ ಮೇಲೆ ಒದ್ದೆ ಬಟ್ಟೆಯನ್ನು ಮುಚ್ಚಿ, ತಮ್ಮ ಮನೆಯ ಬೀಗವನ್ನು ಪಕ್ಕದ ಮನೆಯವರಿಗೆ ಕೊಟ್ಟು ಹೀಗೆ ಹೇಳುತ್ತಾರೆ. 'ಯಾರಾದರೂ ರೋಗಿಗಳು ಬಂದರೆ ಗುಳಿಗೆಗಳನ್ನು ಕೊಡಿ' ಎಂದು ಹೇಳಿಹೋಗುತ್ತಾರೆ. ಹಾವಿನಿಂದ ಕಚ್ಚಿಸಿಕೊಂಡವರು ಯಾವುದೇ ಸಮಯದಲ್ಲಿ ಬಂದರೂ ಔಷಧಿ ಇಲ್ಲ ಎನ್ನುವ ಪ್ರಸಂಗ ಬರುವುದಿಲ್ಲ. ಅಲ್ಲದೆ ಅಕ್ಕಪಕ್ಕದ

ಕುಟುಂಬದವರಿಗೂ ಔಷಧಿಯನ್ನು ಕೊಡುವ ಕ್ರಮ ಸೇವಿಸುವ ವಿಧಾನ ಮತ್ತು ಪಥ್ಯದ ವಿಚಾರವನ್ನು ತಿಳಿಸಲಾಗಿರುತ್ತದೆ. ಇಂಥ ಕುಟುಂಬದ ವೈದ್ಯಸೇವೆಯನ್ನು ಮತ್ತು ಅವರಿಗೆ ನೆರವಾಗುವ ಅಕ್ಕಪಕ್ಕದವರನ್ನು ಕಂಡಾಗ ಜನಪದ ವೈದ್ಯ ವ್ಯವಸ್ಥೆಯು ಒಬ್ಬ ವ್ಯಕ್ತಿಗೆ ಕೇಂದ್ರೀಕೃತವಾಗಿರದೆ ಇಡೀ ಕುಟುಂಬ ಹಾಗೂ ಸಮುದಾಯವೇ ಅದರಲ್ಲಿ ಪಾಲ್ಗೊಂಡಿರುವುದು ಕಂಡುಬರುತ್ತದೆ. ಹಾವಿಗೆ ಕೊಡುವ ಔಷಧಿಯ ವಿವರಣೆಯನ್ನು ಅಧ್ಯಾಯ ಐದರಲ್ಲಿ ಕೊಡಲಾಗಿದೆ.

ವೈದ್ಯೋಪಚಾರದಲ್ಲಿ ಕುಟುಂಬ ಮತ್ತು ಸಮುದಾಯವೇ ಭಾಗವಹಿಸಿರುವುದಕ್ಕೆ ಮೇಲಿನ ಘಟನೆ ಉತ್ತಮ ಉದಾಹರಣೆಯಾಗಿದೆ. ಕೆಲವು ವೈದ್ಯರು ಇದಕ್ಕಿಂತಲೂ ಬೇರೆಯಾದ ರೀತಿಯ ವೈದ್ಯೋಪಚಾರವನ್ನು ಮಾಡುತ್ತಾರೆ. ಅಂದರೆ ವೈದ್ಯಸೇವೆ ಕೇವಲ ಕುಟುಂಬದವರಿಗೆ ಮಾತ್ರ ಸೀಮಿತಗೊಳಿಸಿಕೊಂಡಿರುವವರೂ ಇದ್ದಾರೆ. ಇದಕ್ಕೆ ಕಾರಣಗಳು ವೈದ್ಯನಿಗಿರುವ ಸಂಕೋಚ, ನಾಗರಿಕತೆಯ ಪ್ರಭಾವ, ಜನಪದ ವೈದ್ಯದ ಬಗ್ಗೆ ಜನರಲ್ಲಿ ಇರುವ ನಿರಾಸಕ್ತಿ, ಬೇರೆಯವರಿಗೆ ಕೊಟ್ಟಾಗ ಏನಾದರೂ ಸಮಸ್ಯೆ ಎದುರಾದರೆ ಎಂಬ ಅಂಜಿಕೆ ಇತ್ಯಾದಿ. ಉದಾಹರಣೆಗೆ ದೇವಲನಾಯ್ಕರು(78)ವಾಯಿದೆ ಜ್ವರದ ಭಾದೆಯಿಂದ ಚಿತ್ರದುರ್ಗದ ಆಸ್ಪತ್ರೆಗೆ ದಾಖಲಾಗಿದ್ದರು. ವಾರಕಳೆದರೂ ಜ್ವರ ಗುಣವಾಗಿರಲಿಲ್ಲ. ಈ ಸಂದರ್ಭದಲ್ಲಿ ಜನಪದ ವೈದ್ಯರಾಗಿದ್ದ ದೇವಲನಾಯ್ಕರ ತಂದೆ, ಏಳು ಬಿಳಿ ಎಕ್ಕೆ ಕುಡಿ, ಮೆಣಸು, ಲವಂಗ, ಬೆಳ್ಳುಳ್ಳಿ ಮತ್ತು ಬೆಲ್ಲವನ್ನು ಸೇರಿಸಿ ಅರೆದು ಗಜ್ಜುಗದ ಗಾತ್ರ ಮೂರು ಗುಳಿಗೆ ಮಾಡಿ ಬೆಳಿಗ್ಗೆ ಒಂದು ಸಂಜೆ ಒಂದು ಪುನಃ ಬೆಳಿಗ್ಗೆ ಒಂದರಂತೆ ಮೂರು ಗುಳಿಗೆಗಳನ್ನು ನುಂಗಿಸಿದರು. ನಂತರ ಎರಡು ದಿನಗಳಲ್ಲಿ ಜ್ವರ ಹೊರಟು ಹೋದವು. ಆಮೇಲೆ ದೇವಲ ನಾಯ್ಕರಿಗೆ ತಿಳಿಯಿತು ತಮ್ಮ ತಂದೆಯವರು ಎಕ್ಕೆಯ ಕುಡಿಯಿಂದ ಮಾಡಿದ ಮಾತ್ರೆಗಳನ್ನು ಕೊಟ್ಟಿದ್ದಾರೆ ಎಂಬುದು.

ವಿದ್ಯಾವಂತರೂ, ಪ್ರಾಥಮಿಕ ಶಾಲೆಯ ಮುಖ್ಯಗುರುಗಳೂ ಆಗಿರುವ ನಾಯ್ಕರು ಎಕ್ಕೆಯ ಕುಡಿಯನ್ನು ದೇಹದ ಒಳಗೆ ಸೇವಿಸುವುದು ಅಪಾಯ ಎಂಬ ವೈಜ್ಞಾನಿಕ ತಿಳಿವಳಿಕೆಯನ್ನು ಉಳ್ಳವರಾಗಿದ್ದು, ಅದನ್ನು ಸೇವಿಸುವುದು ಹೇಗೆ ಎಂಬ ಆತಂಕದಿಂದ ಅವರ ತಂದೆಯವರಿಗೆ ಅನೇಕ ಬಾರಿ ಆ ಔಷಧಿ ಕೊಡುವುದನ್ನು ನಿಲ್ಲಿಸುವಂತೆ ಹೇಳುತ್ತಿದ್ದರಂತೆ. ಆದರೆ ಸ್ವತಃ ನಾಯ್ಕರೇ ಆ ಔಷಧದಿಂದ ಗುಣಮುಖರಾದ ಮೇಲೆ, ತಮ್ಮ ತಂದೆಯ ಔಷಧವನ್ನು ಬಳಸಲು ಪ್ರಾರಂಭಿಸುತ್ತಾರೆ. ಆದರೆ ಈ ಔಷಧಿಯನ್ನು

ನಾಯ್ಕರು ತಮ್ಮ ಕುಟುಂಬದವರಿಗೆ ಮಾತ್ರ ಕೊಡುತ್ತಿದ್ದಾರೆ. ಹೊರಗಿನವರಿಗೆ ಕೊಡುವ ಯೋಚನೆಯನ್ನು ಅವರು ಮಾಡಿರುವುದಿಲ್ಲ.

ಮೇಲಿನ ಘಟನೆಯು ಕುಟುಂಬದಲ್ಲಿಯೇ ವೈದ್ಯಸೇವೆ ಮಾಡುವುದನ್ನು ಹೇಳುತ್ತದೆ. ಇನ್ನೂ ಕೆಲವು ವೈದ್ಯರು ತಾವು ತಯಾರಿಸುವ ಔಷಧಿಯನ್ನು ಮೊದಲು ಕುಟುಂಬದವರಿಗೆ ಸೇವಿಸಲು ಕೊಡುತ್ತಾರೆ. ಅದರಿಂದ ರೋಗಿ ಗುಣಮುಖನಾದರೆ ಮಾತ್ರ ಹೊರಗಿನವರಿಗೆ ಕೊಡುತ್ತಾರೆ. ಈ ಕುರಿತು ವೈದ್ಯರೊಬ್ಬರು 'ನಮ್ಮ ಕುಟುಂಬದವರಿಗೆ ಮೊದಲು ಔಷಧಿಯನ್ನು ಕೊಟ್ಟು ಅದರಿಂದ ರೋಗ ವಾಸಿಯಾದರೆ ಹೊರಗಿನವರಿಗೆ ಕೊಡುತ್ತೇನೆ' (127) ಎನ್ನುವ ವೈದ್ಯರ ಮಾತನ್ನು ನೋಡಿದಾಗ, 'ಮನೆಯಲ್ಲಿ ಗೆದ್ದು ಮಂದಿಯಲ್ಲಿ ಗೆಲ್ಲು' ಎಂಬ ಗಾದೆ ನೆನಪಾಗುತ್ತದೆ. ಇಲ್ಲಿ ವೈದ್ಯನಾದವನಿಗೆ ತನ್ನ ಕುಟುಂಬ ಬೇರೆಯಲ್ಲ, ಹೊರಗಿನ ಸಮಾಜ ಬೇರೆಯಲ್ಲ ಎರಡೂ ಒಂದೇ ಎಂಬ ಭಾವನೆ ಪ್ರಮುಖವಾಗಿರುವುದನ್ನು ಕಾಣುತ್ತೇವೆ.

3.3 ವೃತ್ತಿ ಧರ್ಮ

"ಆಯುರ್ವೇದ ಗ್ರಂಥ ಚರಕ ಸಂಹಿತೆಯಲ್ಲಿ ಶ್ಲೋಕ ಒಂದಿದೆ. 'ನಾತ್ಮಾರ್ಥಂ ನಾಪಿ ಕಾಮಾರ್ಥಂ ಅಥ ಭೂತ ದಯಾಂ ಪ್ರತಿ' ಎಂದರೆ ಚಿಕಿತ್ಸೆಯ ಮೂಲ ಉದ್ದೇಶ ಯಾವುದೇ ಆಸೆ, ಆಮಿಷಕ್ಕಲ್ಲ. ಪರಹಿತ ಚಿಂತನೆಯೇ ಪರಮಾರ್ಥ. ಭೂತ ದಯೆ ಇಲ್ಲಿ ಪ್ರಧಾನ. ಅಕ್ಷರಶ: ಇದನ್ನೇ ಹೋಲುವ ತತ್ವಾದರ್ಶ ಜನಪದ ವೈದ್ಯರಲ್ಲಿ ನಿರೀಕ್ಷಿಸಿದರೆ ಸೋಜಿಗವಲ್ಲ. ಅವರ ಅನೇಕ ನುಡಿ ಹಾಗೂ ನಡೆ ಚಾರಿತ್ರ್ಯಗಳೆಲ್ಲವೂ ಅದಕ್ಕೆ ರುಜುವಾತು."[5] ಎನ್ನುವಲ್ಲಿ ಪರಹಿತವೇ ಮುಖ್ಯವಾಗಿದೆ. ಇದು ಜನಪದ ವೈದ್ಯ ಸಂಸ್ಕೃತಿಯ ಪ್ರಧಾನ ಆಶಯವೂ ಹೌದು. ಇದರಿಂದಾಗಿ ಅಲ್ಲಿ ವೃತ್ತಿ ಪಾವಿತ್ರತೆಯನ್ನು ಮತ್ತು ಅದನ್ನು ಅನುಸರಿಸುವ ನಿಷ್ಠೆ ಸಹಜವಾದುದಾಗಿದೆ. ಮನುಷ್ಯ ಮತ್ತು ಜಾನುವಾರುಗಳ ಆರೋಗ್ಯ ಕಲ್ಯಾಣಕ್ಕಾಗಿ ವೈದ್ಯವನ್ನು ಕಲಿತು ಅದರಲ್ಲಿ ತೊಡಗಿಕೊಂಡವರು ತಮಗೆ ವಿದ್ಯೆ ಕಲಿಸಿದ ಗುರುವನ್ನು ಪ್ರಾರ್ಥಿಸುವುದು; ವೃತ್ತಿಧರ್ಮದ ಹಿರಿಮೆಯನ್ನು ಕಾಪಾಡುವುದು; ರೋಗ ನಿವಾರಣೆಯೇ ತಮ್ಮ ಧ್ಯೇಯವೆಂದು ನಂಬಿರುತ್ತಾರೆ. ಯಾವುದೇ ವ್ಯಕ್ತಿ ಮತ್ತು ಜೀವಿಯ ಅನಾರೋಗ್ಯ ಸಮಸ್ಯೆಯನ್ನು ಕಂಡಾಗ "ಎದೆಯ ದನಿ ಧರ್ಮನಿಧಿ! ಕರ್ತವ್ಯವದುವೆ ವಿಧಿ!"[6] ಎಂಬ ಕವಿವಾಣಿಯಂತೆ ಸ್ಪಂದಿಸುವುದು ಜನಪದ ವೈದ್ಯರ ಸಹಜವಾದ ಗುಣವಾಗಿದೆ.

ಯಾರು ದೇವರಿರುವ ಹಾಗೂ ನಿಯಮಗಳಿರುವ ಧರ್ಮದ ಎಲ್ಲೆಗಳನ್ನು ಮೀರಬಲ್ಲವರೋ ಅಂಥವರು ಮಾನವ ಧರ್ಮವನ್ನು ಪ್ರೀತಿಸುವವರೂ; ವಿಶ್ವಧರ್ಮವನ್ನು ಸಾಧಿಸುವವರೂ ಆಗಿರುತ್ತಾರೆ. ಹೀಗೆ ವಿಶ್ವಪ್ರೀತಿಯ ನೆಲೆಯಿಂದ ಹೊರಹೊಮ್ಮಿದ ಜನಪದ ವೈದ್ಯ ಸ್ವಾರ್ಥ ಮೂಲದಿಂದ ಬಂದಿರುವಂತಹುದಲ್ಲ. ಅದು ಎಲ್ಲಾ ಜೀವಿಗಳ ಆರೋಗ್ಯ ಸುಧಾರಣೆಗಾಗಿ ಮೂಡಿಬಂದಿರುವ ಪರಿಕಲ್ಪನೆಯಾಗಿದೆ.

ಸಾತ್ವಿಕ ಗುಣಗಳಿಂದ ಕೂಡಿರುವುದೇ ವೃತ್ತಿಧರ್ಮ. ಉಚಿತವಲ್ಲದ್ದನ್ನು ಮಾಡದಿರುವುದು, ಸದಾ ರೋಗಿಯ ಯೋಗಕ್ಷೇಮವನ್ನೇ ಬಯಸುವುದು, ಒಂದೇ ಮಾತಿನಲ್ಲಿ ಹೇಳುವುದಾದರೆ ಪರರ ಹಿತಚಿಂತನೆಯಲ್ಲಿಯೇ ಸಾರ್ಥಕವನ್ನು ಕಾಣುವಂತಹುದು. ಜನಪದ ವೈದ್ಯದ ಈ ದೃಷ್ಟಿಯನ್ನೇ

ವೃತ್ತಿಧರ್ಮ ಎಂದು ಹೇಳಬಹುದು. 'ಜನರ ಎಷ್ಟೋ ಕಾಯಿಲೆಗಳನ್ನು ಗುಣಮಾಡಿದ್ದೇನೆ, ಆದರೆ ಯಾರಿಂದಲೂ ಹಣ ತಗೆದುಕೊಂಡಿಲ್ಲ. ನನ್ನಿಂದಲೇ ಖರ್ಚಾದರೂ ಚಿಂತೆಯಿಲ್ಲ ಔಷಧಿ ಮಾಡಿ ಕೊಡುತ್ತೇನೆ'(127) ಎನ್ನುವ ವೈದ್ಯರ ಮಾತಿನಲ್ಲಿ ಪೂರ್ವದಿಂದ ಬಂದಿರುವ ವೃತ್ತಿಧರ್ಮದ ಗರಿಮೆಯನ್ನು ಕಾಣಬಹುದು. ಇನ್ನೂ ಕೆಲವರು 'ಇಂದಿನವರು (ವೈದ್ಯರ ಮಕ್ಕಳು ಹಾಗೂ ಇತರರು) ಪ್ರತಿಫಲವಿಲ್ಲದ ಈ ವೈದ್ಯವೃತ್ತಿ ಬೇಡ ಎನ್ನುತ್ತಾರೆ. ಜನರಿಗೂ ಸಹ ನಾಟಿ ವೈದ್ಯರೆಂದರೆ ಏನೋ ಅನಾದಾರ, ಟೀ ಕುಡಿಸಿದರೆ, ಬಸ್‌ಚಾರ್ಜ್ ಕೊಟ್ಟರೆ ಬಂದು ಔಷಧಿ ಕೊಡುತ್ತಾರೆ' (29) ಎನ್ನುವಲ್ಲಿ ಜನಪದ ವೈದ್ಯಕ್ಕೆ ಇಂದಿನವರು ತೋರುವ ನಿರ್ಲಕ್ಷ್ಯ, ಬದಲಾದ ಸಾಮಾಜಿಕ ಪರಿಸ್ಥಿತಿಯನ್ನು ಹೇಳುತ್ತದೆ. ಇಂಥ ಸಂದರ್ಭದಲ್ಲಿ ಜನಪದ ವೈದ್ಯರು ವೃತ್ತಿಧರ್ಮದ ಪೂರ್ವ ಸಂಸ್ಕಾರವನ್ನು ಕೈಬಿಡಲೂ ಆಗದೆ; ಆಧುನಿಕ ಸನ್ನಿವೇಶಕ್ಕೆ ಅದನ್ನು ಹೊಂದಿಸಿಕೊಳ್ಳಲೂ ಆಗದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಗೆಯ ವೈರುದ್ಯಗಳನ್ನು ಅರಿಯುವುದಕ್ಕಾಗಿ ಗುರುವಿನ ಅಜ್ಞೆ, ಪ್ರತಿಫಲಬಯಸದ ಕಾಯಕ, ಶ್ರಮ ಮತ್ತು ಔಷಧವೆಲ್ಲವೂ ವೈದ್ಯರದೇ, ರೋಗಿಯ ಉಸ್ತುವಾರಿ ಹಾಗೂ ಸಾಮಾಜಿಕ ಎಚ್ಚರ–ಈ ರೀತಿಯ ವಿಭಾಗ ಕ್ರಮಗಳನ್ನು ಮಾಡಿಕೊಂಡು ಇಲ್ಲಿ ವಿಶ್ಲೇಷಿಸಲಾಗಿದೆ.

ಅ) ಗುರುವಿನ ಆಜ್ಞೆ

ವೈದ್ಯವಿದ್ಯೆಯನ್ನು ಕಲಿಸಿದ ನಂತರ ಗುರುವು ಶಿಷ್ಯನಿಗೆ ಪಾಲಿಸಲೇಬೇಕಾದ ಕೆಲವು ನಿಯಮಗಳನ್ನು ಹೇಳುತ್ತಿದ್ದ, ಹೀಗೆ ಹೇಳುವುದರ ಹಿಂದಿನ ಉದ್ದೇಶ ವಿದ್ಯೆಯ ದುರುಪಯೋಗವಾಗಬಾರದು, ಅದು ಒಳ್ಳೆಯ ಕಾರ್ಯಕ್ಕಾಗಿಯೇ ಬಳಸಲ್ಪಡಬೇಕು ಎಂಬುದಾಗಿತ್ತು. ಈ ರೀತಿಯ ನಿಯಮಗಳಲ್ಲಿ ವೈದ್ಯಧರ್ಮದ ಸಂದೇಶ ಅಡಗಿರುತ್ತಿತ್ತು. ಶಿಷ್ಯರು ಈ ನಿಯಮಗಳನ್ನು ಗುರುವಿನ ಆಜ್ಞೆ ಎಂದೇ ಭಾವಿಸುತ್ತಾರೆ. ಅಲ್ಲದೇ ಅವುಗಳನ್ನು ಮೀರಲು ಹಿಂಜರಿಯುತ್ತಾರೆ.

ಯಾಕೆಂದರೆ ಭಕ್ತಿ ಇರುವಲ್ಲಿ ಭಯ,ಶ್ರದ್ಧೆ ಮತ್ತು ಪ್ರಮಾಣಿಕತೆಗಳೂ ಇರುತ್ತವೆ. ಇದನ್ನು ಅರಿತ ಗುರುವು ಮೊದಲು ಮನಸ್ಸಿಗೆ ಔಷಧವನ್ನು ಕೊಡುವ ಉಪಾಯವನ್ನು ಮಾಡುತ್ತಿದ್ದರು. ಆ ಬಗೆಯ ಉಪಾಯಗಳಲ್ಲಿ ಈ ಗುರುವಿನ ಆಜ್ಞೆ ಎಂಬುದು ಒಂದಾಗಿದೆ. ಗುರುವಿನ ಆಜ್ಞೆಯಲ್ಲಿ, ಶತ್ರು–ಮಿತ್ರ

ಭೇದವಾಗಲಿ, ಮೇಲು-ಕೀಳುಗಳಾಗಲಿ ಮತ್ತು ಪುರುಷ ಮಹಿಳೆಯರೆಂಬ ಭೇದವಾಗಲಿ ತೋರದೆ; ಆಸೆ-ಆಮಿಷಗಳಿಗೆ ಒಳಗಾಗದೇ ಪ್ರತಿಫಲ ಬಯಸದೆ ಶ್ರದ್ಧೆಯಿಂದ ಎಲ್ಲರಿಗೂ ವೈದ್ಯ ಮಾಡುವುದು ನಿನ್ನ ಕರ್ತವ್ಯ ಎಂಬುದನ್ನು ತಿಳಿಸಿ ಹೇಳುತ್ತಿದ್ದರು.

ಅದರಲ್ಲೂ ಭಾರತೀಯ ಸಂಸ್ಕೃತಿಯಲ್ಲಿ ಗುರುವಿಗೆ ಬಹಳ ಮಹತ್ವದ ಸ್ಥಾನವನ್ನು ಕೊಡಲಾಗಿದೆ. ಸ್ವಾಮಿ ವಿವೇಕಾನಂದರು ತಮ್ಮ ಗುರುವಚನದಿಂದಲೇ ಜನರ ಹಾಗೂ ದೇಶೋದ್ಧಾರದ ಪಣವನ್ನು ತೊಟ್ಟಿದ್ದು ಎಲ್ಲರಿಗೂ ತಿಳಿದ ವಿಚಾರವಾಗಿದೆ. ಹೀಗೆ ಜನಪದ ವೈದ್ಯರು ಗುರುವಚನವನ್ನು ಪಾಲಿಸುವುದರಲ್ಲಿಯೇ ಹೆಚ್ಚು ಸಂತೋಷವನ್ನು ಅನುಭವಿಸುತ್ತಾರೆ. ಈ ಗುರುವಚನವನ್ನು ಕುರಿತು ವೈದ್ಯರ ಅಭಿಪ್ರಾಯಗಳು ಹೀಗಿವೆ. 'ಅಜ್ಜ ಎಲ್ಲಾ ಸೊಪ್ಪು ತಂದು ತೋರಿಸಿ, "ಹೀಗೆ ಮಾಡು" ಎಂದು ಹೇಳುತ್ತಿತ್ತು. "ಯಾರೇ ಕರದ್ರೂ ಹೋಗಿ ಮಾಡು, ನಿರ್ಲಕ್ಷ್ಯ ಮಾಡಬೇಡ. ನಿನಗೂ ಒಳ್ಳೆಯದು ಆಗುತ್ತೆ ಅವರಿಗೂ ಒಳ್ಳೆಯದು ಆಗುತ್ತೆ" ಎಂದು ಹೇಳಿತ್ತು. ಅದರಂತೆ ನಾನು ನಡಕೊಂಡು ಬಂದೆ ನೋಡ್ರಿ' (10) ಇಲ್ಲಿ ಮಾತು ಎಷ್ಟು ಸರಳವಾಗಿದೆ, ಹಿತವಾಗಿದೆ ಮತ್ತು ಹೃದಯಕ್ಕೆ ನಾಟುವಂತಿದೆ. ಈ ಮೃದುವಚನವನ್ನು ಜನಪದ ವೈದ್ಯರು ಆಜ್ಞೆ ಎಂದೇ ಭಾವಿಸಿ ಅದರಂತೆ ನಡೆದುಕೊಳ್ಳುತ್ತಾರೆ. ಇದು ಮನುಷ್ಯರ ನಡುವಿನ ಪ್ರೀತಿ, ವಿಶ್ವಾಸ ಮತ್ತು ಗೌರವಗಳನ್ನು ತೋರಿಸುತ್ತದೆ. ಹಾಗೆಯೇ ಮಾತಿನ ಮೌಲ್ಯವನ್ನು ಎತ್ತಿಹಿಡಿಯುತ್ತದೆ. ಗುರುವಿನ ನಿಷ್ಕಪಟವಾದ ಈ ವಚನ ಶಿಷ್ಯನಾದವನ ಹೃದಯದಲ್ಲಿ ಸತ್ಯ ಪ್ರಮಾಣಿಕತೆಗಳ ಶಾಸನವನ್ನೇ ಕೊರೆದು ಬಿಡುತ್ತದೆ. ಇದನ್ನೇ ಅಲ್ಲಮಪ್ರಭು "ಮಾತೆಂಬುದು ಜ್ಯೋತಿರ್ಲಿಂಗ" ಎಂದು ಕರೆದಿರುವುದು.

'ಇದನ್ನು ಕಲ್ಲಹಳ್ಳಿ ಗೊಲ್ಲರ ಅಜ್ಜನಿಂದ ವಿಶ್ವಾಸದಲ್ಲಿ ಕಲಿತೆ. "ನನ್ನ ಹೆಸರು ಉಳಿಸಬೇಕು ಕೆಟ್ಟ ಹೆಸರು ತರಬಾರದು" ಎಂದು ಅಜ್ಜ ಆಜ್ಞೆ ಮಾಡಿತ್ತು, ನಾನು ಯಾವತ್ತೂ ಅಜ್ಜನ ಮಾತನ್ನು ಮೀರಿಲ್ಲ' (36) ಎನ್ನುವುದು, ಗುರುವಿನ ವಚನವನ್ನು ಶಿಷ್ಯನು ಮೀರಿದರೆ ಕೆಟ್ಟ ಹೆಸರು ಶಿಷ್ಯನಿಗೆ ಮಾತ್ರಬರದೇ ಅವನಿಗೆ ವಿದ್ಯೆ ಕಲಿಸಿದ ಗುರುವಿಗೂ ಬರುತ್ತದೆ ಎಂಬ ಎಚ್ಚರಿಕೆ ಗುರುವಿನ ಮಾತಿನಲ್ಲಿದೆ. ಗುರುವು ಎಲ್ಲಾ ಸಮಯದಲ್ಲೂ ಹೀಗೆ ಹೇಳದೆ ಇರಬಹುದು. ಆದರೆ ಆತನ ನಡವಳಿಕೆ ಶಿಷ್ಯನಲ್ಲಿ ಒಂದು ಕಲಿಕೆಯನ್ನುಂಟು ಮಾಡಿರಬಹುದು.

ವೈದ್ಯವನ್ನು ಬಲ್ಲ ಇತರ ಅನುಭವಿಗಳು ಮತ್ತು ಮನೆಯ ಹಿರಿಯರೂ ಸಹ ವೈದ್ಯವನ್ನು ತಿಳಿಸಿಕೊಡುವಾಗ ಗುರುವಿನ ಸ್ಥಾನದಲ್ಲಿ ಇದ್ದು, ವೈದ್ಯವನ್ನು ಒಳ್ಳೆಯ ಕಾರ್ಯಕ್ಕಾಗಿಯೇ ಬಳಸಬೇಕೆಂಬ ನೀತಿಯನ್ನು ಹೇಳುತ್ತಾರೆ. ವೈದ್ಯವನ್ನು ಕಲಿಯುವವರಿಗೆಲ್ಲ ಇನ್ನೊಂದು ಮಾತು ಹೇಳುವುದನ್ನು ಮರೆಯುವುದಿಲ್ಲ. 'ಇದು ಗುರುವಿದ್ಯೆ ಸಾಯೋ ಮೊದಲು ಯಾರಿಗಾದರೂ ದಾನ ಮಾಡಿ ಸಾಯಬೇಕು' ಎಂಬುದು ನನಗೆ ವಿದ್ಯೆ ಕಲಿಸಿದ ಗುರುವು ಅಂದು ಹೀಗೆ ಅಪ್ಪಣೆ ಮಾಡಿದ್ದರು. ಈ ಸಾಯೋ ಮೊದಲು ವಿದ್ಯೆಯನ್ನು ದಾನಮಾಡು ಎಂಬುದಿದೆಯಲ್ಲ ಇದು ಜನಪದ ವೈದ್ಯಪದ್ಧತಿ ಉಳಿದು ಬರುವಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿದೆ.

ಆ) ಪ್ರತಿಫಲ ಬಯಸದ ಕಾಯಕ

ಜನಪದ ವೈದ್ಯರ ದೃಷ್ಟಿಯಲ್ಲಿ ಪ್ರತಿಫಲವೆಂದರೆ ತಾವು ಮಾಡಿದ ಔಷಧೋಪಚಾರಕ್ಕೆ ಪ್ರತಿಯಾಗಿ ಪಡೆಯುವ ಕಾಣಿಕೆಯಲ್ಲ. ಔಷಧೋಪಚಾರದಿಂದ ರೋಗಿ ಆರೋಗ್ಯವಂತನಾಗುವ ಸುಧಾರಣಾ ಹಂತವನ್ನೇ ವೈದ್ಯರು ಪ್ರತಿಫಲವೆಂದು ಭಾವಿಸಿದ್ದಾರೆ. ಇಂತಹ ಪ್ರತಿಫಲವನ್ನು ಕಂಡಾಗ ತಾವು ವಿದ್ಯೆಯನ್ನು ಕಲಿತ್ತದ್ದು ಸಾರ್ಥಕವಾಯಿತು ಎಂಬ ಧನ್ಯತಾಭಾವವನ್ನು ಹೊಂದುತ್ತಾರೆ.

'ಲೋಕೋ ಭಿನ್ನ ರುಚಿಃ' ಎನ್ನುವಂತೆ ವಿವಿಧ ಬಗೆಯ ಜನಪದ ವೈದ್ಯರಿದ್ದಾರೆ. ಅವರ ನಿರೀಕ್ಷೆಗಳೂ ಭಿನವಾಗಿರುತ್ತವೆ. ರೋಗ ಗುಣಹೊಂದುವುದರಲ್ಲೇ ಸಾರ್ಥಕತೆಯಿದೆ ಎಂದು ಭಾವಿಸಿದರೆ ವೈದ್ಯರ ಜೀವನ ಸಾಗುವುದು ಬೇಡವೇ! ಅದಕ್ಕಾಗಿ ಅಲ್ಪ ಕಾಣಿಕೆಯನ್ನು ಪಡೆಯುವ ರೂಢಿಯಿದೆ. ಕಾಣಿಕೆಯನ್ನು ಬಯಸುವ ಮತ್ತು ತಿರಸ್ಕರಿಸುವ ಎರಡು ಬಗೆಯ ವೈದ್ಯರನ್ನು ಕಾಣಬಹುದು : ಬಯಸುವ ಮತ್ತು ತಿರಸ್ಕರಿಸುವುದನ್ನು ಈಗ ನೋಡೋಣ.

ಕಾಣಿಕೆಯನ್ನು ಬಯಸುವವರು : ಕಾಣಿಕೆಯನ್ನು ಪಡೆಯಬಹುದೆಂಬ ಉದ್ದೇಶವನ್ನಿಟ್ಟುಕೊಂಡು ಯಾರೂ ವೈದ್ಯವನ್ನು ಕಲಿತಿರುವುದಿಲ್ಲ. ಆದರೆ ಅವರ ಸಮಾಜಿಕ ಸ್ಥಿತಿಗತಿ ಕಾಣಿಕೆಯನ್ನು ಬಯಸುವಂತೆ ಮಾಡುತ್ತದೆ. ಪಡೆಯುವ ಕಾಣಿಕೆ ಹಣವಾಗಿರಬಹುದು ಇಲ್ಲವೇ ದವಸ-ಧಾನ್ಯ, ತೊಡುವ ಬಟ್ಟೆ ಮತ್ತು ಇತರ ಸ್ಥಿರಾಸ್ತಿಗಳಾಗಿರಬಹುದು. ಕಾಣಿಕೆಗಳು ಎಲ್ಲಾ ಸಂದರ್ಭಗಳಲ್ಲಿ ದೊರೆಯುವುದಿಲ್ಲ.

ಔಷಧಿ ತಯಾರಿಸಿದ ಕ್ರಮಕ್ಕೆ ತಕ್ಕಷ್ಟು ಕಾಣಿಕೆ ದೊರೆಯುವುದು ವಿರಳವಾಗಿದೆ. ಕಾಣಿಕೆ ಬಯಸುವವರು ವೃತ್ತಿವೈದ್ಯರಾಗಿರುತ್ತಾರೆ. ಹಾಗೆಯೇ ಪ್ರವೃತ್ತಿಯವರೂ ಇರುತ್ತಾರೆ. ವೃತ್ತಿ ವೈದ್ಯರೊಬ್ಬರು ಕಾಣಿಕೆಯನ್ನು ಕುರಿತು ವ್ಯಕ್ತಪಡಿಸಿದ ಅಬಿಪ್ರಾಯ ಹೀಗಿದೆ "ಈ ವೈದ್ಯ ಮಾಡಿ ಯಾರೂ ಶ್ರೀಮಂತರಾಗಿಲ್ಲ. ನಾನಂತೂ ಆಗಿಲ್ಲ, ಅವರು ಕೊಡಲಿ ಬಿಡಲಿ ಅವರ ಕಾಯಿಲೆ ನೋಡಲಾರದೆ ನನ್ನ ಸಮಯ ವೆಚ್ಚ ಮಾಡಿಯಾದ್ರೂ ಔಷಧಿ ಮಾಡಿ ಕೊಡುತ್ತೇನೆ. ಇದು ನನ್ನ ಧರ್ಮ, ಯಾರೋ ತಿಳಿದವರು ಕೊಡ್ತರೆ ಎಲ್ಲರೂ ಹಾಗೇ ಅನುಕೂಲಸ್ಥರಾಗಿರುವುದಿಲ್ಲ. ಅವರ ಸ್ಥಿತಿ ನೋಡಿ ಮರುಗಿ ವೈದ್ಯ ಮಾಡಿಬಿಡುತ್ತೇನೆ"(89).

"ನಮ್ಮಿಂದ ರೋಗಿಗಳಿಗೆ ಒಳ್ಳೆಯ ಉಪಯೋಗವಿದೆ. ಆದರೆ ನಮ್ಮ ಶ್ರಮಕ್ಕೆ ಯಾವುದೇ ಪ್ರತಿಫಲ ಇಲ್ಲ. ನೂರಕ್ಕೆ ನೂರರಷ್ಟು ರೋಗಿ ನಮ್ಮಿಂದ ಗುಣಹೊಂದುತ್ತಾನೆ. ಬೆಂಗಳೂರಿನಿಂದ ವಾಪಾಸು ಬಂದ ರೋಗಿಗಳನ್ನು ಗುಣಮಾಡಿದಿನಿ. ಆದರೆ ನಮಗೆ ಹಣ ಕೊಡಲು ಜನ ಹಿಂದು-ಮುಂದು ನೋಡುತ್ತಾರೆ"(199).

"ಎಂದೂ ಯಾರನ್ನೂ ಇಷ್ಟೇ ಕೊಡಿ ಎಂದು ನಾನು ಕೇಳಿಲ್ಲ. ಅವರು ಕೊಟ್ಟಷ್ಟು ತಗೊಳ್ತೀನಿ. ಒಬ್ಬರಿಗೆ ಹುಚ್ಚು ಹಿಡಿದಿತ್ತು ಅದನ್ನು ಗುಣಪಡಿಸಿದಾಗ ಅಡಿಕೆ ಎಲೆಯೊಂದಿಗೆ 3 ಸಾವಿರ ಕೊಟ್ಟಿದ್ದರು ಆಗ ಒಂದು ಸಾವಿರ ಮಾತ್ರ ನನ್ನ ಕಾಣಿಕೆ ಎಂದು ಸ್ವೀಕರಿಸಿ ಉಳಿದಿದ್ದನ್ನು ಹಿಂದಕ್ಕೆ ಕೊಟ್ಟು ಬಂದೆ"(8).

ಮೇಲಿನ ಎರಡು ಅನಿಸಿಕೆಗಳಲ್ಲಿ ತಮ್ಮ ಪರಿಶ್ರಮಕ್ಕೆ ತಕ್ಕಷ್ಟು ಕಾಣಿಕೆ ಬರುವುದಿಲ್ಲವಲ್ಲ ಎಂಬ ಕೊರಗಿದೆ. ಕೊನೆಯ ಅನಿಸಿಕೆಯಲ್ಲಿ ವೈದ್ಯ ಬಯಸಿದ್ದಕ್ಕಿಂತ ಹೆಚ್ಚಿನ ಕಾಣಿಕೆ ಬಂದಾಗ ಅದಕ್ಕೆ ಆಸೆ ಪಡೆದೆ ಹಿಂದಕ್ಕೆ ಕೊಡುವುದನ್ನು ಕಾಣುತ್ತೇವೆ. ಇದೇ ತಾನೆ ವೃತ್ತಿ ಧರ್ಮ. ವೈದ್ಯವೃತ್ತಿಯನ್ನೇ ಅವಲಂಬಿಸಿದ್ದರೂ ಬಯಸುವ ಕಾಣಿಕೆ ಮಾತ್ರ ವೃತ್ತಿಧರ್ಮಕ್ಕೆ ಅನುಸಾರವಾಗಿಯೇ ಇರುತ್ತದೆ.

ಬಯಸಿದರೂ ಬಾರದ ಕಾಣಿಕೆ : ಕೆಲವು ವೈದ್ಯರು ವೃತ್ತಿಯವರೂ ಅಲ್ಲ ಪ್ರವೃತ್ತಿಯವರೂ ಅಲ್ಲ, ಈ ಎರಡೂ ಪರಿಕಲ್ಪನೆಗಳ ಮಧ್ಯ ಇರುತ್ತಾರೆ. ಇವರು ಕಾಣಿಕೆಯನ್ನು ಕೊಡಿ ಎಂದು ಬಾಯಿತಗೆದು ಕೇಳುವುದಿಲ್ಲ, ಕೊಟ್ಟರೆ ತಿರಸ್ಕರಿಸುವುದಿಲ್ಲ. ಇವರ ಈ ಮನೋಭಾವಕ್ಕೆ ವೈದ್ಯ ಮಾಡಿದ್ದಕ್ಕೆ ಹಣ

ಪಡೆದರೆ ರೋಗ ಗುಣವಾಗುವುದಿಲ್ಲ ಅಥವಾ ಔಷಧಿ ಹಿಡಿಯುವುದಿಲ್ಲ ಎಂಬ ನಂಬಿಕೆ ಬಲವಾಗಿರುವುದು, ಕಾಣಿಕೆಯನ್ನು ಸ್ವೀಕರಿಸುವುದಕ್ಕೆ ಹಿನ್ನಡೆಯನ್ನು ತಂದಿರಬಹುದು. ಹಾಗೆಯೇ ವೈದ್ಯವನ್ನು ಒಂದು ವೃತ್ತಿಯಾಗಿ ಪೂರ್ಣ ಪ್ರಮಾಣದಲ್ಲಿ ಒಪ್ಪಿಕೊಳ್ಳದಿರುವುದೂ ಕಾರಣವಿರಬಹುದು. "ನಮ್ಮ ಕೆಲ್ಸ ಬಿಟ್ಟು ಕಿಲೋಮಿಟರ್ ಗಟ್ಟಲೆ ಸುತ್ತಿ ಗಿಡತಂದು ಮೂಡುವುದೆಲ್ಲ ಉದ್ರೆನೆ. ನಮ್ಮಿಂದ ಮೇಲಾಗಿದ್ರೂ ಮೇಲಾಗಿಲ್ಲ ಎಂದು ಬಿಡುತ್ತಾರೆ"(103).

"ಹೆರಿಗೆಯಲ್ಲ ಮಾಡಿಸಿದ್ದು ನಾನೇ ಆದ್ರೆ ಆ ನರ್ಸಿಗೆ ಏನೆಲ್ಲ ಕೊಟ್ರು ನನಿಗೆ ಮಾತ್ರ ಉಡಿಯಕ್ಕಿ, ಅಡಿಕೆ, ಎಲೆ ಕೊಟ್ರು ಮಗುಗೆ ನೀರು ಹಾಕ್ಸಲು ನಾನು ಈಗ್ಲೂ ಹೋಗ್ಬೇಕು"(176) ಮೇಲಿನ ವೈದ್ಯರ ಮಾತುಗಳು ಅವರ ಶ್ರಮವನ್ನು ಮತ್ತು ಅದಕ್ಕೆ ಸೂಕ್ತವಾದ ಕಾಣಿಕೆ ದೊರೆಯದಿರುವುದನ್ನು ಹೇಳುತ್ತವೆ. ಇಲ್ಲಿ ವೈದ್ಯರು ನೀರಿಕ್ಷಿಸುವುದು ಕನಿಷ್ಠ ಪ್ರಮಾಣದ ಕಾಣಿಕೆಯಾಗಿರುತ್ತದೆ. ಅದು ದೊರೆಯಬಹುದು ಅಥವಾ ದೊರೆಯದಿರಬಹುದು ಆ ಕಾರಣಕ್ಕಾಗಿ ವೈದ್ಯ ಮಾಡುವುದನ್ನೇ ನಿಲ್ಲಿಸುವ ಉದಾಹರಣೆಗಳು ಕಡಿಮೆ ಎಂದು ಹೇಳಬಹುದು. ಕಲಿತ ಮೇಲೆ ಕೈಬಿಡದೇ ಇದನ್ನು ಮಾಡುವುದು ನಮ್ಮ ಧರ್ಮ ಎಂದು ಕೊಂಡು ಮುಂದುವರಿಸುತ್ತಾರೆ.

ಕಾಣಿಕೆಯನ್ನು ತಿರಸ್ಕರಿಸುವವರು : ಜನಪದ ವೈದ್ಯರಲ್ಲಿ ಕಾಣಿಕೆಯನ್ನು ನಿರಾಕರಿಸುವವರ ಸಂಖ್ಯೆಯು ಅಧಿಕವಾಗಿದೆ. ಇಂಥವರು ಬಹುತೇಕವಾಗಿ ಪ್ರವೃತ್ತಿಯ ವೈದ್ಯರಾಗಿರುತ್ತಾರೆ. ರೋಗ ಗುಣ ಹೊಂದಿದವರು ಒತ್ತಾಯ ಪೂರ್ವಕವಾಗಿ ಕೊಡಲು ಬಂದರೂ ಆ ಕಾಣಿಕೆಯನ್ನು ಮುಟ್ಟುವುದಿಲ್ಲ ಆ ಸಂದರ್ಭದಲ್ಲಿ ರೋಗಿಗಳಿಗೆ ಸಮಾಧಾನವಾಗಲೆಂದು "ಯಾರಾದ್ರೂ ಏನಾದ್ರೂ ಕೊಡೋಕೆ ಬಂದಾಗ ಹೋಗು ನಿಮ್ಮ ದೇವರಿಗೆ ಮಂಗಳಾರತಿ ಮಾಡಿಸು ಅಥವಾ ಹುಂಡಿಗೆ ಹಾಕು ಎಂದು ಹೇಳಿ ಕಳುಹಿಸುತ್ತೇನೆ"(164).

"ದೂರದೂರುಗಳಿಗೆ ಹೋದಾಗ ಬಸ್ ಚಾರ್ಜ್ ಕೊಡುತ್ತಾರೆ. ಔಷಧಿಗೆ ಬೇಕಾದ ಸಾಮಾನುಗಳ ಖರ್ಚನ್ನು ಅವರೇ ನೋಡಿ ಕೊಳ್ಳಬೇಕು. ನನ್ನ ಔಷಧಿ ಚಾರ್ಜನ್ನು ಕೊಟ್ಟರೂ ಸಂತೋಷ, ಕೊಡದಿದ್ದರೂ ಸಂತೋಷ"(45).

ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ, ವೈದ್ಯರು ತಾವು ಮಾಡಿದ ವೈದ್ಯೋಪಚಾರಕ್ಕೆ

ಪ್ರತಿಯಾಗಿ ನೀಡುವ ಕಾಣಿಕೆಯನ್ನು ತುಂಬ ವಿನಯದಿಂದ ತಿರಸ್ಕರಿಸುವುದನ್ನು ಕಾಣುತ್ತೇವೆ. ರೋಗಿಯ ಕಡೆಯವರು ತಗೆದುಕೊಳ್ಳಲೇ ಬೇಕೆಂದು ಒತ್ತಾಯಿಸಿದಾಗ 'ಅದನ್ನು ನಿಮ್ಮ ದೇವರ ಹುಂಡಿಗೆ ಹಾಕಿ' ಎಂಬ ಉಪಾಯವನ್ನು ಸೂಚಿಸುತ್ತಾರೆ. ಹಣ ಎಂಥವರಲ್ಲೂ ಆಸೆಯನ್ನು ಹುಟ್ಟಿಸುತ್ತದೆ. ಆದರೆ ಜನಪದ ವೈದ್ಯರು ಅದರ ಆಸೆಗೆ ಬಲಿಯಾಗದಿರುವುದು ಅವರು ವೃತ್ತಿಧರ್ಮಕ್ಕೆ ತೋರುವ ನಿಷ್ಠೆಯಾಗಿದೆ ಎಂದು ಹೇಳಬಹುದು.

ಆಧುನಿಕ ಸಂದರ್ಭದಲ್ಲಿ ಕೆಲವು ವೈದ್ಯರು ವೃತ್ತಿಧರ್ಮದಿಂದ ಹೊರಬಂದು ಬಂಡವಾಳದ ದೃಷ್ಟಿಯಲ್ಲಿ ಜನಪದ ವೈದ್ಯ ನೋಡಲು ಪ್ರಯತ್ನಿಸಿದ್ದಾರೆ ಇಂಥವರನ್ನು ಜನಪದ ವೈದ್ಯರು ಎನ್ನುವುದಕ್ಕಿಂತ ಜನಪ್ರಿಯ ವೈದ್ಯರು ಎಂದು ಕರೆಯಬಹುದು. ಆಧುನಿಕತೆಯು ಒಂದಲ್ಲ ಒಂದು ರೂಪದಲ್ಲಿ ಎಲ್ಲಾ ಜನರನ್ನು ತನ್ನ ತೆಕ್ಕೆಗೆ ಬಾಚಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಜನಪದ ವೈದ್ಯರೂ ಅದಕ್ಕೆ ಹೊರತಾಗಿಲ್ಲ. ಆದರೂ ಹಲವರು ಇನ್ನೂ ವೃತ್ತಿಧರ್ಮದ ಅನುಯಾಯಿಗಳಾಗಿದ್ದಾರೆ ಎಂಬುದು ಅವರ ಮಾತುಗಳಿಂದ ತಿಳಿಯುತ್ತದೆ.

ಇ) ಶ್ರಮವೂ ವೈದ್ಯರದೇ ಔಷಧವೂ ಅವರದೇ

ಕಾಣಿಕೆಯ ಅಪೇಕ್ಷೆ ಇಲ್ಲದಿದ್ದರೂ ಪರಿಶ್ರಮದಿಂದ ಔಷಧಿಯನ್ನು ತಯಾರಿಸಿ ಕೊಡುವ ವೈದ್ಯರನ್ನು ಹಿಂದಿನ ಭಾಗದಲ್ಲಿ ನೋಡಿದೆವು. ಇವರು ಔಷಧಿಗೆ ಬೇಕಾದ ಪರಿಕರಗಳನ್ನು ರೋಗಿಯ ಕಡೆಯಿಂದ ಪಡೆಯುವ ಸಾಧ್ಯತೆ ಹೆಚ್ಚಾಗಿರುತ್ತದೆ. ಮತ್ತೊಂದು ಬಗೆಯ ವೈದ್ಯರಿದ್ದಾರೆ: ಔಷಧಿಗೆ ಬೇಕಾದ ವಸ್ತುಗಳು; ತಯಾರಿಸುವ ಶ್ರಮ ಎಲ್ಲವೂ ಅವರದೇ ಆಗಿದ್ದು, ವೈದ್ಯಸೇವೆ ಮಾಡುವಂತಹ ಉತ್ಸಾಹಿಗಳಾಗಿರುತ್ತಾರೆ. ಕೆಲವು ಸಂದರ್ಭಗಳಲ್ಲಿ ಅನಿವಾರ್ಯವಾಗಿಯೂ ಔಷಧೀಯ ವೆಚ್ಚವನ್ನು ವೈದ್ಯನೆ ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ. ಇಂಥವರ ವ್ಯಕ್ತಿತ್ವವು ಸಾಧು ಸಂತರ, ಋಷಿ ಮುನಿಗಳ ಸಚ್ಚಾರಿತ್ರ್ಯವನ್ನು ನೆನಪಿಸುವಂತಹುದಾಗಿರುತ್ತದೆ. ಇವರುಗಳಿಂದ ಸೇವೆಯನ್ನು ಪಡೆದ ರೋಗಿಗಳೇ ಧನ್ಯರು ಎನ್ನಬಹುದು. ಯಾಕೆಂದರೆ ಯಾವುದೇ ಪ್ರತಿಷ್ಠೆ ಮತ್ತು ತೋರಿಕೆಗೆ ಇವರು ವೈದ್ಯಮಾಡುವುದಿಲ್ಲ. ಗುಣಪಡಿಸುವ ಸಾಧ್ಯತೆಗಾಗಿ ತಮ್ಮ ಅಮೂಲ್ಯ ಸಮಯ ಮತ್ತು ಅನುಭವವನ್ನು ವಿನಿಯೋಗಿಸುತ್ತಾರೆ; ವೈದ್ಯ ಮಾಹಿತಿಯನ್ನು

ಆಸಕ್ತರಿಗೆ ಪರಿಚಯಿಸುವ ಉದಾರತೆ ಇವರಲ್ಲಿರುತ್ತದೆ. ಈ ರೀತಿಯ ವೈದ್ಯರು ಸಂದರ್ಶನಕ್ಕೆ ಸಿಕ್ಕಿದಾಗ ಯಾವುದೇ ಸಂದರ್ಶಕ ಸಂತೋಷಪಡದೇ ಇರಲಾರ.

ತಮ್ಮ ಖರ್ಚಿನಿಂದಲೇ ಔಷಧಿಯನ್ನು ಸಿದ್ಧಪಡಿಸಿ ರೋಗಿಗಳಿಗೆ ಕೊಡುವ ವೈದ್ಯರ ಅನುಭವದ ಮಾತುಗಳು, "ಬೇರೆ ಊರಿಂದ ತಲೆಕೂದಲು ಉದುರಿಹೋಗಿದ್ದ ಯುವಕನೊಬ್ಬ ಬಂದಿದ್ದ, ಔಷಧಿಗೆ ಬೇಕಾದ : ಚಿತ್ರಮೂಲ ಬೇರಿನ ತೊಗಟೆ ಕರೇಕಾಚು ಮೆಣಸು ಬೆಳ್ಳುಳ್ಳಿ ನಿಂಬೆಹಣ್ಣು ಇವನ್ನೆಲ್ಲ ನಾನೇ ಕೂಡಿಸಿಕೊಂಡು ಔಷಧಿಯನ್ನು ಅರೆದು ಹಚ್ಚಿದೆ"(164). ಎನ್ನುವ ವೈದ್ಯರು ಮೊದಲು ರೋಗಿಯ ಪರಿಸ್ಥಿತಿಯನ್ನು ಗಮನಿಸುತ್ತಾರೆ. ಪರ ಊರಿನಿಂದ ನಡೆದುಕೊಂಡೇ ಬಂದಿರುವ ರೋಗಿಗೆ ಔಷಧಿಗೆ ಬೇಕಾದ ವಸ್ತುಗಳನ್ನು ತಂದುಕೊಡು ಎಂದರೆ ಎಲ್ಲಿಂದ ತಂದು ಕೊಡುತ್ತಾನೆ! ಚಿತ್ರಮೂಲದ ಬೇರು, ಕರೇಕಾಚುವಿನ ಪರಿಚಯವೇ ಇಲ್ಲದವರು ಹೇಗೆ ತಾನೆ ಅವನ್ನು ತಂದಾರು? ಈ ಕಾರಣಗಳಿಂದಲೂ; ತಾವೇ ಔಷಧೀಯ ವೆಚ್ಚವನ್ನು ನೋಡಿಕೊಳ್ಳುವುದರಲ್ಲಿ ಸಂತೋಷ ಪಡುವ ವೈದ್ಯರು ಇದ್ದಾರೆ.

"ನಾನು ಇವತ್ತಿಗೂ ರೋಗಿಗಳಿಂದ ಏನೂ ತಗೊಂಡಿಲ್ಲ. ಪಥ್ಯಕ್ಕೆ ರಾಗಿ ಹಿಟ್ಟು ಇಲ್ಲ ಎಂದರೆ ನಮ್ಮನೆಯಿಂದಲೇ ಎರಡು ಸೇರು ಕೊಟ್ಟು ಕಳುಹಿಸುತ್ತೇನೆ"(178). ಮೇಲಿನ ವೈದ್ಯ ಹಾವಿನ ವಿಷಕ್ಕೆ ಔಷಧಿಯನ್ನು ಕೊಡುತ್ತಾನೆ. ಔಷಧಿಯನ್ನು ಕೊಟ್ಟಿದ್ದಕ್ಕೆ ಏನನ್ನೂ ಸ್ವೀಕರಿಸುವುದಿಲ್ಲ. ಇಂಥ ಪಥ್ಯ ಇರಬೇಕು ಎಂದು ವೈದ್ಯರು ಹೇಳಿದಾಗ, ಅಯ್ಯೋ ನಮ್ಮನೆಯಲ್ಲಿ ರಾಗಿಹಿಟ್ಟು ಇಲ್ಲ ಎಂದು ರೋಗಿ ಹೇಳಿದರೆ, ವೈದ್ಯನೇ ಆ ಕೊರತೆಯನ್ನು ತುಂಬುವ ಅನಿವಾರ್ಯತೆ ಎದುರಾಗುತ್ತದೆ. ಯಾಕೆಂದರೆ ಪಥ್ಯವನ್ನು ಹೇಳಿದ ಕಾರಣಕ್ಕಾಗಿ, ಒಂದು ವೇಳೆ ಪಥ್ಯವು ಸರಿಯಾಗಿರದಿದ್ದರೆ ರೋಗಿಯ ಸ್ಥಿತಿ ಗಂಭೀರ ಆಗಿ ಏನಾದರೂ ಅನಾಹುತ ಸಂಭವಿಸಿದರೆ ಅದಕ್ಕೆ ವೈದ್ಯನನ್ನೇ ಹೊಣೆಗಾರನನ್ನಾಗಿ ಮಾಡಲಾಗುತ್ತದೆ. ಇನ್ನು ಕೆಲವು ವೇಳೆ ಮನೆ ಮುಂದೆ ರೋಗಿ ಬಂದಾಗ ಇಲ್ಲವೆನ್ನದೇ ವೈದ್ಯ ಮಾಡಬೇಕಾಗುತ್ತದೆ. ಔಷಧಿಗೆ ಬೇಕಾದ ವಸ್ತುಗಳಿಲ್ಲದಿದ್ದರೂ ಹೊಲಗಳಿಗೋ ಕಾಡಿಗೋ ಹೋಗಿ ಔಷಧಿಯನ್ನು ತಂದು ಕೊಡಬೇಕು. ಯಾಕೆಂದರೆ ವೈದ್ಯವನ್ನು ಕಲಿತಿರುವ ತಪ್ಪಿಗಾಗಿ. "ಕೆಲವರು ಅತೀ ಬಡವರು ಬರ್ತಾರೆ, ಇಲ್ಲ ಅನ್ನೋಕಾಗಲ್ಲ ಅಂಥವರಿಗೆ ನಾವೇ ಕೈಯಿಂದ ಸಾಮಾನುಗಳನ್ನು ತರಿಸಿ ಔಷಧಿ ಕೊಡುತ್ತೇವೆ"(192). ಒಂದು ವೇಳೆ ಔಷಧಿ ಕೊಡುವುದಿಲ್ಲ ಎಂದರೆ ಇವನಿಗೆ ದುರಹಂಕಾರ

ವೆಂದೋ; ಹಣಕೊಟ್ಟವರಿಗೆ ಮಾತ್ರ ಔಷಧಿ ಕೊಡುತ್ತಾನೆಂದೋ; ಯಾರೂ ಕಲಿಯದಿರುವ ವಿದ್ಯೆಯನ್ನು ಇವನೊಬ್ಬನೇ ಕಲಿತ್ತಿದ್ದಾನೆಂದೋ ಜನರು ಆಡಿಕೊಳ್ಳುತ್ತಾರೆ. ಸಮಾಜದಲ್ಲಿ ಈ ರೀತಿಯ ಅಪವಾದಕ್ಕೆ ಗುರಿಯಾಗಲು ಇಷ್ಟಪಡದ ವೈದ್ಯರು ತಾವೇ ಔಷಧೀಯ ವೆಚ್ಚವನ್ನು ನೋಡಿಕೊಳ್ಳುವ ಅನಿವಾರ್ಯತೆ ಎದುರಾಗುತ್ತದೆ.

"ಪಕ್ಕದ ಊರವರೆಲ್ಲಾ ನನ್ನ ಕರೆದೊಯ್ಯುತ್ತಿದ್ದರು. ನಮ್ಮ ಮನೆಯಿಂದಲೇ ಔಷಧಿಯನ್ನು ತಗೊಂಡು ರಾತ್ರೋರಾತ್ರಿ ಕೂಡ ಹೋಗಿಬಿಡುತ್ತಿದ್ದೆ. ಇದು ನನಗೆ ತುಂಬ ಖುಷಿ ಕೊಡೋದು"(10). ವೈದ್ಯ ಸೇವೆಯಲ್ಲಿ ಈ ಬಗೆಯ ಸಂತೋಷವನ್ನು ಕಾಣುವ ವೈದ್ಯರು ಈಗ ಅಪರೂಪ ಆದರೆ ಪೂರ್ವಿಕರ ವೈದ್ಯ ಸಂಸ್ಕೃತಿಯಲ್ಲಿ ಈ ಸಂತೋಷವೇ ಪ್ರಾಮುಖ್ಯತೆಯನ್ನು ಹೊಂದಿತ್ತು.

ಔಷಧಿಯನ್ನು ಅರೆದು ಕೊಡುವುದು ಮಾತ್ರವಲ್ಲ, ರೋಗಿ ಗುಣಮುಖನಾಗುವ ವರೆಗೆ ಆತನ ಯೋಗಕ್ಷೇಮವನ್ನು ವಿಚಾರಿಸುವುದು ವೈದ್ಯರ ಆದ್ಯ ಕರ್ತವ್ಯವಾಗಿದೆ. ಪರ ಊರಿನ ರೋಗಿಗೆ ಊಟ, ಕೆಲವೊಮ್ಮೆ ವಸತಿ ವ್ಯವಸ್ಥೆಯನ್ನು ವೈದ್ಯರೇ ನೋಡಿಕೊಳ್ಳಬೇಕಾಗುತ್ತದೆ. ಪ್ರಯಾಣದ ವೆಚ್ಚವನ್ನು ಕೊಟ್ಟು ಕಳುಹಿಸುವ ಪ್ರಸಂಗಗಳು ಇವೆ. ರೋಗಿಯ ಸೇವೆಯನ್ನು ವೈದ್ಯನು ಮಾತ್ರವಲ್ಲ ಅವನ ಮನೆಯವರೂ ಮಾಡುವ ಸಂದರ್ಭ ಎದುರಾಗುತ್ತದೆ. ವೈದ್ಯನ ಹೆಂಡತಿಯೊಬ್ಬರು ಹೀಗೆ ಹೇಳಿದರು "ಹಾವು ಕಡಿದ ರೋಗಿ ಬಂದಾಗ ಆ ದಿನವೆಲ್ಲ ನಮ್ಮ ಮನೆಕೆಲಸ ನಿಂತು ಹೋಗುತ್ತದೆ. ಅವರಿಗೆ ಟೀ, ಊಟ ನೋಡಿಕೊಳ್ಳುವುದು, ರೋಗಿ ವಾಂತಿ ಮಾಡಿದರೆ ಬಳಿಯುವುದು ಮುಂತಾದ ಕೆಲ್ಸ ಇರ್ತದೆ. ಗುಣವಾಗುವ ತನಕ ನಮಗೂ ಏನೋ ಒಂದು ಭೀತಿ ಇರುತ್ತೆ"(198).

ತಮ್ಮ ಕೈಯಿಂದಲೇ ಎಲ್ಲವನ್ನು ಹಾಕಿ ಶ್ರಮದಿಂದ ಔಷಧಿಯನ್ನು ಅರೆದು ಕೊಡುವ ವೈದ್ಯರುಗಳ ಸಂಖ್ಯೆ ಇತ್ತೀಚಿನ ದಿನಗಳಲ್ಲಿ ಅತೀ ವಿರಳವಾಗುತ್ತಿದೆ. ಇವರು ರೋಗವನ್ನು ವಾಸಿಮಾಡುವುದರಲ್ಲಿ ಅನುಭವಿಗಳಾಗಿರುತ್ತಾರೆ. ಇಂಥವರು ಕಾಲವಾದ ನಂತರ ಕೆಲವೇ ದಿನಗಳಲ್ಲಿ ಇವರನ್ನು ಕುರಿತಾಗಿ ದಂತಕಥೆಗಳು ಹುಟ್ಟಿಕೊಳ್ಳುತ್ತವೆ. ಅವರು ದೈವವಾಗಿ, ಪವಾಡ ಪುರುಷರಾಗಿ ಜನರ ಮನದಲ್ಲಿ ನೆಲೆನಿಂತಿರುವ ಉದಾಹರಣೆಗಳಿವೆ.

ಈ) ರೋಗಿಯ ಉಸ್ತುವಾರಿ

ಉಸ್ತುವಾರಿ ಎನ್ನುವುದು ಯಾವುದೇ ಕಾರ್ಯದ ಶ್ರೇಯಸ್ಸಿಗೆ, ಪ್ರಗತಿಗೆ ಮತ್ತು ಅದು ಯಶಸ್ವಿಯಾಗಲು ಕೈಗೊಳ್ಳುವ ಮೇಲ್ವಿಚಾರಣೆಯಾಗಿದೆ. ಉದ್ದೇಶಿತ ಕಾರ್ಯದ ಪ್ರಕ್ರಿಯೆಯನ್ನು ನಿಯಮಿತವಾಗಿ ಗಮನಿಸುವುದನ್ನು ಉಸ್ತುವಾರಿ ಎಂದು ಪರಿಗಣಿಸಬಹುದು. ವೈದ್ಯರು ಮಾಡುವ ಉಸ್ತುವಾರಿಯು ರೋಗಿಯ ಆರೋಗ್ಯ ಸುಧಾರಣೆಯಾಗಲಿ ಎಂಬ ಉದ್ದೇಶವನ್ನು ಇಟ್ಟುಕೊಂಡಿರುವಂತಹುದಾಗಿದೆ. ಉಸ್ತುವಾರಿಯು ರೋಗಿ ಮತ್ತು ವೈದ್ಯನ ನಡುವೆ ಭಾಂಧವ್ಯ, ವಿಶ್ವಾಸಗಳನ್ನು ವೃದ್ಧಿಸುತ್ತದೆ. ವೈದ್ಯರ ಉಸ್ತುವಾರಿಯ ವೈಖರಿಯನ್ನು ತಿಳಿಯಲು ಕೆಲವು ಮಾದರಿ ಉದಾಹರಣೆಗಳೆಂದರೆ : ತಾಯಿಯಾದವಳು ಮಗುವಿನ ಉಸ್ತುವಾರಿಯನ್ನು ಸದಾ ಮಾಡುತ್ತಿರುತ್ತಾಳೆ. ಮಗು ತನ್ನ ಹತ್ತಿರವಿರಲಿ ಅಥವಾ ದೂರದಲ್ಲಿರಲಿ ಅದರ ಚಲನವಲನಗಳ ಮೇಲುಸ್ತುವಾರಿ ಮಾಡುವುದು ಅವಳ ಆದ್ಯ ಕರ್ತವ್ಯವಾಗಿರುತ್ತದೆ. ಕುರಿಗಾಹಿ ತನ್ನ ಕುರಿಗಳು ತೋಳದ ಪಾಲಾಗದಂತೆ ನಿಗಾವಹಿಸುತ್ತಾನೆ. ಅಂದರೆ ಅವನು ಕುರಿಹಿಂಡಿನ ಉಸ್ತುವಾರಿಯನ್ನು ನಿರಂತರ ಮಾಡುತ್ತಿರುತ್ತಾನೆ. ರೈತನು ಬಿತ್ತನೆ ಮಾಡಿದ ನಂತರ ಅದು ಮೊಳಕೆಯಾಗಿ ಬೆಳೆಯಾಗಿ ಕೈಗೆ ಫಸಲು ಬರುವವರೆಗೂ ಅವನ ಉಸ್ತುವಾರಿ ಮುಂದುವರಿದಿರುತ್ತದೆ. ಇದೇ ಬಗೆಯಲ್ಲಿ ಜನಪದ ವೈದ್ಯರು ಔಷಧಿಯನ್ನು ಕೊಟ್ಟನಂತರ ಅದರ ಫಲವನ್ನು ಕಾಣುವ ತನಕ ರೋಗಿಯ ಯೋಗಕ್ಷೇಮದ ಬಗ್ಗೆ ಉಸ್ತುವಾರಿಯನ್ನು ಮಾಡುವ ಪದ್ಧತಿಯಿದೆ.

ಯಾವುದೇ ಕಾಯಿಲೆಗೆ ಔಷಧಿಯನ್ನು ಪ್ರಯೋಗಿಸಿದ ಮೇಲೆ ಅದರ ಪರಿಣಾಮ ಏನಾಯಿತು ಎನ್ನುವುದನ್ನು ರೋಗಿಯ ಕಡೆಯಿಂದ ವೈದ್ಯನಾದವನು ತಿಳಿದುಕೊಳ್ಳುವ ಜವಬ್ದಾರಿಯನ್ನು ವಹಿಸಬೇಕಾಗಿದೆ. ಇಂಥ ಉಸ್ತುವಾರಿಯ ಜವಬ್ದಾರಿಯನ್ನು ವಹಿಸುವುದು ವೈದ್ಯನಾದವನ ಮುಖ್ಯ ಕರ್ತವ್ಯವೆಂಬುದನ್ನು ಗುರುವು ತಿಳಿಸಿ ಹೇಳಿರುತ್ತಾನೆ. ಆದಕಾರಣ ಔಷಧಿಯನ್ನು ಕೊಟ್ಟನಂತರ ರೋಗಿ ಮತ್ತು ವೈದ್ಯನ ನಡುವಿನ ಸಂಬಂಧ ಕೊನೆಯಾಗುವುದಿಲ್ಲ. ಉಸ್ತುವಾರಿಯನ್ನು ಮಾಡದವನು ವೈದ್ಯನಾಗಲು ಯೋಗ್ಯನಲ್ಲ ಎಂಬುದು ಗುರುವಿನ ತೀರ್ಮಾನವಾಗಿರುತ್ತದೆ. 'ಒಂದು ಮಗುವಿಗೆ ಯಂತ್ರ ಬರೆದು ಹಾಕಿದ್ದೆ. ಮರುದಿನ ಮಗು ಹೇಗಿದೆ ಎಂದು ವಿಚಾರಿಸಲಿಲ್ಲ. ಆಗ ತಂದೆಯವರು "ನೀನು ಈ ಕೆಲ್ಸ ಮಾಡಬೇಡ" ಎಂದು ಬಿಟ್ಟರು'(184). ಉಸ್ತುವಾರಿಯನ್ನು ಮರೆತ ಮಗನ ಮೇಲೆ ನಿರ್ದಾಕ್ಷಿಣ್ಯವಾದ ದಂಡವನ್ನು ಬೀಸುವ ಗುರುವನ್ನು ಇಲ್ಲಿ ಕಾಣಬಹುದು. ವೈದ್ಯನಾದವನಿಗೆ ಅನೇಕ

ನಿಯಮಗಳಿವೆ, ಅವುಗಳಲ್ಲಿ ಯಾವುದೇ ಒಂದನ್ನು ನಿರ್ಲಕ್ಷಿಸಿದರೂ ವೈದ್ಯೋಪಚಾರ ಕುಂಠಿತವಾಗುತ್ತದೆ. ಅದರ ಪರಿಣಾಮ ವೈದ್ಯೋಪಚಾರದ ಮೇಲೂ ಹಾಗೂ ರೋಗಿಯ ಮೇಲೂ ಉಂಟಾಗುತ್ತದೆ. ಇದೆಲ್ಲದರ ಪೂರ್ವಾಪರವನ್ನು ಯೋಚಿಸಿಯೇ ಹಿಂದಿನವರು ಅರ್ಹನಾದವನಿಗೆ ವಿದ್ಯೆಯನ್ನು ದಾನಮಾಡುತ್ತಿದ್ದರು.

ಉಸ್ತುವಾರಿಯಿಂದ ರೋಗಿ ಮತ್ತು ವೈದ್ಯರಿಬ್ಬರಿಗೂ ಅನುಕೂಲವಿದೆ. ಒಂದು ವೇಳೆ ಉಸ್ತುವಾರಿಯನ್ನು ಮರೆತಾಗ ರೋಗವಾಸಿಯಾಗದಿದ್ದರೆ ವೈದ್ಯನ ಔಷಧೋಪಚಾರ ಜನರಿಂದ ನಿರ್ಲಕ್ಷ್ಯಕ್ಕೆ ಒಳಗಾಗುತ್ತದೆ. ಅಡ್ಡಪರಿಣಾಮವುಂಟಾದರೆ ಅಪಕೀರ್ತಿ ಬರುತ್ತದೆ. ರೋಗಿಯಾದವನು ನಿಯಮಿತವಾಗಿ ಔಷಧಿಯನ್ನು ಸೇವಿಸದೇ ಇರುವುದು ಮತ್ತು ಪಥ್ಯವನ್ನು ಅನುಸರಿಸದಿರುವುದರಿಂದ ರೋಗ ಉಲ್ಬಣಗೊಳ್ಳಬಹುದು. ಈ ಸಮಸ್ಯೆಗಳು ಉದ್ಭವಿಸದಂತೆ ಕೈಗೊಳ್ಳುವ ಮುನ್ನೆಚ್ಚರಿಕೆಯ ಕಾರ್ಯವೇ ಉಸ್ತುವಾರಿಯಾಗಿದೆ. ಔಷಧಿಯನ್ನು ಕೊಡುವ ವೇಳೆಯಲ್ಲೇ ರೋಗಿಗೆ: ಗುಣವಾಯಿತು ಅಥವಾ ಇಲ್ಲ ಎಂಬ ಸುದ್ದಿಯನ್ನು ತಿಳಿಸಬೇಕೆಂದು ವೈದ್ಯರು ಸೂಚಿಸಿರುತ್ತಾರೆ. ಹೀಗಿದ್ದರೂ ರೋಗಿಯ ಕಡೆಯಿಂದ ಯಾವ ಪ್ರತಿಕ್ರಿಯೆ ಬಾರದಿದ್ದಾಗ ಇತರರಿಂದಲಾದರೂ ವೈದ್ಯನು ರೋಗಿಯ ಯೋಗಕ್ಷೇಮವನ್ನು ತಿಳಿದುಕೊಳ್ಳುತ್ತಾನೆ. ಈ ರೀತಿಯ ಉಸ್ತುವಾರಿಯನ್ನು ಕುರಿತು ವೈದ್ಯರ ಅಭಿಪ್ರಾಯಗಳು ಹೀಗಿವೆ. 'ದಾವಣಗೆರೆ ಕಡೂರು ಚಿತ್ರದುರ್ಗ ಭಗಗಳಿಂದ ಜನ ಬರುತ್ತಾರೆ. ಔಷಧಿ ತಗೊಂಡು ಹೋದ ಮೇಲೆ ಗುಣವಾಗಿದೆ ಅಥವಾ ಇಲ್ಲವೇ ಎನ್ನುವುದಕ್ಕೆ ನನಗೆ ಸುದ್ದಿಕೊಡಬೇಕೆಂದು ಹೇಳುತ್ತೇನೆ'(192). 'ಔಷಧಿ ಕೊಟ್ಟ ಮೇಲೆ ರೋಗಿಗಳ ಭೇಟಿ ಮಾಡಬೇಕೆಂಬುದು ನನ್ನ ತಂದೆಯ ಆಜ್ಞೆಯಾಗಿತ್ತು. ಅದರಂತೆ ಹತ್ತಿದವರ ಬಳಿ ನಾನೇ ಹೋಗುತ್ತಿದ್ದೆ, ದೂರದವರಿಂದ ವರ್ತಮಾನ ತರಿಸಿಕೊಳ್ಳುತ್ತಿದ್ದೆ'(8). 'ಗಿಡಕೊಟ್ಟ ಎರಡು ದಿನಗಳ ಒಳಗೆ ಏನಾಯ್ತು ಎನ್ನುವ ವಿದ್ಯಾಮಾನವನ್ನು ಕೊಡಬೇಕು'(156). 'ಹಾವಿನ ವಿಷಕ್ಕೆ ಔಷಧವನ್ನು ಕೊಟ್ಟು ರಾತ್ರಿಯೆಲ್ಲ ರೋಗಿಯ ಎದುರಿಗೇ ಕುಳಿತಿರುತ್ತದೆ. ಮನೆಗೆ ಹೋಗಜ್ಜ ಎಂದ್ರೂ ಹೋಗುವುದಿಲ್ಲ'(73).

ಔಷಧಿ ಕೊಟ್ಟನಂತರ ರೋಗಿಯ ಪರಿಸ್ಥಿತಿ ಹೇಗಿದೆ, ಸೂಚಿಸಿದ ಪಥ್ಯವನ್ನು ಅನುಸರಿಸಲಾಗಿದೆಯೇ ಎಂಬುದನ್ನು ತಿಳಿಯುವ ತವಕ ಮತ್ತು ಕಾಳಜಿಯನ್ನು ಉಸ್ತುವಾರಿಯಲ್ಲಿ ಕಾಣಬಹುದು. ಕೆಲವು ಕಾಯಿಲೆಗಳಿಗೆ ಔಷಧೋಪಚಾರವನ್ನು ಮಾಡುವಾಗ ವೈದ್ಯರು ರೋಗಿಯನ್ನು ತಮ್ಮ ಮನೆಯಲ್ಲಿ

ಇಟ್ಟುಕೊಂಡು ಉಪಚರಿಸಬೇಕಾಗುತ್ತದೆ. ಹಾವಿನಿಂದ ಕಚ್ಚಿಸಿಕೊಂಡವರು, ಕೈಕಾಲು ಮುಂದುಕೊಂಡವರು, ದೈವ್ವ ಪೀಡೆಗಳ ಭ್ರಮೆಗೆ ಒಳಗಾದವರು ಈ ಮೊದಲಾದವರು ವೈದ್ಯರಲ್ಲಿಯೇ ಕೆಲವು ದಿನ ಉಳಿಯುವ ಸಂದರ್ಭಗಳಿವೆ. ಇಲ್ಲವಾದರೆ ರೋಗಿ ಇರುವಲ್ಲಿಗೆ ವೈದ್ಯರೇ ಹೋಗಬೇಕಾಗುತ್ತದೆ. ಕಾಯಿಲೆಯ ತೀವ್ರತೆ ಉಸ್ತುವಾರಿ ಜವಬ್ದಾರಿಯನ್ನು ಹೆಚ್ಚಿಸುತ್ತದೆ. ತಿಂಗಳುಗಳ ಕಾಲ ರೋಗಿಯ ಮೇಲುಸ್ತುವಾರಿ ಮಾಡುತ್ತಾ ಉಪಚರಿಸಿರುವ ಉದಾಹರಣೆಗಳಿವೆ.

ಉಸ್ತುವಾರಿ ಮಾಡುವುದರಿಂದ ವೈದ್ಯನು ತನ್ನ ಔಷಧೋಪಚಾರದ ಗುಣಮಟ್ಟವನ್ನು ತಿಳಿಯಲು ಸಾಧ್ಯವಿದೆ. ಅಂದರೆ ವೈದ್ಯರು ಔಷಧಿಗೆ ಬಳಸುವ ಸಸ್ಯಗಳು, ತಯಾರಿಸುವ ವಿಧಾನ, ಸೇವನೆಯ ಪ್ರಮಾಣ, ಅವಧಿ ಹಾಗೂ ಸಮಯ ಮೊದಲಾದವುಗಳಲ್ಲಿ ಬದಲಾವಣೆಯನ್ನು ಮಾಡಿಕೊಳ್ಳುವುದರ ಮೂಲಕ ವೈದ್ಯೋಪಚಾರದಲ್ಲಿ ಹೆಚ್ಚು ಖಚಿತತೆಯನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಸ್ವಲ್ಪ ಹಿಂದಕ್ಕೆ ಉಸ್ತುವಾರಿಗೆ ಹೆಚ್ಚಿನ ಗಮನವನ್ನು ನೀಡಿದ್ದರೆಂದು ಕಾಣುತ್ತದೆ, ಇಂದಿನ ಎಲ್ಲಾ ಜನಪದ ವೈದ್ಯರಲ್ಲಿ ಈ ಬಗೆಯ ಉಸ್ತುವಾರಿಯನ್ನು ಒಂದೇ ಮಟ್ಟದಲ್ಲಿ ನಿರೀಕ್ಷಿಸುವಂತಿಲ್ಲ. ಆದರೂ ಯಾವುದೇ ವೈದ್ಯರು ಈ ಉಸ್ತುವಾರಿಯ ಜವಬ್ದಾರಿಯನ್ನು ಒಂದಿಲ್ಲೊಂದು ರೂಪದಲ್ಲಿ ತಮ್ಮ ಹೆಗಲ ಮೇಲೆ ಹೊತ್ತಿರುತ್ತಾರೆ.

ಉ) ಸಾಮಾಜಿಕ ಎಚ್ಚರ

ವೈದ್ಯ ವೃತ್ತಿ ಎಂಬುದು ಮುಳ್ಳಿನ ಹಾದಿ. ಆರೋಗ್ಯ ಸುಧಾರಣೆಗೆಂದು ಔಷಧಿಯನ್ನು ಕೊಟ್ಟರೆ ಅದರಿಂದ ಆರೋಗ್ಯ ಹಾಳಾಗಬಹುದು. ವೈದ್ಯನ ಉದ್ದೇಶ ಒಳ್ಳೆಯದೇ ಆಗಿದ್ದರೂ ಜನತೆಯ ದೃಷ್ಟಿಮಾತ್ರ ಅದನ್ನು ಗ್ರಹಿಸದೇ ಹೋಗುವುದುಂಟು. ಎಲ್ಲದಕ್ಕೂ ವೈದ್ಯನನ್ನೇ ಹೊಣೆಗರನನ್ನಾಗಿಸುವುದು ಸಮಾಜದ ಧೋರಣೆಯಾಗಿದೆ. ಯಾರು ವೈದ್ಯನನ್ನು ಅಭಿಮಾನದಿಂದ ಹೊಗಳುವರೋ ಮತ್ತು ಪ್ರಶಂಸೆ ಗೈಯುವರೋ ಅವರೇ ಬೇರೊಂದು ವೇಳೆಯಲ್ಲಿ ಅದೇ ವೈದ್ಯನನ್ನು ತೆಗಳುತ್ತಾರೆ. ಅಂದರೆ ವೈದ್ಯನಿಂದಾದ ಉಪಕಾರವನ್ನು ಸ್ಮರಿಸಿದಂತೆ ಆತನಿಂದಾದ ಅತಿಸಣ್ಣ ಸೋಲೂ ಹೆಚ್ಚಿನದಾಗಿಯೇ ಪ್ರಸರಣವಾಗುತ್ತದೆ. ಇಂತಹುದನ್ನು ಅನುಭವಿಸಿದ ವೈದ್ಯರೊಬ್ಬರು 'ಗುಣಹೊಂದಿದ ಜನ ಹೊಗಳುತ್ತಾರೆ, ಇದಕ್ಕೆಲ್ಲ ಉಬ್ಬಬಾರದು. ಆಸೆ ಮಾಡಬಾರದು, ಶ್ರೀಮಂತರ ಮನೆಗೆ ಹೋದರೂ ನೆಲದ ಮೇಲೆಯೇ ಕುಳಿತು ಕೊಳ್ಳಬೇಕು'(24). ಎನ್ನುವ ಮಾತುಗಳು ಸಾಮಾಜಿಕ ಎಚ್ಚರವನ್ನು ವೈದ್ಯನಾದವನು

ಹೊಂದಿರಬೇಕೆಂಬುದನ್ನು ಸೂಚಿಸುತ್ತವೆ. ಅಂದರೆ ಕೀರ್ತಿಸುವ ಸಮಾಜವೇ ವಿಮರ್ಶಿಸುತ್ತದೆ. ಇದರಿಂದ ವೈದ್ಯೋಪಚಾರ ಹಾದಿತಪ್ಪದಂತೆ ಎಚ್ಚರಿಕೆ ವಹಿಸುವುದು ವೈದ್ಯರ ವೃತ್ತಿಧರ್ಮವೂ ಆಗಿರುತ್ತದೆ.

ವೈದ್ಯರಲ್ಲಿ ಒಳ್ಳೆಯ ವಿದ್ಯೆ ಇರುವಂತೆ ಮಾಟ-ಮಂತ್ರವೆಂಬ ವಾಮವಿದ್ಯೆಯೂ ಇರುತ್ತದೆ. ಅಪತ್ಕಾಲದಲ್ಲಿ ನೆರವಾಗಲೆಂದು ಈ ವಾಮವಿದ್ಯೆಯನ್ನು ಗುರುವು ಬೋಧಿಸಿರುತ್ತಾನೆ. ಹಾಗೆಯೇ ಸಾಕಷ್ಟು ಎಚ್ಚರಿಕೆಯನ್ನು ನೀಡಿ ಕೋಪದ ಕೈಗೆ ಮನಸ್ಸನ್ನು ಕೊಡದೇ ತಾಳ್ಮೆಯಿಂದ ಇರುವುದೇ ಕ್ಷೇಮವೆಂದು ಹಿತವಚನವನ್ನು ಹೇಳಿರುತ್ತಾನೆ. ಇದರಿಂದಾಗಿ ತಮಗೆ ಅಪಾಯ ಎದುರಾದಾಗಲೂ ಅದರ ಪ್ರಯೋಗವನ್ನು ಮಾಡದಿರುವ ಸಂಯಮಿ ವೈದ್ಯರಿದ್ದಾರೆ. ಹಣದ ಆಸೆಗಾಗಿಯೋ, ದ್ವೇಷದಿಂದಲೋ ಹಾಗೂ ಒತ್ತಾಯಕ್ಕೆ ಮಣಿದೋ ವಾಮವಿದ್ಯೆಯನ್ನು ಪ್ರಯೋಗಿಸಿರುವ ಉದಾಹರಣೆಗಳಿವೆ. ವಾಮವಿದ್ಯೆಯಲ್ಲಿ ಮಂತ್ರಗಳದೇ ಮೇಲುಗೈಯಾಗಿರುತ್ತದೆ. ಆದರೆ ಕೆಲವೊಂದು ದುರ್ಘಟನೆಗಳನ್ನುಂಟು ಮಾಡುವಲ್ಲಿ ಗಿಡಮೂಲಿಕೆಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಉದಾಹರಣೆಗೆ ಚಿತ್ರಮೂಲ, ಸಿಟ್ಟೆಟ್ಲಗಡ್ಡೆ ಮುಂತಾದವು ಒಳ್ಳೆಯದಕ್ಕೂ ಬಳಕೆಯಾಗುತ್ತವೆ, ಹಾಗೆಯೇ ಒಳ್ಳೆಯದಲ್ಲದ್ದಕ್ಕೂ ಬಳಕೆಯಾಗುತ್ತವೆ. ಇಂಥ ಗಿಡಗಳನ್ನು ಒಳ್ಳೆಯ ಕಾರ್ಯಕ್ಕೆ ಬಳಸುವುದೇ ವೈದ್ಯರ ಮುಖ್ಯ ಉದ್ದೇಶವಾಗಿರುತ್ತದೆ. ಆದರೆ ಅವುಗಳನ್ನು ಉಚಿತವಲ್ಲದ ಕಾರ್ಯಕ್ಕೆ ಬಳಸುವ ಮತ್ತು ಸಾಮಾಜಿಕ ಎಚ್ಚರವನ್ನು ಮರೆಯುವ ವೈದ್ಯರೂ ಇದ್ದಾರೆ.

ಔಷಧಿ ಕೊಡುವುದರಿಂದ ಯಾವ ಉಪಯೋಗವಿಲ್ಲ ಎಂಬುದು ವೈದ್ಯನಿಗೆ ತಿಳಿದಿರುತ್ತದೆ. ಇಂಥ ಪರಿಸ್ಥಿತಿಯಲ್ಲಿ ಒಲ್ಲದ ಮನಸ್ಸಿನಿಂದಲೇ ಔಷಧಿ ಕೊಡುವ ಸ್ಥಿತಿ ವೈದ್ಯನಿಗೆ ಬಂದಿರುತ್ತದೆ. ಯಾಕೆಂದರೆ ಜನರ ಒತ್ತಾಯವಿರುತ್ತದೆ. ಕೊಟ್ಟ ಔಷಧಿ ವಿಫಲವಾಗಿಯೋ ಅಥವಾ ಅನಿರೀಕ್ಷಿತವಾಗಿಯೋ ರೋಗಿ ಕೊನೆಯುಸಿರೆಳೆದರೆ ವೈದ್ಯನೇ ಅದಕ್ಕೆ ಹೊಣೆಗಾರ ಎಂಬಂತೆ ಜನ ಕೊಗೆಬ್ಬಿಸುತ್ತಾರೆ. ಈ ಸಂದರ್ಭದಲ್ಲಿ ವೈದ್ಯ ಮಾನಸಿಕವಾಗಿ ಕುಗ್ಗಿ ಹೋಗುತ್ತಾನೆ. ವೈದ್ಯ ಕಲಿತ್ತಿದ್ದಕ್ಕಾಗಿ ತನ್ನನ್ನು ತಾನೇ ಶಪಿಸಿಕೊಳ್ಳುತ್ತಾನೆ. ಸಮಾಜದಲ್ಲಿ ಮುಖವೆತ್ತಿ ತಿರುಗಾಡಲೂ ಅಂಜುತ್ತಾನೆ. ಯಾಕೆಂದರೆ ನನ್ನ ಬಳಿ ಬಂದಾಗ ಹೀಗಾಯಿತಲ್ಲ, ಹೀಗಾಗಬಾರದಿತ್ತು. ಎಂಬ ಕೊರಗು ಅವನಲ್ಲಿರುತ್ತದೆ. ವೈದ್ಯನ ಈ ಮನೋವ್ಯಾಪಾರದ ತಳಮಳವನ್ನು ಅನುಭವಿಸಿದವರೇ ಬಲ್ಲರು. ಆದ್ದರಿಂದ ವೈದ್ಯನು 'ತಾನು ಕೊಡುವ ಔಷಧದಿಂದ ರೋಗಿಗೆ ಒಳ್ಳೆಯದಾಗಲಿ, ಸಮಾಜದಲ್ಲಿ ತನಗೆ ಕಳಂಕ ಬಾರದಿರಲಿ' ಎಂಬ ಆಶಯವನ್ನು

ಹೊಂದಿರುತ್ತಾನೆ. ಆದರೆ ಅವಘಡಗಳು ಅನಿರೀಕ್ಷಿತವಾದವುಗಳು. ಇದಕ್ಕೆಲ್ಲ ವೈದ್ಯನನ್ನೇ ಹೊಣೆಗಾರನನ್ನಾಗಿಸುವುದು ಅಷ್ಟು ಸೂಕ್ತವೆನಿಸುವುದಿಲ್ಲ.

ಬಾಣಂತಿಸನ್ನಿ, ಹುಚ್ಚುವಾಯು ಮತ್ತು ವಿವಿಧ ಹುಣ್ಣುಗಳು ಈ ಮುಂತಾದವಕ್ಕೆ ಔಷಧಿಕೊಟ್ಟಾಗ ಪಥ್ಯ ಸರಿಯಾಗಿಲ್ಲದಿದ್ದರೆ ಏನಾದರೂ ಅನಾಹುತ ಸಂಭವಿಸಿ ತಮಗೆ ಎಲ್ಲಿ ಕೆಟ್ಟ ಹೆಸರು ಬರುವುದೋ ಎಂಬ ಅಂಜಿಕೆ ವೈದ್ಯರಿಗಿರುತ್ತದೆ. ಯಾಕೆಂದರೆ ವೃತ್ತಿಧರ್ಮಕ್ಕೆ ಅಪಚಾರವಾಗದಂತೆ ವಹಿಸುವ ಕಾಳಜಿ ಆದಾಗಿದೆ. ಹಾಗೆಯೇ ವೈಯಕ್ತಿಕವಾಗಿಯೂ ಕಳಂಕವನ್ನು ಅಂಟಿಸಿಕೊಳ್ಳದಿರಲು ವಹಿಸುವ ಎಚ್ಚರವೂ ಆಗಿದೆ.

ವೃತ್ತಿ ಧರ್ಮದಲ್ಲಿ ಏಳು ಬೀಳುಗಳು ಸಹಜವಾಗಿ ಬರುತ್ತವೆ. ಗುರುವಿನ ಆಜ್ಞೆಯಿಂದ ವೈದ್ಯ ವೃತ್ತಿಯ ಘನತೆಯನ್ನು ಕಾಪಾಡಿದರೆ, ಪ್ರತಿಫಲ ಬಯಸದ ಕಾಯಕವನ್ನು ಕೈಗೊಂಡು ಕಾಯಕ ಜೀವಿಗಳೆಂಬ ಪ್ರಶಂಸೆಗೆ ಪಾತ್ರರಾಗುತ್ತಾರೆ. ತಮ್ಮ ಕೈಯಿಂದಲೇ ಔಷಧೋಪಚಾರದ ಖರ್ಚನ್ನು ನಿಭಾಯಿಸಿ, ರೋಗಿಯ ಉಸ್ತುವಾರಿಯನ್ನು ಕೈಗೊಂಡು ಪರೋಪಕಾರ ಗುಣವನ್ನು ಮೆರೆಯುತ್ತಾರೆ. ಸಮಾಜಿಕ ಎಚ್ಚರವನ್ನು ವಹಿಸುವುದರ ಮೂಲಕ ವ್ಯಕ್ತಿಚಾರಿತ್ರ್ಯಕ್ಕೆ ಧಕ್ಕೆ ಬರದ ರೀತಿಯಲ್ಲಿ ನಡೆಯಲು ಪ್ರಯತ್ನಿಸುವ ಬಡವೈದ್ಯರ ಬವಣೆಯನ್ನು ಅರಿಯಲು ಮುಂದಡಿಯಿಡಬೇಕಾಗಿದೆ.

ಟಿಪ್ಪಣಿಗಳು :

1. ಮೋ. ಕ. ಗಾಂಧೀ, 2007. ಆತ್ಮ ಕಥೆ ಅಥವಾ ನನ್ನ ಸತ್ಯಶೋಧನೆಯ ಕಥೆ, ಪುಟ–353.
2. ಬಿ.ಜಿ. ಜೈಶೂರ್, 2002. ಸುಪ್ರಸಿದ್ಧ ವೈದ್ಯ ವಿಜ್ಞಾನಿಗಳು, ಪುಟ–9.
3. ಡಾ. ಜಿ. ರಾಮಕೃಷ್ಣ, 2006. ಭಾರತೀಯ ವಿಜ್ಞಾನದ ಹಾದಿ, ಪುಟ–162.
4. ಸಂ. ಎಂ. ಮರಿಯಪ್ಪ ಭಟ್ಟ, 1971. ಸರ್ವಜ್ಞ ವಚನ ಸಂಗ್ರಹ, ಪುಟ–1.
5. ಡಾ. ಸತ್ಯನಾರಾಯಣ ಭಟ್, 1977 . ಬೆಂಗಳೂರು ಜಿಲ್ಲೆಯ ಬರಿಗಾಲ ವೈದ್ಯರು, ಪುಟ–85.
6. ಸಂ. ಸಿ.ಪಿ.ಕೆ, ಕುವೆಂಪು ಅವರ ಆಯ್ದ ಕವಿತೆಗಳ ಸಂಗ್ರಹ, ಪುಟ–83.

* * *

ಅಧ್ಯಾಯ - 4

ರೋಗ ನಿದಾನಗಳು

ರೋಗ ನಿದಾನಗಳು

"ರೋಗ ನಿದಾನ(Diagnosis)ದ ಪ್ರಾಮುಖ್ಯತೆಯನ್ನು ಕ್ರಿ.ಪೂ. 1000 ವರ್ಷಗಳ ಹಿಂದೆಯೇ ಬ್ಯಾಬಿಲೋನಿಯನ್ನರು ತಿಳಿದಿದ್ದರು. ನಂತರ ಗ್ರೀಕರು ಅದಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದರು. ಆಧುನಿಕ ವೈದ್ಯಕೀಯದಲ್ಲಿಯೂ ರೋಗನಿದಾನ ಬಹಳ ಮುಖ್ಯ".[1] ರೋಗ ನಿದಾನವೇ ರೋಗವನ್ನು ಗುಣಪಡಿಸುವಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ಅನುಭವ, ಜಾಣ್ಮೆ ಮತ್ತು ಸೂಕ್ಷ್ಮತೆಯಿಂದ ಯಾರು ರೋಗವನ್ನು ಗುರುತಿಸಬಲ್ಲರೋ ಅವರು ಚಿಕಿತ್ಸೆಯಲ್ಲೂ ಫಲಕಾಣುವ ಸಾಧ್ಯತೆ ಹೆಚ್ಚಾಗಿರುತ್ತದೆ. "ವೈದ್ಯನಾದವನು ಯಾವುದೇ ಒಂದು ರೋಗ ಚಿಕಿತ್ಸೆಯನ್ನು ಮಾಡುವ ಮೊದಲು ರೋಗದ ನಿದಾನವನ್ನು ಮಾಡಬೇಕಾಗುತ್ತದೆ. ರೋಗೋತ್ಪತ್ತಿಗೆ ಕಾರಣವಾದ ಹೇತುವಿಗೆ 'ನಿದಾನ' ಎನ್ನುತ್ತಾರೆ. ಇದಕ್ಕೆ ನಿಮಿತ್ತ, ಹೇತು, ಆಯತನ, ಪ್ರತ್ಯಯ, ಉತ್ಥಾನ, ಕಾರಣಗಳೆಂಬ ಪರ್ಯಾಯ ಶಬ್ದಗಳು ಆಯುರ್ವೇದದಲ್ಲಿ ಬಳಕೆಯಲ್ಲಿವೆ."[2] ಜನಪದ ವೈದ್ಯರು ರೋಗಿಯನ್ನು ಪರೀಕ್ಷಿಸಲು ತಮ್ಮದೇ ಆದ ವಿಧಾನಗಳನ್ನು ಅನುಸರಿಸುತ್ತಾರೆ. ಇದನ್ನು ಹಿರಿಯರಿಂದ ಮತ್ತು ಅನುಭವದಿಂದ ಕಲಿತಿರುತ್ತಾರೆ. ಜನಪದರ ರೋಗನಿದಾನ ಕ್ರಮ ಒಂದು ರೀತಿಯಲ್ಲಿ ಸಂಕೀರ್ಣವಾದುದು. ಅಂದರೆ ಪ್ರದೇಶದಿಂದ ಪ್ರದೇಶಕ್ಕೆ ಮತ್ತು ವೈದ್ಯನಿಂದ ವೈದ್ಯನಿಗೆ ಅದರಲ್ಲಿ ಭಿನ್ನತೆ ಇರುತ್ತದೆ. ಈ ಬಗೆಯ ರೋಗ ನಿಧಾನವನ್ನು ಪರಿಚಯಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

"ಭಾರತೀಯ ವೈದ್ಯಕ್ಷೇತ್ರದಲ್ಲಿ ರೋಗನಿಶ್ಚಯಕ್ಕಾಗಿ ಎಂಟು ಸ್ಥಾನಗಳನ್ನು ಪರೀಕ್ಷಿಸಬೇಕೆಂದು ಹೇಳಲಾಗಿದೆ. "ನಿದಾನೇ ಮಾಧವಃ ಶ್ರೇಷ್ಠಃ" ಎಂಬ ಉಕ್ತಿ ರೋಗ ನಿದಾನದಲ್ಲಿ ಪ್ರಸಿದ್ಧನಾದ ಮಾಧವಕನೆಂಬ ಆಚಾರ್ಯನನ್ನು ಕುರಿತು ಹೇಳಲಾಗಿದೆ."[3] ಚರಕ ಸಂಹಿತೆಯಲ್ಲಿ ರೋಗ ನಿದಾನವನ್ನು ಪರಿಚಯಿಸುವ ಒಂದು ಪ್ರತ್ಯೇಕ ವಿಭಾಗವನ್ನೇ ಕಾಣಬಹುದಾಗಿದೆ, ಇರಲಿ. "ರೋಗ ನಿದಾನವೆಂಬುದು ಅನುಭವದ ಮಾತೇ ಹೊರತು ಪುಸ್ತಕದ ಪಾಂಡಿತ್ಯವಲ್ಲ".[4] ಎಂಬ ಅಭಿಪ್ರಾಯವನ್ನು ತಿರುಕರು ವ್ಯಕ್ತಪಡಿಸುತ್ತಾರೆ. ಈ ಮಾತು ಜನಪದ ವೈದ್ಯರಿಗೆ ಹೆಚ್ಚು ಹತ್ತಿರವಾದುದು. ಹಾಗಾದರೆ

ಜನಪದ ವೈದ್ಯರೆಲ್ಲರೂ ಅನುಭವಿಗಳೇ ಎಂದು ಭಾವಿಸುವಂತಿಲ್ಲ. ಆದರೂ ಕೆಲವರಲ್ಲಿಯಾದರೂ ಆ ಅನುಭವವನ್ನು ಕಾಣಲು ಸಾಧ್ಯವಿದೆ. ಇಂಥಾ ಅನುಭವವುಳ್ಳವರು: ಮನೆಯ ಹಿರಿಯರಿರಬಹುದು ಇಲ್ಲವೆ ಊರಿನ ದನಗಾಹಿ, ಗ್ರಾಮದೇವತೆಯ ಪೂಜಾರಿ, ಕಾಲಜ್ಞಾನ ಹೇಳುವ ಹಾರುವಯ್ಯ, ಊರೂರು ತಿರುಗುವ ಸುಡುಗಾಡುಸಿದ್ಧರು ಮತ್ತು ಅನಾಮಿಕ ಸಾಧು-ಸಂತರಾಗಿರಬಹುದು. ಇವರೆಲ್ಲ ಒಂದಿಲ್ಲೊಂದು ವಿಧದಲ್ಲಿ ಹಿರಿಯರಿಂದ ಅಥವಾ ಗುರುಮುಖೇನ ವೈದ್ಯಜ್ಞಾನವನ್ನು ಕಲಿತು ಅದರ ಜೊತೆಯಲ್ಲೇ ಅನುಭವವನ್ನು ಗಳಿಸಿಕೊಂಡವರಾಗಿರುತ್ತಾರೆ. ಇಂಥವರು ತಾವು ಅನುಭವಿಗಳು ಎನ್ನುವುದನ್ನು ಹೊರೆಗೆ ತೋರಗೊಡುವುದಿಲ್ಲ. 'ಬೀಜದೊಳಗಣ ವೃಕ್ಷದಂತೆ'[5] ಅಗೋಚರವಾಗಿರುತ್ತಾರೆ. ಇದು ಜನಪದ ವೈದ್ಯರ ಜಾಯಮಾನವೂ ಹೌದು. ಈ ಬಗೆಯ ಸಂಸ್ಕಾರ ಋಷಿಮುನಿಗಳಿಂದ ಹಾಗೂ ಸಾಧು-ಸಂತರಿಂದ ದೊರಕೊಂಡಿರುವಂತಹುದು. ಇಂತಹ ಅನುಭವ ಯಾವುದೇ ವರ್ಗಕ್ಕೆ ಸೀಮಿತವಾದದ್ದಲ್ಲ. ಅದು ವ್ಯಕ್ತಿಗಳ ಪ್ರಯತ್ನ ಮತ್ತು ಪರಿಶ್ರಮದಿಂದ ಬರುವಂತಹುದಾಗಿದೆ.

ರೋಗನಿದಾನ ಶಾಸ್ತ್ರದ ಬಗ್ಗೆ ವೈದ್ಯರೊಬ್ಬರ ಅಭಿಪ್ರಾಯ ಹೀಗಿದೆ; "ಆರು ರಸಗಳಿಂದ ಆಗಿರುವುದೇ ಆರೋಗ್ಯ. ಅದರಲ್ಲಿ ಯಾವುದು ಕಡಿಮೆಯಾಗಿದೆ ಎಂಬುದನ್ನು ತಿಳಿದು ಆ ರಸವನ್ನು ದೇಹಕ್ಕೆ ಕೊಟ್ಟರೆ ಸಮತೋಲನ ಬಂದು ರೋಗ ನಿಯಂತ್ರಣಕ್ಕೆ ಬರುತ್ತೆ. ಇದಕ್ಕಾಗಿಯೇ ಪುರಂದರದಾಸರು 'ವಿಷವಿಕ್ಕಿದವಗೆ ಷಡ್ರಸವನುಣಿಸಲಿಬೇಕು' ಎಂದಿದ್ದಾರೆ. ಆದಕಾರಣ ಮೊದಲು ರೋಗ ಯಾವುದೆಂದು ಗುರುತಿಸಬೇಕು. ಒಂದು ವೇಳೆ ರೋಗ ಗುರುತಿಸದೇ ಔಷಧಿಯನ್ನು ಕೊಟ್ಟರೆ ಹುತ್ತದ ಒಳಗಿರುವ ಹಾವಿಗೆ ಹುತ್ತದ ಮೇಲೆ ಹೊಡೆದಂತೆ" (168) ಎನ್ನುವ ವೈದ್ಯರ ಮಾತು ವೈದ್ಯೋಪಚಾರದಲ್ಲಿ ರೋಗ ನಿದಾನದ ಪ್ರಾಮುಖ್ಯತೆಯನ್ನು ಮಾರ್ಮಿಕವಾಗಿ ಹೇಳುತ್ತದೆ. ಹಾಗೆಯೇ ಅನುಭವವಿಲ್ಲದ ವೈದ್ಯೋಪಚಾರ ಅಧಃಪತನವೆಂಬ ಎಚ್ಚರಿಕೆಯನ್ನು ಕೊಡುತ್ತದೆ.

ಕೆಲವು ರೋಗಗಳನ್ನು ಗುರುತಿಸಲು ಮತ್ತು ಅವುಗಳು ಬಂದಿರುವುದಕ್ಕೆ ಕಾರಣಗಳನ್ನು ತಿಳಿಯಲು ವೈದ್ಯರೇ ಆಗಬೇಕಾಗಿಲ್ಲ. ಮನೆಯ ಹಿರಿಯರು ಹಾಗೂ ಹಳ್ಳಿಯ ಕೆಲವು ಜನರು ಗುರುತಿಸಬಲ್ಲವರಾಗಿರುತ್ತಾರೆ. ವ್ಯಕ್ತಿಯೊಬ್ಬನ ಸಮಸ್ಯೆಯನ್ನು ಗಮನಿಸಿದ ಜನರು ಅದು ಸಾಮಾನ್ಯವಾದ ರೋಗವಾಗಿದ್ದರೆ ತಾವೇ ಅದಕ್ಕೆ ಒಂದು ಸಲಹೆಯನ್ನು ಸೂಚಿಸುತ್ತಾರೆ. ಒಂದು ವೇಳೆ

ರೋಗವೇನೆಂಬುದು ಖಚಿತವಾಗಿ ತಿಳಿಯದಿದ್ದಾಗ ಇಂಥ ವೈದ್ಯನನ್ನು ಭೇಟಿಮಾಡೆಂದು ಸೂಚಿಸುತ್ತಾರೆ. ಇದು ಸಾಮೂಹಿಕ ರೋಗನಿದಾನದ ಪ್ರಕ್ರಿಯೆಯೂ ಹೌದು. ಇದಕ್ಕೆ ಕೆಲವು ಉದಾಹರಣೆಗಳು: ಮಿತಿಮೀರಿ ಬೀಡಿ ಮತ್ತು ತಂಬಾಕು ಸೇವಿಸುವವರು ದಿನದಿಂದ ದಿನಕ್ಕೆ ಒಣಗಿ ಹೋಗುತ್ತಿದ್ದು ನಿರಂತರ ಕೆಮ್ಮುತ್ತಿದ್ದರೆ, ಇವನಿಗೆ ಟಿ.ಬಿ ಬರುತ್ತದೆ ಎಂದೋ ಇಲ್ಲವೇ ಆಗಲೇ ಬಂದಿದೆ ಎಂದೋ ಜನ ತೀರ್ಮಾನಿಸುತ್ತಾರೆ. ಊರಲ್ಲಿ ಯಾರಿಗಾದರೂ ಮಕ್ಕಳಾಗದಿದ್ದರೆ 'ಅವಳು ಮದುವೆಗೆ ಮುಂಚೆ ಬಸುರಿ ಆಗಿದ್ದು ಅದ್ನ ತೆಗಿಸಿಕೊಂಡಿದ್ದಕ್ಕೇ ಈಗ ಮಕ್ಕಳಾಗಿಲ್ಲ' ಎನ್ನುವಲ್ಲಿ ಗರ್ಭಸ್ರಾವದ ವೇಳೆ ಗರ್ಭಕೋಶಕ್ಕಾಗಿರುವ ಹಾನಿಯನ್ನು ನಿಖರವಾಗಿ ಹೇಳಲಾಗದಿದ್ದರೂ ಹಾಗೇ ಮಾಡಿದ್ದು ಕಾರಣವಿರಬಹುದೆಂದು ಊಹಿಸುತ್ತಾರೆ. ಆದರೆ ಗಂಡಸಿನಿಂದಾಗಿ ಮಕ್ಕಳಾಗಲಿಲ್ಲ ಎಂದು ಯಾರೂ ಊಹಿಸದಿರುವುದು ನಮ್ಮ ಸಮಾಜದಲ್ಲಿರುವ ಲಿಂಗತಾರತಮ್ಯದ ಧೋರಣೆಯಾಗಿದೆ. ಇರಲಿ, ಮಗು ಹಗಲ್ಲೆಲ್ಲ ಅಳುತ್ತಿದ್ದು ಅದು ಹಾಲುಕುಡಿಯದಿರುವುದನ್ನು ನೋಡಿದವರು 'ಯಾವುದೋ ಕೆಟ್ಟಕಣ್ಣು ಬಿದ್ದಿರಬೇಕು, ಹೋಗು ಏನಾದ್ರೂ ದೃಷ್ಟಿತೆಗೆದು ಹಾಕು' ಎಂದು ಸಲಹೆ ಮಾಡುತ್ತಾರೆ. ಹಾಲು ಕುಡಿಯುವ ಎಳೆಯಕೂಸಿಗೆ ಕಾರಣವಿಲ್ಲದೆ ಕೆಮ್ಮು ಮತ್ತು ಶೀತ ಕಾಣಿಸಿ ಕೊಂಡಾಗ ಮನೆಯ ಹಿರಿಯರು ಮಗುವಿನ ತಾಯಿಗೆ 'ನೀನು ಬಾಯಿ ಸವಿಗೆ ಏನೇನೋ ತಿನ್ನಬ್ಯಾಡ' ಎಂದು ಎಚ್ಚರಿಸುತ್ತಾರೆ. ಆಹಾರದಲ್ಲಿ ತಾಯಿ ಪಥ್ಯವನ್ನು ಅನುಸರಿಸದಿದ್ದಾಗ ಮಗುವಿನ ಮೇಲಾಗುವ ಕೆಟ್ಟ ಪರಿಣಾಮವನ್ನು ಇಲ್ಲಿ ಗುರುತಿಸುತ್ತಾರೆ. "ಹೆಂಗಸರ ಒಳಕಾಯಿಲೆಗಳ ವಿಚಾರದಲ್ಲಿಯಂತೂ ಅಕ್ಕಪಕ್ಕದ ಮನೆಯ ಹಿರಿಯ ಅಕ್ಕಯ್ಯ ದೊಡ್ಡಮ್ಮ ಅಜ್ಜಿಯರನ್ನೂ ಆಶ್ರಯಿಸುವುದು ಅನಿವಾರ್ಯವಾಗುತ್ತಿತ್ತು"[6] ಎನ್ನುವಲ್ಲಿ ರೋಗನಿದಾನ ಮತ್ತು ಅದರ ಪರಿಹಾರ ಒಟ್ಟೊಟ್ಟಿಗೇ ಸಾಗುತ್ತಿರುವುದನ್ನು ಹೇಳುತ್ತದೆ.

ರೋಗವೊಂದರ ಚಿಹ್ನೆಗಳು ದೇಹದ ಹೊರಗೆ ಕಂಡು ಬರುತ್ತಿದ್ದರೆ. ಅದನ್ನು ಗುರುತಿಸಲು ಜನರಿಗೆ ಕಷ್ಟವಾಗುವುದಿಲ್ಲ. ಉದಾಹರಣೆಗೆ ಚರ್ಮಸಂಬಂಧಿ ಕಾಯಿಲೆಗಳು, ಕಿವಿ ಕಣ್ಣು ಮೂಗುಗಳಿಗೆ ಸಂಬಂಧಿಸಿದ ತೊಂದರೆಗಳು, ಮೂಳೆಮುರಿತ, ಕಾಮಾಲೆ, ಜ್ವರ, ಭೇದಿ, ಕೆಮ್ಮು ವಾಯು, ಮೂರ್ಛೆ – ಈ ಮೊದಲಾದವುಗಳ ನಿದಾನಶಾಸ್ತ್ರವನ್ನೂ ಜನಸಾಮಾನ್ಯರು ತಿಳಿದಿರುವ ಉದಾಹರಣೆಗಳಿವೆ. ಕಾಲು ಅಥವಾ ಕೈ ಹೆಬ್ಬೆರಳುಗಳಿಗೆ ಬಲವಾದ ಪೆಟ್ಟುಬಿದ್ದು ಗಾಯವಾಗಿ ಅದು ವಾಸಿಯಾಗುವ ಸೂಚನೆ ಕಂಡುಬರದಿದ್ದರೆ, ಅದರಿಂದ ಮೀಟುವಾಯು ಹುಟ್ಟಿ ಪ್ರಾಣಕ್ಕೇ ಅಪಾಯ ಒದಗಬಹುದೆಂಬ ಎಚ್ಚರಿಕೆ ಜನರಿಗೆ ತಿಳಿದಿರುತ್ತದೆ.

ದೇಹದ ಹೊರಗಿನ ಕಾಯಿಲೆಗಳನ್ನು ಗುರುತಿಸದಷ್ಟು ಸುಲಭವಾಗಿ ಅಲ್ಲದಿದ್ದರೂ, ವಿರಳವಾಗಿಯಾದರೂ ದೇಹದೊಳಗಿನ ಮಾನಸಿಕ ರೋಗದ ನಿದಾನವನ್ನು ಜನರು ತಿಳಿದಿರುತ್ತಾರೆ. ರಾತ್ರಿ ಒಬ್ಬಂಟಿಯಾಗಿ ಪ್ರಯಾಣ ಮಾಡಿ ಬಂದವನಿಗೆ ಬೆಳಿಗ್ಗೆ ಎದ್ದಾಗ ಚಳಿಜ್ವರ ಕಾಣಿಸಿಕೊಂಡಿದ್ದರೆ 'ಎಲ್ಲಿಯಾದ್ರೂ ಹೆದರಿದೆಯಾ, ಮೈಜುಮ್ಮ್ ಎಂದಿತೇ...' ಎಂದು ಪ್ರಶ್ನಿಸುತ್ತಾರೆ. ಈ ಬಗೆಯ ಜ್ವರವನ್ನು 'ಭಯಜ್ವರ' 'ಭೀತಿಜ್ವರ' ಎಂಬ ಹೆಸರುಗಳಿಂದ ಕರೆಯುತ್ತಾರೆ. ಕನಸ್ಸಿನಲ್ಲಿ ಹೆದರಿದವರು ಮತ್ತು ಮನಸ್ಸಿನ ಅಭೀಪ್ಸೆ ಈಡೇರದೆ ಕೊರಗುವವರ ಚಲನವಲನಗಳನ್ನು ಅವಲೋಕಿಸಿ ರೋಗದ ಕಾರಣಗಳನ್ನು ತಿಳಿದು ಅದಕ್ಕೆ ಸಲಹೆ ಕೊಡುವವರು ಇದ್ದಾರೆ. ಉಚಿತವಲ್ಲದ ಜಾಗದಲ್ಲಿ ಬಿದ್ದು ಬಂದವರು ನೋವಿನಿಂದ ನರಳುತ್ತಿದ್ದರೆ, ಭೂಮಿರಾವು ಬಡಿದಿದೆ, ಗ್ರಹ ಚೇಷ್ಟೆ, ಗಾಳಿಸೋಕು(ಸೊಂಕು) ಇಲ್ಲವೇ ಮೋಹಿನಿಕಾಟ ಅಥವಾ ಬ್ರಹ್ಮರಾಕ್ಷಸಿಕಾಟ ಎಂಬ ನಾಮಾಂಕಿತಗಳನ್ನು ಹೆಸರಿಸಿ ರೋಗಿಯನ್ನು ಮತ್ತಷ್ಟು ತಲ್ಲಣಗೊಳಿಸಿ ರೋಗದತೀವ್ರತೆಗೆ ಕಾರಣವಾಗುವವರೂ ಇದ್ದಾರೆ. ಇದರಿಂದಾಗಿ ಮಾನಸಿಕರೋಗ ನಿದಾನದಲ್ಲಿ ಅನುಕೂಲವಿದ್ದಂತೆ ಪ್ರತಿಕೂಲವೂ ಇದೆ.

ಸಾಮಾನ್ಯವಾದ ಹಲವು ಸಮಸ್ಯೆಗಳನ್ನು ಗುರುತಿಸಿ ಅವುಗಳಿಗೆ ಪರಿಹಾರ ಕಂಡುಕೊಳ್ಳುವ ಜ್ಞಾನ ಗ್ರಾಮೀಣ ಸಮುದಾಯಕ್ಕೆ ಪರಂಪರೆಯ ಮೂಲಕ ಸಾಗಿಬಂದಿದೆ ಎನ್ನುವುದನ್ನು ಗಮನಿಸಬಹುದು. ಅಂದರೆ ರೋಗನಿದಾನವೆಂಬುದು ವೈದ್ಯರು ಮಾತ್ರ ಮಾಡುವಂತಹುದು ಎಂದು ಭಾವಿಸುವಂತಿಲ್ಲ. ಅದು ಶ್ರೀಸಾಮಾನ್ಯರಲ್ಲೂ ಇರುವಂತಹುದು ಎನ್ನುವುದನ್ನು ಇದುವರೆಗೂ ನೋಡಲಾಯಿತು.

ಜನಪದ ವೈದ್ಯರ ರೋಗನಿದಾನದಲ್ಲಿ ಎಲ್ಲಾ ವೈದ್ಯರು ವಿಶೇಷವಾದ ಪರಿಣತಿಯನ್ನು ಹೊಂದಿರುತ್ತಾರೆಂದು ಹೇಳಲು ಬರುವುದಿಲ್ಲ. ಗುರುವಿನ ಪ್ರಭಾವ ಮತ್ತು ವೈದ್ಯನಲ್ಲಿರುವ ಆಸಕ್ತಿಯಿಂದ ಅದರಲ್ಲಿ ವಿಶೇಷವಾದ ಅನುಭವವನ್ನು ಹೊಂದಿದವರಿದ್ದಾರೆ. ಉಳಿದವರು ಸಾಮೂಹಿಕವಾಗಿ ಪ್ರಚಲಿತದಲ್ಲಿ ಇರುವುದನ್ನೇ ತಿಳಿದವರಿದ್ದಾರೆ. ಅನುಭವಿವೈದ್ಯರು ರೋಗಿಯನ್ನು ಪರೀಕ್ಷಿಸುವಾಗ ಹೊರನೋಟಕ್ಕೆ ಕಾಣುವ ಚಿಹ್ನೆಗಳು ಹಾಗೂ ರೋಗಿಯ ಚಲನವಲನಗಳನ್ನು ಗಮನಿಸುವುದು, ರೋಗಿಯನ್ನು ಸ್ಪರ್ಶಿಸುವುದು, ಮಾತನಾಡಿಸುವುದು, ಮುಖಭಾವವನ್ನು ಅವಲೋಕಿಸಿ ಯೋಗದೃಷ್ಟಿಯಲ್ಲಿ ಅವನ ರೋಗ ಯಾವುದೆಂದು ಹೇಳುವ ಮೇಧಾವಿಗಳೂ ಇದ್ದಾರೆ. ಇಂಥ ವೈದ್ಯರು ರೋಗ

ದೈಹಿಕವಾದದ್ದೋ ಅಥವಾ ಮಾನಸಿಕವಾದದ್ದೋ ಎನ್ನುವುದನ್ನು ಮೊದಲು ಖಚಿತಪಡಿಸಿಕೊಳ್ಳುತ್ತಾರೆ. 'ರೋಗಿಯೂ ನನ್ನನ್ನೇ ನೋಡುತ್ತಿದ್ರೆ ಸ್ವಲ್ಪಯೋಚಿಸಿ ನಿರ್ಧಾರ ಮಾಡ್ತೀನಿ, ಮುಖ ತಗ್ಗಿಸಿ ದೃಷ್ಟಿ ಕೆಳಕ್ಕೆ ಹೋಯ್ತು ಅಂದ್ರೆ ತತ್! ಇದು ಮನಸ್ಸಲ್ಲಿ ಹುಟ್ಟಿದ್ದು ಎಂದು ತೀರ್ಮಾನಿಸುತ್ತೇನೆ'(64). 'ಔಷಧಿ ಕೊಟ್ಟ ನಂತರವೂ ಹೊಟ್ಟೆನೋವು ವಾಸಿಯಾಗದಿದ್ರೆ ಕರುಳಿನ ಮೇಲೆ ಗುಳ್ಳೆ(ಅಲ್ಸರ್)ಆಗಿದೆ ಎಂದರ್ಥ'(197). 'ಹೊಟ್ಟೆನೋವು ಅಂತ ಹೆಣ್ಮಕ್ಕಳು ಬರ್ತಾರೆ, ಎಷ್ಟುದಿನದಿಂದ ಎಂದು ಕೇಳಿ ನಂತರ ಗರ್ಭಕೋಶದ ದೋಷವೆಂದು ತಿಳಿದು ಗಿಡ ಕೊಡ್ತಿನಿ, ಅದಕ್ಕೂ ಗುಣವಾಗದಿದ್ರೆ ಗರ್ಭಕೋಶ ಕೆಟ್ಟಿದೆ ಆಸ್ಪತ್ರೆಗೆ ಹೋಗಿ ಎಂದು ಹೇಳಿಬಿಡುತ್ತೇನೆ'(161). 'ವಾಯು ಬಂದಾಗ ಹಿಂದಕ್ಕೆ ಬಾಗಿದರೆ ಹಿಮ್ವಾಯು, ಮುಂದಕ್ಕೆ ಬಾಗಿದರೆ ಮುಮ್ವಾಯು ಮತ್ತು ನರಗಳ ಸೆಳೆತದಿಂದ ಬರುವುದು ನರವಾಯು ಎಂದು ತಿಳಿಯುತ್ತೇನೆ'(74). 'ಮುಟ್ಟಾದ ವೇಳೆ ಪಿತ್ತವಿರುತ್ತದೆ. ಆ ವೇಳೆ ಸಂಭೋಗ ಮಾಡಿದ್ರೆ ತಲೆ ಭಾರವಾಗಿ ಬುದ್ಧಿ ನೆಟ್ಟಗಿರೊಲ್ಲ, ಇದು ಮೀರಿದರೆ ಹುಚ್ಚು ಹಿಡಿಯುತ್ತೆ. ಜೊತೆಗೆ ಧನುರ್ವಾಯೂ ಬಂದು ಬಟ್ಟೆ ಕಡಿಯೋದು, ಮಣ್ಣುತಿನ್ನೋದು ಮಾಡ್ತಾ ಹುಚ್ಚರಾಗ್ತಾರೆ' (24), 'ಕೈ ಹಿಡಿಕೆ ಹಿಡಿದು ಸೆಟೆದು ಬಿಟ್ರೆ ಅದು ಮಕ್ಕಳ ಸೆಟರೋಗ'(179), 'ಗಾಳಿಸೋಕಿದ್ದರೆ ಮತ್ತು ಚಿಂತೆಯಿಟ್ಟುಗೊಂಡಿದ್ದರೂ ಎದೆಹಾಲು ಕಡಿಮೆಯಾಗ್ತವೆ'(72), 'ಶೀತದಿಂದ ಮತ್ತು ಸಕ್ಕರೆಯನ್ನು ಜಾಸ್ತಿ ತಿಂದಾಗ ಲಾಳ್‌ಸಂಕೋಲೆ ಬರ್ತವೆ'(131), 'ಬಾಣಂತಿ ಮತ್ತು ಮಗುವಿಗೆ ಸ್ನಾನ ಮಾಡಿಸುವಾಗ ತಣ್ಣೀರು ಮತ್ತು ಬಿಸಿನೀರನ್ನು ಬೆರಸಬಾರದು. ಬೆರೆಸಿದರೆ ನೆಗಡಿ, ಜ್ವರ ಬರುತ್ತವೆ. ಬಿಸಿನೀರು ಸ್ವಲ್ಪ ಆರಿದ ಮೇಲೆ ಸ್ನಾನ ಮಾಡಿಸಿದರೆ ನೆಗಡಿ, ಜ್ವರ ಬರೊಲ್ಲ'(91), 'ಟಮಟೋ ಹಣ್ಣು ತಿನ್ನುವುದರಿಂದಲೇ ಸಕ್ಕರೆ ಕಾಯಿಲೆ ಬರೋದು ಅಂತ ಪ್ರೂ ಮಾಡ್ತೇನೆ'(197), 'ಮಗು ಗರ್ಭದೊಳಗೆ ಇದ್ದಾಗ ನಾಲ್ಕು ಅಥವಾ ಆರನೆಯ ತಿಂಗಳಲ್ಲಿ ಕ್ಯಾಮರೆ ಬರುತ್ತದೆ. ಇದರಿಂದ ಮುಖ ದಪ್ಪವಾಗಿ ಯಾವುದೇ ಅಂಗ ವಿಕಾರವಾಗಬಹುದು'(94).

ಪಶುರೋಗದ ಒಂದೆರಡು ಉದಾಹರಣೆಗಳು: 'ಕಲ್ಲಿನ ಮೇಲೆ ಕಾಲಿಟ್ಟಾಗ ನಮಗೆ ಉಳುಕದಿಲ್ವರ ಆ ನಮೂನಿ ದನಗಳಿಗೂ ಆಗಿರುತ್ತೆ. ಆಗ ದನದ ಗುಂಡಿಗೆಯ ಪಕ್ಕ ಕಣ್ಣುಬಿಡುತ್ತೆ (ಕುಳಿಬೀಳುತ್ತದೆ) ಇದನ್ನು ಮುಳುಬಿಡುವುದು ಎನ್ನುತ್ತೇವೆ' (145), 'ಹುಳು ಮುಟ್ಟಿದಾಗ ಕಿವಿ ದಪ್ಪ ಆಗಿ ಬೆಚ್ಚಗಿರ್ತವೆ. ಮೈಯಲ್ಲಿ ದಂದೆ ಬಂದಿರ್ತವೆ' (177), 'ದನ ಕುರಿ-ಮೇಕೆಗಳ ಹೊಟ್ಟೆಯಲ್ಲಿನ ಮೇವು ದವಡೆಗೆ ಬಂದು ಅಲ್ಲೇ ಕುಳಿತು ಕೊಂಡಾಗ ಕರಸ್‌ಬಂದಿದೆ ಎಂದರ್ಥ, ಆಗ ದನ, ಕುರಿ ಮೇತ್ತಗಾಗ್ತವೆ'(40).

ಈ ಮೇಲಿನ ಉದಾರಣೆಗಳು ವೈದ್ಯರ ರೋಗ ನಿದಾನವನ್ನೂ ಮತ್ತು ರೋಗದ ಕಾರಣಗಳನ್ನೂ ತಿಳಿಸುತ್ತವೆ. ವೈದ್ಯರು ರೋಗಿಯ ಬಾಹ್ಯಲಕ್ಷಣಗಳು ಮತ್ತು ಇತರ ಮೂಲಗಳಿಂದ ರೋಗ ಯಾವುದೆಂದು ಅರಿಯುವ ಪ್ರಕ್ರಿಯೆಯನ್ನು ಇಲ್ಲಿ ಕಾಣಬಹುದಾಗಿದೆ. ಈಗ ರೋಗನಿದಾನದ ವಿವಿಧ ಬಗೆಗಳನ್ನು ಈ ಕೆಳಗಿನಂತೆ ವಿಭಾಗಿಸಿಕೊಂಡು ವಿಶ್ಲೇಷಿಸಲಾಗಿದೆ.

ಅ) ನಾಡೀ ಪರೀಕ್ಷೆ

ರೋಗ ನಿದಾನಗಳಲ್ಲಿ ನಾಡೀ ಪರೀಕ್ಷೆಯೂ ಒಂದಾಗಿದೆ. ಅನುಭವ ಇದರಲ್ಲಿ ಮುಖ್ಯವಾಗುತ್ತದೆ. ಅದರ ಕಲಿಕೆ ಗುರುಮುಖೇನ ನಡೆಯಬೇಕಾಗುತ್ತದೆ. ಅಂದರೆ ಅನುಭವಿಗಳ ಮಾರ್ಗದರ್ಶನ ನಾಡೀ ವಿದ್ಯೆಯ ಕಲಿಕೆಯಲ್ಲಿ ಹೆಚ್ಚಿನ ಸಹಕಾರಿಯಾಗುತ್ತದೆ. ಈ ಕುರಿತು ತಿರುಕರು ಹೀಗೆ ಹೇಳುತ್ತಾರೆ: "ಇದೊಂದು ದೊಡ್ಡ ಅನುಭವಶಾಸ್ತ್ರ. ಇದು ಬರೆಯುವಷ್ಟು, ಹೇಳುವಷ್ಟು ಸುಲಭವಾದುದಲ್ಲ. ಸಾಧನೆಯಿಂದ ಅನುಭವದಿಂದಲೇ ತಿಳಿಯತಕ್ಕಂತಹುದು. ಒಂದು ಪಿಟೀಲಿನಲ್ಲಿ(ವಾಯಲಿನ್)ರುವ ನಾಲ್ಕೇತಂತಿಗಳಿಂದ ಒಬ್ಬ ಚತುರ ಕಲಾವಿದ ನಾನ್ನೂರು ರಾಗಗಳನ್ನೇ ನುಡಿಸಬಲ್ಲ. ಅದರಂತೆಯೇ ಕೈಯಲ್ಲಿಯ ಒಂದೇ ಒಂದು ನಾಡಿಯಿಂದ ಒಬ್ಬ ತಜ್ಞ ವೈದ್ಯ ನಾನ್ನೂರು ರೋಗಗಳನ್ನೂ ನಿರ್ಧರಿಸಬಲ್ಲ."[7] ಈ ಮಾತುಗಳು ಕೇವಲ ಬೋಧನೆಯಾಗಿರದೇ ಅನುಭವಿ ವೈದ್ಯರೊಬ್ಬರ ಅನುಭವದ ನುಡಿಗಳಾಗಿವೆ. "ವಚನಕಾರ ವೈದ್ಯ ಸಂಗಣ್ಣನೆಂಬಾತ ತನ್ನ ವಚನಗಳಲ್ಲಿ ವಿವರಿಸುವ ನಾಡೀ ಪ್ರಕಾರ ಮತ್ತು ವಿವರ ಅದ್ಭುತ. ಪ್ರಾಚೀನ ಸಂಸ್ಕೃತ ಗ್ರಂಥಗಳಲ್ಲಿಲ್ಲದ ಆ ಮಾಹಿತಿಯ ಮೂಲ ತಿಳಿಯದು. ಪ್ರಾಯಶಃ ಹದಿನಾಲ್ಕನೇ ಶತಮಾನದಲ್ಲಿ ವೈದ್ಯಪರಂಪರೆಯಲ್ಲಿ ಬಹು ಪ್ರಚಲಿತವಾಗಿದ್ದ ನಾಡೀ ವಿಜ್ಞಾನವನ್ನು ಆತ ಉಲ್ಲೇಖಿಸಿರುವುದೆಂದು ತೋರುತ್ತದೆ"[8] ವೈದ್ಯ ಸಂಗಣ್ಣ ತನ್ನ ವಚನದಲ್ಲಿ 28 ಬಗೆಯ ನಾಡಿಗಳನ್ನು ಪ್ರಸ್ತಾಪಿಸಿದ್ದಾನೆ. ಅವೆಲ್ಲವೂ ಅಂದು ಪ್ರಚಲಿತದಲ್ಲಿ ಇದ್ದಂತಹವು ಎಂಬ ಅಭಿಪ್ರಾಯ ಜನಪದರ ನಾಡೀ ಜ್ಞಾನವನ್ನು ಹೇಳುವಂತಹುದಾಗಿದೆ. ಜನಪದ ವೈದ್ಯರ ನಾಡಿ ವಿಶೇಷವನ್ನು ಅವರ ಮಾತುಗಳಲ್ಲೇ ನೋಡಿವುದಾದರೆ, 'ನಾಡಿಯಲ್ಲಿ ಎದುರು ಗುಣ, ನೀತಿಗುಣ ಮತ್ತು ಸದ್ಗುಣ ಎಂದಿದೆ. ಬೆಳಿಗ್ಗೆ ಸೂರ್ಯ ಉದಯಿಸಿ ಹನ್ನೊಂದು ಗಂಟೆಯೊಳಗೆ ನಾಡಿ ನೋಡಬೇಕು. ಅದರ ನಂತರ ನೋಡಬಾರದು. ನೋಡಿದರೂ ಏನೆಂಬುದನ್ನು ಹೇಳಬಾರದು. ಬೆಳಿಗ್ಗೆ ಹನ್ನೊಂದು ಗಂಟೆಯೊಳಗೆ ನಾಡಿ ಪರೀಕ್ಷೆ ಮಾಡಿದಾಗ ದೇಹದ ಎಲ್ಲಾ

ಪರಿಸ್ಥಿತಿಯನ್ನೂ ಹೇಳಬಹುದು'(24), 'ನಾಡಿಯಲ್ಲಿ ನರನಾಡಿ ಮತ್ತು ಭೂತನಾಡಿ ಎಂಬುವ ಎರಡು ವಿಧಗಳಿವೆ. ನರನಾಡಿ: ಈ ನಾಡಿ ಹೆಚ್ಚು ಕಡಿಮೆ ಹೊಡೆದುಕೊಳ್ಳುತ್ತಿದ್ದರೆ ಕಾಯಿಲೆ ದೇಹದಲ್ಲಿ ಹುಟ್ಟಿದ್ದೆಂದು ತಿರ್ಮಾನಿಸುತ್ತೇನೆ. ಭೂತನಾಡಿ: ಇದು ಹೆಚ್ಚು ಕಡಿಮೆ ಹೊಡೆದುಕೊಳ್ಳುತ್ತಿದ್ದರೆ ಗ್ರಹಚೇಷ್ಟೆ, ಭೂಮಿರಾವು ಅಥವಾ ಎಲ್ಲಿಯೋ ಹೆದರಿದ್ದಾನೆ ಎಂದು ತಿಳಿಯುತ್ತೇನೆ'(148), 'ಕೈಯಲ್ಲಿನ ಮೂರು ನಾಡಿಗಳಿಂದ ಯಾವ ದೋಷವಿದೆಯೆಂದು ಪರೀಕ್ಷಿಸುತ್ತೇನೆ. ನಾಡಿಯ ವೇಗ ವ್ಯತ್ಯಾಸವಾಗಿದ್ದರೆ ಏನೋ ಸಮಸ್ಯೆ ಇದೆ ಎಂದು ತಿಳಿಯುತ್ತೇನೆ'(168), ಈ ಮೂರು ಜನರಲ್ಲಿ ನಾಡಿನೋಡುವ ಕ್ರಮ ಭಿನ್ನವಾಗಿದೆ. ಹಾಗೆಯೇ ಅವರ ಅಭಿಪ್ರಾಯದಲ್ಲೂ ವೈವಿಧ್ಯತೆಯಿದೆ.

ಒಂದು ಕಾಲದಲ್ಲಿ ಜನಪದ ವೈದ್ಯದಲ್ಲಿ ನಾಡೀ ನೋಡಿ ರೋಗ ನಿಶ್ಚಯಿಸುವವರು ಹೆಚ್ಚಿನ ಸಂಖ್ಯೆಯಲ್ಲಿದ್ದಿರಬಹುದು. ಸದ್ಯದ ಪರಿಸ್ಥಿತಿಯಲ್ಲಿ ನಾಡೀ ನೊಡುವವರು ಅತಿ ಕಡಿಮೆ ಸಂಖ್ಯೆಯಲ್ಲಿದ್ದಾರೆ ಇದಕ್ಕೆ ಕಾರಣಗಳು ಹಲವಾರು ಇರಬಹುದು. ಗಿಡಮೂಲಿಕೆಗಳ ವೈದ್ಯೋಪಚಾರವನ್ನು ಹೇಗೋ ಕಲಿತುಬಿಡುತ್ತಾರೆ. ಆದರೆ ನಾಡೀ ಹಿಡಿಯುವುದನ್ನು ಶ್ರದ್ಧೆ ಮತ್ತು ಏಕಾಗ್ರತೆಯಿಂದ ಕಲಿಯಬೇಕಾಗುತ್ತದೆ. ಈ ಕಾರಣದಿಂದಾಗಿ ಇದರ ಕಲಿಕೆ ಕುಂಠಿತವಾಗಿರಬಹುದೇ? ಮತ್ತು ಮುಂದಿನ ದಿನಗಳಲ್ಲಿ ನಾಡೀ ನೋಡುವವರು ಅತಿವಿರಳವಾಗಲೂ ಬಹುದು. ಒಂದು ವೇಳೆ ಕಣ್ಮರೆಯಾಗುವ ಸಂದರ್ಭವೂ ಎದುರಾಗಬಹುದು.

ಆ) ಅವಲೋಕನ ಮತ್ತು ಆಲಿಸುವಿಕೆ

ಅವಲೋಕನ ಮತ್ತು ಆಲಿಸುವಿಕೆಗಳೆರಡೂ ಒಟ್ಟಾಗಿಯೇ ಕಾರ್ಯನಿರ್ವಹಿಸುತ್ತವೆ. ವೈದ್ಯರ ವೈಶಿಷ್ಟ್ಯವನ್ನು ಅರಿಯುವುದಕ್ಕಾಗಿ ಈ ವಿಭಾಗವನ್ನು ಮಾಡಿಕೊಳ್ಳಲಾಗಿದೆ. ಇಲ್ಲಿಯೂ ಸಹ ವೈದ್ಯನ ಅನುಭವವೇ ಮುಖ್ಯವಾಗುತ್ತದೆ. ವೈದ್ಯನ ಅನುಭವದ ಕಣ್ಣು ಮತ್ತು ಕಿವಿಗಳು ರೋಗವನ್ನು ಗುರುತಿಸುವ ಕಾರ್ಯವನ್ನು ಮಾಡುತ್ತವೆ. ಬಹುಶಃ ಸಮಾಜ ಸೇವಕನಾದ ವೈದ್ಯನ ಒಳಗಣ್ಣು ಸಮಾಜದ ಎಲ್ಲಾ ಜೀವಿಗಳ ದನಿಗಳನ್ನು ಮತ್ತು ಅವುಗಳ ಚಟುವಟಿಕೆಗಳನ್ನು ಸದಾ ಸಮೀಕ್ಷೆ ಮಾಡುತ್ತಿರಬಹುದು. ಯಾಕೆಂದರೆ ವೈದ್ಯರೇ ಹಲವು ಸಂದರ್ಭಗಳಲ್ಲಿ ಅನಾಮಿಕ ವ್ಯಕ್ತಿಯ ಸಮಸ್ಯೆಯನ್ನು ನೋಡಿ ಇಲ್ಲವೆ ಆಲಿಸಿ ಔಷಧಿಯನ್ನು ಅರೆದುಕೊಟ್ಟು ಬಂದಿರುವ ಪ್ರಸಂಗಗಳಿವೆ.

ಇಂಥ ಪ್ರಸಂಗಕ್ಕೆ ಉದಾಹರಣೆ, ಬಿಡುವಿಲ್ಲದೆ ಅಳುವ ಮಗುವಿನ ದನಿಯನ್ನು ಆಲಿಸುವುದರ ಜೊತೆಗೆ ಮನೆಮಂದಿಯೆಲ್ಲ ಸರದಿಯಂತೆ ಮಗುವನ್ನು ಎತ್ತಿಕೊಂಡು ಸಂತೈಸುತ್ತ ಮನೆಯ ಒಳಕ್ಕೆ ಮತ್ತು ಹೊರಕ್ಕೆ ತಿರುಗಾಡುವುದನ್ನು ಮನೆಯ ಮುಂದಿನ ರಸ್ತೆಬದಿಯಲ್ಲಿ ನಿಂತಿದ್ದ ವೈದ್ಯನು ಅವಲೋಕಿಸಿದ. ಆಗ ಇದು ಅಳ್ಳಿಕಾಯಿಲೆಯೇ ಇರಬಹುದೆಂದು ಊಹಿಸಿ, ಸಮೀಪದ ತೋಟದಿಂದ ಉಪ್ಪಿನ ಬಳ್ಳಿಯನ್ನು ಕಿತ್ತು ತಂದನು. ನಂತರ ಅದರಿಂದ ಔಷಧಿಯನ್ನು ಅರೆದು ಆ ಮನೆಯವರಿಗೆ ವಿಶ್ವಾಸ ಮೂಡಿಸಲು ತಾನು ಮೊದಲು ಸೇವಿಸಿ ಬಳಿಕ ಮಗುವಿಗೆ ಸೇವನೆಮಾಡಲು ಕೊಟ್ಟನು. ಅರ್ಧತಾಸಿನೊಳಗೆ ರೋಗದ ತೀವ್ರತೆ ಕಡಿಮೆಯಾಗಿ ಮಗು ನೆಮ್ಮದಿಯಿಂದ ಹಾಲು ಕುಡಿಯಿತು. ಆಸ್ಪತ್ರೆಗೆ ಹೋಗಿ ಬಂದಿದ್ದರೂ ಕಾಯಿಲೆ ಸುಧಾರಣೆ ಕಂಡುಬಂದಿರಲಿಲ್ಲ. ಅಂತಹುದು ಈ ಆಗುಂತಕನಿಂದ ಗುಣವಾಗಿದ್ದನ್ನು ಕಂಡ ಮನೆಯವರು ವೈದ್ಯನ ಮೇಲೆ ಪ್ರೀತಿಯ ಸುರಿಮಳೆಗೆರೆದರು. ಪ್ರಾರಂಭದಲ್ಲಿ ಅಜ್ಜನನ್ನು ಅನುಮಾನ ಮತ್ತು ಕೀಳುಮಟ್ಟದಲ್ಲಿ ಕಂಡಿದ್ದಕ್ಕಾಗಿ ತಮ್ಮ ಶ್ರೀಮಂತಿಕೆಗೆ ತಮ್ಮ ವ್ಯಕ್ತಿತ್ವಕ್ಕೆ ತಾವೇ ಪಶ್ಚಾತಾಪ ಪಟ್ಟರು(122).

ಸುಶ್ರುತ ಸಂಹಿತೆಯಲ್ಲಿ ಹೀಗೆ ಹೇಳಿದೆ "ಚತುರನಾದ ನಾವಿಕನು ನದಿಯ ಹುಟ್ಟುಗಣೆ ಮರಗಳಿಲ್ಲದಿದ್ದರೂ ತಾನೊಬ್ಬನೇ ತೆಪ್ಪದಲ್ಲಿ ಕೂತ ಜನರನ್ನು ನದಿಯ ಆಚೆದೆಡಕ್ಕೆ ತಲುಪಿಸುತ್ತಾನೆ; ಅಂತೆಯೇ ಬುದ್ಧಿಶಾಲಿಯಾದ ವೈದ್ಯನು ರೋಗಿಗಳ ರೋಗಗಳನ್ನು ಸದಾ ಪರಿಹರಿಸುತ್ತಾನೆ"[9] [ವೈದ್ಯಸ್ತು ಗುಣವಾನೇಕಃ ತಾರೆಯೇದಾತುರಾನ್ ಸದಾ। ಪ್ಲವಂ ಪ್ರತಿತರೈರ್ಹೀನಂ ಕರ್ಣಧಾರ ಇವಾಂಭಸಿ॥] ಎಂಬ ಸುಶ್ರುತರ ಮಾತು ಜನಪದ ವೈದ್ಯರಿಗೆ ಹೆಚ್ಚು ಸಮೀಪವಾಗಿದೆ. ವೈದ್ಯರ ಈ ಬಗೆಯ ಸಂಸ್ಕಾರ ಪರಂಪರೆಯ ಮೂಲಕ ಸಾಗಿಬಂದಿರುವಂತಹುದಾಗಿದೆ. ಮೇಲಿನ ಘಟನೆಯನ್ನು ಒಂದು ಉದಾಹರಣೆಗಾಗಿ ಕೊಡಲಾಗಿದೆ. ಇಂಥ ಅಸಂಖ್ಯ ಪ್ರಸಂಗಗಳನ್ನು ಜನಪದ ವೈದ್ಯಪರಂಪರೆಯಲ್ಲಿ ಕಾಣಲು ಸಾಧ್ಯವಿದೆ.

ಅವಲೋಕನ : ಅವಲೋಕಿಸುವುದು ಎಂದರೆ ಸುಮ್ಮನೆ ನೋಡುವುದು ಎಂದು ಮೇಲು ನೋಟಕ್ಕೆ ಕಾಣಬಹುದಾದರೂ, ಹಾಗೇ ನೋಡುವುದರ ಹಿಂದೆ ಒಂದು ಕಾರಣವಿರುತ್ತದೆ ಹಾಗೂ ಅದರ ಪರಿಣಾಮದಲ್ಲೂ ವಿಶೇಷತೆಯಿರುತ್ತದೆ. ಆಯುರ್ವೇದದಲ್ಲಿ ದೇಹದ ವಿವಿಧ ಅಂಗಗಳಾದ ನಾಲಿಗೆಯ ಪರೀಕ್ಷೆ, ನೇತ್ರ ಪರೀಕ್ಷೆ, ಮಲ-ಮೂತ್ರ ಪರೀಕ್ಷೆ - ಈ ಮುಂತಾದವುಗಳಲ್ಲಿನ

ವ್ಯತ್ಯಾಸವನ್ನು ಗಮನಿಸಿ ರೋಗ ನಿಶ್ಚಯ ಮಾಡುತ್ತಾರೆ. ಹಾಗೆಯೇ "ಸ್ವರೂಪ ಪರೀಕ್ಷೆಯಲ್ಲಿ : ರೋಗಿಯು ನಡೆಯುವ, ಕುಳಿತುಕೊಳ್ಳುವ, ಮಲಗುವ, ಮಾತನಾಡುವ, ನೋಡುವ ಈ ಎಲ್ಲ ಕ್ರಿಯೆಗಳನ್ನು ಸೂಕ್ಷ್ಮವಾಗಿ ನೋಡಲಾಗುತ್ತದೆ. ಕಾಂತಿ ಹೀನವಾದ ಕಣ್ಣು, ನಿಸ್ತೇಜವಾದ ಮುಖ, ಕಳೆಗುಂದಿದ ಮೈಚರ್ಮ ಇವೆಲ್ಲವುಗಳನ್ನು ಅವಲೋಕಿಸಿ ರೋಗ ನಿದಾನವನ್ನು ಮಾಡಲಾಗುತ್ತದೆ."[10] ಜನಪದ ವೈದ್ಯರು ಹೀಗೆ ವಿವಿಧ ಅಂಗಗಳನ್ನು ಶಿಸ್ತುಬದ್ಧವಾದ ಕ್ರಮದಲ್ಲಿ ಅವಲೋಕಿಸುತ್ತಾರೆ ಎಂದು ಪೂರ್ಣ ಪ್ರಮಾಣದಲ್ಲಿ ಭಾವಿಸಲು ಅವಕಾಶವಿಲ್ಲದಿದ್ದರೂ ಅವರದೇ ಆದ ಅವಲೋಕನ ಕ್ರಮವನ್ನು ರೂಢಿಸಿಕೊಂಡಿರುತ್ತಾರೆ ಎಂದು ಹೇಳಬಹುದು.

ಹೇಗೆಂದರೆ ಸಿಂಹಿಣಿ ತನ್ನ ಮರಿಗಳನ್ನು ಆಡಲು ಬಿಟ್ಟು ಅರೆನಿದ್ರೆಯಲ್ಲಿರುವ ಯೋಗಿಯಂತೆ ಮೌನವಾಗಿ ಅವಲೋಕಿಸುತ್ತಿರುತ್ತದೆ. ಮರಿಗಳಿಗೇನಾದರು ಆಪತ್ತು ಒದಗುವ ಸೂಚನೆ ಕಂಡಕೂಡಲೇ ಜಾಗೃತವಾಗುತ್ತದೆ. ಹಾಗೆಯೇ ಜನರ ಆರೋಗ್ಯದ ಬಗ್ಗೆ ಕಾಳಜಿಯುಳ್ಳ ಜನಪದ ವೈದ್ಯನು ಸದಾ ಮೌನಿಯಂತಿದ್ದರೂ ಸಮಸ್ಯೆ ಕಂಡಾಗ ಕಾರ್ಯ ಪ್ರವೃತ್ತನಾಗುತ್ತಾನೆ. ಹಳ್ಳಿಗಳಲ್ಲಿರುವ ನಿರಾಡಂಭರ ವೈದ್ಯರೋ ಇಲ್ಲವೆ ಕಾಡಿನ ಸಂತರೋ ಜನರ ಸಂಕಷ್ಟವನ್ನು ಕಂಡು ಅದರ ಪರಿಹಾರಕ್ಕೆ ಮುಂದಾಗುವುದನ್ನು ಇತಿಹಾಸ ಪುರಾಣ ಮತ್ತು ಕಾವ್ಯಗಳಲ್ಲಿ ಓದಿದ್ದೇವೆ.

ಅವಲೋಕನವನ್ನು ಕುರಿತು ಪ್ರಾಚೀನರ ಅಭಿಪ್ರಾಯ ಹೀಗಿದೆ: "ನಿಜವಾದ ವೈದ್ಯಕೀಯ ಅಂದರೆ ಅವಲೋಕನ, ಅನುಭವ, ಗುರುಹಿರಿಯರು ಮತ್ತು ಅನುಭವಸ್ಥರ ಸಲಹೆಗಳಿಂದ ಕಾರ್ಯವೆಸಗುವ ಕಲಾ ಕೌಶಲತೆಯುಳ್ಳ ವಿಜ್ಞಾನ"[11] ವೆಂಬುದು ಚರಕ ಮಹರ್ಷಿಯ ಭಾವನೆಯಾಗಿತ್ತು. ಗ್ರೀಸ್ ದೇಶದ ವೈದ್ಯಶಾಸ್ತ್ರದ ಪಿತಾಮಹನಾದ ಹಿಪೋಕ್ರೇಟಿಸ್ ಮಾಡಿದ್ದ ಸಲಹೆಯನ್ನಿಲ್ಲಿ ಸ್ಮರಿಸಬಹುದು. "ರೋಗಿಗಳನ್ನು ಚೆನ್ನಾಗಿ ಅವಲೋಕಿಸಿ ವೈದ್ಯಕೀಯವನ್ನು ವೃದ್ಧಿಮಾಡಬೇಕೇ ವಿನಾ ಅದನ್ನು ಸುಮ್ಮನೆ ರೋಗಿಗಳ ಮೇಲೆ ಹೇರುವುದಲ್ಲ".[12] ಮೇಲಿನ ಸಂಗತಿಗಳು ಅವಲೋಕನದ ಮೂಲಕ ರೋಗಿಯನ್ನು ಪರಿವೀಕ್ಷಿಸುವುದರಿಂದಾಗುವ ಅನುಕೂಲಗಳನ್ನು ಹೇಳುತ್ತವೆ. ಇಂತಹ ಅವಲೋಕಿಸುವ ಗುಣವನ್ನು ಎಲ್ಲಾ ವೈದ್ಯರಿಂದಲೂ ನಿರೀಕ್ಷಿಸಲು ಸಾಧ್ಯವಾಗುವುದಿಲ್ಲ. ಯಾಕೆಂದರೆ ಪ್ರತಿಯೊಬ್ಬರಿಗೂ ಅವರಿಗೇ ವಿಶಿಷ್ಟವೆನಿಸುವ ಕೌಶಲ್ಯಗಳಿರುತ್ತವೆ. ಆ ಮೂಲಕ ರೋಗವನ್ನು ತಿಳಿಯುವ ಪ್ರಯತ್ನವನ್ನು ಮಾಡುತ್ತಾರೆ.

ಜನಪದ ವೈದ್ಯರಲ್ಲಿ ಅವಲೋಕನ ಕ್ರಮ ಎಷ್ಟು ಪ್ರಮಾಣದಲ್ಲಿದೆ, ಎಲ್ಲರಲ್ಲೂ ಅದನ್ನು ಕಾಣಲು ಸಾಧ್ಯವಿದೆಯೇ ಎಂದು ಗುಣಿಸುವುದಕ್ಕಿಂತ ಅದೊಂದು ಕ್ರಮ ಎಂಬ ಅರಿವಿಲ್ಲದಯೇ ಅದನ್ನು ಬಳಸುವವರನ್ನು ಕಾಣಬಹುದಾಗಿದೆ. ವೈದ್ಯರ ಅವಲೋಕನ ವೈಖರಿಗಳು ಈ ಕೆಳಗಿನಂತಿವೆ.

'ಕಣ್ಣು ಬೆಳ್ಳಗಾಗಿ ದವಡೆ ಕೈಕಾಲುಗಳು ಊದಿಕೊಂಡರೆ ಅದು ಊದು ಕಾಮಾಲೆ ಎಂದು ತಿಳಿಯುತ್ತೇನೆ'(7), ಬಂಧುಗಳ ಮನೆಗೆ ಯಾವುದೋ ಕಾರ್ಯನಿಮಿತ್ತವಾಗಿ ಹೋಗಿದ್ದ ವೈದ್ಯನು, ಅನಿರೀಕ್ಷಿತವಾಗಿ ಇಸುಬು ತುಂಬಿರುವ ಕಾಲುಗಳನ್ನು ಅವಲೋಕಿಸಿದನು. ಪರಿಣಾಮವಾಗಿ ಆ ಸಂದರ್ಭದಲ್ಲಿಯೇ ಔಷಧಿಯನ್ನು ಪ್ರಯೋಗಿಸಲು ಮುಂದಾಗುತ್ತಾನೆ. 'ನಮ್ಮ ಅಣ್ಣನ ಮಗಳ ಗಂಡನೊಬ್ಬ ಕಾಲೇಜ್ ಲಕ್ಚರ್ ಆಗ್ಯಾನೆ, ನಾನು ಅವರ ಮನೆಗೆ ಹೋದಾಗಲ್ಲೆಲ್ಲ ಆತ ಯಾವಾಗ್ಲೂ ಪ್ಯಾಂಟ್ ಹಾಕ್ಕೊಂಡಿರುವುದನ್ನು ನೋಡುತ್ತಿದ್ದೆ. ಒಂದು ಸಾರಿ ಮಗಳಿಗೆ 'ಏನಮ್ಮ ನಿನ್ನ ಗಂಡ ಇಪ್ಪತ್ನಾಲಕ್ಕು ಗಂಟೆನೂ ಪ್ಯಾಂಟ್ ತೊಟ್ಗೊಂಡಿರ್ತಾನ! ಇಲ್ಲ ಮಾವನೋರು ಬಂದಾರೆಂದು ತೊಟ್ಟುಕೋಳ್ತಾನ' ಎಂದೆ. ಆಗ 'ಅವರ ಎರಡೂ ಕಾಲುಗಳ ತುಂಬ ಇಸುಬಾಗಿದೆ' ಎಂದ ಮಗಳ ಮಾತಿನಿಂದ ಅಯ್ಯೋ ಎನಿಸಿತು. ಆ ವೇಳೆ ಮಗಳಿಗೆ 'ನೋಡಮ್ಮ ನಾನು ಒಂದು ಗಿಡ ಕೊಡ್ತಿನಿ. ನಿನ್ನ ಗಂಡ ಹಾಕಿಸಿಕೊಳ್ತಾನ ಕೇಳು' ಎಂದೆ. ಅದಕ್ಕೆ ಅಳಿಯ ಆಗಲಿ ಎಂದು ಒಪ್ಪಿದರು. ಅಂದೇ ಆ ಊರಿನ ಹೊಲಗಳಲ್ಲಿ ಸುತ್ತಾಡಿ ಚಿತ್ರಮೂಲದ ಬೇರಿನ ತೊಗಟೆಯನ್ನು ತಂದು ಅದರೊಂದಿಗೆ ಮೆಣಸು, ಬೆಳ್ಳುಳ್ಳಿ, ಕರೆಕಾಚನ್ನು ಸೇರಿಸಿ ಅರೆದು ನಿಂಬೆಯ ಹುಳಿಯಲ್ಲಿ ಹಚ್ಚಿದೆ.' ನಂತರ ಇಪ್ಪತ್ತು ದಿನಗಳಲ್ಲಿ ಕಾಲುಗಳ ಇಸುಬು ಸಂಪೂರ್ಣ ಗುಣವಾಯಿತು'(164).

ದಾರಿಯಲ್ಲಿ ಕುಂಟುತ್ತಾ ಹೋಗುತ್ತಿದ್ದ ಎತ್ತನ್ನು ಅವಲೋಕಿಸಿದ ಆಗುಂತಕ ವ್ಯಕ್ತಿ, ಅದರ ಕಾರಣವನ್ನು ಅರಿತು ಆ ಕ್ಷಣದಲ್ಲಿಯೇ ಚಿಕಿತ್ಸೆಯನ್ನು ಕೈಗೊಳ್ಳುತ್ತಾನೆ "ಒಮ್ಮೆ ಎತ್ತಿನ ಗಾಡಿಯನ್ನು ಹೊಡೆದುಕೊಂಡು ಪಕ್ಕದ ಊರಿನಲ್ಲಿ ಹೋಗುತ್ತಿದ್ದೆ. ಆ ವೇಳೆ ಒಂದು ಎತ್ತು ಕುಂಟುತ್ತಾ ಗಾಡಿಯನ್ನು ಎಳೆಯುತ್ತಿತ್ತು. ಅದನ್ನು ಅವಲೋಕಿಸಿದ ಆ ಊರಿನ ವ್ಯಕ್ತಿಯೊಬ್ಬನು 'ಸ್ವಲ್ಪ ಗಾಡಿ ನಿಲ್ಸಿ' ಎಂದನು. 'ಎತ್ತು ಮುಳು ಬಿಟ್ಟಿದೆ ಅದಕ್ಕೆ ಟಂಗಟಿಕಡ್ಡಿ ಕಟ್ಟಬೇಕು' ಎಂದು ಅಲ್ಲೇ ಸಮೀಪದ ಕಣವೊಂದರಲ್ಲಿ ಹೋಗಿ ಒಣಟಂಗಟಿ ಕಡ್ಡಿಯೊಂದನ್ನು ತಂದು ಮುಳುಬಿಟ್ಟಿರುವ ಕಾಲನ್ನು ಬಿಟ್ಟು ಅದರ ಪಕ್ಕದ ಕಾಲಿನ ಗೊರಸಿನ ಮಧ್ಯ ಆ ಕಡ್ಡಿಯನ್ನಿಟ್ಟು ಹುರಿಸೆಯಿಂದ ಕಟ್ಟಿದನು. ನಂತರ

ನೋವಿರುವ ಕಾಲಿಗೆ ಮೂರು ಸಾರಿ ಜಾಡಿಸಿ ಮೆಟ್ಟುಕಾಲಲ್ಲಿ ಹೊಡೆದು 'ಊರಿಗೆ ಹೋದ ಮೇಲೆ ಕಡ್ಡಿತಗಿಯಿರಿ' ಎಂದು ಸಲಹೆಯನ್ನು ಕೊಟ್ಟು ನಡಿ ಎಂದನು. ಸ್ವಲ್ಪ ದೂರ ಪ್ರಯಾಣದ ನಂತರ ಎತ್ತು ನೋವಿರುವ ಕಾಲನ್ನು ಊರತೊಡಗಿತು ಕಡ್ಡಿಕಟ್ಟಿರುವ ಕಾಲನ್ನು ಎತ್ತತೊಡಗಿತು ಅಂದರೆ ಕಡ್ಡಿ ಕಟ್ಟದ ಕಾಲಿನಿಂದ ಕುಂಟತೊಡಗಿತು. ಆಗ ಗಾಡಿಯನ್ನು ನಿಲ್ಲಿಸಿ ಕಡ್ಡಿಕಟ್ಟಿರುವುದು ಕಿತ್ತುಹಾಕಿದೆ. ಅಲ್ಲಿಗೆ ಎತ್ತಿನ ಮುಳುಬಿಟ್ಟಿರುವ ಸಮಸ್ಯೆ ಬಗೆಹರಿಯಿತು"(185).

ವೆಟರ್ನರಿ ಸರ್ಜನ್‌ಗಳಿಂದಲೂ ರೋಗವೇನೆಂಬುದನ್ನು ತಿಳಿಯಲು ಅಸಾಧ್ಯವಾಗಿರುವ ಸಂದರ್ಭದಲ್ಲಿ ಹಳ್ಳಿಯ ವೃದ್ಧವೈದ್ಯನೊಬ್ಬನು ನೋಟಮಾತ್ರದಿಂದಲೇ ರೋಗ ಯಾವುದೆಂಬುದನ್ನು ಕಂಡುಕೊಂಡು ಅದರ ಚಿಕಿತ್ಸೆಯನ್ನು ಕೈಗೊಳ್ಳುತ್ತಾನೆ 'ಹೊಸದುರ್ಗ ಸಮೀಪದ ಬಲ್ಲಾಳಸಮುದ್ರವೆಂಬ ಊರಿನ ನಾಯ್ಡು ಮನೆತನ ಎಂದರೆ ಮೂನ್ನೂರು ಎಕರೆ ಜಮೀನನ್ನು ಹೊಂದಿರುವಂಥದ್ದು. ಆ ಮನೆಯವರು ಬಹಳ ಜೋಪಾನವಾಗಿ ಎರಡು ಜೊತೆ ಹೋರಿಗಳನ್ನು ಸಾಕಿದ್ರು. ಆ ಹೋರಿಗಳಲ್ಲಿ ಒಂದು ದಿನದಿಂದ ದಿನಕ್ಕೆ ನೀರು, ಮೇವು ಬಿಟ್ಟು ವಿರಹ ಪ್ರೇಮಿಯಂತೆ ಸೊರಗುತ್ತಿತ್ತು. ಇದರ ಮರ್ಮವನ್ನು ಅರಿಯುವುದಕ್ಕಾಗಿ ನಾಯ್ಡು ಬೆಂಗಳೂರಿನಿಂದ ಇಬ್ಬರು ವೆಟರ್‌ನರಿ ಸರ್ಜನ್‌ಗಳನ್ನು ಕರೆಯಿಸಿದ. ಬಂದವರಿಬ್ಬರು ನಾಲ್ಕು ದಿನಗಳವರೆಗೆ ತಲೆಕೆಡಿಸಿಕೊಂಡು ಹೋರಿಯನ್ನು ಪರೀಕ್ಷಿಸಿದರೂ ಕಾಯಿಲೆ ಏನು ಎಂಬುದನ್ನು ತಿಳಿಯಲಾಗಲ್ಲಿಲ್ಲ. ಆಗ ಆಳು ಮಗನೊಬ್ಬ "ಸ್ವಾಮಿ...," "ಏನಯ್ಯ.." "ಅತ್ತಿಘಟ್ಟದಲ್ಲಿ ಒಬ್ಬ ಅಜ್ಜ ದನಗಳನ್ನು ಚನ್ನಾಗಿ ನೋಡ್ತಾನೆ ಸ್ವಾಮಿ". ನಾಲ್ಕುದಿನಗಳಿಂದ ದೊಡ್ಡ ಸರ್ಜನ್‌ಗಳ ಕೈಯಿಂದಲೇ ಏನೂ ಮಾಡಕಾಗಿಲ್ಲ ಎಂದ ಮೇಲೆ ಆ ಹಳ್ಳಿ ಮುದುಕ ಏನ್ ಮಾಡಿಯಾನು! ಎಂಬ ನಿರಾಸಕ್ತಿಯಿಂದ "ಹ್ಞು... ಕರ್ಸಿ" ಎಂಬ ಅಪ್ಪಣೆ ದೊರೆಯಿತು. ಅತ್ತಿಘಟ್ಟದ ಅಜ್ಜನಿಗೆ ನಡೆಯಲಾಗದಷ್ಟು ವಯಸ್ಸಾಗಿದ್ದ ಕಾರಣ ಆಳುಗಳು ಎತ್ತಿನ ಗಾಡಿಯಲ್ಲಿ ಅಜ್ಜನನ್ನು ಕರೆತಂದರು. ನಾಯ್ಡುಮುಂದೆ ಆಳುಗಳೊಂದಿಗೆ ಅಜ್ಜ ಬಂದು ನಿಂತನು. ಕಾಡುಫಕೀರನಂತಿದ್ದ ವೃದ್ಧನನ್ನು ನೋಡಿದ ನಾಯ್ಡು "ಏನಯ್ಯಾ, ನೋಡ್ತಿಯಾ ಹೋರೀಯ" ಎಂದಾಗ "ಹೌದು ಮಾ ಸ್ವಾಮಿ" ಎಂದ ಅಜ್ಜನು ಹೆಚ್ಚು ಮಾತಾಡುವ ಸ್ವಭಾವದವನಲ್ಲ; ಮಿತಭಾಷಿ. ನಂತರ ವಯಸ್ಸಿಗನುಗುಣವಾಗಿ ನಿಧಾನಕ್ಕೆ ಹೋರಿಯ ಕಡೆ ನಡೆದು ಹೋಗಿ ಹೋರಿಯನ್ನು ಅವಲೋಕಿಸಿ 'ಇದು ಸೂಜಿ ನುಂಗಿದೆ ಮಾ ಸ್ವಾಮಿ' (ಗಾಡಿಯ ಪಯಣದ ವೇಳೆ ಆಳುಗಳು ಹೋರಿಯ ಆರೋಗ್ಯ ಸ್ಥಿತಿಯನ್ನು ಕುರಿತು ಹೇಳಿರಬಹುದು), 'ಏನ್ ಮಾಡ್ತಿ ಅದಕ್ಕೆ'

'ಸೂಜಿ ಕರಗುವಂಥ ಔಷಧಿ ಕೊಡಬೇಕು ಸ್ವಾಮಿ'. ಯಜಮಾನರಿಂದ ಔಷಧಿ ಕೊಡಲು ಅನುಮತಿ ದೊರೆಯಿತು. ನಂತರ ಅಜ್ಜ ಸೂಜಕಲ್ಲು ತರಿಸಿ ಪುಡಿಮಾಡಿ ಬಾಳೆದಿಂಡಿನೊಳಗಿನ ಕಂದಿನ ರಸದಲ್ಲಿ ಕಲಸಿ ಗೊಟ್ಟದಲ್ಲಿ ಹೊಟ್ಟೆಗೆ ಕುಡಿಸಿದನು. ಔಷಧಿಯನ್ನು ಕೊಟ್ಟ ಮೂರು ದಿನಗಳಲ್ಲಿ ಹೊಟ್ಟೆಯಲ್ಲೋ ಗಂಟಲಲ್ಲೋ ಮೇವಿನ ಜೊತೆ ಒಳಸೇರಿದ್ದ ಸೂಜಿ ಕರಗಿ ಹೋಯಿತು. ಬಳಿಕ ಹೋರಿ ಗೆಲುವಾಗ ತೊಡಗಿತು. ಹೋರಿ ಗುಣವಾದ ಮೇಲೆ ನಾಯ್ಡು ಅಜ್ಜನನ್ನು ಮತ್ತೊಮ್ಮೆ ಕರೆಯಿಸಿ ಹಬ್ಬದೂಟ ಮಾಡಿಸಿ ಒಂದು ಜೊತೆ ಹೊಸಬಟ್ಟೆ ಕೊಟ್ಟು ಕಳುಹಿಸಿದನಂತೆ'(164).

ಮೊದಲಿನ ಎರಡು ಘಟನೆಗಳಲ್ಲಿ ಬಾಹ್ಯಚಿಹ್ನೆಗಳನ್ನು ಅವಲೋಕಿಸಿ ರೋಗ ಯಾವುದೆಂಬುದನ್ನು ವೈದ್ಯರು ಗುರುತಿಸುತ್ತಾರೆ. ಈ ಘಟನೆಗಳಲ್ಲಿ ವೈದ್ಯರು ಅನಿರೀಕ್ಷಿತವಾಗಿ ಸ್ವಇಚ್ಛೆಯಿಂದ ರೋಗದ ಇರುವಿಕೆಯನ್ನು ಕಂಡುಕೊಳ್ಳುತ್ತಾರೆ. ಅವುಗಳಿಗೆ ಔಷಧೋಪಚಾರವನ್ನೂ ಮಾಡುತ್ತಾರೆ. ಹಿಂದೆ ಹೇಳಿದಂತೆ, ವೈದ್ಯನ ಒಳಗಣ್ಣು ಸದಾ ಜಾಗೃತವಾಗಿರುತ್ತದೆ ಎಂಬುದಕ್ಕೆ ಈ ಎರಡು ಘಟನೆಗಳು ಉತ್ತಮ ಉದಾಹರಣೆಗಳಾಗಿವೆ. ರೋಗಿ ಯಾರಾದರೇನು ವೈದ್ಯಮಾಡುವುದು ನಮ್ಮ ಧರ್ಮವೆಂಬುದನ್ನು ಈ ಎರಡು ಘಟನೆಗಳು ಪ್ರತಿಪಾದಿಸುತ್ತವೆ. ಈ ಕಾರಣದಿಂದಾಗಿಯೇ ಜನಪದ ವೈದ್ಯವನ್ನು ಒಂದು ವೃತ್ತಿಯೆಂದು ನಿರ್ಧರಿಸಲು ಕಷ್ಟವಾಗುತ್ತದೆ. ಅದು ಸಕಲಜೀವಿಗಳ ಸೇವೆಯಲ್ಲಿ ಸಾರ್ಥಕತೆಯನ್ನು ಸಾಧಿಸುವ ಮಹೋನ್ನತಿಯನ್ನು ಹೊಂದಿರುವಂತಹುದು. ಅಂದರೆ ಅಲ್ಲಿ ಸೇವಾಗುಣ ಪ್ರಧಾನವೇ ಹೊರತು, ಉಳಿದಿದ್ದೆಲ್ಲವೂ ಗೌಣ. ಮೂರನೆಯ ಘಟನೆಯೂ ಸಹ ಅವಲೋಕನದ ಮಹತ್ವವನ್ನು ಹೇಳುತ್ತದೆ. ಈ ಬಗೆಯ ಅವಲೋಕನ ನಿಸ್ವಾರ್ಥತೆಯಿಂದ ಕೂಡಿದ ಸೇವೆಯಿಂದ ಸಿದ್ಧಿಸುವುದು.

ಜನಪದ ವೈದ್ಯರು ಎಲ್ಲಿಯೇ ಇರಲಿ ಮತ್ತು ಯಾವುದೇ ಕಾರ್ಯದಲ್ಲಿ ಮಗ್ನವಾಗಿರಲಿ ಅವರಿಂದ ಆ ಸಮಸ್ಯೆ ಪರಿಹಾರ ಆಗುವುದೆಂದರೆ ಹಿಂದು ಮುಂದು ನೋಡದೆ ಕಾರ್ಯಪ್ರವೃತ್ತರಾಗುತ್ತಾರೆ ಎನ್ನುವುದು ಮೇಲಿನ ಘಟನೆಗಳಿಂದ ತಿಳಿದು ಬರುತ್ತದೆ.

ಆಲಿಸುವಿಕೆ : ಆಯುರ್ವೇದದಲ್ಲಿ ರೋಗಿಯ ಧ್ವನಿ ಪರೀಕ್ಷೆಯನ್ನು, ರೋಗಿಯ ಮಾತಿನ ಉಚ್ಚಾರಣೆಯನ್ನೂ ಶಬ್ದವನ್ನೂ ಆಲಿಸುವುದರ ಮೂಲಕ ಮಾಡಬೇಕೆಂದು ಹೇಳಲಾಗಿದೆ. ಜನಪದರಲ್ಲಿ ಆಲಿಸುವಿಕೆ ಅವಲೋಕನದ ಮುಂದಿನ ಭಾಗದಂತೆ ಕೆಲಸ ಮಾಡುತ್ತದೆ. ಅಂದರೆ ಅವಲೋಕನದ

ನಂತರ ಸ್ಪಷ್ಟತೆಗಾಗಿ ಪ್ರಶ್ನಿಸುವುದರ ಮೂಲಕ ರೋಗಿಯ ಮಾತುಗಳನ್ನು ತಾಳ್ಮೆಯಿಂದ ಆಲಿಸುತ್ತಾರೆ. ರೋಗ ನಿದಾನಕ್ಕೆ ಜನಪದ ವೈದ್ಯರು ಅನುಸರಿಸುವ ವಿಧಾನಗಳಲ್ಲಿ ಇದೂ ಒಂದಾಗಿದೆ. ಕೆಲವು ವೇಳೆ ರೋಗಿಯು ನಡೆಯಲಾಗದಂತಹ ಸ್ಥಿತಿಯಲ್ಲಿದ್ದಾಗ ಆ ರೋಗಿಯ ಮನೆಯವರು ವೈದ್ಯರ ಬಳಿಗೆ ಬಂದು ಸಮಸ್ಯೆಯೇನೆಂಬುದನ್ನು ಹೇಳಿ ಔಷಧಿಯನ್ನು ಕೊಂಡೊಯ್ಯುತ್ತಾರೆ. ಇಂತಹ ವೇಳೆಯಲ್ಲಿ ವೈದ್ಯರು, ರೋಗಿಯ ದೇಹಸ್ಥಿತಿ, ವಯಸ್ಸು ಮತ್ತು ರೋಗಿಯ ಚಟುವಟಿಕೆಗಳನ್ನು ಕೇಳಿ ಅರ್ಥೈಸಿಕೊಳ್ಳುತ್ತಾರೆ. ನಂತರ ಯಾವ ಔಷಧಿಯನ್ನು ಎಷ್ಟು ಪ್ರಮಾಣದಲ್ಲಿ ಕೊಡಬೇಕೆಂಬುದನ್ನು ನಿರ್ಧರಿಸಿ ಅದರಂತೆ ಔಷಧಿ ಕೊಡುವ ಪ್ರಸಂಗವಿರುತ್ತದೆ. ಇಲ್ಲವೇ ವೈದ್ಯರನ್ನೇ ರೋಗಿ ಇರುವಲ್ಲಿಗೆ ಕರೆದೊಯ್ಯುತ್ತಾರೆ.

ಮನಸ್ಸಿನ ಕಾಯಿಲೆಗಳನ್ನು ಆಲಿಸುವುದರ ಮೂಲಕ ತಿಳಿಯಲು ಸಾಧ್ಯವಿದೆ. ಇದಕ್ಕಾಗಿ ಜನಪದ ವೈದ್ಯರು ಜನರ ಸಮಕ್ಷಮದಲ್ಲಿ ರೋಗಿಯನ್ನು ಪ್ರಶ್ನಿಸದೇ ಜನರಿಲ್ಲದ ಸಂದರ್ಭದಲ್ಲಿ ರೋಗಿಯ ತೊಂದರೆಗಳನ್ನು ಕೇಳುತ್ತಾರೆ. ಏಕೆಂದರೆ ಜನರ ಎದುರು ರೋಗಿ ತನ್ನ ಸಮಸ್ಯೆಯನ್ನು ಮುಕ್ತವಾಗಿ ಹೇಳಲು ಸಾಧ್ಯವಾಗದೇ ಹೋಗಬಹುದು. ಗುಹ್ಯಕಾಯಿಲೆಗಳ ವಿಚಾರದಲ್ಲಿ ರೋಗಿ ಮತ್ತು ವೈದ್ಯರ ನಡುವೆ ಮಾತ್ರ ಸಂವಹನ ನಡೆಯುತ್ತದೆ. ಇಂಥ ಸಂದರ್ಭದಲ್ಲಿ ಮುಜುಗರದಿಂದ ಮಾತೇ ಆಡದಿರುವ ರೋಗಿಗಳಿರುತ್ತಾರೆ. ಇಂಥವರಿಗೆ ಯಕ್ಷನು ಯುಧಿಷ್ಠಿರನಿಗೆ ಪ್ರಶ್ನೆಗಳನ್ನು ಕೇಳಿ ಉತ್ತರ ಹೇಳದಿದ್ದರೆ ನಿಮಗೇ ಅಪಾಯ ಎಂದು ಹೆದರಿಸಿದಂತೆ, ವೈದ್ಯರು ರೋಗಿಗಳಿಗೆ: 'ಬಾಯಿಬಿಟ್ಟು ಹೇಳದಿದ್ದರೆ ನಿಮಗೇ ಹಾನಿ' ಎಂದು ಜೋರಿನಿಂದ ಹೇಳುವ ಪ್ರಸಂಗವೂ ಇರುತ್ತದೆ.

ಉದಾಹರಣೆಗಾಗಿ, 'ಒಂದು ದಿವಸ ಪೊಲೀಸ್ ಇನ್‌ಸ್ಪೆಕ್ಟರೊಬ್ಬರು ನನ್ನನ್ನು ಹುಡುಕಿಕೊಂಡು ಬಂದ್ರು. ಯಾಕಪ್ಪ ಅಂತ ಭಯವಾಯ್ತು. ಅವರ ಸಮಸ್ಯೆಯನ್ನು ಅಲಿಸಿದ ಮೇಲೆ ತಿಳಿಯಿತು ಔಷಧಿಗೆ ಬಂದರೆಂಬುದು' (24), 'ಯಾಕೋ ನಡೆಯೋಕೆ ಕಷ್ಟವಾಗುತ್ತೆ, ಕೈಕಾಲು ಹಿಡ್ಕೋಳ್ತವೆ ಎಂದು ಹೇಳಿದಾಗ ಅದು ವಾಯು ಲಕ್ಷಣ ಎಂದು ತಿಳಿಯುತ್ತೇನೆ' (125), ಮೊದಲನೆಯ ಉದಾಹರಣೆಯಲ್ಲಿ ರೋಗಿಯ ಸಮಸ್ಯೆಯನ್ನು ಆಲಿಸಿದ ವೈದ್ಯನು ಧಾತು ವೃದ್ಧಿಗೆ ಔಷಧಿ ಕೊಡಬೇಕೆಂದು ತೀರ್ಮಾನಿಸುತ್ತಾನೆ. ಇಲ್ಲಿ ಸಂವಹನ ಇಬ್ಬರ ನಡುವೆ ಮಾತ್ರ ನಡೆಯುತ್ತದೆ. ಎರಡನೆಯ ಉದಾಹರಣೆಯಲ್ಲಿ ಈ ಬಗೆಯ ಗೋಪ್ಯತೆ ಇರುವುದಿಲ್ಲ. ಅಲ್ಲಿ ರೋಗಿ ಮುಕ್ತವಾಗಿ

ತನ್ನ ಸಮಸ್ಯೆಯನ್ನು ಹೇಳಿಕೊಳ್ಳುತ್ತಾನೆ. ಕೆಲವು ಸಾರಿ ಮಹಿಳೆ ಮತ್ತು ಪುರುಷರು ತಮ್ಮ ಒಳಕಾಯಿಲೆಗಳನ್ನು ಹೇಳಲು ಹಿಂದುಮುಂದು ನೋಡುತ್ತಾರೆ. ಇಂಥ ವೇಳೆಯಲ್ಲಿ ರೋಗಿ ಏನೋ ಹೇಳುವುದು ಅದು ವೈದ್ಯನಿಗೆ ಇನ್ನೇನೋ ಆಗಿ ಕೇಳಿಸುವುದು ಪರಿಣಾಮವಾಗಿ ಯಾವುದೋ ಔಷಧಿಯನ್ನು ಕೊಡುವುದು, ಈ ರೀತಿಯ ಪ್ರಸಂಗಗಳೂ ಇರುತ್ತವೆ.

ಈ ಕಾರಣದಿಂದಾಗಿ ರೋಗ ನಿದಾನದಲ್ಲಿ ಆಲಿಸುವಿಕೆ ಮತ್ತು ಅವಲೋಕನಗಳು ಬಹಳ ಮುಖ್ಯವಾಗುತ್ತವೆ. ವೈದ್ಯವನ್ನು ಕಲಿಯುವ ಪ್ರಕ್ರಿಯೆಯಲ್ಲೂ ಈ ಎರಡು ವಿಧಾನಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ.

ಇ) ಶಾಸ್ತ್ರಕೇಳಿಕೆ ಮತ್ತು ದೇವರ ಕೇಳಿಕೆ

ಯಾವುದಾದರೂ ಒಂದು ಸಮಸ್ಯೆ ಎದುರಾದಾಗ ಶಾಸ್ತ್ರ ಕೇಳುವುದು ಮತ್ತು ದೇವರನ್ನು ಕೇಳುವುದು ಒಂದು ವಾಡಿಕೆಯಾಗಿದೆ. ಶುಭಕಾರ್ಯಕ್ಕೆ, ಪಯಣ ಬೆಳೆಸುವಾಗ, ಗೃಹ ನಿರ್ಮಾಣ ಮತ್ತು ಪ್ರವೇಶಕ್ಕೆ, ವಸ್ತು, ವ್ಯಕ್ತಿ ಮತ್ತು ದನಕರುಗಳು ಕಳೆದು ಹೋದಾಗ, ಬೆಳೆನಷ್ಟ, ವ್ಯಾಪಾರನಷ್ಟ, ಜನ ಮತ್ತು ಜಾನುವಾರುಗಳಿಗೆ ಆನಾರೋಗ್ಯವುಂಟಾದಾಗ ಈ ಮೊದಲಾದವಕ್ಕೆಲ್ಲ ಕೇಳಿಸಲಾಗುತ್ತದೆ. ಇವು ಉದಾಹರಣೆಯಷ್ಟೇ, ಈ ಬಗೆಯ ಹಲವಾರು ಸಮಸ್ಯೆಗಳಿಗೆ ಶಾಸ್ತ್ರಕೇಳುವುದು ಮತ್ತು ದೇವರನ್ನುಕೇಳುವುದು ಸಂಪ್ರದಾಯವಾಗಿಬಿಟ್ಟಿದೆ. ಹಿಂದಿನ ರಾಜರುಗಳು ಶುಭಾಶುಭ ಫಲಗಳನ್ನು ತಿಳಿಯಲು ಶಾಸ್ತ್ರ ಮತ್ತು ದೇವರ ಮೊರೆಹೋಗುತ್ತಿದ್ದರು. ಒಟ್ಟಿನಲ್ಲಿ ಮನುಷ್ಯನ ಸಾಂಸ್ಕೃತಿಕ ಬದುಕಿನಲ್ಲಿ ಈ ಜ್ಯೋತಿಷ ಮತ್ತು ದೇವರ ಕುರಿತಾದ ವಿಚಾರ ಪ್ರಾಚೀನ ಕಾಲದಿಂದಲೂ ವಿಶಿಷ್ಟಸ್ಥಾನವನ್ನು ಪಡೆಯುತ್ತಾ ಬಂದಿದೆ. ಇವುಗಳ ವಿಶ್ಲೇಷಣೆಯನ್ನು ಮನೋವೈಜ್ಞಾನಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನೋಡಲು ಸಾಧ್ಯವಿದೆ.

ಶಾಸ್ತ್ರ ಕೇಳುವುದು : ಮನುಷ್ಯ ತನಗೆ ಎದುರಾಗುವ ಅಸಂಖ್ಯ ಸಮಸ್ಯೆಗಳ ಪರಿಹಾರಕ್ಕಾಗಿ ಶಾಸ್ತ್ರವನ್ನು ಕೇಳಲು ಮುಂದಾಗುತ್ತಾನೆ. ಹೀಗೆ ಅವನ ಆರೋಗ್ಯದಲ್ಲಿ ವ್ಯತ್ಯಾಸ ಉಂಟಾದಾಗಲೂ ಶಾಸ್ತ್ರದ ಮೊರೆ ಹೋಗುವುದು; ತನಗಿಂತಲೂ ವಿಶೇಷವಾದ ಶಕ್ತಿಯೊಂದಿದೆ, ಅದು ತನಗೆ

ಶುಭವನ್ನೇ ಬಯಸುತ್ತದೆ ಎಂಬ ತೀವ್ರತರವಾದ ಹಂಬಲವಾಗಿದೆ. ಹೀಗೆ ವಿವಿಧ ಸಮಸ್ಯೆಗಳ ಹೊತ್ತು ಶಾಸ್ತ್ರಕೇಳಲು ಬರುವವರಿಗೆ ಶಾಸ್ತ್ರವನ್ನು ಹೇಳುವ ಜ್ಯೋತಿಷಿಗಳು ಇದ್ದಾರೆ; ಜ್ಯೋತಿಷಿಗಳಲ್ಲದವರೂ ಇದ್ದಾರೆ. ಶಾಸ್ತ್ರಹೇಳುವುದನ್ನು ಒಂದು ವೃತ್ತಿಯಾಗಿ ಮಾಡಿಕೊಂಡವರೂ ಇದ್ದಾರೆ, ಹಾಗೆಯೇ ಪ್ರವೃತ್ತಿಯಾಗಿ ಭಾವಿಸಿಗವರೂ ಇದ್ದಾರೆ. ಶಾಸ್ತ್ರಹೇಳುತ್ತಾ ಊರಿಂದೂರಿಗೆ ಅಲೆಯುವವರೂ ಇದ್ದಾರೆ. ಆದರೆ ಅವರ ಮುಖ್ಯ ಕಸುಬು ಶಾಸ್ತ್ರವೊಂದೇ ಆಗಿರುವುದಿಲ್ಲ, ಚೌಡಿಕೆಯ ಜೋಗಮ್ಮನವರು ಉಧೋ ಉಧೋ ಎಂದು ಚೌಡಿಕೆ ನುಡಿಸುತ್ತಾ ಶುಭಾಶುಭಗಳನ್ನು ಹೇಳುತ್ತಾರೆ. ಕೆಲವರು ಕವಡೆಗಳ ಮೂಲಕವು ಹೇಳುವುದುಂಟು. ಸುಡುಗಾಡಸಿದ್ಧರು ಹಕ್ಕಿಯ ಶಕುನದ ಹೆಸರಲ್ಲಿ ಹೇಳುತ್ತಾರೆ. ಕುರುಮಾಮಗಳು ಏಕತಾರಿಯನ್ನು ನುಡಿಸುತ್ತ ತಾಳೆಗರಿಗಳ ಮಧ್ಯೆ ಕಡ್ಡಿ ಇಡುವುದರ ಮೂಲಕ ಹೇಳುತ್ತಾರೆ. "ಬುಡುಬುಡಕೆಯವರು ಜಾಗರವನ್ನು ಕಟ್ಟಿ ಒಳ್ಳಿತು ಕೆಟ್ಟದ್ದನ್ನು ಹೇಳುತ್ತಾರೆ. ಕೊರವಂಜಿಯವರು ಕೊರವಂಜಿ ಗೂಡೆಗಳನ್ನು ಹೊತ್ತು ಊರೂರು ತಿರುಗುತ್ತ ಬಾಣಂತಿಯ ಕೈಮೂಳೆಯನ್ನು ಹಿಡಿದು ಶಾಸ್ತ್ರ ಹೇಳುತ್ತಾರೆ."[13] ಇವರುಗಳೆಲ್ಲ ಇತರ ಸಂಗತಿಗಳನ್ನು ಕುರಿತು ಶಾಸ್ತ್ರವನ್ನು (ಭವಿಷ್ಯವನ್ನು) ಹೇಳಿದಂತೆ ರೋಗರುಜಿನಗಳಿಗೂ ಹೇಳುತ್ತಾರೆ. ಒಂದು ಚಮತ್ಕಾರವೆಂದರೆ, ಇವರ್‍ಯಾರೂ ವೈದ್ಯರಲ್ಲದಿದ್ದರೂ ಆರೋಗ್ಯ ಕುರಿತಾಗಿ ಶಾಸ್ತ್ರವನ್ನು ಹೇಳುತ್ತಾರೆ. ಜನರೂ ಸಹ ಅವರು ಹೇಳಿದ್ದನ್ನು ನಂಬುತ್ತಾರೆ.

ಶಾಸ್ತ್ರಹೇಳುವುದರಲ್ಲಿ ಪಾರಂಗತರಾದವರು ಹಾಗೂ ಸುತ್ತಲಿನ ಹಳ್ಳಿಗಳಿಗೆಲ್ಲ ಹೆಸರಾದವರು ಹಳ್ಳಿಗೆ ಒಬ್ಬರಂತೆ ಇಲ್ಲವೆ ಎರಡು ಮೂರು ಹಳ್ಳಿಗಳಿಗೆ ಒಬ್ಬರಂತೆ ಇರುತ್ತಾರೆ. ಇಂಥವರು ಸಾಮಾನ್ಯವಾಗಿ ವೈದ್ಯವನ್ನೂ ಬಲ್ಲವರಾಗಿರುತ್ತಾರೆ. ಇವರು ಯಾವುದೇ ಸಮಸ್ಯೆಗೆ ಕವಡೆ ಬಿಡುವುದರ ಮೂಲಕ ಇಲ್ಲವೇ ದೇವರ ಹೆಸರಿನಲ್ಲಿ ಶಾಸ್ತ್ರವನ್ನು ಹೇಳುತ್ತಾರೆ. ಅದರ ಪರಿಹಾರಕ್ಕೆ ಚೀಟಿ ಅಥವಾ ಯಂತ್ರವನ್ನು ಕಟ್ಟುತ್ತಾರೆ. ಒಂದು ವೇಳೆ ಈತ ಮೂಲಿಕಾವೈದ್ಯನಾಗಿದ್ದರೆ, ಅದರಿಂದಲೂ ಔಷಧೋಪಚಾರವನ್ನು ಮಾಡುತ್ತಾನೆ.

ಹಳ್ಳಿಯಲ್ಲಿರುವ ಗ್ರಾಮದೇವರ ಪೂಜಾರಿಗಳು ಜನರೊಡನೆ ಹೆಚ್ಚು ಸಂಪರ್ಕದಲ್ಲಿರುತ್ತಾರೆ. ಈ ಬಗೆಯ ಪೂಜಾರಿಗಳು ಮ್ಯಾಸಬೇಡರು ಮತ್ತು ಕಾಡುಗೊಲ್ಲರ ವರ್ಗಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತಾರೆ. ರೋಗಿಗಳು ಈ ಪೂಜಾರಿಗಳ ಹತ್ತಿರ ಹೋಗಿ ತಮ್ಮ ಸಮಸ್ಯೆಯನ್ನು ಅರಿಕೆ

ಮಾಡಿಕೊಂಡಾಗ, ಅದರ ಪರಿಹಾರಕ್ಕಾಗಿ ತಾಯಿತ ಕಟ್ಟಬೇಕೇ, ಮಂತ್ರಿಸಿದ ನೀರು ಅಥವಾ ಭಂಡಾರವನ್ನು ಸೇವಿಸಲು ಕೊಡಬೇಕೇ ಅಥವಾ ಯಾವ ಗಿಡಮೂಲಿಕೆಗಳನ್ನು ಔಷಧಿಗೆ ಬಳಸಬೇಕು- ಈ ಮುಂತಾದದ್ದನ್ನು ಪೂಜಾರಿಗಳು ಮೈದುಂಬಿದಾಗ ಹೇಳುವುದುಂಟು. ಕಾಡು ಗೊಲ್ಲರು ಗಣಿಯನ್ನು ಊದಿ ಒಳ್ಳೆಯದು ಕೆಟ್ಟದ್ದನ್ನು ಹೇಳುತ್ತಾರೆ. ಅಲ್ಲದೆ "ಕಾಡುಗೊಲ್ಲರು ಜುಂಜಪ್ಪನ ಬಸವನನ್ನು 'ಶಾಸ್ತ್ರಕೇಳುತ್ತಾರೆ.' ಮಕ್ಕಳಾಗದ ಹೆಂಗಸನ್ನು ಮಲಗಿಸಿ, ಆ ದಾರಿಯಲ್ಲಿ ಬಸವನನ್ನು ಬಿಡುತ್ತಾರೆ. ಅದು ಹೆಂಗಸನ್ನು ದಾಟಿಕೊಂಡು ಹೋದರೆ ಮಕ್ಕಳಾಗುವುದೆಂದೂ ಇಲ್ಲದಿದ್ದಲ್ಲಿ ಆಗುವುದಿಲ್ಲವೆಂದು ಭಾವಿಸುತ್ತಾರೆ."[14] ಈ ರೀತಿಯಾಗಿ ದೈವದ ಹೆಸರಿನಲ್ಲಿ ಪ್ರಾಣಿಗಳ ಮೂಲಕವೂ ತಮ್ಮ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವ ಪ್ರಯತ್ನವನ್ನು ಆದಿಕಾಲದಿಂದಲೂ ಮಾನವ ಮಾಡುತ್ತಾ ಬಂದಿದ್ದಾನೆ.

'ಎಲ್ಲಾ ರೀತಿಯ ಜ್ಯೋತಿಷ ಹೇಳ್ತಿನಿ, ಜಾತಕಗಳನ್ನು ಬರೀತೀನಿ, ಭೂಮಿರಾವು, ಭೂತಪ್ಪನ ಕಾಟ ಏನೇ ಇದ್ರೂ ಮಂತ್ರಿಸಿದ ಯಂತ್ರವನ್ನು ಕಟ್ಟುತ್ತೇನೆ'(171), ಹೀಗೆ ಹೇಳುವವರಲ್ಲಿ ಕೆಲವರು ಜ್ಯೋತಿಷಿಗಳು ಮಾತ್ರವಾಗಿರದೇ ಮೂಲಿಕಾವೈದ್ಯವನ್ನು ಮತ್ತು ವಾಮಚಾರವನ್ನು ತಿಳಿದವರಾಗಿರುತ್ತಾರೆ. ಇನ್ನೂ ಕೆಲವರು ಶಾಸ್ತ್ರಹೇಳುವ ನೆಪದಲ್ಲಿ ರೋಗಿಗಳ ಮನಸ್ಸಿಗೆ ಮತ್ತಷ್ಟು ಭೀತಿಯನ್ನುಂಟುಮಾಡುತ್ತಾರೆ. 'ನಿಮಗೆ ಯಾರೋ ಮಾಟಮಾಡಿಸಿದ್ದಾರೆ, ಅದರ ನಿವಾರಣೆಗೆ ತಡೆ ಅಥವಾ ಕಟ್ಟುಮಾಡಬೇಕು, ದಿಗ್ಬಂಧನಮಾಡಬೇಕು, ಉಪಶಾಂತಿಮಾಡಬೇಕು' ಎಂದು ಹೇಳಿ ರೋಗಿಗಳನ್ನು ಶೋಷಿಸುವ ಪ್ರಸಂಗಗಳಿವೆ.

ಇನ್ನೊಂದು ಬಗೆಯ ವ್ಯಕ್ತಿಗಳಿರುತ್ತಾರೆ. ಇವರು ತಮ್ಮನ್ನು ಜೋತಿಷಿಗಳೆಂದು ಕರೆದುಕೊಳ್ಳದೆಯೇ ಅದರಲ್ಲಿ ವಿಶೇಷವಾದ ಅನುಭವವನ್ನು ಹೊಂದಿರುತ್ತಾರೆ. ಇಂಥವರು ಗ್ರಾಮದೇವತೆಯ ಪೂಜಾರಿಯಾಗಿರಬಹುದು ಅಥವಾ ಇತರ ಯಾವುದೇ ವ್ಯಕ್ತಿಯಾಗಿರಬಹುದು. 'ದೇವಿಯ ಹೇಳಿಕೆಯಿಂದ ಭವಿಷ್ಯ ನುಡಿಯುತ್ತೇನೆ'(72), 'ಗುರುವನ್ನು ನೆನೆದು ಮನಸ್ಸಿಗೆ ತಿಳಿದಿದ್ದನ್ನು ಹೇಳ್ತೇನೆ'(16), ಶಾಸ್ತ್ರವನ್ನು ಕೇಳಿಸಿ ಆ ಪ್ರಕಾರ ಮಾಡಿದ ನಂತರವೂ ಅದೇ ಸಮಸ್ಯೆ ಮರುಕಳಿಸಿದರೆ, ಮತ್ತೊಮ್ಮೆ ಶಾಸ್ತ್ರವನ್ನು ಕೇಳಿಸುವುದರ ಬದಲು ಸಮೀಪದ ಆಸ್ಪತ್ರೆಯ ಹಾದಿಯನ್ನು ತುಳಿಯುವ ತಿಳುವಳಿಕೆ ಜನರಿಗಿದೆ. ಇಂಥ ಅರಿವನ್ನು ಎಲ್ಲಾ ವರ್ಗದವರೂ ಪಡೆಯಬೇಕಾಗಿದೆ.

ದೇವರ ಕೇಳಿಕೆ : ಮನುಷ್ಯ ಅಸಹಾಯಕನಾದಾಗ, ಬದುಕಿನಲ್ಲಿ ಉತ್ಸಾಹ ಬತ್ತಿದಾಗ, ಪ್ರಾಪಂಚಿಕ ದುಃಖಗಳನ್ನು ಎದುರಿಸಲು ಅಶಕ್ತನಾದಾಗ ಆರ್ದ್ರತೆಯಿಂದ ಕಾಣದ ದೈವದ ಮೊರೆಹೋಗುವುದು ಮಾನವ ಸಹಜ ಸ್ವಭಾವವಾಗಿದೆ. ಅಹಂಕಾರದ ಪರಾಕಾಷ್ಠೆಯಿಂದಲೋ ಅಂತರಂಗದ ವೈಫಲ್ಯದಿಂದಲೋ ಜೀವನದಲ್ಲಿ ಸಂತೋಷ ಮತ್ತು ನೆಮ್ಮದಿಗಳನ್ನು ಕಳೆದುಕೊಂಡು ಮಾನಸಿಕ ಕ್ಷೋಭೆಗೆ ಒಳಗಾಗಿ ಅನಿರೀಕ್ಷಿತವಾಗಿ ಎದುರಾಗುವ ಕಾಯಿಲೆಗಳ ಪರಿಹಾರಕ್ಕೆ ಪ್ರಾರ್ಥಿಸುವುದು ಮನುಷ್ಯನ ಮನೋಪ್ರವೃತ್ತಿಯೂ ಹೌದು. ತಾನು ವಾಸಿಸುವ ಪರಿಸರದ ಪ್ರಭಾವದಿಂದಲೋ ದೇಹ ಪ್ರಕೃತಿಯಿಂದಲೋ ದೈಹಿಕ ತೊಂದರೆಗಳಿಗೆ ತುತ್ತಾಗುವ ಮನುಷ್ಯ ಇವುಗಳಿಗೆ ಪರಿಹಾರವನ್ನೂ ದೇವರಿಂದಲೇ ಬಯಸುತ್ತಾನೆ. ಹೀಗೆ ಮನುಷ್ಯನ ಸಂಕಷ್ಟಗಳನ್ನು ಪರಿಹರಿಸುವ ಕಾರ್ಯ ದೈವದ್ದೆಂದು ನಂಬಿರುವ ಜನಪದರು ತಮ್ಮೆಲ್ಲ ಸಮಸ್ಯೆಗಳಿಗೆ ಅವನಲ್ಲಿ ಉತ್ತರವನ್ನು ಬಯಸುತ್ತಾರೆ. ಇದಕ್ಕಾಗಿ ಪೂಜಿಸುವುದು, ಹರಕೆ ಮಾಡಿಕೊಳ್ಳುವುದು, ಕಾಣಿಕೆ ಅರ್ಪಿಸುವುದು, ವಿವಿಧ ಆಚರಣೆಗಳನ್ನು ಮಾಡುವುದರ ಮೂಲಕ ದೇಹವನ್ನೂ ದಂಡಿಸಿ ಭಕ್ತಿಯನ್ನು ಪ್ರದರ್ಶಿಸುವುದು ಸಾಮಾನ್ಯವಾಗಿದೆ. ಪ್ರಸ್ತುತ ಭಾಗದಲ್ಲಿ ಜನಪದರು ತಮ್ಮ ಅನಾರೋಗ್ಯ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ದೇವರನ್ನು ಕೇಳುವುದು ಮತ್ತು ಅದರಿಂದ ಪರಿಹಾರ ಬಯಸುವುದನ್ನು ಇಲ್ಲಿ ಪ್ರಸ್ತಾಪಿಸಲಾಗುವುದು.

ಜನರು ತಮ್ಮ ತೊಂದರೆಗಳನ್ನು ದೈವದ ಮುಂದೆ ನಿವೇದಿಸಿಕೊಳ್ಳುತ್ತಾರೆ. ಆ ವೇಳೆ ದೇವರು ಕೊಡುವ ಸೂಚನೆಗಳನ್ನು ಭಕ್ತಿಯಿಂದಲೇ ಅನುಸರಿಸುತ್ತಾರೆ. ಇದರಲ್ಲಿ ರೋಗಿ ಹಾಗೂ ವೈದ್ಯರಿಬ್ಬರೂ ಭಾಗಿಯಾಗಿರುತ್ತಾರೆ. ಕೆಲವು ಉದಾಹರಣೆಗಳು. 'ನನ್ನ ಮಗಳಿಗೆ ಪಾರ್ಶ್ವ ಹೊಡೆದಿತ್ತು, ಅದಕ್ಕಾಗಿ ಬಾಲದೇವರನ್ನು ಕೇಳಿದೆವು. ಆಗ ದೇವರು ಮೈದುಂಬಿ ಹತ್ತಾರು ಗಿಡಗಳ ಹೆಸರೇಳುತ್ತದೆ. ನಂತರ ಅವುಗಳಿಂದ ಔಷಧಿಯನ್ನು ಮಾಡಿಕೊಡ್ತೀವಿ. ಯಾವ ಕಾಯಿಲೆ ಬಂದರೂ ಮೊದಲು ದೇವರನ್ನು ಕೇಳಿಸಿ ಗುಣವಾಗದಿದ್ರೆ, ವೈದ್ಯರ ಕಡೆ ಹೊಗ್ತೀವಿ'(ಒಬ್ಬ ರೋಗಿ-ಚಳ್ಳಕೆರೆ).

"ಒಬ್ಬರಿಗೆ ಮುಂಗೈ ಮುರಿದಿತ್ತು, ಬ್ಯಾಂಡೇಜ್ ಮಾಡಿ ಕೈಯನ್ನು ಕೊರಳಿಗೆ ಕಟ್ಟಿದ್ದರು. ಆ ವೇಳೆ ಮೊಣಕೈನರ ಹಾಗೆಯೇ ಹಿಡ್ಕೊಂಡುಬಿಟ್ಟಿದೆ. ಎಲ್ಲಿ ಹೋದರೂ ಗುಣಕಾಣಲ್ಲಿಲ್ಲವಂತೆ. ಆ ರೋಗಿ ನನ್ನತ್ರ ಬಂದಾಗ ಅದ್ನನೋಡಿ, ಇದು ನನ್ನಿಂದ ಆಗೊಲ್ಲ ಎಂದೆ. ಅದಕ್ಕೆ ಅವರು, 'ಇಲ್ಲ ಅಣ್ಣ ದೇವ್ರನ್ನ ಕೇಳಿಸಿದ್ವಿ, ನಿಮ್ಮತ್ರ ಹೋದ್ರೆ ಗುಣವಾಗುತ್ತೆ ಎಂದು ಹೇಳಿತು, ಆದ್ದರಿಂದ ನೀವು

ನೋಡಲೇ ಬೇಕು' ಎಂದರು. ಆಗ ಒಂದು ವಾರ ಹರಳೆಣ್ಣೆ ಹಚ್ಚಿಕೊಂಡು ಬನ್ನಿ ಎಂದು ಹೇಳಿದೆ. ಆಮೇಲೆ ಬಂದಾಗ ನರಗಳು ಸೊಡ್ಲಿದ್ದವು. ಬೆರಳುಗಳನ್ನು ಎಳೆದು ನರವನ್ನು ಕುಂದ್ರಿಸಿದೆ, ಒಂದುವಾರ ಇಲ್ಲೇಇದ್ದರು. ಹೋಗುವ ಮೊದಲು ಅದೇ ಕೈಯಿಂದ ತುಂಬಿದ ಕೊಡ ಎತ್ತಿಸಿದೆ, ಏಣಿಹಿಡಿದು ಜೋತುಬೀಳಿಸಿದೆ, ಕೈ ಚೆನ್ನಾಗಾಯಿತು"(203).

'ಸಣ್ಣ ಹುಡುಗರಿಗೆ ಗಾಳಿಸೋಕು, ಬಾಲಗ್ರಹ, ವಾಂತಿಭೇದಿ, ಹಗಲ್ಲೆಲ್ಲ ಅಳುವುದು, ಮೂರ್ಛೆ ಬಂದರೆ, ಊರಲ್ಲಿ ಯಾರಾದ್ರೂ ಬಹಳ ದಿನ ಕಾಯಿಲೆಯಿಂದ ಮಲಗಿದ್ದರೆ ಗ್ರಾಮದೇವತೆಯನ್ನು ಹೊರಡಿಸುತ್ತೇವೆ. ಅದು ಊರೆಲ್ಲ ತಿರುಗಾಡಿ ಎಲ್ಲೋ ಒಂದುಕಡೆ ನಿಂತು, ಆಗಿರುವ ತೊಂದರೆಯನ್ನು ಮತ್ತು ಅದಕ್ಕೆ ಏನು ಮಾಡಬೇಕೆಂಬುದನ್ನು ಹೇಳುತ್ತದೆ. ಅದರಂತೆ ಮಾಡುತ್ತೇವೆ'(204).

'ನಾನು ಎರಡು ರೀತಿಯಲ್ಲಿ ವೈದ್ಯಮಾಡುತ್ತೇನೆ. ಕೆಲವು ಕಾಯಿಲೆಗಳನ್ನು ದೈವಬಲದಿಂದ ಗುಣಪಡಿಸಿದರೆ, ಕೆಲವನ್ನು ಗಿಡಮೂಲಿಕೆಗಳಿಂದ ಗುಣಪಡಿಸುತ್ತೇನೆ. ಹೇಗೆ ಅಂದ್ರೆ ಆ ತಾಯಿ ನುಡಿತಳೆ; ಯಂತ್ರಕಟ್ಟು, ಭಂಡಾರ ಕೊಡು, ನನಗೆ ಇಷ್ಟುವಾರ ನಡಕೋಬೇಕು ಈ ಮುಂತಾಗಿ ಹೇಳುತ್ತಾಳೆ'(72).

ಮೊದಲ ಉದಾಹರಣೆಯಲ್ಲಿನ ಬಾಲದೇವರು ಕಾಡುಗೊಲ್ಲರ ದೈವವಾಗಿದೆ. ಮನುಷ್ಯರಿಗೆ, ಪ್ರಾಣಿಗಳಿಗೆ ಮತ್ತು ಬೆಳೆಯ ವಿಚಾರವಾಗಿಯೂ ಅವರು ದೇವರನ್ನು ಕೇಳುವ ಶಾಸ್ತ್ರವನ್ನು ಮಾಡುತ್ತಾರೆ. ಎರಡನೆಯದರಲ್ಲಿ ನಿನ್ನ ಮೊಣಕೈ ನರ ಸರಿಮಾಡುವ ವೈದ್ಯ ಇಂಥ ಊರಿನಲ್ಲಿದ್ದಾನೆ ಎಂದು ಮೈದುಂಬಿದ ಪೂಜಾರಿ ಹೇಳಿದ್ದಾನೆ. ಮೂರನೆಯದರಲ್ಲಿ ಯಾವುದೇ ಸಮಸ್ಯೆಗೆ ಪರಿಹಾರ ಹೇಳುವ ಗ್ರಾಮದೇವತೆಯ ಹಿಂದೆ ಪೂಜಾರಿಯೇ ಇದ್ದಾನೆ. ನಾಲ್ಕನೆಯದರಲ್ಲಿ ತನಗೆ ಗೊತ್ತಿಲ್ಲದ ಕಾಯಿಲೆಗಳನ್ನು ದೇವಿಯೇ ಗುಣಮಾಡುತ್ತಾಳೆಂದು ಹೇಳುತ್ತಾನೆ.

ಮೇಲಿನ ಸಂಗತಿಗಳನ್ನು ಮನೋವೈಜ್ಞಾನಿಕ ಹಿನ್ನೆಲೆಯಲ್ಲಿ ನೋಡಲು ಸಾಧ್ಯವಿದೆ. ಮೊಣಕೈ ನರ ಸರಿಪಡಿಸಲು ಸೂಕ್ತವೈದ್ಯನನ್ನು ಸೂಚಿಸುವುದರಲ್ಲಿ ಪೂಜಾರಿಯ ಜಾಣತನವೂ ಇದೆ ಎಂಬುದನ್ನು ಊಹಿಸಲು ಅವಕಾಶವಿದೆ. ಉಳಿದ ಘಟನೆಗಳೂ ಇದಕ್ಕಿಂತ ಭಿನ್ನವೇನಲ್ಲ. ಇದೇ ರೀತಿಯ ಘಟನೆಗಳನ್ನು ಜಿಲ್ಲೆಯ ವಿವಿಧ ಭಾಗದ ಪ್ರಾದೇಶಿಕ ದೈವಗಳು ಮತ್ತು ಗ್ರಾಮಮಟ್ಟದ ದೈವಗಳಲ್ಲಿ

ಕಾಣಲು ಸಾಧ್ಯವಿದೆ. ಮನುಷ್ಯರು, ಪ್ರಾಣಿಗಳು ಮತ್ತು ಬೆಳೆಯ ರಕ್ಷಣೆಯ ಜವಬ್ದಾರಿ ಗ್ರಾಮದೇವತೆಯದಾಗಿದೆ ಎಂದು ಜನರು ನಂಬಿರುತ್ತಾರೆ.

ದೇವರ ಪ್ರಸಾದವೆಂದು ಪೂಜಾರಿ ಕೂಡುವ ಧೂತವೇ ಮನೋರೋಗಿಗಳಿಗೆ ಚಮತ್ಕಾರ ಮಾಡುವ ಔಷಧಿಯಾಗಬಹುದು. ದೇವಿಪತ್ರೆಯೆಂದು ಸೇವಿಸಿದ ಬಿಲ್ವ ಮತ್ತು ಬೇವಿನ ಎಲೆಗಳು ಜ್ವರ ಅಥವಾ ಕೆಮ್ಮನ್ನು ಗುಣಮಾಡಬಹುದು. ಇಲ್ಲವೇ ಸಕ್ಕರೆ ಕಾಯಿಲೆಯನ್ನು ನಿಯಂತ್ರಿಸಬಹುದು. ಲಕ್ಕಿಪತ್ರೆಯ ಸೇವನೆಯಿಂದ ಮಂಡಿನೋವು ಉಪಶಮನವಾಗಬಹುದು. ಊರಾಚೆಯಿರುವ ದೇವಿಗೆ ಮುಡಿಸಿದ ತಂಗಟಹೂವು ಮತ್ತು ಎಲೆಗಳ ಸೇವನೆಯಿಂದ ಭೇದಿ, ವಾಂತಿ ಮತ್ತು ರಾತ್ರಿಕುರುಡು ಗುಣವಾಗಬಹುದು. ಇಂಥ ಕೆಲವು ಅನುಕೂಲ ಘಟನೆಗಳೇ ದೈವದ ಮೇಲೆ ಭಯ, ಭಕ್ತಿಯನ್ನುಂಟುಮಾಡಿ ಜನರು ಹೆಚ್ಚು ನಂಬುವಂತೆ ಮಾಡುತ್ತವೆ.

ವಾಸ್ತವವಾಗಿ ಬಿಲ್ವ ಮತ್ತು ಬೇವಿನ ಮರಗಳು ಬಹೂಪಯೋಗಿಯಾದ ಔಷಧೀಯ ವೃಕ್ಷಗಳು. ಅವುಗಳ ಎಲೆಗಳನ್ನು ಸೇವಿಸುವುದರಿಂದ ಜ್ವರ(64) ಕೆಮ್ಮು(127), ನಂಜುನಿವಾರಣೆ(124) ಮತ್ತು ಸಕ್ಕರೆ ಕಾಯಿಲೆಯೂ(21) ಸಹ ನಿಯಂತ್ರಣಕ್ಕೆ ಬರುವ ಸಾಧ್ಯತೆಯಿದೆ. ಲಕ್ಕಿಎಲೆಯ ಸೇವನೆಯಿಂದ "ಜ್ವರ, ಗಳಗಂಡ, ಕೆಮ್ಮು, ವಾತಶೂಲೆ, ವಾತಗುಲ್ಮ"[15], ಎಲೆಯ ಕಷಾಯದಿಂದ ಮಂಡಿನೋವು(175) ಈ ಮೊದಲಾದವು ಗುಣವಾಗುತ್ತವೆ. ವಾಂತಿ-ಭೇದಿ(1) ರಾತ್ರಿಕುರುಡು(121) ಗರ್ಭಕೋಶದ ಶುದ್ಧಿ(71) ಈ ಮುಂತಾದವುಗಳಿಗೆ ಯಾವ ಅನುಪಾನವಿಲ್ಲದೇ ತಂಗಟಿಯ ಹೂವು ಮತ್ತು ಎಲೆಗಳ ಸೇವನೆಯಿಂದಲೇ ಗುಣವಾಗುವ ಸಾಧ್ಯತೆಯಿದೆ. ದೇವರ ಅರ್ಚನೆಗೆ ಬಳಸುವ ಹೂವು ಮತ್ತು ಪತ್ರೆಗಳು ಬಹೂಪಯೋಗಿ ಔಷಧಿಯ ಗುಣವುಳ್ಳವುಗಳಾಗಿವೆ. ಪರಿಣಾಮವಾಗಿ ಇಂಥವುಗಳು ದೇಹಕ್ಕೆ ಔಷಧಿಯಾಗಿ ಕೆಲಸ ಮಾಡುತ್ತವೆ. ಜೊತೆಗೆ ಅವುಗಳನ್ನು ಭಕ್ತಿಯಿಂದ ಸೇವಿಸುವುದು ಮಾನಸಿಕವಾಗಿಯೂ ಪರಿಣಾಮವನ್ನು ಬೀರುತ್ತದೆ. ಆದಕಾರಣ ದೇವರ ಪ್ರಸಾದ ಮತ್ತು ತೀರ್ಥಗಳು ಮನುಷ್ಯನ ಸಾಂಸ್ಕೃತಿಕ ಬದುಕಿನಲ್ಲಿ ಮತ್ತು ಆರೋಗ್ಯದ ರಕ್ಷಣೆಯಲ್ಲಿ ಬಹುಮುಖ್ಯವಾಗುತ್ತವೆ.

ರೋಗ ನಿವಾರಣೆಗಾಗಿ ದೇವರನ್ನು ಪೂಜಿಸಿ ಹೂವು ಕೇಳುವ ಪದ್ಧತಿಯಿದೆ. ಆ ವೇಳೆಯಲ್ಲಿ ದೇವರು ಎಡ-ಬಲ ಅಥವಾ ಮುಂಭಾಗದಿಂದ ಹೂವು ಕೊಡುತ್ತದೆ. ಎಡಭಾಗದಿಂದ ಬಿದ್ದರೆ

ಅಶುಭವೆಂದು ಭಾವಿಸುತ್ತಾರೆ. ಇದು ಮಾನಸಿಕವಾಗಿ ರೋಗಿಯನ್ನು ಮತ್ತಷ್ಟು ದುರ್ಬಲಗೊಳಿಸುತ್ತದೆ. ಬಲ ಅಥವಾ ಮುಂಭಾಗದಿಂದ ಬಿದ್ದರೆ ರೋಗ ಪರಿಹಾರವೆಂದೇ ಭಾವಿಸುತ್ತಾರೆ. ಈ ವೇಳೆಯಲ್ಲಿನ ಮಾನಸಿಕ ಪರಿಣಾಮವೇ ರೋಗ ಸುಧಾರಣೆಯ ಸಾಧ್ಯತೆಯನ್ನು ಹೆಚ್ಚಿಸುತ್ತದೆ. ದೇವರ ಪ್ರಸಾದವೆಂದು ಬೇವಿನ ಎಲೆಯನ್ನೋ, ಲಕ್ಕಿ, ಬಿಲ್ವ ಎಲೆಗಳನ್ನೋ ಅರೆದು ಹುಣ್ಣುಗಳಿಗೆ ಮತ್ತು ಚರ್ಮ ಕಾಯಿಲೆಗಳಿಗೆ ಹಚ್ಚಿದರೆ ಅದರ ಔಷಧೀಯ ಗುಣದಿಂದ ರೋಗ ವಾಸಿಯಾಗಬಹುದಾದ ಸಂಭವವಿರುತ್ತದೆ. ಇಂಥವುಗಳ ಕುರಿತಾಗಿ ಹೆಚ್ಚಿನ ಅಧ್ಯಯನದ ಅಗತ್ಯವಿದೆ. ಇದರಿಂದ ದೈವದ ಬಗೆಗಿರುವ ನಂಬಿಕೆ, ಆಚರಣೆ ಮತ್ತು ಸಂಪ್ರದಾಯಗಳ ಹಿಂದಿರುವ ವೈಜ್ಞಾನಿಕ ಕಾರಣಗಳನ್ನು ಅರಿಯಲು ಸಾಧ್ಯವಿದೆ.

ಈ) ಇತರ ವಸ್ತುಗಳಿಂದ ಪರೀಕ್ಷೆ

ಜನಪದ ವೈದ್ಯರು ಮತ್ತು ವೈದ್ಯವನ್ನು ಅರಿತ ಸಮುದಾಯದವರು ರೋಗ ಯಾವುದೆಂದು ನಿಶ್ಚಯಿಸಲು ಬೇರೆ ಬೇರೆ ವಿಧಾನಗಳನ್ನು ಅನುಸರಿಸುತ್ತಾರೆ. ಅದಕ್ಕಾಗಿ ಅವರು ಯಾವುದೋ ಸಸ್ಯದ ಬೇರನ್ನೋ ಇಲ್ಲವೇ ಎಲೆ, ಕಾಯಿಗಳನ್ನೋ ತಿನ್ನಿಸುವುದರ ಮೂಲಕ ಅಥವಾ ಇನ್ನಾವುದೋ ವಸ್ತುಗಳನ್ನು ಸ್ಪರ್ಶ ಮಾಡಿಸುವುದರ ಮೂಲಕವೂ ರೋಗನಿದಾನವನ್ನು ತಿಳಿಯುವ ಪ್ರಯತ್ನವನ್ನು ಮಾಡುತ್ತಾರೆ. ಬಾಹ್ಯ ಚಿಹ್ನೆಗಳಿಂದ, ಅವಲೋಕನ ಮತ್ತು ಆಲಿಸುವುದರಿಂದ ರೋಗವನ್ನು ಗುರುತಿಸಲಾಗಿದ್ದರೂ, ಸ್ಪಷ್ಟತೆಗಾಗಿಯೋ ಅಥವಾ ಹಿಂದಿನವರು ಹೀಗೆ ಮಾಡುತ್ತಿದ್ದರೆಂಬ ಕಾರಣಕ್ಕಾಗಿಯೋ ಅದನ್ನು ಅನುಸರಿಸುತ್ತಿದ್ದಾರೆ. ಇತರ ವಸ್ತುಗಳಿಂದ ರೋಗವನ್ನು ಪರೀಕ್ಷಿಸುವ ವಿಧಾನ ಮತ್ತು ಅದಕ್ಕಾಗಿ ಬಳಸುವ ವಸ್ತುಗಳನ್ನು ಈ ಕೆಳಗಿನ ಉದಾಹರಣೆಗಳಲ್ಲಿ ಕಾಣಬಹುದಾಗಿದೆ.

'ತಪಸಿ ಮರದ ತೊಗಟೆಯಿಂದ ದಾರಹೊಸೆದು ಕಾಮಾಲೆ ಬಂದಿರುವ ಮಕ್ಕಳ ಕೊರಳಿಗೆ ಕಟ್ಟುತ್ತೇನೆ. ರೋಗ ಇರುವುದಾದರೆ ತಪಸಿ ನಾರು ಕೆಳಮುಖವಾಗಿ ಹೊಕ್ಕಳಿನವರೆಗೆ ಇಳಿಬೀಳುತ್ತದೆ. ಆ ರೀತಿ ಇಳಿಬಿದ್ದಾಗ ರೋಗ ಗುಣವಾಗುತ್ತಿದೆ ಎಂದು ಭಾವಿಸುತ್ತೇನೆ. ಒಂದು ವೇಳೆ ಅದು ಕೆಳಗೆ ಇಳಿಯದಿದ್ದರೆ ಕಾಮಾಲೆ ರೋಗ ಇಲ್ಲ ಬೇರೆಯಾವುದೋ ಸಮಸ್ಯೆ ಇರಬಹುದೆಂದು ಊಹಿಸುತ್ತೇನೆ'(199).

'ಹಾವು ಕಡಿದವರು ಅಟಕುಮಾವಿನಬಳ್ಳಿಯ ಬೇರನ್ನುತಿಂದರೆ ವಿಷಇರುತ್ತದೆ. ಬೇರೆಯವರುತಿಂದರೆ ಸಿಹಿಇರುತ್ತದೆ'(157). 'ನಾಗರ ಹಾವು ಕಡಿದಾಗ ಕಡಿದಿರುವ ಜಾಗಕ್ಕೆ ಕೋಳಿ ಮುಕುಳಿ ಇಡುತ್ತೇನೆ. ಒಬ್ಬರೋಗಿಗೆ ಐದು ಕೋಳಿಗಳು ಸಾಯುತ್ತವೆ. ಒಂದು ವೇಳೆ ಕೋಳಿ ಸಾಯಲ್ಲಿಲ್ಲ ಅಂದ್ರೆ, ಹಾವಿನ ವಿಷ ಇಲ್ಲ ಬರಿ ಹೆದರಿದ್ದಾನೆ ಎಂದು ತಿಳಿಯಬಹುದು'(198).

ಮೇಲಿನ ಉದಾಹರಣೆಗಳಲ್ಲಿ ರೋಗಕ್ಕೆ ಕೊಡುವ ಔಷಧಗಳೇ ರೋಗವನ್ನು ಪರೀಕ್ಷಿಸುವ ವಸ್ತುಗಳಾಗುತ್ತವೆ. ಇಲ್ಲಿ ರೋಗ ನಿಶ್ಚಯವೆಂಬುದು ರೋಗದ ಇರುವಿಕೆಯನ್ನು ಹೇಳಿದಂತೆ ಅದರ ನಿವಾರಣೆಯನ್ನು ಸಹ ಹೇಳುತ್ತದೆ. ಇಂಥವುಗಳು ಪರಿಣಾಮಕಾರಿಯೋ ಅಲ್ಲವೋ ಎಂಬುದನ್ನು ರೋಗ ನಿದಾನದ ಮೂಲಕವೂ ತಿಳಿಯಲು ಸಾಧ್ಯವಿದೆ.

ರೋಗ ಪರೀಕ್ಷೆಗೆಂದು ಪ್ರತ್ಯೇಕವಾದ ವಸ್ತುಗಳನ್ನು ಬಳಸುವ ಉದಾಹರಣೆಗಳಿವೆ: 'ಹಾವು ಕಡಿದವರಿಗೆ ಬಲಿತ ಅಥವಾ ಹಣ್ಣಾದ ಮೆಣಸಿನ ಕಾಯಿಯನ್ನು ಕಡಿಸಿದಾಗ ಖಾರ ಗೊತ್ತಾಗದಿದ್ದರೆ ಹಾವು ಕಡಿದಿದೆ ಮತ್ತು ವಿಷ ಏರಿದೆಯೆಂದರ್ಥ. ಖಾರ ಗೊತ್ತಾದರೆ ವಿಷ ಇಲ್ಲ ಎಂದು ತಿಳಿಯುತ್ತೇನೆ'(118).

ದೆವ್ವ ಬಂದವರನ್ನು ಪರೀಕ್ಷಿಸುವ ವಿಧಾನ : 'ಹಣ್ಣು ಮೆಣಸಿನ ಕಾಯಿಯ ತಿರುಳನ್ನು ಬೆರಳಿಗೆ ಹಚ್ಚಿಗೊಂಡು ಕಣ್ಣುಗಳ ಕೆಳರಪ್ಪೆಗಳಿಗೆ ಹಚ್ಚಿದಾಗ, ದೆವ್ವ ಇದ್ದರೆ ಉರಿ ಬರೊಲ್ಲ, ದೆವ್ವ ಇಲ್ಲದಿದ್ದರೆ ಉರಿ ಬರುತ್ತೆ'(64).

ಕೈಮಸಗು ಮತ್ತು ಕಾಮಾಲೆಯನ್ನು ಪರೀಕ್ಷಿಸುವ ವಿಧಾನಗಳು : 'ತೆಂಗಿನ ಚಿಪ್ಪಿನಲ್ಲಿ ಹುರುಳಿಕಾಳುಗಳನ್ನು ಹಾಕಿ, ರೋಗಿಯಾದವನು ಬೆಳಿಗ್ಗೆ ಎದ್ದಕೂಡಲೇ ಆ ಚಿಪ್ಪಿನಲ್ಲಿ ಮೂತ್ರ ಮಾಡಬೇಕು. ಹುರುಳಿಕಾಳುಗಳು ಕಪ್ಪಾದರೆ ಕಾಮೂಲೆ ಇದೆಯೆಂದು ತಿಳಿಯತ್ತೇನೆ'(138).

'ರೋಗಿಯ ಅಂಗೈಯಲ್ಲಿ ನೀರು ಹಾಕಿ ಅದರಲ್ಲಿ ಒಂದು ಹನಿ ಔಡಲ ಎಣ್ಣೆಯನ್ನು ಬಿಡುತ್ತೇನೆ. ಕೈಮಸುಗಿದ್ದರೆ ಎಣ್ಣೆ ನೀರಿನ ಕೆಳಗಿರುತ್ತದೆ, ಇಲ್ಲದಿದ್ದರೆ ನೀರಿನ ಮೇಲೆ ತೇಲುತ್ತದೆ'(169).

ರೋಗವನ್ನು ಪರೀಕ್ಷಿಸಲು ಬಳಸುವ ವಸ್ತುಗಳಿಂದ ರೋಗ ಯಾವುದೆಂದು ಖಚಿತಪಡಿಸಿಕೊಳ್ಳುವುದು ಸ್ವಾಗತಾರ್ಹವಾದರೂ, ಕೆಲವು ಪರೀಕ್ಷೆಗಳಿಂದ ದುಷ್ಪರಿಣಾಮವುಂಟಾಗುವ ಸಾಧ್ಯತೆ ಇದೆ. ಅಂದರೆ ದೆವ್ವ ಬಂದವರನ್ನು ಪರೀಕ್ಷಿಸುವ ವಿಧಾನ ಹೆಚ್ಚು ಅಪಾಯಕಾರಿಯಾದುದು. ಮಿತಿಮೀರಿದ ಉರಿಯಿಂದ ದೃಷ್ಟಿಯನ್ನೇ ಕಳೆದುಕೊಳ್ಳುವ ಸಂಭವವಿರುತ್ತದೆ. ಇದೇ ರೀತಿಯಲ್ಲಿ ದೆವ್ವಬಂದವರಿಗೆ ಹಣ್ಣಾದ ಎಕ್ಕೆ ಎಲೆಯನ್ನು ಕಾಯಿಸಿ ಅದರ ರಸವನ್ನು ಮೂಗು, ಕಣ್ಣುಗಳಲ್ಲಿ ಹಿಂಡುವುದು, ಇತರ ವಸ್ತುಗಳಿಂದ ಸುಡುವುದು ಮತ್ತು ಹೊಡೆಯುವುದು ದೈಹಿಕ ಹಿಂಸೆಯಾಗಿ ರೋಗಿ ಮಾನಸಿಕವಾಗಿ ಅಸ್ವಸ್ಥನಾಗುತ್ತಾನೆ. ಕೆಲವು ಬಾರಿ ರೋಗ ಯಾವುದೆಂದು ತಿಳಿಯದಿದ್ದಾಗ ವಿವಿಧ ಬಗೆಯ ಪ್ರಯೋಗಗಳನ್ನು ಮತ್ತು ಪರೀಕ್ಷೆಗಳನ್ನು ರೋಗಿಗೆ ಮಾಡಿ, ರೋಗಿಯ ಆರೋಗ್ಯ ಹದಗೆಡಲು ಕಾರಣರಾಗುವ ವೈದ್ಯರೂ ಇದ್ದಾರೆ.

ವಿವಿಧ ವಸ್ತುಗಳನ್ನು ಉಪಯೋಗಿಸಿ ರೋಗವನ್ನು ತಿಳಿಯುವ ಸಂದರ್ಭದಲ್ಲಿ ಇಲ್ಲದ ರೋಗವನ್ನು ಆರೋಪಿಸುವ ಪ್ರಸಂಗಗಳೂ ನಡೆಯುತ್ತವೆ. ಪರಿಣಾಮವಾಗಿ ಇಲ್ಲದಿರುವ ರೋಗವನ್ನು ಮೈಮೇಲೆ ಎಳೆದುಕೊಂಡಂತೆ ಆಗುತ್ತದೆ. ವಸ್ತುಗಳ ಪರೀಕ್ಷೆಯಿಂದ ತಿಳಿದುಬಂದ ಫಲಿತಾಂಶವನ್ನು ಹೇಳುವುದರಲ್ಲೂ ಜನಪದರು ಜಾಣ್ಮೆಯನ್ನು ತೋರಿಸುತ್ತಾರೆ. ಮೈಮುಟ್ಟಿ ಜ್ವರವನ್ನು ಪರೀಕ್ಷಿಸಿದ ವೈದ್ಯ ಜ್ವರದ ತೀವ್ರತೆ ಹೆಚ್ಚಾಗಿದ್ದರೂ, ಸಾಧಾರಣವಾಗಿದೆ ಏನೂ ಭಯವಿಲ್ಲ ಎಂದು ರೋಗಿಯ ಮನಸ್ಸಿಗೆ ಧೈರ್ಯವನ್ನು ತುಂಬುವ ಮಾತುಗಳನ್ನು ಹೇಳುತ್ತಾನೆ. ಆದರೆ ಹಾವು ಕಡಿದವನು ಮೆಣಸಿನಕಾಯಿಯನ್ನು ತಿಂದಾಗ ಅದರ ಖಾರ ತಿಳಿಯದಿದ್ದರೆ ವಿಷ ತನ್ನ ದೇಹವನ್ನು ಸೇರಿಬಿಟ್ಟಿದೆ ಎಂಬ ಬಲವಾದ ನಂಬಿಕೆ ಅವನಲ್ಲಿ ಉಂಟಾಗಿ ಅವಘಡಗಳು ಸಂಭವಿಸಬಹುದು. ಇಲ್ಲಿ ವೈದ್ಯನು ಮಾತನಾಡುವ ಅಗತ್ಯ ಇರುವುದಿಲ್ಲ. ಅಂದರೆ ವಸ್ತುಗಳ ಮೂಲಕ ಪರೀಕ್ಷಿಸುವುದರಿಂದ ರೋಗ ಗುಟ್ಟಾಗಿ ಉಳಿಯುವುದಿಲ್ಲ. ವಿವಿಧ ವಸ್ತುಗಳ ಮೂಲಕ ರೋಗವನ್ನು ನಿಶ್ಚಯ ಮಾಡುವುದರಿಂದ ಅನುಕೂಲವಿದ್ದಂತೆ ಅನಾನುಕೂಲವೂ ಇದೆ.

ಇದುವರೆಗೆ ಜನಪದ ವೈದ್ಯರ ರೋಗನಿದಾನವನ್ನು ಕುರಿತು ಒಂದು ಸಂಕ್ಷಿಪ್ತ ಪರಿಚಯವನ್ನು ಮಾಡಿ ಕೊಡಲಾಯಿತು. ಜಿಲ್ಲೆಯೊಂದರ ವ್ಯಾಪ್ತಿಯಲ್ಲಿ ಕಂಡುಬರುವ ಸಾಮಾನ್ಯ ಚಿತ್ರಣವಿದು. ರೋಗನಿದಾನದಲ್ಲಿ ಬೇರೆ ಪ್ರದೇಶಗಳಲ್ಲಿ ಇದಕ್ಕಿಂತಲೂ ಭಿನ್ನವಾಗಿರುವ ವಿಧಾನಗಳಿರಬಹುದು. ಅಂಥವುಗಳನ್ನು ಹೆಚ್ಚಿನ ಅಧ್ಯಯನದಿಂದ ಕಂಡುಕೊಳ್ಳುವ ಅಗತ್ಯವಿದೆ.

ಟಿಪ್ಪಣಿಗಳು :

1. ಡಾ. ನಾ. ಸೋಮೇಶ್ವರ, 2008. ಮನುಕುಲವನ್ನು ಬೆಳಗಿದ 50 ವೈದ್ಯಕೀಯ ಸಂಶೋಧನೆಗಳು, ಪುಟ-3
2. ಡಾ. ಧನ್ಯಕುಮಾರ ಇಜಾರಿ, 2004. ಜೈನ ವೈದ್ಯಕೀಯ ಪರಂಪರೆ, ಪುಟ-223.
3. ತಿರುಕ, 2000. ಸ್ವಯಂ ವೈದ್ಯ, ಪುಟ-48.
4. ತಿರುಕ, 2000. ಸ್ವಯಂ ವೈದ್ಯ, ಪುಟ-48.
5. ಸಂ. ಕೆ. ಮರುಳಸಿದ್ದಪ್ಪ, ಕಿ.ರಂ. ನಾಗರಾಜ, 1993. ವಚನ ಕಮ್ಮಟ, ಪುಟ-15.
6. ಡಾ. ಟಿ. ಗೋವಿಂದರಾಜು, 2003. ಜನಪದ ವೈದ್ಯ, ಪುಟ-xx.
7. ತಿರುಕ, 2000. ಸ್ವಯಂ ವೈದ್ಯ, ಪುಟ-48.
8. ಡಾ. ಸತ್ಯನಾರಾಯಣ ಭಟ್, 1997. ಬೆಂಗಳೂರು ಜಿಲ್ಲೆಯ ಬರಿಗಾಲ ವೈದ್ಯರು, ಪುಟ-39.
9. ಡಾ. ಜಿ. ರಾಮಕೃಷ್ಣ, 2006. ಭಾರತೀಯ ವಿಜ್ಞಾನದ ಹಾದಿ, ಪುಟ-158.
10. ತಿರುಕ, 2000. ಸ್ವಯಂ ವೈದ್ಯ, ಪುಟ-53.
11. ಬಿ.ಜಿ. ಜೈತೂರ್, 2002. ಸುಪ್ರಸಿದ್ಧ ವೈದ್ಯ ವಿಜ್ಞಾನಿಗಳು, ಪುಟ-16.
12. ಡಾ. ಜಿ. ರಾಮಕೃಷ್ಣ, 2006. ಭಾರತೀಯ ವಿಜ್ಞಾನದ ಹಾದಿ, ಪುಟ-158.
13. ಸಂ. ಪ್ರೊ ಕಾಳೇಗೌಡ ನಾಗವಾರ, ಹಾ. ಅಂಬಳಿಕೆ ಹಿರಿಯಣ, 2000. ಜೀಶಂಪ ಅವರ ಜಾನಪದ ಬರಹಗಳು, ಪುಟ-292.
14. ಡಾ. ತೀ. ನಂ. ಶಂಕರಣ ನಾರಾಯಣ, 1999. ಜಾನಪದ ಸಮೀಕ್ಷೆ ವಿಶ್ಲೇಷಣೆ, ಪುಟ-287.
15. ಡಾ. ಮಾಗಡಿ ಆರ್. ಗುರುದೇವ, 2001. ಕರ್ನಾಟಕದ ಔಷಧೀಯ ಸಸ್ಯಗಳು, ಪುಟ-306.

* * *

ಅಧ್ಯಾಯ – 5

ಜನಪದ ವೈದ್ಯೋಪಚಾರಗಳು

ಜನಪದ ವೈದ್ಯೋಪಚಾರಗಳು

ಜನಪದ ವೈದ್ಯರ ಚಿಕಿತ್ಸಾ ವಿಧಾನಗಳಲ್ಲಿ ಗಿಡಮೂಲಿಕೆಗಳನ್ನು ಉಪಯೋಗಿಸಿಕೊಂಡು ಮಾಡುವ ವೈದ್ಯೋಪಚಾರಕ್ಕೆ ಬಹಳ ಮಹತ್ವವಿದೆ. ಏಕೆಂದರೆ ಇವುಗಳು ದೇಹದ ಕಾಯಿಲೆಗಳನ್ನು ಗುಣಪಡಿಸಿ ಸದೃಢ ಆರೋಗ್ಯವನ್ನು ನೀಡುತ್ತವೆ. ಜನಪದರು ಔಷಧೀಯ ಗುಣಗಳ ಹಿನ್ನೆಲೆಯಲ್ಲಿ ಸಸ್ಯಗಳನ್ನು ಅರಿತಿರುವ ಸಾಧ್ಯತೆ ಇದೆ. ಪರಿಣಾಮವಾಗಿ ಯಾವ ರೋಗಗಳಿಗೆ ಯಾವ ಸಸ್ಯವನ್ನು ಬಳಸಬೇಕೆಂಬ ತಿಳುವಳಿಕೆಯನ್ನು ಅನುಭವದಿಂದ ಪಡೆದಿರುತ್ತಾರೆ. ಅಲ್ಲದೆ ಜನಪದರ ಈ ಬಗೆಯ ಸಸ್ಯಜ್ಞಾನವನ್ನು ವೈಜ್ಞಾನಿಕ ಅಧ್ಯಯನಕ್ಕೆ ಒಳಪಡಿಸಬಹುದಾಗಿದೆ.

ಪ್ರಸ್ತುತ ಭಾಗದಲ್ಲಿ ಗಿಡಮೂಲಿಕೆಗಳ ವೈದ್ಯ ವಿಧಾನವನ್ನು ಕಾಯಿಲೆಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗುವುದು. ಸಂದರ್ಭೋಚಿತವಾಗಿ ಇತರ ಚಿಕಿತ್ಸಾ ವಿವರಗಳನ್ನು ಪ್ರಸ್ತಾಪಿಸಲಾಗುವುದು. ಕ್ಷೇತ್ರಕಾರ್ಯದಲ್ಲಿ ರೋಗಿಗಳನ್ನು ಸಂದರ್ಶನ ಮಾಡಿದಾಗ ಯಾವ ಕಾಯಿಲೆಗಳು ಎಷ್ಟು ಪ್ರಮಾಣದಲ್ಲಿ ಗುಣಹೊಂದಿವೆ ಎಂಬುದನ್ನು ದಾಖಲಿಸಲಾಗಿತ್ತು. ಹೀಗೆ ದಾಖಲಿಸಿದ ವೈದ್ಯವಿವರವನ್ನು ಬೆಂಗಳೂರು ಸರ್ಕಾರಿ ಆಯುರ್ವೇದ ಕಾಲೇಜಿನ ದ್ರವ್ಯಗುಣ ವಿಭಾಗದ ಮುಖ್ಯಸ್ಥೆಯಾದ ಡಾ. ಆಶಾಲತಾ ಹಾಗೂ ಅದೇ ಕಾಲೇಜಿನ ಉಪಪ್ರಾಂಶುಪಾಲರಾದ ಡಾ. ನಾಗೇಂದ್ರಯ್ಯ ಇವರುಗಳೊಂದಿಗೆ ಚರ್ಚೆ ಮಾಡಿ, ಈಗಾಗಲೇ ಯಾವುದು ಆಯುರ್ವೇದದಲ್ಲಿ ಪ್ರಸ್ತಾಪಿಸದೇ ಇರುವ ಮತ್ತು ಬಳಕೆಯಲ್ಲಿರುವ ಸಾಧ್ಯತೆ ಕಡಿಮೆ ಎಂದು ಕಂಡು ಬಂದಿರುವುದೋ ಅಂತಹ ಔಷಧೀಯ ವಿವರಗಳನ್ನು ವಿವಿಧ ಉಪವಿಭಾಗಗಳಲ್ಲಿ ಇಲ್ಲಿ ಕೊಡಲಾಗಿದೆ.

ಅ) ಸ್ತ್ರೀ ಸಂಬಂಧಿ ವೈದ್ಯೋಪಚಾರಗಳು

ಇದರಲ್ಲಿ ಪುನಃ ವಿವಿಧ ಉಪವಿಭಾಗಗಳಲ್ಲಿ ಕಾಯಿಲೆಗಳನ್ನು ಚರ್ಚಿಸಲಾಗಿದೆ. ಒಂದೇ ಕಾಯಿಲೆಗೆ ಒಂದಕ್ಕಿಂತ ಹೆಚ್ಚು ಬಗೆಯ ಔಷಧೋಪಚಾರಗಳು ಕ್ಷೇತ್ರದಲ್ಲಿ ಲಭ್ಯವಾಗಿವೆ. ಸದ್ಯಕ್ಕೆ ಇಲ್ಲಿ ಒಂದು ಅಥವಾ ಎರಡನ್ನು ಮಾತ್ರ ಪ್ರಸ್ತಾಪಿಸಲಾಗುವುದು.

ಋತುಕಾಲದ ತೊಂದರೆಗಳು :

* ಸಕಾಲದಲ್ಲಿ ಋತುಮತಿ ಆಗದಿದ್ದ ಪಕ್ಷದಲ್ಲಿ : ಮೂರು ಬಿಳಿ ಎಕ್ಕೆ ಹೂವುಗಳನ್ನು ತಂದು ಹಸುವಿನ ತುಪ್ಪದಲ್ಲಿ ಕೆಂಪಾಗುವಂತೆ ಹುರಿದು, ಬೆಲ್ಲದೊಂದಿಗೆ ಗಜ್ಜುಗದ ಗಾತ್ರ ಮೂರು ಗುಳಿಗೆಗಳನ್ನು ಕಟ್ಟಿ ಒಂದೇ ದಿನದಲ್ಲಿ, ಬೆಳಿಗ್ಗೆ, ಮಧ್ಯಾಹ್ನ ಹಾಗೂ ಸಂಜೆ ನುಂಗುವುದು. ನುಂಗಿದ ಮೂರು ದಿನಗಳಲ್ಲಿ ಋತುವಾಗುತ್ತಾರೆ (26) ಅನಿಯತ ಋತು ಸಮಸ್ಯೆಗೂ ಇದೇ ಔಷಧವನ್ನು ಕೊಡಲಾಗುತ್ತದೆ.

* ಅಧಿಕ ಋತು ಸ್ರಾವ : ಅರಬೇವಿನ ಸೊಪ್ಪು, ಮೆಣಸು, ಬೆಳ್ಳುಳ್ಳಿಗಳನ್ನು ಅರೆದು ಕಡ್ಲೆಕಾಳು ಗಾತ್ರ ಗುಳಿಗೆ ಕಟ್ಟಿ ದಿನಕ್ಕೆ ಎರಡು ಗುಳಿಗೆಗಳ ಹಾಗೆ ಒಂದು ವಾರ ನುಂಗುವುದು.

ಪಥ್ಯ : ಬೇಳೆಕಟ್ಟು, ರಾಗಿಮುದ್ದೆ ಊಟವನ್ನು 14ದಿವಸ ಅನುಸರಿಸಬೇಕು (70)

* ಅಲ್ಪಋತು ಸ್ರಾವ ಮತ್ತು ಅನಿಯತ ಋತು ಸ್ರಾವಗಳಿಗೆ : ಕತ್ತಿಕರುಬನ ಸೊಪ್ಪಿನ ಜೊತೆ ಮೂರು ಮೆಣಸು, ಮೂರುಬೆಳ್ಳುಳ್ಳಿಗಳನ್ನು ಸೇರಿಸಿ ಅರೆದು ಕಡ್ಲೆಕಾಳುಗಾತ್ರ ಮೂರು ಗುಳಿಗೆ ಕಟ್ಟಿ ಹೊರಗಾದ ತಕ್ಷಣ ಒಂದು ಗುಳಿಗೆ ನುಂಗಿ ಉಳಿದ ಎರಡನ್ನು ಬೆಳಿಗ್ಗೆ ಮತ್ತು ಸಂಜೆ ನುಂಗುವುದು ಹೀಗೆ ಮೂರು ಸಾರಿ ಋತುವಾದಾಗ ತಗೆದುಕೊಂಡರೆ ಅವರ ಕಷ್ಟ ಪರಿಹಾರವಾಗುತ್ತದೆ (25).

* ಋತುಕಾಲ ಮುಂದೆ ಹೋಗಲು : ಮುಟ್ಟು ಆಗುವ ಹಿಂದಿನ ದಿನ 'ನನ್ನ ಮುಟ್ಟು ಐದು ದಿನ ಮುಂದೆ ಹೋಗಲಿ, ನಾನು ಇಂತಹ ಕಾರ್ಯಕ್ಕೆ ಹೋಗುತ್ತಿದ್ದೇನೆ' ಎಂದು ಸಂಕಲ್ಪ ಮಾಡಿಕೊಂಡು ಉಪ್ಪಿನ ಸ್ವಾರೆಯಲ್ಲಿ ಒಂದು ರೂಪಾಯಿಯನ್ನು ಹೂಳಬೇಕು. ಆಗ ಋತುಕಾಲ ಎರಡು ಮೂರು ದಿನಗಳು ಮುಂದೆ ಹೋಗುತ್ತದೆ. ಹಿಂತಿರುಗಿ ಬಂದ ಮೇಲೆ ಆ ರೂಪಾಯಿಯನ್ನು ಹೊರ ತಗೆಯಬೇಕು (26).

ಪುರುಷರ ಬಂಜೆತನ ನಿವಾರಣೆಗೆ : ನೆಲಗುಳ್ಳವನ್ನು ಬೇರು ಸಮೇತ ತಂದು ನೆರಳಿನಲ್ಲಿ ಒಣಗಿಸಿ ಸಣ್ಣಗೆ ಚೂರ್ಣ ಮಾಡಬೇಕು. ನಂತರ ಹಿಪ್ಲಿ, ಮೋಡಿ, ಜಾಕಾಯಿ, ಜಾಪತ್ರೆ, ಲವಂಗ, ಏಲಕ್ಕಿ, ಚಕ್ಕೆ, ಕಂಚಿಯಾಲಕ್ಕಿ, ವಾಯುವಿಳಂಗ, ಒಣದ್ರಾಕ್ಷಿ, ಗೋಡಂಬಿ, ಬಾದಾಮಿ, ಕಲ್ಲುಸಕ್ಕರೆ, ಉತ್ತತ್ತಿ, ಬಜೆ, ಶುಂಠಿ ಇವುಗಳನ್ನೆಲ್ಲ ಪುಡಿಮಾಡಿ ನೆಲಗುಳ್ಳದ ಚೂರ್ಣದೊಂದಿಗೆ ಬೆರಸಿಕೊಂಡು

ಆಕಳದ ತುಪ್ಪದೊಂದಿಗೆ ಪ್ರತಿದಿನ ಎರಡು ಸಾರಿಯಂತೆ ಮೂರು ಬೆರಳಿಗೆ ಬಂದಷ್ಟನ್ನು 21ದಿವಸ ಬೆಳಿಗ್ಗೆ ಮತ್ತು ಸಂಜೆ ವೇಳೆಗಳಲ್ಲಿ ಸೇವಿಸಬೇಕು ಇದರಿಂದ ಸಮಸ್ಯೆ ಪರಿಹಾರವಾಗುತ್ತದೆ.

ಪಥ್ಯ : 21 ದಿವಸ ಕರಿದ ಎಣ್ಣೆ ಪದಾರ್ಥಗಳನ್ನು ಸೇವಿಸಬಾರದು. ಒಂದು ವೇಳೆ ಸೇವಿಸಿದರೆ ಔಷಧಿ ದೇಹಕ್ಕೆ ಹಿಡಿಯುವುದಿಲ್ಲ. 21 ದಿವಸ ಹಾಸಿಗೆ ಪಥ್ಯ ಇರಬೇಕು(64).

ಈ ಸಮಸ್ಯೆಗೆ ಇತರ ವೈದ್ಯರು ನುಗ್ಗಿಹೂವು, ಈರುಳ್ಳಿ ಬೀಜ, ಕೊಳವಂಕನಬೀಜ, ಕೋಳಿ ಜುಟಿನಸೊಪ್ಪು, ಅಶ್ವಗಂಧಿ. ಊರು ಗುಬ್ಬಿಗಳು ಈ ಮೊದಲಾದವುಗಳ ಮೂಲಕ ಔಷಧಿಯನ್ನು ತಯಾರಿಸಿ ಕೊಡುತ್ತಾರೆ.

ಸ್ತ್ರೀಯರ ಬಂಜೆತನ ನಿವಾರಣೆಗೆ : ತೊಟ್ಟಿಲು ಬಳ್ಳಿಯ ಕುಡಿ, ಆನೆನೆಗ್ಗಿಲ ಸೊಪ್ಪು, ಕಿರುನೆಲ್ಲಿ ಸೊಪ್ಪು ಈ ಸೊಪ್ಪುಗಳನ್ನು ಏಳು ಮೆಣಸು, ಏಳು ಬೆಳ್ಳುಳ್ಳಿಗಳೊಂದಿಗೆ ಅರೆದು ಕಡ್ಲೆಕಾಳು ಗಾತ್ರ ಮಾತ್ರೆಗಳನ್ನು ಕಟ್ಟಬೇಕು. ಸೇವನೆಯ ಅವಧಿ : ಮುಟ್ಟಾದ ನಂತರ ಪ್ರತಿದಿನ ಎರಡು ಗುಳಿಗೆಯಂತೆ ಮೂರು ದಿವಸ ನುಂಗಿದಾಗ ಸಮಸ್ಯೆ ಪರಿಹಾರವಾಗುತ್ತದೆ.

ಪಥ್ಯ : ರಾಗಿ ಮುದ್ದೆ, ಒಣಮೆಣಸಿಕಾಯಿಯ, ನೀರುಸಾರನ್ನು 9 ಊಟ(ಟ) ಮಾಡಬೇಕು. ಅಂದರೆ ಮೂರು ದಿವಸ (200)

ಮಕ್ಕಳಾಗದಂತೆ ಕೊಡುವ ಔಷಧಿ :

* ಪುರುಷರ ಧಾತುವನ್ನು ಕೆಡಿಸಲು ಆಲದ ಮರದ ಹಾಲನ್ನು ಉಪಯೋಗಿಸುತ್ತಾರೆ (140).

* ಸ್ತ್ರೀಯರಿಗೆ ಶಾಶ್ವತವಾಗಿ ಮಕ್ಕಳಾಗದಂತೆ, ದೊಡ್ಡಕಾಯಿಬಳ್ಳಿ ಸೊಪ್ಪು, ಕೋಣನಬಳ್ಳಿ, ತಾಳೆ ಬೆಲ್ಲ ಇವನ್ನೆಲ್ಲ ಕುಟ್ಟಿ ದಿನಕ್ಕೆ ಒಂದುಸಲ ಒಂದು ಚಮಚದಷ್ಟು ಸೇವಿಸಬೇಕು. ಹೀಗೆ ನಾಲ್ಕು ದಿವಸ ಸೇವಿಸಬೇಕು. ಅಂದರೆ, ಒಂದು ವಾರದಲ್ಲಿ ಎರಡು ದಿವಸ ಸೇವಿಸಿ ಅದರ ಮುಂದಿನ ವಾರದಲ್ಲಿ ಮತ್ತೆರಡು ದಿವಸ ಸೇವಿಸಬೇಕು.

ಈ ಔಷಧಿಯನ್ನು ಇಬ್ಬರ ಮೇಲೆ ಪ್ರಯೋಗ ಮಾಡಿದಾಗ ಅವರಿಗೆ ಮಕ್ಕಳ ಸಂತಾನ ನಿಂತು

ಹೋಯಿತಂತೆ. ನಂತರ ವೈದ್ಯನ ಹನ್ನೆರಡು ವರ್ಷದ ಮಗಳು ಆಕಸ್ಮಿಕವಾಗಿ ಮರಣ ಹೊಂದಲಾಗಿ, ಅಂದಿನಿಂದ ಈ ಔಷಧಿ ಕೊಡುವುದನ್ನು ನಿಲ್ಲಿಸಿದ್ದೇನೆ ಎನ್ನುವ ವೈದ್ಯನು, ಮಕ್ಕಳ ಸಂತಾನ ಹರಣ ಮಾಡುವುದು ಮಹಾಪಾಪವೆಂದು ಭಾವಿಸಿರುತ್ತಾರೆ (197)

* ಗರ್ಭ ಪಾತಕ್ಕೆ ಕೊಡುವ ಔಷಧಿ : ಕಾವ್‌ಸೆಗೆಡ್ಡೆ (ಬೇರು), ಬಂದ್ರಿಕೆ ಬೀಜ ಮತ್ತು ತಾಳೆಬೆಲ್ಲ ಇವನ್ನು ಅರೆದು ಗಜ್ಜುಗದಗಾತ್ರ ಮೂರು ಗಳಿಗೆಕಟ್ಟಬೇಕು. ಗುಳಿಗೆಗಳನ್ನು ಬೆಳಿಗ್ಗೆ ಸಂಜೆಗಳಲ್ಲಿ ಎರಡು ನುಂಗಿ ಮರುದಿನ ಬೆಳಿಗ್ಗೆ ಮೂರನೆಯ ಗುಳಿಗೆಯನ್ನು ನುಂಗಬೇಕು.

ಸೂಚನೆ : ಮೂರು ತಿಂಗಳ ಒಳಗಿರುವ ಗರ್ಭಪಾತಕ್ಕೆ ಮಾತ್ರ ಈ ಔಷಧಿಯನ್ನು ಕೊಡಬೇಕು. ಆ ಅವಧಿ ಮೀರಿದ್ದಕ್ಕೆ ಇದು ಕೆಲಸ ಮಾಡುವುದಿಲ್ಲ (140)

ಇನ್ನೂ ಕೆಲವು ವೈದ್ಯರು, ಬಾಳೆಹಣ್ಣು, ಪರಂಗಿ ಹಣ್ಣುಗಳನ್ನು ಹೆಚ್ಚಾಗಿ ಸೇವಿಸಿ ಮೇಲೆ ಹುಳ್ಳಿ(ಹುರುಳಿ)ಯ ಉದುಕವನ್ನು ಕುಡಿದರೆ ಮೂರು ತಿಂಗಳ ಗರ್ಭಕರಗಿ ಹೋಗುತ್ತದೆ ಎಂದು ಹೇಳುತ್ತಾರೆ.

ಗರ್ಭಿಣಿಯರಿಗೆ ಸಂಬಂಧಿಸಿದ ಔಷಧೋಪಚಾರ : ಗರ್ಭಿಣಿ ಹಾಗೂ ಬಾಣಂತಿಯರ ನಿಃಶಕ್ತಿ ನಿವಾರಣೆಗೆ, ಹಿಪ್ಲಿ, ಮೋಡಿ, ಕಂಚಿಯಾಲಕ್ಕಿ, ಕಸ್ತೂರಿ, ಅರಿಶಿಣ, ಉತ್ತತ್ತಿ, ಒಣದ್ರಾಕ್ಷಿ, ಕುಂಕುಮ ಕೇಸರಿ, ಲವಂಗ, ಜಾಪತ್ರೆ ಮೊದಲಾದವುಗಳನ್ನು ಕುಟ್ಟಿ ಪುಡಿಮಾಡಿ, ಹಿರೇಮದ್ದಿನ ಬೇರಿನ ಚೂರ್ಣಕ್ಕೆ ಸೇರಿಸಿ ದಿನಕ್ಕೆ ಒಂದು ಚಮಚದಂತೆ 15ದಿವಸ ಸೇವಿಸಿದರೆ ಅವರ ಸಮಸ್ಯೆ ಪರಿಹಾರವಾಗುತ್ತದೆ (8).

ಗರ್ಭಿಣಿ ವಿವಿಧ ಹಣ್ಣುಗಳನ್ನು ತಿನ್ನಲು ಬಯಸುತ್ತಾಳೆ, ಹಾಗೆಯೇ ಸೊಪ್ಪು ತರಕಾರಿಗಳನ್ನು ಬಯಸಿ ಊಟಮಾಡುತ್ತಾಳೆ. ಇದು ಅವಳ ಅಪೌಷ್ಠಿಕತೆಯನ್ನು ನಿವಾರಣೆ ಮಾಡುತ್ತದೆ. ಇನ್ನೂ ತನ್ನ ಬಂಧುಗಳನ್ನು ಅಪ್ತರನ್ನು ನೊಡುವ ಬಯಕೆಗಳು ಆಕೆಯ ಮನಸ್ಸನ್ನು ಉಲ್ಲಾಸಗೊಳಿಸುವ ಕ್ರಿಯೆಗಳು, ಇದರಿಂದ ಮನಸ್ಸಿನ ಭೀತಿ, ಆತಂಕಗಳು ನಿವಾರಣೆಯಾಗಿ ಗರ್ಭಕರಗುವ ಸಂಭವ ಕಡಿಮೆಯಾಗುತ್ತದೆ.

* **ಹೆರಿಗೆ ನಿಧಾನವಾದರೆ** : ಕರಿಬೇವಿನ ಸೊಪ್ಪು, ಜೀರಿಗೆ, ಕೆಂಪು ಸಕ್ಕರೆ ಇವನ್ನು ಕುಟ್ಟಿ ಕಷಾಯದ ರೀತಿ ಕುದಿಸಿ ಕುಡಿಸಿದರೆ ಬೇಗ ಹೆರಿಗೆಯಾಗುತ್ತದೆ (9).

* ಮತ್ತೊಂದು ವಿಧಾನ, ಹುಳ್ಳಿಕಾಳು, ಶುಂಠಿ ಇವನ್ನು ಚೆನ್ನಾಗಿ ಅರೆದು ಜೇನು ತುಪ್ಪದಲ್ಲಿ ಕಲಸಿ ಕುಡಿಸುವುದರಿಂದ ತಕ್ಷಣ ಹೆರಿಗೆ ಆಗುತ್ತದೆ (111).

ಇದು ಬಹಳ ಒಳ್ಳೆಯ ಔಷಧಿ, ಆಸ್ಪತ್ರೆಗೆ ಹೋಗುವವರನ್ನು ಒಂದು ಕ್ಷಣ ತಡೆದು ಈ ಔಷಧಿಯನ್ನು ಕೊಟ್ಟು ಸುಲಭವಾಗಿ ಹೆರಿಗೆ ಆಗುವಂತೆ ಮಾಡಿದ್ದೇನೆ. ಇದಕ್ಕಾಗಿ ರಾತ್ರೋರಾತ್ರಿ ಜನ ಬಂದು ನನ್ನ ಕರೆದೊಯ್ಯುತ್ತಾರೆ ಎಂಬ ಅಭಿಪ್ರಾಯವನ್ನು ವೈದ್ಯರು ವ್ಯಕ್ತಪಡಿಸುತ್ತಾರೆ.

* **ಬಾಣಂತಿಯರ ಸನ್ನಿ** : ಬಿಳಿಗೆಂಜರಿ ಬೇರನ್ನು ಕುಟ್ಟಿ (ಹೆಣ್ಣಿಗೆ ಔಷಧಿ ಕೊಡುವಾಗ ಗಂಡು ಹುಡುಗರ ಮೂತ್ರ, ಗಂಡಿಗೆ ಔಷಧಿ ಕೊಡುವಾಗ ಹುಡುಗಿಯರ ಮೂತ್ರ) ವಿರುದ್ಧ ಲಿಂಗದವರ ಮೂತ್ರದಲ್ಲಿ ಕಲಿಸಿ ಬಟ್ಟೆಯಿಂದ ಸೋಸಿ ಮೂಗಲ್ಲಿ ಹುಯ್ಯುಬೇಕು. ಹೀಗೆ ಭಾನುವಾರ ಹಾಗೂ ಗುರುವಾರಗಳಲ್ಲಿ ದಿನಕ್ಕೆ ಒಂದು ಸಲದಂತೆ ನಾಲ್ಕು ದಿವಸ ಹುಯ್ಯಬೇಕು (64).

ಎದೆ ಹಾಲಿನ ಕೊರತೆ ಮತ್ತು ನಿವಾರಣೆ

* **ಎದೆ ಹಾಲು ವೃದ್ದಿಗೆ** : ಕಿರುಕುಸಾಲೆ ಸೊಪ್ಪನ್ನು ತಂದು ಮೇಕೆಹಾಲಲ್ಲಿ ಬೇಯಿಸಬೇಕು. ಕುಂಭಾರ ಹುಳುವನ್ನು ಹಿಡಿದು ತಂದು ಅದರ ತಲೆ, ಕಾಲು, ರಕ್ಕೆಗಳನ್ನು ತಗೆದು ಹಾಕಿ ಬೆಂದ ಸೊಪ್ಪಿಗೆ ಅದರ ದೇಹದ ರಸವನ್ನು ಹಿಂಡಿ ನಂತರ ಸೊಪ್ಪನ್ನು ಊಟಮಾಡಬೇಕು. ಹೀಗೆ ಮೂರು ದಿವಸ ಊಟ ಮಾಡಿದರೆ ಎದೆ ಹಾಲು ಹೆಚ್ಚಾಗುತ್ತವೆ (74).

ಈ ಔಷಧದಿಂದ ಎದೆಹಾಲು ವೃದ್ಧಿಯಾಗಿರುವ ಇಬ್ಬರು ಮಹಿಳೆಯರನ್ನು ಭೇಟಿ ಮಾಡಲಾಗಿದ್ದು, ಅವರುಗಳು ತಮ್ಮ ಮಗುವಿಗೆ ಸಾಕಾಗುವಷ್ಟು ಹಾಲು ಹೆಚ್ಚಾಗಿತ್ತು ಎಂಬುದನ್ನು ಹೇಳಿದರು. ಇವರಿಂದ ಪ್ರಮಾಣ ಪತ್ರಗಳನ್ನು ಪಡೆಯಲಾಗಿದೆ.

* **ಹೆಚ್ಚಾದ ಹಾಲನ್ನು ಕಡಿಮೆ ಮಾಡುವಿಧಾನ** : ಸೂಜಿ ಮಲ್ಲಿಗೆ ಸೊಪ್ಪನ್ನು ರಾತ್ರಿ ಮಲಗುವಾಗ ಮೂರು ದಿನಗಳ ಕಾಲ ಎದೆಗೆ ಕಟ್ಟಿಕೊಳ್ಳುವುದು. ಇದರಿಂದ ಹಾಲು ಕಡಿಮೆಯಾಗುತ್ತವೆ. ಆದರೆ ಪುನಃ ಹೆಚಾಗುವುದಿಲ್ಲ (197).

* ಮಗು ಹಾಲು ಕುಡಿಯುವುದನ್ನು ಬಿಡಿಸುವ ಉಪಾಯ ಬೇವಿನ ಸೊಪ್ಪನ್ನು ಅರೆದು ಎದೆಗೆ ಹಚ್ಚಿಕೊಳ್ಳುವುದು.

ಸ್ತ್ರೀ ರೋಗಗಳು

* **ಕೆಂಪುಕರೆ :** ಒಂದು ಹಿಡಿ ವಜ್ರಮುಷ್ಟಿ ಗಿಡದ ಬೇರನ್ನು ಏಳು ಮೆಣಸು ಏಳು ಬೆಳ್ಳುಳ್ಳಿಗಳೊಂದಿಗೆ ಕುಟ್ಟಿ, ನಂತರ ಔಷಧಿಯನ್ನು ನೀರಲ್ಲಿ ಮಂದಗೆ ಕಲಸಿ ಅದಕ್ಕೆ ಕಬ್ಬಿಣದಿಂದ ಪೊಂಗು ಮಾಡಿ ಪ್ರತಿದಿನ ಬೆಳಿಗ್ಗೆ ಒಂದು ಸಾರಿಯಂತೆ ಏಳು ದಿವಸ ಕುಡಿಯಬೇಕು. ಇದರಿಂದ ಕೆಂಪುಕೆರೆ ಸಮಸ್ಯೆ ಪರಿಹಾರವಾಗುತ್ತದೆ.

ಪಥ್ಯ : ರಾಗಿ ಮುದ್ದೆ, ಬೇಳೆ ಉದುಕವನ್ನು ಕಡ್ಡಾಯವಾಗಿ ಏಳು ದಿವಸ ಊಟಮಾಡಬೇಕು(7).

* **ಬಿಳಿಕರೆ :** ಬಿಳಿಹುಲಿ ಕುಡಿ, ಜಾಲಿಕುಡಿ, ತಂಗಟೆ ಕುಡಿಗಳನ್ನು ಮೆಣಸು, ಬೆಳ್ಳುಳ್ಳಿಗಳೊಂದಿಗೆ ನಯವಾಗಿ ಅರೆದು ಕುರಿಪಿಚ್ಚಿಗೆಯ ಗಾತ್ರ 9 ಗುಳಿಗೆಗಳನ್ನು ಕಟ್ಟಿ, ಬೆಳಿಗ್ಗೆ ಮತ್ತು ಸಂಜೆ ಒಂದೊಂದು ಗುಳಿಗೆಯಂತೆ ನುಂಗುವುದು.

ಅಪಥ್ಯ : ಸೆಲ್ದಿಪದಾರ್ಥ ಸೇವಿಸುವಂತಿಲ್ಲ, 15ದಿವಸ ಹಾಸಿಗೆ ಪಥ್ಯವನ್ನು ಪಾಲಿಸಬೇಕು (26).

* **ಗರ್ಭಕೋಶ ಜರುಗುವುದಕ್ಕೆ ಔಷಧಿ :** ಕತ್ತೆಕಿರುಬನ ಸೊಪ್ಪನ್ನು ಮೆಣಸು, ಬೆಳ್ಳುಳ್ಳಿ, ಲವಂಗಗಳೊಂದಿಗೆ ಅರೆದು ಗೋಲಿಗಾತ್ರದ ಹತ್ತು ಮಾತ್ರೆಗಳನ್ನು ಕಟ್ಟಬೇಕು. ಪ್ರತಿದಿನ ಒಂದು ಮಾತ್ರೆಯನ್ನು ಸೇವಿಸಿ ಮೇಲೆ ಒಂದು ಲೋಟ ಹಾಲು ಕುಡಿಯಬೇಕು. ಹೀಗೆ ಮಾಡಿದರೆ ಗರ್ಭಕೋಶ ಪುನಃ ಮೊದಲಿನ ಸ್ಥಾನಕ್ಕೆ ಹೋಗುತ್ತದೆ (18).

* **ಮೊಲೆಹುಣ್ಣು :** ನೆಲಗೋಣಿಸೊಪ್ಪನ್ನು ಅರೆದು ಹುಣ್ಣಿಗೆ ಹಚ್ಚಿ ಮೇಲೆ ವೀಳೆದೆಲೆಯನ್ನು ಮುಚ್ಚಿ ಬಟ್ಟೆಯಿಂದ ಕಟ್ಟಬೇಕು. ಹೀಗೆ ಐದು ದಿನಗಳು ಮಾಡಿದರೆ ಹುಣ್ಣು ವಾಸಿಯಾಗುತ್ತದೆ.

ಆಂದ್ರದ ಮೊಲೆ ಸಮುದ್ರದಿಂದ ಬಂದ ಹೆಂಗಸಿನ ಹುಣ್ಣು ಒಡೆದು ಬೊಕ್ಕೆ ಬಿದ್ದಿತ್ತು. ಅದು ಈ ಔಷಧದಿಂದ ಗುಣವಾಯಿತೆಂದು ವೈದ್ಯರು ಹೇಳಿದ್ದಾರೆ (173).

ಆ) ಶಿಶುಸಂಬಂಧಿ ವೈದ್ಯೋಪಚಾರಗಳು

ಹೆರಿಗೆಯಾದ ಕ್ಷಣದಿಂದ ಕೂಸಿನ ಆರೈಕೆ ಪ್ರಾರಂಭವಾಗುತ್ತದೆ. ತಾಯಿಯ ಗರ್ಭದಿಂದ ಮಗು ಹೊರಬಂದು ಅತ್ತ ನಂತರ ಹೊಕ್ಕಳ ಹುರಿಯನ್ನು ಕತ್ತರಿಸಿ ಎದೆಹಾಲು ಉಣಿಸುತ್ತಾರೆ. ತಾಯಿಯ ಎದೆಹಾಲು ಕಡಿಮೆ ಇದ್ದರೆ, ಹಾಲು ಬರದಿದ್ದರೆ, ಮೇಕೆ ಅಥವಾ ಹಸುವಿನ ಹಾಲನ್ನು ಹುಟ್ಟಿದ ಕೂಸಿಗೆ ಹುಯ್ಯುತ್ತಾರೆ. ಹುಟ್ಟಿದ ಮೂರು ದಿನಗಳ ನಂತರ ಕತ್ತೆಯ ಹಾಲನ್ನು ಕುಡಿಸುವ ರೂಢಿ ಕೆಲವು ಭಾಗಗಳಲ್ಲಿದೆ. ಹೀಗೆ ಮಾಡುವುದರಿಂದ ಮಗುವಿನ ರೋಗನಿರೋಧಕ ಶಕ್ತಿ ಹೆಚ್ಚಾಗುತ್ತದೆ ಎಂದು ಹೇಳುತ್ತಾರೆ.

ಮಗುವಿನ ಬುದ್ಧಿ ಬೆಳವಣಿಗೆ ಯಾಗಲು ಬಜೆಯನ್ನು ತೇದು ನೆಕ್ಕಿಸುತ್ತಾರೆ. ಇದರಿಂದ ಅಜೀರ್ಣತೆಯೂ ಹೊರಟು ಹೋಗುತ್ತದೆ. ಮೂರು ತಿಂಗಳ ನಂತರ ಒಂದೆಲಗದ ಪುಡಿಯನ್ನು ಹಾಲಲ್ಲಿ ಕುಡಿಸುತ್ತಾರೆ. ಇದರಿಂದ ಬುದ್ಧಿಬೆಳವಣಿಗೆಯೂ ದೇಹ ಬಲಿಷ್ಠವೂ ಆಗುತ್ತದೆಂದು ಹೇಳುತ್ತಾರೆ. ಮನೆಯಲ್ಲಿ ಹಾಲು ಕೊಡುವ ದನಗಳು ಇಲ್ಲದವರು ಮತ್ತು ಹಾಲನ್ನು ಕೊಂಡುಕೊಳ್ಳಲು ಆಗದವರು ನಾಲ್ಕು ತಿಂಗಳಿನಿಂದಲೇ ಜೋಳದ ಗಂಜಿ, ಅನ್ನ, ತೊಗರಿ ಕಾಳು, ಹುಳ್ಳಿಕಾಳುಗಳಿಂದ ಮಾಡಿದ ನುಣ್ಣನೆಯ ಹೂರಣವನ್ನು ತಿನ್ನಿಸುತ್ತಾರೆ. ಮಕ್ಕಳ ಕೆಲವು ವೈದ್ಯವಿವರಗಳು ಈ ಕೆಳಗಿನಂತಿವೆ.

* **ಮಕ್ಕಳಮಾತು ಬರುವುದಕ್ಕೆ :** ಸಣ್ಣ ಜೇನಿನ ತುಪ್ಪವನ್ನು ನೆಕ್ಕಿಸುವುದರಿಂದ ತೊದಲು ನಿವಾರಣೆಯಾಗಿ ಮಾತು ಶುದ್ಧವಾಗಿ ಬರುತ್ತದೆ ಎಂದು ವೈದ್ಯರು ಹೇಳುತ್ತಾರೆ. ಒಂದು ವೇಳೆ ಸ್ವರ ಇಲ್ಲದಿದ್ದರೆ ಬಿಳಿಗುಲಗಂಜಿ ಸೊಪ್ಪನ್ನು ತಿನ್ನಿಸುವುದರಿಂದ ಆ ಸಮಸ್ಯೆ ಪರಿಹಾರವಾಗುತ್ತದೆ (118).

* **ಮಕ್ಕಳ ಹಕ್ಕಿಕಾಲು ರೋಗ :** ಹುತ್ತದ ರಾಣಿ ಹುಳುವನ್ನು ತಂದು ಅದರ ತಲೆ, ಕಾಲು ತಗೆದು ಮೇಕೆಹಾಲಲ್ಲಿ ರಂಗಳಿಸಿ ಕುಡಿಸುವುದು. ಒಂದು ಹುಳು ಕುಡಿಸಿದರೆ ಮಗು ಚೆನ್ನಾಗಿ ಆಗಿಬಿಡುತ್ತದೆ(8).

* **ಮಕ್ಕಳ ನಿಃಶಕ್ತಿಗೆ** ಬೇವಿನ ಮರದ ತೊಗಟೆಯ ಕೆಂಪು ಭಾಗವನ್ನು ಮೆಣಸು, ಬೆಳ್ಳುಳ್ಳಿಗಳೊಂದಿಗೆ ಕುಟ್ಟಿ ರಸಮಾಡಿ ಇದಕ್ಕೆ ಪೊಂಗು ಮಾಡಬೇಕು. ಹೀಗೆ ಮಾಡಿದ ಔಷಧವನ್ನು ದಿನಕ್ಕೆ ಒಂದು ಸಾರಿಯಂತೆ ಏಳುದಿನಗಳ ಕಾಲ ಕುಡಿಸಿದರೆ, ಮಕ್ಕಳ ಹೊಟ್ಟೆಯಲ್ಲಿರುವ ಜಂತು ಹುಳುಗಳೆಲ್ಲ ಸತ್ತು

ಹೋಗುತ್ತವೆ. ನಂತರ ಮಗು ಊಟಮಾಡಿದ್ದು ದೇಹಕ್ಕೆ ಹಿಡಿಯುತ್ತದೆ. ಆಗ ನಿಃಶಕ್ತಿ ನಿವಾರಣೆಯಾಗುವುದು (125).

* **ಮಕ್ಕಳ ಭೇದಿಗೆ :** ಗೋಣಿಮೊಗ್ಗು, ಬುಡ್‌ಕಡ್ಲೆಸೊಪ್ಪು, ಕವಳೆಕುಡಿ. ಇವುಗಳಲ್ಲಿ ಯಾವುದನ್ನಾದರೂ ಎದೆಹಾಲಿನಲ್ಲಿ ತೇಯ್ದು ಎರಡು ದಿನ ಕುಡಿಸಬೇಕು (74).

* **ಅಳ್ಳೆರೋಗ :** ಕರೆಕಾಕಿಸೊಪ್ಪು, ಗುರುಮಿಡಿ ಸೊಪ್ಪು, ಕುಪ್ಪೆಸೊಪ್ಪು, ಬುಡ್ಡೆಗಿಡದ ಸೊಪ್ಪು ಇವುಗಳನ್ನೆಲ್ಲ ಕಸ್ತೂರಿ, ಗೋರೋಜನ, ಕುಂಕುಮ ಕೇಸರಿ, ಹಿಪ್ಲಿ, ಮೋಡಿ, ಜಾಕಾಯಿಗಳೊಂದಿಗೆ ಅರೆದು ತೊಗರಿ ಕಾಳಿನಷ್ಟು ಗುಳಿಗೆ ಕಟ್ಟಿ ಒಂಭತ್ತು ದಿವಸ ಒಂದೊಂದು ಗುಳಿಗೆಯನ್ನು ಹಾಲಲ್ಲಿ ತೇಯ್ದು ಕುಡಿಸಿದರೆ ಅಳ್ಳೆರೋಗ ವಾಸಿಯಾಗುತ್ತದೆ (74).

* **ಮಕ್ಕಳ ಕೆಮ್ಮಿಗೆ :** ಕುಲ್ವಿಗನ ಕುಡಿಯನ್ನು ಉಪ್ಪಿನ ಹರಳಿನೊಂದಿಗೆ ಉಜ್ಜಿ ತಿನ್ನಿಸುವುದು (7).

* **ಮಕ್ಕಳ ಸೆಟೆರೋಗ :** ಉಗುಣಿ ಬಳ್ಳಿಯ ಐದು ಕುಡಿಗಳನ್ನು ಒಂದು ಮೆಣಸು, ಒಂದು ಬೆಳ್ಳುಳ್ಳಿ ಜೊತೆ ಅರೆದು ಕಡ್ಲೆಕಾಳು ಗಾತ್ರ ಮೂರುಗುಳಿಗೆ ಕಟ್ಟಿ ಒಂದು ವಾರದವರೆಗೆ ಮೇಕೆ ಹಾಲಲ್ಲಿ ತೇಯ್ದು ಕುಡಿಸಬೇಕು. ಇದರಿಂದ ಅಳ್ಳೆರೋಗ, ಸೆಟೆರೋಗಗಳು ಗುಣಹೊಂದುತ್ತವೆ.

ಅಪಥ್ಯ : ಸಜ್ಜೆ, ಕುಂಬಳಕಾಯಿ, ಅಣಬೆ, ಗೆಣಸುಗಳನ್ನು ಸುಮಾರು ಹತ್ತು ವರ್ಷಗಳ ಕಾಲ ತಿನ್ನಬಾರದು (24).

* ಅಳ್ಳೆರೋಗ, ಫಿಟ್ಸ್‌ಗಳು ಬರದಂತೆ. ಸುಪ್ಪತ್ತಿಗೆಸೊಪ್ಪು, ಮರಾಲೆಸೊಪ್ಪು, ಬೇವಿನ ಕುಡಿ ಇವುಗಳನ್ನು ಮೂರು ಮೆಣಸು, ಮೂರು ಬೆಳ್ಳುಳ್ಳಿಗಳೊಂದಿಗೆ ಅರೆದು ಕಡ್ಲೆಕಾಳಿನಷ್ಟು ಮಾತ್ರೆ ಮಾಡಬೇಕು. ಗರ್ಭಿಣಿಯಾದ 5 ತಿಂಗಳಿಂದ 9 ತಿಂಗಳ ಅವಧಿಯಲ್ಲಿ ತಿಂಗಳಿಗೆ ಎರಡು ಮಾತ್ರೆಗಳನ್ನು ನುಂಗಿಸುವುದರಿಂದ ಹುಟ್ಟುವ ಮಗುವಿಗೆ ಅಳ್ಳೆರೋಗ, ಫಿಟ್ಸ್‌ಗಳು ಬರುವುದಿಲ್ಲ (170).

* **ಮಕ್ಕಳ ಹಸಿರು ಭೇದಿ :** ನೀರುಬಿನ್ನಿ ಸೊಪ್ಪನ್ನು ಮೊಲೆಹಾಲಿನಲ್ಲಿ ಅರೆದು ಹುಯ್ಯುವುದು ವಯಸ್ಸಿಗೆ ಅನುಸಾರವಾಗಿ ಪ್ರಮಾಣವನ್ನು ನಿರ್ಧರಿಸುತ್ತಾರೆ. ಎಂಟು ತಿಂಗಳ ಮಗುವಿಗೆ ಅರ್ಧಚಮಚ, ಒಂದು ವರ್ಷದ್ದಕ್ಕೆ ಒಂದು ಚಮಚದಷ್ಟು ಇತ್ಯಾದಿ (64).

ಇ) ವಿಶೇಷ ಇಂದ್ರಿಯಗಳು

*** ಕಣ್ಣುಹೂಕುಂತಾಗ :** ಎಡತತರೆಗಿಡದ ಎಲೆಯನ್ನು ಉಪ್ಪಿನೊಂದಿಗೆ ಬಾಯಲ್ಲಿ ಅಗಿದು ನಂತರ ಬಟ್ಟೆಯಿಂದ ರಸವನ್ನು ಸೋಸಿಕೊಂಡು ಬೆಳಗಿನ ವೇಳೆಗೆ ಕಣ್ಣಿಗೆ ಎರಡು ಹನಿ ಬಿಡುವುದು. ಹೀಗೆ ನಾಲ್ಕು ದಿವಸ ಮಾಡಬೇಕು (7).

*** ಮೂಗಿನ ಪಿಂಚಣಿ (ಪಿನಾಸಿ) :** ಕುಪ್ಪೆಸೊಪ್ಪಿನ ರಸ, ಅಂಟರಿಕೆರಸ, ಕಾಮಕಸ್ತೂರಿ ರಸಗಳನ್ನು ಸಮಪ್ರಮಾಣದಲ್ಲಿ ಸೇರಿಸಿ ಮೂಗಿಗೆ ಎರಡು ಹನಿಗಳಂತೆ ಮೂರು ವಾರ ಬಿಡಬೇಕು. ರಸವನ್ನು ಬಿಟ್ಟು ನಂತರ ಮೇಲೆ ಆಕಳ ತುಪ್ಪವನ್ನು ಬಿಡಬೇಕು. ಇದರಿಂದ ಸಮಸ್ಯೆ ಶಾಶ್ವತವಾಗಿ ದೂರವಾಗುತ್ತದೆ(70).

***ಕಿವಿ ನೋವು ಮತ್ತು ಸೋರುವುದಕ್ಕೆ :** ಹಿಪ್ಪಲಿ, ಸೈಂದಲವಣ, ಭದ್ರಮುಷ್ಠಿಕೋಶದ ಬೇರು, ಬಜೆ, ಬೆಳ್ಳುಳ್ಳಿ ಇವನ್ನು ಸಮಪ್ರಮಾಣದಲ್ಲಿ ಅರೆದು ಒಳ್ಳೆಣ್ಣೆ ಹಾಗು ಎಕ್ಕೆ ಎಲೆ ರಸವನ್ನು ಅದರೊಂದಿಗೆ ಸೇರಿಸಿ ಚೆನ್ನಾಗಿ ಕುದಿಸಿ ಸ್ವಲ್ಪ ಬಿಸಿ ಇರುವಾಗ ಎರಡು ಅಥವಾ ಮೂರು ಹನಿಗಳನ್ನು ನೋವಿರುವ ಕಿವಿಯಲ್ಲಿ ರಾತ್ರಿ ಮಲಗುವಾಗ ಬಿಡುವುದು. ಇದರಿಂದ ಕಿವಿಯಲ್ಲಿಯ ಕೀವು, ಹುಣ್ಣು, ನೋವು, ಕಿವುಡು ಎಲ್ಲಾ ಗುಣವಾಗುತ್ತದೆ (6).

*** ಕಿರುನಾಲಿಗೆ :** ಅತ್ತಿ ಮರದ ತೊಗಟೆ, ಏಳು ಮೆಣಸು ಏಳು ಬೆಳ್ಳುಳ್ಳಿ ಇವೆಲ್ಲವನ್ನು ಕುಟ್ಟಿ ಮಂದ ರಸವನ್ನು ಮಾಡಿ ಪೊಂಗುಮಾಡಿ ನಂತರ ಸೋಸಿ ಮೂರು ದಿನ ಕುಡಿಯಬೇಕು. ಪ್ರತಿ ಸಾರಿಯೂ ಕುಡಿದ ತಕ್ಷಣ ಬಿಸಿ ರಾಗಿ ರೊಟ್ಟಿಯನ್ನು ತಿನ್ನಬೇಕು. ಇದರಿಂದ ಕಾಯಿಲೆ ಬಹುಬೇಗ ಗುಣವಾಗುತ್ತದೆ (124).

ಈ) ವಿಷಸಂಬಂಧಿ ವೈದ್ಯೋಪಚಾರಗಳು

ಹಾವಿನ ವಿಷವನ್ನು ಪರಿಹರಿಸಲು ಒಂದು ಮೂಲಿಕೆಯಿಂದ ಎಂಟು ಮೂಲಿಕೆಗಳನ್ನು ಸೇರಿಸಿಕೊಂಡು ಔಷಧಿ ತಯಾರಿಸಿಕೊಡುತ್ತಾರೆ, ಯಾವುದೇ ಹಾವಿನ ವಿಷವಾದರೂ ಈ ಔಷಧಿಯಿಂದ ವಾಸಿಯಾಗುತ್ತದೆ. ಅವುಗಳಲ್ಲಿ ವಿಶೇಷವೆನಿಸುವ ಮೂರು ಉದಾಹರಣೆಗಳು.

* **ಅಡವಿ ಸಿಟ್ಟೆಟ್ಲಗಡ್ಡೆ :** ಈ ಗಡ್ಡೆಯನ್ನು ಹಸಿದಾಗಿಯೇ ಅಗಿದು ತಿನ್ನಿಸುವುದು, ಇಲ್ಲವೇ ನೆರಳಲ್ಲಿ ಒಣಗಿಸಿ ಅರೆದು ಕುಡಿಸಬಹುದು. ಗಡ್ಡೆಯನ್ನು ಕುಡಿದ ನಂತರ ವಿಷವೆಲ್ಲ ವಾಂತಿಯ ಮೂಲಕ ಹೊರಬರುತ್ತದೆ.

ಗಾಯಕ್ಕೆ ಔಷಧಿ : ಹಾವು ಕಡಿದ ಭಾಗ ನಂಜಾಗಿ ಗಾಯವಾಗಿದ್ದರೆ ಬಿಳಿಗೆಂಜರಿ ಬೇರನ್ನು ಅರಿಶಿಣದೊಂದಿಗೆ ಅರೆದು ಹಚ್ಚಬೇಕು.

ಪಥ್ಯ : ರಾಗಿ ಮುದ್ದೆ, ಬೇಳೆ ಉದುಕವನ್ನು ಐದು ದಿವಸ ಊಟಮಾಡಬೇಕು (67).

* **ಕಾಡು ಮೆಣಸಿನ ಗಿಡ :** ಇದರ ಎಲೆಗಳನ್ನು ಮೆಣಸು ಬೆಳ್ಳುಳ್ಳಿಗಳೊಂದಿಗೆ ಘಾಟು ವಾಸನೆ ಬರುವತನಕ ಅರೆದು ಕುರಿ ಪಿಚ್ಚಿಗೆ ಗಾತ್ರ ಗುಳಿಗೆ ಕಟ್ಟುವುದು.

ಸೇವನೆಯ ಕ್ರಮ : ಹಾವು ಕಡಿದವನು ಒಂದು ಗುಳಿಗೆಯನ್ನು ಜಗಿದು ನುಂಗಬೇಕು. ಗುಳಿಗೆ ನುಂಗಿದಾಗ ಯಾವ ಕಾರಣಕ್ಕೂ ವಾಂತಿಯಾಗಬಾರದು. ಕಡಿದ ಭಾಗಕ್ಕೆ ಅದೇ ಗುಳಿಗೆಯನ್ನು ತೇದು ಹಚ್ಚುವುದು, ಹಾಗೆಯೆ ಕಣ್ಣಿಗೆ ಅಂಜನದ ರೀತಿ ಹಚ್ಚಿ ನತ್ತಿಗೆ ಸ್ವಲ್ಪ ಹಚ್ಚಿ ತಿಕ್ಕುವುದು. ಹೀಗೆ ಮಾಡಿದಾಗ ಎಂಥದೇ ವಿಷದ ಹಾವು ಕಡಿದಿದ್ದರೂ ರೋಗಿ ವಾಸಿಯಾಗುತ್ತಾನೆ.

ಪಥ್ಯ : ರಾಗಿಮುದ್ದೆ ರೊಟ್ಟಿ ಮತ್ತು ಒಣಮೆಣಸಿನಕಾಯಿ ಚಟ್ನಿ, ಹಾಸಿಗೆ ಪಥ್ಯ ಕನಿಷ್ಠ ಒಂದು ವಾರದ ದಿನ ಇರಬೇಕು (30).

* **ಅಡವಿ ಗೆಂಜರಿ :** ಇದರ ಸೊಪ್ಪನ್ನು ಮಜ್ಜಿಗೆ ಮತ್ತು ನಿಂಬೆಹುಳಿಯಲ್ಲಿ ಅರೆದು ಕುಡಿಸುವುದು. ಒಂದು ಸಾರಿಗೆ ವಿಷ ವಾಂತಿಯಾಗೆದಿದ್ದರೆ ಮತ್ತೊಂದು ಸಾರಿ ಕುಡಿಸುವುದು, ಆಗ ವಿಷ ಸಂಪೂರ್ಣ ಹೊರಬಂದು ರೋಗಿ ಗುಣವಾಗುತ್ತಾನೆ.

ಪಥ್ಯ : ಸಜ್ಜೆಯ ಬಾನ ಮತ್ತು ಮಜ್ಜಿಗೆಯನ್ನು ಎರಡು ದಿವಸ ಊಟಮಾಡಬೇಕು.

ಅಪಥ್ಯ : 20ದಿವಸ ಸೆಲ್ದಿ ಪದಾರ್ಥ ವರ್ಜಿತ (73).

* ಕಾರೆಬೇರು, ಆಡುಮುಟ್ಟದ ಬೇರು, ಬಿಳಿಹುಲಿ ಬೇರು, ತುಂಬೆ ಬೇರು, ಕರಿಕೆಬೇರು,

ಅಂಕೋಲೆ ಬೇರು, ಹಂಚಿಕಡ್ಡಿ ಬೇರು, ದೊಡ್ಡಕಾಯಿಬಳ್ಳಿ ಬೇರು ಇವೆಲ್ಲವುಗಳನ್ನು ಕುಟ್ಟಿ ಅರ್ಧಲೀಟರ್ ಮಜ್ಜಿಗೆಯಲ್ಲಿ ಕುಡಿಸುವುದು. ಇದರಿಂದ ಯಾವುದೇ ಹಾವಿನ ವಿಷವಾದರೂ ಗುಣವಾಗುತ್ತದೆ.

ಪಥ್ಯ : ಎರಡು ದಿನ ಹಚ್ಚರಾಗಿ ಮುದ್ದೆ ಸಪ್ಪೆಬೇಳೆಸಾರನ್ನು ಊಟಮಾಡಬೇಕು. ಕಡಿದ ದಿನ ರಾತ್ರಿ ನಿದ್ದೆ ಮಾಡಬಾರದು (165).

ಉ) ಇತರ ಪ್ರಮುಖ ವೈದ್ಯೋಪಚಾರಗಳು

ಸಾಮಾನ್ಯವಾಗಿ ಬಡವ ಬಲ್ಲಿದರೆನ್ನದೆ ಎಲ್ಲರನ್ನೂ ಕಾಡುವ ರೋಗಗಳು ಅಸಂಖ್ಯವಾಗಿವೆ. ಅವುಗಳ ನಿವಾರಣೆಗೆ ಮನುಷ್ಯನು ಏನೆಲ್ಲ ಪ್ರಯತ್ನವನ್ನು ಮುಂದುವರಿಸಿದ್ದಾನೆ. ಇವುಗಳ ಪರಿಹಾರಕ್ಕಾಗಿ ಪೂರ್ವದಿಂದಲೂ ಜನಪದರು ವಿವಿಧ ಪ್ರಯೋಗಗಳನ್ನು ಮಾಡುತ್ತಾ ಬಂದಿದ್ದಾರೆ. ಅವುಗಳಲ್ಲಿನ ಉತ್ತಮ ಫಲಿತಾಂಶ ವೈದ್ಯದಲ್ಲಿ ವಿಶ್ವಾಸವನ್ನು ಮೂಡಿಸಿ ಇಂದಿಗೂ ಆ ಚಿಕಿತ್ಸೆಗಳು ಮುಂದುವರಿಯಲು ಸಾಧ್ಯವಾಗಿದೆ. ಇಂಥ ಕಾಯಿಲೆಗಳಿಗೆ ಮತ್ತು ಅವುಗಳಿಗೆ ಮಾಡುವ ಚಿಕಿತ್ಸಾ ವಿಧಾನಗಳು.

* **ಸಕ್ಕರೆ ಕಾಯಿಲೆ** : ನೆಲತಂಗಡಿ ಎಲೆ ಮತ್ತು ಸುಗಂಧಿ ಬೇರುಗಳನ್ನು ನೆರಳಲ್ಲಿ ಒಣಗಿಸಿ ಚೂರ್ಣ ಮಾಡಿಕೊಂಡು ಪ್ರತಿದಿನ ಎರಡು ಚಮಚದಷ್ಟು ಬಿಸಿನೀರಿನಲ್ಲಿ ಸೇವಿಸುವುದು. ಹೀಗೆ ಎರಡು ತಿಂಗಳುಗಳ ಕಾಲ ಸೇವಿಸಿದರೆ ಕಾಯಿಲೆ ಸಂಪೂರ್ಣ ನಿಯಂತ್ರಣಕ್ಕೆ ಬರುತ್ತದೆ (72).

* **ಮತ್ತೊಂದು ವಿಧಾನ** : ಮೂಡಲ ದಿಕ್ಕಿಗೆ ಹರಿದಿರುವ ಬೇಟೆಗಿಡದ ಬೇರನ್ನು ತಂದು ನೀರಲ್ಲಿ ತೇಯ್ದು ಕನಿಷ್ಠ ಮೂರು ಚಮಚದಷ್ಟನ್ನು ಕುಡಿಯಬೇಕು ಕುಡಿದ ನಂತರ ಒಂದು ಕಪ್ಪು ಹೆಸರು ಬೇಳೆ ಪಾಯಸವನ್ನು ಊಟಮಾಡಬೇಕು. ಇದೇ ರೀತಿ 41ದಿವಸ ಮಾಡಿದರೆ ದೇಹದಲ್ಲಿನ ಸಕ್ಕರೆಯ ಅಂಶ ಸಹಜ ಸ್ಥಿತಿಗೆ ಬರುತ್ತದೆ. ಸ್ವಲ್ಪ ಅವದಿಯ ಕಾಯಿಲೆ ಪೂರ್ಣ ಪ್ರಮಾಣದಲ್ಲಿ ಗುಣವಾಗಲೂ ಬಹುದು, ಇದು ರೋಗಿಯ ದೇಹ ಪ್ರಕೃತಿಯನ್ನು ಅವಲಂಬಿಸಿರುತ್ತದೆ (29).

* **ಮೂರನೆಯ ವಿಧಾನ** : ಪ್ರತಿದಿನ ಬೆಳಿಗ್ಗೆ ಐದು ಮಧುನಾಶಿನಿ ಎಲೆಗಳನ್ನು ತಿನ್ನಬೇಕು ಹೀಗೆ ಎರಡು ತಿಂಗಳು ಸೇವಿಸಿದರೆ ಕಾಯಿಲೆ ಗುಣವಾಗಿಬಿಡುತ್ತದೆ. ಕಾಲೆಲ್ಲ ಸೀಳಿ ಹೋಗಿ ರಕ್ತ ಬರುತ್ತಿತ್ತು ನಮ್ಮೂರಿನ ತಿಪ್ಪಮ್ಮನಿಗೆ ಒಂದು ತಿಂಗಳು ಈ ಎಲೆಗಳನ್ನು ಸೇವಿಸುವುದರಲ್ಲಿ ಬಿರುಕು ಬಿಟ್ಟರು

ಕಾಲುಗಳು ವಾಸಿಯಾದವು. ಈಗ ಆಕೆ ಆಸ್ಪತ್ರೆಯ ಯಾವುದೇ ಔಷಧವಿಲ್ಲದೆ ಆರೋಗ್ಯವಾಗಿದ್ದಾಳೆ.' ಕ್ಷೇತ್ರಕಾರ್ಯದ ವೇಳೆ ಈ ಮಹಿಳೆಯನ್ನು ವೈದ್ಯರು ಕರೆಯಿಸಿದ್ದರು, ಗುಣವಾಗಿರುವುದನ್ನು ನಾನು ನೋಡಿ ಬಂದೆ ಬಿರುಕುಗಾಯ ಗುಣವಾಗಿದೆ (197).

ಸಕ್ಕರೆ ಕಾಯಿಲೆಗೆ ಸಂಬಂಧಿಸಿದಂತೆ ಮತ್ತೊಂದು ಘಟನೆಯನ್ನು ಹೇಳಬೇಕು, ಚಿತ್ರದುರ್ಗ ತಾಲ್ಲೂಕಿನ ಕೊಡಬನಾಳ್ ಗ್ರಾಮದ ಶ್ರೀಜಗದೀಶ್ ಎನ್ನುವವರು ತಮ್ಮ ಕಾಲಿನ ಗಾಯವನ್ನು ಗುಣಪಡಿಸುವ ದಾರಿಕಾಣದೆ ಮೊಣಕಾಲಿನವರೆಗೆ ಆಸ್ಪತ್ರೆಯಲ್ಲಿ ಕತ್ತರಿಸುತ್ತಾರೆ. ಏಕೆಂದರೆ ಅವರಿಗೆ ಸಕ್ಕರೆ ಕಾಯಿಲೆ ಇರುವ ಕಾರಣದಿಂದ. ತದನಂತರ ಕತ್ತರಿಸಿದ ಭಾಗ ವಾಸಿಯಾಗದೇ ತೊಂದರೆ ಕೊಡುತ್ತಿತ್ತು. ಇಂಥ ವೇಳೆಯಲ್ಲಿ ಹಳ್ಳಿ ವೈದ್ಯನೊಬ್ಬ ಕೊತಿಬಳ್ಳಿ (ಅಮೃತಬಳ್ಳಿ)ಯ ಎಲೆಗಳನ್ನು ಸೇವಿಸಲು ಹೇಳಿದ, ಅದರಂತೆ ದಿನಕ್ಕೆ ಐದು ಹಸಿಎಲೆಗಳನ್ನು ಒಂದು ತಿಂಗಳು ಸೇವಿಸುವುದರಲ್ಲಿ ಕಾಲಿನ ಗಾಯ ಸಂಪೂರ್ಣ ಗುಣವಾಯಿತು. ಮೊದಲೇ ಈ ಎಲೆಗಳನ್ನು ತಿಂದಿದ್ದರೆ ಕಾಲು ಕತ್ತರಿಸುವ ಅಗತ್ಯ ಇರುತ್ತಿರಲಿಲ್ಲ ಎಂದರು. ಇಂದಿಗೂ ಇವರು ಯಾವುದೇ ಆಸ್ಪತ್ರೆಯ ಚಿಕಿತ್ಸೆ ಇಲ್ಲದೆಯೆ ಆ ಬಳ್ಳಿಯ ಎಲೆಗಳನ್ನು ತಿಂದು ತಮ್ಮ ಕಾಯಿಲೆಯನ್ನು ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದಾರೆ.

* **ಬಿ.ಪಿ.ಗೆ (ರಕ್ತದ ಒತ್ತಡ)** : ಸೀಗುಡಿಸೆಯ ನಾಲ್ಕು ಕುಡಿಗಳನ್ನು ಪ್ರತಿದಿನ ಖಾಲಿ ಹೊಟ್ಟೆಗೆ ತಿನ್ನುತ್ತಾ ಹೋದರೆ ಕಾಯಿಲೆ ಪೂರ್ಣವಾಗಿ ನಿಯಂತ್ರಣಕ್ಕೆ ಬರುತ್ತದೆ (26).

* **ಆಸ್ತಮಾ** : ವಿಷ್ಣುಕಾಂತಿ, ನಂಜುನಾರಾಯಣ, ಬೇವಿನ ತೊಗಟೆಯ ಕೆಂಪು ಭಾಗ ಇವುಗಳನ್ನು ಮೆಣಸು, ಬೆಳ್ಳುಳ್ಳಿಯೊಂದಿಗೆ ಕುಟ್ಟಿ ನಂತರ ಚೆನ್ನಾಗಿ ಕುದಿಸಿ ಕಷಾಯದ ರೀತಿ ಮಾಡಬೇಕು. ಬಳಿಕ ಆ ರಸಕ್ಕೆ ಪೊಂಗುಮಾಡಿ ಒಂದು ಬಾರಿಗೆ ಎರಡು ಚಮಚದಂತೆ ದಿನದಲ್ಲಿ ಎರಡು ಸಾರಿ ಕುಡಿಯಬೇಕು, ಹೀಗೆ 15 ದಿವಸ ಸೇವಿಸಿದರೆ ಎಂಥದೇ ದಮ್ಮು ಕೆಮ್ಮು ಇವುಗಳನ್ನು ಮೀರಿದ ಆಸ್ತಮಾ ಗುಣವಾಗುತ್ತದೆ (127).

* **ಗಂಡ ಮಾಲೆ ಹುಣ್ಣು** : ತೊಂಡೆ ಸೊಪ್ಪಿನ ರಸಕ್ಕೆ ಐದು ಮೆಣಸು, ಐದು ಬೆಳ್ಳುಳ್ಳಿ ಅರೆದು ಸೇರಿಸಿ ಹುಣ್ಣಿರುವ ಭಾಗದ ಕಿವಿಯಲ್ಲಿ ರಾತ್ರಿ ಮಲಗುವಾಗ ಬಿಡಬೇಕು. ಹೀಗೆ ಮೂರು ದಿವಸ ಬಿಡುವುದರೊಳಗೆ ಹುಣ್ಣು ಒಣಗಿ ಹೋಗುತ್ತದೆ (109).

* **ಲಕ್ವಾ :** ದೊಡ್ಡಕಾಯಿಬಳ್ಳಿ ಕುಡಿ. ಇಂಗ್ಬಾರದ ಕುಡಿ, ಬೇವಿನ ಕುಡಿ, ಕಸ್ತೂರಿ, ಗೋರೋಜನ, ಕುಂಕುಮ ಕೇಸರಿ, ಲವಂಗ, ಮೆಣಸು, ಬೆಳ್ಳುಳ್ಳಿ ಇವೆಲ್ಲವನ್ನು ಅರೆದು ಅವರೆಕಾಳುಗಾತ್ರ ಗುಳಿಗೆ ಕಟ್ಟಬೇಕು. ದಿನಕ್ಕೆ ಎರಡು ಗುಳಿಗೆ (ಬೆಳಿಗ್ಗೆ ಮತ್ತು ಸಂಜೆ) ಯಂತೆ 21 ದಿವಸ ಮೇಕೆ ಹಾಲಿನಲ್ಲಿ ಸೇವಿಸಿದರೆ ಕಾಯಿಲೆ ವಾಸಿಯಾಗುತ್ತದೆ.

ಶಕ್ತಿ ಬರಲು : ಮೇಲಿನ ಔಷಧಿಯನ್ನು ಸೇವಿಸುವ ವೇಳೆಯಲ್ಲಿ ಹರದಚ್ಚುಗ, ನೆಲತಂಗಡಿ, ಹಿಪ್ಲಿ, ಉತ್ತತ್ತಿ, ಕಲ್ಲುಸಕ್ಕರೆ, ಒಣದ್ರಾಕ್ಷಿ, ಒಣಕೊಬರಿ, ಬಾದಾಮಿ, ಗೋಡಂಬಿ ಮೊದಲಾದವುಗಳಿಂದ ಚೂರ್ಣಮಾಡಿ ಒಂದು ತಿಂಗಳು ತಿನ್ನಲು ಕೊಟ್ಟರೆ ರೋಗಿಗೆ ಹೊಸರಕ್ತ ಬಂದು ಆರೋಗ್ಯವಂತನಾಗುತ್ತಾನೆ (76).

* **ಬಿಳಿ ತೊನ್ನಿಗೆ :** ರಸಬಾಳೆದಿಂಡನ್ನು ಒಣಗಿಸಿ ಚೂರ್ಣಮಾಡಿ ಇದಕ್ಕೆ ಬಿಳಿಗುಲಗಂಜಿ ಬೀಜದ ಚೂರ್ಣವನ್ನು ಸೇರಿಸಿ ಎಳ್ಳೆಣ್ಣೆಯಲ್ಲಿ ಒಂದು ತಿಂಗಳು ಹಚ್ಚಿದ್ದರೆ ಗುಣವಾಗುತ್ತದೆ (76).

* **ಕಾಮಾಲೆ :** ಮೂರು ಚಮಚ ಹಕ್ಕರಿಕೆ ಸೊಪ್ಪಿನ ರಸಕ್ಕೆ ಐದು ಏಲಕ್ಕಿ, ಐದು ಲವಂಗ ಅರೆದು ಹಾಕಿ ಹಸುವಿನ ಹಾಲಲ್ಲಿ ಕುಡಿಸುವುದು. ಬಹಳ ದಿನಗಳ ಕಾಯಿಲೆಯಾಗಿದ್ದಾರೆ ಮೂರು ವಾರಗಳು ಔಷಧಿಯನ್ನು ಸೇವಿಸಬೇಕು. ಅಂದರೆ ವಾರದಲ್ಲಿ ಮೂರು ದಿನಗಳು; ದಿನಕ್ಕೆ ಒಂದು ಸಾರಿಯಂತೆ ಸೇವಿಸುವುದು.

ಹೀಗೆ ಸೇವಿಸಿದಾಗಲೂ ಹಸಿವಾಗದಿದ್ದರೆ ಹುಳಿ ಸಾರನು ಮೂರು ದಿವಸ ಊಟಮಾಡಬೇಕು. ಊಟಕ್ಕೆ ನವಣೆ ಅನ್ನವನ್ನು ಉಪಯೋಗಿಸಬೇಕು.

ಅಪಥ್ಯ : ರಾಗಿ, ಗೋದಿ, ಸಜ್ಜೆ ಮುಂತಾದ ಗಡಸು ಪದಾರ್ಥಗಳನ್ನು ಒಂದುವಾರ ತಿನ್ನಬಾರದು [ಈ ಚಿಕಿತ್ಸೆಗೆ ರೋಗಿಯನ್ನು ಭೇಟಿಯಾಗಿ, ಕಾಯಿಲೆ ಗುಣವಾಗಿರುವುದಕ್ಕೆ ಪ್ರಮಾಣ ಪತ್ರ ಪಡೆಯಲಾಗಿದೆ.] (36).

* **ಮೂಲವ್ಯಾಧಿ :** ಹಚ್ಚೆಸೊಪ್ಪಿನ ಐದು ಕುಡಿಗಳನ್ನು ಪ್ರತಿದಿನ ಬೆಳಿಗ್ಗೆ ಖಾಲಿಹೊಟ್ಟೆಗೆ ತಿನ್ನಬೇಕು. ಇದೇ ರೀತಿ ಒಂದು ವಾರ ಸೇವಿಸಿದರೆ ರಕ್ತಮೂಲವ್ಯಾಧಿ, ಒಣಮೂಲವ್ಯಾಧಿಗಳೆರಡೂ ಗುಣವಾಗುತ್ತವೆ (133).

* **ಅರದೆಲೆನೋವು** : ಆಡುಸೋಗೆ ಎಲೆಯನ್ನು ಅರೆದು ಎಮ್ಮೆ ಮೊಸರಿನಲ್ಲಿ ಕಲಸಿಕೊಂಡು ಸೂರ್ಯ ಮೂಡುವ ಮೊದಲೇ ಊಟಮಾಡಬೇಕು. ವಾರದಲ್ಲಿ ಎರಡುದಿನದಂತೆ ಮೂರು ವಾರ ಊಟ ಮಾಡಿದರೆ ಅರದೆಲೆನೋವು ಎಂದಿಗೂ ಬರದಂತೆ ವಾಸಿಯಾಗುತ್ತದೆ (74).

* **ಅಂಗಾಲು, ಅಂಗೈ ಉರಿಗೆ** : ಕರಿಹಾಗಲ ಸೊಪ್ಪಿನ ರಸವನ್ನು ಹಚ್ಚಿದರೆ ಕಡಿಮೆಯಾಗುತ್ತದೆ (24).

* **ಕೆಮ್ಮಿದಾಗ ಎದೆಯಲ್ಲಿ ರಕ್ತಬಿದ್ದರೆ** : ಬಿಳಿಕೊಗ್ಗಿ ಬೇರನ್ನು ಕಲ್ಲು ಸಕ್ಕರೆಯೊಂದಿಗೆ ಕುಟ್ಟಿ ಒಂದು ವಾರದವರೆಗೆ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಮೂರು ಬೆರಳಿಗೆ ಬಂದಷ್ಟನ್ನು ಸೇವಿಸಿದರೆ ರಕ್ತ ಬೀಳುವುದು ನಿಂತು ಹೋಗುತ್ತದೆ (72).

* **ಉರಿ ಮೂತ್ರ** : ಆನೆನೆಗ್ಗಿಲು ಎಲೆಗಳನ್ನು ನೀರಲ್ಲಿ ನೆನಸಿ ಬಳಿಕ ಆ ನೀರನ್ನು ಕುಡಿಯಬೇಕು. ಇದರಿಂದ ದೇಹ ತಂಪಾಗಿ ಉರಿಮೂತ್ರ ಸಮಸ್ಯೆ ಗುಣವಾಗುತ್ತದೆ (83).

* **ಶಕ್ತಿಚೂರ್ಣ** : ಅಶ್ವಗಂಧಿಬೇರು, ಬೇಟೆಗಿಡದ ತೊಗಟೆ, ನೆಲಿಗುಬಿಸಿಎಲೆ ಇವುಗಳನ್ನು ಪುಡಿಮಾಡಿ ಖಾರದ ಸಾಮಾನುಗಳೊಂದಿಗೆ ಸೇರಿಸಿಕೊಂಡು ಆಕಳ ತುಪ್ಪದಲ್ಲಿ ಒಂದು ತಿಂಗಳು ಸೇವಿಸಿದರೆ ನಿಃಶಕ್ತಿ ದೂರವಾಗಿ ದೇಹ ಸದೃಢವಾಗುತ್ತದೆ (161).


* **ಹುಚ್ಚಿಗೆ** : ಇಂಗ್ಳಾರದಸೊಪ್ಪು ಮತ್ತು ಹಣ್ಣು, ಬಿಳಿಗೆಂಜರಿಸೊಪ್ಪು, ಬಿಳಿತುಂಬೆಸೊಪ್ಪು, ಇವುಗಳ ರಸವನ್ನು ಇಂಗ್ಳಾರದ ಹಣ್ಣಿನ ತಿರುಳಿನಲ್ಲಿ ಕಡ್ಲೆಕಾಳುಗಾತ್ರ 21 ಗುಳಿಗೆ ಮಾಡಬೇಕು. ಪ್ರತಿದಿನ ಒಂದರಂತೆ 21 ದಿವಸ ನುಂಗಬೇಕು.

ಈ ನಡುವೆ ಹುಚ್ಚುಜಾಸ್ತಿ ಇದ್ದರೆ, ಮೇಲಿನ ಮೂರೂ ಸೊಪ್ಪುಗಳ ರಸವನ್ನು ಏಳು ದಿವಸ ದಿನಕ್ಕೆ ಮೂರು ಹನಿಗಳಂತೆ ಮೂಗಲ್ಲಿ ಹಿಂಡಬೇಕು (76).

* * *

ಅಧ್ಯಾಯ – 6

ಜನಪದ ವೈದ್ಯೋಪಚಾರ ಹಂತಗಳು



ವೈದ್ಯೋಪಚಾರದ ಹಂತಗಳು

ವೈದ್ಯೋಪಚಾರದ ಹಂತಗಳು ಅಂದರೆ ಜನಸಾಮಾನ್ಯರಿಂದ ಅನುಭವಿ ವೈದ್ಯರವರೆಗೆ ವೈದ್ಯವನ್ನು ಕಲಿತಿರುವ ಪ್ರಮಾಣ ಮತ್ತು ಅದರ ಪ್ರಯೋಗದ ಬಗೆಯನ್ನು ಪರಿಚಯಿಸುವುದು, ಜನಪದ ವೈದ್ಯ ಯಾವ ವರ್ಗದ ಜನರಲ್ಲಿ ಯಾವ ರೂಪದಲ್ಲಿದೆ, ಅಂದರೆ ಬಡವ ಶ್ರೀಮಂತರಲ್ಲಿ ಇರಬಹುದು; ಮಕ್ಕಳು, ವಯಸ್ಕರು ಮತ್ತು ವೃದ್ಧರಲ್ಲಿ ಆ ಕುರಿತಾಗಿ ಎಂಥ ಆಸಕ್ತಿ ಇರಬಹುದು ಎಂಬುದನ್ನು ವಿಶ್ಲೇಷಿಸುವುದು.

ಜನಪದ ವೈದ್ಯ ಸಾಮೂಹಿಕವಾದ ಜ್ಞಾನ. ಅದು ವಾಕ್ಸಂಪದಾಯದ ಮೂಲಕ ವರ್ಗಾವಣೆಯಾಗುವಾಗ ಬದಲಾವಣೆಗೆ ಒಳಗಾಗುತ್ತದೆ. ಈ ಬದಲಾವಣೆಯ ಪ್ರಕ್ರಿಯೆಯೂ ಮನೆಯಲ್ಲಿನ ವೈದ್ಯರಲ್ಲೂ, ಹಳ್ಳಿ ಮತ್ತು ಸಮೂಹದಲ್ಲಿರುವ ವೈದ್ಯರಲ್ಲೂ ಕಂಡುಬರುತ್ತದೆ. ಹಾಗೆಯೇ ಅನುಭವಿ ವೈದ್ಯರಲ್ಲೂ ಈ ಪ್ರಕ್ರಿಯೆ ನಿರಂತರವಾಗಿರುತ್ತದೆ. ಈ ಪ್ರಕ್ರಿಯೆಯ ಒಳನೋಟಗಳನ್ನು ಉದಾಹರಣೆಗಳ ಮೂಲಕ ಇಲ್ಲಿ ವಿಶ್ಲೇಷಿಸಲಾಗಿದೆ. ಇದರಿಂದ ಜನರ ಬದುಕಿನಲ್ಲಿ ಜನಪದ ವೈದ್ಯವು ನಿರ್ವಹಿಸುತ್ತಿರುವ ಪಾತ್ರವನ್ನು ತಿಳಿಯಬಹುದು. ಪ್ರಸ್ತುತ ಭಾಗದಲ್ಲಿ ಏಕಮೂಲಿಕೆ ಹಾಗೂ ಬಹುಮೂಲಿಕೆಗಳಿಂದ ವೈದ್ಯೋಪಚಾರ ಮಾಡುವವರು, ಜೋತಿಷ್ಯ ಮತ್ತು ಮಂತ್ರ-ಮಾಟ ಮಾಡುವವರು ಈ ಮೊದಲಾದವರನ್ನೆಲ್ಲ ಕುರಿತು ಚರ್ಚಿಸಲಾಗುವುದು. ಅಂದರೆ ವೈದ್ಯ ವಿಚಾರವನ್ನು ತಿಳಿದಿರುವ ಮತ್ತು ಅದರಲ್ಲಿ ತೊಡಗಿಕೊಂಡವರ ಚಿತ್ರಣವನ್ನು ಈ ಕೆಳಗಿನಂತೆ ವಿಭಾಗಿಸಿಕೊಂಡು ವಿಶ್ಲೇಷಿಸಲಾಗಿದೆ.

ಸಾಮಾನ್ಯ ವೈದ್ಯೋಪಚಾರಗಳಲ್ಲಿ ನಾಲ್ಕು ಉಪವಿಭಾಗಗಳನ್ನು ಮಾಡಿಕೊಳ್ಳಲಾಗಿದೆ. ಆ ವಿಭಾಗಗಳೆಂದರೆ : ಸಾಮಾಜಿಕ ವೈದ್ಯೋಪಚಾರಗಳು, ಮನೆಯಲ್ಲಿನ ವೈದ್ಯೋಪಚಾರಗಳು, ಹಳ್ಳಿಯಲ್ಲಿನ ವೈದ್ಯೋಪಚಾರಗಳು ಮತ್ತು ಅನುಭವಿ ವೈದ್ಯರ ವೈದ್ಯೋಪಚಾರಗಳು. ಈ ನಾಲ್ಕೂ ಹಂತಗಳಲ್ಲಿ ಬರುವ ವಿವಿಧ ಬಗೆಯ ವೈದ್ಯರನ್ನು ಮತ್ತು ಅವರ ವೈದ್ಯೋಪಚಾರಗಳನ್ನು ವಿಶ್ಲೇಷಿಸಬಲಾಗಿದೆ.

ಅದಕ್ಕಾಗಿ 1. ಹಲ್ಲುನೋವು(ಹುಳುಕು ಹಲ್ಲು) 2. ಕೆಮ್ಮು(ದಮ್ಮು) 3. ಕಾಲಲ್ಲಿ ಮುಳ್ಳು ಸೇರಿದಾಗ (ಆಣಿ) 4. ಕಣ್ಣಾಗುವಿಕೆ(ಬೆಳ್ಳಗಾದರೆ) 5. ಹುಳುಕಡ್ಡಿ 6. ಕುರುಗಳು. ಈ ಆರು ಸಮಸ್ಯೆಗಳಿಗೆ ನಾಲ್ಕೂ ವರ್ಗಗಳಲ್ಲಿ ಯಾವ ಬಗೆಯ ಔಷಧೋಪಚಾರ ನಡೆಯುತ್ತದೆ ಎಂಬುದನ್ನು ಪರಿಚಯಿಸುವ ಉದ್ದೇಶ ಇಲ್ಲಿದೆ. ಈ ಆರನ್ನು ಹೊರತು ಪಡಿಸಿ ಇನ್ನೂ ಅಸಂಖ್ಯ ಉದಾಹರಣೆಗಳಿವೆ ಆದರೆ ಅವನ್ನೆಲ್ಲ ಹೇಳಲು ಇಲ್ಲಿ ಸ್ಥಳಾವಕಾಶವಿಲ್ಲ.

ಅ) ಬಹುಜನ ಪರಿಚಿತ ವೈದ್ಯೋಪಚಾರಗಳು

ಬಹುಜನ ಪರಿಚಿತ ವೈದ್ಯೋಪಚಾರದಲ್ಲಿ ಪ್ರತಿಯೊಬ್ಬರೂ ವೈದ್ಯ ಮಾಡುತ್ತಾರೆ ಎಂದು ಭಾವಿಸುವುದಕ್ಕಿಂತ ಹೆಚ್ಚಿನ ಜನರು ಅದನ್ನು ಬಲ್ಲವರಾಗಿರುತ್ತಾರೆ. ಅಷ್ಟುಮಾತ್ರವಲ್ಲ ಸ್ವತಃ ಔಷಧವನ್ನು ಅರೆದು ಕೊಡುವವರಾಗಿರುತ್ತಾರೆ ಮತ್ತು ಇತರರಿಗೆ ಹೀಗೆ ಮಾಡಿ ಎಂದು ಸಲಹೆ ಮಾಡುವವರೂ ಆಗಿರುತ್ತಾರೆ. ಬಹುಜನರ ವೈದ್ಯೋಪಚಾರ ಯಾವ ನಿಯಮಗಳಿಗೂ ಒಳಪಡದೆ ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಯಾಗುತ್ತದೆ. ಗೋಪ್ಯತೆಗೆ ಇಲ್ಲಿ ಪ್ರಾಮುಖ್ಯತೆ ಇರುವುದಿಲ್ಲ. ಯಾರಾದರೂ ವೈದ್ಯವಿಚಾರವನ್ನು ತಿಳಿಯಲು ಅವಕಾಶವಿರುತ್ತದೆ. ಅಗತ್ಯವಾದ ಕಡೆ ಪಥ್ಯಾಪಥ್ಯದ ಮಹತ್ವವನ್ನು ನೀಡುತ್ತಾರೆ. ಇದರಲ್ಲಿ ಬಹುಜನ ಪರಿಚಿತ ವೈದ್ಯವಿಚಾರಗಳನ್ನು ಕಿರಿಯರಿಂದ ಹಿರಿಯರವರೆಗೆ ವಯಸ್ಸಿನ ಭೇದವಿಲ್ಲದೆ ತಿಳಿದಿರುತ್ತಾರೆ. ಸಾಮೂಹಿಕ ವೈದ್ಯೋಪಚಾರ ಪ್ರಯೋಗವಾಗುವ ಕ್ರಮವನ್ನು ಆರು ಉದಾಹರಣೆಗಳ ಮೂಲಕ ಈ ಕೆಳಗಿನಂತೆ ನೋಡಬಹುದು.

1. **ಹಲ್ಲುನೋವಿಗೆ** : ಮಕ್ಕಳು ಮನೆಯ ಹಿರಿಯರಿಗೆ 'ನನಗೆ ಹಲ್ಲು ನೋವು' ಎಂದು ಹೇಳಿದಾಗ 'ಅದೇನ್ ದೊಡ್ಡಕಾಯಿಲೆ ಜೇನು ತುಪ್ಪವನ್ನು ತಿಕ್ಕು' ಎಂದು ಸಲಹೆ ಮಾಡುತ್ತಾರೆ. ದೊಡ್ಡವರಿಗೂ ಸಹ ಇದೇ ರೀತಿಯ ಸಲಹೆ ಇತರರಿಂದಲೂ ದೊರೆಯುತ್ತದೆ. ಸಾಮಾನ್ಯವಾದ ಹಲ್ಲುನೋವಾಗಿದ್ದರೆ ಇದರಿಂದ ಪರಿಹಾರ ಆಗುತ್ತದೆ.

ಇದೇ ಸಮಸ್ಯೆಯನ್ನು ನಾಲ್ಕು ಜನರು ಸೇರಿರುವಲ್ಲಿ ಹೇಳಿದಾಗ 'ಬೇವಿನ ಕಡ್ಡಿಗಳಿಂದ ಹಲ್ಲುಗಳನ್ನು ಉಜ್ಜು' ಎಂಬ ಸಲಹೆಯನ್ನು ಕೊಡುತ್ತಾರೆ. ಅಲ್ಲಿದ್ದ ಮತ್ತೊಬ್ಬ 'ಗೇರುಬೀಜ ಸುಟ್ಟು

ಬಂದ ಎಣ್ಣೆಯನ್ನು ಬಿಟ್ಟುಗೊಂಡಿದ್ದೆ ಹಲ್ಲುನೋವು ಕಡಿಮೆ ಆಗಿತ್ತು' ಎಂದು ತನ್ನ ಅನುಭವವನ್ನು ಹಂಚಿಕೊಳ್ಳುತ್ತಾನೆ. ಇನ್ನೊಬ್ಬನು 'ಉತ್ತರಾಣಿ ಕಡ್ಡಿಯಿಂದ ಹಲ್ಲುಜ್ಜಿದರೆ ಬುದ್ಧಿ ಚುರುಕಾಗುತ್ತೆ ಮತ್ತು ನೋವು ಇರುವುದಿಲ್ಲ' ಎಂದು ತಾನು ಪುಸ್ತಕದಲ್ಲಿ ಓದಿದ್ದನ್ನೋ ಇಲ್ಲವೇ ಇತರರು ಮಾಡಿದ್ದನ್ನು ನೋಡಿರುವ ಅನುಭವವನ್ನೋ ವಿವರಿಸುತ್ತಾನೆ.

2. **ಕೆಮ್ಮು :** ಅತಿಯಾಗಿ ಕೆಮ್ಮುವವರನ್ನು ನೋಡಿದಾಗ ತುಳಸಿ ಎಲೆಗಳನ್ನು ತಿನ್ನುವಂತೆ ಸೂಚಿಸುತ್ತಾರೆ. ಇನ್ನೂ ಕೆಲವರು ಕುಳ್ಳಿಗನ ಎರಡು ಮೂರು ಕುಡಿಗಳನ್ನು ಉಪ್ಪಿನ ಹರಳಿನೊಂದಿಗೆ ತಿನ್ನುವಂತೆ ಸಲಹೆ ಮಾಡುತ್ತಾರೆ. ಇದರಿಂದ ಕೆಮ್ಮು ಕಡಿಮೆ ಆಗಬಹುದು ಅಥವಾ ಸಂಪೂರ್ಣ ಗುಣವಾಗಲೂಬಹುದು.

3. **ಕಾಲಲ್ಲಿ ಮುಳ್ಳುಸೇರಿದಾಗ :** ಕಾಲಲ್ಲಿ ಮುಳ್ಳುಸೇರಿದಾಗ ಎಕ್ಕೆಯ ಹಾಲನ್ನು ಬಿಡುವುದು ಸಣ್ಣಹುಡುಗರಿಗೂ ಸಹ ತಿಳಿದಿರುತ್ತದೆ. ಹೀಗೆ ಮಾಡುವುದರಿಂದ ಮುಳ್ಳು ಕಸ ಏನಿದ್ದರೂ ಹೊರಬರುತ್ತದೆ.

4. **ಕಣ್ಣಾಗುವಿಕೆಗೆ :** ಕಣ್ಣಿಗೆ ಬಂದ ನಂತರ ಮಾಡುವ ಚಿಕಿತ್ಸೆ ಬೇರೆ, ಆದರೆ ಕಣ್ಣಿಗೆ ಬರದಂತೆ ಎಳ್ಳು ಹೂವುಗಳನ್ನು ನುಂಗುವ ಹವ್ಯಾಸ ಎಲ್ಲರಲ್ಲೂ ಕಾಣಲು ಸಾಧ್ಯವಿದೆ. ಹೊಲಕ್ಕೆ ಹೋದಾಗ ತಮಗೆ ಅರಿವಿಲ್ಲದೇ ಅಭ್ಯಾಸ ಬಲದಿಂದ ಹೂವುಕಿತ್ತು ನುಂಗುವುದನ್ನು ಕಾಣಬಹುದು. ಹೀಗೆ ತಿಂದವರಿಗೆ ಆ ವರ್ಷದಲ್ಲಿ ಕಾಣ್ಣಾಗದಿದ್ದರೆ, ಹೂವುಗಳನ್ನು ಸೇವಿಸಿದ್ದರಿಂದಲೇ ತನಗೆ ಕಣ್ಣಾಗಲಿಲ್ಲ ಎಂದು ತಿಳಿಯುತ್ತಾರೆ.

5. **ಹುಳುಕಡ್ಡಿ :** ಹುಳುಕಡ್ಡಿ ಬಳ್ಳಿಯ ಕೊನೆ ಮುರಿದು ಬಂದ ಹಾಲನ್ನು ಹಚ್ಚಿಕೊಳ್ಳುವುದು. ಸಮುದಾಯದಲ್ಲಿ ಎಲ್ಲರಿಗೂ ಚಿರಪರಿಚಿತವಾಗಿರುತ್ತದೆ. ತಾಳ್ಮೆಯಿಂದ ನಿರಂತರ ಇದನ್ನು ಉಪಯೋಗಿಸಿದರೆ ಸಮಸ್ಯೆ ಪರಿಹಾರವಾಗುತ್ತದೆ.

6. **ಕುರುಗಳಿಗೆ :** ಎಲ್ಲಿಯಾದರೂ ಸಣ್ಣುಗುಳ್ಳೆ ಅಥವಾ ಕುರುಗಳು ಕಾಣಿಸಿಕೊಂಡರೆ ಹಿರಿಯರಿಗೆ ತಿಳಿಸುವ ಮೊದಲೇ ಹುಡುಗರು ಕಳ್ಳಿಹಾಲು ಮತ್ತು ಬಡ್ಡೆ ಮಣ್ಣನ್ನು ಬಳಿದುಕೊಳ್ಳುತ್ತಾರೆ.

ಪ್ರಾರಂಭಿಕ ಹಂತದಲ್ಲಿ ಇದನ್ನು ಮಾಡಿದರೆ ಅವುಗಳು ಹಾಗೇ ಬತ್ತಿಹೋಗುತ್ತವೆ. ಬಹುಜನ ಪರಿಚಿತ ವೈದ್ಯೋಪಚಾರಕ್ಕೆ ಹೆಚ್ಚಿನ ಉದಾಹರಣೆಗಾಗಿ ಈ ಕೆಳಗಿನವುಗಳನ್ನು ನೋಡಬಹುದು.

* ಕಣ್ಣಲ್ಲಿ ಕಳ್ಳಿಹಾಲು ಬಿದ್ದಾಗ ವಿಭೂತಿನೀರನ್ನು ಬಿಡುತ್ತಾರೆ ಇಲ್ಲವೆ ನಾಯಿ ತುಳಸಿ ಬೀಜಗಳನ್ನು ಹಾಕುತ್ತಾರೆ. ವಿಭೂತಿ ನೀರಿಗಿಂತ ನಾಯಿತುಳಸಿ ಬೀಜಗಳಿಂದ ಸಮಸ್ಯೆ ಬಹುಬೇಗ ಪರಿಹಾರವಾಗುತ್ತದೆ.

* ಕಡಿದುಕೊಂಡ ಮತ್ತು ಹರಿತವಾದ ಆಯುಧಗಳಿಂದಾದ ಗಾಯಗಳಿಗೆ ಬಾಳೆ ಸುಳಿಯ ಕರೆಯನ್ನು ಬಿಡುತ್ತಾರೆ. ಗಾಯವಾದ ತಕ್ಷಣವೇ ಬಾಳೆಕರೆಯನ್ನು ಬಿಟ್ಟಾಗ ರಕ್ತಸ್ರಾವ ನಿಂತು ರಕ್ತ ಹೆಪ್ಪುಗಟ್ಟಿ ಗಾಯ ವಾಸಿಯಾಗಲು ಅನುಕೂಲವಾಗುತ್ತದೆ.

* ಮಹಿಳೆಯರ ಬಿಳಿ ಮತ್ತು ಕೆಂಪುಕರೆ, ಋತುಚಕ್ರದ ವೇಳೆಯಲ್ಲಿ ಬರುವ ಹೊಟ್ಟೆನೋವು, ಎದೆಹಾಲಿನ ಕೊರತೆ, ಎದೆಬಾವು, ಗುಹ್ಯರೋಗಗಳು ಈ ಮುಂತಾದವುಗಳಿಗೆ ಮೊದಲು ಸಾಮುಹಿಕವಾಗಿ ತಿಳಿದಿರುವುದನ್ನೇ ಮಾಡಿಕೊಳ್ಳುತ್ತಾರೆ. ಅದಕ್ಕೆ ನಿಯಂತ್ರಣವಾಗದಿದ್ದರೆ ಅನುಭವಿ ವೈದ್ಯರ ಹತ್ತಿರ ಹೋಗುತ್ತಾರೆ. ಪುರುಷರು ಸಹ ತಮ್ಮ ಕೆಲವು ಸಮಸ್ಯೆಗಳಿಗೆ ಈ ರೀತಿಯ ಪ್ರಾಥಮಿಕ ಔಷಧೋಪಚಾರವನ್ನೇ ಅವಲಂಬಿಸಿರುತ್ತಾರೆ.

ಉದಾಹರಣೆಗೆ ಮಹಿಳೆಯನ್ನು ಬಿಳಿಕರೆಗೆ ಬಿಳಿದಾಸವಾಳದ ನಾಲ್ಕು ಹೂವುಗಳೊಂದಿಗೆ ಕೆಂಪುಕಲ್ಲು ಸಕ್ಕರೆಯನ್ನು ಸೇರಿಸಿ ತಿನ್ನುತ್ತಾರೆ. ಕೆಂಪುಕರೆಗೆ ಕೆಂಪುದಾಸವಾಳದ ನಾಲ್ಕು ಹೂವುಗಳೊಂದಿಗೆ ಕೆಂಪು ಕಲ್ಲುಸಕ್ಕರೆಯನ್ನು ಸೇರಿಸಿ ತಿನ್ನುತ್ತಾರೆ. ಮೇಲಿನ ಎರಡೂ ಔಷಧಿಗಳನ್ನು ಸಾಮಾನ್ಯವಾಗಿ ಒಂದು ವಾರದವರೆಗೆ ಸೇವಿಸುತ್ತಾರೆ. ಇದಕ್ಕೆ ಗುಣವಾಗದಿದ್ದಾಗ ಅನುಭವಿಗಳ ಹತ್ತಿರ ಹೋಗುತ್ತಾರೆ. ಇದೇ ರೀತಿಯಾಗಿ ಪುರುಷರಿಗೆ ಉರಿಮೂತ್ರ ಕಾಣಿಸಿಕೊಂಡರೆ ಅಂಗಾಲು, ಹೊಕ್ಕಳುಗಳಿಗೆ ಮಂದವಾಗಿ ಕಲಸಿದ ಸುಣ್ಣವನ್ನು ಬಳಿದು ಕೊಳ್ಳುತ್ತಾರೆ ಇಲ್ಲವೇ ಎಳೆನೀರನ್ನು ಕುಡಿಯುತ್ತಾರೆ, ಇವುಗಳಿಂದ ಸಮಸ್ಯೆ ಪರಿಹಾರವಾಗದಿದ್ದರೆ ಅನುಭವಿ ವೈದ್ಯರ ಹತ್ತಿರ ಹೋಗುತ್ತಾರೆ. ಅಂದರೆ ಬಹುಜನರು ತಮಗೆ ತಿಳಿದಿರುವ ಪ್ರಾಥಮಿಕ ಉಪಚಾರಗಳನ್ನು ಮಾಡಿಕೊಳ್ಳುತ್ತಾರೆ, ಇವುಗಳಿಂದ ಸಮಸ್ಯೆ ನಿವಾರಣೆ ಆಗದಿದ್ದರೆ ವೈದ್ಯರ ಬಳಿಗೆ ಹೋಗುತ್ತಾರೆ.

* ಪಶುರೋಗ ಚಿಕಿತ್ಸೆಯಲ್ಲಿ ದನಗಳಿಗೆ ಸೆಲೆಯಾದರೆ ಮೂಗಿನ ಮೇಲಿನ ನರವನ್ನು ಉಳಿಯಿಂದ ಹೊಡೆದು ರಕ್ತವನ್ನು ಹರಿಯಬಿಡುತ್ತಾರೆ. ನಂತರ ತೊಂಡೆಸೊಪ್ಪು, ಮೆಣಸು ಮತ್ತು ಬೆಳ್ಳುಳ್ಳಿಗಳನ್ನು ಅರೆದು ಬಿಸಿನೀರಲ್ಲಿ ಎರಡು ಗೊಟ್ಟ ಎತ್ತುತ್ತಾರೆ. ಎರಡು ದಿನಗಳ ಕಾಲ ಒಣ ಮೇವು ಮತ್ತು ಬಿಸಿನೀರನ್ನು ಕೊಡುತ್ತಾರೆ. ಪ್ರಾಥಮಿಕ ಹಂತದಲ್ಲಿ ಈ ಚಿಕಿತ್ಸೆ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ.

* ದನಗಳು ಹುಚ್ಚಿಕೊಂಡರೆ ಹಚ್ಚಿಸೊಪ್ಪನ್ನು ತಿನ್ನಿಸುತ್ತಾರೆ ಅಥವಾ ಅರೆದು ಮಜ್ಜಿಗೆಯಲ್ಲಿ ಕುಡಿಸುತ್ತಾರೆ. (ಹಚ್ಚೆ ಸೊಪ್ಪು ದನಗಳಿಗೆ ಒಳ್ಳೆಯ ಆಹಾರ ಹೌದು ಹಾಗೂ ಅದು ಭೇದಿಯನ್ನು ನಿಯಂತ್ರಿಸುವ ಗುಣ ಹೊಂದಿದೆ.) ಪ್ರಾಣಿಗಳಿಗೆ ಸಂಬಂಧಿಸಿದ ಈ ಬಗೆಯ ವೈದ್ಯೋಪಚಾರಗಳು ಜಾನುವಾರುಗಳನ್ನು ಸಾಕಿದವರೆಲ್ಲರಿಗೂ ಸಾಮಾನ್ಯವಾಗಿ ತಿಳಿದಿರುತ್ತದೆ.

ಬಹುಜನ ಪರಿಚಿತ ವೈದ್ಯೋಪಚಾರಗಳನ್ನು ಅನುಭವಿ ವೈದ್ಯರು, ಕುಟುಂಬ ಮತ್ತು ಹಳ್ಳಿಯಲ್ಲಿನ ವೈದ್ಯರುಗಳೂ ಸಹ ತಿಳಿದಿರುತ್ತಾರೆ. ಅವರು ಔಷಧಿ ತಯಾರಿಸುವ ಮತ್ತು ಕೊಡುವ ವಿಧಾನ; ಔಷಧಿಗೆ ಬಳಸುವ ವಸ್ತುಗಳು ವಿಭಿನ್ನವಾಗಿರಬಹುದು. ಆದರೆ ಬಹುಜನ ಪರಿಚಿತ ವೈದ್ಯದಲ್ಲಿ ಔಷಧಿ ತಯಾರಿಸುವುದು ಮತ್ತು ಕೊಡುವುದು ಹೆಚ್ಚು ಸರಳತೆಯಿಂದ ಕೂಡಿರುತ್ತದೆ. ಅಂದರೆ ಸ್ಥಳೀಯ ವಸ್ತುಗಳನ್ನೇ ಔಷಧಿಗೆ ಬಳಸಿಕೊಂಡು ಅನುಪಾನಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುವುದಿಲ್ಲ. ಇದು ಬಹುಜನ ಪರಿಚಿತ ವೈದ್ಯೋಪಚಾರದ ವೈಶಿಷ್ಟ್ಯವೂ ಹೌದು.

ಜನರಿಗೆ ಈ ಬಗೆಯ ಸಾಮೂಹಿಕ ವೈದ್ಯಮಾಹಿತಿಯು ಹಿರಿಯವರಿಂದ ಕಿರಿಯವರಿಗೆ ವರ್ಗಾವಣೆಯಾಗುತ್ತಿರುತ್ತದೆ. ಅಂದರೆ, ಮನೆಯ ಹಿರಿಯರಿರಬಹುದು, ಅನುಭವಿ ವೈದ್ಯರಿರಬಹುದು ಅಥವಾ ಸಾಧು ಸಂತರಿರಬಹುದು. ಈ ಬಗೆಯಲ್ಲಿ ಪ್ರಸರಣವಾಗುವ ವೈದ್ಯ ಮಾಹಿತಿಯೂ ಎಲ್ಲಾ ಬಗೆಯ ವೈದ್ಯರಲ್ಲಿಯೂ ಕಂಡುಬರುತ್ತದೆ. ಸ್ಪಷ್ಟಪಡಿಸುವುದಾದರೆ, ಅನುಭವಿ ವೈದ್ಯರೊಬ್ಬರಿಂದ ಸರ್ಪಹುಣ್ಣಿಗೆ ಚಿಕಿತ್ಸೆ ಪಡೆದು ಗುಣಹೊಂದಿದ ರೋಗಿಯೊಬ್ಬರು, ತನ್ನ ಸಮಸ್ಯೆಯನ್ನು ವಾಸಿಮಾಡಿದ: ಉರಿಮಂಜು ಮತ್ತು ನಿಂಬೆಹುಳಿಯನ್ನು ಕಲಿಸಿ ಲೇಪಿಸಿಕೊಳ್ಳುವ ಸರಳ ವಿಧಾನವನ್ನು ಕನಿಷ್ಠ ಎಂಟುಜನ ಸರ್ಪಹುಣ್ಣು ಬಂದವರಿಗೆ ಸಲಹೆಮಾಡಿ ಸರ್ಪಹುಣ್ಣು ವಾಸಿಯಾಗಲು ಕಾರಣರಾಗಿದ್ದಾರೆ

(59) ಅಂದರೆ ಸರಳವಾಗಿರುವುದನ್ನು ಸಮುದಾಯ ಸುಲಭವಾಗಿ ಜೀರ್ಣಿಸಿಕೊಂಡು ಅದರ ಅನುಕೂಲವನ್ನು ಪಡೆಯುತ್ತದೆ. ಹಾಗೆಯೇ ಇತರರಿಗೂ ಅದರ ಪ್ರಯೋಜನ ಸಿಗುವಂತೆ ಮಾಡುತ್ತದೆ.

ಆ) ಮನೆಯಲ್ಲಿನ ವೈದ್ಯೋಪಚಾರಗಳು

ಬಹುಜನ ಪರಿಚಿತ ವೈದ್ಯಮಾಹಿತಿಗಿಂತಲೂ ಮನೆಯಲ್ಲಿನ ವೈದ್ಯೋಪಚಾರದ ವ್ಯಾಪ್ತಿ ವಿಸ್ತಾರವಾದದ್ದು ಎಂದು ಹೇಳಬಹುದು. ಯಾಕೆಂದರೆ ಹೆಚ್ಚಿನ ರೋಗಗಳಿಗೆ ಔಷಧೋಪಚಾರವನ್ನು ಬಲ್ಲವರು ಈ ವರ್ಗದಲ್ಲಿರುತ್ತಾರೆ. ಮನೆಯ ಹಿರಿಯರಾದ, ಅಜ್ಜಿ, ಅಜ್ಜ, ದೊಡ್ಡಪ್ಪ, ತಾಯಿ ಮತ್ತು ತಂದೆಯರು ಬಹುಜನರಲ್ಲಿ ಪ್ರಯೋಗವಾಗುವ ಔಷಧೋಪಚಾರಗಳನ್ನು ಮತ್ತು ಇತರ ಹೆಚ್ಚಿನ ವೈದ್ಯಜ್ಞಾನವನ್ನು ಅರಿತವರಾಗಿರುತ್ತಾರೆ. ಇವರು ವೈದ್ಯಜ್ಞಾನವನ್ನು ತಮ್ಮ ಪೂರ್ವಿಕರಿಂದ ಬಳುವಳಿಯಾಗಿ ಪಡೆದಿರುತ್ತಾರೆ. ಅದು ಕಾಲಕ್ಕೆ ಅನುಗುಣವಾಗಿ ಬದಲಾವಣೆಗೆ ಒಳಗಾಗಿರಬಹುದು ಮತ್ತು ಹೊಸ ಪ್ರಯೋಗಗಳೂ ಅದರಲ್ಲಿ ಸೇರ್ಪಡೆಯಾಗಿರಬಹುದು.

ಮನೆಯಲ್ಲಿನ ಔಷಧೋಪಚಾರಗಳನ್ನು ಹೆಚ್ಚು ತಿಳಿದಿರುವವರು ಸ್ತ್ರೀಯರೆಂದರೆ ತಪ್ಪಾಗಲಾರದು. ಸಾಮಾನ್ಯವಾಗಿ ಇಲ್ಲಿನ ವೈದ್ಯ ಮಾಹಿತಿ ಮನೆಯಿಂದ ಮನೆಗೆ ಪ್ರಸರಣವಾಗುತ್ತದೆ. ಉದಾಹರಣೆಗೆ ಯಾರದೋ ಮನೆಯ ಮಗುವಿಗೆ ಬಂದಿರುವ ಕಜ್ಜಿಯನ್ನು ಗಮನಿಸಿದ ಅಜ್ಜಿಯೊಬ್ಬಳು 'ನನ್ನ ಮೊಮ್ಮಗಳಿಗೆ ಇದೇ ಕಜ್ಜಿ ಬಂದಿತ್ತು ಆಗ ಹಾಲೇಸೋಪ್ಪು ಮತ್ತು ಮಣ್ಣುಪ್ಪನ್ನು ಅರೆದು ಮೇಕೆ ಗಂಜಲ ಕಲಸಿ ಹಚ್ಚಿದಾಗ ಗುಣವಾಯಿತು' ಎಂದು ಹೇಳುತ್ತಾಳೆ. ಅದನ್ನು ಕೇಳಿಸಿಕೊಂಡವರು ಅದರಂತೆ ಪ್ರಯೋಗ ಮಾಡುತ್ತಾರೆ. ಇದು ಹೀಗೆಯೇ ಬೇರೆಡೆಗೆ ಹರಡುತ್ತದೆ. ಬಹುಜನ ಪರಿಚಿತ ವೈದ್ಯದಲ್ಲಿ ವಿವರಿಸಿದ ಆರು ಉದಾಹರಣೆಗಳಿಗೆ ಮನೆಯಲ್ಲಿನ ವೈದ್ಯೋಪಚಾರದಲ್ಲಿ ಯಾವ ಬಗೆಯ ಔಷಧೋಪಚಾರ ಸಿಗುತ್ತದೆ ಎಂಬುದನ್ನು ಈಗ ನೋಡೋಣ.

1. **ಹಲ್ಲುನೋವು** : ಬಹುಜನರಲ್ಲಿ ನಡೆದಂತಹ ವೈದ್ಯೋಪಚಾರ ಇಲ್ಲಿಯೂ ನಡೆದಿರುತ್ತದೆ. ಆನಂತರವೂ ನೋವು ಜಾಸ್ತಿ ಇದ್ದು ಬಾವುಕಡಿಮೆಯಾಗದಿದ್ದರೆ. ಸಜ್ಜೆಕಾಳನ್ನು ಬೇಯಿಸಿ ಬಿಸಿ

ಇರುವಾಗಲೇ ಬಟ್ಟೆಯಲ್ಲಿ ಹಾಕಿಕೊಂಡು ಕಾವು ಕೊಡುತ್ತಾರೆ. ಇದರಿಂದ ಪೂರ್ಣ ಪ್ರಮಾಣದ ಗುಣಮುಖ ಇದರಿಂದ ಆಗದಿದ್ದರೂ ತಾತ್ಕಾಲಿಕ ಉಪಶಮನವಾಗುತ್ತದೆ.

ಅಪಥ್ಯ : ಸಿಹಿ ಪದಾರ್ಥ, ಬದನೆಕಾಯಿ, ಕಾಫಿ, ಟೀ ಮುಂತಾದವನ್ನು ಕೆಲವು ದಿನ ಸೇವಿಸಬಾರದು ಎಂಬ ನಿಯಮವನ್ನು ಇಲ್ಲಿ ಕಾಣಬಹುದು.

2. **ಕೆಮ್ಮು** : ಬೆಳ್ಳುಳ್ಳಿ ಮತ್ತು ಉಪ್ಪನ್ನು ಜಗಿದು ತಿಂದು ಮೇಲೆ ಸ್ವಲ್ಪ ಬೆಲ್ಲ ತಿನ್ನುವುದು. ಹೀಗೆ ಮಾಡಿದಾಗ ಕೆಮ್ಮುವವನು ಸ್ವಲ್ಪ ಸಮಯವಾದರೂ ನೆಮ್ಮದಿಯನ್ನು ಅನುಭವಿಸುತ್ತಾನೆ.

ಅಪಥ್ಯ : ತಿಂದ ನಂತರ ನೀರು ಕುಡಿಯುವಂತಿಲ್ಲ.

* ಕಾಫಿಬೇರಿನ(ಸುಗಂಧಿ) ಕಷಾಯ ಅಥವಾ ಶುಂಠಿ ಕಷಾಯವನ್ನು ಕುಡಿಯುವ ವಾಡಿಕೆ ಇದೆ. ಇದರಿಂದ ದೀರ್ಘಕಾಲದ ಕೆಮ್ಮು, ಕಫ, ಗೂರಲು ಸಹ ಗುಣಕಾಣುತ್ತವೆ.

* ಮಕ್ಕಳ ಕೆಮ್ಮಿಗೆ ಬೆಳ್ಳುಳ್ಳಿ, ಗೇರುಬೀಜ, ಉತತ್ತಿಹಣ್ಣು ಮತ್ತು ಶುಂಠಿ ಇವನ್ನೆಲ್ಲ ಮೊಲೆಹಾಲಲ್ಲಿ ತೇದು ಹೊಯ್ಯುತ್ತಾರೆ. ಶೀತ ಮತ್ತು ಸೇವಿಸಿದ ಹಾಲಿನಿಂದ ಉಂಟಾದ ಕೆಮ್ಮು ಇದರಿಂದ ವಾಸಿಯಾಗುತ್ತದೆ.

* ಗುಬಸಿಹೂವು, ಕುಪ್ಪೆಸೊಪ್ಪು, ತುಂಬೆಸೊಪ್ಪು, ತುಳಸಿ ಸೊಪ್ಪು ಮುಂತಾದವಕ್ಕೆ ಅಡಿಗೆ ಮನೆಯ ಸಾಮಾನುಗಳಾದ ಹಿಪ್ಲಿ, ಮೋಡಿ, ಬಜೆ, ಅರಿಶಿಣ, ಜಾಕಾಯಿ, ಅಳತಿಕಾಯಿ, ಮೆಣಸು ಇತ್ಯಾದಿ. ಸೇರಿಸಿ ಹಸುಕೂಸುಗಳಿಗೆ ತಾಯಂದಿರು ಹೊಯ್ಯುತ್ತಾರೆ. ಇದರಿಂದ ಸಾಮಾನ್ಯವಾದ ಕೆಮ್ಮು ಮಾತ್ರವಲ್ಲ ನಾಯಿ ಕೆಮ್ಮು, ಅಳ್ಳಿಕಾಯಿಲೆ ಯಂತಹ ಸಮಸ್ಯೆಗಳು ಪರಿಹಾರವಾಗುತ್ತವೆ.

ಅಪಥ್ಯ : ಹಾಲು, ಮೊಸರು, ತುಪ್ಪ ಮತ್ತು ಎಣ್ಣೆಪದಾರ್ಥಗಳನ್ನು ಗುಣವಾಗುವ ತನಕ ತಿನ್ನಬಾರದೆಂದು, ಒಂದು ವೇಳೆ ತಿಂದರೆ ರೋಗ ಅಧಿಕವಾಗುವುದೆಂದು ಎಚ್ಚರಿಸುತ್ತಾರೆ. ಸಾಮಾನ್ಯವಾಗಿ ತಾಯಿ ಈ ಅಪಥ್ಯವನ್ನು ಪಾಲಿಸಬೇಕಾಗಿರುತ್ತದೆ.

3. **ಕಾಲಲ್ಲಿ ಮುಳ್ಳುಸೇರಿದಾಗ** : ಮುಳ್ಳನ್ನು ಹೊರತೆಗೆದು ಎಕ್ಕೆಯ ಹಾಲನ್ನು ಬಿಟ್ಟನಂತರವೂ

ನೋವು ಇದ್ದರೆ, ಬಿಸಿಯಾದ ಒಲೆಯ ಕೋಡನ್ನು ನೋವಿರುವ ಭಾಗದಿಂದ ತುಳಿಯುವಂತೆ ತಾಯಿ ಸಲಹೆ ಮಾಡುತ್ತಾಳೆ. ಹೀಗೆ ಮಾಡುವುದರಿಂದ ಆಳವಾಗಿ ನಾಟಿದ್ದ ಮುಳ್ಳಿನಿಂದಾದ ನೋವು ಉಪಶಮನವಾಗುತ್ತದೆ.

* ಕಾಲಲ್ಲಿ ಸೇರಿರುವ ಮುಳ್ಳು ಅಥವಾ ಕಸ ಇರುವುದನ್ನು ಖಚಿತಪಡಿಸಿಕೊಳ್ಳಲು ಬಿಸಿಮುದ್ದೆ ಅಥವಾ ಎಮ್ಮೆಯ ಬಿಸಿ ಸಗಣೆಯನ್ನು ಆ ಭಾಗಕ್ಕೆ ಕಟ್ಟುತ್ತಾರೆ. ಆಗ ಒಳಗಿರುವ ವಸ್ತು ಕಾಣಿಸುವಷ್ಟು ಆ ಭಾಗ ಬಿಳಿಯಾಗಿರುತ್ತದೆ.

4. **ಕಣ್ಣಾಗುವಿಕೆಗೆ :** ಕಣ್ಣಾದಾಗ ಕಣ್‌ಪಾಲಿಟ್ಟಿನ ಗಿಡದ ಬೀಜಗಳ ತಿರುಳನ್ನು ನುಣ್ಣಗೆ ಅರೆದು ಎರಡೂ ಕಣ್ಣುಗಳಿಗೆ ರಾತ್ರಿ ವೇಳೆ ಹಾಕುತ್ತಾರೆ. ಹೀಗೆ ಮಾಡಿದಾಗಲೂ ಕಣ್ಣುಗಳ ಕೆಂಪು ಹೋಗದಿದ್ದರೆ ಬೆಳಗಿನ ವೇಳೆ ಹುಲಿಕೊನೆ ಕಡಿದು ತಂದು ಕಣ್ಣಲ್ಲಿ ಊದುತ್ತಾರೆ. ಹೀಗೆ ಕನಿಷ್ಠ ಮೂರು ದಿವಸ ಊದಿದರೆ ಸಮಸ್ಯೆ ಪರಿಹಾರವಾಗುತ್ತದೆ.

* ಕಣ್ಣಲ್ಲಿ ಕಸಬಿದ್ದಾಗ ಎದೆಹಾಲು ಮತ್ತು ಹರಳೆಣ್ಣೆಯನ್ನು ರಾತ್ರಿ ವೇಳೆ ಕಣ್ಣಲ್ಲಿ ಬಿಡುವುದು. ಬೆಳಗಿನ ವೇಳೆಗೆ ಕಸವೆಲ್ಲ ಕಣ್ಣುಗಳ ಕುಣಿಕೆಗಳಿಗೆ ಬಂದಿರುತ್ತದೆ.

5. **ಹುಳುಕಡ್ಡಿಗೆ :** ಮುದುಕಲು ಬೀಜವನ್ನು ನಿಂಬೆಹುಳಿಯಲ್ಲಿ ತೇದು ಹಚ್ಚುತ್ತಾರೆ. ಇದಕ್ಕೆ ಗುಣವಾಗದಿದ್ದರೆ ಬಾರೆಮುಳ್ಳನ್ನು ಅದರ ಮೇಲೆ ಗೀರುತ್ತಾರೆ.

ಅಪಥ್ಯ : ಗಿಣ್ಣು, ಗೆಣಸು ಮತ್ತು ಕುಂಬಳಕಾಯಿ ತಿಂದರೆ ಪುನಃ ಹುಳುಕಡ್ಡಿ ಚಿಗುರುತ್ತದೆ ಎಂದು ಭಾವಿಸುತ್ತಾರೆ.

6. **ಕುರಗಳಿಗೆ :** ಅರಳೆ ಬತ್ತಿಯನ್ನು ದುಂಡಾಗಿ ಮಾಡಿ ಕುಲ್ಬಿಗನ ರಸದಲ್ಲಿ ಕುರಕ್ಕೆ ಹಾಕುತ್ತಾರೆ. ಇದಕ್ಕೆ ಮೀರಿದರೆ ಉಮ್ಮತ್ತಿಗಿಡದ ಎಲೆಗಳಿಗೆ ಹರಳೆಣ್ಣೆ ಹಚ್ಚಿ ಬೆಂಕಿಯ ಜಳಕ್ಕೆ ಹಿಡಿದು ಹಾಕುತ್ತಾರೆ. ನಂತರ ಕುರಗಳು ಹಾಗೇ ಇಮರಿ ಹೋಗುತ್ತವೆ. ಮನೆಯಲ್ಲಿ ಮಾಡುವ ಇತರೆ ವೈದ್ಯೋಪಚಾರಗಳೆಂದರೆ;

* ಶೀತವಾಗಿದ್ದರೆ ಮೂರು ಬೆಣಚುಕಲ್ಲುಗಳನ್ನು ಕಾಯಿಸಿ, ನೀಲಗಿರಿ ಸೊಪ್ಪುಹಾಕಿರುವ ನೀರಲ್ಲಿ ಕಾದ ಕಲ್ಲುಗಳನ್ನು ಹಾಕಿ ಅದರಿಂದ ಬರುವ ಉಗಿಯನ್ನು ದುಪ್ಪಟಿ ಹೊದ್ದುಕೊಂಡು ದೇಹ ಮತ್ತು ತಲೆಗೆ ಹಾಯಿಸಿಕೊಳ್ಳುತ್ತಾರೆ.

* ಮಗುವಿಗೆ ಕಣ್ಣಾಸರೆಯಾದಾಗ ಮೂರು ಮೆಣಸಿನಕಾಯಿ, ಉಪ್ಪಿನ ಹರಳು ಮತ್ತು ಚಪ್ಪರದ ಕಡ್ಡಿಯಿಂದ ನಿವಾಳಿಸಿ ನಂತರ ಅದನ್ನು ಚಂಬಿನಲ್ಲಿ ಹಾಕಿ ಒಂದು ಗಂಗ್ಳದಲ್ಲಿ ಆ ಚಂಬನ್ನು ದಬ್ಬುಹಾಕಿ ಮೇಲೆ ನೀರು ಸುರಿಯುತ್ತಾರೆ, ಆಗ ನೀರು ಕಪ್ಪಾದರೆ ಗುಣವಾಗುವುದೆಂದು ನಂಬುತ್ತಾರೆ. ಹೀಗೆ ಮಾಡುವುದಕ್ಕೆ ಕಾಲ್ಲೂಳು/ರಂಜುಹಾಕುವುದು ಎನ್ನುತ್ತಾರೆ.

* ಮೊಣಕಾಲಿನಿಂದ ಕೆಳಗೆ ಕೀವು ತುಂಬಿದ ಗುಳ್ಳೆಗಳು ಬಂದರೆ ಅವುಗಳನ್ನು ದಾಟು ಎಂದು ಕರೆಯುತ್ತಾರೆ. ಅದಕ್ಕಾಗಿ ಮೂರು ಅಡಿ ಉದ್ದದ ಮುಂಗೈ ದಪ್ಪವಿರುವ ಕಟ್ಟಿಗೆಯನ್ನು ಮೂರು ಹಾದಿ ಕೂಡಿರುವಲ್ಲಿ ಇಟ್ಟು ಮೂರು ಸಾರಿ ಆಕಡೆ ಈಕಡೆ ದಾಟಿ ಹಿಂದಕ್ಕೆ ತಿರುಗಿ ನೋಡದೆ ಬರುತ್ತಾರೆ. ಹೀಗೆ ಮಾಡುವುದರಿಂದ ಗುಳ್ಳೆಗಳು ಹೊರಟು ಹೋಗುತ್ತವೆಂದು ಭಾವಿಸಿದ್ದಾರೆ.

ಮಹಿಳೆಯರು ತಮ್ಮ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ಈ ಮನೆಯಲ್ಲಿನ ವೈದ್ಯೋಪಚಾರಗಳಲ್ಲಿ ಕಂಡು ಕೊಳ್ಳುತ್ತಾರೆ. ಹಾಗೆಯೇ ಹಸುಗೂಸುಗಳ ವಿವಿಧ ಹಂತದ ಆರೈಕೆಯನ್ನೂ ಇಲ್ಲಿ ಮಾಡಲಾಗುತ್ತದೆ. ಈ ಮನೆ ವೈದ್ಯರಲ್ಲಿ ಹೆಚ್ಚು ಅನುಭವವುಳ್ಳವರೂ ಇದ್ದಾರೆ. ಇಂಥವರನ್ನು ಇತರ ವೈದ್ಯರನ್ನು ಗುರುತಿಸಿದಷ್ಟು ಸುಲಭವಾಗಿ ಗುರುತಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆ ಇವರು 'ನೆಲದ ಮರೆಯ ನಿಧಾನ'ದಂತೆ ಇದ್ದಬಿಡುವುದುಂಟು. ಪರಿಣಾಮವಾಗಿ ಅವರ ವೈದ್ಯ ಸೇವೆ ಹೆಚ್ಚು ಜನರಿಗೆ ಲಭ್ಯವಾಗುವುದಿಲ್ಲ. ಬಹುಶಃ ಇದಕ್ಕಾಗಿಯೇ ಜನಪದ ವೈದ್ಯವನ್ನು ಮನೆ ವೈದ್ಯ, ಮನೆಮದ್ದು, ಮನೆಔಷಧ ಮತ್ತು ಅಜ್ಜಿ ಮದ್ದು ಎಂದು ಕರೆಯಲಾಗುತ್ತದೆ. ಅಂದರೆ ಒಂದು ಕಾಲದಲ್ಲಿ ಮನೆಮಂದಿಯಲ್ಲ ವೈದ್ಯವನ್ನು ಬಲ್ಲವರಾಗಿದ್ದರು ಎಂದು ಊಹಿಸಿದರೆ ತಪ್ಪಾಗಲಾರದು. ಅನುಭವಿ ವೈದ್ಯನೊಬ್ಬನು ಕಾಲವಾದ ನಂತರ ಆತನ ಮನೆಯಲ್ಲಿ ಯಾರೊಬ್ಬರೂ ಆ ವೈದ್ಯವನ್ನು ಪೂರ್ಣ ಪ್ರಮಾಣದಲ್ಲಿ ಕಲಿಯದಿರುವ ಉದಾಹರಣೆಗಳಿವೆ. ಹೀಗಿದ್ದರೂ ಆ ಮನೆಯವರಿಗೆ ಅನೇಕ ರೋಗಗಳಿಗೆ ಔಷಧ್ಯೋಪಚಾರ ಮಾಡುವ ತಿಳುವಳಿಕೆ ಇರುತ್ತದೆ. ಹೇಗೆಂದರೆ ಮನೆಯಲ್ಲಿ

ವೈದ್ಯೋಪಚಾರ ಮಾಡುವುದನ್ನು ನಿರಂತರ ಗಮನಿಸಿರುವುದರಿಂದ ಇದು ಸಾಧ್ಯವಾಗುತ್ತದೆ. ಅನಿವಾರ್ಯವಾದಾಗ ಅದರ ಪ್ರಯೋಗವನ್ನು ಮಾಡುತ್ತಾರೆ. ವೈದ್ಯನೊಬ್ಬನ ಉತ್ತರಾಧಿಕಾರಿ ಆ ಕುಟುಂಬದಲ್ಲಿ ಯಾರೂ ಇಲ್ಲದಿದ್ದಾಗ ಈ ಬಗೆಯ ವಾತಾವರಣ ನಿರ್ಮಾಣವಾಗುತ್ತದೆ. ಕೆಲವು ವೈದ್ಯರು ತಮ್ಮ ಮಕ್ಕಳು ಮತ್ತು ಮೊಮ್ಮಕ್ಕಳು ಬೇರೆಯವರ ಹತ್ತಿರ ಹೋಗಿ ಔಷಧಿ ಬೇಡುವುದು ಬೇಡ ಎಂದು ಮನೆಯವರಿಗಾದರೂ ವೈದ್ಯೋಪಚಾರ ಮಾಡುವುದು ತಿಳಿದಿರಲಿ ಎಂದು (148) ಬಯಸುತ್ತಾರೆ.

ವೈದ್ಯನ ಹೆಂಡತಿಗೆ ತನ್ನ ಗಂಡ ಮಾಡುವ ವೈದ್ಯಮಾಹಿತಿಯ ಬಗ್ಗೆ ಅರಿವಿರುತ್ತದೆ. ಸಮಯ ಬಂದಾಗ ವೈದ್ಯೋಪಚಾರ ಮಾಡಲು ಆಕೆ ಮುಂದಾಗಬಹುದು; ಮಕ್ಕಳು ಮತ್ತು ಮೊಮ್ಮಕ್ಕಳಿಗೆ ಅದನ್ನು ತಿಳಿಸಿಕೊಟ್ಟಿರುವ ಉದಾಹರಣೆಗಳಿವೆ. ಮನೆಯಲ್ಲಿನ ವೈದ್ಯೋಪಚಾರದಲ್ಲಿ ಗೋಪ್ಯತೆಗೆ ಪ್ರಮುಖಸ್ಥಾನವಿರದಿದ್ದರೂ ಸ್ವಲ್ಪ ಮಟ್ಟಿಗೆ ಅದು ಕೆಲಸ ಮಾಡುತ್ತದೆ ಎನ್ನಬಹುದು. ಪಥಾಪಥ್ಯದ ವಿಚಾರಕ್ಕೆ ಗಮನನೀಡಲಾಗುತ್ತದೆ. ಹೆಚ್ಚಾಗಿ ಸ್ಥಳೀಯ ವಸ್ತುಗಳಿಂದಲೇ ಔಷಧಿಯನ್ನು ತಯಾರಿಸುತ್ತಾರೆ. ವೈದ್ಯಸೇವೆ ಮಾಡಿದ್ದಕ್ಕೆ ಪ್ರತಿಯಾಗಿ ಏನನ್ನು ಪಡೆಯುವುದಿಲ್ಲ. ಅಲ್ಲದೆ ತಗೆದುಕೊಳ್ಳಬೇಕೆಂಬ ಪರಿಕಲ್ಪನೆಯೇ ಅವರಿಗಿರುವುದಿಲ್ಲ ಎನ್ನಬಹುದು. ಈ ರೀತಿಯಾದ ಮನೆಯ ವೈದ್ಯೋಪಚಾರಗಳು ಪೂರ್ವದಿಂದಲೂ ಅವಿಚ್ಛಿನ್ನವಾಗಿ ಸಾಗಿಬರುತ್ತಿದ್ದು ಆಧುನಿಕ ಕುಟುಂಬಗಳಲ್ಲೂ ಅದನ್ನು ಕಾಣಬಹುದಾಗಿದೆ.

ಮನೆಯ ಅಜ್ಜಿ ಅನುಭವದ ಗಣಿ ಇದ್ದ ಹಾಗೆ. ಗೃಹ ವೈದ್ಯ ಎಂದರೂ ಅತಿಶಯೋಕ್ತಿ ಆಗಲಾರದು. ಕಿರಿಯರಿಂದ ಹಿರಿಯರವರಗೂ ಅವಳ ವೈದ್ಯಸೇವೆ ನಡೆಯುತ್ತಿರುತ್ತದೆ. ಹುಟ್ಟಿದ ಕೊನೆಗೆ ಎಣ್ಣೆಸ್ನಾನ ಮಾಡಿಸುವುದರಿಂದ ಪ್ರಾರಂಭಿಸಿ, ಮಗುವಿಗೆ ಅಜೀರ್ಣವಾದರೆ ಬಜೆಯನ್ನು ತೇಯ್ದುಹುಯ್ಯುವುದು, ಭೇದಿಯಾದರೆ ಜಾಕಾಯಿಯನ್ನು ಎದೆಹಾಲಲ್ಲಿ ತೇಯ್ದು ಕುಡಿಸುವುದು, ಭೇದಿಕಟ್ಟಿದರೆ ಮನೆಯಲ್ಲಿ ಕಟ್ಟುವ ಕಣಜದ ಗೂಡಿನ ಮಣ್ಣನ್ನು ಹರಳೆಣ್ಣೆಯಲ್ಲಿ ರಂಗಳಿಸಿ ಮಗುವಿಗೆ ನೆಕ್ಕಿಸಿದರೆ ತಕ್ಷಣ ಭೇದಿಯಾಗುವುದು. ಇದು ಕೂಸಿನ ವೈದ್ಯೋಪಚಾರವಾದರೆ, ಅಜ್ಜಿ ಬಾಣಂತಿಗೆ ಮಾಡುವ ಉಪಚಾರ: ಮೊಲೆಹಾಲು ಕಡಿಮೆ ಇದ್ದರೆ ವೃದ್ಧಿಮಾಡಲು ಹಾಲೋಸೊಪು

ಮತ್ತು ಕಿರುಕು ಸಾಲೆ ಸೊಪ್ಪುಗಳ ಊಟವನ್ನು ಮಾಡಿಸಲಾಗುತ್ತದೆ. ಈ ಬಗೆಯ ಸೊಪ್ಪುಗಳ ಸೇವನೆಯಿಂದ ಹಾಲೂ ವೃದ್ಧಿಯಾಗಿ ಅಪೌಷ್ಟಿಕತೆ ನಿವಾರಣೆಯಾಗುತ್ತದೆ. ಹೆರಿಗೆಯ ನಂತರ ಸೋಂಕು ತಗಲಿದಂತೆ ಬೇವು, ನಿಂಬೆ, ನೀಲಗಿರಿ, ಅರಳೆ, ಗಜ್ಜುಗ, ಕಿತ್ತಳೆ – ಈ ಮೊದಲಾದ ಮರಗಳ ಸೊಪ್ಪನ್ನು ನೀರಲ್ಲಿ ಕುದಿಸಿ ಆ ನೀರಿನಿಂದ ಸ್ನಾನ ಮಾಡಿಸುವುದು ಬಾಣಂತಿ ಕನಿಷ್ಠ ಐದು ತಿಂಗಳವರೆಗೆ ರಾಗಿ ಅಥವಾ ಜೋಳದ ಮುದ್ದೆ ಮತ್ತು ಬೇಳೆ ಉದುಕುವನ್ನು ಸೇವಿಸುವಂತೆ ಎಚ್ಚರಿಕೆಯನ್ನು ವಹಿಸುವುದು. ಗರ್ಭಿಣಿ ಇರುವಾಗ ಉತ್ತತ್ತಿ, ಒಣಕೊಬರಿ, ಒಣದ್ರಾಕ್ಷಿ, ಗೋಡಂಬಿ, ಬಾದಾಮಿ, ಚಕ್ಕೆ, ಲವಂಗ, ಹಿಪ್ಲಿ, ಮೋಡಿ, ಏಲಕ್ಕಿ, ಬಜೆ, ಶುಂಠಿ(91) ಈ ಮೊದಲಾದವನ್ನು ಸೇವನೆಗೆ ಕೊಡುವುದರ ಮೂಲಕ ರಕ್ತವೃದ್ಧಿಯಾಗುವಂತೆ ಕಾಳಜಿ ವಹಿಸುತ್ತಾಳೆ. ಹೀಗೆ ಅಜ್ಜಿಯರ ವೈದ್ಯೋಪಚಾರದ ಪಟ್ಟಿಯೇ ಬೆಳೆಯುತ್ತದೆ.

ಇ) ಹಳ್ಳಿಯಲ್ಲಿನ ವೈದ್ಯೋಪಚಾರಗಳು

ಮನೆಯ ವೈದ್ಯರು ಹಳ್ಳಿಯವರಿಗೆಲ್ಲ ವೈದ್ಯೋಪಚಾರ ಮಾಡುವವರಾಗಬಹುದು. ಇದು ವ್ಯಕ್ತಿಯ ಆಸಕ್ತಿ ಮತ್ತು ಸೇವಾಮನೋಭಾವವನ್ನು ಅವಲಂಬಿಸಿ ಆತನ ಕಾರ್ಯವ್ಯಾಪ್ತಿಯನ್ನು ನಿರ್ಧರಿಸಲ್ಪಡುತ್ತದೆ. ಹಾಗೆಯೇ ಗುರುಪರಂಪರೆಯ ಪ್ರಭಾವವೂ ಇಲ್ಲಿ ಕೆಲಸಮಾಡುತ್ತದೆ. ಅಂದರೆ ವೈದ್ಯನೊಬ್ಬನು ತನ್ನ ಮನೆಯವರಿಗೆ ಔಷಧೋಪಚಾರ ಮಾಡಿದಂತೆ ಇತರ ಜನರಿಗೂ ಮಾಡಬೇಕೆಂದು ಗುರುವಿನ ಅಜ್ಞೆಯಾಗಿರುತ್ತದೆ. ವೈದ್ಯ ಮಾಡುವುದನ್ನು ಉಪಕಸುಬಾಗಿ ಸ್ವೀಕರಿಸಿದವನು ಹಳ್ಳಿಯವರಿಗೆಲ್ಲ ವೈದ್ಯನಾಗಿದ್ದಂತೆ ಸುತ್ತಲಿನ ಹಳ್ಳಿಯವರಿಗೂ ಔಷಧಿ ಕೊಡುವವನಾಗಿರುತ್ತಾನೆ. ಹಳ್ಳಿಯ ಹಂತದ ಕೆಲವು ವೈದ್ಯರು ಯಾವುದೇ ಆಡಂಬರ ತೋರದೆ ಮನೆಯವರಿಗೆ ಮತ್ತು ಹಳ್ಳಿಯಲ್ಲಿನ ಕೆಲ ಆಪ್ತರಿಗೆ ಮಾತ್ರ ವೈದ್ಯಮಾಡುವ ಉದಾಹರಣೆಗಳಿವೆ. ಇಂಥವರು ಸಾಮಾನ್ಯವಾಗಿ ಸಂಕೋಚದ ಸ್ವಭಾವದರಾಗಿರುತ್ತಾರೆ.

ಹಳ್ಳಿಯ ವ್ಯಾಪ್ತಿಯಲ್ಲಿ ವೈದ್ಯಮಾಡುವವರು ಊರಿಗೆ ಒಬ್ಬರಿರಬಹುದು ಇಲ್ಲ ಮೂರ್ನಾಲ್ಕು ಜನರಿರಬಹುದು. ಅವರೆಲ್ಲರೂ ಹಳ್ಳಿಯ ಜನರ ಮತ್ತು ಜಾನುವಾರುಗಳ ರೋಗಗಳಿಗೆ ವೈದ್ಯಸೇವೆ ಮಾಡುವವರಾಗಿರುತ್ತಾರೆ. ಇಂಥಾ ವೈದ್ಯರ ಬಗ್ಗೆ ಹಳ್ಳಿಯ ಜನರಿಗೆ ಅಭಿಮಾನವಿರುತ್ತದೆ. ಅಪತ್ಕಾಲದಲ್ಲಿ

ಆಸರೆಯಾಗುವವರೆಂದು ಅವರ ಬಗ್ಗೆ ಊರವರೆಲ್ಲ ಕಾಳಜಿ ವಹಿಸಿರುವ ಉದಾಹರಣೆಗಳಿವೆ. 'ನಾನು ಯಾವುದೇ ವಸ್ತು ಅಥವಾ ಸಹಾಯ ಬೇಡಿದರೆ ಜನ ಇಲ್ಲವೆನ್ನದೆ ಕೊಡುತ್ತಾರೆ' (131) 'ನಮ್ಮೂರಿನ ಜನ ಯಾವುದೇ ಸಮಸ್ಯೆಗೆ ನನ್ನ ಸಲಹೆಯನ್ನು ಕೇಳಿದ ನಂತರವೇ ಮುಂದಕ್ಕೆ ಹೋಗುತ್ತಾರೆ' (203) ವೈದ್ಯನೇನಾದರೂ ಬಡವನಾಗಿದ್ದರೆ ಸುಗ್ಗಿಯ ವೇಳೆಯಲ್ಲಿ ದವಸ ಧಾನ್ಯಗಳನ್ನು ಆತನಿಗೆ ಊರವರು ಕೊಡುತ್ತಾರೆ. ಹಳ್ಳಿಯಲ್ಲಿನ ವೈದ್ಯ ಕಾಲವಾಗುವ ಮೊದಲು ಆತನ ಮನೆಯವರೋ ಅಥವಾ ಊರಲ್ಲಿನ ಒಬ್ಬ ಒಳ್ಳೆಯ ವ್ಯಕ್ತಿಯೋ ವೈದ್ಯಜ್ಞಾನವನ್ನು ಕಲಿಯಬೇಕೆಂದು ಆ ಊರಿನ ಜನರು ಅಪೇಕ್ಷಿಪಡುತ್ತಾರೆ.

ಹಳ್ಳಿಯಲ್ಲಿನ ವೈದ್ಯರು ಸಾಧ್ಯವಾದಷ್ಟು ಗೋಪ್ಯವಾಗಿಯೇ ಔಷಧೋಪಚಾರವನ್ನು ಮಾಡುತ್ತಾರೆ. ಈ ಹಳ್ಳಿಮಟ್ಟದ ವೈದ್ಯರಲ್ಲಿ ತಮ್ಮ ವೈದ್ಯಸೇವೆಗೆ ಪ್ರತಿಯಾಗಿ ಏನನ್ನಾದರು ಬಯಸುವವರೂ ಇರುತ್ತಾರೆ. ಇವರು ಔಷಧಿ ತಯಾರಿಕೆಗೆ ಸ್ಥಳೀಯ ಗಿಡಮೂಲಿಕೆಗಳನ್ನು ಬಳಸುವುದರ ಜೊತೆಗೆ ಗ್ರಂಥಿಗೆ ಅಂಗಡಿಯ ವಸ್ತುಗಳನ್ನು ಬಳಸುತ್ತಾರೆ. ಹಳ್ಳಿಯಲ್ಲಿನ ವೈದ್ಯರಲ್ಲಿ ಯಾವ ವೈದ್ಯ ಯಾವ ರೋಗಗಳನ್ನು ಗುಣಪಡಿಸಬಲ್ಲ ಎಂಬುದನ್ನು ಜನತೆ ತಿಳಿದಿರುತ್ತಾರೆ. ಈ ವೈದ್ಯರಲ್ಲಿ ಅನುಭವಿಗಳೂ ಮತ್ತು ದೊಡ್ಡಪಂಡಿತರೆಂಬ ಬಿರುದನ್ನು ಪಡೆದವರೂ ಇರುತ್ತಾರೆ. ವಾಮವಿದ್ಯೆಗಳಲ್ಲೂ ನಿಷ್ಣಾತರಾದವರಿರುತ್ತಾರೆ.

ಹಳ್ಳಿಯಲ್ಲಿ ಇನ್ನೊಂದು ಬಗೆಯ ವೈದ್ಯರಿದ್ದಾರೆ ಅವರು ಸೂಲಗಿತ್ತಿಯರು. ಇವರು ಯಾವ ಪ್ರಚಾರ ಮತ್ತು ಪ್ರತಿಫಲ ಬಯಸದೇ ಊರಲ್ಲಿಯ ಹೆರಿಗೆಗಳನ್ನು ಮಾಡಿಸುತ್ತಾರೆ. ಹೆರಿಗೆ ಮಾಡಿಸಿ ತಾಯಿ ಮತ್ತು ಮಗುವಿನ ಉಪಚಾರ ಹಾಗೂ ವೈದ್ಯೋಪಚಾರವನ್ನು ತಿಂಗಳುಗಟ್ಟಲೇ ಮಾಡುತ್ತಾರೆ. ಸೂಲಗಿತ್ತಿಯೊಬ್ಬರ ಅನುಭವ ಹೀಗಿದೆ. 'ಹುಟ್ಟಿದ ಮಗು ಅಳುವ ತನಕ್ಕ ಹೊಕ್ಕಳ ಹುರಿ ಕೊಯ್ಯುವುದಿಲ್ಲ, ಅತ್ತ ನಂತರ ಕುಯ್ಯುತ್ತೇನೆ. ಹುಣಿಸೆ ಹಣ್ಣಿನ ನಾರನ್ನು ಗುದಭಾಗಕ್ಕೆ ಇಟ್ಟು ಭೇದಿ ಮಾಡಿಸಿ ನಂತರ ಸ್ನಾನ ಮಾಡಿಸಿ ಹಾಲು ಕುಡಿಸುತ್ತೇವೆ. ಸೂರ್ಯನಿಗೆ ಪೂಜೆ : ಹೆರಿಗೆಯಾದ ಮೂರುದಿನದಲ್ಲಿ ಕುಡುಗೋಲು, ಬೇವಿನ ಸೊಪ್ಪು ಇಟ್ಟು ಸೂರ್ಯನಿಗೆ ಪೂಜೆ ಮಾಡಿ ಕೈಮುಗಿದು ಮೇಲೆ ಒಳಮನೆಗೆಲ್ಲ ಹೋಗಬಹುದು. ಬಾಣಂತಿಗೆ ಶಾಖದ ನೀರು :

ಮೂರು, ಐದುಗಳಲ್ಲಿ ಹುಣಿಸೆ ಸೊಪ್ಪು, ಎಳ್ಳಿಸೊಪ್ಪು, ಬೇವಿನ ಸೊಪ್ಪ, ಗಜ್ಜುಗದ ಸೊಪ್ಪು, ನೀಲಗಿರಿ ಸೊಪ್ಪು ಈ ಸೊಪ್ಪುಗಳನ್ನು ಕುದಿಸಿದ ನೀರಲ್ಲಿ ಸ್ನಾನ ಮಾಡಿಸುತ್ತೇನೆ. ಒಂಭತ್ತನೆಯ ದಿನದಲ್ಲಿ ತಲೆಗೆ ಸ್ನಾನ ಮಾಡಿಸುತ್ತೇನೆ. ಕೂಸಿಗೆ ಮಾತ್ರ ಮೂರು ತಿಂಗಳವರೆಗೆ ಎಣ್ಣೆಸ್ನಾನ ಮಾಡಿಸಲು ಹೋಗುತ್ತೇನೆ. ಕೆಲವು ಸಾರಿ ಐದು ಆರು ಹೆರಿಗೆ ಒಂದೇ ವೇಳೆಯಲ್ಲಿ ಆದಾಗ ಕಷ್ಟ ಆಗುತ್ತೆ ಮನೆಕೆಲ್ಸದಲ್ಲಿ ನಿಂತು ಹೋಗುತ್ತೆ. ಬಾಣಂತಿ ಊಟ : ಹೆರಿಗೆ ಆದ ಮೇಲೆ ರವೆಗಂಜಿ ಕುಡಿಸುತ್ತೇನೆ. ಆಮೇಲೆ ಇಪ್ಪತ್ತು ದಿನಗಳವರೆಗೆ ಗಟ್ಟಿ ಪದಾರ್ಥ ಊಟಮಾಡಬಾರದು ಅನ್ನತಿಳಿ ಸಾರು ಊಟ ಮಾಡಬೇಕು. ನಂತರ ಮುದ್ದೆ ರೊಟ್ಟಿ ಊಟ ಮಾಡಬೇಕು. ಬಾಣಂತಿಗೆ ಸನ್ನಿ ಬಂದರೆ ತಲೆ ಮೇಲೆ ರಾಮಬಾಣದ ಸೊಪ್ಪು ಇಟ್ಟು ಮೇಲೆ ಬಿಸಿರಾಗಿ ರೊಟ್ಟಿ ದಬ್ಬುಹಾಕುತ್ತೇನೆ'(176).

ಹಳ್ಳಿಯಲ್ಲಿರುವ ಸೂಲಗಿತ್ತಿಯರು ಸಾಮಾನ್ಯವಾಗಿ ಈ ಮೇಲಿನಂತಹ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿರುತ್ತದೆ. ಸೊಪ್ಪುಗಳನ್ನು ಕುದಿಸಿದ ನೀರಿನಿಂದ ಸ್ನಾನ ಮಾಡಿಸುವುದು ಯಾವುದೇ ಸೋಂಕು ಬರದಂತೆ ನಿಯಂತ್ರಿಸುವ ಕಾರ್ಯವನ್ನು ಮಾಡುತ್ತದೆ. ಮಗುವಿಗೆ ಹರಳೆಣ್ಣೆಯ ಸ್ನಾನವನ್ನು ಐದು ತಿಂಗಳವರೆಗೆ ಈಗಲೂ ಮಾಡಿಸುತ್ತಾರೆ. ಇನ್ನೂ ಬಾಣಂತಿ ಊಟದಲ್ಲಿ ಹಿಂದಿನವರ ಹಾಗೆ ಕಟ್ಟುನಿಟ್ಟಾಗಿ ಪಥ್ಯವನ್ನು ಈಗ ಪಾಲಿಸುವುದಿಲ್ಲ. ಒಂದು ವೇಳೆ ತಾಯಿಯ ಹಾಲು ಮಗುವಿಗೆ ಕಡಿಮೆ ಆದರೆ ಮೇಕೆ ಅಥವಾ ಆರಳದ ಹಾಲನ್ನು ಹುಯ್ಯುತ್ತಾರೆ. ಒಂಭತ್ತನೆಯ ದಿನದಲ್ಲಿ ಮಕ್ಕಳ ಖಾರ ಎಂಬ ಹೆಸರಲ್ಲಿ ಹಿಂದೆ ಗರ್ಭಿಣಿಯರ ರಕ್ತವೃದ್ಧಿಗೆ ಕೊಡುವ ಪೌಷ್ಠಿಕ ವಸ್ತುಗಳನ್ನು ಇಲ್ಲಿಯೂ ಕೊಡುತ್ತಾರೆ. ಈ ಎಲ್ಲಾ ಉಪಚಾರಗಳ ಜೊತೆಗೆ ತಾಯಿ ಮತ್ತು ಮಗುವಿಗೆ ಅಡಿಗೆ ಮನೆಯ ವಸ್ತುಗಳಿಂದಲೇ ಔಷಧೋಪಚಾರವನ್ನು ಮಾಡುತ್ತಾರೆ.

* ಮಗು ಕೆಮ್ಮಿದರೆ, ಬೆಳ್ಳುಳ್ಳಿ, ಮೆಣಸು, ಉಪ್ಪುಗಳನ್ನು ಹಾಲಿನೊಡನೆ ಸೇರಿಸಿ ಕೆಂಡದ ಮೇಲೆ ಬಿಸಿಮಾಡಿ ಮಗುವಿಗೆ ಹಾಲನ್ನು ಕುಡಿಸಿದರೆ ತಾಯಿಗೆ ಬೆಳ್ಳುಳ್ಳಿಗಳನ್ನು ತಿನ್ನಿಸುತ್ತಾರೆ.

* ಮಗು ಉಸಿರಾಡುವಾಗ ಗೂರ್‌ಗೂರ್ ಎಂದು ಶಬ್ದ ಮಾಡಿದರೆ, ಬಿಳಿ ಈರುಳ್ಳಿ ರಸ, ಹಸಿಶುಂಠಿರಸ ಇವನ್ನು ಒಂದು ಲೋಟದಲ್ಲಿ ಕೆಂಡ ಮೇಲೆ ಬಿಸಿ ಮಾಡಿ ಕುಡಿಸುವುದು.

* **ಕ್ಯಾಮರೆ :** ಹುಟ್ಟಿದ ಎರಡು ಮೂರು ದಿನಗಳಲ್ಲಿ ಬರುತ್ತದೆ. ಆಗ ಮಗುವಿನ ಮೈಯಲ್ಲಿ

ಕೆಂಪಗೆ ಆಗಿರುತ್ತದೆ. ಇದಕ್ಕೆ ಔಷಧಿ, ಹಾಗಲ ಸೊಪ್ಪು, ಕರೆಕಾಕಿ ಸೊಪ್ಪು, ಬುಡ್ಡೆಸೊಪ್ಪು ಈ ಮೂರು ಸೊಪ್ಪುಗಳನ್ನು ಕೈಯಲ್ಲಿ ಹಿಂಡಿ ಒಂದು ಚಮಚದಷ್ಟು ರಸವನ್ನು ಹೊಟ್ಟೆಗೆ ಮೂರು ದಿವಸ ಕುಡಿಸುತ್ತಾರೆ. ಅದೇ ರಸವನ್ನು ದೇಹಕ್ಕೆ ಹಚ್ಚುತ್ತಾರೆ. ಹೀಗೆ ಮಾಡುವುದರಿಂದ ಕ್ಯಾಮರೆ ಹೊರಟು ಹೋಗುತ್ತದೆ.

* **ಮಗು ಮೈಮುರಿದರೆ, ಲಕ್ಷಣ :** ಹಾಸಿಗೆ, ತೊಟ್ಟಿಲುಗಳಿಗೆ ಹಾಕಿದಾಗ ಅಳುತ್ತದೆ. ಮಗುವಿನ ಮೈಯಲ್ಲಿ ಮುಳ್ಳಿನಂತಹ ಸಣ್ಣ ಸಣ್ಣ ಗುಳ್ಳೆಗಳು ಬಂದಿರುತ್ತವೆ. ಆಗ ಮೈಯಲ್ಲಿ ಈಪ್ಪಗೆ ಆಗಿರುತ್ತದೆ. ಇಂಥ ವೇಳೆಯಲ್ಲಿ ಮಗು ಕಿರುಚಿತ್ತಿರುತ್ತದೆ. ಇದರ ಪರಿಹಾರಕ್ಕೆ ಎಮ್ಮೆ ಸಗಣಿಯನ್ನು ಬಟ್ಟೆಯಲ್ಲಿ ಹಿಂಡಿ ಬಂದರಸವನ್ನು ಮಗುವಿನ ಮೈಗೆ ಹಚ್ಚಿ ಸ್ವಲ್ಪ ಸಮಯ ಬಿಟ್ಟು ಸ್ನಾನ ಮಾಡಿಸುವುದು. ಹೀಗೆ ಮೂರು ದಿವಸ ಮಾಡಬೇಕು.

* **ಗರ್ಭಿಣಿಯರ ಬಿ.ಪಿ :** ಲಕ್ಷಣ : ಅಂಗಾಲು ಜುಮು, ಜುಮು ಅಂತಾವೆ, ಮನದಲ್ಲಿ ಭೀತಿ ಭಯ ಇಟ್ಟುಗೊಳ್ಳುವುದು ಇದರ ಪರಿಹಾರಕ್ಕೆ ಹಸಿಬೆಳ್ಳುಳ್ಳಿ, ಹಸಿಕೊತ್ತಂಬರಿ ಸೊಪ್ಪು ಇವೆರಡನ್ನು ಅರೆದು ಮಜ್ಜಿಗೆಯಲ್ಲಿ ಒಂದು ವಾರ ಕುಡಿದರೆ ಬಿ.ಪಿ. ವಾಸಿಯಾಗಿಬಿಡುತ್ತದೆ (176).

ಸೂಲಗಿತ್ತಿಯೊಬ್ಬಳ ವೈದ್ಯೋಪಚಾರದ ಸಂಕ್ಷಿಪ್ತ ವಿವರವನ್ನು ಮೇಲೆ ಕೊಡಲಾಗಿದೆ. ಇದೇ ರೀತಿಯಲ್ಲಿ ಸ್ತ್ರೀ ಮತ್ತು ಮಗುವಿಗೆ ಸಂಬಂಧಿಸಿದ ಅನೇಕ ವೈದ್ಯ ವಿಧಾನಗಳನ್ನು ಅವರು ಮಾಡುತ್ತಾರೆ. ಆದರೆ ಅವರಿಗೆ ದೊರೆಯುವ ಪ್ರತಿಫಲ ಮಾತ್ರ ಶೂನ್ಯ. ಎಲೆ, ಅಡಿಕೆ ಒಂದು ರವಿಕೆ ಬಟ್ಟೆಕೊಡುತ್ತಾರೆ. ಒಂದು ಹೆರಿಗೆ ಮಾಡಿಸಿ ಮೂರು ತಿಂಗಳ ವರೆಗೆ ಕೂಸಿಗೆ ಎಣ್ಣೆನೀರು ಹಾಕಿದರೂ ಇದೇ ಕಾಣಿಕೆ, ಹೆಚ್ಚು ಅಂದರೆ ಒಂದು ಹೊಸ ಸೀರೆ ಕೊಡುವ ಉದಾರಿಗಳೂ ಇದ್ದಾರೆ.

ಹಳ್ಳಿಯ ವೈದ್ಯರು ಕೆಲವು ರೋಗಗಳಿಗೆ ಔಷಧವನ್ನು ಕೊಡಲು ನಿರ್ದಿಷ್ಟ ಸಮಯ ಮತ್ತು ದಿನಗಳನ್ನು ಪ್ರಮುಖವಾಗಿ ಪರಿಗಣಿಸುತ್ತಾರೆ. ಅನಿವಾರ್ಯ ಸಂದರ್ಭಗಳಲ್ಲಿ ಮತ್ತು ಊರವರ ಒತ್ತಾಯದ ಮೇರೆಗೆ ವೈದ್ಯರು ಇಂಥಾ ದಿನಗಳಲ್ಲೇ ಔಷಧವನ್ನು ಕೊಡಬೇಕೆಂಬ ನಿಯಮವನ್ನು ಕೈಬಿಟ್ಟಿರುವ ಉದಾಹರಣೆಗಳಿವೆ. 'ಬೆನ್ನು ಫಣಿಗೆ ಭಾನುವಾರ ಅಥವಾ ಗುರುವಾರ ಮಾತ್ರ ಗಿಡ

ಕೊಡುತ್ತಿದ್ದೆ, ಒಂದು ದಿನ ನಮ್ಮೂರ ಗೌಡ "ನಿನ್ನ ವಾರ ಬರೋದ್ರೊಳಗೆ ರೋಗಿ ಸತ್ತರೆ ಏನ್ ಮಾಡೋದು" ಎಂದು ಎಲ್ಲಾ ದಿನಗಳಲ್ಲಿ ಗಿಡ ಕೊಡುವಂತೆ ಹೇಳಿದರು. ಅಂದಿನಿಂದ ಎಲ್ಲಾ ದಿನಗಳಲ್ಲಿ ಗಿಡ ಕೊಡ್ತೀನಿ' (34) ಎನ್ನುವ ಮಾತಿನಲ್ಲಿ ಒಂದು ಹಳ್ಳಿಯಲ್ಲಿನ ವೈದ್ಯನು ಆ ಹಳ್ಳಿಯ ಜನರ ಆರೋಗ್ಯ ಜೀವನದಲ್ಲಿ ಎಷ್ಟು ಪ್ರಮುಖವಾದ ಪಾತ್ರವನ್ನು ವಹಿಸುತ್ತಾನೆಂಬುದನ್ನು ಕಾಣಬಹುದು.

ಹಳ್ಳಿಯಲ್ಲಿನ ವೈದ್ಯರ ಕಾರ್ಯವ್ಯಾಪ್ತಿ ವಿಸ್ತಾರವಾದುದು. ಅವರು ಹಲವಾರು ಕಾಯಿಲೆಗಳನ್ನು ಗುಣಪಡಿಸುವವರಾಗಿರುತ್ತಾರೆ. ಈಗ ಸದ್ಯಕ್ಕೆ ಈ ಹಿಂದೆ ಪ್ರಸ್ತಾಪಿಸಿರುವ ಆರು ಉದಾಹರಣೆಗಳಿಗೆ ಇವರು ಯಾವ ಬಗೆಯ ಚಿಕಿತ್ಸೆಯನ್ನು ನೀಡುತ್ತಾರೆಂದು ನೋಡೋಣ.

1. **ಹಲ್ಲುನೋವು** : ಜಾಲಿಮರದ ತೊಗಟೆ ಮತ್ತು ಬ್ಯಾಲದ ಮರದ ತೊಗಟೆಗಳನ್ನು ಕುಟ್ಟಿ ಮೆಣಸು, ಬೆಳ್ಳುಳ್ಳಿಗಳೊಂದಿಗೆ ಕುದಿಸಿ ಸ್ವಲ್ಪ ಬಿಸಿ ಇರುವಾಗ ಮುಕ್ಕಳಿಸಿದರೆ ನೋವು ಮತ್ತು ಹುಳುಬಾಧೆ ಹೋಗುತ್ತದೆ (25).

* ಕಿರುನಲ್ಲಿ ಸೋಪ್ಪನ್ನು ಜಗಿದು ತಿಂದರೆ ನೋವು ಇರುವುದಿಲ್ಲ. ಹಲ್ಲುಗಟ್ಟಿಯಾಗುತ್ತವೆ(140).

2. **ಕೆಮ್ಮು** : ಆಡುಮುಟ್ಟದ ಬೇರನ್ನು ಆಕಳದ ಹಾಲಲ್ಲಿ ತೇಯ್ದು, ಅದೇ ಆಕಳದ ಹಸಿಹಾಲಲ್ಲಿ ಬೆಳಿಗ್ಗೆ ಖಾಲಿ ಹೊಟ್ಟೆಗೆ ಕುಡಿಸುವುದು. ಇದರಿಂದ ದೀರ್ಘಕಾಲ ಕೆಮ್ಮು ಸಹ ಗುಣವಾಗುತ್ತದೆ (190).

* ಏಳೆಲೆಯ ಬಳ್ಳಿಬೇರು ತಂದು ಏಳು ಏಲಕ್ಕಿಯೊಂದಿಗೆ ಕುಟ್ಟಿ ಮೇಕೆ ಹಾಲಲ್ಲಿ ಮೂರು ಊಟೆ ಕುಡಿಯುವುದು. ಹೀಗೆ ಮೂರು ಊಟೆ ಕುಡಿಯುವುದರಲ್ಲಿ ಕೆಮ್ಮು ನಿಯಂತ್ರಣಕ್ಕೆ ಬಂದಿರುತ್ತದೆ (25).

* ಮಗುವಿನ ಹೆಸರಿನ ಬಲದ ಮೇಲೆ ಯಂತ್ರ ಬರೆದು ಭಾನುವಾರ ಅಥವಾ ಗುರುವಾರ ಕೊರಳಿಗೆ ಕಟ್ಟುವುದು (184).

* ಹಣ್ಣಾದ ಒಂದು ಹಿಡಿ ಆಡುಸೋಗೆ ಎಲೆ, ಬೆಲ್ಲ, ಜೇಷ್ಠಮಧು, ಹಿಪ್ಲಿ, ಮೋಡಿ, ಶುಂಠಿ ಕರ್ಕಟಕ ಶೃಂಗಿ ಅರ್ಧಹಿಡಿ ಶ್ರೀತುಳಸಿಎಲೆ, ಪಂಚ ಪತ್ರೆ ಇವನ್ನೆಲ್ಲ ಕುಟ್ಟಿ ಕಷಾಯ ಮಾಡಿ ದಿನಕ್ಕೆ

ಮೂರು ಸಾರಿಯಂತೆ ನಾಲ್ಕು ದಿವಸ ಕುಡಿಯುವುದು. ಹೀಗೆ ಮಾಡುವುದರಿಂದ ಕೆಮ್ಮು, ದಮ್ಮು ಎಲ್ಲಾ ವಾಸಿಯಾಗುತ್ತದೆ (89).

3. **ಕಾಲಲ್ಲಿ ಮುಳ್ಳು ಸೇರಿದಾಗ** : ಎಷ್ಟೇ ಬಗೆದರೂ ಮುಳ್ಳು ಹೊರಬರದಿದ್ದಾಗ ಕಿರುನಲ್ಲಿ ಸೊಪ್ಪನ್ನು ಬೆಲ್ಲದೊಂದಿಗೆ ಅರೆದು ಗೋಲಿಗಾತ್ರ ಗುಳಿಗೆ ಮಾಡಿ ಮೂರು ದಿವಸ ಬೆಳಿಗ್ಗೆ ಒಂದೊಂದು ಗುಳಿಗೆಯಂತೆ ನುಂಗಿದರೆ ಕೀವು ತುಂಬಿ ಮುಳ್ಳು ಹೊರಬರುತ್ತದೆ (164).

* ಇಂಗ್ಲಾರದ ಚಕ್ಕೆಯನ್ನು ಎಲೆ ಅಡಿಕೆಯೊಂದಿಗೆ ಜಗಿದು ತಿನ್ನುವುದು (164).

ಮೇಲಿನ ಎರಡೂ ಗಿಡಗಳ ಸೇವನೆಯಿಂದ ದೇಹದ ಯಾವ ಭಾಗದ ಚರ್ಮದಲ್ಲೇ ಮುಳ್ಳು ಒಳಸೇರಿದ್ದರೂ ಹೊರಬರುತ್ತದೆಂದು ವೈದ್ಯರು ಹೇಳುತ್ತಾರೆ.

* ಟೊಳ್ಳು ಮೂಲಂಗಿ ಸೊಪ್ಪು ಮತ್ತು ಸುಣ್ಣವನ್ನು ಅರೆದು ಮುಳ್ಳು ಸೇರಿರುವ ಭಾಗಕ್ಕೆ ಕಟ್ಟಿದರೆ ಎರಡೇ ದಿನಕ್ಕೆ ಕೀವು ಆಗಿ ಟೊಳ್ಳುಬಿದ್ದು ಏನಿದ್ದರೂ ಹೊರಬರುತ್ತದೆ (103).

4. **ಕಣ್ಣಾಗುವಿಕೆಗೆ** : ಮನೆಯಲ್ಲಿ ಮಾಡುವ ವೈದ್ಯೋಪಚಾರದಿಂದ ಕಣ್ಣಿನ ಕೆಂಪು ಹೋಗದಿದ್ದಾಗ ಮತ್ತು ಹೂವು ಕುಳಿತಾಗ ಈ ಕೆಳಗಿನಂತೆ ಮಾಡುತ್ತಾರೆ.

* ಬೆಳಿಗ್ಗೆ ಸೂರ್ಯ ಮೂಡುವ ಮೊದಲು ಹುಂಜದ ಜುಟ್ಟನ್ನು ಕತ್ತರಿಸಿ ಅದರಿಂದ ತೊಟ್ಟಿಕ್ಕುವ ರಕ್ತದ ಎರಡ್ಮೂರು ಹನಿಗಳನ್ನು ಕೆಂಪಾಗಿರುವ ಅಥವಾ ಹೂಕುಂತಿರುವ ಕಣ್ಣಲ್ಲಿ ಬಿಡುವುದು ಇದೇ ರೀತಿ ಮೂರು ದಿವಸ ಮಾಡಿದರೆ ಕೆಂಪು, ಹೂವು ಏನೇ ಇದ್ದರೂ ಹೊರಟು ಹೋಗುತ್ತದೆ (7).

* ಬಿಳಿಹುಲಿ ಸೊಪ್ಪು ಮತ್ತು ಉಪ್ಪನ್ನು ಬಾಯಲ್ಲಿ ಜಗಿದು ಬಟ್ಟೆಯಿಂದ ಸೋಸಿ ಎರಡ್ಮೂರು ಹನಿಗಳನ್ನು ಕಣ್ಣಿಗೆ ಬಿಡುವುದು. ಇದರಿಂದ ಕಣ್ಣಿನ ಕೆಂಪು ಬಹುಬೇಗ ವಾಸಿಯಾಗುತ್ತದೆ (129).

5. **ಹುಳುಕಡ್ಡಿ** : ಅಡವಿಮಜ್ಜಿಗೆ ಗಿಡದ ರಸವನ್ನು ಐದು ದಿವಸ ಹುಳುಕಡ್ಡಿಗೆ ಚೆನ್ನಾಗಿ ತಿಕ್ಕಿದರೆ ಹೋಗಿಬಿಡುತ್ತದೆ (76).

* ತಪಸಿ ಕುಡಿ ಮತ್ತು ನೆಲಪಾಪಸಿ ಮುಳ್ಳಿನ ಕುಡಿ ಇವೆರಡನ್ನು ಅರೆದು ನಿಂಬೆ ರಸದಲ್ಲಿ ಹಚ್ಚುವುದು. ಹಚ್ಚಿದಾಗ ಸ್ವಲ್ಪ ಉರಿ ಇರುತ್ತದೆ, ಆದರೆ ಹುಳುಕಡ್ಡಿ ಬೇಗ ವಾಸಿಯಾಗುತ್ತದೆ (9).

6. ಕುರಗಳಿಗೆ : ರಗತಬಳ್ಳಿಯ ಸೊಪ್ಪನ್ನು ಒಂದು ಬೆಳ್ಳುಳ್ಳಿ ಒಂದು ಮೆಣಸಿನೊಂದಿಗೆ ಅರೆದು ಕುರುವಿಗೆ ಹಚ್ಚಿ ಮೇಲೆ ಬಟ್ಟೆಯಿಂದ ಕಟ್ಟುವುದು. ನಂತರ ಕುರು ಹಾಗೆಯೇ ಒಣಗಿ ಹೋಗುತ್ತದೆ(161).

* ಬುಡ್ ಕಡ್ಲೆಯ ಹಸಿ ಸೊಪ್ಪನ್ನು ಬೆಣ್ಣೆಯಲ್ಲಿ ಕುದಿಸಿ ಹಚ್ಚಬೇಕು. ಹೀಗೆ ಮೂರು ದಿವಸ ಹೆಚ್ಚುವುದರಲ್ಲಿ ಕುರು ಗುಣವಾಗುತ್ತದೆ (2).

ಬಹುಜನ ಪರಿಚಿತ ಮತ್ತು ಮನೆಯಲ್ಲಿನ ವೈದ್ಯೋಪಚಾರಗಳಿಗಿಂತ ಈ ಹಳ್ಳಿಯಲ್ಲಿನ ವೈದ್ಯೋಪಚಾರ ಹೇಗೆ ಭಿನ್ನ ಎಂಬುದನ್ನು ತಿಳಿಯುವುದಕ್ಕಾಗಿ ಈ ವಿಭಾಗವನ್ನು ಮಾಡಿಕೊಳ್ಳಲಾಗಿದೆ. ಹಳ್ಳಿಯ ಹಂತದ ವೈದ್ಯಮಾಹಿತಿಯನ್ನು ಮನೆಯಲ್ಲಿನ ವೈದ್ಯರು ಮತ್ತು ಅನುಭವಿ ವೈದ್ಯರು ತಿಳಿದಿರುವ ಸಾಧ್ಯತೆಯಿದೆ. ಒಂದೇ ಕಾಯಿಲೆಗೆ ಔಷಧಿಯನ್ನು ಕೊಡುವ ಹಳ್ಳಿ ಮಟ್ಟದ ವೈದ್ಯ ಒಂದು ಹಳ್ಳಿಗೆ ಮಾತ್ರವಲ್ಲ ಸುತ್ತಲಿನ ಹಳ್ಳಿಗಳಿಗೂ ಪ್ರಸಿದ್ಧಿಯಾಗಿರಬಹುದು. 'ಯಾವುದೇ ಹುಣ್ಣುಗಳು ಬಂದರೂ ವಾಸಿಮಾಡುತ್ತೇನೆ. ಸುತ್ತಲಿನ ಮತ್ತು ದೂರದ ಹಳ್ಳಿಯವರೂ ಬರುತ್ತಾರೆ' (84). ಇಂಥವರು ಹಳ್ಳಿಯ ಹಂತದ ವೈದ್ಯರಾಗಿರುವುದರ ಜೊತೆಗೆ ಅನುಭವಿ ವೈದ್ಯರೂ ಆಗಿರುತ್ತಾರೆ.

ಈ) ಅನುಭವಿ ವೈದ್ಯರ ವೈದ್ಯೋಪಚಾರಗಳು

ಅನುಭವಿ ವೈದ್ಯರೆಂದರೆ ಯಾವ ರೋಗಕ್ಕೆ ಯಾವ ಗಿಡವನ್ನು ಕೊಡಬೇಕು ಎಂಬುದನ್ನು ತಿಳಿದವರಾಗಿದ್ದು, ಔಷಧೀಯ ತಯಾರಿಕೆ ಮತ್ತು ಬಳಕೆಯ ಪ್ರಮಾಣದಲ್ಲಿ ಖಚಿತತೆಯನ್ನು ಹೊಂದಿರುತ್ತಾರೆ. ಅಂದರೆ ಚಿಕ್ಕವರಿಗೆ ಮತ್ತು ದೊಡ್ಡವರಿಗೆ ಅವರ ದೈಹಿಕ ಸಾಮರ್ಥ್ಯವನ್ನು ಗಮನಿಸಿ ಎಷ್ಟು ಪ್ರಮಾಣದಲ್ಲಿ ಕೊಡಬೇಕೆಂಬುದನ್ನು ನಿರ್ಧರಿಸುವವರಾಗಿರುತ್ತಾರೆ. ಕಾಲ ಮತ್ತು ಸಮಯವನ್ನು ಅರಿತು ಗಿಡಗಳನ್ನು ಸಂಗ್ರಹಿಸುತ್ತಾರೆ. 'ಗುರುವು ಯಾವ ಕಾಲಮಾನದಲ್ಲಿ ಗಿಡ ಕೀಳಬೇಕೆಂದು ಹೇಳಿರುತ್ತಾನೋ ಹಾಗೇ ಸಂಗ್ರಹಿಸುತ್ತೇನೆ. ಟಂಗಟಿ ಕುಡಿಗಳನ್ನು ಸಂಗ್ರಹಿಸಬೇಕಾದರೆ ಗಿಡ ಹೂವು ಕಾಯಿಗಳನ್ನು ಬಿಡುವ ಮೊದಲೇ ಸಂಗ್ರಹಿಸಬೇಕು' (71). ಕೆಲವೊಂದು ಕಾಯಿಲೆಗಳಿಗೆ

ಯಾವ ಮಣ್ಣಿನಲ್ಲಿ ಬೆಳೆದ ಗಿಡವನ್ನು ಬಳಸಿದರೆ ರೋಗ ಬೇಗ ಗುಣವಾಗುತ್ತದೆ ಎನ್ನುವುದನ್ನು ಹಿರಿಯರಿಂದ ಮತ್ತು ಅನುಭವದಿಂದ ಅರಿತಿರುತ್ತಾರೆ. 'ಗೊಬ್ಬರದ ತಿಪ್ಪೆಯ ಮೇಲೆ ಬೆಳೆದ ತೇವಾಂಶವಿರುವ ಕಪ್ಪು ಮಣ್ಣಲ್ಲಿ ಬೆಳೆದ ಗುರುಗದ ಸೊಪ್ಪು ಬಹಳ ಒಳ್ಳೆಯಕೆಲ್ಸ ಮಾಡುತ್ತೆ'(116) ಇದರ ವಿವರಣೆ : ಜಾಂಡೀಸ್‌ಗೆ ಗುರುಗದ ಸೊಪ್ಪು ಸೋಪಿನ ಕಾಳು ಇವೆರಡನ್ನು ಅರೆದು ಗಜ್ಜುಗದ ಗಾತ್ರ ಮೂರು ಗುಳಿಗೆ ಕಟ್ಟಿ ಒಂದೇ ದಿನದಲ್ಲಿ ಮೂರು ನುಂಗಿದರೆ ರೋಗ ಗುಣವಾಗುತ್ತದೆ. ರೋಗದ ಲಕ್ಷಣಗಳನ್ನು ಗುರುತಿಸಿದ ಇವರು ಅದು ಬರಲು ಕಾರಣಗಳೇನು ಮತ್ತು ಅದರ ನಿಯಂತ್ರಣ ಸಾಧ್ಯವಿದೆಯೇ ಅಥವಾ ಇಲ್ಲವೇ ಎಂಬುದನ್ನು ಸಾಧ್ಯವಾದ ಮಟ್ಟಿಗೆ ತಿಳಿಯುವವರಾಗಿರುತ್ತಾರೆ.

ಅನುಭವಿ ವೈದ್ಯರ ಸಂಖ್ಯೆ ತುಂಬ ಕಡಿಮೆ, ಅಂದರೆ ಐದು ಹಳ್ಳಿಗಳಿಗೆ ಒಬ್ಬರು ಇಲ್ಲವೇ ಹತ್ತು ಹಳ್ಳಿಗಳಿಗೊಬ್ಬರಂತೆ ಕಂಡುಬರುತ್ತಾರೆ. ಇವರಲ್ಲಿ ಎಲ್ಲಾ ರೋಗಗಳಿಗೆ ಔಷಧಿಕೊಡುವವರೂ ಇರುತ್ತಾರೆ. ಮತ್ತು ಯಾವುದೋ ಒಂದು ರೋಗವನ್ನು ಗುಣಪಡಿಸುವುದರಲ್ಲಿ ಪರಿಣತಿಯನ್ನು ಹೊಂದಿದವರೂ ಇರುತ್ತಾರೆ. ಉದಾಹರಣೆಗೆ ಕಂಚವರದಯ್ಯನವರು (26) ಎಲ್ಲಾ ಬಗೆಯ ವೈದ್ಯೋಪಚಾರಗಳನ್ನು ಮಾಡುವುದರಲ್ಲಿ ಪ್ರಸಿದ್ಧರಾಗಿದ್ದಾರೆ. ಆದರೆ ಮೂಡಲಬಾಗಿಲ ಶಂಕರಜ್ಜನವರು (164) ಎಲ್ಲಾ ವೈದ್ಯೋಪಚಾರಗಳನ್ನು ಬಲ್ಲವರಲ್ಲ, ಹಳೆಯ ಇಸುಬು, ತಲೆ ಮತ್ತು ಮುಖದಲ್ಲಿ ದುಂಡಾಗಿ ಕೂದಲು ಉದುರಿರುವುದಕ್ಕೆ (ಇಂದ್ರಲುಪ್ತ) ಔಷಧಿ ಕೊಡುವುದರಲ್ಲಿ ಸುತ್ತಲಿನ ಹಳ್ಳಿಗಳಿಗೆಲ್ಲ ಹೆಸರಾಗಿದ್ದಾರೆ.

ಅನುಭವಿ ವೈದ್ಯರಲ್ಲಿ ಕೆಲವರು ಊರಿಂದೂರಿಗೆ ಅಲೆಯುತ್ತ ವೈದ್ಯ ಮಾಡುವುದರಲ್ಲಿಯೇ ಮುಳುಗಿಬಿಡುತ್ತಾರೆ. ರೋಗಿ ಇದ್ದಲ್ಲಿಗೇ ಹೋಗಿ ಔಷಧೋಪಚಾರ ಮಾಡುವುದು ಇವರ ದೊಡ್ಡ ಗುಣವೂ ಹೌದು. ಪರಿಣಾಮವಾಗಿ ಕೆಲವು ವೈದ್ಯರು ತಮ್ಮ ಮನೆಯವರಿಂದ ಬೈಗುಳುಗಳನ್ನು ಎದುರಿಸಬೇಕಾಗಿತ್ತು. 'ನಿನ್ನ ವೈದ್ಯಕ್ಕೊಷ್ಟು ಬೆಂಕಿ ಇಡಾ, ಮನೆಕೆಲ್ಸನೆಲ್ಲ ಮರೆತು ಮಂದಿಕೆಲ್ಸಕ್ಕೆ ನಿಂತ್ ಬಿಟ್ಟೆಯಲ್ಲ' (38) ಇದ್ಯಾವುದಕ್ಕೂ ಕಿವಿಗೊಡದ ವೈದ್ಯರು ದೂರದೂರಿನ ಪ್ರಯಾಣವನ್ನು ಮುಂದುವರಿಸಿಯೇ ಇರುತ್ತಾರೆ. ಕಾಮಾಲೆ, ಮೂಲವ್ಯಾಧಿ, ಅಸ್ತಮಾ ಮತ್ತು ಮಕ್ಕಳ ಫಲ ಈ ಮೊದಲಾದ ಸಮಸ್ಯೆಗಳಿಗೆ ಅನುಭವಿ ವೈದ್ಯರನ್ನು ಹುಡುಕಿಕೊಂಡು ಬರುವ ಪ್ರಸಂಗವೂ ಇದೆ.

ಅನುಭವಿಗಳಲ್ಲಿ ಕೆಲವರು ಗಿಡಮೂಲಿಕೆಗಳನ್ನು ತಿಳಿದಿರುವಂತೆ, ಮಂತ್ರ ಮಾಟಗಳನ್ನೂ ಬಲ್ಲವರಾಗಿರುತ್ತಾರೆ. ಇಂಥವರು ಜನರಲ್ಲಿ ಭೀತಿಹುಟ್ಟಿಸುವ ನಿಗೂಢ ವ್ಯಕ್ತಿಗಳಾಗಿರುವ ಉದಾಹರಣೆಗಳಿವೆ.

ಯಾವುದೇ ಕಾಯಿಲೆ ಬಂದರೂ ಅನುಭವಿ ವೈದ್ಯರ ಹತ್ತಿರ ಅದಕ್ಕೆ ಔಷಧವಿದೆಯೆಂದು ಜನ ನಂಬುತ್ತಾರೆ. ಜನರ ಈ ನಂಬಿಕೆ ಹುಸಿಯಾಗದಿರಲೆಂಬಂತೆ ಯಾವುದೇ ಸಮಸ್ಯೆಗಳಿಗೆ ಕೊಡಲು ಯೋಗ್ಯವಾದ ಬಹೂಪಯೋಗಿ ಮಾತ್ರೆಗಳನ್ನೋ ಅಥವಾ ಚೂರ್ಣವನ್ನೋ ವೈದ್ಯರು ತಯಾರಿಸಿ ಇಟ್ಟುಕೊಂಡಿರುತ್ತಾರೆ. ರೋಗಿಗಳು ಬಂದಾಗ ಔಷಧಿ ತಯಾರಿಕೆಗೆ ಅಗತ್ಯವಾದ ಗಿಡಮೂಲಿಕೆಗಳು ಕೆಲವೊಮ್ಮೆ ಸಿಗದೇ ಹೋಗಬಹುದು, ಇಲ್ಲವೇ ಅವನ್ನೆಲ್ಲ ಸಂಗ್ರಹಿಸಲು ಸಮಯ ಇಲ್ಲದಿದ್ದಾಗ ಈ ಮಾತ್ರೆಗಳು ಅಥವಾ ಚೂರ್ಣ ವೈದ್ಯರ ನೆರವಿಗೆ ಬರುತ್ತವೆ. ಉದಾಹರಣೆಗೆ: 'ಜಾಕಾಯಿ ಜಾಪತ್ರೆ ಏಲಕ್ಕಿ ಲವಂಗ ಮೆಣಸು ಜಾಪಾಳ ಇಂಗಳೀಕ ರಸಕರ್ಪೂರ ಕುಪ್ಪೆಸೊಪ್ಪು ನಿಂಬೆಹುಳಿ ಈ ಮುಂತಾದವುಗಳನ್ನು ಕಲಬತ್ತಿನಲ್ಲಿ ಹದಿನೈದು ದಿನಗಳವರೆಗೆ ಹದವಾಗಿ ಅರೆದು ಹೆಸರುಕಾಳಿನ ಗಾತ್ರ ಮಾತ್ರೆ ಮಾಡಿಟ್ಟುಕೊಂಡು ಯಾವುದೇ ಕಾಯಿಲೆಗಳಿಗೆ ಇವನ್ನು ಕೋಡುತ್ತೇನೆ.' (71) 'ಶುಂಠಿ ಮೆಣಸು ತ್ರಿಫಲಚೂರ್ಣ ತುಂಗೆಗಡ್ಡೆ ಮಾಪಳಬೀಜ ಬಿಳಿತಿಗಡೆ ಮುಂತಾದವನ್ನು ಚೂರ್ಣಮಾಡಿ ಯಾವುದೇ ಸಂದರ್ಭದಲ್ಲಿ ರೋಗಿಗಳು ಬಂದಾಗ ಔಷಧಿ ಇಲ್ಲವೆಂಬದಂತೆ ಈ ಅಬುಧೋಮಯ ಚೂರ್ಣವನ್ನು ಕೊಡುತ್ತೇನೆ' (26).

ಹಳ್ಳಿಯಲ್ಲಿನ ವೈದ್ಯೋಪಚಾರಗಳಿಗೂ ಮತ್ತು ಅನುಭವಿಗಳ ವೈದ್ಯೋಪಚಾರಗಳಿಗೂ ಅಷ್ಟೇನೂ ವ್ಯತ್ಯಾಸವಿರುವುದಿಲ್ಲ. ಅನುಪಾನಕ್ಕೆ ವಿಶೇಷವಾದ ಗಮನಕೊಡುವುದನ್ನು ಎರಡೂ ಕಡೆಗಳಲ್ಲಿ ಕಾಣಬಹುದು. ಎರಡೂ ವರ್ಗದವರು ಔಷಧಿಗೆ ಬಳಸುವ ಸ್ಥಳೀಯ ವಸ್ತುಗಳಿಗೆ ಭಿನ್ನವಾದ ಹೆಸರುಗಳಿಂದ ಕರೆಯುವುದನ್ನು ಕಾಣಬಹುದು ಈ ಹಿಂದಿನ ಆರು ಉದಾಹರಣೆಗಳಿಗೆ ಅನುಭವಿ ವೈದ್ಯರಲ್ಲಿ ಯಾವ ಬಗೆಯ ಚಿಕಿತ್ಸೆ ಇದೆಯೆಂಬುದನ್ನು ಈಗ ನೋಡೋಣ.

1. ಹಲ್ಲುನೋವು : ಜಾಲಿ ಮತ್ತು ಬ್ಯಾಲದ ಮರಗಳಲ್ಲಿರುವ ಗಂಟುಗಳನ್ನು ತಂದು ಮೆಣಸು, ಬೆಳ್ಳುಳ್ಳಿಗಳೊಂದಿಗೆ ಕುಟ್ಟಿ, ನಂತರ ಕುದಿಸಿ ಸ್ವಲ್ಪ ಬಿಸಿಇರುವುದನ್ನು ಮುಕ್ಕಳಿಸಬೇಕು. ನೋವು, ಹುಳು ಏನಿದ್ದರೂ ಗುಣವಾಗಿ ಬಿಡುತ್ತದೆ (76).

ಮೇಲಿನ ಔಷಧೀಯ ವಿವರಣೆಯಲ್ಲಿ ಮರಗಳ ತೊಗಟೆಗೆ ಬದಲಾಗಿ ಗಂಟುಗಳಲ್ಲಿ ಔಷಧೀಯ ಅಂಶ ಅಧಿಕವಾಗಿರಬಹುದೆಂದು ವೈದ್ಯರ ತರ್ಕವಿದ್ದಂತೆ ಕಾಣುತ್ತದೆ.

2. **ಕೆಮ್ಮು** : ವಿಷ್ಣುಕಾಂತಿ, ನಂಜುನಾರಾಯಣ, ಬೇವಿನ ತೊಗಟೆಯ ಕೆಂಪುಭಾಗ ಇವುಗಳೊಂದಿಗೆ ಮೆಣಸು, ಬೆಳ್ಳುಳ್ಳಿ ಸೇರಿಸಿ ಕುಟ್ಟಿ ಚೆನ್ನಾಗಿ ಕುದಿಸಿ ಕಬ್ಬಿಣದಿಂದ ಪುಟ*ಮಾಡಿ ದಿನಕ್ಕೆ ಎರಡು ಬಾರಿಯಂತೆ ಮೂರು ದಿನ ಕುಡಿಯಬೇಕು ನಿದ್ದೆ ಇಲ್ಲದಂತೆ ಕೆಮ್ಮುತ್ತಿದ್ದರೂ ಇದರಿಂದ ಗುಣವಾಗುತ್ತದೆ (127).

* ಮತ್ತೊಬ್ಬ ವೈದ್ಯರು ಹತ್ತುಗಿಡಗಳಿಂದ ತಯಾರಿಸಿದ ಚೂರ್ಣವನ್ನು ಐದು ದಿವಸ ಸೇವಿಸಬೇಕೆಂದು ಹೇಳಿದ್ದಾರೆ (148).

3. **ಕಾಲಲ್ಲಿ ಮುಳ್ಳುಸೇರಿದಾಗ** : ಮುಳ್ಳು ಒಳಸೇರಿ ಹೊರಬರದಿದ್ದಾಗ ಆಣಿಯಾಗಿ ಮಾರ್ಪಾಡಾಗುವ ಸಂಭವವಿರುತ್ತದೆ. ಅದಕ್ಕೆ ಔಷಧಿ ಹೀಗಿದೆ: 'ಜಿಳಿ ಎಕ್ಕೆಯ ಹಾಲು ಅಥವಾ ಉಗುಣಿ ಬಳ್ಳಿಯ ಹಾಲನ್ನು ಆಕಳ ಬೆಣ್ಣೆಯಲ್ಲಿ ಕಲಿಸಿ ಇಪ್ಪತ್ತೊಂದು ದಿವಸ ಸೂಜಿಯಿಂದ ಬಗೆಮಾಡಿದ ಆಣಿಗೆ ಇಡಬೇಕು. ಇದರಿಂದ ಆಣಿ ಸಿಂಬೆ ಸಿಂಬೆಯಾಗಿ ಉದುರಿ ಹೋಗುತ್ತದೆ. ಆ ವೇಳೆ ಕಾಲು ಮೃದು ಇರುತ್ತದೆ. ನೋವು ಬರೋಲ್ಲ, ಒಂದು ವೇಳೆ ಬೆಣ್ಣೆ ಇಲ್ಲದೇ ಹಾಲಷ್ಟೇ ಇಟ್ಟರೂ ನಡೆಯುತ್ತದೆ'(76).

ಮೇಲಿನ ವಿವರಣೆಯನ್ನು ಗಮನಿಸಿದಾಗ, ಸಿಂಬೆಯಾಗಿ ಉದುರುತ್ತದೆ, ಕಾಲು ಮೃದು, ಬೆಣ್ಣೆ ಇಲ್ಲದೇ ಎಂಬಂತಹ ವೈದ್ಯರ ಅನಿಸಿಕೆಗಳು ಅವರ ಅನುಭವದ ವಿಸ್ತಾರವನ್ನು ಹೇಳುತ್ತವೆ.

4. **ಕಣ್ಣಾಗುವಿಕೆಗೆ** : ಕಣ್ಣಾಗುವಿಕೆಯಿಂದ ಅಥವಾ ಬಲವಾದ ಪೆಟ್ಟಿನಿಂದಾಗಿ ಕಣ್ಣಿನ ಭಾಗದಲ್ಲಿ ಹೂವು ಬಂದರೆ ಅಥವಾ ಬೆಳ್ಳಗಾಗಿದ್ದರೆ ಅದಕ್ಕೆ ಕೊಡುವ ಚಿಕಿತ್ಸೆ ಹೀಗಿದೆ.

* 'ಎಡತೆರೆ ಗಿಡದ ಎಲೆಯನ್ನು ಹೊತ್ತು ಹುಟ್ಟುವುದರೊಳಗೆ ಬಾಯಿಯಿಂದ ಕಿತ್ತುಕೊಂಡು ಮತ್ತು ಬಾಯಿಯಿಂದಲೇ ಜಗಿದು ಬಟ್ಟೆಯಲ್ಲಿ ಜಗಿದಿರುವುದನ್ನು ಸೋಸಿ ಕಣ್ಣಲ್ಲಿ ಎರಡ್ಮೂರು ಹನಿ ರಸವನ್ನು ಎರಡು ದಿವಸ ಹಿಂಡಬೇಕು' (7).

ಪಥ್ಯ : ಎಲೆಯನ್ನು ಯಾರು ಜಗಿಯುತ್ತಾರೋ ಅವರು ಪಥ್ಯವಿರಬೇಕು. ಐದು ದಿವಸ

ರಾಗಿಮುದ್ದೆ ಮತ್ತು ಬೇಳೆ ಉದುಕವನ್ನು ಸೇವಿಸಬೇಕು. ಜೊಲ್ಲು ಇಲ್ಲಿ ಔಷಧಿಯಾಗಿ ಕೆಲಸವನ್ನು ಮಾಡುತ್ತದೆ.

ಬಾಯಿಯಿಂದ ಜಗಿಯುವವರು ಇಲ್ಲಿ ಪಥ್ಯವಿರಬೇಕಾಗಿದೆ. ಯಾಕೆಂದರೆ ಮತ್ತೊಮ್ಮೆ ಔಷಧವನ್ನು ಕೊಡಬೇಕಾದ ಸಂದರ್ಭ ಬಂದಾಗ ಎಂಜಲಿನಿಂದ ಏನಾದರೂ ವ್ಯತ್ಯಾಸವಾಗಬಹುದೆಂಬ ಯೋಚನೆ ಇರಬಹುದು. ಸಾಮಾನ್ಯವಾಗಿ ವೈದ್ಯರೇ ಬಾಯಿಂದ ಜಗಿಯುತ್ತಾರೆ. ಇತರರನ್ನು ನಂಬುವುದಕ್ಕಿಂತ ತನ್ನನ್ನು ತಾನು ನಂಬುವುದು ಕ್ಷೇಮವೆಂಬ ಭಾವನೆ ವೈದ್ಯನದಿರಬಹುದು. ಇದು ರೋಗಿಗಳ ಮೇಲಿನ ವೈದ್ಯರ ಕಾಳಜಿಯೂ ಆಗಿರುತ್ತದೆ.

5. **ಹುಳುಕಡ್ಡಿಗೆ** : 'ಚಿತ್ರಮೂಲದ ಬೇರಿನ ತೊಗಟೆ, ಕರೆಕಾಚು, ಲವಂಗ, ಮೆಣಸು, ಬೆಳ್ಳುಳ್ಳಿ ಬೇಳೆ (ಸಿಪ್ಪೆ ತಗಿಯಬೇಕು) ಇವನ್ನೆಲ್ಲ ಸಣ್ಣಗೆ ಅರೆದು ನಿಂಬೆಹುಳಿಯಲ್ಲಿ ಕಲಸಿ ಹಚ್ಚುವುದು.

ಎಚ್ಚರಿಕೆ : ಉರಿ ಜಾಸ್ತಿ ಇರುತ್ತದೆ, ಒಂದೇ ಸಾರಿ ಹಚ್ಚಬೇಕು ಪುನಃ ಹಚ್ಚುವಂತಿಲ್ಲ. ಹಚ್ಚಿದ ಭಾಗ ಸುಟ್ಟಂತೆ ಆಗಿ ಎಕ್ಕಳೆ ಕಟ್ಟಿರುತ್ತದೆ. ಎಕ್ಕಳೆಗಳು ತಾವಾಗಿಯೇ ಉದುರಿದ ಮೇಲೆ ಹಸುವಿನ ಹಳೇ ತುಪ್ಪವನ್ನು ಹಚ್ಚಿ ಬಿಸಿ ರಾಗಿ ಮುದ್ದೆಯಿಂದ ಕಾವುಕೊಡಬೇಕು. ಸಕ್ಕರೆ ಕಾಯಿಲೆ ಇರುವವರಿಗೆ ಈ ಔಷಧಿಯನ್ನು ಕೊಡುವಂತಿಲ್ಲ' (164).

ಚಿಕಿತ್ಸೆಯ ವಿವರಣೆಯ ಜೊತೆಗೆ ವೈದ್ಯರ ಸೂಚನೆಗಳು ಮತ್ತು ಎಚ್ಚರಿಕೆಗಳು ಗಮನಾರ್ಹವಾಗಿವೆ. ಅವುಗಳು ಚಿಕಿತ್ಸೆಯ ಬಗ್ಗೆ ವೈದ್ಯರು ತಿಳಿದಿರುವ ಪೂರ್ವಾಪರಗಳನ್ನು ಪರಿಚಯಿಸುತ್ತವೆ. ಹುಳುಕಡ್ಡಿಗೆ ಮೇಲಿನ ಔಷಧಿಯನ್ನು ಮಾಡಿದವನು ಉರಿಯನ್ನು ಸಹಿಸಲು ಸಾಧ್ಯವಾಗದಿದ್ದರೆ ವ್ಯಾಸಲಿನ್ ಹಚ್ಚಿಕೊಂಡುರೆ ಉರಿಶಮನ ಮಾಡಿಕೊಳ್ಳಬಹುದು. ಆದರೆ ಹುಳುಕಡ್ಡಿ ಗುಣವಾಗುವುದಿಲ್ಲ ಎಂಬ ಅನುಭವದ ಮಾತನ್ನು ಹೇಳುವುದು ಮರೆಯುವುದಿಲ್ಲ.

6. **ಕುರಗಳಿಗೆ** :

'ನೀಲಿ ಮರದ ಹಾಲನ್ನು ಗಡ್ಡೆಗೆ ಹಚ್ಚಿದರೆ ಕರಗಿ ಬಿಡುತ್ತದೆ, ಈ ಗಿಡ ಬಲ. ಕೋಣನ ಬಳ್ಳಿಯನ್ನು ಅರೆದು ಗಡ್ಡೆಗೆ ಹಚ್ಚುವುದು, ಈ ಗಿಡ ಎಡ' (93). ಗಿಡಗಳಲ್ಲಿ ಎಡ ಮತ್ತು ಬಲ

ಎಂದು ಗುರುತಿಸುವಲ್ಲಿ ಅವುಗಳ ಗುಣವನ್ನು ಅರಿತಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಒಂದೇ ರೋಗಕ್ಕೆ ವಿವಿಧ ಗಿಡಮೂಲಿಕೆಗಳನ್ನು ಬಳಸುವುದು ಮತ್ತು ಯಾವ ಗಿಡದಿಂದ ರೋಗ ಬೇಗ ಗುಣಹೊಂದುತ್ತದೆ ಎನ್ನುವುದನ್ನು ವೈದ್ಯರು ತಿಳಿದಿರುತ್ತಾರೆ. ರೋಗದ ಇತಿಮಿತಿಯನ್ನು ನೋಡಿಕೊಂಡು ಗಿಡ ನಿರ್ಧರಿಸುವವರೂ ಇದ್ದಾರೆ.

ಬಹುಜನ ಪರಿಚಿತದಲ್ಲಿ ಮನೆಯಲ್ಲಿ, ಹಳ್ಳಿಯಲ್ಲಿ ಮತ್ತು ಅನುಭವಿಗಳಲ್ಲಿ ಪ್ರಯೋಗವಾಗುವ ಹಾಗೂ ಪ್ರಚಲಿತದಲ್ಲಿರುವ ಕೆಲವು ವೈದ್ಯೋಪಚಾರಗಳನ್ನು ಉದಾಹರಣೆಗಳ ಮೂಲಕ ಇದುವರೆಗೂ ನೋಡಲಾಯಿತು. ಇದರಿಂದ ವಿವಿಧ ಹಂತದ ವೈದ್ಯರನ್ನೂ ಹಾಗೂ ಅವರ ಔಷಧೋಪಚಾರಗಳನ್ನೂ ಸಂಕ್ಷಿಪ್ತವಾಗಿ ಪರಿಚಯಿಸಿಕೊಳ್ಳಲಾಯಿತು. ಇದು ಜನಪದ ವೈದ್ಯದ ವಿಭಜನೆ ಅಥವಾ ವಿಸ್ತರಣೆಯಾಗಿರದೆ ಅದರ ವಿವಿಧ ರೂಪಗಳನ್ನು ಅರ್ಥೈಸಲು ಮಾಡಿದ ಪ್ರಯತ್ನವಾಗಿದೆ. ಒಟ್ಟಾರೆ ನೋಡಿದರೆ ಎಲ್ಲಾ ಹಂತಗಳಲ್ಲಿ ಜನಪದ ವೈದ್ಯದ ಸ್ವರೂಪ ಒಂದೇ ಆಗಿದೆ. ಆದರೆ ಔಷಧೀಯ ತಯಾರಿಕೆ ಮತ್ತು ಔಷಧಿಗೆ ಬಳಸುವ ವಸ್ತುಗಳಲ್ಲಿ ವೈವಿಧ್ಯತೆಯಿದೆ, ಹಾಗೆಯೇ ಜನಸಾಮಾನ್ಯರು ಮತ್ತು ಅನುಭವಿ ವೈದ್ಯರುಗಳ ನಡುವೆ ಸಾಕಷ್ಟು ವ್ಯತ್ಯಾಸವಿದೆ. ಸಾಮೂಹಿಕ ಮತ್ತು ಮನೆಯಲ್ಲಿ ಹಲ್ಲುನೋವಿಗೆ ಮಾಡುವ ಚಿಕಿತ್ಸೆ ಸರಳವಾಗಿದೆ. ಅಲ್ಲಿ ಬಳಸುವ ವಸ್ತುಗಳು ಅನೇಕರಿಗೆ ಚಿರಪರಿಚಿತವಾಗಿರುತ್ತವೆ. ಇದೇ ಸಮಸ್ಯೆಗೆ ಹಳ್ಳಿಯಲ್ಲಿನ ವೈದ್ಯರು ಮತ್ತು ಅನುಭವಿ ವೈದ್ಯರು ಮಾಡುವ ಚಿಕಿತ್ಸೆ ಒಂದಕ್ಕಿಂತ ಹೆಚ್ಚಿನ ಗಿಡಮೂಲಿಕೆಗಳನ್ನು ಅವಲಂಬಿಸಿರುತ್ತದೆ. ಔಷಧೀಯ ತಯಾರಿಕೆಯಲ್ಲಿ ಒಂದು ಶಿಸ್ತುಕ್ರಮವಿರುತ್ತದೆ. ಸೇವನೆಯ ಅವಧಿ ಮತ್ತು ಸಮಯದಲ್ಲಿ ನಿರ್ದಿಷ್ಟತೆಯನ್ನು ಕಾಣಬಹುದು. ಹಳ್ಳಿ ಮತ್ತು ಅನುಭವಿ ವೈದ್ಯರಲ್ಲಿ ಮೇಕೆಹಾಲು, ಹಸುವಿನ ಹಾಲು, ಎಮ್ಮೆ ಮೊಸರು, ಕತ್ತೆಯಹಾಲು, ಎಳನೀರು ಮತ್ತು ಜೇನು ಈ ಮೊದಲಾದ ಅನುಪಾನಗಳಿರುತ್ತವೆ. ಹಾಗೆಯೇ ಪಥ್ಯಾಪಥ್ಯಗಳಿಗೂ ಆದ್ಯತೆಯನ್ನು ನೀಡಲಾಗುತ್ತದೆ. ಈ ಬಗೆಯ ವೈಶಿಷ್ಟ್ಯವನ್ನು ಬಹುಜನ ಪರಿಚಿತ ಮತ್ತು ಮನೆಯಲ್ಲಿನ ವೈದ್ಯೋಪಚಾರಗಳಲ್ಲಿ ಗುರುತಿಸುವುದು ಕಷ್ಟವಾಗುತ್ತದೆ. ಒಂದು ವೇಳೆ ಇರಲೂಬಹುದು ಆ ಸಾಧ್ಯತೆಯನ್ನೂ ಅಲ್ಲಗಳೆಯುವಂತಿಲ್ಲ.

ಬಹುಜನ ಪರಿಚಿತ ವೈದ್ಯೋಪಚಾರದಲ್ಲಿರುವ ಔಷಧೀಯ ಪ್ರಯೋಗ ಅನುಭವಿ ವೈದ್ಯನಲ್ಲೂ

ಇರಬಹುದು. ಹಾಗೆಯೇ ಮನೆಯಲ್ಲಿನ ವೈದ್ಯರ ಔಷಧೀಯ ಪ್ರಯೋಗ ಹಳ್ಳಿಯಲ್ಲಿನ ವೈದ್ಯರಲ್ಲೂ ಇರಬಹುದು. ಒಂದು ಬಗೆಯ ಸರಪಳಿಯನ್ನು ಇಲ್ಲಿ ಕಾಣಬಹುದು, ಅಂದರೆ ಎಲ್ಲಾ ವರ್ಗಗಳಲ್ಲೂ ಕೊಡುಕೊಳ್ಳುವ ಪ್ರಕ್ರಿಯೆಯು ನಿರಂತರವಾಗಿರುತ್ತದೆ. ಆದರೆ ವ್ಯಕ್ತಿಯ ಪರಿಶ್ರಮದಿಂದ ಅದು ಹೆಚ್ಚು ಪರಿಣಾಮಕಾರಿಯಾಗುತ್ತದೆ. ಬಹುಜನ ಮನೆ, ಹಳ್ಳಿ ಮತ್ತು ಅನುಭವ ಎಂಬ ವಿಭಾಗ ಕ್ರಮಗಳು ವಿವಿಧ ಜನರಲ್ಲಿ ವೈದ್ಯಪ್ರಯೋಗದ ಪ್ರಮಾಣವನ್ನು ಅರಿಯುವುದಕ್ಕಾಗಿ ಮಾಡಿಕೊಂಡಿದ್ದಾಗಿದೆ.

ಬಹುಜನ ಪರಿಚಿತ ಮತ್ತು ಮನೆಯಲ್ಲಿನ ವೈದ್ಯಮಾಹಿತಿಯನ್ನು ಹೇಗೆ ಗುರುತಿಸಲಾಗಿದೆ ಎಂಬ ಪ್ರಶ್ನೆ ಉದ್ಭವಿಸಬಹುದು. ಅದಕ್ಕೆ ಉತ್ತರವಾಗಿ ಹಳ್ಳಿಯ ಜನರೊಡನೆ ಮತ್ತು ಅಲ್ಲಿಯ ವಿವಿಧ ಸಮುದಾಯದವರೊಂದಿಗೆ ಬೆರೆತು, ಅವರೊಂದಿಗೆ ವೈದ್ಯವಿಚಾರದ ಪ್ರಸ್ತಾಪವನ್ನು ಮಾಡಿದಾಗ ಅವರಲ್ಲಿರುವ ವೈದ್ಯಮಾಹಿತಿಯನ್ನು ಪಡೆಯಲು ಸಾಧ್ಯವಿದೆ. ಹೀಗೆ ಸಂಗ್ರಹಿಸಿಕೊಂಡ ಎಲ್ಲಾ ಮಾಹಿತಿಯನ್ನೂ ಇಲ್ಲಿನ ವಿಶ್ಲೇಷಣೆಗೆ ಬಳಸಿಕೊಳ್ಳಲಾಗಿಲ್ಲ. ಕೆಲವು ಸರಳ ಉದಾಹರಣೆಗಳನ್ನು ಪ್ರಸ್ತಾಪಿಸುವುದರ ಮೂಲಕ ವಿವಿಧ ವರ್ಗದ ಜನರಲ್ಲಿ ಜನಪದ ವೈದ್ಯದ ಇರುವಿಕೆಯನ್ನು ತಿಳಿಯುವುದಕ್ಕಾಗಿ ಮಾಡಿಕೊಂಡ ವಿಭಾಗಕ್ರಮ ಇದಾಗಿದೆ.

* * *

ಸಮಾರೋಪ

ಅ) ಈ ಅಧ್ಯಯನದ ಫಲಶ್ರುತಿ

ಅಧ್ಯಯನಕ್ಕೆ ವಿಷಯವನ್ನು ಆಯ್ಕೆ ಮಾಡಿಕೊಂಡ ನಂತರ ವ್ಯಾಪಕವಾದ ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಯಿತು. ಇದರಿಂದ ಉದ್ದೇಶಿತ ವಿಷಯದ ಸ್ವರೂಪ ಏನೆಂಬುದನ್ನು ತಿಳಿಯಲು ಸಾಧ್ಯವಾಯಿತು, ಹಾಗೆಯೇ ಅಧ್ಯಯನದಲ್ಲಿ ಕೆಲವು ಮುಖ್ಯ ಒಳನೋಟಗಳನ್ನು ಗ್ರಹಿಸಲು ಕಾರಣವಾಯಿತು. ಜನಪದ ವೈದ್ಯವು ಪರಂಪರಾಗತವಾಗಿ ಜನರ ಆರೋಗ್ಯದಲ್ಲಿ ವಹಿಸಿರುವ ಪಾತ್ರವನ್ನು ಅರ್ಥೈಸಿಕೊಳ್ಳಲಾಯಿತು. ಜನರಿಂದ ಉದಯಿಸಿರುವ ಮತ್ತು ಅವರಿಂದಲೆ ವಿಕಾಸ ಹೊಂದುತ್ತಾ ಬಂದಿರುವ ಈ ವೈದ್ಯ ಹೊಟ್ಟೆಪಾಡಿಗಾಗಿ ಮಾಡುವ ಕಸುಬಾಗಿ ಬೆಳೆಯಲ್ಲಿಲ್ಲ. ಜನರ ಆರೋಗ್ಯ ಸುಖವನ್ನು ಬಯಸುವ, ಅವರ ಕಷ್ಟಗಳನ್ನು ಪರಿಹರಿಸುವ ಪ್ರಜ್ಞೆಯಾಗಿ ಬೆಳೆಯಿತು. ಇಂಥ ಪರಿಕಲ್ಪನೆಯ ಹಿನ್ನೆಲೆಯುಳ್ಳ ವೈದ್ಯ ಪದ್ಧತಿಯನ್ನು ಮುಂದಿನ ವೈಜ್ಞಾನಿಕ ಅಧ್ಯಯನಗಳಿಗೆ ನೆರವಾಗುವ ನಿಟ್ಟಿನಲ್ಲಿ ಇದರ ಸಂಗ್ರಹ ಕಾರ್ಯವನ್ನು ಈ ಸಂಶೋಧನೆಯಲ್ಲಿ ಮಾಡಲಾಗಿದೆ.

ಜಾನಪದ ವೈಜ್ಞಾನಿಕ ಬಗೆಗಳನ್ನು ನಾವಿಂದು ಆಧುನಿಕ ವಿಜ್ಞಾನದ ಮೂಸೆಯಲ್ಲಿ ಪರೀಕ್ಷಿಸಬೇಕಾಗಿದೆ. ಇದು ಮೂಢನಂಬಿಕೆಗಳಿಂದ ಅವುಗಳನ್ನು ಪ್ರತ್ಯೇಕಿಸಿ ನೋಡಲು ಅನುವುಮಾಡಿಕೊಡುತ್ತದೆ. ಇದರಿಂದಾಗಿ ಜನಪದ ವೈದ್ಯವನ್ನು ಅಧ್ಯಯನ ಮಾಡುವಾಗ ಅದರ ಮಾಹಿತಿ ಸಂಗ್ರಹವಷ್ಟೇ ಮುಖ್ಯವಲ್ಲ ವೈದ್ಯಕ್ಕೆ ಬಳಸುವ ಗಿಡಮೂಲಿಕೆಗಳನ್ನು ಆಯಾ ಪ್ರದೇಶದ ವೈದ್ಯರಿಂದಲೆ ಗುರುತಿಸಿ ಚಿತ್ರಸಹಿತ ದಾಖಲಿಸುವುದು ವೈಜ್ಞಾನಿಕ ಅಧ್ಯಯನಕ್ಕೆ ಪೂರಕವಾಗುತ್ತದೆ. ಒಂದು ವೇಳೆ ಕೇವಲ ಆ ಗಿಡ ಈ ಗಿಡ ಎಂದು ಬರೆದಿಡುವ ಮಾಹಿತಿಯಿಂದ ಹೆಚ್ಚಿನ ಅನುಕೂಲವನ್ನು ನಿರೀಕ್ಷಿಸುವಂತಿಲ್ಲ.

ಜನಪದ ವೈದ್ಯೋಪಚಾರವು ಪ್ರಧಾನವಾಗಿ ಗಿಡಮೂಲಿಕೆಗಳನ್ನು ಅವಲಂಬಿಸಿರುವಂತಹುದು. ಗಿಡದಬೇರು ಅಥವಾ ಎಲೆಯನ್ನು ಹಸಿಯಾಗಿ ಇಲ್ಲವೇ ಒಣಗಿಸಿ ನೇರವಾಗಿ ಸೇವಿಸುವುದು ಈ ವೈದ್ಯದ ವಿಶೇಷತೆಯಾಗಿದೆ. ಇದರಿಂದಾಗಿ ಈ ಕ್ಷೇತ್ರದಲ್ಲಿ ಅಸಂಖ್ಯ ಗಿಡಮೂಲಿಕೆಗಳು ಉಪಯೋಗಿಸಲ್ಪಡುತ್ತವೆ. ಪ್ರಸ್ತುತ ಅಧ್ಯಯನದಲ್ಲಿ ಒಂದು ಜಿಲ್ಲೆಯ ಔಷಧೋಪಚಾರದಲ್ಲಿ ಸುಮಾರು 400ಕ್ಕೂ ಅಧಿಕ ಗಿಡಮೂಲಿಕೆಗಳ ಬಳಕೆಯಾಗುವುದು ತಿಳಿದುಬಂದಿದೆ. ಇವುಗಳಲ್ಲಿ ಪ್ರಾದೇಶಿಕವಾಗಿ

ವಿಶಿಷ್ಟವೆನಿಸಿದ ನಲವತ್ತು ಔಷಧೀಯ ಸಸ್ಯಗಳನ್ನು ವೈದ್ಯರ ನೆರವಿನಿಂದ ಗುರುತಿಸಿ ಇಲ್ಲಿ ಪರಿಚಯಿಸಿರುವುದು ಬಹುಮಹತ್ವದ ಕಾರ್ಯವಾಗಿದೆ.

ಜನಪದ ವೈದ್ಯ ಅನುಭವದ ಮೂಲಕ ಗಳಿಸಿಕೊಳ್ಳುವಂತಹುದು. ಇಂಥ ಅನುಭವದಿಂದ ರೋಗವನ್ನು ಗುರುತಿಸಿ ಅದಕ್ಕೆ ಗಿಡವನ್ನು ಆಯ್ಕೆಮಾಡಿ ಶಿಸ್ತುಬದ್ಧವಾಗಿ ಅದನ್ನು ಸಂಗ್ರಹಿಸಿ, ಎಚ್ಚರಿಕೆಯಿಂದ ಔಷಧಿ ತಯಾರಿಸಿ, ಸೂಕ್ತ ಅನುಪಾನದೊಂದಿಗೆ ಸೇವಿಸಲು ಕೊಡುವುದು, ಪಥ್ಯಾಪಥ್ಯವನ್ನು ಸೂಚಿಸಿ, ಅಡ್ಡಪರಿಣಾಮವುಂಟಾದರೆ ನಿಯಂತ್ರಿಸುವುದನ್ನು ತಿಳಿದಿದ್ದು, ರೋಗಿಯ ಉಸ್ತುವಾರಿಯನ್ನು ಕೈಗೊಳ್ಳುವುದು. ಇದೆಲ್ಲವೂ ಜನಪದ ವೈದ್ಯದ ಪ್ರಾಥಮಿಕ ಸೂತ್ರಗಳು. ಇವುಗಳನ್ನು ಅರಿಯದೆ ವೈದ್ಯ ಮಾಡುವವನು ನಿಜವಾದ ವೈದ್ಯನಾಗಲಾರ. ಮನೆಯಲ್ಲಿರುವ ಅಜ್ಜಿ, ಅಮ್ಮಂದಿರು ತಮ್ಮ ಮಿತಿಯಲ್ಲಿಯೆ ವೈದ್ಯಮಾಡುವಲ್ಲಿ ಶಿಸ್ತುಕ್ರಮವನ್ನು ಅಳವಡಿಸಿ ಕೊಂಡಿರುತ್ತಾರೆ. ತಮ್ಮಿಂದಾಗದ ಕಾರ್ಯಕ್ಕೆ ಅವರೆಂದೂ ಕೈಹಾಕುವುದಿಲ್ಲ. ಆದರೆ ಪುರುಷರ ವೈದ್ಯಸೇವೆಯನ್ನು ಗುರುತಿಸಿದಷ್ಟು ಪ್ರಮಾಣದಲ್ಲಿ ವೈದ್ಯೆಯರ ಸೇವೆಯನ್ನು ಗುರುತಿಸುವಲ್ಲಿ ಸಮಾಜ ವಿಫಲವಾಗಿದೆ. ಇದಕ್ಕೆ ಲಿಂಗತಾರತಮ್ಯ ಧೋರಣೆಯೂ ಕಾರಣವಾಗಿರಬಹುದು.

ಜನಪದ ವೈದ್ಯವೆಂದರೆ ಮೂಲಿಕಾವೈದ್ಯ ಮಾತ್ರವಲ್ಲ ಅದರಲ್ಲಿ ಮಾಟ-ಮಂತ್ರ, ಯಂತ್ರ-ತಂತ್ರಗಳ ವಿಚಾರವೂ ಇದೆ. ಇಂಥವುಗಳನ್ನು ಪ್ರಯೋಗಕ್ಕೆ ಒಳಪಡಿಸುವುದು ಕಷ್ಟ. ಹಾಗೆಂದು ಸುಮ್ಮನೆ ಇರಲೂ ಆಗುವುದಿಲ್ಲ. ಏಕೆಂದರೆ ವಂಚಕರು ಈ ವಿದ್ಯೆಗಳ ವೇಷದಲ್ಲಿ ಮುಗ್ಧಜನರನ್ನು ಶೋಷಿಸಲು ತುದಿಗಾಲಲ್ಲಿ ನಿಂತಿರುತ್ತಾರೆ. ಇಂಥವರನ್ನು ನಿಯಂತ್ರಸಬೇಕಾದರೆ, ಮೊದಲು ಅವರನ್ನು ನಿರ್ಲಕ್ಷಿಸುವುದನ್ನು ಕಲಿಯಬೇಕು. ಇದಕ್ಕಾಗಿ ನಿಜವಾದ ವೈದ್ಯರನ್ನು ಕುರಿತು ಅಧ್ಯಯನವನ್ನು ಮಾಡಬೇಕು. ವಿಸ್ತೃತ ಕ್ಷೇತ್ರಕಾರ್ಯವನ್ನು ಕೈಗೊಳ್ಳುವುದರಿಂದ ಇದನ್ನು ಸಾಧಿಸಬಹುದು. ಪ್ರಸ್ತುತ ಅಧ್ಯಯನದಲ್ಲಿ ಕ್ಷೇತ್ರಕಾರ್ಯದ ವೇಳೆ ವೈದ್ಯರನ್ನು ಹಾಗೂ ರೋಗಿಗಳನ್ನು ಸಂದರ್ಶಿಸಲಾಯಿತು. ಇದರಿಂದ ವೈದ್ಯೋಪಚಾರದ ಗುಣಮಟ್ಟವನ್ನು ತಿಳಿಯಲು ಸಾಧ್ಯವಾಯಿತು.

ಕ್ಷೇತ್ರಕಾರ್ಯದಲ್ಲಿ ಗಮನಿಸಿದ ಹಾಗೆ ಹೆಚ್ಚಾಗಿ ವೈದ್ಯರು ಹಸಿ ಗಿಡಮೂಲಿಕೆಗಳನ್ನೇ ಔಷಧಿಗೆ ಬಳಸಲು ಇಷ್ಟಪಡುತ್ತಾರೆ. ಇದರಿಂದ ಕಾಯಿಲೆ ಬೇಗ ನಿಯಂತ್ರಣಕ್ಕೆ ಬರುತ್ತದೆ ಎಂದು

ಹೇಳುತ್ತಾರೆ. ಕೆಲವು ಸಸ್ಯಗಳನ್ನು ಮತ್ತು ಲವಣಗಳಾದ ಗೌರಿಪಾಷಾಣ, ಪಾದರಸ, ಮೈಲುತುತ್ತ, ಮುದಾರ್‌ಸಿಂಗ್-ಈ ಮುಂತಾದವುಗಳನ್ನು ಅನುಭವ ಇಲ್ಲದವರು ನೇರವಾಗಿ ಔಷಧಿಗೆ ಬಳಸುವುದೂ ಉಂಟು, ಕೂಡಲೆ ಇವುಗಳ ಅಡ್ಡಪರಿಣಾಮ ಕಾಣದಿದ್ದರೂ ಯಾವುದೋ ಒಂದು ರೂಪದಲ್ಲಿ ಅದು ಪ್ರಕಟಗೊಳ್ಳುವ ಸಾಧ್ಯತೆ ಇರುತ್ತದೆ.

ಈ ವೈದ್ಯದಲ್ಲಿ ಹೊಸ ಪ್ರಯೋಗಗಳೂ ನಿರಂತರವಾಗಿರುತ್ತವೆ. ಇದನ್ನು ಕುರಿತು ಮಲ್ಲಾಡಿಹಳ್ಳಿ ಆಯುರ್ವೇದ ಕಾಲೇಜಿನ ಪ್ರಾಂಶುಪಾಲರಾದ ಡಾ. ರಾಜಶೇಖರ್‌ರವರು ಹೀಗೆ ಹೇಳುತ್ತಾರೆ, 'ಅಲೋಪತಿ ಅಥವಾ ಆಯುರ್ವೇದ ವೈದ್ಯರು ಬುಕ್ಸ್‌ನಲ್ಲಿ ಎಷ್ಟನ್ನು ಹೇಳಲಾಗಿದೆಯೋ ಅಷ್ಟನ್ನು ಮಾತ್ರ ಮಾಡುತ್ತಾರೆ. ಮುಂದಕ್ಕೆ ಯೋಚಿಸುವುದು ಕಡಿಮೆ. ಆದರೆ ನಾಟಿ ವೈದ್ಯರು ಹಾಗಲ್ಲ, ಒಂದು ವಿಧಾನದ ಚಿಕಿತ್ಸೆಗೆ ರೋಗ ಗುಣವಾಗದಿದ್ದರೆ ಮುಂದುವರಿದು ಹೊಸ ಪ್ರಯೋಗವನ್ನು ಮಾಡುತ್ತಾರೆ'. ಇದು ಜನಪದರ ಕ್ರಿಯಾಶೀಲತೆ ಎಂದು ಯೋಚಿಸಬಹುದಾದರೂ ಫಲಿತಾಂಶ ಮಾತ್ರ ಹಿತವಾಗಿರಲೂಬಹುದು. ಇಲ್ಲವೇ ಅಹಿತವಾಗಿರಲೂಬಹುದು. ಆದಿಯಿಂದಲೂ ಈ ಬಗೆಯ ಪ್ರಯೋಗಗಳು ನಡೆದುಕೊಂಡುಬಂದಿವೆ.

ಜಾಗತೀಕರಣದ ಪ್ರಭಾವ ಜನಪದ ವೈದ್ಯದ ಮೇಲೂ ಆಗಿದೆ. ಒಂದನೆಯದು, ಕೆಲವು ಮುಖ್ಯ ಕಾಯಿಲೆಗಳಿಗೆ ಮಾಡುವ ಚಿಕಿತ್ಸೆ ಕಣ್ಮರೆಯಾಗುತ್ತಿರುವುದು. ಉದಾಹರಣೆಗೆ ಹಕ್ಕಿಗಡುಕನ ರೋಗ, ಯಳವು, ಹುಚ್ಚುನಾಯಿಕಡಿತಕ್ಕೆ, ಹಾವಿನಕಡಿತದಿಂದ ಉಂಟಾದ ನಂಜುಗಾಯ, ವಿವಿಧ ಹುಣ್ಣುಗಳು, ಗುಹ್ಯರೋಗಗಳು, ಕಣ್ಣಿನಪೊರೆ, ಕಿವುಡು, ವೃಷಣಗಳಬಾವು, ಮಂಡಿನೋವು, ವಾಯಿದೆಜ್ವರ, ಬಾಣಂತಿಸನ್ನಿ ಹುಚ್ಚು, ಫಿಟ್ಸ್, ತೊನ್ನು, ಮೂಳೆಮುರಿತ ಈ ಮುಂತಾದ ಸಮಸ್ಯೆಗಳಿಗೆ ಯಶಸ್ವಿಯಾದ ಚಿಕಿತ್ಸೆಗಳನ್ನು ನೀಡುವ ವೈದ್ಯರಿದ್ದರು. ಆದರೆ ಕಾಲದ ಮಹಿಮೆ ಎಂಬಂತೆ ಆ ತರದ ವೈದ್ಯರನ್ನು ಮತ್ತು ಅವರು ನೀಡುತ್ತಿದ್ದ ಚಿಕಿತ್ಸೆಗಳನ್ನು ಇಂದು ಕಾಣಲಾಗುತ್ತಿಲ್ಲ. ಇದಕ್ಕೆ ಜಾಗತೀಕರಣವೊಂದೇ ಕಾರಣವಲ್ಲ ಬದಲಾದ ಸಾಮಾಜಿಕ ಪರಿಸ್ಥಿತಿಯೂ ಕಾರಣವಾಗುತ್ತದೆ.

ಎರಡನೆಯ ಪರಿಣಾಮವೆಂದರೆ ಜನಪದ ವೈದ್ಯವನ್ನು ಜಾಗತಿಕ ಮಟ್ಟಕ್ಕೆ ಕೊಂಡೋಯ್ದಿರುವುದು. ಹೀಗೆ ಮಾಡಿದವರು ಬಹುರಾಷ್ಟ್ರೀಯ ಅಥವಾ ರಾಷ್ಟ್ರೀಯ ಔಷಧೀಯ ಕಂಪನಿಗಳು. ಉದಾಹರಣೆಗೆ

ಫಿಟ್ಸ್ ಲಕ್ವಾಗಳಂತಹ ರೋಗಗಳಿಗೆ ಒಳ್ಳೆಯ ಔಷಧಿಯನ್ನು ಕೊಟ್ಟು ಗುಣಪಡಿಸುವ ಶಾಸ್ತ್ರಿಓಬಣ್ಣ (20)ನನ್ನು ಮುಂಬಯಿ ಮೂಲದ ಔಷಧಿ ಕಂಪನಿಯೊಂದು ಕಾರಿನಲ್ಲಿ ಕರೆದೊಯ್ದು ಹಣದ ಆಮೀಷವನ್ನು ತೋರಿಸಿ ಮಾಹಿತಿ ಪಡೆಯುವ ಹುನ್ನಾರ ನಡೆಸಿದೆ. ಇದೇ ರೀತಿ ಬಳ್ಳಾರಿ ಜಿಲ್ಲೆಯ ಇಟಗಿ ಭಾಗದ ಒಬ್ಬ ವೈದ್ಯನಿಗೆ ತಿಂಗಳಿಗೆ ನಾಲ್ಕು ಸಾವಿರ ಸಂಬಳವನ್ನು ಕೊಡುತ್ತಿರುವ ಕಂಪನಿ ಆತನಿಂದ ಮಾಹಿತಿ ಪಡೆದಿದೆ. ಸಾಮೂಹಿಕ [ಇಟಗಿ ಕ್ಷೇತ್ರದ ಮಾಜಿ ಕಾಂಗ್ರೆಸ್ ಶಾಸಕರಾದ ಶ್ರೀ ಅಂದಾನಪ್ಪನವರು ಇಟಗಿ ಭಾಗದ ವೈದ್ಯನಿಂದ ಔಷಧಿ ಕಂಪನಿಯೊಂದು ಪಡೆದು ಕೊಂಡಿರುವ ಮಾಹಿತಿಯನ್ನು ಘಟನೆಯನ್ನು ತಿಳಿಸಿರುತ್ತಾರೆ.] ಜ್ಞಾನ ಹೀಗೆ ಕೆಲವೇ ವ್ಯಕ್ತಿಗಳ ಸ್ವತ್ತಾಗುತ್ತಿರುವುದು ಅತ್ಯಂತ ವಿಷಾದನೀಯ.

ಕಣ್ಣಿನಲ್ಲಿ ಕಸ ತಗೆಯುವುದರಲ್ಲಿ ಪ್ರಸಿದ್ಧಿ ಹೊಂದಿದ್ದ ತಿಪ್ಪಜ್ಜಿ (66) ಒಮ್ಮೆ ಜಗಳೂರು ಆಸ್ಪತ್ರೆಗೆ ಸಂಬಂಧಿಕರ ಜೊತೆ ಹೋಗಿದ್ದಾಗ, ಆಸ್ಪತ್ರೆಯೊಳಗೆ ಒಬ್ಬರ ಕಣ್ಣಿನಲ್ಲಿದ್ದ ಜೋಳದ ಕಾಳಿನಗಾತ್ರದ ಕಲ್ಲರಳನ್ನು ಕ್ಷಣಮಾತ್ರದಲ್ಲಿ ತನ್ನ ನಾಲಿಗೆಯಿಂದ ತಗೆದುಕೊಟ್ಟಿತು. ಇದನ್ನು ಗಮನಿಸಿದ ಆಸ್ಪತ್ರೆಯವರು ಅಜ್ಜಿಯನ್ನು ಸಂಬಳಕೊಟ್ಟು ಆಸ್ಪತ್ರೆಯಲ್ಲಿಯೆ ಉಳಿಸಿಕೊಳ್ಳುವ ಮಾತಾಡಿದರು. ಬೆನ್ನು ಫಣಿಯನ್ನು ಗುಣಪಡಿಸುವಲ್ಲಿ ಪ್ರಸಿದ್ಧರಾದ ಪುಣಜೂರು ಕಾಟಪ್ಪ (34)ನವರನ್ನು ತೋಟಗಾರಿಕಾ ಇಲಾಖೆಯವರು ಹತ್ತು ಎಕರೆ ಗಿಡಮೂಲಿಕೆಗಳನ್ನು ಬೆಳಸುತ್ತೇವೆ ನೀವು ಇಲ್ಲೇ ಇದ್ದು ಔಷಧ ಕೊಡಿ ಜನರಿಗೆ ಎಂದು ವಿನಂತಿಸಿರುವುದೂ ಉಂಟು. ಈ ರೀತಿಯ ಘಟನೆಗಳು ಆಶಾದಾಯಕವಾದರೂ ವೈದ್ಯರು ಆ ನಿಟ್ಟಿನಲ್ಲಿ ಮುಂದುವರಿಯಲು ಬೇಕಾದ ವಾತಾವರಣವನ್ನು ಮೊದಲು ನಿರ್ಮಾಣ ಮಾಡಬೇಕಾಗಿದೆ.

ಪ್ರಸ್ತುತ ಸಂದರ್ಭದಲ್ಲಿ ಜನಪದ ವೈದ್ಯದಲ್ಲಿ ತೊಡಗಿಕೊಳ್ಳುವವರ ಪ್ರಮಾಣ ತುಂಬ ಕಡಿಮೆಯಾಗುತ್ತಿದೆ. ಯುವಪೀಳಿಗೆ ಇದನ್ನು ಕಲಿಯಲು ಆಸಕ್ತಿಯನ್ನು ತೋರುತ್ತಿಲ್ಲ. ಯಾವುದೇ ಲಾಭವಿಲ್ಲದ ಈ ಕಾಯಕ ನಮ್ಮ ಅಜ್ಜ, ಅಜ್ಜಿಯರಿಗೇ ಇರಲಿ ಅದು ನಮಗೆ ಬೇಡ ಎಂದು ಮೂಗುಮುರಿಯುತ್ತಾರೆ. ಇದರಿಂದ ಎಷ್ಟೋ ಜನ ವೈದ್ಯರು ನಮ್ಮ ಮಕ್ಕಳು ಯಾಕೆ ಕಲಿಯುತ್ತಿಲ್ಲ ಈ ವಿದ್ಯೆಯನ್ನು ಎಂಬ ಆತಂಕವನ್ನು ವ್ಯಕ್ತಪಡಿಸುತ್ತಾರೆ.

ಇರುವ ವೈದ್ಯರಲ್ಲಿ ಹಲವರು ಅದರಲ್ಲಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಳ್ಳುತ್ತಿಲ್ಲ. ಇದಕ್ಕೆ ಹಲವು ಕಾರಣಗಳಿವೆ. ಮನೆಯ ಕೆಲಸಬಿಟ್ಟು ಮಂದಿಕೆಲಸ ಮಾಡುವ ಉತ್ಸಾಹ ಕಡಿಮೆಯಾಗಿರುವುದು. ಈ ನಿರುತ್ಸಾಹಕ್ಕೆ ಕಾರಣ ಔಷಧಿಗೆ ಬೇಕಾದ ಸಸ್ಯಗಳು ತಕ್ಷಣಕ್ಕೆ ಸಿಗದಿರುವುದು, ಹೊಲಗಳಲ್ಲಿ ಬೆಳೆಯುತ್ತಿದ್ದ ಪುರುಷರತ್ನ, ಅಶ್ವಗಂಧಿ, ನೆಲತಂಗಡಿ, ಹಾಲೇಬಳ್ಳಿ, ಹಕ್ಕರಿಕೆ, ದೊಡ್ಡಕಾಯಿಬಳ್ಳಿ, ಕಾಮಕಸ್ತೂರಿ, ಆನೆನೆಗ್ಗಿಲು, ಸಗಸೆ, ಸುಗಂಧಿ, ಈಶ್ವರಿ, ಕಾಡು ಜೀರಿಗೆ, ಕಾಡು ಕಡಲೆ, ಕಾಡು ಎಳ್ಳು, ನೆಲಬೇವು ಮುಂತಾದವು ರೈತನ ಹೊಲದಲ್ಲಿ ಸುಲಭವಾಗಿ ಸಿಗುತ್ತಿದ್ದವು. ಆದರೆ ರಸಾಯನಿಕ ಗೊಬ್ಬರದಬಳಕೆ, ಎಂಡೋಸಲ್ಫಾನ್, ಮೆಟಾಸಿಡ್, ರೋಗರ್ ನಂತಹ ಕ್ರಿಮಿನಾಶಕಗಳಿಂದ ಈ ಸಸ್ಯಗಳು ರೈತನ ಹೊಲದಿಂದ ಕಾಲ್ತೆಗೆದಿವೆ. ಇದು ಸಸ್ಯಸಮೂಹವು ಜಾಗತೀಕರಣದ ಉತ್ಪಾದನೆಗಳಿಂದ ನಶಿಸುವ ಮುಖ್ಯಕಾರಣಗಳಲ್ಲಿ ಒಂದಾಗಿದೆ.

ಜನಪದ ವೈದ್ಯರೆಲ್ಲ ತುಂಬ ನೀತಿವಂತರೆಂದು ಭಾವಿಸುವಂತಿಲ್ಲ, ಅವರಲ್ಲೂ ಎಡಬಿಡಂಗಿಗಳಿದ್ದಾರೆ, ಆಡುಮುಟ್ಟದಬಳ್ಳಿ, ಜಿಳಿಗುಂಗಂಜಿ, ಈಶ್ವರಿ, ಅಶ್ವಗಂಧಿ, ದೊಡ್ಡಕಾಯಿಬಳ್ಳಿಗಳ ಬೇರುಗಳನ್ನು ಔಷಧಿಗಾಗಿ ಸಂಗ್ರಹಿಸುತ್ತಾರೆ. ಇವುಗಳ ಸಂತಾನ ಹೇಗೆ ಎಂಬ ಯೋಚನೆ ಇಲ್ಲದೆಯೇ ಅವುಗಳನ್ನು ಬುಡಸಮೇತ ಕಿತ್ತುಬಿಡುತ್ತಾರೆ. ನಂತರ ಇತ್ತೀಚಿಗೆ ಗಿಡಗಳು ಸಿಗುತ್ತಿಲ್ಲ ಅದಕ್ಕಾಗಿ ವೈದ್ಯ ಮಾಡುವುದನ್ನು ನಿಲ್ಲಿಸಿದ್ದೇವೆ ಎಂಬ ಸಾಬೂಬನ್ನು ಹೇಳುತ್ತಾರೆ.

ಜನಪದ ಮತ್ತು ಆಯುರ್ವೇದದ ಸಂಬಂಧವನ್ನು ಒಂದು ವಾಕ್ಯದಲ್ಲಿ ಹೇಳುವುದಾದರೆ, ಒಂದು ಕಾಲ ಘಟ್ಟದ ಅನುಭವಗಳ ಕ್ರೋಢೀಕರಣವೆ ಆಯುರ್ವೇದಕ್ಕೆ ಅಡಿಗಲ್ಲಾಯಿತು. ಇಂದು ಜನಪದ ವೈದ್ಯವನ್ನು ಹೆಚ್ಚಿನ ಅಧ್ಯಯನಕ್ಕೆ ಒಳಪಡಿಸಿದಲ್ಲಿ ಪ್ರಾಥಮಿಕ ಆರೋಗ್ಯ ಪ್ರಜ್ಞೆಯನ್ನು ಶ್ರೀಸಾಮಾನ್ಯರಲ್ಲಿ ಬೆಳೆಸಲು ಸಾಧ್ಯವಿದೆ. ಹೆಚ್ಚು ಖರ್ಚಿಲ್ಲದೆ ಸುಲಭವಾಗಿ ಕೆಲವು ಕಾಯಿಲೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬಹುದಾಗಿದೆ. ಅಲ್ಲದೆ ಇದರ ಅಧ್ಯಯನದಿಂದ ಆಯುರ್ವೇದವನ್ನು ಮತ್ತಷ್ಟು ಸಮೃದ್ಧಿಗೊಳಿಸಬಹುದಾಗಿದೆ.

ಆಯುರ್ವೇದ ಸೇರಿದಂತೆ ಅಲೋಪತಿ ವೈದ್ಯರೂ ಸಹ ಕೆಲವು ಕಾಯಿಲೆಗಳಿಗೆ ಜನಪದ ವೈದ್ಯದಲ್ಲಿ ಪರಿಹಾರವನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡುತ್ತಾರೆ. ಉದಾಹರಣೆಗೆ ಆಸ್ಪತ್ರೆಗಳಲ್ಲಿ ಗುಣವಾಗದ ಸರ್ಪಸುತ್ತಿಗೆ ಜಯಪ್ರಸಾದ್ (59)ರವರ ಜನಪದ ವೈದ್ಯದಿಂದ ಜಾಜುಕಲ್ಲು

(ಕಾವಿಕಲ್ಲು) ಮತ್ತು ನಿಂಬೆಹುಳಿ ರಸವನ್ನು ಹಚ್ಚಿಸಿಕೊಂಡಾಗ ಗುಣವಾಯಿತು. ಈ ಸುಲಭ ಚಿಕಿತ್ಸೆಯನ್ನು ಕಂಡ ಇವರು ಮುಂದೆ ಹಲವಾರು ಜನರಿಗೆ ಅದರ ಪರಿಚಯವನ್ನು ಮಾಡಿಕೊಟ್ಟರು [ಸೂಚನೆ : ಇದನ್ನು ಹಚ್ಚುವ ವೇಳೆಯಲ್ಲಿ ನೀರನ್ನು ಸರ್ಪಸುತ್ತಿಗೆ ಸ್ಪರ್ಶಿಸಬಾರದು. ಹಾಗೆಯೇ ಎಕ್ಕೆಳೆಗಳನ್ನು ಉದುರುವ ತನಕ ಕೀಳುವಂತಿಲ್ಲ]

ಮೊಳಕಾಲ್ಮೂರು ತಾಲ್ಲೂಕಿನ ಕೊಂಡ್ಲಹಳ್ಳಿ ಗ್ರಾಮದ ಮಹಿಳೆಯೊಬ್ಬರು ಪಾರ್ಶ್ವವಾಯು ರೋಗಕ್ಕೆ ತುತ್ತಾಗಿ ಅದೇ ಊರಿನಲ್ಲಿದ್ದ ಅಲೋಪತಿ ವೈದ್ಯರಿಂದ ಚಿಕಿತ್ಸೆ ಪಡೆದರು. ಆದರೆ ರೋಗ ಗುಣಕಾಲಿಲ್ಲ, ಈ ವೇಳೆಗೆ ಆ ಮಹಿಳೆಯ ಬಳಿಯಿದ್ದ ಹಣವೆಲ್ಲ ಆಸ್ಪತ್ರೆಗೆ ಖರ್ಚಾಯಿತು. ಹೀಗಾಗಿ ವೈದ್ಯನ ಬಳಿ ಸಾಲ ಹೇಳಿ ಚಿಕಿತ್ಸೆ ಪಡೆಯುವ ಸ್ಥಿತಿ ಉಂಟಾಯಿತು. ಇದರಿಂದ ವೈದ್ಯನಲ್ಲಿ ಸಾಲ ಹೆಚ್ಚಾಯಿತು. ಈ ಸಾಲಕ್ಕೆ ಅಡವಾಗಿ ಗೃಹ ಬಳಕೆಯ ಪಾತ್ರಗಳನ್ನು ಸಹ ವೈದ್ಯನು ತನ್ನ ಸ್ವಾದೀನಕ್ಕೆ ತಗೆದುಕೊಂಡನು. ನಂತರ ಯಾರೋ ನೀಡಿದ ಸಲಹೆಯ ಮೇರೆಗೆ ಜನಪದ ವೈದ್ಯ ಪೊರಾಳ್ ಈಶ್ವರಪ್ಪನಿಂದ ಚಿಕತ್ಸೆ ಪಡೆದು ರೋಗದಿಂದ ಗುಣಮುಖಳಾದಳು. ನಂತರ ಈಶ್ವರಪ್ಪನವರೇ ಅಲೋಪತಿ ವೈದ್ಯನಲ್ಲಿದ್ದ ಮನೆಯ ಸಾಮಾನುಗಳನ್ನು ಹಿಂದಕ್ಕೆ ಕೊಡಿಸಿದರು. ಇಲ್ಲಿ ಈಶ್ವರಪ್ಪನವರಿಂದ ಕಾಯಿಲೆ ಗುಣವಾಯಿತು. ಇದರಿಂದ ಸಂತೋಷಗೊಂಡ ರೋಗಿ ಏನಾದರೂ ತಮಗೆ ಕೊಡುವ ಮನಸಿದೆ, ಆದರೆ ನನ್ನಲ್ಲಿ ಏನಿದೆ ಎಂದು ಚಡಪಡಿಸಿದರು. ಆಗ ಈಶ್ವರಪ್ಪನವರು ನಿನ್ನ ಮಗನನ್ನು ಚೆನ್ನಾಗಿ ಓದಿಸು, ಮುಂದೆ ನಿನಗೆ ಅನುಕೂಲವಾದಾಗ ಒಂದು ಕಂಬಳಿಯನ್ನು ನನಗೆ ಕೊಡು ಎಂದರು. ಆಗ ಹನ್ನೆರಡು ವರ್ಷದವನಿದ್ದ ರೋಗಿಯ ಮಗ ಮುಂದೆ ಓದಿ ಸರ್ಕಾರಿ ಶಾಲೆಯ ಶಿಕ್ಷಕನಾದನು. ನೇಕಾರ ಕುಟುಂಬದವರಾದ ಇವರು ಈತ್ತಿಚೆಗೆ ಒಂದು ಕಂಬಳಿಯನ್ನು ನೇಯ್ದು ಈಶ್ವರಪ್ಪನಿಗೆ ಕೊಟ್ಟರಂತೆ. ಗುಣಹೊಂದಿದ ರೋಗಿಯ ಮಗನಾದ ಶಿಕ್ಷಕರೇ ನನ್ನನ್ನು ಬನ್ನಿ ನಮ್ಮ ಊರಲ್ಲಿ ಒಬ್ಬ ಒಳ್ಳೆಯ ವೈದ್ಯರಿದ್ದಾರೆಂದು ಸಂದರ್ಶನಕ್ಕೆ ಕರೆದುಕೊಂಡು ಹೋಗಿದ್ದರು.

ಚಿತ್ರದುರ್ಗ ತಾಲ್ಲೂಕಿನ ಕೊಡಬನಾಳ್ ಗ್ರಾಮದ ವೈದ್ಯ ಕೆ.ಎಂ. ಬಸವರಾಜ (116) ಅವರ ಅಜ್ಜಿಯಾದ ಸಿದ್ದಮ್ಮ ವೈದ್ಯೆಯೂ ಮತ್ತು ಸೂಲಗಿತ್ತಿಯೂ ಆಗಿದ್ದರು. ಒಮ್ಮೆ ಹೆರಿಗೆ ಮಾಡಿಸಲು ಹೋದಾಗ ಮಗುವಿಗೆ ತಾಯಿಯ ಹಾಲು ಸಾಲುತ್ತಿರಲಿಲ್ಲವಂತೆ ಆಗ ತನ್ನ ಮನೆಯಿಂದ ಒಂದು ಕರೆಯುವ ಹಸುವನ್ನು ಹೊಡೆದು ಕಳುಹಿಸಿದರಂತೆ.

ಆರು ವರ್ಷಗಳ ಹಿಂದೆ ಹಿರಿಯೂರು ತಾಲ್ಲೂಕಿನ ಗಿಡ್ಡೋಬನಹಳ್ಳಿ ಗ್ರಾಮದ ವ್ಯಕ್ತಿಯೊಬ್ಬ ನಾಗರಹಾವಿನ ವಿಷದಿಂದ ಚಿತ್ರದುರ್ಗದ ಜಿಲ್ಲಾ ಆಸ್ಪತ್ರೆಗೆ ದಾಖಲಾಗಿ ಮೂರು ದಿನಗಳ ಕಾಲ ಕೋಮಾ ಸ್ಥಿತಿಯಲ್ಲಿರುವಾಗ ಸ್ಥಳೀಯ ಜನಪ್ರತಿನಿದಿಯವರ ಸಲಹೆ ಮೇರೆಗೆ ದೊಡ್ಡಸಿದ್ದವ್ವನಹಳ್ಳಿ ಸಮೀಪದ ಕಸವನಹಳ್ಳಿ ಗ್ರಾಮದ ಜನಪದ ವೈದ್ಯ ಈಶಣ್ಣನ (12) ಪಾತಾಳಗರುಡದ ಬೇರಿನ ಚೂರ್ಣವನ್ನು ರೋಗಿಯ ಮೂಗಲ್ಲಿ ಹೊಯ್ಯಲಾಯಿತು. ಇದರಿಂದ ವಿಷ ಇಳಿದು ರೋಗಿಗೆ ಪ್ರಜ್ಞೆಬಂದಿತು.

ಕೊನೆಯದಾಗಿ ಬೆಳಗೆರೆ ಕೃಷ್ಣಶಾಸ್ತ್ರೀಯವರು ಹೇಳಿದ ಘಟನೆಯನ್ನು ಪ್ರಸ್ತಾಪಿಸಲಾಗುವುದು. ಕೃಷ್ಣಶಾಸ್ತ್ರೀಯವರ ತಾಯಿ ವೈದ್ಯೆಯಾಗಿದ್ದರು, ಇವರು ಬಂಜೆತನ ನಿವಾರಣೆಗೆ ಔಷಧಿಯನ್ನು ಕೇವಲ ಹೆಂಡತಿಗೆ ಮಾತ್ರ ಕೊಡುತ್ತಿರಲಿಲ್ಲ ಅವಳ ಗಂಡನಿಗೂ ಔಷಧಿಯನ್ನು ಕೊಡುತ್ತಿದ್ದರಂತೆ. ಪಥ್ಯವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿದ್ದರಿಂದ ಔಷಧಿ ಕೊಡುವ ಸಮಯದಲ್ಲಿ ಅವರನ್ನು ತಮ್ಮ ಮನೆಯಲ್ಲೇ ಇರಿಸಿಕೊಳ್ಳುತ್ತಿದ್ದರಂತೆ.

ಮೇಲಿನ ಘಟನೆಗಳ ವಿಶ್ಲೇಷಣೆಗೆ ಪುನಃ ತೊಡಗುವುದಿಲ್ಲ, ಏಕೆಂದರೆ ಜನಪದ ವೈದ್ಯ ಎಂದರೆ ಏನು ಎನ್ನುವ ಚಿತ್ರಣವನ್ನು ಅವು ಸರಳವಾಗಿ ಕಟ್ಟಿಕೊಡುತ್ತವೆ. ಹೀಗೆ ಜನಪದ ವೈದ್ಯವು ದೂರದ ಪ್ರಯಾಣವಿಲ್ಲದೆ, ಪರಿಚಿತರೂ ಮತ್ತು ಪರಿಚಯವೂ ಇರುವ ವಸ್ತುಗಳಿಂದ ಕೂಡಿರುವಂತಹುದು. ಇದು ಜನರನ್ನು ಪ್ರೀತಿಸುತ್ತಲೇ ಬೆಳೆದು ಬಂದಿರುವ ಜ್ಞಾನ ಆಧುನಿಕ ಸಂದರ್ಭದಲ್ಲಿ ಇದರ ಪೋಷಣೆಯನ್ನು ತುಂಬ ಜರೂರಾಗಿ ಮಾಡಬೇಕಾಗಿದೆ. ಇದರಿಂದ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಅನುಕೂಲವಿದೆ. ಸದ್ಯದ ಪರಿಸ್ಥಿತಿಯಲ್ಲಿ ಇದು ಮೊದಲಿನ ಪರಿಶುದ್ಧತೆಯನ್ನು ಕಳೆದುಕೊಳ್ಳುತ್ತಿದೆ. ಮುಂದೆಯೂ ಇದು ನಶಿಸುವುದಿಲ್ಲ ವಿವಿಧ ರೂಪಗಳಲ್ಲಿ ಬೆಳವಣಿಗೆಯಾಗುತ್ತದೆ. ಆದರೆ ಎಲ್ಲರ ಜ್ಞಾನವಾಗಿ ಅಲ್ಲ, ಹಿಂದೆ ಹೇಳಿದಂತೆ ಕೆಲವು ಔಷಧೀಯ ಕಂಪನಿಗಳ ಮಾಲೀಕರ ಜ್ಞಾನವಾಗಿ ಉಳಿಯಬಹುದು. ಹೀಗಾಗಬಾರದು ಎಂಬ ಛಲ ಇದ್ದರೆ, ಯುವ ಪೀಳಿಗೆ ಹಾಗೂ ಇತರ ಎಲ್ಲರೂ ಇಂದೇ ನಿಮ್ಮ ಪ್ರದೇಶಗಳಲ್ಲಿರುವ ವೈದ್ಯರನ್ನು ಗೌರವಿಸಿ, ಪ್ರೀತಿಯಿಂದ ಅವರೊಂದಿಗೆ ಮಾತನಾಡಿ ಅವರ ಚಟುವಟಿಕೆಯಲ್ಲಿ ಭಾಗವಹಿಸಿ, ಇದರಿಂದ ಅವರ ಜ್ಞಾನ ಸಾರ್ವತ್ರಿಕವಾಗುವುದರ ಮೂಲಕ ಸಿ.ಎಫ್. ಪಾಟರ್ ಹೇಳುವ ಹಾಗೆ ಸಾವನ್ನು ನಿರಾಕರಿಸುವ ಜೀವಂತ ಪಳೆಯುಳಿಕೆಯಾಗುತ್ತದೆ.

[ಅಧ್ಯಯನದಲ್ಲಿ ಬರುವ ವಿಶಿಷ್ಟವಾದ ಸಸ್ಯಗಳ ಔಷಧೀಯ ಗುಣಗಳನ್ನು ತಿಳಿಯಲು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ಗೆ ಹತ್ತು ಸಸ್ಯಗಳನ್ನು ಕಳುಹಿಸಿಕೊಡಲಾಗಿದೆ. ಫಲಿತಾಂಶದ ನಿರೀಕ್ಷೆಯಲ್ಲಿದ್ದು ಬಂದ ಕೂಡಲೇ ಮಹಾಪ್ರಬಂಧದಲ್ಲಿ ಸೇರಿಸಲಾಗುವುದು.]

ಆ) ಇನ್ನು ಮುಂದೆ ಪೂರೈಸಬೇಕಾದ ಕಾರ್ಯ

ವೈದ್ಯರ ವಿಶ್ವಾಸವನ್ನು ಗಳಿಸಿ, ಮಾಹಿತಿ ಸಂಗ್ರಹದ ಉದ್ದೇಶವನ್ನು ಮನನಮಾಡಿಕೊಟ್ಟಾಗ ಮಾಹಿತಿ ಕೊಡುವ ವೈದ್ಯರಿಗೆ ಕೊರತೆಯೇನಿಲ್ಲ. ಇದಕ್ಕಾಗಿ ವ್ಯವಸ್ಥಿತವಾಗಿ ಮಾಹಿತಿಯನ್ನು ಸಂಗ್ರಹಿಸುವ ಜವಾಬ್ದಾರಿಯನ್ನು ಎಲ್ಲರೂ ಹೊರಬೇಕಾಗಿದೆ. ಆಸಕ್ತರಿಗೆ ಅಡ್ಡಪರಿಣಾಮವಿಲ್ಲದ ವೈದ್ಯೋಪಚಾರವನ್ನು ತಿಳಿಸಬೇಕಾಗಿದೆ. ಇದರಿಂದ ಪೂರ್ವಿಕರ ಆರೋಗ್ಯ ಜ್ಞಾನದ ಸದ್ಬಳಕೆಯಾಗುತ್ತದೆ. ಇದಕ್ಕಾಗಿ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳು.

* ಸರ್ಕಾರ ಮತ್ತು ವಿಶ್ವವಿದ್ಯಾಲಯಗಳು ವೈದ್ಯ ಮಾಹಿತಿಯನ್ನು ಸಂಗ್ರಹಿಸುವ ಯೋಜನೆಯನ್ನು ರೂಪಿಸಬೇಕು.

* ಜನಪದ ವೈದ್ಯರಲ್ಲಿ ಬಳಕೆಯಾಗುವ ಗಿಡಗಳನ್ನು ಶೋಧಿಸುವುದರಿಂದ ಔಷಧೀಯ ಕ್ಷೇತ್ರವನ್ನು ಶ್ರೀಮಂತಗೊಳಿಸಬಹುದು.

* ವಿಜ್ಞಾನದ ವಿದ್ಯಾರ್ಥಿಗಳು ಜನಪದ ವೈದ್ಯವನ್ನು ಅಧ್ಯಯನ ಮಾಡುವಂತೆ ಪ್ರೋತ್ಸಾಹಿಸುವುದು.

* ಶಿಕ್ಷಣ ಇಲಾಖೆ ಮತ್ತು ಗ್ರಾಮ ಪಂಚಾಯಿತಿಗಳ ಮೂಲಕ ಸ್ಥಳೀಯ ವೈದ್ಯರು ಅಲ್ಲಿಯ ಶಾಲಾ ಮಕ್ಕಳಿಗೆ ಔಷಧೀಯ ಸಸ್ಯಗಳನ್ನು ಪರಿಚಯಿಸಬೇಕು.

* ಅರಣ್ಯ ಮತ್ತು ತೋಟಗಾರಿಕಾ ಇಲಾಖೆಗಳು ವೈದ್ಯರಿಗೆ ಬೇಕಾದ ಸಸ್ಯಗಳನ್ನು ಹೋಬಳಿ ಮಟ್ಟದಲ್ಲಿ ಕನಿಷ್ಠ 10ಎಕರೆಗಳಲ್ಲಿ ಬೆಳೆಸಬೇಕು.

* ಯಾವುದೇ ಕಾಣಿಕೆ, ಹಣ ಮುಂತಾದ್ದನ್ನು ಮುಟ್ಟದೆ ವೈದ್ಯಸೇವೆ ಮಾಡಿದವರನ್ನು ಸನ್ಮಾನಿಸಬೇಕು. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಇಂಥ ಕಾರ್ಯವನ್ನು ಇದುವರೆಗೂ ಮಾಡಿರುವ ಉದಾಹರಣೆಗಳಿಲ್ಲ.

* ವೈದ್ಯರ ಆಸಕ್ತಿಯ ಮೇರೆಗೆ ಜನಪದ ವೈದ್ಯ ಪರಿಷತ್ತುಗಳನ್ನು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಸ್ಥಾಪಿಸುವುದು. ಈಗಾಗಲೇ ಚಿತ್ರದುರ್ಗದಲ್ಲಿ ಪಾರಂಪರಿಕ ವೈದ್ಯ ಪರಿಷತ್ತನ್ನು ಸ್ಥಾಪಿಸಲಾಗಿದೆ. ಆದರೆ ಅದು ಕ್ರಿಯಾಶೀಲವಾಗಿಲ್ಲ.


* ಜಾನಪದಕ್ಕಾಗಿ ಪ್ರತ್ತೇಕ ವಿಶ್ವವಿದ್ಯಾಲಯವನ್ನು ಸ್ಥಾಪಿಸಿ ವಿವಿಧ ಪ್ರಕಾರಗಳಿಗೆ ವಿಭಾಗಗಳಿರಬೇಕು. ಅಂಥ ವಿಭಾಗಗಳಲ್ಲಿ ಜನಪದ ವೈದ್ಯ ವಿಭಾಗವೂ ಒಂದಾಗಿರಬೇಕು.

ಹೀಗೆ ಮಾಡುವುದರಿಂದ ಆರೋಗ್ಯದ ಅರಿವು ಎಲ್ಲರಲ್ಲೂ ಮೂಡಲು ಪ್ರೇರಣೆಯಾಗುತ್ತದೆ. ಉಗುರಿನಲ್ಲಿ ಚಿಗುಟುವುದಕ್ಕೆ ಕೊಡಲಿ ತಗೆದುಕೊಳ್ಳುವ ಪ್ರವೃತ್ತಿ ಕಡಿಮೆಯಾಗುತ್ತದೆ. ಜೊತೆಗೆ ಸ್ವಾವಲಂಬನೆಯ ಪಾಠವನ್ನು ಕಲಿಯಲು ನೆರವಾಗುತ್ತದೆ.

ಪಿಎಚ್.ಡಿ ಮುಗಿದ ಕೂಡಲೆ ಕ್ಷೇತ್ರ ಕಾರ್ಯ ಕೊನೆಯಾಗುವುದಿಲ್ಲ. ಆನಂತರವೂ ಅದರ ಸಂಗ್ರಹ ಕಾರ್ಯ ಮುಂದುವರಿಯುತ್ತದೆ. ಕ್ಷೇತ್ರಕಾರ್ಯದ ವೇಳೆ ಮಾಹಿತಿ ಕೊಡದಿರುವವರೂ ಇದ್ದಾರೆ. ಅವರಿಗೆ 'ಬೇರೆಯವರಿಗೆ ಹೇಳದಿದ್ದರೂ ಚಿಂತೆಯಿಲ್ಲ ನಿಮ್ಮ ಕುಟುಂಬದವರಿಗಾದರೂ ವೈದ್ಯವನ್ನು ತಿಳಿಸಿ ಸಾಯಬೇಕು. ನಿಮ್ಮ ಹಿಂದೆಯೇ ನಿಮ್ಮ ವೈದ್ಯ ಸಾಯಬಾರದು, ಏಕೆಂದರೆ ನೀವೊಬ್ಬ ವೈದ್ಯರು ನಿಮ್ಮನ್ನು ನಂಬಿ ಅನೇಕ ರೋಗಿಗಳು ಬರುತ್ತಾರೆ, ನೀವು ಇಲ್ಲ ನಿಮ್ಮ ವಿದ್ಯೆಯೂ ಇಲ್ಲ ಎಂದಾಗ ಅವರು ಅನಾಥವಾಗುತ್ತಾರೆ' ಎಂದು ವಿನಂತಿಸುವುದರ ಮೂಲಕ ಅವರ ಪ್ರೀತಿಯನ್ನು ಗಳಿಸಲಾಗಿದೆ. ಚಿತ್ರದುರ್ಗ ಮತ್ತು ಚಳ್ಳಕೆರೆಯ ಕೆಲವು ಭಾಗಗಳಲ್ಲಿ ಸಂದರ್ಶನ ಮಾಡಲು ಹೋದಾಗ 'ನಿನ್ನನ್ನು ಮಟಾಸ್ ಮಾಡಿ ಬಿಡ್ತೀವಿ' ಎಂದು ಬೆದರಿಸಿದ ವಾಮಾಚಾರಿಗಳೂ ಇದ್ದಾರೆ. ಸಂದರ್ಶನದ ವೇಳೆ ಕುಡಿದು ಬಂದವರು ರೇಪ್ ರ್ಕಾರ್ಡರ್ ಮತ್ತು ಬ್ಯಾಗ್‌ನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದ್ದಾರೆ. ಇಂಥ ಸಮಸ್ಯೆಗಳಿಂದ ಬೇಸತ್ತು ಕ್ಷೇತ್ರಕಾರ್ಯಕ್ಕೆ ಮಂಗಳ ಹಾಡುವ ಯೋಚನೆ ಹಲವಾರು ಬಾರಿ ಬಂದು ಹೋಗುತ್ತಿತ್ತು. ಆದರೆ ಒಳ್ಳೆಯ ವೈದ್ಯನು ಸಿಕ್ಕು ಆತನ ಅನುಭವದ ದರ್ಶನವಾದಾಗ ಕಹಿಯಲ್ಲ ಮರೆತು ಹೋಗಿಬಿಡುತ್ತಿತ್ತು.

* * *

ಅನುಬಂಧ – 1



ಅ) ಆಧುನಿಕ ಸಸ್ಯಶಾಸ್ತ್ರಜ್ಞರ ಅರಿವಿಗೆ ಬಾರದ ಅಪರೂಪದ ಔಷಧೀಯ ಸಸ್ಯಗಳು

ಆದಿಮಾನವನು ಸಸ್ಯಗಳನ್ನು ಆಹಾರಕ್ಕಾಗಿ ಅವಲಂಭಿಸಿದ ಅವನು ನಂತರದ ದಿನಗಳಲ್ಲಿ ಅವುಗಳ ಔಷಧೀಯ ಗುಣಗಳನ್ನು ಕಂಡುಕೊಂಡನು. ಪರಿಣಾಮವಾಗಿ ಅವುಗಳನ್ನು ಹಲವಾರು ರೀತಿಯಲ್ಲಿ ವರ್ಗೀಕರಿಸಿದನು. ಅವುಗಳ ಗುಣಗಳು, ಲಕ್ಷಣಗಳು ಮತ್ತು ಆಕಾರಗಳನ್ನು ಗಮನಿಸಿ ಪ್ರತಿಯೊಂದಕ್ಕೂ ಹೆಸರಿಡಲಾರಂಭಿಸಿದನು. ರೋಗವನ್ನು ನಿವಾರಿಸಿ ಜೀವನಕ್ಕೆ ಹೊಸ ಚೈತನ್ಯವನ್ನು ತುಂಬುವ ಅವುಗಳ ಶಕ್ತಿಯ ಬಗೆಗೆ ವಿಶೇಷವಾದ ಪ್ರೀತಿ ಗೌರವಗಳನ್ನು ಬೆಳೆಸಿಕೊಂಡ ಮಾನವನು ಅವುಗಳನ್ನು ಆರಾಧಿಸತೊಡಗಿದನು. ಅವುಗಳಲ್ಲಿ ದೈವತ್ವವನ್ನು ಕಾಣಲಾರಂಭಿಸಿ ಅರಳಿ, ಆಲ, ಬೇವು, ಬನ್ನಿ, ಬಿಲ್ವ ಮುಂತಾದ ಮರಗಳನ್ನು ಪೂಜಿಸತೊಡಗಿದನು. ಬಹುಶಃ ಇವುಗಳಲ್ಲಿರುವ ಔಷಧೀಯ ಗುಣಗಳ ಪೂಜಿಸುವ ಕಾರಣಗಳಲ್ಲೊ ಒಂದಾಗಿರಬಹುದು. ಇಂದಿಗೂ ದೇವರ ಕಾಡು, ನಾಗಬನಗಳು ಉಳಿದು ಬಂದಿರುವುದನ್ನು ನೋಡಿದಾಗ ಮನುಷ್ಯನ ಬದುಕಿಗೆ ಸಸ್ಯಸಂಪತ್ತಿನ ಅನಿವಾರ್ಯ ಎಷ್ಟು ಅಗತ್ಯವಿದೆಯೆಂಬುದು ತಿಳಿಯುತ್ತದೆ. ಶ್ರೀತುಳಸಿ ಗಿಡ, ಅರಳಿ ಮರ, ಬನ್ನಿ ಮರಗಳನ್ನು ಪ್ರದಕ್ಷಣೆ ಮಾಡಿದಾಗ ಉಸಿರಾಟಕ್ಕೆ ಪರಿಶುದ್ಧವಾದ ಆಮ್ಲಜನಕ ದೊರೆಯುತ್ತದೆ. ಇಲ್ಲಿ ಭಕ್ತಿ ಎಂಬುದು ನಿಮಿತ್ತ ಮಾತ್ರ. ಅವುಗಳ ಔಷಧೀಯ ಪ್ರಭಾವವೇ ಮುಖ್ಯವಾಗಿರುತ್ತದೆ.

ಹೀಗೆ ಪೂಜಾರ್ಹವಾದ ಶ್ರೀತುಳಸಿ, ತುಂಬೆ, ಅರಿಶಿನ, ಎಕ್ಕದ ಗಿಡ, ಶ್ರೀಗಂಧ, ವೀಳೆಯದೆಲೆ ಬಳ್ಳಿ, ಮಾವು, ತೆಂಗು, ಬಾಳೆ ಮತ್ತು ರುದ್ರಾಕ್ಷಿ ಮೊದಲಾದವುಗಳು ಸಹ ಹಿಂದೆ ಹೇಳಿದಂತೆ ಆರೋಗ್ಯ ಕಾರಣವೊಂದು ಅವುಗಳ ಪೂಜೆಯ ಹಿಂದೆ ಅಡಗಿರುತ್ತದೆ. ಈ ಬಗೆಯ ಸಸ್ಯಮರಗಳು ಬಹುಜನರಿಗೆ ಪರಿಚಿತವಾಗಿದ್ದರೂ ಅವುಗಳ ಔಷಧೀಯ ಉಪಯೋಗವನ್ನು ತಿಳಿದಿರುವವರ ಸಂಖ್ಯೆ ಬಹಳ ಕಡಿಮೆ ಎನ್ನಬಹುದು.

ಇದರಿಂದಾಗಿ ಸಂಬಂಧಪಟ್ಟ ವಿಷಯ ತಜ್ಞರು ಶ್ರೀಸಾಮನ್ಯರವರೆಗೆ ಔಷಧೀಯ ಸಸ್ಯಗಳನ್ನು ಪರಿಚಯಿಸುವ ಮನಸ್ಸು ಮಾಡಬೇಕಿದೆ. ಇನ್ನೂ ವಂಶಪಾರಂಪರ್ಯವಾಗಿ ವೈದ್ಯವನ್ನು ಕಲಿತ ಜನಪದ ವೈದ್ಯರು ತಾವು ಔಷಧಿಗೆ ಬಳಸುವ ಸಸ್ಯಗಳನ್ನು ಇಂದಿನವರೆಗೂ ಬಳಸುತ್ತಾ ಬಂದಿರುತ್ತಾರೆ. ಹಾಗಾಗಿ ಎಷ್ಟೋ ಸಸ್ಯಗಳು ಇನ್ನೂ ಆಧುನಿಕ ವಿಜ್ಞಾನದ ಅಧ್ಯಯನಕ್ಕೆ ಒಳಪಡಬೇಕಾದ ಅಗತ್ಯತೆ ಇದೆ.

ಜೊತೆಗೆ ಜನಪದರು ಆ ಸಸ್ಯಗಳ ಕುರಿತು ಹೊಂದಿರುವ ಜ್ಞಾನವನ್ನು ಸಹ ದಾಖಲಿಸಬೇಕಾಗಿದೆ. ಇದರಿಂದ ಸಸ್ಯಗಳ ಬಹೂಪಯೋಗಿ ಗುಣಗಳನ್ನು ತಿಳಿಯಬಹುದಾಗಿದೆ. ಇಂಥ ಅಧ್ಯಯನ ನಡೆದ ಪಕ್ಷದಲ್ಲಿ ಆ ದೇಶದ ವೈದ್ಯಕೀಯ ಕ್ಷೇತ್ರ ಸಂಪದ್ಭರಿತವಾಗುತ್ತದೆ.

ಪ್ರಸ್ತುತ ಅಧ್ಯಯನದಲ್ಲಿ ಒಂದು ಜಿಲ್ಲೆಯ ಪ್ರಾದೇಶಿಕ ವ್ಯಾಪ್ತಿಯಲ್ಲಿ ಸಂದರ್ಶಿಸಿರುವ ವೈದ್ಯರ ಔಷಧೋಪಚಾರದಲ್ಲಿ ಬಂದಿರುವ ಔಷಧೀಯ ಸಸ್ಯಗಳ ಒಟ್ಟು ಸಂಖ್ಯೆ 406, ಇವುಗಳಲ್ಲಿ 41 ಸಸ್ಯಗಳು ವಿಶೇಷವೆನಿಸಿವೆ. ಈ 41 ಸಸ್ಯಗಳನ್ನು ವೈದ್ಯರೊಂದಿಗಿನ ನಿರಂತರ ಒಡನಾಟದಿಂದ ಗುರುತಿಸಿ ಕೊಂಡು ಹರ್ಬೇರಿಯಂ ಮಾಡಲಾಯಿತು. ನಂತರ ಸಸ್ಯಶಾಸ್ತ್ರಜ್ಞ ಡಾ. ಮಾಗಡಿ ಆರ್. ಗುರುದೇವ ರವರು ಇವುಗಳಲ್ಲಿ 15 ಸಸ್ಯಗಳಿಗೆ ಸಸ್ಯಶಾಸ್ತ್ರೀಯ ಹೆಸರುಗಳನ್ನು ಕೊಟ್ಟಿರುತ್ತಾರೆ. ಹೀಗೆ ವಿಶೇಷವಾದಂತಹ 41 ಸಸ್ಯಗಳ ಸಂಕ್ಷಿಪ್ತ ಪರಿಚಯವನ್ನು ಈ ಭಾಗದಲ್ಲಿ ಮಾಡಿಕೊಡಲಾಗಿದೆ. ಕರ್ನಾಟಕದ ಮಟ್ಟಿಗೆ ಈ ಸಸ್ಯಗಳಲ್ಲಿ ಕೆಲವಾದರೂ ಹೊಸವೆಂದು ಹೇಳಿದರೆ ತಪ್ಪಾಗಲಾರದೆಂದು ತಿಳಿದಿದ್ದೇನೆ.

1. ಅಂಟರಿಕೆ ಹುಲ್ಲು : ಹುಲ್ಲಿನ ಜಾತಿಗೆ ಸೇರಿದೆ. ಸಾಮಾನ್ಯವಾಗಿ ಹೊಲಗಳಲ್ಲಿ ಬೆಳೆಯುತ್ತದೆ. ಅರೆತಲೆನೋವಿಗೆ ಇದರ ಎಲೆಯ ರಸವನ್ನು ಮೂಗಲ್ಲಿ ಎರಡು ಹನಿಗಳನ್ನು ಹಿಂಡುತ್ತಾರೆ(17) ಕಿವಿಸೋರುವುದಕ್ಕೆ, ಉಗುರು ಸುತ್ತಿಗೆ ಇದನ್ನು ಬಳಸುತ್ತಾರೆ ಹಾಗೂ ವಶೀಕರಣದಲ್ಲೂ ಇದರ ಬಳಕೆ ಇದೆ.

2. ಅಂಟುತೊಗರಿ : ಒಂದರಿಂದ ಎರಡು ಅಡಿಗಳ ವರೆಗೆ ಬೆಳೆಯುತ್ತದೆ. ಎಲೆಗಳು ಅಂಟಾಗಿರುತ್ತವೆ. ಅವುಗಳ ಮೇಲೆ ಸಣ್ಣ ರೋಮಗಳಿರುತ್ತವೆ. ದನಗಳ ಕಪ್ಪುನಾಲಿಗೆಯಲ್ಲಿ ಬಳಸುತ್ತಾರೆ.(45)

3. ಅಜ್ಜಿ ಸ್ಯಾಟದ ಗಿಡ : ಮನೆಯ ಸುತ್ತ ಮತ್ತು ಹೊಲಗಳಲ್ಲಿ ಬೆಳೆಯುವ ಸಸ್ಯ ತಲೆನೋವಿಗೆ ಇದರ ಎಲೆಗಳ ರಸಕ್ಕೆ ಸುಣ್ಣ ಮತ್ತು ಬೆಲ್ಲವನ್ನು ಸೇರಿಸಿ ಹಣೆಗೆ ಹಚ್ಚಿಕೊಳ್ಳಬೇಕು. (2).

4. ಅಡವಿ ಕಡ್ಲೆ – Hibicus vitifalius L. : ಬಿಳಿಕರೆಯ ನಿಯಂತ್ರಣಕ್ಕೆ ಇತರ ಗಿಡಗಳೊಂದಿಗೆ ಇದರ ಎಲೆಗಳನ್ನು ಬಳಸಲಾಗುವುದು. (26) ವಾಯು ಮತ್ತು ಹುಣ್ಣುಗಳಲ್ಲೂ ಇದರ ಬಳಕೆ ಇದೆ.

5. ಅಡವಿ ಎಳ್ಳು : ಹೊಲದಲ್ಲಿ ಬೆಳೆಯುವ ಎಳ್ಳಿನಂತೆಯೇ ಇರುತ್ತದೆ. ಆದರೆ ಎಲೆಗಳು ಉದ್ದನಾಗಿದ್ದು ಅಗಲ ಕಡಿಮೆ ಇರುತ್ತವೆ. ಗುಲಾಬಿ ಬಣ್ಣದ ಹೂವು ಬಿಡುತ್ತದೆ. ಮೈಯಲ್ಲಿ ಗುಳ್ಳೆ ಬಂದಾಗ ಇದರ ಎಲೆಯ ರಸವನ್ನು ಅಡವಿ ಹುಳ್ಳಿಯ ಎಲೆ ರಸದೊಂದಿಗೆ ಹಚ್ಚುಬೇಕು. (125)

6. ಅಡವಿ ಹಲಸಿನ ಗಡ್ಡೆ : ಅಪರೂಪದ ಈ ಮೂಲಿಕೆ ಕೆಂಪು ನೆಲದಲ್ಲಿ ಮಾತ್ರ ಬೆಳೆಯುತ್ತದೆ. ಹಾವಿನ ವಿಷಕ್ಕೆ ಇದರ ಗಡ್ಡೆಯನ್ನು ಅಗಿದು ತಿನ್ನುತ್ತಾರೆ. (67) ಮಂಡಿ ನೋವಿಗೆ ಮೇಕೆಹಾಲಿನಲ್ಲಿ ಗಡ್ಡೆಯನ್ನು ಕುದಿಸಿ ಹಚ್ಚಿಕೊಳ್ಳುತ್ತಾರೆ. (1)

7. ಅರಪಟಗ : ಅಡವಿಯಲ್ಲಿ ಬೆಳೆಯುತ್ತಾರೆ. ಯಾವ ಔಷಧಿಯಿಂದಲೂ ಮಕ್ಕಳ ಜ್ವರ ಕಡಿಮೆಯಾಗದಿದ್ದರೆ ಸಾಸುವೆ ಕಾಳಿನಂತಿರುವ ಇದರ ತನೆಗಳನ್ನು ಬೆಲ್ಲದೊಂದಿಗೆ ಕುದಿಸಿ ಕುಡಿಸುತ್ತಾರೆ. (25)

8. ಆನೆ ನೆಗ್ಗಿಲು – Pedalium murex L. : ಮಕ್ಕಳ ಫಲ, ನಿಃಶಕ್ತಿ ನಿವಾರಣೆ, ವೃಷಣಗಳ ಬಾವು, ಮೈಚುರುಕು ಮುಂತಾದ ಕಾಯಿಲೆಗಳಿಗೆ ಉಪಯೋಗಿಸುತ್ತಾರೆ. (83)

9. ಇಲಿಕಿವಿ ಬಳ್ಳಿ – Merremiagangetia (L.) cuf. : ಇದು ಎರೆಭೂಮಿಯಲ್ಲಿ ಬೆಳೆಯುತ್ತದೆ. ಸಕ್ಕರೆ ಕಾಯಿಲೆಗೆ ಇದರ ಎಲೆಗಳನ್ನು ಸೇವನೆ ಮಾಡಲಾಗುತ್ತದೆ. (117)

10. ಉಲ್ವೆಸೊಪ್ಪು : ಸುಣ್ಣ ಮಿಶ್ರಿತ ಬಿಳಿ ಮಣ್ಣಿನಲ್ಲಿ ಬೆಳೆಯುತ್ತದೆ. ಕುರಿ–ಮೇಕೆಗಳು ಉಬ್ಬಿಕೊಂಡಾಗ ಮಜ್ಜಿಗೆಯಲ್ಲಿ ಈ ಸೊಪ್ಪನ್ನು ಅರೆದು ಕುಡಿಸುತ್ತಾರೆ. (53.)

11. ಊಸ್ ತೊಂಡೆ – Mukia maderas patana (L.) Roemer : ಮಕ್ಕಳ ಕೆಮ್ಮಿಗೆ ಇದರ ಹಣ್ಣುಗಳನ್ನು ತಿನ್ನಲು ಕೊಟ್ಟಾಗ ಕೆಮ್ಮು ನಿಂತು ಹೋಗುತ್ತದೆ. ಬಳ್ಳಿ ಕೆಟ್ಟವಾಸನೆಯಿಂದ ಕೂಡಿರುತ್ತದೆ. (108.) ಸಕ್ಕರೆ ಕಾಯಿಲೆಗೂ ಇದನ್ನು ಬಳಸುತ್ತಾರೆ.

12. ಎರ್ ಬಕ್ಕಡಿ : ನೆಲದಿಂದ ಎರಡು ಅಡಿಗಳವರೆಗೆ ಬೆಳೆಯುವ ಇದು ನವಿಲಿನ ಜುಟ್ಟಿನ ಆಕಾರದಲ್ಲಿ ಕಡುಕೆಂಪನೆಯ ಹೂವಿನ ಗುಚ್ಚವನ್ನು ಬಿಡುತ್ತದೆ. ಉಷ್ಣ ಆದವರು ಇದರ ಕಾಂಡವನ್ನು

ತಿನ್ನುತ್ತಾರೆ. ಬಿಳಿಚಿಬ್ಬು ಇರುವಲ್ಲಿ ಇದರ ಕಾಂಡವನ್ನು ಮುರಿದು ತಿಕ್ಕುತ್ತರೆ. (೩೯)

13. ಒಂಟಿ ಎಲಗ : ಸಾಮಾನ್ಯವಾಗಿ ಬೇಲಿಯ ಮೇಲೆ ಬೆಳೆಯುತ್ತದೆ. ಕೈಕಾಲುಗಳು ಮುರಿದಾಗ ಇದರ ಎಲೆಗಳನ್ನು ಅರೆದು ಕಟ್ಟುತ್ತಾರೆ. ಇದರಿಂದ ಮುರಿದ ಭಾಗ ಕೂಡಿಕೊಳ್ಳಲು ಅನುಕೂಲವಾಗುತ್ತದೆ. (152)

14. ಕಣ್ಪಾಲಿಟ್ಟಿನ ಗಿಡ : ಹೊಲಗಳಲ್ಲಿ ಮುಂಗಾರಿನ ವೇಳೆಯಲ್ಲಿ ಬೆಳೆಯುತ್ತದೆ. ಇದರ ಕಪ್ಪನೆಯ ಬೀಜದ ತಿರುಳನ್ನು ನುಣ್ಣನೆ ಅರೆದು. ಕಣ್ಣಕೆಂಪಾದವರ ಕಣ್ಣುಗಳಲ್ಲಿ ರಾತ್ರಿ ಮಲಗುವಾಗ ಹಾಕುತ್ತಾರೆ. ಬೆಳಗಿನ ವೇಳೆಗೆ ಕಣ್ಣುಗಳ ಕೆಂಪು ಹೊರಟು ಹೋಗಿರುತ್ತದೆ (118)

15. ಕಾಕ್ ಮಾಕನ ಗಡ್ಡೆ : ಹೊಸದುರ್ಗ ಮತ್ತು ಹೊಳಲ್ಕೆರೆ ಭಾಗಗಳಲ್ಲಿ ಕಂಡುಬರುತ್ತದೆ. ಮನುಷ್ಯರ ಹಾಗೂ ಪಶುಗಳ ಹಾವಿನ ವಿಷಕ್ಕೆ ಗೆಡ್ಡೆಯನ್ನು ಅರೆದು ಕುಡಿಸುತ್ತಾರೆ. (198) ಇದನ್ನು ಮನೆಯಲ್ಲಿ ಇಟ್ಟುಕೊಳ್ಳುವುದು ಶುಭ ಎಂದು ಜನ ಭಾವಿಸಿದ್ದಾರೆ.

16. ಕಾಡು ಹುರುಳಿ : ನೋಡಲು ಹೊಲದಲ್ಲಿ ಬೆಳೆಯುವ ಹುರುಳಿಯನ್ನೇ ಹೋಲುತ್ತದೆ. ಆದರೆ ಕಾಯಿಯಲ್ಲಿ ಎರಡು ಬೀಜಗಳಿರುತ್ತವೆ. ಮೈಯಲ್ಲಿ ಗುಳ್ಳೆಗಳು ಬಂದಾಗ ಇದರ ಎಲೆಗಳ ರಸ ಮತ್ತು ಅಡವಿ ಎಳ್ಳಿನ ಎಲೆಗಳ ರಸವನ್ನು ಹಚ್ಚುವುದು. (125)

17. ಕಾಡುಮೆಣಸಿನ ಗಿಡ – Toddalia asiatica (L.) Lam. : ಇದರ ಎಲೆಯ ಮೇಲೆ ಮತ್ತು ಕೆಳಗೆ ಕೊಕ್ಕೆಯ ಆಕಾರದ ಮುಳ್ಳುಗಳಿರುತ್ತವೆ. ಇದೊಂದು ಪೊದೆ. ಯಾವುದೇ ವಿಷ ಜಂತು ಕಡಿದಾಗ ಇದರ ಎಲೆಗಳನ್ನು ಮೆಣಸು, ಬೆಳ್ಳುಳ್ಳಿಗಳೊಂದಿಗೆ ಅರೆದು ಒಂದು ಗುಳಿಗೆ ನುಂಗಿಸಿದರೆ ವಿಷ ಪರಿಹಾರವಾಗುತ್ತದೆ. (30) ಇನ್ನೂ ಸುಮಾರು ಹತ್ತು ಕಾಯಿಲೆಗಳಿಗೆ ಇದನ್ನು ಬಳಸುತ್ತಾರೆ.

18. ಕಾಡುಗೆಂಜರಿ – Zalea decandra (L.) N. Burman : ಯಾವುದೇ ವಿಷಜಂತು ಕಡಿದರೂ ಇದರ ಎಲೆ ಇಲ್ಲವೇ ಬೇರನ್ನು ಅಗಿದು ತಿನ್ನುತ್ತಾರೆ. (73) ಹೊಟ್ಟೆಯೊಳಗಿರುವ ಗಡ್ಡೆಗಳನ್ನು ಕರಗಿಸಲೂ ಇದನ್ನು ಬಳಸುತ್ತಾರೆ.

19. ಕಾಡು ಹತ್ತಿ : ಬೆನ್ನು ಹುಣ್ಣು ಸೇರಿದಂತೆ ಇತರ ಎಲ್ಲಾ ಬಗೆಯ ಹುಣ್ಣುಗಳನ್ನು ಗುಣಪಡಿಸುವಾಗ ಇದರ ಎಲೆಗಳನ್ನು ಬಳಸುತ್ತಾರೆ. (84)

20. ಕಾಡು ನುಗ್ಗೆ : ಇದು ನೋಡಲು ತೋಟದಲ್ಲಿ ಬೆಳೆಯುವ ನುಗ್ಗೆಯ ಮರದ ಹಾಗೆ ಕಾಣುತ್ತದೆ. ಆದರೆ ಇದರ ಸೊಪ್ಪನ್ನು ದನಗಳು ಮತ್ತು ಮನುಷ್ಯರು ತಿನ್ನುವುದಿಲ್ಲ. ಬಹಳ ವಿಷದಿಂದ ಕೂಡಿರುತ್ತದೆ. ಬೇರುಗಳಿಂದಲೇ ಇದು ಚಿಗುರುತ್ತದೆ. ಇದರ ಬೇರನ್ನು ಹುಚ್ಚು ಹಿಡಿದವರಿಗೆ ಮೆಣಸು ಬೆಳ್ಳುಳ್ಳಿಗಳೊಂದಿಗೆ ಕುಟ್ಟಿ ಹುಡುಗರ ಮೂತ್ರದಲ್ಲಿ ಕುದಿಸಿ ಕುಡಿಸುತ್ತಾರೆ. (140)

21. ಕಾವ್‌ಸೆಹುಲ್ಲು : ಮೂರು ತಿಂಗಳ ಒಳಗಿನ ಗರ್ಭವನ್ನು ಕರಗಿಸಲು ಇದರ ಬೇರನ್ನು ಬಳಸುತ್ತಾರೆ. (140)

22. ಕಿರುಕುಸಾಲೆ : ಜನಪದ ವೈದ್ಯರು ತಮ್ಮ ಔಷಧಿ ಕೊಡುವ ಮೊದಲು ಇದರ ಬೇರನ್ನು ರೋಗಿಗೆ ಜಗಿಯಲು ಕೊಡುತ್ತಾರೆ. ಇದರಿಂದ ಯಾವ ದೋಷವಿಲ್ಲದೆ ಔಷಧ ದೇಹಕ್ಕೆ ಹಿಡಿಯುತ್ತದೆ ಎಂದು ಹೇಳುತ್ತಾರೆ (74) ಮಕ್ಕಳ ಸಂತಾನ, ಎದೆಹಾಲು ವೃದ್ಧಿಯಾಗಲೂ ಇದನ್ನು ಬಳಸುತ್ತಾರೆ.

23. ಕೊಬರಿ ಬಳ್ಳಿ : ಇದರ ಎಲೆಗಳನ್ನು ಕುದಿಸಿ ನಂತರ ಕುದ್ದಿರುವ ನೀರನ್ನು ಸಕ್ಕರೆ ಕಾಯಿಲೆ ಇರುವವರು ಒಂದು ತಿಂಗಳ ಕುಡಿದರೆ ಕಾಯಿಲೆ ನಿಯಂತ್ರಣಕ್ಕೆ ಬರುತ್ತದೆ. (117)

24. ಗಗ್ರೆಗಿಡ : ಇದರ ಸೊಪ್ಪಿನ ಹೊಗೆಯನ್ನು ಹಾಕುವುದರಿಂದ ಹೆಜ್ಜೇನು ಹುಳುಗಳು ಓಡಿಹೋಗುತ್ತವೆ. ಅವುಗಳ ಕಡಿತಕ್ಕೆ ಎಲೆಯ ರಸವನ್ನು ಕುಡಿಸುತ್ತಾರೆ. ಮೈಗೆಲ್ಲ ಲೇಪಿಸುತ್ತಾರೆ. (152)

25. ಗ್ವಾವೆ ಮರ : ಕಾಮಾಲೆ ಬಂದವರು ಇದರ ಎಲೆಗಳನ್ನು ಬೆಳಗಿನ ವೇಳೆ ಸೇವಿಸಿದರೆ ರೋಗ ಗುಣವಾಗುತ್ತದೆ (57)

26. ಗಿಣಿಮೂತಿ ಗಡ್ಡೆ : ಮನುಷ್ಯರು ಮತ್ತು ದನಗಳ ಹಾವಿನ ವಿಷಕ್ಕೆ ಇದರ ಗಡ್ಡೆಯನ್ನು ಅರೆದು ಕುಡಿಸುತ್ತಾರೆ (108)

27. ಗುರುಮಿಡಿ : ಬಿಳಿಕರೆಗೆ ಇದರ ಸೊಪ್ಪನ್ನು ಮೆಣಸು, ಬೆಳ್ಳುಳ್ಳಿಗಳೊಂದಿಗೆ ಅರೆದು ಪ್ರತಿ ದಿನ ಒಂದು ಮಾತ್ರೆಯಂತೆ ಮೂರುದಿವಸ ಸೇವಿಸಿದರೆ ರೋಗ ನಿಯಂತ್ರಣಕ್ಕೆ ಬರುತ್ತದೆ (171) ಚರ್ಮರೋಗಗಳಲ್ಲಿ ಮುಖ್ಯವಾಗಿ ಇದನ್ನು ಬಳಸುತ್ತಾರೆ.

28. ತುಗ್ಗಲಿ ಮರ : ದನಗಳ ದಮ್ಮು ಬಂದಾಗ ಇದರ ತೊಗಟೆಯನ್ನು ಕುದಿಸಿ ಕುಡಿಸುತ್ತಾರೆ. (4)

29. ತೊಟ್ಟಿಲು ಬಳ್ಳಿ : ಬಂಜೆತನ ನಿವಾರಿಸಿ ತೊಟ್ಟಿಲ ಭಾಗ್ಯ ಕೊಡುವುದರಿಂದ ಇದಕ್ಕೆ ತೊಟ್ಟಿಲು ಬಳ್ಳಿ ಎಂಬ ಹೆಸರು ಬಂದಿದೆ. ಮಕ್ಕಳ ಸಂತಾನಕ್ಕೆ ಮತ್ತು ಮುಟ್ಟುದೋಷಕ್ಕೆ ಇದರ ಎಲೆ ಮತ್ತು ಬೇರನ್ನು ಸೇವಿಸುತ್ತಾರೆ. (24)

30. ದೊಡ್ಡಕಾಯಿ ಬಳ್ಳಿ : ಹಾವಿನ ವಿಷಕ್ಕೆ ಇದರ ಬೇರನ್ನು ಸೇವಿಸುತ್ತಾರೆ. (165) ಕಾಮಾಲೆಗೂ ಇದೇ ಬೇರನ್ನು ಸೇವಿಸಲಾಗುತ್ತದೆ. ಗುರುವು ಶಿಷ್ಯನಿಗೆ ವಿದ್ಯೆಯನ್ನು ಧಾರೆಯೆರೆಯುವುದು ಈ ಬಳ್ಳಿಯ ಸಾಕ್ಷಿಯಲ್ಲಿ.

31. ನೆಲಬಗ್ಗಿನ ಗಿಡ : ಇದರ ಎಲೆಯ ರಸವನ್ನು ಹಣೆಗೆ ತಿಲಕವಾಗಿ ಇಟ್ಟುಕೊಂಡವರಿಗೆ ಎದುರು ಬರುವವರೆಲ್ಲರೂ ತಲೆಬಗ್ಗಿಸಿ ವಿನಯವನ್ನು ತೋರುತ್ತಾರೆ (117)

32. ನೆಲಸಂಪಿಗೆ : ಇದರ ಸೊಪ್ಪನ್ನು ಕಸಗಸೆ, ಕಲ್ಲುಸಕ್ಕರೆ, ಒಣದ್ರಾಕ್ಷಿಗಳೊಂದಿಗೆ ಅರೆದು ಸೇವಿಸಿದರೆ ಕೆಂಪುಮುಟ್ಟು ವಾಸಿಯಾಗುತ್ತದೆ. (166)

33. ಪಾಪಾಸುಕಳ್ಳಿ : ಉರಿ ಮೂತ್ರ ಬಂದವರು ಇದರ ಹಣ್ಣುಗಳನ್ನು ತಿಂದರೆ ದೇಹ ತಂಪಾಗಿ ಸಮಸ್ಯೆ ಪರಿಹಾರವಾಗುತ್ತದೆ. (108)

34. ಮುಳ್ಳುಸೊಂಡೆ ಬಳ್ಳಿ : ಬೆನ್ನು ಹುಣ್ಣು ಹಾಗೂ ಪಚ್ಚುಣ್ಣುಗಳಿಗೆ ಇದರ ಎಲೆಗಳನ್ನು ಮೆಣಸು, ಬೆಳ್ಳುಳ್ಳಿ, ಲವಂಗ, ವೀಳೆದೆಲೆ, ಕಾಡು ಮೆಣಸಿನ ಸೊಪ್ಪಿನೊಂದಿಗೆ ಅರೆದು ಹಚ್ಚಿದರೆ ಹುಣ್ಣುಗಳು ಗುಣವಾಗುತ್ತವೆ. (31)

35. ಮುಳ್ಳುಮೆಕ್ಕೆಕಾಯಿ : ಉಗುರು ಸುತ್ತು ಬಂದಾಗ ಇದರ ಕಾಯಿಯನ್ನು ಬೆರಳಿಗೆ ತೊಡಿಸುತ್ತಾರೆ. (70)

36. ಮೊಲದ ಕಿವಿ ಗಡ್ಡೆ : ದನ ಕುರಿಗಳ ಹಾಲನ್ನು ಹೆಚ್ಚಿಸಲು ಈ ಗಡ್ಡೆಯನ್ನು ಸಜ್ಜೆ ನುಚ್ಚು, ಹುರುಳಿ ನುಚ್ಚುಗಳೊಂದಿಗೆ ತಿನ್ನಿಸಿದರೆ. ಹಾಲು ವೃದ್ಧಿಯಾಗುತ್ತದೆ. (118)

37. ರಕ್ತಮಾರೆಗಿಡ : ಕಡಿದುಕೊಂಡು ಗಾಯ, ಸುಟ್ಟಗಾಯಗಳಿಗೆ ಇದರ ಎಲೆಯ ರಸವನ್ನು ಹಚ್ಚಿದರೆ ಬಹುಬೇಗ ಗಾಯ ಗುಣವಾಗುತ್ತದೆ. (118)

38. ವಜ್ರಮುಷ್ಟಿ : ದನಗಳ ಮೈಯಲ್ಲಿನ ಕೂದಲುಗಳು ಉದುರಿದರೆ ಇದರ ಎಲೆಗಳನ್ನು ವೀಳೆದೆಲೆ ತುಂಬು, ಮೆಣಸು, ಬೆಳ್ಳುಳ್ಳಿಗಳೊಂದಿಗೆ ಅರೆದು ಹಚ್ಚಿದರೆ ಸಮಸ್ಯೆ ಪರಿಹಾರವಾಗುವುದು (95)

39. ಸುಪ್ಪತ್ತಿಗೆ – Hyptis suaveolens (L.) poit : ಮಕ್ಕಳ ಅಳ್ಳಕಾಯಿಲೆ ಬರದಂತೆ ಐದು ತಿಂಗಳ ಗರ್ಭಿಣಿಗೆ ಇದರ ಕುಡಿಗಳನ್ನು ಬೇವಿನ ಕುಡಿ, ಮರಾಲೆ ಕುಡಿಗಳೊಂದಿಗೆ ಅರೆದು ನುಂಗಿಸುತ್ತಾರೆ. (170)

40. ಹರದಚ್ಚುಗ – Zornia gibbosa spanoghe : ಮನುಷ್ಯರ ಮತ್ತು ದನಗಳ ಕಾಲು ಮುರಿದರೆ ಇದರ ಎಲೆಯನ್ನು ಮೇಕೆಹಾಲಿನಲ್ಲಿ ಅರೆದು ಕುಡಿಸುತ್ತಾರೆ. ಇದರಿಂದ ಮುರಿದ ಮೂಳೆ ಕೂಡಿಕೊಳ್ಳುತ್ತದೆ. (204) ವಶೀಕರಣದಲ್ಲಿಯೂ ಇದರ ಬಳಕೆ ಇದೆ.

41. ಹೊರ ಮುಚ್ಚಗ – Biophytum sensitivum (L.) DC. : ಹಾವಿನ ವಿಷಕ್ಕೆ ಇತರ ಗಿಡಗಳೊಂದಿಗೆ ಈ ಗಿಡದ ಸಮೂಲವನ್ನು ಸೇರಿಸಿ ಕುಡಿಸುತ್ತಾರೆ. (185) ದನಗಳ ಮೈಹೊರಡುವುದಕ್ಕೂ ಇದನ್ನು ಬಳಸುತ್ತಾರೆ.

ಅಪರೂಪದ ಔಷಧೀಯ ಸಸ್ಯಗಳ ಛಾಯಚಿತ್ರಗಳು










05


06


07


08


09


10


11


12


13


14




16


17


18


19


20



21


22


23


24


25


26


27


28


29


30


31



32




34



35



36


37


38


39


40


41











ಆ) ಅಧ್ಯಯನದಲ್ಲಿ ಬರುವ ಔಷಧೀಯ ಸಸ್ಯಗಳು

[ಸೂಚನೆ : ಸಸ್ಯ ಶಾಸ್ತ್ರೀಯ ಹೆಸರುಗಳನ್ನು ಕೊಡಲು ಸಾಧ್ಯವಾಗದವುಗಳಿಗೆ ಸ್ಥಳೀಯ ಹೆಸರುಗಳನ್ನು ಕೊಡಲಾಗಿದೆ.]

ಕನ್ನಡದ ಸ್ಥಳೀಯ ಹೆಸರುಗಳು	ಸಸ್ಯಶಾಸ್ತ್ರೀಯ ಹೆಸರುಗಳು	ಕುಟುಂಬ
1. ಅಂಜೂರದ ಮರ	Ficus callosa willd.	MORACEAE
2. ಅಂಕೊಲೆ (ಹೂಡಿಗೆ ಮರ)	Alangiun Salvifolirm(L.f.)Wang.	ALANGIACEAE
3. ಅಂತರಗಡ್ಡೆ		
4. ಅಂಟರಿಕೆ ಹುಲ್ಲು		
5. ಅಂಟು ತೊಗರಿ		
6. ಅಂಟುವಾಳ	Sapindus laurifolia vahl	SAPINDACEAE
7. ಅಡವೆ ಎಳ್ಳು		
8. ಅಚ್ಚೆಮರ		
9. ಅಜ್ಜವಾನದ ಸೊಪ್ಪು		
10. ಅಜ್ಜಿಗಡ್ಡೆ ಬೇರು		
11. ಅಜ್ಜಿಸ್ಯಾಟದ ಗಿಡ (ಕೋಳಿಕೊಕ್ಕನ ಗಿಡ)		
12. ಅತ್ತಿಮರ	Ficus racemasa L.	MORACEAE
13. ಅರ್ಧನಾರಿಗಿಡ		
14. ಅಡಕಲಿ ಸೊಪ್ಪು		
15. ಅಡವೆಕಡ್ಲೆ ಗಿಡ (ಗೋದಿಬುಡ್ಡಿನ ಗಿಡ, ಒಡ್ಡರಮುದ್ದೇಗಿಡ)	Hibiscus vitifolius L.	MALVACEAE
16. ಅಡವಿಗೆಂಜರಿ (ಜಿಳಿಗೆಂಜರಿ)	Zalea decandra (L.) N. Burman	AIZOACEAE
17. ಅಡವಿಗೋಣಿ ಸೊಪ್ಪು		
18. ಅಡವಿತೊಗಸೆ ಸೊಪ್ಪು		
19. ಅಡವಿ ನುಗ್ಗೆ		
20. ಅಡವಿ ಮೂಲಂಗಿ		
21. ಅಡವಿ ಸಗಸೆ		
22. ಅಡವಿ ಸಿಟ್ಟೆಟ್ಲಗಡ್ಡೆ (ಅಡವಿ ಹಲಸಿನಗಡ್ಡೆ)		
23. ಅಡವಿ ಶುಂಠಿ		
24. ಅಡವೆ ಹುಳ್ಳಿ (ಮೇಟಿಹುಳ್ಳಿ)		
25. ಅಡ್ಡಿಕೆ ಸೊಪ್ಪು (ಗೆಜ್ಜಡಿಕೆ ಸೊಪ್ಪು, ಟೀಕೆ ಸೊಪ್ಪು)	Tridax procumbens L.	ASTERACEAE
26. ಅಮಟೆಕಾಯಿ	spondias pinnata (L.f.) kurz	ANACARDIACEAE
27. ಅರಿಶಿಣ	*curcuma domestica valeton	ZINGIBERACEAE

28. ಅಟಕುಮಾವಿನ ಬಳ್ಳಿ	Boerhavia diffusa L.	NYCTAGINACEAE
29. ಅಣಬೆ	Agaricus campestris L.	AGARICACEAE
30. ಅಮೃತ ಬಳ್ಳಿ (ಜನಿವಾರದ ಬಳ್ಳಿ)	Tinospora cordifolia(Wild.) Miers.	MENISPERMACEAE
31. ಅರಳಿ ಮರ (ರಾಗಿ ಮರ)	Ficus religiosa L.	MORACEAE
32. ಅರಪಟುಗ		
33. ಅರಮೆಣಸಿನ ಸೊಪ್ಪು		
34. ಅರಬೇವಿನ ಸೊಪ್ಪು	melia azedarachL.	MELIACEAE
35. ಅವರೆ ಸೊಪ್ಪು	Lablab Purpureus (L.) sweet	FABACEAE
36. ಅಶೋಕ ಮರ	saraca a soca (Roxb.) wilde	CAESALPINIACEAE
37. ಅಶ್ವಗಂಧಿ (ಹಿರೆಮದ್ದಿನ ಗಡ್ಡೆ)	Withamia somnifera (L.) Dunal	SOLANACEAE
38. ಅಳಲೆಕಾಯಿ ಮರ	Terminalia chebula Retz.	COMBRETACEAE
39. ಆಡುಮುಟ್ಟದ ಬಳ್ಳಿ	Tylophora indica(N. Burman)Merrill	ASCLEPIADACEAE
40. ಆಡುಸೋಗೆ (ಅಡ್ಡ ಸೆರಗಿನ ಗಿಡ)	Adhatoda Zeylanica Medic.	ACANTHACEAE
41. ಆದಿನಾರಾಯಣ ಸೊಪ್ಪು		
42. ಆನಿವಾಳ ಸೊಪ್ಪು		
43. ಆನೆನೆಗ್ಗಿಲು	Pedalium murex L.	PEDALIACEAE
44. ಆಲದಮರ	Ficus berghalensis L.	MORACEAE
45. ಆಸೀನ ಮರ		
46. ಇಂಗ್ಸಾರದ ಮರ	Balanites roxburghii plarchon	SIMAROUBACEAE
47. ಇಲಿಕಿವಿ ಬಳ್ಳಿ	Merremiagangetia (L.) cuf.	CONVOLVULACEAE
48. ಇಸುಬಿನ ಸೊಪ್ಪು (ಕಡ್ಡಿ ಬಳ್ಳಿ ಸೊಪ್ಪು)		
49. ಇಸುಮದಾರಿ	*clerodendrum inerme(L.) Gaether	VERBENACEAE
50. ಇಂಗು	*Ferula assafoetida L.	APIACEAE
51. ಈಚಲ ಬಳ್ಳಿ		
52. ಈಚಲ ಮರ	Phoenix sylvestris (L.) Roxb.	ARECACEAE
53. ಈರುಳ್ಳಿ	*Allium cepaL.	LILIACEAE
54. ಈಶ್ವರಿ ಬಳ್ಳಿ (ನಲ್ಲೀ ಬಳ್ಳಿ)	Aristolochia indica L.	ARISTOLOCHIACEAE
55. ಉಗಣಿ ಬಳ್ಳಿ	Argyreia elliptica (Roth) choisy	CONVOLVULACEAE
56. ಉತ್ತರಾಣಿ ಬೇರು	Achyranthes aspera L.	AMARANTHACEAE
57. ಉತ್ತತ್ತಿ ಗಿಡ	* Phoenix dactylifera L.	ARECACEAE
58. ಉಪ್ಪಿನ ಬಳ್ಳಿ		
59. ಉಪ್ಪು ಸೊಪ್ಪು		

60. ಕರಿಉಮ್ಮತ್ತಿ (ಕರೆಮೂತಿಗಿಡ)	Datura metel L.	SOLANACEAE
61. ಉಲ್ವೆಸೊಪ್ಪು		
62. ಊಸ್ ತೊಂಡೆ	Mukia Maderas patana (L.) Roemer	CUCURBITACEAE
63. ಎಕ್ಕೆಗಿಡ	Calotropis gigantea (L.) R.Br.	ASCLEPIADACEAE
64. ಎತ್ತಿನ ನಾಲಿಗೆ	Trichodesma zeylanicum (N. Burman)	BORAGINACEAE
65. ಎರ್ದುಂಬೆ (ಗಗ್ರೆಗಿಡ)	Leonotis nepetifolia (L.) R.Br.	LAMIACEAE
66. ಎಡಮುರಿ	Helicteres isora L.	STERCULLIACEAE
67. ಎಡತೆರೆಗಿಡ (ಒಡಮನ ಕುಡಿ)	Dichrostachys cinerea (L.)	MIMOSACEAE
68. ಎಲೆಗಳ್ಳಿ		
69. ಎಲೆ ಮಂಡ್ಗಳ್ಳಿ		
70. ಎಳ್ಳು	*sesamum orientale L.	PEDALIACEAE
71. ಎಲುಬು ಸಂದಿನಗಿಡ		
72. ಎಸಗೆ ಗಿಡ (ಉಪ್ಪೆಸೊಪ್ಪು, ಹಿಪ್ಪೆಮಣಿ)	Azima tetracantha Lamk.	SALVADORACEAE
73. ಏರಿನ ಚಕ್ಕೆ		
74. ಏಲಾರೆ ಮರ (ದೊಡ್ಡಮರ, ಫಲವರಿಕೆ)	Ailanthus malabarico	
75. ಏಳುಗೇಣಿನ ಸೊಪ್ಪು		
76. ಏಳೆಲೆ ಬಳ್ಳಿ		
77. ಐದೆಲೆ ಬಳ್ಳಿ		
78. ಒಂದೆಲಗ (ಬ್ರಾಹ್ಮೀ)	Centella asiatica (L.) Urban	APIACEAE
79. ಒಂಟೆಲೆ ಬಳ್ಳಿ		
80. ಔಡಲ (ಹರಳುಗಿಡ)	* Ricinus communis L.	EUPHORBIACEAE
81. ಕಕ್ಕರೆಕಾಯಿ ಸೊಪ್ಪು		
82. ಕತ್ತಾಳೆ		
83. ಕತ್ತೆ ಕಿರುಬನ ಸೊಪ್ಪು	Aristalochia bracteolata Lam.	ARISTOLOCHIACEAE
84. ಕತ್ತೆ ಕಿವಿಸಹದೇವಿ		
85. ಕಟುಕುರೋಹಿಣಿ	*picrorhiza Scrophulariiflora	SCROPHULARIACEAE
86. ಕಡಲೆಗಿಡ	*cicer arietinum L.	FABACEAE
87. ಕಡ್ಡಿ ಬಳ್ಳಿ		
88. ಕಡ್ಡಿಕಳ್ಳಿ (ಕೋಲುಗಳ್ಳಿ)	Euphorbia tirucalli L.	EUPHORBIACEAE
89. ಕಣಗಲ ಹೂವು	Neriun indicum Miller	APOCYNACEAE
90. ಕಣ್ಣು ಗುಂಬಳಿ		
91. ಕಣ್ಣು ಸೊಪ್ಪು		

92. ಕಣ್ಣಾಲಿಟ್ಟಿನ ಗಿಡ		
93. ಕಬ್ಬಿನ ಸೂಲಂಗಿ	*saccharum officinarum L.	POACEAE
94. ಕಬ್ಬಿಗಿಡ		
95. ಕಮಲ	Nelumbo nucifera Gaertn.	NELUBONACEAE
96. ಕರಿಬೇವು	Murraya koenigii (L.) sprengel	RUTACEAE
97. ಕರಿಭಂಟ		
98. ಕರೆನುಗ್ಗೆ		
99. ಕರೆಕಾಶಿಗಿಡ		
100. ಕರೆಹುಲಿಪೊದೆ (ಹುಲಿಕೊನೆ)	Kirganelia reticulata (poiret)	EUPHORBIACEAE
101. ಕರೆತುಳಸಿ		
102. ಕರೆಕಡ್ಡಿ		
103. ಕರೆಕುರ್ಚಿಬೇರು		
104. ಕರೆನಾಗಿ ಸೊಪ್ಪು		
105. ಕಲ್ಲಂಗಡಿ	*citrullus lanatus (Thunb.)	CUCURBITACEAE
106. ಕಲ್ಲುಕಗ್ರ		
107. ಕಲ್ಲುದಂಡೆ		
108. ಕವಳೆಗಿಡ	carissa carandas L.	APOCYNACEAE
109. ಕಸ್ತೂರಿ ಜಾಲಿ	Acacia farnesiana Willd.	MIMOSACEAE
110. ಕಸ್ತೂರಿ	*Delphinium brunonianum Royle	ANUNCULACEAE
111. ಕಸ್ತೂರಿ ಅರಿಶಿಣ	curcuma aromatica salisb.	ZINGIBERACEAE
112. ಕಾಡು ಹತ್ತಿ	Ficus hispida L.f.	MORACEAE
113. ಕಾಕ್ ಮಾಕನ ಗಡ್ಡೆ		
114. ಕಾಡುಕವಡೆಬಳಿ		
115. ಕಾಡು ಜೀರಿಗೆ	Centratherum anthelminticum (Wild.) O.Kuntze	ASTERACEA
116. ಕಾಡು ತುಳಸಿ	ocimum gratissimum L.	LAMIACEAE
117. ಕಾಡು ನಿಂಬೆ	Atalantia monophylla (L.) correa	RUTACACE
118. ಕಾಡು ಬಿಳಿಜೋಳ		
119. ಕಾಡು ಮೆಣಸಿನ ಗಿಡ (ಅಲ್ಕಾರೆ ಸೊಪ್ಪು)	Toddalia asiatica (L.) Lam.	RUTACEAE
120. ಕಾಡು ಮೆಂತ್ಯ ಸೊಪ್ಪು		
121. ಕಾರ್ಗಿಲ ಗಿಡ		
122. ಕಾಡು ಮಲ್ಲಿಗೆ	Jasminum orgustifolium (L.) willd	OLEACEAE
123. ಕಣ್ಣಾರೆ ಸೊಪ್ಪು		

124. ಕಾಮಕಸ್ತೂರಿ (ಕಂಕಗ್ರಗಿಡ)	ocimum basilicum L.	LAMIACEAE
125. ಕಾಯಿ ಕಣ್ಣು		
126. ಕಾರೇಗಿಡ	Canthium Parviflorum Lam.	RUBIACEAE
127. ಕಾವ್‌ಸೆಹುಲ್ಲು		
128. ಕಿರುಕುಸಾಲೆ (ಸರ್ವಲಿಂಗನ ಬೇರು)	Amaranthus blitum L.	MARANTHACEAE
129. ಕುಲ್ಬಿಗನ ಎಲೆ (ಬೂದಿ ಎಲೆ, ಮೇಕೆ ಮೊಲೆ ಬಳ್ಳಿ)	Pergularia daemia (Farsskal) chiov.	ASCLEPIADACEAE
130. ಕುರುಸಾನಿ	*Guizotia abyssinica (L.f.) cass.	ASTERACEAE
131. ಕುರುಬರ ಗಡ್ಡೆ ಬೇರು		
132. ಕುರಿ ಹಾಲೇ ಬಳ್ಳಿ		
133. ಕುಪ್ಪೆಸೊಪ್ಪು	Acalypha indica L.	EUPHOBIACEA
134. ಕೂಡು ಮದ್ದಿನ ಮರ (ತೊರೆ ಮತ್ತಿ)	Terminalla arfuna (Roxb. ex. DC.) Wt. & Arn.	COMBRETACEAE
135. ಕೊಗ್ಗಿಗಿಡ (ಕಗ್ಗಿ ಸೊಪ್ಪು)		
136. ಕೊಡ ಪತ್ರೆ		
137. ಕೊಬ್ಬರಿಬಳ್ಳಿ (ಕಬ್ಬಿನ ಹಾಲಿನ ಬಳ್ಳಿ)	Sarcostemma Secamone (L.) Bennet	ASCLEPIADACEAE
138. ಕೊಕ್ಕರೆ ಬಳ್ಳಿ		
139. ಕೊಪ್ಪರಿಕೆ ಗಿಡ		
140. ಕೊಳವೆ ಹೂವಿನ ಸೊಪ್ಪು		
141. ಕೊಳವಂಕನ ಸೊಪ್ಪು.	Hygrophila auriculata (K.schum) Heine	ACANTHACEAE
142. ಕೋಣನ ಬಳ್ಳಿ		
143. ಕೋಲಣ್ಣೆ (ಅಣ್ಣೆ ಸೊಪ್ಪು)	Celosia argentea L.	AMARANTHACEAE
144. ಕೋಳಿ ಕಣವಲಗಡ್ಡೆ		
145. ಕುಂದಲಿ ಗಡ್ಡೆ (ಮೊಲದಕಿವಿ ಗಡ್ಡೆ)		
146. ಕೆಂಪು ದಾಸವಾಳ		
147. ಕೆಂಪು ಭೂತಾಳೆ		
148. ಗಜ್ಜುಗ	caesalpinia bonduc (L.) Roxb.	CAESALPINIACEAE
149. ಗರಿಕೆ	Cynodon doctylon(L.) pers.	POACEAE
150. ಗರುಗ (ಕಾಡುಗರುಗ)	Eclipta alba (L.) Hassk.	ASTERACEAE
151. ಗಾಂದಾರಿ		
152. ಗ್ವಾವೆ ಮರ (ಚಿಟ್‌ಗ್ವಾವೆ)		
153. ಗಿಣಿ ಮೂತಿ ಗಡ್ಡೆ (ಬಳೆ ತೋಳದ ಗಡ್ಡೆ)		

154. ಗುಬಸಿ ಹೂ	Barleria buxifalia L.	ACANTHACEAE
155. ಗುರುಮಿಡಿ		
156. ಗುಪ್ಪಟ್ಟೆ ಸಪ್ಪು		
157. ಗುರಿಗ್ಯಾಗಿಡ		
158. ಗುಲಗಂಜಿ	Abrus precatorius L.	FABACEAE
159. ಗುಳ್ಳೇಗಿಡ		
160. ಗೊಲ್ ಜಿಡ್ಡೇ ಸೊಪ್ಪು		
161. ಗೋಣಿಮರ		
162. ಗೋರಂಟಿ (ಮೆಹಂದಿ)	Lawsonia inermis L.	LYTHRACEAE
163. ಗೇರುಮರ	Semecarpus anacardium L.f.	ANACARDIACEAE
164. ಗಂಟು ಬಾರಂಗಿ	clerodendrum serratum (L.) moon	VERBENACEAE
165. ಚಕ್ಕಡಿ ಕಾಯಿ ಬಳ್ಳಿ		
166. ಚಚ್ಚೇಗಿಡ (ಬುಡ್‌ರಾಕ್ಷಿ)		
167. ಚಟ್ಟಂಬಳ್ಳಿ		
168. ಚಿಟ್ ಮೂಲಂಗಿ ಗಡ್ಡೆ		
169. ಚಿಟ್‌ಪುಟ್ ಕಾಯಿ		
170. ಚಿತ್ರಮೂಲ	Plumbago Zeylanica L.	PLUMBAGINACEAE
171. ಚಿಪ್ಪೆಸೊಪ್ಪು		
172. ಚೆಂಡುಹೂವಿನ ಗಿಡ	Tagetes erecta L.	ASTERACEAE
173. ಜುಟ್ಟು ಹೂವಿನ ಸೊಪ್ಪು		
174. ಜೂವೆಮರ	Ficus virens Aiton	MORACEAE
175. ಜಾಜಿ ಮಲ್ಲಿಗೆ	Jasminum officinale L.	OLEACEAE
176. ಜಾತಿ ಬೇರು		
177. ಜಾಪಾಳ ಗಿಡ	Euphorbia geniculata Ort.	EUPHORBIACEAE
178. ಜಾಲಿಮರ	Acacia nilotica (L.)	MIMOSACEAE
179. ಜೇಷ್ಠ ಮಧು	Glycyrrhiza glabra L.	FABACEAE
180. ಟೊಳ್ಳು ಮೂಲಂಗಿ		
181. ಡಮ್ಮುಗಳ್ಳಿ		
182. ತಪಸೀ ಮರ	Holoptelea intergrifolia (Roxb.) planchon	ULMACEAE
183. ತಲೆ ಕೀಳುವ ಚಕ್ಕೆ		
184. ತಲೆ ಬಗ್ಗಿನ ಗಿಡ (ನೆಲಬಗ್ಗಿನ ಗಿಡ)	Trichodesma indicum (L.) R.Br.	BORAGINACEAE
185. ತಳವಾರನ ಗಡ್ಡೆ		
186. ತಲ್ಲಿ ಮರ್ಪಲು		

187. ತಾರೇಸೊಪ್ಪು		
188. ತಾಳೆ ಮರ	Barassus flabellifer L.	ARECACEAE
189. ತೀಟೆ ಕಸ್ತೂರಿ	Tragia involucrata L.	EUPHORBIACEAE
190. ತೀಟ್ ಬಸ್ಲೆಗಡ್ಡೆ		
191. ತುಗ್ಗಲಿ ಮರ	Albizia amara (Roxb.) Boivin	MIMOSACEAE
192. ತುರಸಿಕಾಯಿ		
193. ತುಂಗೆ ಗಡ್ಡೆ	cyperus rotundus L.	CYPERANCEAE
194. ಶ್ರೀತುಳಸಿ ಗಿಡ (ಪತಿವ್ರತೆಗಿಡ)	ocimum tenuiflorum L.	LAMIACEAE
195. ತೆಕ್ಕಲಮಾರಿಗಿಡ		
196. ತೊಟ್ಟಿಲ ಬಳ್ಳಿ	capparis Zeylanica L.	CAPPARACEAE
197. ತೊಂಡೆ ಬಳ್ಳಿ (ಕೃಷ್ಣ ಕಾಂತಿ)	coccinia grandis (L.) Voigt	CUCURBITACEAE
198. ತಂಗಟೆ (ಆವರಿಕೆ, ಬಂಗಾರದ ಗಿಡ)	cassia auriculata	CAESALPINIACEAE
199. ತಂಬಾಕು	*Nicotiana tabacum L.	SOLANACEAE
200. ತುಂಬೆಗಿಡ	Leucas aspera (Wild.) spreng.	LAMIACEAE
201. ತೆಂಗಿನ ಮರ	*cocos nucifera L.	ARECACEAE
202. ದತ್ತೂರಿಗಿಡ	Argemone mexicana L.	PAPAVERACEAE
203. ದರ್ಬೆ	Saccharum spontaneum L.	POACEAE
204. ದಾಗಡಿ ಬಳ್ಳಿ	Cocculus hirsutus (L.) Diels	MENISPERMACEAE
205. ದಾಳಿಂಬೆ ಮರ	Punica granatum L.	PUNICACEAE
206. ದೀಪ ಕಣಗಲ (ಬೆಟ್ಟದ ಕಣಗಲ, ದೇವಕಣಗಲ)	Dillenia indica L.	DILLENIACEAE
207. ದುಂಡುಮಲ್ಲಿಗೆ	Jasminum sambac (L.) Aiton	OLEACEAE
208. ಧೂಪದ ಮರ		
209. ದೊಡ್ಡಕಾಯಿ ಬಳ್ಳಿ (ತೂಲೆಕಾಯಿ)	Cirtrullus colonythis (L.) schrader	CUCURBITACEAE
210. ದೊಡ್ಡಕಡಿದರೆ ಸೊಪ್ಪು		
211. ದೊಡ್ಡ ಗುಳಗದ ಕಾಯಿ		
212. ದೊಮ್ಮೆಗಡ್ಡೆ	Eulophia epidenanaea (Retz.)	ORCHIDACEAE
213. ನಗರಿಗಿಡ (ನಗರೆ ಚಕ್ಕೆ)		
214. ನರಸಲ್ಲೇಗಿಡ		
215. ನವಣೆ		
216. ನಸುಗುನ್ನಿ	Mucuna pruriens (L.) DC.	FABACEAE
217. ನಂಜುನಾರಾಯಣ		

218. ನಾಗದಾಳಿ	*Ruta Chalepensis L.	RUTACEAE
219. ನಾಗಲಿಂಗ ಪುಷ್ಪದ ಮರ		
220. ನಾಗಸರ್ಪ		
221. ನಾರಬಳ್ಳಿ		
222. ನಾಯಿನೆಕ್ಕಗಿಡ		
223. ನಾಯಿ ಬಾರೆ		
224. ನೀರು ಬನ್ನಿ ಸೊಪ್ಪು	Bacopa monnieri (L.) penn	SCROPHULARIACEAE
225. ನೀರುಗುಂಡೆ ಬೇರು		
226. ನೀರು ಜವಳಿಗಿಡ		
227. ನಿತ್ಯಪುಷ್ಪ (ಪಸಪದ್ನ ಹೂವು)		
228. ನೀಲಗಿರಿ ಮರ	*Encalyptus globulus labill.	MYRTACEAE
229. ನಿಂಬೆಗಿಡ	*citrus aurantifalia (christm.) Swingle	RUTACEAE
230. ನುಗ್ಗೆಮರ	Moringa oleifera Lamk	MORINGACEAE
231. ನೆರಿಗೆ ಸೊಪ್ಪು		
232. ನೆಲಗೋಣಿ ಸೊಪ್ಪು (ಪಂಜುಗೋಣಿ)	Partulaca auadrifida L.	PORTULACACEAE
233. ನೆಗ್ಗಿಲು	Tribulus terrestris L.	ZYGOPHYLLACEAE
234. ನೆಲಗುಳ್ಳ	solanum virginianum L.	SOLANACEAE
235. ನೆಲ ಗುಂಬಳ	pomoea mauritiana jacq.	CONVOLVULACEAE
236. ನೆಲಗುಂಬ್ರೆಸೊಪ್ಪು		
237. ನೆಲತಂಗಟಿ (ನೆಲಾವರಿಕೆ)	Cassia mimosoides L.	CAESALPINIACEAE
238. ನೆಲತಾಟಿ		
239. ನೆಲನಲ್ಲಿ (ಕಿರುನಲ್ಲಿ)	Phyllanthus amarus schumach	EUHPORBIACEAE
240. ನಾಯಿ ತುಳಸಿ	ocimum americanum L.	LAMIACEAE
241. ನೆಲಪಾಪಸುಮುಳ್ಳು		
242. ನೆಲ್ ಬೆಳಸೊಪ್ಪು		
243. ನೆಲಬೂರಿಗಿಡ		
244. ನೆಲಬೇವು	Andrographis Paniculata Nees.	ACANTHACEAE
245. ನೆಲಸಂಪಿಗೆ		
246. ನೆಲ ಹಿಪ್ಪಲಿ		
247. ನೇರಳೆ ಮರ (ಜಂಬೂನೇರಳೆ)	Syzygium cumini(L.)Skeels	MYRTACEAE
248. ಪಗಡ ಪತ್ರೆಗಿಡ		
249. ಪಚ್ಚೇರಿ ಮರ		

250. ಪಡಿಪತ್ರೆ ಬಳ್ಳಿ		
251. ಪಪ್ಪುಳಿ ಚಕ್ಕೆ		
252. ಪರಂಗಿ ಮರ	Carica papaya L.	CARICACEAE
253. ಪಾತಾಳ ಗರುಡ	ophiorrhiza mungos L.	RUBIACEAE
254. ಪಾಪಸುಕಳ್ಳಿ		
255. ಪಾಷಾಣ ಭೇದಿ (ಇಟ್ಟುಳುಕನಗಿಡ)	Rotula aquatica lour.	EHRETIACEAE
256. ಪಿಲ್ಲು ಮರಪಲು		
257. ಪುದೀನ	*mentha arvensis L.	LAMIACEAE
258. ಪುತ್ರಂಜೀವಿ	Drypetes roxburghii (wall.)	EUPHORABIACEAE
259. ಪುಟ್ಟಂ ಪುರ್ಲುಗಿಡ		
260. ಪುರುಷರತ್ನ	Hybanthus ennespermus (L.)F.V.muell	VIOLACEAE
261. ಪೂಜಾರಿ ತೊಪ್ಪಲು		
262. ಪೋಟೆಗನ ಗಿಡ		
263. ಬಜೆ	Acours calamus L.	ARACEAE
264. ಬದನೆಗಿಡ	*Solanum melongena L.	SOLANACEAE
265. ಬಲಮುರಿ		
266. ಬಸಲೇಗಡ್ಡೆ		
267. ಬನ್ನಿಮರ	Acacia ferruginea DC.	MTMOSACEAE
268. ಬಾಗೆಮರ (ಹಗಲರಾಣಿ)	Albizialebbeck (L.) Benth	MIMOSACEAE
269. ಬಾರೇಮರ	Allium cepa L.	LILIACEAE
270. ಬ್ಯಾಲದ ಮರ (ದುಮ್ಮಿಮರ, ತುಮ್ಮಿದು.)		
271. ಬಿದಿರು	Bambusa arundinacea (Retz.) Roxb.	POACEAE
272. ಬಿಟ್ಟಂಡೆ ಸೊಪ್ಪು		
273. ಬಿಳಿಕೊಗ್ಗಿ (ಕಗ್ಗೀಗಿಡ)		
274. ಬಿಲ್ವಪತ್ರೆಮರ	Aegle Marmelos (L.)corr.	RUTACEAE
275. ಬಿಳಿಉಗಣಿ		
276. ಬಿಳಿಎಕ್ಕ	calotropis procera (Aiton) R.Br.	ASCLEPIADACEAE
277. ಬಿಳಿ ಉಮ್ಮತ್ತಿ	Datura stramonium L.	SOLANACEAE
278. ಬಾಳೇಮರ	*musa paradisiaca L.	MUSACEAE
279. ಬೆಳ್ಳುಳ್ಳಿ	*Allium sativum L.	LILIACEAE
280. ಬಿಳಿಗುಲಗಂಜಿ ಬಳ್ಳಿ		
281. ಬಿಳಿದಾಸವಾಳ	*Hibiscus rosa sinensis L.	MALVACEAE
282. ಬಿಳಿಬೀಟೆ		

283. ಬಿಳಿಹುಲಿ	Securinega leucopyrus (Willd.)	EUPHORBIACEAE
284. ಬೀಟೆ	Dalbergia latifolia Roxb.	FABACEAE
285. ಬುಗುಡಿ, ಎಲೆ		
286. ಬುಗುರಿ ಮರ (ಹೂವರ್ಸೆ ಮರ)	Thespesia populnea (L.) Sol.	MALVACEAE
287. ಬುಡ್ಡೆಗಿಡ (ಬುಡ್ಡಕಾಕಿ)	Physalis minima L.	SOLANACEAE
288. ಬೂದುಗುಂಬಳ ಬಳ್ಳಿ	*cucurbita pepoL.	CUCURBITACEAE
289. ಬ್ರಹ್ಮದಂಡೆ	Echinops ethinatus Roxb.	ASTERACEAE
290. ಬೋಡು ಬಕಡಿ (ಎರ್ರ್ ಬಕಡಿ, ಅಡವೆ ಮಜ್ಜಿಗೆ ಗಿಡ)		
291. ಬೆನ್ನತ್ತಿಗ		
292. ಬೆಂಡೆಗಿಡ		
293. ಬೇಟೆ ಗಿಡ (ಕಕ್ಕೆಗಿಡ)	Cassia fistula L.	CAESALPINIACEAE
294. ಬೇಲದ ಮರ (ಬೆಳವನ ಮರ)	Limonia acidissima L.	RUTACEAE
295. ಬೇಲಿ ಔಡಲ (ಸಿಟ್ಟೆಟ್ಲೆ ಗಿಡ, ಅಮ್ಮೆಗಿಡ)	Jatropha cureas L.	EUPHORBIACEAE
296. ಬೇವಿನ ಮರ (ಹೆಬ್ಬೇವು, ಇಳಿಬೇವು)	Azadirachta indica A.juss.	MELIACEAE
297. ಬಂದ್ರಿಕೆಗಿಡ (ಕಾಡುತೊಗರಿ)	Dodonaea Viscosa N. Jacq.	SAPINDACEAE
298. ಬಂದ್ಗಳ್ಳಿ		
299. ಭದ್ರಮುಷ್ಠಿಕೋಶ		
300. ಭೀಮನ ಕಡ್ಡಿ	Sida acuta Burm.f.	MALVACEAE
301. ಭಂಗಿ ಸೊಪ್ಪು	Cannabis Sativa L.	CANNABINACEAE
302. ಮಧುನಾಶಿನಿ(ಕಣ್ಣಿನ ಸೊಪ್ಪು)	Gymnema sylvestre(Retz.)	ASCLEPIADACEAE
303. ಮಧುಗುಣಿಕೆ ಸೊಪ್ಪು		
304. ಮಡಿವಾಗಲಗಡ್ಡೆ		
305. ಮಡ್ಡೀಗಿಡದ ಬೇರು		
306. ಮರಳು ಮಾತಂಗಿ	Xanthophyllum flavescens	XANTHOPHYLLACEAE
307. ಮಧ್ಯಾನ್ಹದ ಮಲ್ಲಿಗೆ	*mirabilis jalapa L.	NYCTAGINACEAE
308. ಮತ್ತೀಮರ	Terminalia paniculata Roth	COMBRETACEAE
309. ಮಯೂರ ಶಿಖಿ	Actiniopteris radiata (SW.) Link	ACTINIOPTERIDACEAE
310. ಮರಾಲೆ (ನೀಲಿಮರ)		
311. ಮಲ್ಲಿಗೆ ಬಳ್ಳಿ		
312. ಮಹಲಿಂಗನ ಬಳ್ಳಿ		

313. ಮಾವಿನ ಮರ	Mangifera indica L.	ANACARDIACEAE
314. ಮಾಗಡಿ ಸೊಪ್ಪು		
315. ಮಾರಾಬಳ್ ಸೊಪ್ಪು		
316. ಮಿಟ್ಲೆ ಮರ	streblus asper Lour	MORACEAE
317. ಮುಕಾರ್ತೆ ಮರ		
318. ಮುಂಗರ ಬಳ್ಳಿ	cissus quadrangularis L.	VITACEAE
319. ಮುಟ್ಟಿದರೆ ಮುನಿ (ಒಳಮುಚ್ಚಗ)	*mimosa pudica L.	MIMOSACEAE
320. ಮುತ್ತುಗದ ಮರ	Butea monosperma (Lam.) Taub.	FABACEAE
321. ಮುಸಂಗುಂಡೆ ಬೇರು		
322. ಮುಳ್ಳು ಸೊಂಡೆ ಬಳ್ಳಿ (ಮಾದಿರ ಮೊಲೆ ತೊಟ್ಟಿನ ಬಳ್ಳಿ)	Solanum trilobatum L.	SOLANACEAE
323. ಮುಳ್ಳು ಬಾಪರೆ ಕಾಯಿ (ಎರಡೆ ಕಾಯಿ)		
324. ಮುಳ್ಳು ಮಂಜರಿಗಿಡ		
325. ಮುಳ್ಳಳ್ಳಿ ಬಳ್ಳಿ		
326. ಮುಳ್ಳಾಸಿನ ಮರ		
327. ಮುಳ್ಳರಿವೆ ಸೊಪ್ಪು	Amaranthus Spinosus L.	AMARANTHACEAE
328. ಮುಳ್ಳು ಸಂಪಿಗೆ		
329. ಮೂಲಂಗಿ	*Raphanus sativus L.	BRASSICACEAE
330. ಮೂರು ಬೀಜದ ಕಾಯಿ		
331. ಮೂರೆಲೆ ಬಳ್ಳಿ		
332. ಮೆಕರೆ ಚಕ್ಕೆ		
333. ಮೆಣಸಿನ ಗಿಡ	*capsicum annuum L.	SOLANACEAE
334. ಮಂಚಪತ್ರೆ (ಪಂಚಪತ್ರೆ)		
335. ಮಂಡಗಳ್ಳಿ	Euphorbia antiquorum L.	EUPHORBIACEAE
336. ಮೆಂತ್ಯ ಸೊಪ್ಪು	*Trigonella foenum graecum L.	FABACEAE
337. ರಗತ ಬಳ್ಳಿ		
338. ರಕ್ತ ಮಾರೆ ಸೊಪ್ಪು		
339. ರಕ್ತಬಾಳೆ		
340. ರಕ್ತಭೂತಾಳೆ		
341. ರಾಗಿ ಗಿಡ	*Eleusine coracana(L.) Gaertner	POACEAE
342. ಲಕ್ಕೀಗಿಡ	Vitex negundo L.	VERBENACEAE
343. ಲವಂಗ	*syzygium aromaticum (L.)	MYRTACEAE
344. ಲಾಂಟಾನ	Lantana Camara L.	VERBENACEAE
345. ಲಿಂಗ ದುಂಬೆ ಸೊಪ್ಪು		

346. ಲೋಳೆಸರ (ಕನ್ಯಾಕುಮಾರಿ)	Aloevera (L.) Burm.f	LILIACEAE
347. ವಜ್ರಮುಷ್ಠಿ		
348. ವಾಯುವಿಳಂಗ	Embelia ribes N. Burman	MYRSINACEAE
349. ವಿಷ್ಣು ಕ್ರಾಂತಿ	Evolvulus alsinoides (L.)L.	CONVOLVULACEAE
350. ವಿಷದ ತೊಂಡೆ		
351. ವಿಷದ ಹೀರೇಕಾಯಿ (ಅಡವಿ ಹೀರೇಕಾಯಿ)		
352. ವೀಳ್ಯದೆಲೆ	*Piper betle L.	PIPERACEAE
353. ವೈನಾರಿ		
354. ಸಗಸೆ		
355. ಸಜ್ಜೆ	*pennisetum americanum (L.) Leeke	POACEAE
356. ಸಣ್ಣಚಚ್ಚೆ		
357. ಸಬ್ಬಕ್ಕಿಸೊಪ್ಪು	*Anethum Sowa Roxb.	APIACEAE
358. ಸರ್ವನಾಶದಗಿಡ		
359. ಸರ್ವಸಿದ್ಧಿ		
360. ಸಾವೆ	Echinochloa frumentacea (Roxb.)Link	POACEAE
361. ಸಿಕಡಿಕಾಯಿ ಸೊಪ್ಪು		
362. ಸೀಗುಡುಸೆ (ಕಡತಿಗನಗಿಡ, ಸ್ಯಾಗುಡುಸೆ)	Cadaba fruticosa (L.) Druce	CAPPARACEAE
363. ಸೀಗೆ ಪೊದೆ	Acacia Sinuata (Lour.) merr.	MIMOSACEAE
364. ಸೀತಾಫಲ	Annona Squamosa L.	ANNONACEAE
365. ಸೀಮೆ ಜಾಲಿ (ಬಳ್ಳಾರಿ ಜಾಲಿ)	*Acacia decurrens (werdl.) willd.	MIMOSACEAE
366. ಸೀಲ್‌ಗಿಡ		
367. ಸ್ತ್ರೀರತ್ನ		
368. ಸುಗಂಧಿ	Hemidesms indicus (L.) R.Br.	PERIPLOCACEAE
369. ಸುಪ್ಪತ್ತಿಗೆ ಗಿಡ	Hyptis suaveolens (L.) poit	LAMIACEAE
370. ಸುವರ್ಣಗಡ್ಡೆ		
371. ಸೂಜಿಮಲ್ಲಿಗೆ	Flacourtia indica (N. Burman)	FLACOURTIACEAE
372. ಸೆಳ್ಳೆ ಸೊಪ್ಪು		
373. ಸೆಕ್ರಸೆಳ್ಳಗಿಡ		
374. ಸೊಂಟಮುರುಕನ ಸೊಪ್ಪು (ತೋಟಬೆಳೆ ಸೊಪ್ಪು)		
375. ಸೊಂಡ್ರಿದು		
376. ಸೌಲೇಬಳ್ಳಿ		
377. ಸಂದಿನ ಕುಡಿ		
378. ಸಿಂಕೇಸ್ರಿ	Delonix elata (L.)Gamble	CAESALPINIACEAE

379. ಸಿಂಪುಂದಿ		
380. ಹಕ್ಕರಿಕೆ	Elephantopus scaber L.	ASTERACEAE
381. ಹಚ್ಚೆ ಸೊಪ್ಪು (ಅಡಿವೆಬೆಂಡೆ ಸೊಪ್ಪು, ಉಸಿರಿನ ಗಿಡ)	Abutilon indicum(L.) Sweet	MALVACEAE
382. ಹರದಚ್ಚುಗ	Zornia gibbosa Spanoghe	FABACEAE
383. ಹಾಗಲಬಳ್ಳಿ (ಕರೆಹಾಗಲ)	Momordica charantia L.	CUCURBITACEAE
384. ಹಾಪಿನ ಗಡ್ಡೆ		
385. ಹಾಲಗುಂಬಳ	*Lagenaria siceraria(Mdina)standly	CUCURBITACEAE
386. ಹಾಲವಾಣ	Erythrina variegata L.	FABACEAE
387. ಹಾಲುಮಟ್ಟೆಕಾಯಿ		
388. ಹಾಲೇಬಳ್ಳಿ	Leptadeniar eticulata(Retz.)Wt.&Arn	ASCLEPIADACEAE
389. ಹಾವಿನ ಗಡ್ಡೆ		
390. ಹಿಪ್ಪೆಕಳ್ಳೆ	capparis sepiaria L.	CAPPARACEAE
391. ಹಿಪ್ಪಲಿ	*piper longum L.	PIPERACEAE
392. ಹಿರೇ ಕಾಯಿ	*Luffa acutangula (L.) Roxb.	CUCURBITACEAE
393. ಹುಣಸೆಮರ	*Tamarindus indica L.	CAESALPINIACEAE
394. ಹುರಳಿ (ಹುಳ್ಳಿಗಿಡ)	*Vigna unguiculata (L.) walp.	FABACEAE
395. ಹುಳಕಡ್ಡಿಗಿಡ		
396. ಹೊನಗೊನೆ ಸೊಪ್ಪು	Alternanthera Sessilis (L.) R.Br.	AMARANTHACEAE
397. ಹೊರಮುಚ್ಚುಗ	Biophytum sensitivum (L.) DC.	OXALIDACEAE
398. ಹೊಟ್ಟೆಕಾಯಿ ಸೊಪ್ಪು		
399. ಹೊಲಸೂತಕದ ಬಳ್ಳಿ		
400. ಹೇಮತುಳಸಿ		
401. ಹಂಚೀಕಡ್ಡಿ (ಕಂಚೀಕಡ್ಡಿ)		
402. ಹಂದಿಮುಷ್ಟಿಗಿಡ		
403. ಹೊಂಗೆಮರ	Pongamia Pinnata (L.) Pierre	FABACEAE
404. ಹಲವು ಮಕ್ಕಳಬಳ್ಳಿ (ಶತಾವರಿ)	Asparagus racemosus willd.	LILIACEAE
405. ಹೆಗಲ ಸೊಪ್ಪು	wattakaka volubilis (L.f.) stapf	ASCLEPIADACEAE
406. ಹೊಟ್ಟೆಕಡ್ಡಿ	waltheria indica L.	STERCULIACEAE

* * *

ಅನುಬಂಧ – 2

ಜಿಲ್ಲೆಯ ಜನಪದ ವೈದ್ಯರ ಪರಿಚಯ

ವೈದ್ಯರ ಸಂಕ್ಷಿಪ್ತ ವಿವರ, ವಿಳಾಸ ಹಾಗೂ ಸಂದರ್ಶಿಸಿದ ದಿನಾಂಕಗಳು. [ಸೂಚನೆ : ಹೊಸದುರ್ಗ ಪೂರ್ಣಪದ ಬಂದಿರುತ್ತದೆ, ಉಳಿದ ತಾಲ್ಲೂಕುಗಳನ್ನು ಸಂಕ್ಷಿಪ್ತವಾಗಿ ಕೊಡಲಾಗಿದೆ. ಮೊ. – ಮೊಳಕಾಲ್ಮೂರು, ಚ. – ಚಳ್ಳಕೆರೆ, ಚಿ. – ಚಿತ್ರದುರ್ಗ, ಹೊ. – ಹೊಳಲ್ಕೆರೆ, ಹಿ. – ಹಿರಿಯೂರು]

1. ಅಂಜನಿ ಮಲ್ಲಯ್ಯ ತಂದೆ ಪರ್ವತ ಮಲ್ಲಯ್ಯ (26.05.07, 10.06.07) : ಚ. ತಾಲ್ಲೂಕಿನ ಮಲ್ಲೋರಹಳ್ಳಿ ಗ್ರಾಮದವರು. ವೃತ್ತಿ ಕೃಷಿ ಮತ್ತು ವೈದ್ಯ, ಜಾತಿ ನಾಯಕ, ವಯಸ್ಸು 37, ವಿದ್ಯೆಯನ್ನು ತಂದೆಯಿಂದ ಕಲಿತ ಇವರು ಬಟ್ಟೆಗೆ, ನೂತಿಗೆ, ಚೇಳು ಮೊಂಡರಗೊಬ್ಬೆಗಳ ವಿಷಕ್ಕೆ, ಗಂಟಲ ಗಡ್ಡೆ, ಮಕ್ಕಳ ಫಲ, ಸಕ್ಕರೆ ಕಾಯಿಲೆ ಮೊದಲಾದವುಗಳಿಗೆ ವೈದ್ಯಮಾಡುತ್ತಾರೆಯಲ್ಲದೆ ಮೋಡಿ ವಿದ್ಯೆಯನ್ನೂ ಬಲ್ಲವರಾಗಿದ್ದಾರೆ. ಆಂದ್ರದ ಆನಂತಪುರ ಜಿಲ್ಲೆಯ ಭಾಗಗಳಿಗೂ ವೈದ್ಯ ಮಾಡಲು ಹೋಗುತ್ತಾರೆ.

2. ಅಜ್ಜಪ್ಪ ದುರುಗದ ಕಪ್ಪಲೆ ತಂದೆ ಈರ್ ಕರಿಯಣ್ಣ (04.06.07) : ಚ. ತಾಲ್ಲೂಕಿನ ಮಲ್ಲೋರಹಳ್ಳಿ ಗ್ರಾಮದವರು. ವೃತ್ತಿ ಕೃಷಿ, ಜಾತಿ ನಾಯಕ, ವಯಸ್ಸು 60. ವಿದ್ಯೆಯನ್ನು ತಂದೆಯನ್ನು ಕಲಿತ ಇವರು ಚರ್ಮಸೆಲ್ದಿ, ನೂತಿಗೆ, ದನಗಳು ಮೇವು ತಿನ್ನಲು, ಮೂಲವ್ಯಾಧಿ ಮೊದಲಾದವುಗಳಿಗೆ ವೈದ್ಯಮಾಡುತ್ತಾರೆ.

3. ಅಜ್ಜಪ್ಪಗಳ ವೀರಣ್ಣ (29.08.06) : ಚಿತ್ರದುರ್ಗ ತಾಲ್ಲೂಕಿನ ಸಾಸಲಹಟ್ಟಿ ಗ್ರಾಮದವರು. ಲಿಂಗಾಯತ ಕುಲಕ್ಕೆ ಸೇರಿದ ಇವರಿಗೆ 69 ವರ್ಷ. ಇತರರಿಂದ ವೈದ್ಯ ಕಲಿತ ಇವರು ಮನುಷ್ಯ ಸಂಬಂಧಿ ಹಾಗೂ ಪಶು ಸಂಬಂಧಿ ರೋಗಗಳಿಗೆ ಚಿಕಿತ್ಸೆ ನೀಡುತ್ತಾರೆ. ಸುಮಾರು 40 ವರ್ಷಗಳ ಅನುಭವವಿದೆ.

4. ಅಜ್ಜಪ್ಪ ಎಚ್.ವಿ. ತಂದೆ ವೀರಭದ್ರಪ್ಪ (26.10.07) : ಹೊ. ತಾಲ್ಲೂಕಿನ ತುಪ್ಪದಹಳ್ಳಿ ಗ್ರಾಮದವರು. ಲಿಂಗಾಯಿತ ಕುಲಕ್ಕೆ ಸೇರಿದ ಇವರಿಗೆ 45 ವರ್ಷ, ಇತರರಿಂದ ಪಶುವೈದ್ಯವನ್ನು ಕಲಿತಿರುತ್ತಾರೆ. 20 ವರ್ಷಗಳ ವೈದ್ಯದ ಅನುಭವವಿದೆ.

5. ಅಶೋಕಾನಂದ ತಂದೆ ಜಿ.ಕಿ. ರಾಘವರೆಡ್ಡಿ (06.11.08) : ಚ. ತಾಲ್ಲೂಕಿನ ನೇರಲಗುಂಟೆ ಗ್ರಾಮದವರು. ಕಮ್ಮಾರೆಡ್ಡಿ ಜನಾಂಗಕ್ಕೆ ಸೇರಿದ ಇವರಿಗೆ 46 ವರ್ಷಗಳು. ತಂದೆಯಿಂದ ವೈದ್ಯವನ್ನು ಕಲಿತ ಇವರು ಪಾರ್ಶ್ವವಾಯು ಗುಣಪಡಿಸುವಲ್ಲಿ ಪ್ರಸಿದ್ಧಿಯಾಗಿದ್ದಾರೆ.

6. ಅಂಗಡಿ ಮಲ್ಲಯ್ಯ ತಂದೆ ದ್ಯಾವುಲ್ಲು ಓಬಯ್ಯ (25.05.07) : ಚ. ತಾಲ್ಲೂಕಿನ ಓಬಯ್ಯನ ಹಟ್ಟಿ ಗ್ರಾಮದವರು ವೃತ್ತಿ ಕೃಷಿ, ಜಾತಿ ನಾಯಕ, ವಯಸ್ಸು 90, ವಿದ್ಯೆಯನ್ನು ಮುದಿಯಣ್ಣನವರಿಂದ ಕಲಿತ ಇವರು ಇಸುಬು, ಬೊಬ್ಬೇಟು, ಕೆಮ್ಮು, ಅಳ್ಳೆರೋಗ ಮತ್ತು ದನಗಳ ರೋಗಗಳಿಗೆ ವೈದ್ಯವನ್ನು ಮಾಡುತ್ತಾರೆ. ದೆವ್ವ ಬಿಡಿಸುವುದರಲ್ಲೂ ಪರಿಣತರಾಗಿದ್ದಾರೆ.

7. ಆನಂದಪ್ಪ (20.03.05, 10.08.07, 02.10.08) : ಚಳ್ಳಕೆರೆ ತಾಲ್ಲೂಕಿನ ಅಬ್ಬೇನಹಳ್ಳಿ ಗ್ರಾಮದವರು, ವೃತ್ತಿಯಲ್ಲಿ ಕೃಷಿಕರು, ಜಾತಿಯಲ್ಲಿ ಲಿಂಗಾಯತರು. ವಯಸ್ಸು 78, ಅಬ್ಬೇನ ಹಳ್ಳಿಗೆ ಮುತ್ತು ಮಾರಲು ಬಂದಿದ್ದ ವ್ಯಕ್ತಿಯಿಂದ ವೈದ್ಯವನ್ನು ಕಲಿತ ಇವರು, ಹಾವಿನ ವಿಷಕ್ಕೆ, ಮಕ್ಕಳ ಕಾಯಿಲೆ, ಮಕ್ಕಳ ಸಂತಾನ, ಹೊಟ್ಟೆ ಕುಟ್ಟು, ಬೊಬ್ಬೇಟನ್ನು ಇಳಿಸುವುದು, ವಿವಿಧ ಹುಣ್ಣುಗಳು, ಬಾಲಗ್ರಹಗಳಿಗೆ ಚೀಟು ಹಾಗೂ ಯಂತ್ರಗಳನ್ನು ಬರೆಯುತ್ತಾರೆ. ಈ ಮುಂತಾದ ಸು. 30 ಕಾಯಿಲೆಗಳಿಗೆ ವೈದ್ಯವನ್ನು ಮಾಡುತ್ತಾರೆ. ಅಲ್ಲದೆ ಮಂತ್ರ–ಮೋಡಿ ವಿದ್ಯೆಯಲ್ಲೂ ಅನುಭವವನ್ನು ಹೊಂದಿದ್ದಾರೆ.

8. ಈಶ್ವರಪ್ಪ ಪೊರಾಳ್ ತಂದೆ ಹೊನ್ನೂರಪ್ಪ (29.08.07) : ಮೊ. ತಾಲ್ಲೂಕಿನ ಕೊಂಡ್ಲಹಳ್ಳಿ ಗ್ರಾಮದವರು, ವಂಶಪಾರಂಪರ್ಯವಾಗಿ ಹಾಗೂ ಗ್ರಂಥಗಳಿಂದ ವೈದ್ಯವನ್ನು ಕಲಿತ್ತಿದ್ದಾರೆ. ಪದ್ಮಸಾಲಿ ಕುಲಕ್ಕೆ ಸೇರಿದ ಇವರಿಗೆ 78 ವರ್ಷ, ಪಾರ್ಶ್ವವಾಯು, ಜಾಂಡಿಸ್, ಫಿಟ್ಸ್, ಮಕ್ಕಳ ಹಕ್ಕಿಕಾಲು ರೋಗ, ಹೆರಿಗೆ ನಿಧಾನ ಮುಂತಾದ ಸುಮಾರು 30 ರೋಗಗಳಿಗೆ ಚಿಕಿತ್ಸೆ ಮಾಡುವವರಾಗಿದ್ದಾರೆ. ಸುಮಾರು 40 ವರ್ಷಗಳ ಅನುಭವ ಹೊಂದಿರುವ ದೊಡ್ಡವೈದ್ಯರಾಗಿದ್ದಾರೆ.

9. ಈರಮ್ಮ ಗಂಡ ಮುದ್ದಪ್ಪ (04.08.07) : ವಂಶಪಾರಂಪರ್ಯವಾಗಿ ವೈದ್ಯವನ್ನು ಕಲಿತ್ತಿದ್ದಾರೆ. ವಯಸ್ಸು 67, 35 ವರ್ಷಗಳಿಂದ ಮಹಿಳೆ ಮತ್ತು ಮಕ್ಕಳಿಗೆ ವೈದ್ಯವನ್ನು ಮಾಡುತ್ತಿದ್ದಾರೆ. ಯಾದವ ಜನಾಂಗಕ್ಕೆ ಸೇರಿದ ಇವರು ಹಿರಿಯೂರು ತಾಲ್ಲೂಕಿನ ಎ.ವಿ.ಕೊಟ್ಟಿಗೆಯ ನಿವಾಸಿ.

10. ಈಶ್ವರಪ್ಪ ಗೌರಕ್ಕರ ತಂದೆ ನಿಂಗಪ್ಪ (25.07.07, 29.07.07, 28.12.08) : ಹೊ. ತಾಲ್ಲೂಕಿನ ಶಿವಪುರದವರು. 83 ವರ್ಷದ ಇವರು ಲಿಂಗಾಯಿತ ಕುಲಕ್ಕೆ ಸೇರಿದ್ದಾರೆ. ಇತರರಿಂದ ವೈದ್ಯ ಕಲಿತು ಪಶುವೈದ್ಯದಲ್ಲಿ ಹೆಸರುವಾಸಿಯಾಗಿದ್ದಾರೆ. ಮಕ್ಕಳ ಸಂತಾನಕ್ಕೆ ಔಷಧಿ ಕೊಡುತ್ತಾರೆ.

11. ಈರಣ್ಣ ತಂದೆ ಗಾದ್ರಪ್ಪ (03.08.07) : ಸುಮಾರು 25 ವರ್ಷಗಳಿಂದ ವಂಶಪಾರಂಪರ್ಯವಾಗಿ ವೈದ್ಯವನ್ನು ಬಲ್ಲವರಾಗಿದ್ದಾರೆ. ನಾಯಕ ಜನಾಂಗದ ಇವರು ಹಿರಿಯೂರು ತಾಲ್ಲೂಕಿನ ಕರೆಚಿಕ್ಕಯ್ಯನ ರೊಪ್ಪಗ್ರಾಮಕ್ಕೆ ಸೇರಿದವರು. ಇವರು ಮನುಷ್ಯರು ಹಾಗೂ ವಿಶೇಷವಾಗಿ ದನಕುರಿಗಳಿಗೆ ವೈದ್ಯೋಪಚಾರ ಮಾಡುತ್ತಾರೆ.

12. ಈಶ್ವರಪ್ಪ ಎಸ್. ತಂದೆ ಸಂದಪ್ಪ (22.08.07) : ಚಿ. ತಾಲ್ಲೂಕಿನ ಕಸವನಹಳ್ಳಿಗೆ ಸೇರಿದವರು. ಗೊಲ್ಲರ ಜನಾಂಗಕ್ಕೆ ಸೇರಿದ ಇವರಿಗೆ 45 ವರ್ಷ. ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರು ಹಾವಿನ ವಿಷಕ್ಕೆ ವೈದ್ಯಮಾಡುವುದರಲ್ಲಿ ಪ್ರಸಿದ್ಧಿ ಹೊಂದಿದ್ದಾರೆ. ಸುಮಾರು 20 ವರ್ಷಗಳ ಅನುಭವವಿದೆ.

13. ಉಳಿಯವ್ವರ ನಾಗಪ್ಪ ತಂದೆ ಹನುಮಂತಪ್ಪ (26.07.07) : ಹೊಸದುರ್ಗ ತಾಲ್ಲೂಕಿನ ಬೋಕಿಕೆರೆ ಗ್ರಾಮದವರು. ದೇವಾಂಗ ಶೆಟ್ಟರಾದ ಇವರಿಗೆ 65 ವರ್ಷ. ಸ್ವಾನುಭವದಿಂದ ವೈದ್ಯ ಕಲಿತ ಇವರು ಪಶುವೈದ್ಯರಾಗಿದ್ದಾರೆ. ಸುಮಾರು 40 ವರ್ಷಗಳ ವೈದ್ಯದ ಅನುಭವವಿದೆ.

14. ಉದಯ ಕುಮಾರ್ ಎಚ್.ಟಿ. ತಂದೆ ತಿಪ್ಪೇಸ್ವಾಮಿ (24.08.07) : ಮೊಳಕಾಲ್ಮೂರು ಗ್ರಾಮದವರು. ಸೊಕುಳಸಾಳಿ(ಮರಾಠಿ) ಜನಾಂಗಕ್ಕೆ ಸೇರಿದ ಇವರಿಗೆ 38 ವರ್ಷ. ವೃತ್ತಿಯಲ್ಲಿ ಶಿಕ್ಷಕರಾದ ಇವರು ವಂಶಪಾರಂಪರ್ಯವಾಗಿ ವೈದ್ಯ ಕಲಿತಿದ್ದಾರೆ. ಸಕ್ಕರೆ ಕಾಯಿಲೆ, ಪಾರ್ಶ್ವವಾಯು ಮುಂತಾದ ಮನುಷ್ಯ ಸಂಬಂಧಿ ರೋಗಗಳಿಗೆ ಉಪಚರಿಸುತ್ತಾರೆ. ಸುಮಾರು 15 ವರ್ಷಗಳ ಅನುಭವವಿದೆ.

15. ಉಮೇಶ್ ತಂದೆ ಹನುಮಂತಪ್ಪ (07.11.08) : ಚ. ತಾಲ್ಲೂಕಿನ ಹರವಿಗೊಂಡನ ಹಳ್ಳಿಯವರು ವಯಸ್ಸು 38, ವಿದ್ಯೆಯನ್ನು ತಂದೆಯಿಂದ ಕಲಿತ್ತಿದ್ದಾರೆ. ವೃತ್ತಿಯಲ್ಲಿ ಕೃಷಿಕರು ಮಡಿವಾಳ ಜನಾಂಗದವರು. ಕಿಡ್ನಿಯಲ್ಲಿ ಕಲ್ಲು, ಕೈಮಸುಗು, ಮಹಿಳೆಯರ ಕೆಂಪು ಬಿಳುಪುಗಳಿಗೆ ಔಷಧಿ ಕೊಡುತ್ತಾರೆ ಮತ್ತು ಪಶುವೈದ್ಯರೂ ಆಗಿದ್ದಾರೆ.

16. ಉಪಮಾತಿ ತಂದೆ ಆನಂದಪ್ಪ (26.05.07) : ಚ. ತಾಲ್ಲೂಕಿನ ಅಬ್ಬೇನಹಳ್ಳಿ ಗ್ರಾಮದವರು ವೃತ್ತಿಯಲ್ಲಿ ಪೂಜಾರಿಯಾಗಿದ್ದು, ಜ್ಯೋತಿಷ್ಯವನ್ನು ತಿಳಿದಿರುವ ವೈದ್ಯರಾಗಿದ್ದಾರೆ. ಜಾತಿ ಲಿಂಗಾಯಿತ, ವಯಸ್ಸು 53. ವಿದ್ಯೆಯನ್ನು ವಂಶಪಾರಂಪರ್ಯದಿಂದ ಕಲಿತ್ತಿದ್ದಾರೆ. ಅನಿಯತ ಋತುಕಾಲ, ಹಾವಿನ ವಿಷಕ್ಕೆ, ಬಾಲಗ್ರಹಗಳಿಗೆ ದೊಡ್ಡವರ ಬಾಲಗ್ರಹ, ಎದೆಹಾಲು ವೃದ್ಧಿ ಮತ್ತು ಮಕ್ಕಳ ಫಲ ಈ ಮೊದಲಾದವುಗಳಿಗೆ ವೈದ್ಯಮಾಡುತ್ತಾರೆ. ಜ್ಯೋತಿಷ್ಯ (ಯಂತ್ರ)ವನ್ನು ಹೇಳುತ್ತಾರೆ.

17. ಉಮಾದೇವಿ ಎಚ್. (20.08.07) : ಇವರು ಚಿತ್ರದುರ್ಗದ ನಿವಾಸಿ. ವೃತ್ತಿಯಲ್ಲಿ ಶಿಕ್ಷಕಿ. 37 ವರ್ಷ. ಮಧುಗಿರಿಯ ಬ್ರಹ್ಮವಿದ್ಯಾನಗರದಲ್ಲಿರುವ ಮಠದ ಸ್ವಾಮಿಗಳಿಂದ ವೈದ್ಯ ಕಲಿತ್ತಿದ್ದಾರೆ. ಬಂಜೆತನ ನಿವಾರಣೆ, ಸಕ್ಕರೆ ಕಾಯಿಲೆ ಮುಂತಾದ ರೋಗಗಳಿಗೆ ಚಿಕಿತ್ಸೆ ನೀಡುತ್ತಾರೆ. ಸುಮಾರು 10 ವರ್ಷಗಳ ಅನುಭವವಿದೆ.

18. ಉಮೇಶ್ ಎಚ್. ಎನ್. ತಂದೆ ಎಚ್.ಎಸ್. ನಂಜುಂಡ ಶೆಟ್ಟಿ (14.04.08) : ಚಿತ್ರದುರ್ಗದ ನಿವಾಸಿ, ಆರ್ಯುವೈಷ್ಯ ಕುಲಕ್ಕೆ ಸೇರಿದ ಇವರಿಗೆ 48 ವರ್ಷ. ಬ್ಯಾಂಕ್‌ನ ಉದ್ಯೋಗಸ್ಥರಾದ ಇವರು ಅಪೆಂಡಿಕ್ಸ್, ಕಿಡ್ನಿಸ್ಟೋನ್, ಜಾಂಡಿಸ್, ಟಾನ್ಸಿಲ್ (ಕಿರುನಾಲಿಗೆ) ಗರ್ಭಕೋಶ ಜರುಗುವುದು ಮುಂತಾದ ರೋಗಗಳಲ್ಲಿ ಪರಿಣತಿ ಹೊಂದಿದ್ದಾರೆ. ಸುಮಾರು 20 ವರ್ಷಗಳ ಅನುಭವವಿದೆ.

19. ಓಬನಾಯಕ ತಂದೆ ಹನುಮಂತಪ್ಪ (04.08.07) : ಹಿ. ತಾಲ್ಲೂಕಿನ ಬಗ್ಗನಾಡು ಗ್ರಾಮದವರು. ಮನುಷ್ಯ ಹಾಗೂ ಪಶು ವೈದ್ಯದಲ್ಲಿ ಪರಿಣತಿಹೊಂದಿದ ಇವರಿಗೆ ಸುಮಾರು 50 ವರ್ಷಗಳ ಅನುಭವವಿದೆ. ನಾಯಕ ಜನಾಂಗದವರು, ವಯಸ್ಸು 72, ಹಾವಿನ ವಿಷ ಚಿಕಿತ್ಸೆಯಲ್ಲಿ ಪ್ರಸಿದ್ಧರು.

20. ಓಬಣ್ಣ ಶಾಸ್ತ್ರಿ ತಂದೆ ಎಚ್. ಬೋರಪ್ಪ ನಾಯಕ (07.08.07) : ಚಿ. ತಾಲ್ಲೂಕಿನ ಮುದ್ದಾಪುರ ಗ್ರಾಮದವರು. ನಾಯಕ ಜನಾಂಗಕ್ಕೆ ಸೇರಿದ ಇವರಿಗೆ 63 ವರ್ಷ. ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರು ವಾಯು, ಲಕ್ವಾ, ಕೆಮ್ಮು ಮುಂತಾದ ಮನುಷ್ಯಸಂಬಂಧಿ ರೋಗಗಳಿಗೆ ಚಿಕಿತ್ಸೆ ನೀಡುತ್ತಾರೆ. ಸುಮಾರು 40 ವರ್ಷಗಳ ಅನುಭವವಿದೆ.

21. ಓಬಯ್ಯ ಬಿ.ಜಿ. ತಂದೆ ದೊಡ್ಡ ಗುಂಡಯ್ಯ (21.08.06) : ಚ. ತಾಲ್ಲೂಕಿನ ರುದ್ರಮ್ಮನಹಳ್ಳಿ ಗ್ರಾಮದವರು. ವೃತ್ತಿ ಕೃಷಿ, ಜಾತಿ ನಾಯಕ, ವಯಸ್ಸು 40. ವಿದ್ಯೆಯನ್ನು ರಾಯಾಪುರದ ಮಾರಮ್ಮನ ಪೂಜಾರಿಯವರಿಂದ ಕಲಿತ ಇವರು ಸಕ್ಕರೆ ಕಾಯಿಲೆ, ಮೇಹಸಂಬಂಧಿ ಕಾಯಿಲೆ, ನರದೌರ್ಬಲ್ಯ ಮೊದಲಾದವುಗಳಿಗೆ ವೈದ್ಯಮಾಡುತ್ತಾರೆ. (ಶ್ರೀಯುತರು ಜನವರಿ–2007ರಲ್ಲಿ ದಿವಗಂತರಾಗಿದ್ದಾರೆ.)

22. ಓಬಯ್ಯ ತಂದೆ ಜೋಸಪ್ಪ (08.08.07) : ಚಿ. ತಾಲ್ಲೂಕಿನ ಹಳಿಯೂರು ಗ್ರಾಮದವರು. ನಾಯಕ ಜನಾಂಗಕ್ಕೆ ಸೇರಿದ ಇವರಿಗೆ 68 ವರ್ಷ. ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರು ಹಾವಿನ ವಿಷ, ಮಕ್ಕಳ ಫಲ ಮುಂತಾದ ಮನುಷ್ಯ ಸಂಬಂಧಿ ಹಾಗೂ ಪಶುಸಂಬಂಧಿ ರೋಗಗಳಿಗೆ ಉಪಚರಿಸುತ್ತಾರೆ. ಸುಮಾರು 25 ವರ್ಷಗಳ ಅನುಭವವಿದೆ.

23. ಓಬಮ್ಮ (03.06.07, 10.06.07, 16.08.07) : ಚ. ತಾಲ್ಲೂಕಿನ ಓಬಯ್ಯನಹಟ್ಟಿ ಗ್ರಾಮದವರು, ವೃತ್ತಿ ಕೃಷಿ, ಜಾತಿ ನಾಯಕ, ವಯಸ್ಸು 42. ವಿದ್ಯೆಯನ್ನು ಭೀಮನಕೆರೆ ಗೆದ್ದೋಬಜ್ಜ ಅವರಿಂದ ಕಲಿತ ಇವರು ಮೊಳೆಕುರ, ಅಳ್ಳೆರೋಗ, ಎದೆಯಲ್ಲಿ ರಕ್ತ, ಬಟ್ಟೆಗೆ, ರಕ್ತಭೇದಿಗೆ ಮುಂತಾದವುಗಳಿಗೆ ವೈದ್ಯಮಾಡುತ್ತಾರೆ.

24. ಔಷಧಿ ರಾಜಣ್ಣ (05.06.07, 15.08.07, 10.03.08) : ಚ. ತಾಲ್ಲೂಕಿನ ಭರಮಸಾಗರ ಗ್ರಾಮದವರು. ವೃತ್ತಿಯಲ್ಲಿ ಕೃಷಿ ಮತ್ತು ವೈದ್ಯ, ಜಾತಿ ನಾಯಕ, ವಯಸ್ಸು 60, ವಿದ್ಯೆಯನ್ನು ಆಂಧ್ರದ

ಸಂಬಂಧಿಕರಿಂದ ಕಲಿತಿದ್ದಾರೆ. ಮೂಲವ್ಯಾಧಿ, ಸಕ್ಕರೆ ಕಾಯಿಲೆ, ಹೃದಯಾಘಾತಕ್ಕೆ, ಋತುಸ್ರಾವ, ಗಂಟಲ ಕ್ಯಾನ್ಸರ್, ಜಾಂಡೀಸ್, ನಾಡೀಪರೀಕ್ಷೆ, ನಿಃಶಕ್ತಿಗೆ, ಕಾಲು ಜೋಮು, ಉನ್ಮಾದ, ದಮ್ಮು, ಉಬ್ಬಸ, ಕೆಮ್ಮು, ಮತ್ತು ಹುಣ್ಣು ಮೊದಲಾದ ಹಲವು ಬಗೆಯ ರೋಗಗಳಿಗೆ ವೈದ್ಯ ಮಾಡುವ ಇವರು ದೊಡ್ಡ ಪಂಡಿತರಾಗಿದ್ದಾರೆ.

25. ಕರಿಯಣ್ಣ ಅಗ್ರಹಾರದ (06.08.06, 16.11.08) : ಚ. ತಾಲ್ಲೂಕಿನ ಜುಂಜರಗುಂಟೆ ಗ್ರಾಮದವರು. ವೃತ್ತಿ ಕೃಷಿ, ಜಾತಿ ನಾಯಕ, ವಯಸ್ಸು 57. ವಂಶಪಾರಂಪರ್ಯವಾಗಿ ವಿದ್ಯೆಯನ್ನು ಕಲಿತ ಇವರು ಮಕ್ಕಳ ಜ್ವರ, ಕೈಮಸುಗ, ಮೂಲವ್ಯಾಧಿ ಮತ್ತು ಚೇಳು ಕಡಿತಕ್ಕೆ ವೈದ್ಯವನ್ನು ಮಾಡುತ್ತಾರೆ.

26. ಕಂಚಿವರದಯ್ಯ ಎಸ್. (06.08.06, 15.08.07, 26.12.07) : ಚ. ತಾಲ್ಲೂಕಿನ ಸಿದ್ದೇಶ್ವರನ ದುರ್ಗ ಗ್ರಾಮದವರು. ವೃತ್ತಿ ಕೃಷಿ, ಜಾತಿ ರೆಡ್ಡಿಜನಾಂಗ ವಯಸ್ಸು 54. ಅವರಿವರಿಂದ ವಿದ್ಯೆಯನ್ನು ಕಲಿತ ಇವರು ಹಾರ್ಮೋನಿಯಂ ಮತ್ತು ನಾಟಕದ ಮೇಷ್ಟ್ರು ಆಗಿದ್ದಾರೆ. ಋತುಚಕ್ರ, ಸಕ್ಕರೆ ಕಾಯಿಲೆ, ಅಸ್ತಮ, ಪ್ರಸವ ಕಾಲದ ತೊಂದರೆ, ಸಂಕದಾಳು, ಗಂಡು–ಹೆಣ್ಣು ಮಕ್ಕಳು ಜನಿಸುವಂತೆ, ಮೂಲವ್ಯಾಧಿ –ಮುಂತಾದವುಗಳಿಗೆ ವೈದ್ಯ ಮಾಡುವ ಇವರು ಸಕ್ಕರೆ ಕಾಯಿಲೆ ನಿಯಂತ್ರಿಸುವಲ್ಲಿ ಪ್ರಸಿದ್ಧರು.

27. ಕನಕರಾಜ ತಂದೆ ತಮ್ಮಣ್ಣ (13.11.08) : ಹೊಸದುರ್ಗ ತಾಲ್ಲೂಕಿನ ಕಲ್ಲೋಡು ಗ್ರಾಮದ ನಿವಾಸಿ, ವಯಸ್ಸು 39, ಬೋವಿ ಜನ, ತಂದೆಯಿಂದ ವಿದ್ಯೆಯನ್ನು ಕಲಿತ್ತಿದ್ದಾರೆ. ಹಾವಿನ ವಿಷಕ್ಕೆ ಮತ್ತು ಹಾವಿನ ಕಡಿತದಿಂದ ಉಂಟಾದ ಗಾಯಗಳಿಗೆ ಔಷಧಿಯನ್ನು ಕೊಡುತ್ತಾರೆ. ಪಶುವೈದ್ಯವನ್ನೂ ಬಲ್ಲವರಾಗಿದ್ದಾರೆ.

28. ಕಲ್ಲಪ್ಪ ತಂದೆ ಕಲೆನಿಂಗಪ್ಪ (27.10.07) : ಹೊ. ತಾಲ್ಲೂಕಿನ ತಾಳಕಟ್ಟ ಗ್ರಾಮದವರು. ವಂಶಪಾರಂಪರ್ಯವಾಗಿ ವೈದ್ಯವನ್ನು ಕಲಿತ ಇವರಿಗೆ 30 ವರ್ಷ, ಲಿಂಗಾಯಿತ ಕುಲದವರು. ಕೈಮಸುಗು ರೋಗಕ್ಕೆ ಉಪಚರಿಸುತ್ತಾರೆ. 12 ವರ್ಷಗಳ ಅನುಭವವಿದೆ.

29. ಕಂಚಿನಾಳ್ ತಿಪ್ಪಣ್ಣ ತಂದೆ ನೀಲಪ್ಪ (25.07.07) : ಹೊ. ತಾಲ್ಲೂಕಿನ ಹೊಸಹಳ್ಳಿ ಗ್ರಾಮದವರು. ಸಂಬಂಧಿಕರಿಂದ ವೈದ್ಯವನ್ನು ಕಲಿತ ಇವರಿಗೆ 65 ವರ್ಷಗಳು. ಹೆಳವರ ಜನಾಂಗಕ್ಕೆ ಸೇರಿದ್ದಾರೆ, ಮನುಷ್ಯರ ಹಾಗೂ ಪಶುಗಳ ರೋಗಗಳಿಗೆ ಚಿಕಿತ್ಸೆ ನೀಡುತ್ತಾರೆ.

30. ಕರಿಬಸಪ್ಪ ಜಿ.ಆರ್. ತಂದೆ ಜಿ.ಎಸ್. ರಂಗಪ್ಪ (25.07.07) : ಹೊ. ತಾಲ್ಲೂಕಿನ ಚಿಕ್ಕಜಾಜೂರು ಗ್ರಾಮದವರು. ವೃತ್ತಿಯಲ್ಲಿ ವಕೀಲರಾದ ಇವರು ವಂಶಪಾರಂಪರ್ಯವಾಗಿ ವೈದ್ಯ ಕಲಿತಿರುತ್ತಾರೆ. ವಯಸ್ಸು

39, ಲಿಂಗಾಯಿತ ಕುಲಕ್ಕೆ ಸೇರಿದವರು. ಹಾವಿನ ವೈದ್ಯದಲ್ಲಿ ಪ್ರಸಿದ್ಧಿ ಹೊಂದಿದ್ದಾರೆ. ಸುಮಾರು 20 ವರ್ಷಗಳ ಅನುಭವವಿದೆ. ಇವರ ತಾಯಿಯೂ ವೈದ್ಯೆಯಾಗಿದ್ದಾರೆ.

31. ಕರಿಯಪ್ಪ ಟಿ.ಕೆ. ತಂದೆ ರಂಗಪ್ಪ (17.07.07) : ಹೊ. ತಾಲ್ಲೂಕಿನ ತಾಳಕಟ್ಟ ಗ್ರಾಮದ ನಾಯಕ ಜನಾಂಗಕ್ಕೆ ಸೇರಿದ ಇವರಿಗೆ 76 ವರ್ಷ. ವಂಶಪಾರಂಪರ್ಯವಾಗಿ ವೈದ್ಯಕಲಿತ ಇವರು ಪಚ್ಚ ಹುಣ್ಣು, ಮೈನವೆ, ಬಿಳಿಕೆಂಪು ಕರೆಗಳಿಗೆ ಚಿಕಿತ್ಸೆ ನೀಡುವಲ್ಲಿ ಪ್ರವೀಣರು ಸುಮಾರು 50 ವರ್ಷಗಳ ಅನುಭವವಿದೆ.

32. ಕಸ್ತೂರಿ ನಾಯಕ ತಂದೆ ಸಿದ್ದಪ್ಪನಾಯಕ (24.08.07) : ಮೊ. ತಾಲ್ಲೂಕಿನ ಎರ್ಜೀನಹಳ್ಳಿ ಗ್ರಾಮದವರು. ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರಿಗೆ 65 ವರ್ಷ. ನಾಯಕ ಜನಾಂಗಕ್ಕೆ ಸೇರಿದ ಇವರಿಗೆ ಸುಮಾರು 40 ವರ್ಷಗಳ ಅನುಭವವಿದೆ. ಕೀಲುವಾಯು, ರಕ್ತಮೂಲವ್ಯಾದಿ ತಲೆಕೂದಲು ಉದುರುವುದನ್ನು ನಿಯಂತ್ರಿಸುವುದು ಹಾಗೂ ಇತರ ಮಾನವ ಸಂಬಂಧಿ ರೋಗಗಳಿಗೆ ಉಪಚರಿಸುತ್ತಾರೆ. ಸುಮಾರು 20 ವರ್ಷಗಳ ಅನುಭವವಿದೆ.

33. ಕಲ್ಲೇಶಪ್ಪ ತಂದೆ ಸಂಜೀವಪ್ಪ (06.11.08) : ಚ. ತಾಲ್ಲೂಕಿನ ವೃಂದವ್ವನ ಹಳ್ಳಿಯವರು, ವಯಸ್ಸು 48. ಕೂಡುಒಕ್ಕಲಿಗ ಜನಾಂಗಕ್ಕೆ ಸೇರಿದ್ದಾರೆ. ತಂದೆಯಿಂದ ಹಾವಿನ ವಿಷಕ್ಕೆ ಔಷಧಿ ಕೊಡುವುದನ್ನು ಕಲಿತಿರುತ್ತಾರೆ.

34. ಕಾಟಪ್ಪ ಕೆ. ತಂದೆ ಕೆಂದಪ್ಪ (24.07.07) : ಹೊ. ತಾಲ್ಲೂಕಿನ ಪುಣಜೂರು ಗ್ರಾಮಕ್ಕೆ ಸೇರಿದ ಇವರು ಯಾದವ ಜನಾಂಗದವರು. ಇವರಿಗೆ 75 ವರ್ಷ. ವಿಶೇಷವಾಗಿ ಬೆನ್ನುಫಣಿ, ಸರ್ಪಹುಣ್ಣು, ಮೊಲೆಹುಣ್ಣು ಮೊದಲಾದ ಹುಣ್ಣುಗಳಿಗೆ ಮತ್ತು ಚಿಕೂನ್ ಗುನ್ಯಕ್ಕೆ ಔಷಧಿ ಕೊಡುವುದರಲ್ಲಿ ಪ್ರಸಿದ್ಧರು. ವಂಶಪಾರಂಪರ್ಯವಾಗಿ ವಿದ್ಯೆಕಲಿತ ಇವರಿಗೆ ಸುಮಾರು 40 ವರ್ಷಗಳ ಅನುಭವವಿದೆ.

35. ಕಾಮಯ್ಯ ಕೆ. ತಂದೆ ಮ್ಯಾಸರ ಮಲ್ಲಯ್ಯ (09.11.08) : ಚ. ತಾಲ್ಲೂಕಿನ ಗುಂತುಕೋಲಮ್ಮನ ಹಳ್ಳಿಯ ನಿವಾಸಿ, ವಯಸ್ಸು 49, ವೃತ್ತಿಯಲ್ಲಿ ಶಿಕ್ಷಕರು. ಮ್ಯಾಸನಾಯಕ ಜನಾಂಗದವರು. ವಂಶಪಾರಂಪರ್ಯವಾಗಿ ವೈದ್ಯವನ್ನು ಕಲಿತ್ತಿದ್ದಾರೆ. ಚರ್ಮಸೆಲ್ದಿ, ಫಿಟ್ಸ್, ಮಲಬದ್ಧತೆ, ಗಂಡು ಹೆಣ್ಣುಗಳ ಬಿಳುಪಿಗೆ, ಸಕ್ಕರೆ ಕಾಯಿಲೆ, ಜ್ವರ, ನಿಃಶಕ್ತಿ ಮೊದಲಾದವುಗಳಿಗೆ ಔಷಧವನ್ನು ಕೊಡುತ್ತಾರೆ. ಸುಮಾರು 15 ವರ್ಷಗಳ ಅನುಭವವಿದೆ.

36. ಕೃಷ್ಣರೆಡ್ಡಿ ತಂದೆ ಹನುಮಂತಪ್ಪ (29.03.08) : ಚಿ. ತಾಲ್ಲೂಕಿನ ಓರಗಂಟರಮಾಳಿಗೆ ಗ್ರಾಮದವರು. ಕಮ್ಮರೆಡ್ಡಿ ಜನಾಂಗಕ್ಕೆ ಸೇರಿದ ಇವರಿಗೆ 90 ವರ್ಷ. ಕಲ್ಲಹಳ್ಳಿ ಗೊಲ್ಲರ ಅಜ್ಜನಿಂದ ವೈದ್ಯಕಲಿತ ಇವರು ಜಾಂಡಿಸ್ ರೋಗಕ್ಕೆ ಚಿಕಿತ್ಸೆ ನೀಡುವಲ್ಲಿ ಪ್ರಸಿದ್ಧಿಯನ್ನು ಹೊಂದಿದ್ದಾರೆ. ಸುಮಾರು 50 ವರ್ಷಗಳ ಅನುಭವವಿದೆ. ಇವರು ಪತ್ನಿಯೂ ವೈದ್ಯಬಲ್ಲವರಾಗಿದ್ದಾರೆ.

37. ಕೃಷ್ಣಪ್ಪ ತಂದೆ ಸಿದ್ದಲಿಂಗಪ್ಪ (19.10.07) : ಚಿ. ತಾಲ್ಲೂಕಿನ ಬೆಳಗಟ್ಟ ಗ್ರಾಮದವರು. ನಾಯಕ ಜನಾಂಗಕ್ಕೆ ಸೇರಿದ ಇವರಿಗೆ 46 ವರ್ಷ. ಇದೇ ಊರಿನ ಹನುಮಜ್ಜರಿಂದ ವೈದ್ಯಕಲಿತ ಇವರು ಪಶುವೈದ್ಯದಲ್ಲಿ ಪರಿಣತಿ ಹೊಂದಿದ ವೈದ್ಯರು. ಕರಅಡ್ಡ ಬಿದ್ದಾಗ, ಕೋಡು ನೇರವಾಗಲು, ಕುರಿಮೇಕೆಗಳ ಕಾಲುಮುರಿದರೆ ಮುಂತಾದ ರೋಗಗಳಿಗೆ ಚಿಕಿತ್ಸೆ ನೀಡುತ್ತಾರೆ. ಸುಮಾರು 20 ವರ್ಷಗಳ ಅನುಭವವಿದೆ.

38. ಕೃಷ್ಣಪ್ಪ ತಂದೆ ಮೈಗಪ್ಪ (05.08.07) : ಕೃಷ್ಣರಾಜಪುರದ ನಿವಾಸಿ, ವಯಸ್ಸು 62, ನಾಯಕ ಜನಾಂಗಕ್ಕೆ ಸೇರಿದವರಾಗಿದ್ದು, ವಂಶಪಾರಂಪರ್ಯವಾಗಿ ವೈದ್ಯ ಕಲಿತಿದ್ದಾರೆ. ಕೈಮಸುಗು, ಕೆಂಪು ಬಿಳುಪುಕರೆಗಳಿಗೆ ವೈದ್ಯ ಮಾಡುವ ಇವರು, ಕುರಿಗಳ ದೊಮ್ಮೆ ಕಾಯಿಲೆಗೆ ಔಷಧಿ ಕೊಡಲು ಶಿವಮೊಗ್ಗ, ಮೈಸೂರು, ಹಾಸನ ಭಾಗಗಳಿಗೂ ಹೋಗುತ್ತಾರೆ.

39. ಕೃಷ್ಣಮೂರ್ತಿ (ಮೀಸೆ ಮೂರ್ತಣ್ಣ) ತಂದೆ ರಂಗಪ್ಪ (02.08.07) : ಹಿ. ತಾಲ್ಲೂಕಿನ ಮಜರೆ ಕರಿಯನಹಟ್ಟಿಯ ಇವರು ಯಾದವ ಜನಾಂಗಕ್ಕೆ ಸೇರಿದ್ದಾರೆ. ವಯಸ್ಸು 50, ಇತರರಿಂದ ವೈದ್ಯವನ್ನು ಕಲಿತು ಸುಮಾರು 35 ವರ್ಷಗಳಿಂದ ಪಶುವೈದ್ಯಕ್ಕೆ ಚಿಕಿತ್ಸೆ ಮಾಡುತ್ತಿದ್ದಾರೆ.

40. ಕೆಂಚಪ್ಪ ತಂದೆ ಬಡಪ್ಪ (03.08.07) : ಹಿ. ತಾಲ್ಲೂಕಿನ ಯಾದವ ಜನಾಂಗದ ಹಿರಿಯೂರು ತಾಲ್ಲೂಕಿನ ಆದಿವಾಲ ಗೊಲ್ಲರಹಟ್ಟಿಯವರು. ವಯಸ್ಸು 50 ವಂಶಪಾರಂಪರ್ಯವಾಗಿ ವೈದ್ಯವನ್ನು ಕಲಿತಿರುತ್ತಾರೆ. ಇವರು ಪಶುವೈದ್ಯದಲ್ಲಿ ಪರಿಣತಿಯನ್ನು ಹೊಂದಿದ್ದಾರೆ.

41. ಖ್ಯಾತಣ್ಣ ಗೋವಜ್ಜರ ತಂದೆ ನರಸಪ್ಪ (28.08.07. 30.09.07) : ಚ. ತಾಲ್ಲೂಕು ಎಚ್.ಗೊಲ್ಲರಹಟ್ಟಿ ಗ್ರಾಮದವರು. ವೃತ್ತಿ ಕೃಷಿ, ಜಾತಿಯಲ್ಲಿ ಗೊಲ್ಲರು, ವಯಸ್ಸು 70. ವಿದ್ಯೆಯನ್ನು ಗ್ರಂಥಗಳ ಸಹಾಯದಿಂದ ಕಲಿತಿರುತ್ತಾರೆ. ಮೈಕಾವಿಗೆ, ಹೊಟ್ಟೆನೋವು, ಗಂಡಮಾಲೆ ಮತ್ತು ಪಶುಗಳ ರೋಗಗಳಿಗೆ ವೈದ್ಯಮಾಡುವ ಇವರು ಪಶುವೈದ್ಯದಲ್ಲಿ ಅತ್ಯಂತ ಪರಿಣತರು.

42. ಗಂಗಣ್ಣ ತಂದೆ ದೊಣಪ್ಪ (25.08.07) : ಮೊ. ತಾಲ್ಲೂಕಿನ ರೊಪ್ಪ ಗ್ರಾಮದವರು. ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರು ಯಾದವ (ಊರಗೊಲ್ಲರು) ಜನಾಂಗಕ್ಕೆ ಸೇರಿದವರು. ಇವರಿಗೆ 60 ವರ್ಷ. ನೂತಹುಣ್ಣು ಬಿಳುಪು, ಹಾವಿನ ವಿಷ-ಇತ್ಯಾದಿಗಳಿಗೆ ಚಿಕಿತ್ಸೆ ನೀಡುತ್ತಾರೆ. ಸುಮಾರು 25 ವರ್ಷಗಳ ಅನುಭವವಿದೆ.

43. ಗಿಡ್ಡಪ್ಪ ಜಿ ತಂದೆ ಗಾದ್ವಿಈರಪ್ಪ (13.11.08) : ಹೊಸದುರ್ಗ ತಾಲ್ಲೂಕಿನ ಕುಂದೂರು ಗೊಲ್ಲರ ಹಟ್ಟಿಯ ನಿವಾಸಿ. ವಯಸ್ಸು 55, ಗೊಲ್ಲರ ಜನಾಂಗ, ದೊಡ್ಡಪ್ಪನಿಂದ ವಿದ್ಯೆಯನ್ನು ಕಲಿತಿರುತ್ತಾರೆ. ವೃತ್ತಿಯಲ್ಲಿ ಕೃಷಿಕರು ಮತ್ತು ಕಾಟಮ ದೇವರ ಪೂಜಾರಿ, ಬಾಲಗ್ರಹಗಳಿಗೆ ಯಂತ್ರ ಬರೆಯುತ್ತಾರೆ, ದೇವರ ಹೇಳಿಕೆಯನ್ನು ಅನುಸರಿಸಿ ವೈದ್ಯೋಪಚಾರ ಮಾಡುತ್ತಾರೆ.

44. ಗಿಡ್ಡಯ್ಯ ಕೆ.ಎಸ್. ತಂದೆ ಕುರಿಸಣ್ಣಯ್ಯ (25.05.07) : ಚ. ತಾಲ್ಲೂಕಿನ ದಾಸರಮುತ್ತೇನಹಳ್ಳಿ ಗ್ರಾಮದವರು. ವೃತ್ತಿಯಲ್ಲಿ ಕೃಷಿ ಮತ್ತು ಜಾತಿಯಲ್ಲಿ ನಾಯಕ, ವಯಸ್ಸು 70. ವಿದ್ಯೆಯನ್ನು ವಂಶಪಾರಂಪರ್ಯದಿಂದ ಕಲಿತ ಇವರು ರಕ್ತಮೂಲವ್ಯಾದಿ, ಮೊಳೆ ಮೂಲವ್ಯಾದಿ, ಕಾಮಾಲೆ, ಉರಿಮೂತ್ರ, ಇಕ್ಕುಮದ್ದು, ಕರ್ಣ ಶೂಲಿಗೆ – ಈ ಮೊದಲಾದವುಗಳಿಗೆ ವೈದ್ಯ ಮಾಡುತ್ತಾರೆಯಲ್ಲದೆ, ಮಂತ್ರ ವಿದ್ಯೆಯಲ್ಲೂ ನುರಿತರು.

45. ಗಿರಿಯಪ್ಪ ತಂದೆ ತಿಮ್ಮಪ್ಪ (27.07.07, 13.11.08) : ಹೊಸದುರ್ಗ ತಾಲ್ಲೂಕಿನ ಕುಂದೂರು ಗೊಲ್ಲರಹಟ್ಟಿ ಗ್ರಾಮದವರು. ಗೊಲ್ಲರ ಜನಾಂಗಕ್ಕೆ ಸೇರಿದ ಇವರಿಗೆ 42 ವರ್ಷ. ವಂಶಪಾರಂಪರ್ಯವಾಗಿ ವೈದ್ಯವನ್ನು ಕಲಿತ ಇವರು ಪಶು ವೈದ್ಯರಾಗಿದ್ದಾರೆ. ಸುಮಾರು 20 ವರ್ಷಗಳ ವೈದ್ಯದ ಅನುಭವವಿದೆ.

46. ಗುರುಮೂರ್ತಯ್ಯ ಎಂ.ಎನ್. ತಂದೆ ನಂಜುಂಡಯ್ಯ (09.08.07) : ಚಿ. ತಾಲ್ಲೂಕಿನ ಸಿಂಗಾಪುರ ಗ್ರಾಮದವರು. ಐನೋರು(ಜಂಗಮ) ಕುಲಕ್ಕೆ ಸೇರಿದ ಇವರಿಗೆ 55 ವರ್ಷ, ಜಾಂಡಿಸ್ ರೋಗಕ್ಕೆ ಔಷಧಿ ಕೊಡುವುದರಲ್ಲಿ ಪ್ರಸಿದ್ಧಿ ಹೊಂದಿದ್ದಾರೆ. ಇತರರಿಂದ ವೈದ್ಯ ಕಲಿತಿರುತ್ತಾರೆ. ಸುಮಾರು 25 ವರ್ಷಗಳ ಅನುಭವವಿದೆ.

47. ಗೊಲ್ಲರ ರಾಜಪ್ಪ ತಂದೆ ತಿಮ್ಮಪ್ಪ (20.07.07, 24.11.08) : ಹೊ. ತಾಲ್ಲೂಕಿನ ಹನಮಲಿ ಗ್ರಾಮಕ್ಕೆ ಸೇರಿದವರು. ವಂಶಪಾರಂಪರ್ಯದಿಂದ ವೈದ್ಯ ಕಲಿತ ಇವರಿಗೆ 33 ವರ್ಷಗಳು. ಗೊಲ್ಲರ ಜಾತಿಗೆ ಸೇರಿದ ಇವರು ಪಶುವೈದ್ಯದಲ್ಲಿ ಸುಮಾರು 15 ವರ್ಷಗಳ ಅನುಭವವಿದೆ.

48. ಗೋಪಾಲ (28.06.07) : ಮೊಳಕಾಲ್ಮೂರು ತಾಲ್ಲೂಕಿನ ಪಿ.ಟಿ. ಹಟ್ಟಿ ಗ್ರಾಮದವರು. ವಂಶಪಾರಂಪರ್ಯವಾಗಿ ವೈದ್ಯ ಅರಿತ ಇವರು ಗೊಲ್ಲರ ಜಾತಿಗೆ ಸೇರಿದವರು. ಇವರಿಗೆ 37 ವರ್ಷ. ತಮ್ಮ ಅಜ್ಜನಿಂದ ವೈದ್ಯವನ್ನು ಕಲಿತ ಇವರು, ತಮ್ಮ ಕುಟುಂಬದಲ್ಲಿ ಮಾತ್ರ ವೈದ್ಯವನ್ನು ಮಾಡುತ್ತಾರೆ.

49. ಗೋವಿಂದಪ್ಪ ಪೂಜಾರಿ ತಂದೆ ಸಣ್ಣಕಾಡಯ್ಯ (20.10.07) : ಚಿ. ತಾಲ್ಲೂಕಿನ ಬೆಳಗಟ್ಟ ಗ್ರಾಮದವರು. ಮ್ಯಾಸನಾಯಕರ ಜನಾಂಗಕ್ಕೆ ಸೇರಿದ ಇವರಿಗೆ 60 ವರ್ಷ. ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರು ಕೋಡುಹುಣ್ಣು, ರಕ್ತಕರೆದರೆ, ಬಾಲದ ಕೂದಲು ಉದುರಿದರೆ–ಮುಂತಾದ ಪಶುಸಂಬಂಧಿ ರೋಗಗಳಿಗೆ ಚಿಕಿತ್ಸೆ ನೀಡುತ್ತಾರೆ. ಸುಮಾರು 40 ವರ್ಷಗಳ ಅನುಭವವಿದೆ.

50. ಗೌಡ್ರಬೊಮ್ಮಣ್ಣ ತಂದೆ ಪಟೇಲ್ ದೊಡ್ಡಯ್ಯ (17.07.07) : ಹುಚ್ಚು ನಾಯಿ ಕಡಿತಕ್ಕೆ ಚಿಕಿತ್ಸೆ ನೀಡುವಲ್ಲಿ ಪ್ರಸಿದ್ಧರಾದ ಇವರು ಲಿಂಗಾಯಿತ ಕುಲದವರಾಗಿದ್ದು. ಹೊ. ತಾಲ್ಲೂಕಿನ ತಾಳಕಟ್ಟ ಗ್ರಾಮದವರು. ಇವರಿಗೆ 67 ವರ್ಷ, ವಂಶಪಾರಂಪರ್ಯವಾಗಿ ವೈದ್ಯ ಕಲಿತಿರುತ್ತಾರೆ.

51. ಚಲುಮಕ್ಕ (ಫೆಬ್ರವರಿ 2006) : ಚಳ್ಳಕೆರೆ ತಾಲ್ಲೂಕಿನ ಬೊಮ್ಮನಕುಂಟೆ ಗ್ರಾಮದವರು. ವೃತ್ತಿಯಲ್ಲಿ ಕೃಷಿಕರು, ಜಾತಿಯಲ್ಲಿ ಲಿಂಗಾಯಿತರು, ವಯಸ್ಸು 40, ಪಕ್ಕದ ಮನೆಯ ಗಂಗಜ್ಜಿಯಿಂದ ವಿದ್ಯೆಯನ್ನು ಕಲಿತ ಚೆಲುಮಕ್ಕ ಮಕ್ಕಳ ವೈದ್ಯೋಪಚಾರದಲ್ಲಿ ನುರಿತವಳು.

52. ಚಂದ್ರಪ್ಪ ತಂದೆ ಈರಪ್ಪ (27.07.07) : ಹೊಸದುರ್ಗ ತಾಲ್ಲೂಕಿನ ಗುತ್ತಿಕಟ್ಟೆ ಗೊಲ್ಲರಹಟ್ಟಿ ಗ್ರಾಮಕ್ಕೆ ಸೇರಿದವರು. ಗೊಲ್ಲರ ಜನಾಂಗಕ್ಕೆ ಸೇರಿದ ಇವರಿಗೆ 50 ವರ್ಷ. ಇತರರಿಂದ ವೈದ್ಯ ಕಲಿತ ಇವರು ಹೊರಜಂತು ರೋಗಕ್ಕೆ ಚಿಕಿತ್ಸೆ ನೀಡುವಲ್ಲಿ ಪರಿಣತಿ ಹೊಂದಿದ್ದಾರೆ. ಇವರ ವೈದ್ಯದ ಅನುಭವ ಸುಮಾರು 30 ವರ್ಷಗಳು.

53. ಚಂದ್ರಣ್ಣ ತಂದೆ ದೊಡ್ಡೋಬಯ್ಯ (28.06.07, 04.11.08) : ಮೊಳಕಾಲ್ಮೂರು ತಾಲ್ಲೂಕಿನ ಯರಪೋತ ಜೋಗಿಹಳ್ಳಿ ಗ್ರಾಮದ ನಿವಾಸಿ. ನಾಯಕ ಜನಾಂಗಕ್ಕೆ ಸೇರಿದ ಇವರಿಗೆ 42 ವರ್ಷ. ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರು ಕುರಿವೈದ್ಯದಲ್ಲಿ ಪ್ರಸಿದ್ಧರು. ಸುಮಾರು 20 ವರ್ಷಗಳ ಅನುಭವವಿದೆ.

54. ಚಂದ್ರಶೇಖರಪ್ಪ ಬಿ.ಟಿ ತಂದೆ ತಿಮ್ಮಯ್ಯ (14.11.08) : ಹೊ. ತಾಲ್ಲೂಕಿನ ಜಿ. ವಡೇರಹಳ್ಳಿಯ ನಿವಾಸಿ. ವಯಸ್ಸು 60, ದೊಡ್ಡಪ್ಪನಿಂದ ವಿದ್ಯೆಯನ್ನು ಕಲಿತ್ತಿದ್ದಾರೆ. ಲಿಂಗಾಯಿತ ಜನಾಂಗದವರಾಗಿದ್ದು, ಹಾವಿನ ವಿಷಕ್ಕೆ, ಹುಳುಕಿದರೆ, ಬಟ್ಟೆಬಿದ್ದರೆ ಚಿಕಿತ್ಸೆ ಮಾಡುತ್ತಾರೆ. ಇವರು ಪಶುವೈದ್ಯರೂ ಹೌದು. ಸುಮಾರು 30 ವರ್ಷಗಳ ಅನುಭವವಿದೆ.

55. ಚಂದ್ರಶೇಖರಯ್ಯ ತಂದೆ ಸಿದ್ದಯ್ಯ (17.07.07) : ವೃತ್ತಿಯಲ್ಲಿ ಹೋಟೆಲ್ ನಡೆಸುವವರಾಗಿದ್ದು, ಹೊ. ತಾಲ್ಲೂಕಿನ ತಾಳಕಟ್ಟ ಗ್ರಾಮದ ನಿವಾಸಿ. ಜಂಗಮ ಜನಾಂಗಕ್ಕೆ ಸೇರಿದ ಇವರು ಇತರರಿಂದ ವೈದ್ಯವನ್ನು ಕಲಿತ್ತಿದ್ದಾರೆ. ಇವರಿಗೆ 70 ವರ್ಷ, ಇಸುಬು, ಕಜ್ಜಿ ಹಾಗೂ ಭೇದಿಗೆ ಉಪಚರಿಸುತ್ತಾರೆ.

56. ಚಿತ್ತಯ್ಯ ತಂದೆ ರಂಗಯ್ಯ (28.08.07) : ಚ. ತಾಲ್ಲೂಕಿನ ಮನ್ನೇಕೋಟೆ ಗ್ರಾಮದವರು. ನಾಯಕ ಜನಾಂಗಕ್ಕೆ ಸೇರಿದ ಇವರು ಸ್ವಂತ ಆಸಕ್ತಿಯಿಂದ ವೈದ್ಯ ಕಲಿತಿದ್ದಾರೆ. ಇವರಿಗೆ 66ವರ್ಷ. ಪಶುವೈದ್ಯದಲ್ಲಿ ಪರಿಣತಿ ಹೊಂದಿದ ಇವರಿಗೆ ಸುಮಾರು 28 ವರ್ಷಗಳ ಅನುಭವವಿದೆ.

57. ಚಿಲುಮಪ್ಪ ತಂದೆ ತಿಪ್ಪಣ್ಣ (06.11.08, 07.11.08) : ಚ. ತಾಲ್ಲೂಕಿನ ಹರವಿಗೊಂಡನಹಳ್ಳಿ ಗ್ರಾಮದವರು, ವಯಸ್ಸು 60, ಲಿಂಗಾಯಿತ ಜನಾಂಗದವರು, ಚಟ್ಟೇಕಂಬದ ಈರಪ್ಪ ತಾತರಿಂದ ವಿದ್ಯೆಯನ್ನು ಕಲಿತ್ತಿದ್ದಾರೆ. ಜಾಂಡಿಸ್, ಟಿ.ಬಿ.ಗೆ ಅಸ್ತಮಾ ಮುಂತಾದವುಗಳಿಗೆ ವೈದ್ಯ ಮಾಡುತ್ತಾರೆ. ಸುಮಾರು 25 ವರ್ಷಗಳ ಅನುಭವವಿದೆ.

58. ಜಗದೀಶ್ ಎಂ.ಜಿ. ತಂದೆ ಬಿ.ಗಂಗಪ್ಪ (08.08.07) : ಚಿತ್ರದುರ್ಗದ ನಿವಾಸಿ. ಬಲಿಜ ಜನಾಂಗಕ್ಕೆ ಸೇರಿದ ಇವರಿಗೆ 52 ವರ್ಷ, ವಂಶಪಾರಂಪರ್ಯವಾಗಿ ವೈದ್ಯಕಲಿತಿದ್ದಾರೆ. ಮಕ್ಕಳ ಅಸ್ತಮಾ, ಕೈಕಾಲು ಉಳುಕಿದರೆ ಮುಂತಾದ ಮನುಷ್ಯ ಸಂಬಂಧಿ ರೋಗಗಳಿಗೆ ಉಪಚರಿಸುತ್ತಾರೆ. ಸುಮಾರು 10 ವರ್ಷಗಳ ಅನುಭವವಿದೆ ಇವರು ವೃತ್ತಿಯಲ್ಲಿ ಶಿಕ್ಷಕರು.

59. ಜಯಪ್ರಸಾದ್ : ಇವರು ಮೊಳಕಾಲ್ಮೂರು ನಿವಾಸಿ. ಶಿಕ್ಷಕರಾದ ಇವರು ಸರ್ಪ ಸುತ್ತಿಗೆ ಚಿಕಿತ್ಸೆಯನ್ನು ಬಲ್ಲವರಾಗಿದ್ದಾರೆ. ಇವರಿಗೆ 53 ವರ್ಷ. ಇವರಿಗೆ ಸುಮಾರು 8 ವರ್ಷಗಳ ಅನುಭವವಿದೆ.

60. ತಮ್ಮಣ್ಣ ಕೆ.ಎಸ್. ತಂದೆ ಕುರಿಸೂರಪ್ಪ (22.08.07) : ಚಿ. ತಾಲ್ಲೂಕಿನ ಲಿಂಗಾವರಹಟ್ಟಿ ಗ್ರಾಮಕ್ಕೆ ಸೇರಿದವರು. ನಾಯಕ ಜನಾಂಗಕ್ಕೆ ಸೇರಿದ ಇವರಿಗೆ 63 ವರ್ಷ. ತಾಯಿ ಮತ್ತು ತಂದೆ ಇಬ್ಬರಿಂದಲೂ ವೈದ್ಯ ಕಲಿತ ಇವರು ಕಣ್ಣಿನ ಪೊರೆ, ಸಮಸ್ತ ಸೆಲ್ಡಿ, ಕಜ್ಜಿ, ನೆನಪಿನ ಶಕ್ತಿ, ಶಕ್ತಿಚೂರ್ಣ ಹಾಗೂ ಇನ್ನಿತರ ಸುಮಾರು 20 ಮನುಷ್ಯ ಸಂಬಂಧಿ ರೋಗಗಳಿಗೆ ಚಿಕಿತ್ಸೆ ನೀಡುತ್ತಾರೆ. ಸುಮಾರು 30 ವರ್ಷಗಳ ಅನುಭವವಿರುವ ಪರಿಣತ ವೈದ್ಯರು. ಇವರಲ್ಲಿ ಪಾಳೆಗಾರರ ಕಾಲದಿಂದಲೂ ಇರುವ ವೈದ್ಯಕ್ಕೆ ಸಂಬಂಧಿಸಿದ ಕೈಬರಹಗಳಿವೆ.

61. ತಾಳಿಕಟ್ಟೆ ರಾಮಪ್ಪ ತಂದೆ ಭೈರಪ್ಪ (17.07.07) : ಹೊ. ತಾಲ್ಲೂಕಿನ ತಾಳಕಟ್ಟ ಗ್ರಾಮದ ಇವರು ವಂಶಪಾರಂಪರ್ಯದಿಂದ ವೈದ್ಯ ಕಲಿತ್ತಿದ್ದಾರೆ. ನಾಯಕ ಜನಾಂಗಕ್ಕೆ ಸೇರಿದ ಇವರಿಗೆ 60 ವರ್ಷಗಳು. ಮನುಷ್ಯರು ಹಾಗೂ ಪಶುಗಳಿಗೆ ವೈದ್ಯ ಮಾಡುತ್ತಾರೆ.

62. ತಿಪ್ಪೇಶಪ್ಪ ತಂದೆ ಮೇಕೆ ರಂಗಪ್ಪ (27.07.07) : ಹೊಸದುರ್ಗ ತಾಲ್ಲೂಕಿನ ಕೊಂಡಾಪುರ ಗ್ರಾಮದವರು. ಉಪ್ಪಾರ ಜನಾಂಗಕ್ಕೆ ಸೇರಿದ ಇವರಿಗೆ 60 ವರ್ಷ, ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರು ಪಶುವೈದ್ಯರಾಗಿದ್ದಾರೆ. ಇವರಿಗೆ ಸುಮಾರು 40 ವರ್ಷಗಳ ವೈದ್ಯದ ಅನುಭವವಿದೆ.

63. ತಿಪ್ಪೇರುದ್ರಪ್ಪ ಬಿ.ಪಿ. ತಂದೆ ಪಾತಣ್ಣ (02.08.07) : ಯಾದವ ಜನಾಂಗಕ್ಕೆ ಸೇರಿದ ಇವರು ವಂಶಪಾರಂಪರ್ಯವಾಗಿ ವೈದ್ಯವನ್ನು ಕಲಿತಿರುತ್ತಾರೆ. ವಯಸ್ಸು 45, ಹಿರಿಯೂರು ತಾಲ್ಲೂಕಿನ ಬೀರೇನ ಹಳ್ಳಿಯ ನಿವಾಸಿ, ಇವರು ಪಶುವೈದ್ಯದಲ್ಲಿ ಪ್ರಸಿದ್ಧಿ ಹೊಂದಿದ್ದಾರೆ.

64. ತಿಪ್ಪಣ್ಣ ಎಚ್. ತಂದೆ ಹನುಮಯ್ಯ (26.06.07, 10.08.07, 02.10.08) : ಚ. ತಾಲ್ಲೂಕಿನ ಅಬ್ಬೇನಹಳ್ಳಿ ಗ್ರಾಮದವರು. ವೃತ್ತಿ ಕೃಷಿ, ಜಾತಿ ಹರಿಜನ, ವಯಸ್ಸು 63. ವಿದ್ಯೆಯನ್ನು ಚಿನ್ನೋಬನಹಳ್ಳಿ ಸಿದ್ಧಲಿಂಗಪ್ಪ ಮತ್ತು ಇತರರಿಂದ ಕಲಿತಿರುತ್ತಾರೆ. ಬಾಣಂತಿ ಕಾಯಿಲೆ, ಋತುಸ್ರಾವ, ಹಾವು ಮತ್ತು ಚೇಳುಗಳ ಕಡಿತ ಹೊಟ್ಟೆಯಲ್ಲಿರುವ ಗಡ್ಡೆಗೆ, ಬಾಣಂತಿ ಸನ್ನಿ – ಈ ಮೊದಲಾದವುಗಳಿಗೆ ವೈದ್ಯ ಮಾಡುತ್ತಾರೆಯಲ್ಲದೆ ಮನೋವೈದ್ಯದಲ್ಲಿ ಅತ್ಯಂತ ನುರಿತವರು ಮತ್ತು ದುರುಗಮ್ಮನ ಪೂಜಾರಿಯೂ ಆಗಿದ್ದಾರೆ.

65. ತಿಪ್ಪೇಸ್ವಾಮಿ ಹೂಡೇಗಳ ತಂದೆ ಚಿತ್ತಯ್ಯ (24.08.07) : ಮೊ. ತಾಲ್ಲೂಕಿನ ತುಮಕೋರ್ಲಹಳ್ಳಿ ಗ್ರಾಮದವರು. ನಾಯಕ ಜನಾಂಗಕ್ಕೆ ಸೇರಿದ ಇವರಿಗೆ 70 ವರ್ಷ. ಇತರರಿಂದ ವೈದ್ಯ ಕಲಿತಿರುತ್ತಾರೆ, 40 ವರ್ಷಗಳ ಅನುಭವವಿದೆ. ಕುಷ್ಠರೋಗ, ಗ್ಯಾಸ್ಟ್ರಿಕ್, ಅರೆತಲೆನೋವು ಇತ್ಯಾದಿ ಮಾನವ ಸಂಬಂಧಿ ರೋಗಗಳಿಗೆ ವೈದ್ಯ ಮಾಡುತ್ತಾರೆ.

66. ತಿಪ್ಪಜ್ಜಿ (12.11.04) : ಚ. ತಾಲ್ಲೂಕಿನ ಅಬ್ಬೇನ ಹಳ್ಳಿ ಗ್ರಾಮದವರು. ವಯಸ್ಸು 90, ಲಿಂಗಾಯಿತ ಜನ. ಕಣ್ಣುಗಳಲ್ಲಿನ ಕಸ, ಕಡ್ಡಿ ಮತ್ತು ಕಲ್ಲುಗಳನ್ನು ನಾಲಿಗೆಯಿಂದ ಹೊರತಗೆಯುವಲ್ಲಿ ಪರಿಣತಿಯನ್ನು ಹೊಂದಿರುತ್ತಾರೆ. [ಅಜ್ಜಿಯು 2008ರಲ್ಲಿ ದಿವಂಗತರಾಗಿದ್ದಾರೆ.]

67. ತಿಪ್ಪೇಸ್ವಾಮಿ ತಂದೆ ಯರ‍್ರಿಗುರುವಯ್ಯ (02.06.07, 10.07.07) : ಚ. ತಾಲ್ಲೂಕಿನ ಮುಷ್ಟಲಗುಮ್ಮಿ ಗ್ರಾಮದವರು, ವೃತ್ತಿ ಕೃಷಿ, ಜಾತಿ ನಾಯಕ, ವಯಸ್ಸು 36. ವಿದ್ಯೆಯನ್ನು ವಂಶಪಾರಂಪರ್ಯವಾಗಿ ಕಲಿತ ಇವರು ಮಕ್ಕಳ ಫಲಕ್ಕೆ, ಗ್ಯಾಸ್ಟ್ರಿಕ್, ಬಟ್ಟೆ ಬಿದ್ದರೆ, ಕೆಂಪುಮುಟ್ಟೆಗೆ, ಮಾಟ ಮಾಡಿಸಿದ್ದನ್ನು ಇಳಿಸುವುದು, ಪಿತ್ತಕ್ಕೆ, ತೊಡೆವಾಳ ಮುಂತಾದವುಗಳಿಗೆ ವೈದ್ಯಮಾಡುತ್ತಾರೆ.

68. ತಿಪ್ಪೇಸ್ವಾಮಿ ಸಿ. ತಂದೆ ಚಿಕ್ಕಪ್ಪ (05.08.07) : ಹಿ. ತಾಲ್ಲೂಕಿನ ಆದಿವಾಲಗೊಲ್ಲರಹಟ್ಟಿಯವರು, ವಂಶಪಾರಂಪರ್ಯವಾಗಿ ಪಶುವೈದ್ಯ ಬಲ್ಲವರಾಗಿದ್ದಾರೆ. ಸುಮಾರು 20 ವರ್ಷಗಳ ಅನುಭವ,ಯಾದವ ಜನಾಂಗದವರು.

69. ತಿಪ್ಪೇಸ್ವಾಮಿ ತಂದೆ ಬಂಜಗೆರೆ ಮಾರಯ್ಯ (28.08.07) : ಚ. ತಾಲ್ಲೂಕಿನ ಮನ್ನೇಕೋಟೆ ಗ್ರಾಮದವರು. ಹರಿಜನ ಜಾತಿಗೆ ಸೇರಿದ ಇವರಿಗೆ 60 ವರ್ಷ. ಹಿರೇಹಳ್ಳಿ ಓಬಣ್ಣನಿಂದ ವೈದ್ಯ ಕಲಿತ ಇವರು ಫಿಟ್ಸ್, ಅಳ್ಳೆರೋಗ, ಕಲ್ಲೊತ್ತು ಮುಂತಾದ ರೋಗಗಳಿಗೆ ವೈದ್ಯ ಮಾಡುತ್ತಾರೆ. ಸುಮಾರು 25 ವರ್ಷಗಳ ಅನುಭವವಿರುವ ವೈದ್ಯರಾಗಿದ್ದಾರೆ.

70. ತಿಪ್ಪಣ್ಣ ಜಿ.ಟಿ. ತಂದೆ ತಿಪ್ಪಣ್ಣ (07.08.07) : ಚಿ. ತಾಲ್ಲೂಕಿನ ಚಿಪ್ಪಿನಕೆರೆ ಗ್ರಾಮದವರು. ಯಾದವ ಜನಾಂಗಕ್ಕೆ ಸೇರಿದ ಇವರಿಗೆ 65 ವರ್ಷ. ಬೇರೆಬೇರೆಯ ಅನುಭವಿಗಳಿಂದ ವೈದ್ಯ ಕಲಿತ ಇವರು ಕಣ್ಣಿನ ಪೊರೆ, ಕೆಂಪುಕಾಶಿರೋಗ, ತಲೆಕೂದಲು ಉದುರುವುದಕ್ಕೆ, ಎದೆನೋವು – ಮುಂತಾದ ಮನುಷ್ಯ ಸಂಬಂಧಿ ಹಾಗೂ ಕೆಲವು ಪಶುಸಂಬಂಧಿ ರೋಗಗಳಿಗೆ ಚಿಕಿತ್ಸೆ ನೀಡುವ ಪರಿಣತರು. ಸುಮಾರು 30 ವರ್ಷಗಳ ಅನುಭವವಿದೆ.

71. ತಿಮ್ಮರಾಯಶೆಟ್ಟಿ ತಂದೆ ರಾಮಶೆಟ್ಟಿ (30.03.08) : ಇವರು ಚಿತ್ರದುರ್ಗದ ನಿವಾಸಿ. ಆರ್ಯ ವೈಶ್ಯ ಜನಾಂಗಕ್ಕೆ ಸೇರಿದವರು. ಚಿತ್ರದುರ್ಗ ಜಿಲ್ಲೆಯ ಪಾರಂಪರಿಕ ವೈದ್ಯ ಪರಿಷತ್ತಿನ ಕಾರ್ಯದರ್ಶಿಗಳಾಗಿದ್ದು ಬಿಎಸ್‌ಸಿ ಪದವೀಧರರು. ಪಂಡಿತ ಕೃಷ್ಣಯ್ಯ ಮತ್ತು ಮದಕರಿಪುರದ ಎಮ್ಮೆಕೆಂಚಣ್ಣನವರಿಂದ ವೈದ್ಯ ಕಲಿತ ಇವರಿಗೆ 61 ವರ್ಷ. ಇವರು ಗರ್ಭಕೋಶದ ಶುದ್ಧಿ, ನಿಃಶಕ್ತಿಗೆ, ನೆನಪಿನ ಶಕ್ತಿಗೆ, ಬಾಣಂತಿ ಸನ್ನಿಗೆ, ಉಷ್ಣ ನಿಯಂತ್ರಣ ಮುಂತಾದ ಮನುಷ್ಯ ಸಂಬಂಧಿ ರೋಗಗಳಿಗೆ ಉಪಚರಿಸುತ್ತಾರೆ. ಸುಮಾರು 30 ವರ್ಷಗಳ ಅನುಭವವಿದೆ. ವೈದ್ಯಕ್ಕೆ ಸಂಬಂಧಿಸಿದ ಓಲೆಗರಿಗಳನ್ನು ಹೊಂದಿದ್ದಾರೆ.

72. ತಿಪ್ಪೇಸ್ವಾಮಿ ಪೂಜಾರಿ (03.06.07, 12.07.07) : ಚ. ತಾಲ್ಲೂಕಿನ ಗಜ್ಜುಗಾನಹಳ್ಳಿ ಗ್ರಾಮದವರು. ವೃತ್ತಿಯಲ್ಲಿ ಗ್ರಾಮದೇವತೆಯ ಪೂಜಾರಿ. ಜಾತಿ ನಾಯಕ, ವಯಸ್ಸು 50. ವಿದ್ಯೆಯನ್ನು ವಂಶಪಾರಂಪರ್ಯವಾಗಿ ಕಲಿತ ಇವರು ಬಿಳಿಕೆಂಪು ಮುಟ್ಟು, ಕುಷ್ಠರೋಗ, ಪಾಂಡುರೋಗ, ಸಕ್ಕರೆ ಕಾಯಿಲೆ, ಪಾರ್ಶ್ವವಾಯು, ಧಾತು ಪುಷ್ಠಿಯಾಗುವುದಕ್ಕೆ, ಎದೆಹಾಲು ಹೆಚ್ಚಾಗುವುದಕ್ಕೆ, ಜಾಂಡಿಸ್ ಮತ್ತು ಹುಚ್ಚಿಗೆ – ಈ ಮೊದಲಾದವುಗಳಿಗೆ ವೈದ್ಯಮಾಡುತ್ತಾರೆ.

73. ತಿಮ್ಮಯ್ಯ ಕೊಟಿಗೆ ತಂದೆ ತಿಮ್ಮಯ್ಯ (28.08.07, 30.09.07) : ಚ. ತಾಲ್ಲುಕಿನ ಬೇಡರೆಡ್ಡಿಹಳ್ಳಿ ಗ್ರಾಮದವರು, ವೃತ್ತಿ ಕೃಷಿ, ಜಾತಿ ನಾಯಕ, ವಯಸ್ಸು 74, ವಿದ್ಯೆಯನ್ನು ತಮ್ಮ ತಾತನಿಂದ ಕಲಿತ್ತಿದ್ದಾರೆ. ಹಾವಿನ ಕಡಿತಕ್ಕೆ, ಮೂಗುಣ್ಣು, ಪಶುರೋಗ ಚಿಕಿತ್ಸೆಯಲ್ಲಿ ಕುಂದುದಾದರೆ, ಸೆಲೆ ಒಣಕುಂದು ಮುಂತಾದ ರೋಗಗಳಿಗೆ ವೈದ್ಯ ಮಾಡುತ್ತಾರೆ. ವಿಷ ಚಿಕಿತ್ಸೆಯಲ್ಲಿ ಪ್ರಸಿದ್ಧರು.

74. ತಿಪ್ಪಜ್ಜಿ ಗಂಡ ನರಸಿಂಹಪ್ಪ (15.07.06, 04.08.06, 17.12.06, 06.11.08) : ಚ. ತಾಲ್ಲೂಕಿನ ಚನ್ನಮ್ಮನಾಗತಿಹಳ್ಳಿ ಗ್ರಾಮದವರು. ವೃತ್ತಿ ಕೂಲಿ, ಜಾತಿ ಅಡವಿಗೊಲ್ಲರು, ವಯಸ್ಸು 68, ವಂಶಪರಾಂಪರ್ಯವಾಗಿ ವಿದ್ಯೆಯನ್ನು ಕಲಿತ ತಿಪ್ಪಜ್ಜಿ ವಾಯು, ಮಕ್ಕಳ ಫಲ, ಫಿಟ್ಸ್, ಕಾಮಾಲೆ, ಹುಚ್ಚು, ಜ್ವರ, ಕಜ್ಜಿ, ಮೊಲೆಹುಣ್ಣು, ಎದೆಹಾಲು ವೃದ್ಧಿಗೆ, ಸನ್ನಿಪಾತ, ಕೈಮಸುಗು, ಅಳ್ಳೆರೋಗ ಮುಂತಾದವುಗಳಿಗೆ ವೈದ್ಯಮಾಡುತ್ತಾರೆ. ವಿಶೇಷವೆಂದರೆ ಮೀಟುವಾಯು, ಕೀಲುವಾಯು, ನರವಾಯುಗಳಿಗೆ ಔಷಧಿ ಕೊಡುವುದರಲ್ಲಿ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಬೆಂಗಳೂರು ಸೇರಿದಂತೆ ಬೇರೆ ಬೇರೆ ಭಾಗಗಳಿಂದಲೂ ಜನರು ಬರುತ್ತಾರೆ.

75. ದಾಕ್ಷಾಯಣಮ್ಮ ಎಸ್.ವಿ. ಗಂಡ ಜಿ.ಎಸ್. ಬಸಪ್ಪ (10.04.08, 16.04.08) : ಚ. ತಾಲ್ಲೂಕಿನ ಚನ್ನಮ್ಮನಾಗತಿಹಳ್ಳಿಗೆ ಸೇರಿದವರು. ಗೊಲ್ಲರ ಜನಾಂಗಕ್ಕೆ ಸೇರಿದ ಇವರಿಗೆ 43 ವರ್ಷ. ವೃತ್ತಿಯಲ್ಲಿ ಶಿಕ್ಷಕಿಯಾಗಿದ್ದು, ಶೀತದಗಡ್ಡೆ, ಕೈಮುಸಗು ರೋಗಗಳಿಗೆ ಚಿಕಿತ್ಸೆ ನೀಡುತ್ತಾರೆ. ಇತರರಿಂದ ವೈದ್ಯ ಕಲಿತ ಇವರಿಗೆ ಸುಮಾರು 20 ವರ್ಷಗಳ ವೈದ್ಯದ ಅನುಭವವಿದೆ.

76. ದಾಸರಪಾಲಯ್ಯ ತಂದೆ ಓಬಯ್ಯ (01.08.06) : ಚ. ತಾಲ್ಲೂಕಿನ ನಲಜಾಮನಹಟ್ಟಿ ಗ್ರಾಮದವರು. ವೃತ್ತಿ ಕೃಷಿ, ಜಾತಿ ನಾಯಕ, ವಯಸ್ಸು 72. ವಿದ್ಯೆಯನ್ನು ವಂಶಪಾರಂಪರ್ಯವಾಗಿ ಕಲಿತ ಇವರು ನಾಯಿಕೆಮ್ಮು, ಲಕ್ವ, ಮಂಡಿನೋವು, ಮಲ-ಮೂತ್ರ ಕಟ್ಟಾದರೆ, ತೊನ್ನು – ಈ ಮುಂತಾದ ರೋಗಗಳಿಗೆ ವೈದ್ಯ ಮಾಡುತ್ತಾರೆ. ಸುಮಾರು 35 ವರ್ಷಗಳ ಅನುಭವವಿದೆ.

77. ದಿಲ್‌ಷಾ (04.08.07) : ಹಿ. ತಾಲ್ಲೂಕಿನ ಎ.ವಿ. ಕೊಟ್ಟಿಗೆಯವರು. ವಯಸ್ಸು 40. ಮುಸ್ಲಿಂ ಜನಾಂಗದವರು. ಮಕ್ಕಳಿಗೆ ವೈದ್ಯವನ್ನು ಮಾಡುತ್ತಾರೆ.

78. ದೇವಲನಾಯ್ಕ ಬಿ. (09.08.07) : ಚಿ. ತಾಲ್ಲೂಕಿನ ದೇವಪುರದಹಟ್ಟಿ ಗ್ರಾಮದವರಾಗಿದ್ದು, ಲಂಬಾಣಿ ಜನಾಂಗಕ್ಕೆ ಸೇರಿದ್ದಾರೆ. 49 ವರ್ಷ, ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರು ವೃತ್ತಿಯಲ್ಲಿ

ಶಿಕ್ಷಕರು. ಜಾಂಡೀಸ್ ಹಾಗೂ ಬಿಟ್ಟು ಬಿಟ್ಟು ಬರುವ ಜ್ವರಕ್ಕೆ ಉಪಚರಿಸುತ್ತಾರೆ. ಸುಮಾರು 20 ವರ್ಷಗಳ ಅನುಭವವಿದೆ.

79. ದೇವಿರಮ್ಮ ಗಂಡ ಸಂಜೀವಪ್ಪ (07.11.08) : ಚ. ತಾಲ್ಲೂಕಿನ ವೃಂದವ್ವನಹಳ್ಳಿಯವರು, ವಯಸ್ಸು 74. ತಂದೆಯಿಂದ ವಿದ್ಯೆಯನ್ನು ಕಲಿತರು. ಕೂಡುಒಕ್ಕಲಿಗ ಜನಾಂಗಕ್ಕೆ ಸೇರಿದ್ದಾರೆ. ಹಾವಿನ ವಿಷಕ್ಕೆ ವೈದ್ಯ ಮಾಡುತ್ತಾರೆ. ಸುಮಾರು 35 ವರ್ಷಗಳ ಅನುಭವವಿದೆ.

80. ದೇವಿಕರಿಯಪ್ಪ ತಂದೆ ಕರಿಯಪ್ಪ (26.07.07) : ಹೊಸದುರ್ಗ ತಾಲ್ಲೂಕಿನ ಕುಂಟು ಕೆಂಚಯ್ಯನಹಟ್ಟಿ ಗ್ರಾಮಕ್ಕೆ ಸೇರಿದವರು. ಕುರುಬ ಜನಾಂಗಕ್ಕೆ ಸೇರಿದ ಇವರಿಗೆ 80 ವರ್ಷ. ಇತರರಿಂದ ವೈದ್ಯ ಕಲಿತ ಇವರು ಪಶು ವೈದ್ಯರಾಗಿದ್ದಾರೆ. ಇವರಿಗೆ ಸುಮಾರು 50 ವರ್ಷಗಳ ವೈದ್ಯದ ಅನುಭವವಿದೆ.

81. ದೊಡ್ಡ ಬೈರಪ್ಪ ತಂದೆ ಕುರಿಯರ ಹನುಮಣ್ಣ (27.07.07) : ಹೊಸದುರ್ಗ ತಾಲ್ಲೂಕಿನ ಕೊಂಡಾಪುರ ಗ್ರಾಮದವರು. ಉಪ್ಪಾರ ಜನಾಂಗಕ್ಕೆ ಸೇರಿದ ಇವರಿಗೆ 54 ವರ್ಷ. ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರು ದನದ ವೈದ್ಯರಾಗಿದ್ದಾರೆ. ಸುಮಾರು 20 ವರ್ಷಗಳ ಅನುಭವವಿದೆ.

82. ದೊಡ್ಡ ಚಿನ್ನಯ್ಯ ತಂದೆ ದೇವರೆತ್ತಿನ ಬಸಯ್ಯ (28.06.07, 04.11.08) : ಮೊ. ತಾಲ್ಲೂಕಿನ ಚಿಕ್ಕುಂತಿ ಗ್ರಾಮದವರು. ನಾಯಕ ಜನಾಂಗಕ್ಕೆ ಸೇರಿದ ಇವರು ವಂಶಪಾರಂಪರ್ಯದಿಂದ ವೈದ್ಯದಿಂದ ಕಲಿತ್ತಿದ್ದರೆ. ಇವರಿಗೆ 40 ವರ್ಷ ವಯಸ್ಸು. ಇವರು ಮನುಷ್ಯ ಸಂಬಂಧಿ ಹಾಗೂ ಪಶು ಸಂಬಂದಿ ರೋಗಗಳಿಗೆ ವೈದ್ಯ ನೀಡುತ್ತಾರೆ. ಸುಮಾರು 15 ವರ್ಷಗಳ ಅನುಭವವಿದೆ.

83. ಧರ್ಮರಾಜ (03.09.09) : ಚ. ತಾಲ್ಲೂಕಿನ ಕೋಡಿಹಳ್ಳಿ ಗ್ರಾಮದವರು. ವೃತ್ತಿಯಲ್ಲಿ ಶಿಕ್ಷಕರಾದ ಇವರಿಗೆ 50 ವರ್ಷ. ಜಾಂಡಿಸ್ ರೋಗಕ್ಕೆ ಚಿಕಿತ್ಸೆಯನ್ನು ನೀಡುತ್ತಾರೆ. ಸುಮಾರು 10 ವರ್ಷಗಳ ಅನುಭವವಿದೆ.

84. ಧನಂಜಯ ಎಚ್.ಪಿ ತಂದೆ ಪಂಡಿತ ಪೆದ್ದಯ್ಯ (08.11.08, 07.11.08) : ಚ. ತಾಲ್ಲೂಕಿನ ಕಾಮಸಮುದ್ರ ಗ್ರಾಮದವರು, ವಯಸ್ಸು 65. ವಂಶಪಾರಂಪರ್ಯವಾಗಿ ವಿದ್ಯೆಯನ್ನು ಕಲಿತ್ತಿದ್ದಾರೆ. ನಾಯಿಂದ ಜನಾಂಗದವರು. ವೃತ್ತಿಯಲ್ಲಿ ಕೃಷಿಕರು. ವಿವಿಧ ಹುಣ್ಣುಗಳಿಗೆ ವೈದ್ಯ ಮಾಡುತ್ತಾರೆ. ಸುಮಾರು 25 ವರ್ಷಗಳ ಅನುಭವವಿದೆ. ಶಿವಮೊಗ್ಗ, ಆಂದ್ರದ ಅಮರಾಪುರ ಕಡೆಗಳಿಂದಲೂ ರೋಗಿಗಳು ಬರುತ್ತಾರೆ. ವೃತ್ತಿಯಲ್ಲಿ ಕೃಷಿಕರು.

85. ನಡುಮಯ್ಯ ತಂದೆ ಈರ್‌ಕರಿಯಣ್ಣ (04.06.07, 27.08.07, 01.02.08) : ಚ. ತಾಲ್ಲೂಕಿನ ಮಲ್ಲೋರಹಳ್ಳಿ ಗ್ರಾಮದವರು, ವೃತ್ತಿ ಕೃಷಿ, ಜಾತಿ ನಾಯಕ, ವಯಸ್ಸು 60, ವಿದ್ಯೆಯನ್ನು ಬಾಬಾಬುಡನ್‌ಗಿರಿಯಲ್ಲಿನ ವ್ಯಕ್ತಿಯಿಂದ ಕಲಿತ ಇವರು ಹೊಟ್ಟೆಯೊಳಗಿನ ಗಡ್ಡೆ, ಕೈಮುಸುಗ ರೋಗಗಳಿಗೆ ವೈದ್ಯ ಮಾಡುತ್ತಾರೆ. ಮಂತ್ರವಿದ್ಯೆಯಲ್ಲೂ ನಿಪುಣರಾಗಿದ್ದಾರೆ.

86. ನರಸಿಂಹಪ್ಪ ಎಚ್.ಎನ್. ತಂದೆ ಲಕ್ಷ್ಮಣಪ್ಪ (04.08.07) : ಪಶುವೈದ್ಯದಲ್ಲಿ ಪರಿಣತರಾದ ಇವರಿಗೆ 45 ವರ್ಷ, ಹಿರಿಯೂರು ತಾಲ್ಲೂಕಿನ ಗೊರಲಡಕು ಗ್ರಾಮದವರು. ವಂಶಪಾರಂಪರ್ಯವಾಗಿ ವೈದ್ಯವನ್ನು ಕಲಿತಿರುತ್ತಾರೆ. ಇವರು ಕುಂಚಿಟಿಗರ ಜನಾಂಗದವರು.

87. ನಾಗಪ್ಪ ತಂದೆ ನಿಂಗಪ್ಪ (30.07.07, 31.07.07) : ಹೊಸದುರ್ಗ ತಾಲ್ಲೂಕಿನ ದೊಡ್ಡ ತೇಕಲವಟ್ಟಿ ಗ್ರಾಮದವರು. ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರು ಕುರುಬ ಜನಾಂಗಕ್ಕೆ ಸೇರಿದವರು. ಇವರಿಗೆ 55 ವರ್ಷ, ಮನುಷ್ಯ ಸಂಬಂಧಿ ಹಾಗೂ ಪಶು ಸಂಬಂಧಿ ರೋಗಗಳಿಗೆ ಚಿಕಿತ್ಸೆ ನೀಡುವ ಇವರಿಗೆ ಸುಮಾರು 30 ವರ್ಷಗಳ ಅನುಭವವಿದೆ.

88. ನಾಗಣ್ಣ ತಂದೆ ತಿಮ್ಮಣ್ಣ (19.03.08, 16.04.08) : ಚ. ತಾಲ್ಲೂಕಿನ ಚನ್ನಮ್ಮ ನಾಗತಿಹಳ್ಳಿಯವರು. ಕರಡಿ ಗೊಲ್ಲರ ಜನಾಂಗಕ್ಕೆ ಸೇರಿದ ಇವರಿಗೆ 45 ವರ್ಷ. ಜಾಂಡಿಸ್ ಕಾಯಿಲೆಗೆ ವೈದ್ಯ ಮಾಡುತ್ತಾರೆ. ಸುಮಾರು 10 ವರ್ಷಗಳ ಅನುಭವವಿದೆ.

89. ನಾಗರಾಜ ವಾಂಜ್ರೆ ಎಚ್.ಸಿ. ತಂದೆ ಚಿದಾನಂದಪ್ಪ (29.06.07) : ಮೊ. ತಾಲ್ಲೂಕಿನ ದೊಡ್ಡಪೇಟೆ ಗ್ರಾಮಕ್ಕೆ ಸೇರಿದವರು. ವಂಶ ಪಾರಂಪರ್ಯವಾಗಿ ವೈದ್ಯ ಕಲಿತ ಇವರು ಅಯುರ್ವೇದ ಪಂಡಿತರು. ಇವರಿಗೆ ಸುಮಾರು 20 ವರ್ಷಗಳ ಅನುಭವವಿದೆ. ಆಸ್ತಮಾ, ಮಲಬದ್ಧತೆ, ಚರ್ಮವ್ಯಾಧಿ ಮೊದಲಾದವುಗಳಿಗೆ ಔಷಧಿಯನ್ನು ಕೊಡುತ್ತಾರೆ.

90. ನಾಗರಾಜ ಹೊಯ್ಸಳ (14.04.08) : ಚಿತ್ರದುರ್ಗದ ನಿವಾಸಿ, 60 ವರ್ಷ, ಇವರು ಚಿತ್ರದುರ್ಗ ಜಿಲ್ಲಾ ಸಂಶೋಧನಾ ತಂಡದ ಅಧ್ಯಕ್ಷರು, ಹೊಸದುರ್ಗ ಭಾಗದ ಆಯುರ್ವೇದ ಪಂಡಿತರಿಂದ ವೈದ್ಯವನ್ನು ಕಲಿತಿದ್ದಾರೆ. ಋತುಸ್ರಾವ, ಮಕ್ಕಳ ಸಂತಾನ, ಗರ್ಭಕೋಶ ಶುದ್ಧಿ, ಹೊಟ್ಟೆ ಕಟ್ಟು ಮುಂತಾದ ರೋಗಗಳಲ್ಲಿ ಪರಿಣತಿಯನ್ನು ಹೊಂದಿದ್ದಾರೆ. ಬೆಂಗಳೂರು ಮತ್ತಿತರ ಭಾಗಗಳಿಂದಲೂ ರೋಗಿಗಳು ಇವರ ಬಳಿ ಬರುತ್ತಾರೆ. ಸುಮಾರು 40 ವರ್ಷಗಳ ಅನುಭವವಿದೆ.

91. ನಾಗಮ್ಮ ಗಂಡ ವರದಪ್ಪ (31.07.07) : ಹೊಸದುರ್ಗ ತಾಲ್ಲೂಕಿನ ಕಂಚೀಪುರ ಗ್ರಾಮದವರು. ಮಡಿವಾಳ ಜನಾಂಗಕ್ಕೆ ಸೇರಿದ ಇವರಿಗೆ 65 ವರ್ಷ. ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರು ಮಹಿಳೆಯರ ಮತ್ತು ಮಕ್ಕಳ ರೋಗಗಳಿಗೆ ಉಪಚರಿಸುತ್ತಾರೆ. ಇವರಿಗೆ ಸುಮಾರು 30 ವರ್ಷಗಳ ಅನುಭವವಿದೆ. ಇವರೊಬ್ಬ ಅನುಭವಿ ಸೂಲಗಿತ್ತಿಯೂ ಹೌದು.

92. ನಾಗಪ್ಪ (01.08.06) : ಚಳ್ಳಕೆರೆ ತಾಲ್ಲೂಕಿನ ಪರಶುರಾಂಪುರ ಗ್ರಾಮದವರು. ವೃತ್ತಿಯಲ್ಲಿ ಶಿಕ್ಷಕರು. ವಯಸ್ಸು 49, ವಂಶಪಾರಂಪರ್ಯವಾಗಿ ವೈದ್ಯವನ್ನು ತಿಳಿದವರಾಗಿದ್ದಾರೆ.

93. ನಿಂಗಣ್ಣ ತಂದೆ ಚಿಕ್ಕ ಬೊಮ್ಮಯ್ಯ (29.06.07) : ಮೊ. ತಾಲ್ಲೂಕಿನ ಕೊಮ್ಮನಪಟ್ಟಿ ಗ್ರಾಮಕ್ಕೆ ಸೇರಿದವರು. ನಾಯಕ ಜನಾಂಗಕ್ಕೆ ಸೇರಿದ ಇವರಿಗೆ 50ವರ್ಷ. ಪೂರ್ವಿಕರ ಕೈಬರಹದ ವೈದ್ಯ ಗ್ರಂಥಗಳಿಂದ ವೈದ್ಯ ಕಲಿತಿದ್ದಾರೆ. ಸುಮಾರು 20 ವರ್ಷಗಳ ಅನುಭವವಿದೆ. ಮಕ್ಕಳ ಸಂತಾನ, ಋತುವಾಗಲು, ನಿಃಶಕ್ತಿಗೆ ಔಷಧಿ ಕೊಡುತ್ತಾರೆ. ಮೋಡಿ ವಿದ್ಯೆಯನ್ನು ತಿಳಿದಿದ್ದಾರೆ.

94. ನಿಂಗಣ್ಣ ಸಿ. ತಂದೆ ಚಿಕ್ಕಣ್ಣ (03.08.07) : ಹಿ. ತಾಲ್ಲೂಕಿನ ಆದಿವಾಲಗೊಲ್ಲರಹಟ್ಟಿ ಗ್ರಾಮದ ನಿವಾಸಿ, ಯಾದವ ಜನಾಂಗದವರು. ಇತರರಿಂದ ವೈದ್ಯವನ್ನು ಕಲಿತು ಮನುಷ್ಯರ ಕೈಮಸುಗು, ಕ್ಯಾಮರೆ ಹಾಗೂ ಪಶುಗಳಿಗೆ ವೈದ್ಯವನ್ನು ಬಲ್ಲವರಾಗಿದ್ದಾರೆ.

95. ನಿಂಗಪ್ಪ ಮುರಿಗಜ್ಜರ ತಂದೆ ಮುರಿಗಪ್ಪ (06.03.07, 21.07.07, 18.10.08) : ಹೊ. ತಾಲ್ಲೂಕಿನ ಬಸಾಪುರದ ನಿವಾಸಿ. ಲಿಂಗಾಯಿತ ಕುಲಕ್ಕೆ ಸೇರಿದ ಇವರಿಗೆ 68 ವರ್ಷಗಳು ಬಂಧುಗಳಿಂದ ವೈದ್ಯಕಲಿತ ಇವರು ಪಶುವೈದ್ಯದಲ್ಲಿ ಪರಿಣತರು, ಸುಮಾರು 45 ವರ್ಷಗಳ ಅನುಭವವಿದೆ.

96. ನಿಂಗಪ್ಪ ತಂದೆ ಚನ್ನಪ್ಪ (09.08.07) : ಚಿ. ತಾಲ್ಲೂಕಿನ ಜಾಲಿಕಟ್ಟೆ ಗ್ರಾಮದವರು. ಲಿಂಗಾಯ್ತ ಜನಾಂಗಕ್ಕೆ ಸೇರಿದ ಇವರಿಗೆ 70 ವರ್ಷ. ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರು ಪಶು ವೈದ್ಯದಲ್ಲಿ ಪರಿಣತರು. ಸುಮಾರು 20 ಪಶುಸಂಬಂಧಿ ರೋಗಗಳಿಗೆ ಉಪಚರಿಸುವ ಇವರಿಗೆ 40 ವರ್ಷಗಳ ಅನುಭವವಿದೆ.

97. ನಿಂಗಪ್ಪ ತಂದೆ ಕೆಂಚಪ್ಪ (08.08.07) : ಚಿ. ತಾಲ್ಲೂಕಿನ ಹಿರೇಗುಂಟನೂರು ಗ್ರಾಮದವರು. ಚಲವಾದಿ ಜನಾಂಗಕ್ಕೆ ಸೇರಿದ ಇವರಿಗೆ 50 ವರ್ಷ. ವಂಶಪಾರಂಪರ್ಯವಾಗಿ ಹಾಗೂ ಇತರರಿಂದ ವೈದ್ಯ ಕಲಿತ ಇವರು ನಿಃಶಕ್ತಿ, ಬಾಲಗ್ರಹಗಳು ಮುಂತಾದ ಮನುಷ್ಯ ಸಂಬಂಧಿ ರೋಗಗಳಿಗೆ ಚಿಕಿತ್ಸೆ ನೀಡುತ್ತಾರೆ. ಸುಮಾರು 25 ವರ್ಷಗಳ ಅನುಭವವಿದೆ.

98. ನಿಂಗಪ್ಪ ಪೋತರಾಜರ ತಂದೆ ತಿಪ್ಪಯ್ಯ (08.08.07) : ಚಿ. ತಾಲ್ಲೂಕಿನ ಹಳಿಯೂರು ಗ್ರಾಮದವರು. ವಂಶಪಾರಂಪರ್ಯದಿಂದ ವೈದ್ಯವನ್ನು ಕಲಿತ್ತಿದ್ದಾರೆ. ನಾಯಕ ಜನಾಂಗಕ್ಕೆ ಸೇರಿದ ಇವರಿಗೆ 64 ವರ್ಷ. ಪಶುವೈದ್ಯದಲ್ಲಿ ವಿಶೇಷ ಪರಿಣತಿಯನ್ನು ಹೊಂದಿದ್ದಾರೆ. ಸುಮಾರು 40 ವರ್ಷಗಳ ಅನುಭವವಿದೆ.

99. ಪರಕೆ ಹನುಮಂತಪ್ಪ ತಂದೆ ಹೊನ್ನೂರಪ್ಪ (25.08.07) : ಮೊ. ತಾಲ್ಲೂಕಿನ ನಾಗಸಮುದ್ರ ಗ್ರಾಮದವರು. ನಾಯಕ ಜನಾಂಗಕ್ಕೆ ಸೇರಿದ ಇವರು ಸ್ವಂತ ಅನುಭವದಿಂದ ವೈದ್ಯ ಕಲಿತಿದ್ದಾರೆ. ಇವರಿಗೆ 59 ವರ್ಷ, ಮನುಷ್ಯ ಸಂಬಂಧಿಯಾದ ಗಂಡಮಾಲೆ, ಬೆನ್ನುಹುಣ್ಣು ಹಾಗೂ ಗಳಲಬಾವು, ಕೋಡುಹುಣ್ಣು ಮುಂತಾದ ಪಶುಸಂಬಂಧಿ ರೋಗಗಳಿಗೆ ಚಿಕಿತ್ಸೆ ಬಲ್ಲವರಾಗಿದ್ದಾರೆ. ಸುಮಾರು 30 ವರ್ಷಗಳ ಅನುಭವವಿದೆ.

100. ಪರಮೇಶ್ವರಪ್ಪ ಎನ್. ತಂದೆ ನಿಂಗಪ್ಪ : ಹೊ. ತಾಲ್ಲೂಕಿನ ಶಿವಗಂಗೆ ಗ್ರಾಮದವರು. ವಂಶಪಾರಂಪರ್ಯದಿಂದ ವೈದ್ಯಕಲಿತ ಇವರಿಗೆ 72 ವರ್ಷ. ಲಿಂಗಾಯಿತ ಕುಲಕ್ಕೆ ಸೇರಿದ ಇವರು ಮನುಷ್ಯರ ಹಾಗೂ ಪಶುಗಳ ವಿವಿಧ ಕಾಯಿಲೆಗೆ ವೈದ್ಯ ನೀಡುತ್ತಾರೆ. ಚರ್ಮಸೆಟ್ಟಿಗೆ ಒಳ್ಳೆಯ ಔಷಧ ಕೊಡುತ್ತಾರೆ.

101. ಪರಮೇಶ್ವರಪ್ಪ (09.08.07) : ಚಿ. ತಾಲ್ಲೂಕಿನ ಸಿಂಗಾಪುರ ಗ್ರಾಮದವರು. ಲಿಂಗಾಯಿತ ಕುಲಕ್ಕೆ ಸೇರಿದ ಇವರಿಗೆ 42 ವರ್ಷ. ಇತರರಿಂದ ವೈದ್ಯ ಕಲಿತ ಇವರು ಕೃಷಿ ವೈದ್ಯವನ್ನು ಬಲ್ಲವರಾಗಿದ್ದಾರೆ. ಸುಮಾರು 10 ವರ್ಷಗಳ ಅನುಭವವಿದೆ.

102. ಪಕೀರಪ್ಪ ತಂದೆ ಓಬಜ್ಜಪ್ಪ (28.08.07) : ಚ. ತಾಲ್ಲೂಕಿನ ಬಂಜಗೆರೆ ಗ್ರಾಮದವರು. ನಾಯಕ ಜನಾಂಗಕ್ಕೆ ಸೇರಿದ ಇವರಿಗೆ 65 ವರ್ಷ. ವಂಶಪಾರಂಪರ್ಯವಾಗಿ ವೈದ್ಯಕಲಿತ ಇವರು ಹೊಟ್ಟೆ ಕುಟ್ಟು ಮಕ್ಕಳಫಲ, ಬಾಲಗ್ರಹಗಳು – ಮುಂತಾದ ಮನುಷ್ಯ ಸಂಬಂಧಿ ರೋಗಗಳಿಗೆ ವೈದ್ಯಮಾಡುತ್ತಾರೆ. ಸುಮಾರು 30 ವರ್ಷಗಳ ಅನುಭವವಿದೆ.

103. ಪತ್ರೆಬಸಪ್ಪ ಟಿ. ತಂದೆ ಜಿ. ಚನ್ನಬಸಪ್ಪ (24.08.07) : ಮೊ. ತಾಲ್ಲೂಕಿನ ತುಮಕೋರ್ಲಹಳ್ಳಿ ಗ್ರಾಮದವರು. ಲಿಂಗಾಯಿತ ಕುಲಕ್ಕೆ ಸೇರಿದ ಇವರಿಗೆ 58 ವರ್ಷ. ಇತರರಿಂದ ವೈದ್ಯಕಲಿತು ಅಸ್ತಮಾ, ಸಕ್ಕರೆ ಕಾಯಿಲೆ, ಗ್ಯಾಸ್ಟ್ರಿಕ್, ನಪುಂಸಕತ್ವ ನಿವಾರಣೆ, ಶಕ್ತಿಚೂರ್ಣ ಇತ್ಯಾದಿ ಮನುಷ್ಯ ಸಂಬಂಧಿ ರೋಗಗಳಿಗೆ ಚಿಕಿತ್ಸೆ ನೀಡುತ್ತಾರೆ.

104. ಪ್ರಭು ತಂದೆ ತಿಪ್ಪಣ್ಣ (09.08.07) : ಚಿ. ತಾಲ್ಲೂಕಿನ ಜಾಲಿಕಟ್ಟೆ ಗ್ರಾಮದವರು. ಲಿಂಗಾಯಿತ ಜನಾಂಗಕ್ಕೆ ಸೇರಿದ ಇವರಿಗೆ 37 ವರ್ಷ, ಮನುಷ್ಯ ಸಂಬಂಧಿ ರೋಗಗಳಿಗೆ ಉಪಚರಿಸುತ್ತಾರೆ. ಸುಮಾರು 15 ವರ್ಷಗಳ ಅನುಭವವಿದೆ. ವಂಶಪಾರಂಪರ್ಯವಾಗಿ ವೈದ್ಯ ಕಲಿತಿದ್ದಾರೆ.

105. ಪಾಲಯ್ಯ ತಂದೆ ಯಲ್ಲಪ್ಪ (28.06.07) : ಮೊಳಕಾಲ್ಮೂರು ತಾಲ್ಲೂಕಿನ ಸೂಲೇನಹಳ್ಳಿ ಗ್ರಾಮದವರು. ನಾಯಕ ಜನಾಂಗಕ್ಕೆ ಸೇರಿದ ಇವರಿಗೆ 58 ವರ್ಷ. ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರು ಪಶುವೈದ್ಯರು. ಸುಮಾರು 20 ವರ್ಷಗಳ ಅನುಭವವಿದೆ.

106. ಪಾರ್ವತಮ್ಮ ಗಂಡ ಚಿಕ್ಕಣ್ಣ (06.11.08) : ಚ. ತಾಲ್ಲೂಕಿನ ಹರವಿಗೊಂಡನ ಹಳ್ಳಿಯವರು ವಯಸ್ಸು 75, ಲಿಂಗಾಯಿತ ಕುಲದವರು. ಸೂಲಗಿತ್ತಿಯಾದ ಇವರು ಸುಮಾರು 20 ವರ್ಷಗಳ ಅನುಭವವಿದೆ.

107. ಪಾಪನಾಯಕ ತಂದೆ ಖಡ್ಡೆಪಾಲಯ್ಯ (06.01.08) : ಚಿ. ತಾಲ್ಲೂಕಿನ ಹಾಯ್ಕಲ್ ಗ್ರಾಮದ ನಿವಾಸಿ, ವಯಸ್ಸು 55, ನಾಯಕ ಜನಾಂಗ, ತಂದೆಯಿಂದ ವಿದ್ಯೆಯನ್ನು ಕಲಿತ್ತಿದ್ದಾರೆ. ವೃತ್ತಿಯಲ್ಲಿ ಕೃಷಿಕರು, ಮಕ್ಕಳ ಹಿಡಿಕೆ ರೋಗ, ಸ್ತ್ರೀಯರ ಹೊಟ್ಟೆಕುಟ್ಟು ಮುಂತಾದವುಗಳಿಗೆ ವೈದ್ಯ ಮಾಡುತ್ತಾರೆ.

108. ಪೂಜಪ್ಪ ತಂದೆ ಭೀಮಜ್ಜ (07.11.08) : ಚ. ತಾಲ್ಲೂಕಿನ ನಾಗಗೊಂಡನಹಳ್ಳಿಯವರು, ವಯಸ್ಸು 75, ಜುಂಜರಗುಂಟೆ ಮಾವನಾದ ರಾಮಜ್ಜನಿಂದ ವಿದ್ಯೆಯನ್ನು ಕಲಿತ್ತಿದ್ದಾರೆ. ಕಲ್ದೇರು ಗೊಲ್ಲರಾದ ಇವರು ಕೈಮಸುಗು, ಮೂಲವ್ಯಾಧಿ, ಜಲ್ಡಿಹುಣ್ಣುಗಳಿಗೆ ಔಷಧಿಯನ್ನು ಕೊಡುತ್ತಾರೆ ಮತ್ತು ಪಶುವೈದ್ಯರೂ ಆಗಿದ್ದಾರೆ.

109. ಪೆದ್ದಯ್ಯ ತಂದೆ ತಿಮ್ಮಯ್ಯ (28.06.07) : ಮೊಳಕಾಲ್ಮೂರು ತಾಲ್ಲೂಕಿನ ಸಿದ್ದಯ್ಯನ ಕೋಟೆ ಗ್ರಾಮದವರು. ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರು ನಾಯಕ ಜಾತಿಗೆ ಸೇರಿದವರಾಗಿದ್ದಾರೆ. ಇವರಿಗೆ 40 ವರ್ಷ. ಮನುಷ್ಯ ಸಂಬಂಧಿ ರೋಗಗಳಿಗೆ ಚಿಕಿತ್ಸೆ ನೀಡುವುದರಲ್ಲಿ 10 ವರ್ಷಗಳ ಅನುಭವವಿದೆ.

110. ಪೆದ್ದಯ್ಯ ತಂದೆ ಓಬಯ್ಯ (28.06.07) : ಮೊ. ತಾಲ್ಲೂಕಿನ ಚಕ್ಕೋಬನಹಳ್ಳಿ ಗ್ರಾಮಕ್ಕೆ ಸೇರಿದವರು. ನಾಯಕ ಜನಾಂಗದ ಇವರಿಗೆ 35 ವರ್ಷ, ಇತರರಿಂದ ವೈದ್ಯಕಲಿತ ಇವರು ಫಿಟ್ಸ್ ಹಾಗೂ ಇಸುಬು ರೋಗಗಳಿಗೆ ವೈದ್ಯ ಮಾಡುತ್ತಾರೆ. ಸುಮಾರು 10 ವರ್ಷಗಳ ಅನುಭವಿದೆ.

111. ಬಂಗಾರಪ್ಪ ತಂದೆ ಮಲ್ಲಯ್ಯ (28.06.07, 04.11.08) : ಮೊಳಕ್ಕಾಲೂರು ತಾಲ್ಲೂಕಿನ ಯರಪೋತ ಜೋಗಿಹಳ್ಳಿ ಗ್ರಾಮದವರು. ನಾಯಕ ಜನಾಂಗಕ್ಕೆ ಸೇರಿದ ಇವರಿಗೆ 48 ವರ್ಷ. ಇತರರಿಂದ ವೈದ್ಯ ಕಲಿತ ಇವರು ಮಕ್ಕಳ ವೈದ್ಯ ಮಾಡುವುದರಲ್ಲಿ ಪ್ರಸಿದ್ಧಿಯನ್ನು ಹೊಂದಿದ್ದಾರೆ. ಸುಮಾರು 20 ವರ್ಷಗಳ ಅನುಭವವಿದೆ.

112. ಬಸವರಾಜ ತಂದೆ ಚಲುಮಪ್ಪ (07.11.08) : ಚ. ತಾಲ್ಲೂಕಿನ ಹರವಿಗೊಂಡನಹಳ್ಳಿ ಗ್ರಾಮದವರು, ವಯಸ್ಸು 30, ಲಿಂಗಾಯಿತ ಜನಾಂಗದವರು. ತಂದೆಯಿಂದ ವಿದ್ಯೆ ಕಲಿತ್ತಿದ್ದಾರೆ. ಸುಮಾರು 5 ವರ್ಷಗಳ ಅನುಭವವಿದೆ. ಮಕ್ಕಳಸಂತಾನ ಮತ್ತು ಪಶುವೈದ್ಯಕ್ಕೆ ಔಷಧಿಯನ್ನು ಕೊಡುತ್ತಾರೆ.

113. ಬಸವರಾಜಪ್ಪ ಪಿ. ತಂದೆ ಪಾಪಣ್ಣ (21.08.06) : ಚ. ತಾಲ್ಲೂಕಿನ ಚೌಳುಕೆರೆ ಗ್ರಾಮದವರು. ವೃತ್ತಿ ಕೃಷಿ, ಜಾತಿ ನಾಯಕ, ವಯಸ್ಸು 46. ವಿದ್ಯೆಯನ್ನು ಆಸಕ್ತಿಯಿಂದ ಇತರರಿಂದ ಕಲಿತ ಇವರು ಪಶುಸಂಬಂಧಿ ಕಾಯಿಲೆಗಳಲ್ಲಿ ಅತ್ಯಂತ ನುರಿತರಾಗಿದ್ದಾರೆ.

114. ಬಸಣ್ಣ ವಿ. ತಂದೆ ವೀರ ಬಾಲಯ್ಯ (21.08.06) : ಚ. ತಾಲ್ಲೂಕಿನ ಚೌಳುಕೆರೆ ಗ್ರಾಮದವರು. ವೃತ್ತಿ ಕೃಷಿ, ಜಾತಿ ನಾಯಕ, ವಯಸ್ಸು 55. ವಿದ್ಯೆಯನ್ನು ಮುಷ್ಠಲಗುಮ್ಮಿ ನೀರಗಂಟಿ ಗುರುವಯ್ಯ ಮತ್ತು ಯರ್ರೆಣ್ಣನವರಿಂದ ಕಲಿತ ಇವರು ಜಾಂಡಿಸ್, ಅಳ್ಳೆರೋಗ, ಋತುಸ್ರಾವ, ಮುಂತಾದ ರೋಗಗಳಿಗೆ ವೈದ್ಯ ಮಾಡುತ್ತಾರೆ.

115. ಬಸಣ್ಣ ಮೋಡಿ ತಂದೆ ಮಲ್ಲಪ್ಪ (22.08.07) : ಚಿ. ತಾಲ್ಲೂಕಿನ ಡಿ.ಎಸ್. ಹಳ್ಳಿಗೆ ಸೇರಿದವರು. ಹಾಲುಮತಕ್ಕೆ ಸೇರಿದ ಇವರಿಗೆ 63 ವರ್ಷ. ತಾಳೇಗರಿಗಳಿಂದ ಹಾಗೂ ಆರು ವರ್ಷ ಸಾಧುವಿನೊಡನಿದ್ದು ವೈದ್ಯ ಕಲಿತ ಇವರು ಮೋಡಿ ವಿದ್ಯೆಗೆ ಪ್ರಸಿದ್ಧಿ ಹೊಂದಿದ್ದಾರೆ ಜೊತೆಗೆ ಕೆಲವು ಮನುಷ್ಯಸಂಬಂಧಿ ರೋಗಗಳಿಗೆ ಚಿಕಿತ್ಸೆ ನೀಡುತ್ತಾರೆ. ವೈದ್ಯಕ್ಕೆ ಸಂಬಂಧಿಸಿದ ಕೈಬರಹಗಳು ಮತ್ತು ತಾಳೆಗರಿಗಳು ಇವರಲ್ಲಿವೆ.

116. ಬಸವರಾಜ ಕೆ.ಎಂ. ತಂದೆ ಮಲ್ಲಪ್ಪ (12.11.08) : ಚಿ. ತಾಲ್ಲೂಕಿನ ಗೊಡಬನಾಳ್ ಗ್ರಾಮದವರು. ತಮ್ಮ ತಾಯಿಯ ಅಪ್ಪನಿಂದ ವಿದ್ಯೆ ಕಲಿತರು. ವಯಸ್ಸು 55, ಕುಂಬಾರ ಜನಾಂಗದವರು. ಇವರ ಕಸುಬು ಮದುವೆ, ಸಭೆ ಸಮಾರಂಭಗಳಿಗೆ ಅಡಿಗೆ ಮಾಡುವುದು. ಕಾಮಾಲೆರೋಗ ಮತ್ತು ಅರ್ಧ್ತಲೆ ನೋವಿಗೆ ಔಷಧಿ ಕೊಡುವುದರಲ್ಲಿ ಪ್ರಸಿದ್ದರಾಗಿದ್ದಾರೆ. ಸುಮಾರು 25 ವರ್ಷಗಳ ಅನುಭವವಿದೆ.

117. ಬಸವರಾಜ ಆರ್.ಬಿ. ತಂದೆ ಸಣ್ಣಬಸಯ್ಯ (27.08.07, 12.11.08 ,01.01.09) : ಚ. ತಾಲ್ಲೂಕಿನ ಗುಂತುಕೋಲುಮ್ಮನಹಳ್ಳಿ ಗ್ರಾಮದವರು. ವೃತ್ತಿ ಕೃಷಿ, ಜಾತಿ ನಾಯಕ, ವಯಸ್ಸು 51. ವಿದ್ಯೆಯನ್ನು ತನ್ನ ತಂದೆಯಿಂದ ಕಲಿತ ಇವರು ಮಕ್ಕಳಸಂದು, ಜ್ವರ, ಫಿಟ್ಸ್, ಮೂಲವ್ಯಾಧಿ, ಜಲ್ದಿಹುಣ್ಣು, ಬಿ.ಪಿ, ಗಂಡಮಾಲೆ, ಕಲ್ಲೊತ್ತು ಮೊದಲಾದ ರೋಗಗಳಿಗೆ ವೈದ್ಯಮಾಡುತ್ತಾರೆ. ಇವರು ರಸವೈದ್ಯರೂ ಹೌದು.

118. ಬಸಮ್ಮ ಗಂಡ ಸಣ್ಣತಿಪ್ಪಣ್ಣ (10.06.06, 17.11.08) : ಚ. ತಾಲ್ಲೂಕಿನ ಅಬ್ಬೇನಹಳ್ಳಿಯವರು. ಲಿಂಗಾಯಿತ ಜನಾಂಗಕ್ಕೆ ಸೇರಿದ ಇವರಿಗೆ 70ವರ್ಷ. ತನ್ನ ಅಜ್ಜಿಯಿಂದ ವೈದ್ಯ ಕಲಿತ ಇವರು ಮಕ್ಕಳ ಕಾಯಿಲೆ ಎದೆಹಾಲು ಮತ್ತು ದನಕರುಗಳ ಹಾಲುವೃದ್ಧಿಯಾಗಲು ವೈದ್ಯವನ್ನು ಮಾಡುತ್ತಾರೆ. ಸುಮಾರು 40 ವರ್ಷಗಳ ಅನುಭವವಿದೆ.

119. ಬಸವರಾಜ ಎಂ. ತಂದೆ ಗಿಡ್ಡಮಲ್ಲಯ್ಯ (21.08.06, 05.08.07) : ಚ. ತಾಲ್ಲೂಕಿನ ರಾಮಸಾಗರ ಗ್ರಾಮದವರು, ವೃತ್ತಿ ಕೃಷಿ, ಜಾತಿ ನಾಯಕ, ವಯಸ್ಸು 40. ಸ್ವಇಚ್ಛೆಯಿಂದ ವಿದ್ಯೆಯನ್ನು ಕಲಿತ ಇವರು ಮೊಲೆಗಳು ಪುಷ್ಠಿಯಾಗುವುದಕ್ಕೆ, ಇಸುಬು, ಹುಳುಕಡ್ಡಿಗೆ ಹಾಗೂ ಕುರಿ ಮೇಕೆಗಳ ಕಾಲು ಬಾಯಿಗೆ ವೈದ್ಯವನ್ನು ಮಾಡುತ್ತಾರೆಯಲ್ಲದೆ, ಮಂತ್ರ ತಂತ್ರಗಳಲ್ಲೂ ಪರಿಣತರು.

120. ಬ್ರಹ್ಮಚಾರಿ ಆರ್. (01.08.06) : ಚಳ್ಳಕೆರೆ ತಾಲ್ಲೂಕಿನ ಚೌಳೂರು ಗ್ರಾಮದ ನಿವಾಸಿ. ವೃತ್ತಿಯಲ್ಲಿ ಕೃಷಿ ಮತ್ತು ಆಚಾರಿ, ಜಾತಿಯಲ್ಲಿ ವಿಶ್ವಕರ್ಮರು, ವಯಸ್ಸು 65, ಸ್ನೇಹಿತರಿಂದ ವಿದ್ಯೆಯನ್ನು ಕಲಿತ ಇವರು ಹಾವಿನ ಕಡಿತಕ್ಕೆ ಮತ್ತು ಮಕ್ಕಳ ರೋಗಗಳಿಗೆ ವೈದ್ಯಮಾಡುತ್ತಾರೆ.

121. ಬಾಲಪ್ಪ ತಂದೆ ಹನುಮಂತಪ್ಪ (30.07.07, 28.07.07) : ಹೊಸದುರ್ಗ ತಾಲ್ಲೂಕಿನ ಸೋಮಸಂದ್ರ ಗ್ರಾಮದವರು. ನಾಯಕ ಜನಾಂಗಕ್ಕೆ ಸೇರಿದ ಇವರು ಇತರರಿಂದ ವೈದ್ಯ ಕಲಿತಿರುತ್ತಾರೆ. ಇವರಿಗೆ 70ವರ್ಷ, ಇವರು ಮನುಷ್ಯ ಸಂಬಂಧಿ ಹಾಗೂ ಪಶುಸಂಬಂಧಿ ರೋಗಗಳಿಗೆ ಉಪಚರಿಸುತ್ತಾರೆ. ಸುಮಾರು 40 ವರ್ಷಗಳ ಅನುಭವವಿದೆ.

122. ಭೀಮಾಬೋವಿ ತಂದೆ ದಾಸಬೋವಿ (03.08.07) : ಹಿ. ತಾಲ್ಲೂಕಿನ ಆದಿವಾಲಗೊಲ್ಲರಹಟ್ಟಿಯ ನಿವಾಸಿ, ವಯಸ್ಸು 70. ಯಾದವ ಜನಾಂಗದವರು. ಮಕ್ಕಳ ಅಳ್ಳೆಕಾಯಿಲೆಗೆ ಒಳ್ಳೆಯ ಔಷಧಿಯನ್ನು ಕೊಡುತ್ತಾರೆ, ಹೆಣ್ಣು ಕೊಟ್ಟಮಾವನಿಂದ ವೈದ್ಯವನ್ನು ಕಲಿತಿರುತ್ತಾರೆ.

123. ಭೀಮಯ್ಯ ಬಿ. ತಂದೆ ಭೀಮಾಬೋವಿ (03.08.07) : ಹಿ. ತಾಲ್ಲೂಕಿನ ಆದಿವಾಲತಿರುಮಲ ನಗರದ ನಿವಾಸಿ. ವಯಸ್ಸು 42, ಬೋವಿ ಜನಾಂಗದವರು, ಇವರು ತಮಿಳು ನಾಡಿನ ಗುರು (ತಿರುಪುರಿನವರು)ವಿನಿಂದ ವೈದ್ಯ ಕಲಿತ್ತಿದ್ದಾರೆ. ಆಸ್ತಮಾ, ಬಿಳಿಕೆಂಪು ಕರೆಗಳು, ರಕ್ತಶುದ್ಧಿಗೆ, ಕೈಕಾಲು ಉಳುಕಿದರೆ, ಹಾವಿನ ವಿಷಕ್ಕೆ – ಈ ಮುಂತಾದವುಗಳಿಗೆ ವೈದ್ಯ ಮಾಡುತ್ತಾರೆ.

124. ಬೋರಸ್ವಾಮಿ ಓ. ತಂದೆ ಓಬಯ್ಯ (21.08.06) : ಚ. ತಾಲ್ಲೂಕಿನ ರುದ್ರಮ್ಮನಹಳ್ಳಿ ಗ್ರಾಮದವರು. ವೃತ್ತಿ ಕೃಷಿ, ಜಾತಿ ನಾಯಕ, ವಯಸ್ಸು 34, ವಿದ್ಯೆಯನ್ನು ವಂಶಪಾರಂಪರ್ಯವಾಗಿ ಕಲಿತ್ತಿದ್ದಾರೆ. ಹಾವಿನ ವಿಷಕ್ಕೆ ಔಷಧಿ ಕೊಡುವುದರಲ್ಲಿ ಪ್ರಸಿದ್ಧರು. ತಮ್ಮ 12 ವಯಸ್ಸಿನಿಂದಲೂ ವೈದ್ಯವನ್ನು ಮಾಡುತ್ತಿದ್ದಾರೆ.

125. ಬೋರಯ್ಯ ಜಿ. (ತಮ್ಮಣ್ಣ) ತಂದೆ ದೊಡ್ಡ ಗುಂಡಯ್ಯ (21.08.06) : ಚ. ತಾಲ್ಲೂಕಿನ ರುದ್ರಮ್ಮನಹಳ್ಳಿ ಗ್ರಾಮದವರು. ವೃತ್ತಿ ಕೃಷಿ, ಜಾತಿ ನಾಯಕ, ವಯಸ್ಸು 66, ವಿದ್ಯೆಯನ್ನು ಗದಗಿನ ಕಡೆಯ ಅಜ್ಜನಿಂದ ಕಲಿತ ಇವರು ಹೊಟ್ಟೆಕುಟ್ಟುಗೆ, ಮೂಲವ್ಯಾಧಿಗೆ, ಎತ್ತುಎಮ್ಮೆಗಳ ಸೆಲೆಗೆ ಮತ್ತು ಮಕ್ಕಳ ಸಂದುಗೆ–ಮೊದಲಾದವುಗಳಿಗೆ ವೈದ್ಯಮಾಡುತ್ತಾರೆಯಲ್ಲದೆ ಮಂತ್ರ ವಿದ್ಯೆಯಲ್ಲೂ ಅನುಭವ ಹೊಂದಿದ್ದಾರೆ.

126. ಭಜನನಾಯ್ಕ ಟಿ. ತಂದೆ ತೊಳಸನಾಯ್ಕ (23.07.07) : ಹೊಸದುರ್ಗ ತಾಲ್ಲೂಕಿನ ಗುತ್ತಿಕಟ್ಟೆ ಲಂಬಾಣಿಹಟ್ಟಿ ಗ್ರಾಮದವರು. ಲಂಬಾಣಿ ಜನಾಂಗಕ್ಕೆ ಸೇರಿದ ಇವರಿಗೆ 41 ವರ್ಷ. ಇತರರಿಂದ ವೈದ್ಯ ಕಲಿತ ಇವರು ಕೆಲವು ಮನುಷ್ಯ ಸಂಬಂಧಿ ರೋಗಗಳಿಗೆ ವೈದ್ಯ ಮಾಡುತ್ತಾರೆ. ಇವರಿಗೆ ಸುಮಾರು 10 ವರ್ಷಗಳ ವೈದ್ಯದ ಅನುಭವವಿದೆ.

127. ಭಾಸ್ಕರಪ್ಪ ತಂದೆ ಮಹಲಿಂಗಪ್ಪ (05.08.07) : ಹಿ. ತಾಲ್ಲೂಕಿನ ಆಲೂರು ಗ್ರಾಮದವರು. ಮಡಿವಾಳ ಜನಾಂಗ 72 ವರ್ಷ, ಸಂಬಂಧಿಕರಿಂದ ವೈದ್ಯವನ್ನು ಕಲಿತ್ತಿದ್ದಾರೆ. ಕೆಮ್ಮು, ದಮ್ಮು, ಜ್ವರ, ಹರಿಣಿ, ಕೈಮಸುಗು – ಮುಂತಾದ ರೋಗಗಳಿಗೆ ಔಷಧೋಪಚಾರ ಮಾಡುತ್ತಾರೆ.

128. ಮಹಾತ್ಮರ ರಾಮಣ್ಣ ತಂದೆ ಗುರುಸಿದ್ದಪ್ಪ (27.07.07) : ಹೊಸದುರ್ಗ ತಾಲ್ಲೂಕಿನ ಮಧುರೆ ಗ್ರಾಮದವರು. ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರಿಗೆ 95 ವರ್ಷ. ಲಿಂಗಾಯಿತ ಕುಲಕ್ಕೆ ಸೇರಿದ ಇವರು ಹುಣ್ಣುಗಳ ವೈದ್ಯ ಎಂದು ಪ್ರಸಿದ್ಧಿ ಹೊಂದಿದ್ದಾರೆ. ಇವರಿಗೆ ಸುಮಾರು 50 ವರ್ಷಗಳ ವೈದ್ಯದ ಅನುಭವವಿದೆ.

129. ಮಲ್ಲಯ್ಯ ಹೊಸಮನೆ ತಂದೆ ಪರ್ವತ ಮಲ್ಲಯ್ಯ (27.08.07) : ಚ. ತಾಲ್ಲೂಕಿನ ಮಲ್ಲೋರಹಳ್ಳಿ ಗ್ರಾಮದವರು. ವೃತ್ತಿಯಲ್ಲಿ ಕೃಷಿ, ಜಾತಿ ನಾಯಕ, ವಯಸ್ಸು 65. ವಿದ್ಯೆಯನ್ನು ಉಪ್ಪಾರಹಟ್ಟಿ ಸಣ್ಣ ಸಂಕಪ್ಪರವರಿಂದ ಕಲಿತ ಇವರು ಅಳ್ಳೆರೋಗ, ಕಾಮಾಲೆ, ಕಜ್ಜಿ, ಹುಳುಕಡ್ಡಿ, ಇಸುಬು, ಮೊದಲಾದವುಗಳಿಗೆ ವೈದ್ಯಮಾಡುತ್ತಾರೆ.

130. ಮಡಿವಾಳರ ಕರಿಯಪ್ಪ ತಂದೆ ಕೆಂಚಪ್ಪ (31.07.07) : ಹೊಸದುರ್ಗ ತಾಲ್ಲೂಕಿನ ಕಂಚೀಪುರ ಗ್ರಾಮದವರು. ಮಡಿವಾಳ ಶೆಟ್ಟರ ಜನಾಂಗಕ್ಕೆ ಸೇರಿದ ಇವರು ವಂಶಪಾರಂಪರ್ಯದಿಂದ ವೈದ್ಯವನ್ನು ಕಲಿತ್ತಿರುತ್ತಾರೆ. ಇವರ ವಯಸ್ಸು 42, ಮನುಷ್ಯ ಸಂಬಂಧಿ ರೋಗಗಳಿಗೆ ಚಿಕಿತ್ಸೆ ನೀಡುತ್ತಾರೆ. ಸುಮಾರು 25 ವರ್ಷಗಳ ಅನುಭವವಿದೆ.

131. ಮಲ್ಲಾಡಜ್ಜರ ರಾಜಣ್ಣ ತಂದೆ ಸಿದ್ದಪ್ಪ (31.07.07) : ಹೊಸದುರ್ಗ ತಾಲ್ಲೂಕಿನ ಕಂಚೀಪುರ ಗ್ರಾಮದವರು. ದೇವಾಂಗ ಶೆಟ್ಟರ ಕುಲಕ್ಕೆ ಸೇರಿದ ಇವರಿಗೆ 52 ವರ್ಷ. ವಂಶಪಾರಂಪರ್ಯದಿಂದ ವೈದ್ಯ ಕಲಿತ ಇವರು ಮನುಷ್ಯ ಸಂಬಂಧಿ ರೋಗಗಳಿಗೆ ಚಿಕಿತ್ಸೆ ನೀಡುತ್ತಾರೆ. ಇವರಿಗೆ ಸುಮಾರು 30 ವರ್ಷಗಳ ಅನುಭವವಿದೆ.

132. ಮರಿಸ್ವಾಮಿ ಎಚ್.ಎನ್. ತಂದೆ ನಿಂಗಜ್ಜ (09.04.08, 10.04.08, 16.04.08) : ಚ. ತಾಲ್ಲೂಕಿನ ಹರವಿಗೊಂಡನಹಳ್ಳಿಯವರು. ಲಿಂಗಾಯಿತ ಕುಲಕ್ಕೆ ಸೇರಿದ ಇವರಿಗೆ 75 ವರ್ಷ. ನಂಜು, ತಲೆಭಾರ ಮುಂತಾದ ರೋಗಗಳಿಗೆ ವೈದ್ಯ ಮಾಡುತ್ತಾರೆ. ಸುಮಾರು 30 ವರ್ಷಗಳ ಅನುಭವವಿದೆ.

133. ಮಹಮ್ಮದ್ ನೂರುಲ್ಲ (20.05.06, 18.10.07) : ಚ. ತಾಲ್ಲೂಕಿನ ನಾಯಕನಹಟ್ಟಿ ಗ್ರಾಮದವರು. ಇವರಿಗೆ 56 ವರ್ಷ. ವಂಶಪಾರಂಪರ್ಯವಾಗಿ ವೈದ್ಯವನ್ನು ಕಲಿತ್ತಿದ್ದಾರೆ. ಇವರು ಅಂಜನ ವಿದ್ಯೆಯಲ್ಲಿ ಪರಿಣತರು, ಗಂಡಮಾಲೆ ಮತ್ತು ಮೂಲವ್ಯಾಧಿಗೆ ವೈದ್ಯಮಾಡುತ್ತಾರೆ. ಸುಮಾರು 20 ವರ್ಷಗಳ ಅನುಭವವಿದೆ.

134. ಮಲ್ಲಮ್ಮ ಪೂಜಾರಿ ಗಂಡ ಪೂಜಾರಿ ಪೆದ್ದಯ್ಯ (28.06.07) : ಮೊಳಕಾಲ್ಮೂರು ತಾಲ್ಲೂಕಿನ ಚಿಕ್ಕುಂತಿ ಗ್ರಾಮದವರು. ನಾಯಕ ಜನಾಂಗಕ್ಕೆ ಸೇರಿದ ಇವರಿಗೆ 60 ವರ್ಷ. ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರು ಮಹಿಳೆಯರು ಮತ್ತು ಮಕ್ಕಳಿಗೆ ವೈದ್ಯೋಪಚಾರ ಮಾಡುತ್ತಾರೆಯಲ್ಲದೆ ಸೂಲಗಿತ್ತಿಯು ಆಗಿದ್ದಾರೆ. ಸುಮಾರು 30 ವರ್ಷಗಳ ಅನುಭವವಿದೆ.

135. ಮಲ್ಲಿಕಾರ್ಜುನಸ್ವಾಮಿ ಕೆ.ಎಸ್. ತಂದೆ ಶಿವಲಿಂಗಪ್ಪ (20.07.07) : ಹೊ. ತಾಲ್ಲೂಕಿನ ದುಮ್ಮಿ ಗ್ರಾಮದವರು. ವೃತ್ತಿಯಲ್ಲಿ ಕೃಷಿ, ಲಿಂಗಾಯಿತ (ಭಂಡಾರಿ) ಕುಲದವರು. ತಂದೆಯಿಂದ ವೈದ್ಯ ಕಲಿತ ಇವರಿಗೆ 50 ವರ್ಷಗಳು, ಮುಟ್ಟು ದೋಷ, ಕಾಮಾಲೆ, ಅರೆತಲೆನೋವು – ಮುಂತಾದ ರೋಗಗಳಿಗೆ ಚಿಕಿತ್ಸೆ ನೀಡುತ್ತಾರೆ.

136. ಮಾರಯ್ಯ ಕಜ್ಜಿ ತಂದೆ ದೊಡ್ಡನಾಗಪ್ಪ (25.08.07) : ಮೊ. ತಾಲ್ಲೂಕಿನ ನಾಗಸಮುದ್ರ ಗ್ರಾಮದವರು. ನಾಯಕ ಜನಾಂಗಕ್ಕೆ ಸೇರಿದ ಇವರು ಇತರರಿಂದ ವೈದ್ಯವನ್ನು ಕಲಿತ್ತಿದ್ದಾರೆ. ಇವರಿಗೆ 59 ವರ್ಷ. ಪಶು ಸಂಬಂಧಿಯಾದ ಹೆಗಲಬಾವು, ಸೆಲೆ, ಮೇವು ತಿನ್ನಲು ಮುಂತಾದ ರೋಗಗಳಿಗೆ ಚಿಕಿತ್ಸೆ ನೀಡುತ್ತಾರೆ. ಸುಮಾರು 30 ವರ್ಷಗಳ ಅನುಭವವಿದೆ.

137. ಮಾಲಮ್ಮ ಗಂಡ ಮಲ್ಲಾಡಜ್ಜರ ರಾಜಣ್ಣ (31.07.07) : ಹೊಸದುರ್ಗ ತಾಲ್ಲೂಕಿನ ಕಂಚೀಪುರ ಗ್ರಾಮದವರು. ಬಂಧುಗಳಿಂದ ವೈದ್ಯ ಕಲಿತ ಇವರು ದೇವಾಂಗ ಶೆಟ್ಟರ ಕುಲದವರು. ಇವರಿಗೆ 47 ವರ್ಷ, ಎದೆಹುಣ್ಣಿಗೆ ಚಿಕಿತ್ಸೆ ನೀಡುತ್ತಾರೆ. ಸುಮಾರು 20 ವರ್ಷಗಳ ಅನುಭವವಿದೆ.

138. ಮಾದಪ್ಪ ತಂದೆ ಕಾಡಪ್ಪ (28.07.07, 13.11.08) : ಹೊಸದುರ್ಗ ತಾಲ್ಲೂಕಿನ ಹಾಗಲಕೆರೆ ಗ್ರಾಮದ ನಿವಾಸಿ. ನಾಯಕ ಜನಾಂಗಕ್ಕೆ ಸೇರಿದ ಇವರಿಗೆ 65 ವರ್ಷ. ಇತರರಿಂದ ವೈದ್ಯ ಕಲಿತ ಇವರು ಹಲವು ಮನುಷ್ಯ ಸಂಬಂಧಿ ಹಾಗೂ ಪಶು ಸಂಬಂಧಿ ರೋಗಕ್ಕೆ ಚಿಕಿತ್ಸೆ ನೀಡುತ್ತಾರೆ. 15 ವರ್ಷಗಳ ಅನುಭವವಿದೆ.

139. ಮ್ಯಾಸರ ಮಲ್ಲಯ್ಯ ತಂದೆ ಗಿಡ್ಡಯ್ಯ (09.11.08) : ಚ. ತಾಲ್ಲೂಕಿನ ಗುಂತುಕೋಲಮ್ಮನ ಹಳ್ಳಿಯ ನಿವಾಸಿ, ವಯಸ್ಸು 74. ವಂಶಪಾರಂಪರ್ಯದಿಂದ ವಿದ್ಯೆ ಕಲಿತ್ತಿದ್ದಾರೆ. ಮ್ಯಾಸ ನಾಯಕರು. ಮಕ್ಕಳಿಗೆ ಯಂತ್ರಬರೆಯುವುದು, ಗಂಡಮಾಲೆ, ಮೂಲವ್ಯಾದಿ, ಫಿಟ್ಸ್ ಮುಂತಾದವುಗಳಿಗೆ ವೈದ್ಯವನ್ನು ಮಾಡುತ್ತಾರೆ.

140. ಮುದ್ದು ಓಬಯ್ಯ ತಂದೆ ಮುಕ್ಕಣ್ಣ (07.08.07) : ಚಿ. ತಾಲ್ಲೂಕಿನ ಮುದ್ದಾಪುರ ಮ್ಯಾಸರಹಟ್ಟಿ ಗ್ರಾಮಕ್ಕೆ ಸೇರಿದವರು. ನಾಯಕ ಜನಾಂಗಕ್ಕೆ ಸೇರಿದ ಇವರಿಗೆ 62 ವರ್ಷ. ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರು ಮಕ್ಕಳ ಫಿಟ್ಸ್, ನಪುಂಸಕತ್ವ ನಿವಾರಣೆ, ಪಾರ್ಶ್ವವಾಯು ಮುಂತಾದ ಮನುಷ್ಯ ಸಂಬಂಧಿ ಹಾಗೂ ಪಶುಸಂಬಂಧಿ ರೋಗಗಳಿಗೆ ಚಿಕಿತ್ಸೆ ನೀಡುವ ಪರಿಣತಿಯನ್ನು ಹೊಂದಿದ್ದಾರೆ. ಸುಮಾರು 40 ವರ್ಷಗಳ ಅನುಭವವಿದೆ.

141. ಮೋಹನ್‌ರಾಜ್ ಪಿ. ತಂದೆ ಪರಶುರಾಮ ನಾಯಕ (24.08.07) : ಮೊ. ತಾಲ್ಲೂಕಿನ ಬೊಮ್ಮಲಿಂಗನಹಳ್ಳಿ ಗ್ರಾಮದವರು. ನಾಯಕ ಜನಾಂಗಕ್ಕೆ ಸೇರಿದ ಇವರು ಸಂಬಂಧಿಕರಿಂದ ವೈದ್ಯವನ್ನು ಕಲಿತ್ತಿದ್ದಾರೆ. ಇವರಿಗೆ 39 ವರ್ಷ. ಸುಮಾರು 15 ವರ್ಷಗಳ ಅನುಭವವುಳ್ಳ ಇವರು ಮೂಳೆ ವೈದ್ಯದಲ್ಲಿ ಪರಿಣತರು.

142. ರತ್ನಮ್ಮ ಗಂಡ ರಂಗಪ್ಪ (26.10.07) : ಹೊಸದುರ್ಗ ತಾಲ್ಲೂಕಿನ ಜಮಾಪುರ ಗ್ರಾಮದವರು. ಚಲವಾದಿ ಜನಾಂಗಕ್ಕೆ ಸೇರಿದ ಇವರಿಗೆ 46 ವರ್ಷ. ಬಂಧುಗಳಿಂದ ವೈದ್ಯ ಕಲಿತ ಇವರು ಜಾಂಡೀಸ್ ರೋಗಕ್ಕೆ ಚಿಕಿತ್ಸೆ ನೀಡುತ್ತಾರೆ. ಇವರಿಗೆ ಸುಮಾರು 20 ವರ್ಷಗಳ ಅನುಭವವಿದೆ.

143. ರಂಗಸ್ವಾಮಿ ಕೆ.ಪಿ. ತಂದೆ ಪುಟ್ಟರಂಗಪ್ಪ (05.08.07) : ಹಿರಿಯೂರು ತಾಲ್ಲೂಕಿನ ಕಸವನಹಳ್ಳಿಯವರು. ಸುಮಾರು 30 ವರ್ಷಗಳ ಅನುಭವುಳ್ಳ ಇವರು ವಂಶಪಾರಂಪರ್ಯವಾಗಿ ವೈದ್ಯವನ್ನು ಕಲಿತಿರುತ್ತಾರೆ. ಕಜ್ಜಿ, ಕಿವಿ ಸೋರುವಿಕೆ ಮತ್ತು ಸಕ್ಕರೆ ಕಾಯಿಲೆ ಮುಂತಾದ ರೋಗಗಳಿಗೆ ಚಿಕಿತ್ಸೆ ನೀಡುತ್ತಾರೆ. 55 ವರ್ಷ, ನಾಯಕ ಜನಾಂಗದವರು.

144. ರಂಗಪ್ಪ ತಂದೆ ತಿಮ್ಮಪ್ಪ (24.10.07) : ಹೊ. ತಾಲ್ಲೂಕಿನ ಗಂಗಸಮುದ್ರ ಗ್ರಾಮದವರು. 55 ವರ್ಷದ ಇವರು ನಾಯಕ ಜನಾಂಗಕ್ಕೆ ಸೇರಿದವರು. ವೈದ್ಯವನ್ನು ಇತರರಿಂದ ಕಲಿತವರು ಎಲ್ಲಾ ರೀತಿಯ ಹುಣ್ಣುಗಳಿಗೆ ಚಿಕಿತ್ಸೆ ನೀಡುತ್ತಾರೆ.

145. ರಂಗಪ್ಪ ತಂದೆ ರಂಗಪ್ಪ(26.10.07, 14.11.08) : ಹೊಸದುರ್ಗ ತಾಲ್ಲೂಕಿನ ಜಮಾಪುರ ಗ್ರಾಮದವರು. ಲಿಂಗಾಯಿತ ಕುಲಕ್ಕೆ ಸೇರಿದ ಇವರಿಗೆ 80 ವರ್ಷ. ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರು ಪಶುವೈದ್ಯದಲ್ಲಿ ಪರಿಣತಿಯನ್ನು ಹೊಂದಿದ್ದಾರೆ. ಇವರಿಗೆ ಸುಮಾರು 40 ವರ್ಷಗಳ ಅನುಭವವಿದೆ.

146. ರಾಜಣ್ಣ ತಂದೆ ಸಿದ್ದಪ್ಪ (30.07.07) : ಹೊಸದುರ್ಗ ತಾಲ್ಲೂಕಿನ ದೊಡ್ಡತೇಕಲವಟ್ಟಿ ಗ್ರಾಮದವರು. ಉಪ್ಪಾರ ಜನಾಂಗಕ್ಕೆ ಸೇರಿದ ಇವರಿಗೆ 45 ವರ್ಷ. ಸ್ವಾನುಭವದಿಂದ ವೈದ್ಯ ಕಲಿತ ಇವರು ಮನುಷ್ಯ ಹಾಗೂ ಪಶು ರೋಗಗಳಿಗೆ ವೈದ್ಯಮಾಡುತ್ತಾರೆ. ಸುಮಾರು 20 ವರ್ಷಗಳ ಅನುಭವವಿದೆ.

147. ರಾಮಜ್ಜ ತಂದೆ ಸಿದ್ದರಾಮಪ್ಪ (24.10.07) : ಹೊ. ತಾಲ್ಲೂಕಿನ ಗಂಗಸಮುದ್ರ ಗ್ರಾಮದವರು. ಲಿಂಗಾಯಿತ ಕುಲಕ್ಕೆ ಸೇರಿದ ಇವರಿಗೆ 82 ವರ್ಷ. ಇತರರಿಂದ ವೈದ್ಯ ಕಲಿತ ಇವರು ಪಶು ವೈದ್ಯರು.

148. ರಾಜಣ್ಣ ಕೆ.ಓ. ತಂದೆ ಕೆ.ಎಸ್. ಓಬಣ್ಣ(25.05.07) : ಚ. ತಾಲ್ಲೂಕಿನ ದಾಸರಮುತ್ತೇನಹಳ್ಳಿ ಗ್ರಾಮದವರು. ವೃತ್ತಿ ಕೃಷಿ, ಜಾತಿ ನಾಯಕ, ವಯಸ್ಸು 40, ವಿದ್ಯೆಯನ್ನು ವಂಶಪಾರಂಪರ್ಯದಿಂದ ಕಲಿತಿದ್ದಾರೆ. ಜಾಂಡೀಸ್, ಫೀಟ್ಸ್, ಮೀಟುರೋಗ, ಗ್ರಹಚೇಷ್ಟೆ, ಭೂಮಿರಾವು, ಗಾಳಿಸೋಕು, ಬ್ರಹ್ಮರಾಕ್ಷಸಿ, ಪಾರ್ಶ್ವವಾಯು ಮುಂತಾದವುಗಳಿಗೆ ವೈದ್ಯ ಮಾಡುತ್ತಾರೆ.

149. ರಾಜಪ್ಪ ತಂದೆ ವೀರಭದ್ರಪ್ಪ (14.11.08) : ಹೊಸದುರ್ಗ ತಾಲ್ಲೂಕಿನ ಮಲ್ಲೇನಹಳ್ಳಿಯ ನಿವಾಸಿ. ವಯಸ್ಸು 35, ಹೆಣ್ಣುಕೊಟ್ಟ ಅತ್ತೆಯಿಂದ ವಿದ್ಯೆಯನ್ನು ಕಲಿತ್ತಿದ್ದಾರೆ. ಕುಂಬಾರ ಜನಾಂಗಕ್ಕೆ ಸೇರಿದ ಇವರು ಹಾವಿನ ವಿಷಕ್ಕೆ ವೈದ್ಯ ಮಾಡುತ್ತಾರೆ. ವೃತ್ತಿಯಲ್ಲಿ ಕೃಷಿಕರು ಸುಮಾರು 8 ವರ್ಷದ ಅನುಭವವಿದೆ.

150. ರಾಜಣ್ಣ ತಂದೆ ತಿಮ್ಮಯ್ಯ (14.11.08) : ಹೊ. ತಾಲ್ಲೂಕಿನ ಜಿ. ವಡೇರಹಳ್ಳಿಯ ನಿವಾಸಿ, ವಯಸ್ಸು 56, ಲಿಂಗಾಯಿತ ಜನ, ಹಾವಿನ ವಿಷಕ್ಕೆ, ಕೆಮ್ಮುವಿಗೆ ಔಷಧ ಕೊಡುತ್ತಾರೆ. ಪಶುವೈದ್ಯರು ಹೌದು. ವೃತ್ತಿಯಲ್ಲಿ ಕೃಷಿಕರು.

151. ರಾಜಣ್ಣ ತಂದೆ ಜೋಗಪ್ಪ (03.08.07) : ವೃತ್ತಿಯಲ್ಲಿ ಟೈಲರ್ ಆಗಿದ್ದು ಸ್ವಂತ ಅನುಭವದಿಂದ ವೈದ್ಯವನ್ನು ಕಲಿತು ಮನುಷ್ಯರ ಕಾಯಿಲೆಗೆ ಸುಮಾರು 20 ವರ್ಷಗಳಿಂದ ಚಿಕಿತ್ಸೆ ನೀಡುತ್ತಾ ಬಂದಿದ್ದಾರೆ. ನಾಯಕ ಜನಾಂಗಕ್ಕೆ ಸೇರಿದ 42 ವರ್ಷದ ಇವರು ಹಿರಿಯೂರು ತಾಲ್ಲೂಕಿನ ಕರಿಚಿಕ್ಕಯ್ಯನ ರೊಪ್ಪದವರು.

152. ರಾಮಲಿಂಗಪ್ಪ ತಂದೆ ವೀರಭದ್ರಪ್ಪ (27.10.07, 15.11.08) : ಹೊ. ತಾಲ್ಲೂಕಿನ ತಾಳಕಟ್ಟೆ ಗ್ರಾಮದವರು. ಲಿಂಗಾಯಿತ ಕುಲಕ್ಕೆ ಸೇರಿದ ಇವರಿಗೆ 56 ವರ್ಷ. ವೃತ್ತಿಯಲ್ಲಿ ಶಿಕ್ಷಕರು, ವಂಶಪಾರಂಪರ್ಯವಾಗಿ ವೈದ್ಯವನ್ನು ಕಲಿತ್ತಿದ್ದಾರೆ. ಸುಮಾರು 30 ವರ್ಷಗಳ ಅನುಭವವಿದೆ. ಇವರು ಎಲ್ಲಾ ರೀತಿಯ ಹುಣ್ಣುಗಳಿಗೆ ಮತ್ತು ಕಜ್ಜಿಗೆ ಉಪಚರಿಸುತ್ತಾರೆ.

153. ರಾಮಚಾರಿ ತಂದೆ ಪಂಡಿತ ಹನುಮಂತಾಚಾರಿ (30.03.08) : ಚಿ. ತಾಲ್ಲೂಕಿನ ದೊಡ್ಡಸಿದ್ದವ್ವನ ಹಳ್ಳಿಯವರು. ವಿಶ್ವಕರ್ಮ ಜನಾಂಗಕ್ಕೆ ಸೇರಿದ ಇವರಿಗೆ 70 ವರ್ಷ. ಮೋಡಿ ವಂಶಸ್ಥರಾದ ಇವರು, ವಂಶಪಾರಂಪರ್ಯವಾಗಿ ಮಂತ್ರವಿದ್ಯೆಯನ್ನು ಹಾಗೂ ಗಿಡಮೂಲಿಕಾ ವೈದ್ಯವನ್ನು ಬಲ್ಲವರಾಗಿದ್ದಾರೆ. ಇವರ ತಂದೆ ಪ್ರಸಿದ್ಧ ಮೋಡಿಗಾರರಾಗಿದ್ದರು.

154. ರಾಮಣ್ಣ ಜಂಗಲಿ ತಂದೆ ಗುರಪ್ಪ (22.08.07) : ಚಿ. ತಾಲ್ಲೂಕಿನ ದೊಡ್ಡಸಿದ್ದಯ್ಯನಹಳ್ಳಿಯವರು. ನಾಯಕ ಜನಾಂಗಕ್ಕೆ ಸೇರಿದ ಇವರಿಗೆ 48 ವರ್ಷ. ಗೌರಿ ಬಿದನೂರು ಕಡೆಯ ವ್ಯಕ್ತಿಯಿಂದ ವೈದ್ಯ ಕಲಿತ ಇವರು ಒಣವಾಂತಿಗೆ, ತೊಡೆವಾಳ, ಹುಳುಕಡ್ಡಿ ಮುಂತಾದ ರೋಗಗಳಿಗೆ ಉಪಚರಿಸುತ್ತಾರೆ. ಸುಮಾರು 20 ವರ್ಷಗಳ ಅನುಭವವಿದೆ.

155. ರಾಮಕೃಷ್ಣ ತಂದೆ ವೀರಣ್ಣ (29.06.07) : ಮೊ. ತಾಲ್ಲೂಕಿನ ಹಾನಗಲ್ ಗ್ರಾಮಕ್ಕೆ ಸೇರಿದವರು. ವಂಶಪಾರಂಪರ್ಯವಾಗಿ ವೈದ್ಯವನ್ನು ಕಲಿತ ಇವರಿಗೆ 42 ವರ್ಷ. ಕೆಮ್ಮು, ಕಿರುನಾಲಿಗೆ, ನಿಃಶಕ್ತಿಗೆ ಮತ್ತು ಕಫಕ್ಕೆ ಚಿಕಿತ್ಸೆಯನ್ನು ಬಲ್ಲವರಾಗಿದ್ದಾರೆ. ಸುಮಾರು 10 ವರ್ಷಗಳ ಅನುಭವವಿದೆ.

156. ರಾಮಪ್ಪ ಗ್ಯಾರೆ ತಂದೆ ರಂಗಪ್ಪ (20.07.07) : ಹೊ. ತಾಲ್ಲೂಕಿನ ದೊಗ್ಗನಾಳ್ ಗ್ರಾಮದವರು. ವಂಶಪಾರಂಪರ್ಯವಾಗಿ ವೈದ್ಯವನ್ನು ಅರಿತ ಇವರಿಗೆ 60 ವರ್ಷಗಳು. ತಳವಾರು (ಊರನಾಯಕ) ಜನಾಂಗದವರು. ಲಾಳ್ ಸಂಕೋಲೆ, ಕಿವಿ ತೊಂದರೆಗಳಿಗೆ ಔಷಧಿ ಕೊಡುತ್ತಾರೆ. ಪಶುವೈದ್ಯರು ಹೌದು.

157. ಲಕ್ಷಣಪ್ಪ ತಂದೆ ಬಾಲಪ್ಪ (27.08.07, 10.10.07) : ಚ. ತಾಲ್ಲೂಕಿನ ತಿಪ್ಪಯ್ಯನಕೋಟೆ ಗ್ರಾಮದವರು. ವೃತ್ತಿ ಕೃಷಿ, ಜಾತಿ ಉಪ್ಪಾರರು, ವಯಸ್ಸು 32. ವಿದ್ಯೆಯನ್ನು ವಂಶಪಾರಂಪರ್ಯವಾಗಿ ಕಲಿತ್ತಿದ್ದಾರೆ. ಬಟ್ಟೆ ಬಿದ್ದಾಗ, ರಕ್ತಕೆಟ್ಟು ಗಾಯವಾದರೆ, ಹಾವಿನ ವಿಷಕ್ಕೆ ಮೊದಲಾದವುಗಳಿಗೆ ವೈದ್ಯಮಾಡುತ್ತಾರೆ.

158. ಲಕ್ಷ್ಮೀದೇವಿ (20.07.07) : ಹೊ. ತಾಲ್ಲೂಕಿನ ದುಮ್ಮಿ ಗ್ರಾಮದ ನಿವಾಸಿ. ಬಂಧುಗಳಿಂದ ವೈದ್ಯ ಕಲಿತ ಇವರಿಗೆ ಸುಮಾರು 30 ವರ್ಷಗಳ ಅನುಭವವಿದೆ. ಭಾವಸಾರ್ ಕ್ಷತ್ರಿಯರು, ಮಕ್ಕಳ ಕೆಮ್ಮು, ಜ್ವರ, ಭೇದಿ, ಮಕ್ಕಳ ಸಂತಾನಗಳಿಗೆ ಉಪಚರಿಸುತ್ತಾರೆ.

159. ಲೋಕೇಶಪ್ಪ ಆರ್. ತಂದೆ ರಂಗಪ್ಪ (14.11.08) : ಹೊಸದುರ್ಗ ತಾಲ್ಲೂಕಿನ ಮಲ್ಲಪನಹಳ್ಳಿ ಗ್ರಾಮದ ನಿವಾಸಿ, ವಯಸ್ಸು 40. ಲಿಂಗಾಯಿತ ಜನ. ಗಂಗ ಸಮುದ್ರದ ರಾಮಜ್ಜನಿಂದ ವೈದ್ಯವನ್ನು ಕಲಿತ್ತಿದ್ದಾರೆ. ಇವರು ಪಶು ವೈದ್ಯರು, ವೃತ್ತಿಯಲ್ಲಿ ಕೃಷಿಕರು ಮತ್ತು ದನಗಳ ವ್ಯಾಪಾರ ಮಾಡುತ್ತಾರೆ.

160. ವಾಸುದೇವರೆಡ್ಡಿ ಎಸ್. (ದೊಡ್ಡಮನೆ) ತಂದೆ ಸೀತಾರಾಮ ರೆಡ್ಡಿ (29.03.08) : ಚಿ. ತಾಲ್ಲೂಕಿನ ಓರಗಂಟರ ಮೊಳಿಗೆ ಗ್ರಾಮದವರು. ಕಮ್ಮರೆಡ್ಡಿ ಜನಾಂಗಕ್ಕೆ ಸೇರಿದ ಇವರಿಗೆ 60 ವರ್ಷ. ಹೊಟ್ಟೆನೋವಿಗೆ ಉಪಚರಿಸುತ್ತಾರೆ.

161. ವೀರಣ್ಣ ತಂದೆ ಓಬಯ್ಯ (29.06.07, 08.10.07, 11.11.07) : ಮೊ. ತಾಲ್ಲೂಕಿನ ಹಾನಗಲ್ ಗ್ರಾಮಕ್ಕೆ ಸೇರಿದವರು. ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರಿಗೆ 70 ವರ್ಷ. ನಾಯಕ ಜನಾಂಗದವರು. ಹಿಡಿಕೆ ರೋಗ, ಋತುಸ್ರಾವ, ಮಕ್ಕಳಫಲ ಮೊದಲಾದ ಸಮಸ್ಯೆಗಳನ್ನು ಗುಣಪಡಿಸುವಲ್ಲಿ ಅನುಭವಿಗಳು, ಮೋಡಿ ವಿದ್ಯೆಯಲ್ಲಿ ಹಾಗೂ ರಸವೈದ್ಯದಲ್ಲಿಯೂ ಪರಿಣತಿಯನ್ನು ಹೊಂದಿದ ಇವರಿಗೆ ಸುಮಾರು 40 ವರ್ಷಗಳ ಅನುಭವವಿದೆ.

162. ವಿರುಪಾಕ್ಷಪ್ಪ ಕರಿಯಪ್ಪರ ತಂದೆ ತಿಮ್ಮಪ್ಪ (25.07.07) : ಹೊ. ತಾಲ್ಲೂಕಿನ ಕೋಟೆಹಾಳು ಗ್ರಾಮದ ನಿವಾಸಿ. ಲಿಂಗಾಯಿತ ಕುಲಕ್ಕೆ ಸೇರಿದ್ದಾರೆ, ವಯಸ್ಸು 55, ಸ್ವಂತ ಅನುಭವದಿಂದ ವೈದ್ಯ ಕಲಿತ ಇವರು ಪಶು ವೈದ್ಯದಲ್ಲಿ ಪ್ರಸಿದ್ಧಿ. ಸುಮಾರು 30 ವರ್ಷಗಳ ಅನುಭವವಿದೆ.

163. ಶರಣಪ್ಪ ಕೆ.ಟಿ. ತಂದೆ ಕ್ವಾಟೆ ತಿಪ್ಪಣ್ಣ (04.11.08) : ಮೊ. ತಾಲ್ಲೂಕಿನ ಚಿನ್ನೋಬನಹಳ್ಳಿಯವರು. ವಯಸ್ಸು 56, ಅದೇ ಊರಿನ ಒಬ್ಬ ಅಜ್ಜನ ಕೈಬರಹದ ವೈದ್ಯಗ್ರಂಥವನ್ನು ಓದಿ ವೈದ್ಯವನ್ನು ಕಲಿತಿರುತ್ತಾರೆ. ಲಿಂಗಾಯತ ಜನಾಂಗದವರು, ಮನುಷ್ಯರ ರಕ್ತ ಭೇದಿಗೆ ಔಷಧ ಕೊಡುವುದರಲ್ಲಿ ಪ್ರಸಿದ್ಧರಾದ ಇವರು ಪಶುವೈದ್ಯವನ್ನೂ ಮಾಡುತ್ತಾರೆ.

164. ಶಂಕರಪ್ಪ ಮೂಡ್ಲುಬಾಗಿಲು ತಂದೆ ಬೋರಪ್ಪ (28.07.07) : ಹೊಸದುರ್ಗ ತಾಲ್ಲೂಕಿನ ಅರಲಹಳ್ಳಿ ಗ್ರಾಮದವರು. ಲಿಂಗಾಯಿತ ಕುಲಕ್ಕೆ ಸೇರಿದ ಇವರಿಗೆ 73 ವರ್ಷ. ಇತರರಿಂದ ವೈದ್ಯ ಕಲಿತ ಇವರು ಇಸುಬು ಮತ್ತು ತಲೆಕೂದಲು ಬರಲು ವಿಶೇಷವಾಗಿ ಚಿಕಿತ್ಸೆ ಮಾಡುತ್ತಾರೆ. ಇವರಿಗೆ ಸುಮಾರು 30 ವರ್ಷಗಳ ಅನುಭವವಿದೆ.

165. ಶಂಕರ್ ಪಿ.ತಂದೆ ಪುಟ್ಟಲಿಂಗಪ್ಪ (04.08.07) : ಸಂಬಂಧಿಕರಿಂದ ವೈದ್ಯವನ್ನು ಕಲಿತ್ತಿದ್ದಾರೆ. ಹಾವಿನ ವಿಷಕ್ಕೆ ಚಿಕಿತ್ಸೆ ನೀಡುವುದರಲ್ಲಿ ಪರಿಣತಿಯನ್ನೊಂದಿದ್ದಾರೆ. ಹಿರಿಯೂರು ತಾಲ್ಲೂಕಿನ ಬಗ್ಗನಾಡು ಗ್ರಾಮದ ನಿವಾಸಿ, ನಾಯಕ ಜನಾಂಗ, ವಯಸ್ಸು 41.

166. ಶಾಮಣ್ಣ ಸುಣ್ಣಗಾರ ತಂದೆ ಸಣ್ಣಪ್ಪ (11.12.06, 13.01.07, 19.07.07) : ಹೊ. ತಾಲ್ಲೂಕಿನ ರಾಮಗಿರಿ ಗ್ರಾಮದವರು ಬೆಸ್ತರ ಜನಾಂಗಕ್ಕೆ ಸೇರಿದ ಇವರಿಗೆ 74 ವರ್ಷ. ವಂಶಪಾರಂಪರ್ಯವಾಗಿ ವೈದ್ಯ ಕಲಿತ್ತಿದ್ದಾರೆ. ಸುಮಾರು 50 ವರ್ಷಗಳ ಅನುಭವವಿದೆ. ಗಂಡಮಾಲೆ, ಹಾವಿನ ವಿಷ, ಇಸುಬು, ಹಿಡಿಕೆರೋಗ, ಎದೆಹುಣ್ಣು – ಮುಂತಾದ ಸುಮಾರು 30 ಕಾಯಿಲೆಗಳಿಗೆ ವೈದ್ಯ ಮಾಡುವ ಅನುಭವವಿದೆ.

167. ಶಿವಣ್ಣ ತಂದೆ ಗಂಗಪ್ಪ (10.11.08) : ಚ. ತಾಲ್ಲೂಕು ನಾಯಕನಹಟ್ಟಿಯ ನಿವಾಸಿ, ವಯಸ್ಸು 45. ತಂದೆಯಿಂದ ಮುಲಿಕಾ ವೈದ್ಯವನ್ನು ಕಲಿತಿರುತ್ತಾರೆ. ಸುಡುಗಾಡು ಸಿದ್ಧರ ಜನ, ದೆವ್ವ, ಬಾಲಗ್ರಹಗಳಿಗೆ ಯಂತ್ರಬರೆಯುತ್ತಾರೆ. ಹಾವಿನ ವಿಷಕ್ಕೆ, ಮೈಕಾವು, ಚೇಳಿನ ವಿಷ ಮೊದಲಾದವುಗಳಿಗೆ ವೈದ್ಯವನ್ನು ಮಾಡುತ್ತಾರೆ.

168. ಶಿವಲಿಂಗಪ್ಪ ಎಂ. ತಂದೆ ಮಾದಪ್ಪ (05.08.07) : ಹಿರಿಯೂರು ತಾಲ್ಲೂಕಿನ ಮಸ್ಕಲ್ ಗ್ರಾಮದವರು. ಮನುಷ್ಯರ ವಿವಿಧ ರೋಗಗಳಿಗೆ ಚಿಕಿತ್ಸೆ ನೀಡುವುದರಲ್ಲಿ ನಿಪುಣರು ಸುಮಾರು 20 ವರ್ಷಗಳ ಅನುಭವವಿದೆ. ಆಯುರ್ವೇದವನ್ನು ಬಲ್ಲ ಪಂಡಿತರೂ ಹೌದು.

169. ಶಿವಮೂರ್ತಪ್ಪ ಜಿ.ಎಂ. ತಂದೆ ಮಹೇಶ್ವರಪ್ಪ (24.10.07) : ಗುಂಡುಸಮುದ್ರ ಗ್ರಾಮದವರು. ವಂಶಪಾರಂಪರ್ಯದಿಂದ ವೈದ್ಯ ಕಲಿತ ಇವರಿಗೆ 45 ವರ್ಷ ಜಾಂಡಿಸ್‌ಗೆ ವೈದ್ಯ ನೀಡುತ್ತಾರೆ. 20 ವರ್ಷಗಳ ಅನುಭವವಿದೆ.

170. ಶ್ರೀನಿವಾಸ ತಂದೆ ಹನುಮಂತಪ್ಪ (28.08.07) : ಚ. ತಾಲ್ಲೂಕಿನ ಮಲ್ಲಸಮುದ್ರ ಗ್ರಾಮದವರು. ಕುರುಬ ಜನಾಂಗಕ್ಕೆ ಸೇರಿದ ಇವರಿಗೆ 26 ವರ್ಷ. ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರು ಮನುಷ್ಯ ಸಂಬಂಧಿ ರೋಗಗಳಿಗೆ ಚಿಕಿತ್ಸೆ ನೀಡುತ್ತಾರೆ. ಸುಮಾರು 10 ವರ್ಷಗಳ ಅನುಭವವಿದೆ.

171. ಶ್ರೀನಿವಾಸ್ ಟಿ.ಕೆ. ಪಂಡಿತ್ ತಂದೆ ಕೃಷ್ಣಮೂರ್ತಿ(19.07.07) : ಹೊ. ತಾಲ್ಲೂಕಿನ ಆರ್.ಡಿ. ಕಾವಲಿನವರು. ಇವರಿಗೆ 65 ವರ್ಷ. ಶ್ರೀ ವೈಷ್ಣವ ಕುಲಕ್ಕೆ ಸೇರಿದ ಇವರು ಇತರರಿಂದ ವೈದ್ಯ ಕಲಿತ್ತಿದ್ದಾರೆ. ವೃತ್ತಿಯಲ್ಲಿ ಪೂಜಾರಿಯಾಗಿದ್ದು ಸುಮಾರು 40 ವರ್ಷಗಳಿಂದ ವೈದ್ಯೋಪಚಾರ ಮಾಡುತ್ತಿದ್ದಾರೆ. ಹಕ್ಕಿಕಾಳ್ ರೋಗ, ಶಕ್ತಿಟಾನಿಕ್, ಮುಖದ ಬಂಗು, ಚಿಬ್ಬು – ಈ ಮುಂತಾದ ರೋಗಗಳಿಗೆ ಚಿಕಿತ್ಸೆ ನೀಡುವಲ್ಲಿ ಪರಿಣತಿ ಹೊಂದಿದ್ದಾರೆ.

172. ಶೇಖಾಲಿ ಸಾಬ್ ತಂದೆ ಹೊನ್ನೂರ್ ಸಾಬ್ (29.06.07) : ಮೊ. ತಾಲ್ಲೂಕಿನ ತುಮಕೋರ್ಲಹಳ್ಳಿ ಗ್ರಾಮಕ್ಕೆ ಸೇರಿದವರು. ಇತರರಿಂದ ವೈದ್ಯ ಕಲಿತ ಇವರಿಗೆ 60 ವರ್ಷ. ಮುಸ್ಲಿಂ ಜನಾಂಗಕ್ಕೆ ಸೇರಿದ ಇವರು ಮನುಷ್ಯ ಹಾಗೂ ಪಶು ಸಂಬಂಧಿ ರೋಗಗಳಿಗೆ ಚಿಕಿತ್ಸೆ ನೀಡುತ್ತಾರೆ. ಸುಮಾರು 20 ವರ್ಷಗಳ ಅನುಭವವಿದೆ.

173. ಸಣ್ಣೀರಪ್ಪ ಪಿ. ತಂದೆ ಪಾಲಯ್ಯ (01.08.06) : ಚ. ತಾಲ್ಲೂಕಿನ ಚೌಳೂರು ಗ್ರಾಮಕ್ಕೆ ಸೇರಿದ ಇವರು ವೃತ್ತಿಯಲ್ಲಿ ಕೃಷಿಕರು ಜನಪದ ಕಲಾವಿದರು ಮತ್ತು ಬಯಲಾಟದ ಶಿಕ್ಷಕರೂ

ಆಗಿದ್ದಾರೆ. ಜಾತಿಯಲ್ಲಿ ನಾಯಕ, ವಯಸ್ಸು 60. ವಂಶಪಾರಂಪರ್ಯವಾಗಿ ವಿದ್ಯೆಯನ್ನು ಕಲಿತ ಇವರು. ಪಾರ್ಶ್ವವಾಯು ಮತ್ತು ಮಂತ್ರವಿದ್ಯೆಯಲ್ಲಿ ಪರಿಣತರು.

174. ಸಣ್ಣರಂಗಪ್ಪ ತಂದೆ ರಂಗಪ್ಪ (04.08.07) : ಹಿ. ತಾಲ್ಲೂಕಿನ ಬೋರನ ಕುಂಟೆಗ್ರಾಮದ ನಿವಾಸಿ, ವಯಸ್ಸು 62, ಇವರಿಗೆ ವಂಶಪಾರಂಪರ್ಯವಾಗಿ ವೈದ್ಯ ಬಂದಿದೆ. ಕುಂಚಟಿಗ ಒಕ್ಕಲಿಗರಾಗಿದ್ದು ಸುಮಾರು 45 ವರ್ಷಗಳ ವೈದ್ಯದ ಅನುಭವವಿದೆ. ಇವರು ಮನುಷ್ಯರಿಗೆ ಹಾಗೂ ಪಶುಗಳಿಗೆ ಚಿಕಿತ್ಸೆಯನ್ನು ನೀಡುತ್ತಾರೆ.

175. ಸಣ್ಣ ಪಾಲಯ್ಯ ತಂದೆ ಗಿಡ್ಡಯ್ಯ (01.06.07) : ಚ. ತಾಲ್ಲೂಕಿನ ಮಲ್ಲೇಬೋರನಹಟ್ಟಿ ಗ್ರಾಮದವರು. ವೃತ್ತಿ ಕೃಷಿ, ಜಾತಿ ನಾಯಕ (ಮ್ಯಾಸಬೇಡರು), ವಯಸ್ಸು 60. ವಿದ್ಯೆಯನ್ನು ವಂಶಪಾರಂಪರ್ಯದಿಂದ ಕಲಿತ ಇವರು ಸೆಟೆರೋಗ, ಭೂಮಿರಾವು ಬಡಿದರೆ, ಮಣಿನೀರು, ಅಧಿಕ ಋತುಸ್ರಾವ, ಎದೆಯಲ್ಲಿ ರಕ್ತ ಬೀಳುವುದು ಮುಂತಾದವುಗಳಿಗೆ ವೈದ್ಯಮಾಡುತ್ತಾರೆ.

176. ಸಣ್ಣಹನುಮಕ್ಕ ಗಂಡ ಹಂಪಣ್ಣ (07.11.08) : ಚ. ತಾಲ್ಲೂಕಿನ ಹರವಿಗೊಂಡನಹಳ್ಳಿಯವರು, ವಯಸ್ಸು 60, ಲಿಂಗಾಯಿತ ಜನಾಂಗದವರು, ಇವರು ಸೂಲಗಿತ್ತಿಯಾಗಿದ್ದು ಮಕ್ಕಳ ಕಾಯಿಲೆಗಳಿಗೆ ಔಷಧೋಪಚಾರವನ್ನು ಮಾಡುತ್ತಾರೆ. ಸುಮಾರು 20 ವರ್ಷಗಳ ಅನುಭವವಿದೆ.

177. ಸನತ್ ಕುಮಾರ್ ತಂದೆ ಕರಿಬಸಪ್ಪ (24.07.07) : ಹೊ. ತಾಲ್ಲೂಕಿನ ಶಿವಗಂಗೆ ಗ್ರಾಮದವರು. ಲಿಂಗಾಯಿತ ಕುಲಕ್ಕೆ ಸೇರಿದ ಇವರಿಗೆ 46 ವರ್ಷಗಳು. ವಂಶಪಾರಂಪರ್ಯವಾಗಿ ವೈದ್ಯಕಲಿತ ಇವರಿಗೆ ಸುಮಾರು 20 ವರ್ಷಗಳ ಅನುಭವವಿದೆ. ಇವರು ಪಶುವೈದ್ಯ ಹಾಗೂ ಜೋತಿಷ್ಯವೈದ್ಯರಾಗಿದ್ದಾರೆ.

178. ಸಣ್ಣಣ್ಣ ಕರ್‌ನೇರು ತಂದೆ ಕರ್ನಿಪಾಪಯ್ಯ (24.06.07) : ಮೊಳಕಾಲ್ಮೂರು ತಾಲ್ಲೂಕಿನ ಯರೇನಹಳ್ಳಿ ಗ್ರಾಮದವರು. ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರಿಗೆ 50 ವರ್ಷ. ನಾಯಕ ಕುಲಕ್ಕೆ ಸೇರಿದ ಇವರು ವಿಷ ವೈದ್ಯ ಮಾಡುವುದರಲ್ಲಿ ಪ್ರಸಿದ್ಧರು. ಸುಮಾರು 25 ವರ್ಷಗಳಿಂದ ವೈದ್ಯ ಮಾಡುತ್ತಿದ್ದಾರೆ.

179. ಸಾಲಮ್ಮ ತಂದೆ ಲಕ್ಷ್ಮಣಪ್ಪ (27.08.07, 10.10.07) : ಚ. ತಾಲ್ಲೂಕಿನ ತಿಪ್ಪಯ್ಯನ ಕೋಟೆ ಗ್ರಾಮದವರು. ವೃತ್ತಿ ಕೃಷಿ, ಜಾತಿ ಉಪ್ಪಾರರು, ವಯಸ್ಸು 70. ವಿದ್ಯೆಯನ್ನು ತನ್ನ ದೊಡ್ಡಮ್ಮನಿಂದ

ಕಲಿತ್ತಿದ್ದಾರೆ. ಇವರು ಸೆಟೆರೋಗ, ಗಂಟಲಲ್ಲಿ ಬರುವ ಗೆಡ್ಡೆಗಳಿಗೆ, ಚೇಳು ಕಡಿದರೆ, ಬಿಳಿಕೆಂಪುಕರೆಗಳಿಗೆ, ಹೆಂಗೆಸರ ಹೊಟ್ಟೆನೋವು, ಹಾವಿನ ವಿಷಕ್ಕೆ, ಮೈಸುರುಕು ಮೊದಲಾದ ರೋಗಗಳಿಗೆ ವೈದ್ಯಮಾಡುತ್ತಾರೆ.

180. ಸಿದ್ದರಾಮಯ್ಯ ಎಂ.ಆರ್. ತಂದೆ ರುದ್ರಯ್ಯ (26.07.07) : ಹೊಸದುರ್ಗ ತಾಲ್ಲೂಕಿನ ಜಂತಿಕೊಳಲು ಗ್ರಾಮಕ್ಕೆ ಸೇರಿದವರು. ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರಿಗೆ 85 ವರ್ಷ. ಜಂಗಮ ಕುಲಕ್ಕೆ ಸೇರಿದ ಇವರು ಮನುಷ್ಯರಿಗೆ ವೈದ್ಯಮಾಡುತ್ತಾರೆ. ಸುಮಾರು 40 ವರ್ಷಗಳ ವೈದ್ಯದ ಅನುಭವವಿದೆ.

181. ಸಿದ್ದಪ್ಪ ನಾಯಕ ತಂದೆ ರಂಗಪ್ಪನಾಯಕ (29.06.07) : ಮೊ. ತಾಲ್ಲೂಕಿನ ಹಾನಗಲ್ ಗ್ರಾಮಕ್ಕೆ ಸೇರಿದವರು. ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರು ನಾಯಕ ಜನಾಂಗದವರು. ಇವರಿಗೆ ಸುಮಾರು 60 ವರ್ಷ. ಮೈಸುರುಕು, ಜುಂತುಹುಳು, ಕಜ್ಜಿ, ಮೀಟು ವಾಯು – ಮೊದಲಾದವುಗಳಿಗೆ ವೈದ್ಯ ಮಾಡುತ್ತಾರೆ. ಸುಮಾರು 30 ವರ್ಷಗಳ ವೈದ್ಯದ ಅನುಭವವಿದೆ.

182. ಸಿದ್ದಪ್ಪ ತಂದೆ ಎಂಜಪ್ಪ (31.07.07) : ಹೊಸದುರ್ಗ ತಾಲ್ಲೂಕಿನ ಬಾಚಾವಾರ ಗ್ರಾಮದವರು. ಉಪ್ಪಾರ ಜನಾಂಗಕ್ಕೆ ಸೇರಿದ ಇವರಿಗೆ 51 ವರ್ಷ ಇತರರಿಂದ ವೈದ್ಯ ಕಲಿತ ಇವರು ಹಾವಿನ ವಿಷಕ್ಕೆ ವೈದ್ಯ ಮಾಡುವುದರಲ್ಲಿ ಪ್ರಸಿದ್ಧರು, ಜೊತೆಗೆ ಪಶುಗಳಿಗೂ ಚಿಕಿತ್ಸೆ ನೀಡುತ್ತಾರೆ. ಸುಮಾರು 20 ವರ್ಷಗಳ ಅನುಭವವಿದೆ.

183. ಸಿದ್ದಲಿಂಗಪ್ಪ ಸಿ. ತಂದೆ ಚನ್ನಪ್ಪ (05.10.05) : ಚ. ತಾಲ್ಲೂಕಿನ ಅಬ್ಬೇನಹಳ್ಳಿ ಗ್ರಾಮದ ನಿವಾಸಿ, ವಯಸ್ಸು 45, ಲಿಂಗಾಯಿತ ಜನ. ಕುಂಬಳಕುಂಟೆ ಹಾಲಪ್ಪನವರಿಂದ ವಿದ್ಯೆಯನ್ನು ಕಲಿತ್ತಿದ್ದಾರೆ. ವೃತ್ತಿಯಲ್ಲಿ ಕೃಷಿಕರು, ನೂತಿ(ಹುಣ್ಣು)ಗೆ ಔಷಧ ಕೊಡುತ್ತಾರೆ, ಸುಮಾರು 10 ವರ್ಷಗಳ ಅನುಭವವಿದೆ.

184. ಸಿದ್ದಲಿಂಗಪ್ಪ ಗೌಡ್ರು ತಂದೆ ಗೌಡ್ರು ದೊಡ್ಡಸಿದ್ದಪ್ಪ (04.08.07) : ಹಿ. ತಾಲ್ಲೂಕಿನ ಮಾಯಸಂದ್ರದ ನಿವಾಸಿ, ವಯಸ್ಸು 70, ಇವರು ವಂಶಪಾರಂಪರ್ಯದಿಂದ ವೈದ್ಯ ಕಲಿತಿದ್ದಾರೆ. ನಾಯಕ ಜನಾಂಗಕ್ಕೆ ಸೇರಿದ ಇವರು ಸುಮಾರು 30 ವರ್ಷಗಳಿಂದ ಮನುಷ್ಯ ವೈದ್ಯ ಹಾಗೂ ಬೆಳೆ ವೈದ್ಯದಲ್ಲಿ ಅನುಭವವನ್ನು ಹೊಂದಿದ್ದಾರೆ.

185. ಸಿದ್ದರಾಮಪ್ಪ ಜಿ.ಎಸ್. ತಂದೆ ಶಿವಲಿಂಗಪ್ಪ (25.07.07) : ಹೊ. ತಾಲ್ಲೂಕಿನ ಶಿವಪುರದವರು. 76 ವರ್ಷ, ಲಿಂಗಾಯಿತ ಕುಲಕ್ಕೆ ಸೇರಿದ್ದಾರೆ. ಅನುಭವದಿಂದ ವೈದ್ಯ ಕಲಿತ ಇವರಿಗೆ ಸುಮಾರು 45 ವರ್ಷಗಳ ಅನುಭವವಿದೆ. ಇವರು ಪಶುವೈದ್ಯರು.

186. ಸಿದ್ದರಾಮಪ್ಪ ತಂದೆ ನಿಂಗಪ್ಪ (24.10.07) : ಗುಂಡುಸಮುದ್ರ ಗ್ರಾಮ ನಿವಾಸಿ. ಲಿಂಗಾಯಿತ ಕುಲಕ್ಕೆ ಸೇರಿದ ಇವರಿಗೆ 52 ವರ್ಷ. ಪಶು ವೈದ್ಯದಲ್ಲಿ ಸುಮಾರು 30 ವರ್ಷಗಳ ಅನುಭವವಿದೆ. ವಂಶಪಾರಂಪರ್ಯದಿಂದ ವೈದ್ಯ ಕಲಿತಿದ್ದಾರೆ.

187. ಸುಬಾನ್ ಎಂ. ತಂದೆ ಮಹಮ್ಮದ್ ಸಾಬ್ (03.08.07) : ಹಿ. ತಾಲ್ಲೂಕಿನ ಮುಸ್ಲಿಂ ಜನಾಂಗಕ್ಕೆ ಸೇರಿದ 34 ವರ್ಷದ ಇವರು, ಹಿರಿಯೂರು ತಾಲ್ಲೂಕಿನ ಹಳೆಎಳೆನಾಡು ಗ್ರಾಮದವರು. ವೃತ್ತಿ ವೈದ್ಯರು. ಸುಮಾರು 10 ವರ್ಷಗಳಿಂದ ಮನುಷ್ಯನ ಎಚ್‌ಐವಿಯೂ ಸೇರಿದಂತೆ ವಿವಿಧ ರೋಗಗಳಿಗೆ ವೈದ್ಯವನ್ನು ನೀಡುತ್ತಿದ್ದಾರೆ.

188. ಸುಧಾ ಗಂಡ ಲಕ್ಷ್ಮೀಕಾಂತ (04.08.07) : ಹಿ. ತಾಲ್ಲೂಕಿನ ಎ.ವಿ. ಕೊಟ್ಟಿಗೆ ಗ್ರಾಮದವರು, ವಯಸ್ಸು 36, ಕುಂಚಟಿಗ ಜನಾಂಗಕ್ಕೆ ಸೇರಿದ್ದಾರೆ. ಇವರು ವಂಶಪಾರಂಪರ್ಯವಾಗಿ ವೈದ್ಯವನ್ನು ಕಲಿತು ಕಾಮಾಲೆ ರೋಗಕ್ಕೆ ಚಿಕಿತ್ಸೆಯನ್ನು ಸುಮಾರು 15 ವರ್ಷಗಳಿಂದ ನೀಡುತ್ತಿದ್ದಾರೆ.

189. ಸೂರಯ್ಯ ತಂದೆ ಗಿಡ್ಡಪಾಲಯ್ಯ (01.06.07) : ಚ. ತಾಲ್ಲೂಕಿನ ಮಲ್ಲೇಬೋರನಹಟ್ಟಿ ಗ್ರಾಮದವರು. ವೃತ್ತಿ ಕೃಷಿ, ಜಾತಿ ನಾಯಕ(ಮ್ಯಾಸಬೇಡರು), ವಯಸ್ಸು 55. ವಿದ್ಯೆಯನ್ನು ವಂಶಪಾರಂಪರ್ಯವಾಗಿ ಕಲಿತ ಇವರು ದನಗಳ ಕಾಲುಬಾಯಿ, ಸೆಲೆ, ಮನುಷ್ಯರಿಗೆ ಮಣಿನೀರು ಮತ್ತು ಮಕ್ಕಳ ಹಿಡಿಕೆರೋಗ ಮೊದಲಾದವುಗಳಿಗೆ ವೈದ್ಯ ಮಾಡುತ್ತಾರೆ.

190. ಸೂರಯ್ಯ ಪೂಜಾರಿ ತಂದೆ ಪೂಜಾರಿ ಕಾಟಯ್ಯ (21.08.07) : ಚಿ. ತಾಲ್ಲೂಕಿನ ಬಚ್ಚ ಬೋರನ ಹಟ್ಟಿ ಗ್ರಾಮದವರು. ನಾಯಕ ಜನಾಂಗಕ್ಕೆ ಸೇರಿದ ಇವರಿಗೆ 60 ವರ್ಷ. ವಂಶಪಾರಂಪರ್ಯವಾಗಿ ಹಾಗೂ ತಾನು ಜೀತಕ್ಕಿದ್ದ ಮನೆಯವರಿಂದ ವೈದ್ಯವನ್ನು ಕಲಿತ್ತಿದ್ದಾರೆ. ಬೀಜಬಾತುಕೊಂಡಾಗ, ರಕ್ತಮೂಲವ್ಯಾದಿ, ಕಫ ಮುಂತಾದ ಮನುಷ್ಯ ಕಾಯಿಲೆಗಳಿಗೆ ಉಪಚರಿಸುತ್ತಾರೆ. ಸುಮಾರು 40 ವರ್ಷಗಳ ಅನುಭವವಿದೆ.

191. ಸೋಮಶೇಖರಪ್ಪ ತಂದೆ ದೊಣೆಕಲ್ ಸಿದ್ದಪ್ಪ (28.08.07) : ಮಲ್ಲಸಮುದ್ರ ಗ್ರಾಮದವರಾದ ಇವರು ಕುರುಬ ಜನಾಂಗಕ್ಕೆ ಸೇರಿದವರಾಗಿದ್ದಾರೆ. ಇವರಿಗೆ 45 ವರ್ಷ. ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರು ಕುರಿಗಳ ರೋಗಗಳಿಗೆ ಚಿಕಿತ್ಸೆ ನೀಡುತ್ತಾರೆ. ಸುಮಾರು 15 ವರ್ಷಗಳ ಅನುಭವವಿದೆ.

192. ಹನುಮಂತಪ್ಪ ತಂದೆ ಲಕ್ಕಪ್ಪ (27.07.07) : ಹೊಸದುರ್ಗ ತಾಲ್ಲೂಕಿನ ಯಾಲಕಪ್ಪನಹಟ್ಟಿ ಗ್ರಾಮದವರು. ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರಿಗೆ 63 ವರ್ಷ. ಉಪ್ಪಾರ ಜನಾಂಗಕ್ಕೆ ಸೇರಿದ

ಇವರಿಗೆ ಸುಮಾರು 45 ವರ್ಷಗಳ ವೈದ್ಯದ ಅನುಭವ ಇದೆ. ಇವರು ಹುಣ್ಣುಗಳನ್ನು ಗುಣಪಡಿಸುವಲ್ಲಿ ಪ್ರಸಿದ್ಧಿ.

193. ಹನುಮಂತರಾಯಪ್ಪ ತಂದೆ ಗೋಡೆ ಸಿದ್ದಪ್ಪ (08.11.08) : ಚ. ತಾಲ್ಲೂಕಿನ ಹರವಿಗೊಂಡನ ಹಳ್ಳಿಯವರು, ವಯಸ್ಸು 66, ಸ್ವ-ಅನುಭವದಿಂದ ವೈದ್ಯವನ್ನು ಕಲಿತ್ತಿದ್ದಾರೆ. ದಲಿತ ಜನಾಂಗಕ್ಕೆ ಸೇರಿದ ಇವರು ಪಶು ವೈದ್ಯರಾಗಿದ್ದಾರೆ.

194. ಹನುಮಂತಪ್ಪ ತಂದೆ ಸಣ್ಣಪ್ಪ (06.11.08) : ಚ. ತಾಲ್ಲೂಕಿನ ಜಾಜೂರು ಗ್ರಾಮದವರು. ವಯಸ್ಸು 78, ತಂದೆಯಿಂದ ವೈದ್ಯವನ್ನು ಕಲಿತ್ತಿದ್ದಾರೆ. ಸುಮಾರು 40 ವರ್ಷಗಳ ಅನುಭವವಿದೆ. ಹಾವಿನ ವಿಷಕ್ಕೆ ಔಷಧಿ ಕೊಡುವುದರಲ್ಲಿ ಪ್ರಸಿದ್ಧಿಯಾಗಿದ್ದಾರೆ.

195. ಹನುಮಪ್ಪ ತಂದೆ ತಿಮ್ಮಪ್ಪ (17.07.07) : ಹೊ. ತಾಲ್ಲೂಕಿನ ತಾಳಕಟ್ಟದ ನಿವಾಸಿ, ಸ್ವಂತ ಅನುಭವದಿಂದ ವೈದ್ಯಕಲಿತ ಇವರಿಗೆ 80 ವರ್ಷ. ಸುಮಾರು 50 ವರ್ಷಗಳ ವೈದ್ಯದ ಅನುಭವವುಳ್ಳ ಇವರು ನಾಯಕ ಜನಾಂಗದವರು. ಇಸುಬಿಗೆ ಹಾಗೂ ಬೇಧಿಗೆ ಚಿಕಿತ್ಸೆ ನೀಡುತ್ತಾರೆ.

196. ಹನುಮಂತಪ್ಪ ಜಂಗಲಿ ತಂದೆ ಜಂಗಲಿ ಗುರಪ್ಪ (22.08.07) : ಚಿ. ತಾಲ್ಲೂಕಿನ ದೊಡ್ಡ ಸಿದ್ದವ್ವನಹಳ್ಳಿಯವರು. ನಾಯಕ ಜನಾಂಗಕ್ಕೆ ಸೇರಿದ ಇವರಿಗೆ 56 ವರ್ಷ. ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರು ಕೋಡುಹಣ್ಣು, ತಂತಿ, ಮಳೆ, ಕೂದಲು ನುಂಗಿದಾಗ, ಕೋತಿರೋಗ ಮುಂತಾದ ಪಶುವೈದ್ಯದಲ್ಲಿ ಪರಿಣತಿ ಹೊಂದಿದ್ದಾರೆ. ಸುಮಾರು 30 ವರ್ಷಗಳ ಅನುಭವವಿದೆ. (ಈಗ ಶ್ರೀಯುತರು ದಿವಂಗತರಾಗಿದ್ದಾರೆ.)

197. ಹನುಮಂತಪ್ಪ ತಂದೆ ಹುಚ್ಚಪ್ಪ (05.08.07) : ಹಿರಿಯೂರು ತಾಲ್ಲೂಕಿನ ಮಾಯಸಂದ್ರ ಗ್ರಾಮದ ನಿವಾಸಿ. 50 ವರ್ಷಗಳ ಅನುಭವವಿರುವ ಇವರು ವಂಶಪಾರಂಪರ್ಯವಾಗಿ ವೈದ್ಯವನ್ನು ಕಲಿತ್ತಿದ್ದಾರೆ. ವಯಸ್ಸು 76, ನಾಯಕ ಜನಾಂಗದವರು. ಸಕ್ಕರೆ ಕಾಯಿಲೆ, ಮೂರ್ಛೆರೋಗ, ಬಾಣಂತಿಸನ್ನಿ, ಮೂಗಿನ ದುರ್ಮಾಂಸ ತೊನ್ನು, ಸಂತಾನ ನಿಯಂತ್ರಣ, ಮೂತ್ರಪಿಂಡ ದೌರ್ಬಲ್ಯ, ಗ್ಯಾಸ್ಟ್ರಿಕ್ – ಈ ಮೊದಲಾದವುಗಳಿಗೆ ವೈದ್ಯ ಬಲ್ಲ ಇವರು ಸುಮಾರು 45 ವಿವಿಧ ಕಾಯಿಲೆಗಳಿಗೆ ಔಷಧಿಯನ್ನು ಕೊಡುತ್ತಾರೆ.

198. ಹನುಮಂತಪ್ಪ ತಂದೆ ಚಿಕ್ಕ ಬೋರಪ್ಪ (30.07.07) : ಹೊಸದುರ್ಗ ತಾಲ್ಲೂಕಿನ ಹಾಗಲಕೆರೆ ಗ್ರಾಮದವರು. ಲಿಂಗಾಯಿತ ಕುಲಕ್ಕೆ ಸೇರಿದ ಇವರು ಇತರರಿಂದ ವೈದ್ಯ ಕಲಿತ್ತಿದ್ದಾರೆ. ಇವರಿಗೆ 60 ವರ್ಷ, ವಿಷ ವೈದ್ಯದಲ್ಲಿ ಪರಿಣಿತರಾದ ಇವರಿಗೆ ಸುಮಾರು 15 ವರ್ಷಗಳ ವೈದ್ಯದ ಅನುಭವವಿದೆ.

199. ಹಾಲು ರಾಮೇಶ್ವರ (ರಾಮಣ್ಣ) ತಂದೆ ಮಲ್ಲಿಕಾರ್ಜುನಪ್ಪ (29.06.07) : ಮೊ. ತಾಲ್ಲೂಕಿನ ಹಾನಗಲ್ ಗ್ರಾಮದವರು. ವಂಶಪಾರಂಪರ್ಯವಾಗಿ ವೈದ್ಯ ಕಲಿತ ಇವರಿಗೆ 45 ವರ್ಷ. ಜಾತಿಯಲ್ಲಿ ಲಿಂಗಾಯತರು, ಸುಮಾರು 30 ಮನುಷ್ಯರ ರೋಗಗಳಿಗೆ ಚಿಕಿತ್ಸೆ ನೀಡುವ ಪರಿಣತಿ ಹೊಂದಿದ್ದಾರೆ. ವೃತ್ತಿಯಲ್ಲಿ ಪೋಸ್ಟ್‌ಮಾಸ್ಟರ್ ಆದ ಇವರಿಗೆ ಸುಮಾರು 15 ವರ್ಷಗಳ ಅನುಭವವಿದೆ.

200. ಹುಚ್ಚು ಮಲ್ಲಯ್ಯ ತಂದೆ ಸರಾಪ್ಪಯ್ಯ (04.06.07) : ಚ. ತಾಲ್ಲೂಕಿನ ಕಾರ್ತಿಕೆನಹಟ್ಟಿ ಗ್ರಾಮದವರು. ವೃತ್ತಿ ಕೃಷಿ, ಜಾತಿ ನಾಯಕ, ವಯಸ್ಸು 40. ವಿದ್ಯೆಯನ್ನು ತಂದೆಯಿಂದ ಕಲಿತ ಇವರು ವಾಯು, ಬೊಬ್ಬೇಟು, ಋತುಸ್ರಾವ, ಹಿಡಿಕೆರೋಗ, ಪಶುಗಳ ರೋಗ ಮೊದಲಾದವುಗಳಿಗೆ ವೈದ್ಯಮಾಡುತ್ತಾರೆಯಲ್ಲದೆ ಮಂತ್ರವಿದ್ಯೆಯಲ್ಲೂ ಪರಿಣತರು.

201. ಹುಚ್ಚೀರಪ್ಪರ ರುದ್ರಪ್ಪ ತಂದೆ ವೀರಪ್ಪ : ಹೊ. ತಾಲ್ಲೂಕಿನ ತಾಳಕಟ್ಟದ ನಿವಾಸಿ. 60 ವರ್ಷದ ಇವರು ಲಿಂಗಾಯಿತ ಕುಲಕ್ಕೆ ಸೇರಿದವರು. ಇತರರಿಂದ ವೈದ್ಯಕಲಿತ ಇವರು, ಹಾವಿನ ವೈದ್ಯದಲ್ಲಿ ಪರಿಣತರಾಗಿದ್ದಾರೆ. ಸುಮಾರು 15 ವರ್ಷಗಳ ಅನುಭವವಿದೆ.

202. ಹುಚ್ಚಣ್ಣ ತಂದೆ ಸಿದ್ದಪ್ಪ (03.08.07) : ಹಿ. ತಾಲ್ಲೂಕಿನ ಕರಿಚಿಕ್ಕಯ್ಯನರೊಪ್ಪದವರು. ವಯಸ್ಸು 55, ನಾಯಕ ಜನಾಂಗದವರು, ಇತರರಿಂದ ವೈದ್ಯವನ್ನು ಕಲಿತಿರುತ್ತಾರೆ. ಗಜಕರ್ಣ, ಕುರು, ಹಾವಿನ ವಿಷಕ್ಕೆ ವೈದ್ಯವನ್ನು ತಿಳಿದಿದ್ದಾರೆ.

203. ಗೋವಿಂದಪ್ಪ ಟಿ. ತಂದೆ ರಂಗಪ್ಪ (12.11.08) : ಹೊ. ತಾಲ್ಲೂಕಿನ ಮೇಗಳಕೊಟ್ಟಿಗೆ ಗ್ರಾಮದವರು. ವೃತ್ತಿ ಕೃಷಿ, ವಯಸ್ಸು 52, ಲಿಂಗಾಯಿತ ಜನಾಂಗ, ತಂದೆಯಿಂದ ವಿದ್ಯೆಯನ್ನು ಕಲಿತಿರುತ್ತಾರೆ. ನರ ಉಳುಕು ಸರಿಪಡಿಸುವುದರಲ್ಲಿ ಮತ್ತು ಮೂಲವ್ಯಾಧಿಯನ್ನು ಗುಣಪಡಿಸುವುದರಲ್ಲಿ ಹೆಸರುವಾಸಿಯಾಗಿದ್ದಾರೆ.

204. ತಿಮ್ಮಪ್ಪ ಕೆ. ಆರ್. ತಂದೆ ರಂಗಪ್ಪ (12.11.08) : ಹೊ. ತಾಲ್ಲೂಕಿನ ಮೇಗಳಕೊಟ್ಟಿಗೆ ಗ್ರಾಮದವರು. ವೃತ್ತಿ ಕೃಷಿ, ವಯಸ್ಸು 60, ಲಿಂಗಾಯಿತ ಜನಾಂಗ, ತಂದೆಯವರ ಒತ್ತಾಯದಿಂದ ವಿದ್ಯೆಕಲಿತ ಇವರು ಪಶುವೈದ್ಯರು.

205. ರಾಜಪ್ಪ ಇ. ತಂದೆ ಉಜ್ಜಿನಪ್ಪ (12.11.08) : ಹೊ. ತಾಲ್ಲೂಕಿನ ಮೇಗಳಕೊಟ್ಟಿಗೆ ಗ್ರಾಮದವರು. ವೃತ್ತಿಕೃಷಿ, ವಯಸ್ಸು 55, ತರೀಕೆರೆ ಅಜ್ಜನಿಂದ ವಿದ್ಯೆಯನ್ನು ಕಲಿತಿರುತ್ತಾರೆ. ದನಗಳ ಮುಳುಬಿಡುವ ತೊಂದರೆಯನ್ನು ಗುಣಪಡಿಸುವಲ್ಲಿ ಪ್ರಸಿದ್ಧರು.

* * *

ಜನಪದ ವೈದ್ಯರ ಭಾವಚಿತ್ರಗಳು



< ಸುಣ್ಣಗಾರ ಶಾಮಣ್ಣ, ರಾಮಗಿರಿ.



ಬಸವರಾಜು ಆರ್.ಬಿ, ಗುಂತುಕೊಲಮ್ಮನಹಳ್ಳಿ. →



← ಚಲುಮಪ್ಪ, ಹರವಿಗೊಂಡನಹಳ್ಳಿ.



ಗಿಡ್ಡಪ್ಪ, ಕುಂದೂರು ಗೊಲ್ಲರಹಟ್ಟಿ. →



← ಗೋವಿಂದಪ್ಪ, ಮೇಗಳ ಕೊಟ್ಟಿಗೆ.



← ಹನುಮಂತಪ್ಪ, ಜಾಜೂರು.



ಮ್ಯಾಸರ ಮಲ್ಲಯ್ಯ, ಗುಂತುಕೊಲಮ್ಮನಹಳ್ಳಿ.→



← ಗೌರಕ್ಕರ ಈಶ್ವರಜ್ಜ, ಶಿವಪುರ.



ತಿಪ್ಪಜ್ಜಿ, ಚನ್ನಮ್ಮನಾಗತಿಹಳ್ಳಿ.→



←ಉಮೇಶ್, ಹರವಿಗೊಂಡನಹಳ್ಳಿ.



< ಚಂದ್ರಣ್ಣ ಮತ್ತು ಬಂಗಾರಪ್ಪ,
ಯರಪೋತ ಜೋಗಿಹಳಿ



ವೀರಣ್ಣ, ಸಾಸಲಹಟ್ಟಿ. →



< ರಾಜಪ್ಪ, ಹನುಮಲಿ.



ಸೂರಯ್ಯ, ಮಲ್ಲೇಬೋರನಹಟ್ಟಿ.→

ಅನುಬಂಧ – 3

ಪ್ರಶ್ನಾವಳಿ

ಕ್ಷೇತ್ರಕಾರ್ಯದ ಪೂರ್ವಸಿದ್ಧತೆಗಳಲ್ಲಿ ಪ್ರಶ್ನಾವಳಿ ತಯಾರಿಸಿಕೊಳ್ಳುವುದೂ ಪ್ರಮುಖ ಅಂಶವಾಗಿದೆ. ಇದರಿಂದ ಉದ್ದೇಶಿತ ವಿಷಯವನ್ನು ಸಂಗ್ರಹಿಸಲು ಅನುಕೂಲವಾಗುತ್ತದೆ. ಆದರೆ ಇದೇ ಅಂತಿಮವಲ್ಲ ಸಂದರ್ಭೋಚಿತವಾಗಿ ಪ್ರಶ್ನಾವಳಿಗಳಲ್ಲಿ ಬದಲಾವಣೆ ಆಗುತ್ತದೆ. ವಕ್ತೃಗಳ ಮನಸ್ಥಿತಿಯನ್ನು ಮತ್ತು ಸಂದರ್ಶನದ ವಾತಾವರಣವನ್ನು ಗಮನದಲ್ಲಿಟ್ಟುಕೊಂಡು ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ. ಪರಿಚಯದ ಹಂತದಲ್ಲಿ ಮಾಡುವ ಸಹಜ ಸಂಭಾಷಣೆಯೇ ಮಾಹಿತಿ ಕೇಳುವಾಗಲೂ ಮುಂದುವರಿಯಬೇಕು. ವಕ್ತೃವಿಗೆ ತನ್ನನ್ನು ಪ್ರಶ್ನಿಸಲಾಗುತ್ತಿದೆ ಎಂಬ ಭಾವನೆ ಬರದ ರೀತಿಯಲ್ಲಿ ವಿಷಯವನ್ನು ಹೊರಗೆಳೆಯಬೇಕು. ಹೀಗೆ ಜಾಣ್ಮೆಯನ್ನು ತೋರಬೇಕಾದಲ್ಲಿ ವಿಷಯದ ಪೂರ್ವಾಪರಗಳನ್ನು ಚೆನ್ನಾಗಿ ಅರಿತಿರಬೇಕು.

ನನ್ನ ಕ್ಷೇತ್ರಕಾರ್ಯದಲ್ಲಿ ವಕ್ತೃ ಉದಾರ ಮನಸ್ಸಿನವನಾಗಿದ್ದು ಮಾಹಿತಿ ಸುಲಭವಾಗಿ ಪಡೆಯಬಹುದೆಂದು ಗೊತ್ತಾದಾಗ ವಿಷಯದ ಆಳ ಅಗಲಗಳನ್ನು ತಿಳಿಯಲು ಸಹಾಯಕವಾಗುವಂತಹ ಪ್ರಶ್ನೆಗಳನ್ನು ಕೇಳಿಬಿಡುತ್ತಿದ್ದೆ. ಆದರೆ ಪ್ರಶ್ನೆಕೇಳುವ ರೀತಿ ಮಾತ್ರ ಅವರ ಮಾತುಗಾರಿಕೆಯ ಕಲೆಯನ್ನು ಅವಲಂಬಿಸಿರುತ್ತದೆ. ಮಾಹಿತಿಯನ್ನು ಕೊಡಲು ಹಿಂಜರಿಯುವ ವಕ್ತೃವಿಗೆ ಹೆಚ್ಚಿನ ಪ್ರಶ್ನೆಗಳನ್ನು ಕೇಳುತ್ತಿರಲಿಲ್ಲ. ಬದಲಿಗೆ ಅವರಿಗೆ ಆಸಕ್ತಿ ಇರುವ ವಿಷಯವನ್ನು ಗ್ರಹಿಸಿ ಆ ಕುರಿತು ನಾಲ್ಕು ಮಾತಾಡುತ್ತಿದ್ದೆ. ಇಂಥ ಸಂದರ್ಭದಲ್ಲಿ ವಕ್ತೃಗಳು ಮೈಮರೆತೋ, ಮನಸ್ಸು ಮುಕ್ತವಾಗಿಯೋ, ಇಲ್ಲವೆ ಉತ್ಸಾಹದಿಂದಲೋ ನಾವು ಬಯಸುವ ಮಾಹಿತಿಯನ್ನು ಸಂಪೂರ್ಣವಾಗಿ ಹೇಳಿಬಿಡುವುದು ಉಂಟು. ಮಾಹಿತಿ ಪಡೆಯುವ ಉಪಾಯಗಳಲ್ಲಿ ಇದೂ ಒಂದು.


ಮಾಹಿತಿ ಹೇಳುವುದಿಲ್ಲ ಎಂದು ಹೆರಳೆಣ್ಣೆ ಕುಡಿದವರಂತೆ ಮುಖ ಮಾಡಿಕೊಳ್ಳುವವರಿಂದ ಮಾಹಿತಿ ಪಡೆಯುವುದು ಬಹಳ ಶ್ರಮದಾಯಕ ಕೆಲಸ. ಕೆಲವರು ನಗುತ್ತಲೆ ಮಾಹಿತಿ ಹೇಳುವುದಿಲ್ಲ ಎನ್ನುತ್ತಾರೆ. ಇಂಥವರ ಮನಸ್ಸನ್ನು ಆ ಕ್ಷಣದಲ್ಲಿಯೇ ಗೆಲ್ಲಲ್ಲು ಸಾಧ್ಯವಿದೆ. ಇವರ ಜೊತೆ ವಾಗ್ವಾದಕ್ಕಿಳಿದರೂ ತಪ್ಪಲ್ಲ, ಮುನಿಸಿಕೊಳ್ಳದ, ಕೋಪಿಸಿಕೊಳ್ಳದ ಇವರು ಕೊನೆಯಲ್ಲಿ ಸ್ವಲ್ಪಮಟ್ಟಿನ ಮಾಹಿತಿಯನ್ನಾದರೂ ಕೊಡುತ್ತಾರೆಂಬ ವಿಶ್ವಾಸವನ್ನು ಹೊಂದಬಹುದಾಗಿದೆ.

ಕ್ಷೇತ್ರಕಾರ್ಯಕರ್ತರ ವ್ಯಕ್ತಿತ್ವ ಮಾಹಿತಿಯ ಸಂಗ್ರಹದಲ್ಲಿ ಬಹಳ ಮುಖ್ಯವಾಗುತ್ತದೆ. ನಮ್ಮ ಸರಳವಾದ ವ್ಯಕ್ತಿತ್ವ, ಮುಗ್ದತೆ ಮಾಹಿತಿ ಪಡೆಯುವ ಉದ್ದೇಶವನ್ನು ನೈಜವಾಗಿ ವಿವರಿಸುವ ರೀತಿ ಸಂದರ್ಶನ ಯಶಸ್ವಿಯಾಗುವಲ್ಲಿ ಮುಖ್ಯಪಾತ್ರವನ್ನು ವಹಿಸುತ್ತದೆ. ಇದಕ್ಕಾಗಿ ನಾವು ಪ್ರಮಾಣೀಕತೆಗೆ ಬದ್ದರಾಗಿರಬೇಕಾಗುತ್ತದೆ. ಹೇಗೋ ಮಾಹಿತಿಯನ್ನು ಪಡೆದರಾಯಿತು ಎಂಬ ನಿಲುವಿಗೆ ಬರುವುದು ಕ್ಷೇತ್ರಕಾರ್ಯಕರ್ತನ ಒಳ್ಳೆಯ ಲಕ್ಷಣವಲ್ಲ.

ಈ ತರದ ಸಂಗತಿಗಳನ್ನು ಗಮನದಲ್ಲಿ ಇಟ್ಟುಕೊಂಡು ಕ್ಷೇತ್ರಕಾರ್ಯದಲ್ಲಿ ತೊಡಗಬೇಕಾಗುತ್ತದೆ. ಸಂಭಾಷಣೆಯಲ್ಲಿ ಸಾಕಷ್ಟು ಎಚ್ಚರಿಕೆಯನ್ನು ವಹಿಸಿ ವಿಷಯಾಧಾರಿತ ಪ್ರಶ್ನೆಗಳ ದೊಡ್ಡ ಪಟ್ಟಿಯನ್ನು ಹೊಂದಿದ್ದರೂ ಅವುಗಳನ್ನು ಕ್ಷೇತ್ರಕಾರ್ಯಕ್ಕೆ ಸರಿಕಾಣುವ ರೀತಿಯಲ್ಲಿ ಮಾರ್ಪಡಿಸಿಕೊಂಡು ಸಂವಹನವನ್ನು ಮಾಡಬೇಕಾಗುತ್ತದೆ.

ಉದಾಹರಣೆಗೆ, ನಿಮ್ಮ ವೈದ್ಯಕ್ಕೆ ಬೇಕಾಗುವ ಗಿಡಮೂಲಿಕೆಗಳೆಲ್ಲಾ ನಿಮ್ಮ ಸಮೀಪದ ಹೊಲ, ಗದ್ದೆ, ಕಾಡುಗಳಲ್ಲಿ ದೊರೆಯುತ್ತವೆಯೇ, ರೋಗದ ಲಕ್ಷಣಗಳನ್ನು ಹೇಗೆ ಗುರುತಿಸುತ್ತೀರಿ, ನಿಮ್ಮ ಊರಿನಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವ ರೋಗಗಳಾವುವು, ಗಿಡಗಳನ್ನು ಹೇಗೆ ಸಂಗ್ರಹ ಮಾಡುವಿರಿ, ಔಷಧಿಗೆ ಹಸಿಗಿಡಗಳನ್ನು ಬಳಸುವಿರೋ ಅಥವಾ ಒಣಗಿಡಗಳನ್ನೋ, ಹಿರಿಯರಿಂದ ವಿದ್ಯೆಯನ್ನು ಹೇಗೆ ಕಲಿತಿರಿ, ಗಿಡಗಳ ಪರಿಚಯವನ್ನು ಹೇಗೆ ಮಾಡಿಕೊಂಡಿರಿ, ನೀವೊಬ್ಬ ವೈದ್ಯರೆಂಬುದು ನಿಮ್ಮ ಊರಿನಲ್ಲಿ ತಿಳಿದಿದೆಯೇ, ನೀವು ಮಾಡುವ ವೈದ್ಯಕ್ಕೆ ಮನೆಯವರ ಸಹಕಾರವಿದೆಯೇ ಮಕ್ಕಳಿಗೆ ಬರುವ ರೋಗಗಳ ಯಾವುವು, ಅವುಗಳಿಗೆ ಔಷಧವೇನು, ಮಕ್ಕಳ ತೊದಲುವಿಕೆಯ ಸಮಸ್ಯೆ ನಿಮ್ಮೂರಿನಲ್ಲಿ ಇದೆಯೇ, ಮಕ್ಕಳ ಬುದ್ಧಿಚುರುಕಾಗಲು ಏನು ಮಾಡುವಿರಿ, ಮಕ್ಕಳ ಜ್ವರಕ್ಕೆ ಯಂತ್ರ ಕಟ್ಟುವುದು ಒಳ್ಳೆಯದೋ ಅಥವಾ ಗಿಡಮೂಲಿಕೆಯ ಔಷಧಿ ಕೊಡುವುದು ಒಳ್ಳೆಯದೋ, ನೀವು ವೈದ್ಯರು ನಿಮ್ಮಿಂದ ಜನರಿಗೆ ಉಪಕಾರವಾಗುತ್ತಿದೆ... ಹೀಗೆ ಪ್ರಶ್ನೆಗಳನ್ನು ಸಂಭಾಷಣೆಯ ಮೂಲಕ ಎಳೆದು ತರುವುದು ಮಾಹಿತಿಯನ್ನು ಪಡೆಯುವಲ್ಲಿ ಸಹಕಾರಿಯಾಗುತ್ತದೆ.

ಚಿಕಿತ್ಸಾ ವಿವರಣೆಯ "ಪ್ರಮಾಣ ಪತ್ರ"



ರೋಗಿಯ ವಿಳಾಸ : ಎಂ. ಭದ್ರಪ್ಪ
s/o ಗೌಡ್ರು ಮರಿಯಪ್ಪ
ತಾಳಕಟ್ಟ, ಹೊಳಲ್ಕೆರೆ ತಾ.
ಚಿತ್ರದುರ್ಗ ಜಿ.

ವಯಸ್ಸು : ೩೮ ಜಾತಿ : ಲಿಂಗಾಯಿತ

ವೃತ್ತಿ : ಕೃಷಿ

ರೋಗಿಯ ಭಾವಚಿತ್ರ



ವೈದ್ಯರ ಭಾವಚಿತ್ರ

ರೋಗದ ಹೆಸರು : [illegible]

ನಾನು ....[illegible]...... ರೋಗದಿಂದ ..೨೫... ದಿನಗಳ / ತಿಂಗಳುಗಳ / ವರ್ಷಗಳಕಾಲ ತೊಂದರೆಯನ್ನು ಅನುಭವಿಸುತ್ತಿದ್ದು ..ತಾಳಕಟ್ಟ........ ಗ್ರಾಮದ ಶ್ರೀ. [illegible]ಪ್ಪ ಎಂಬ ನಾಟ ವೈದ್ಯರಿಂದ ......೧೭...... ದಿನ/ ತಿಂಗಳುಗಳ ಕಾಲ ಈ ಕೆಳಗಿನ ಕೋಷ್ಟಕದಲ್ಲಿರುವ ಔಷಧವನ್ನು ತೆಗೆದುಕೊಂಡಿದ್ದರಿಂದ ನನ್ನ ಖಾಯಿಲೆ ಸಂಪೂರ್ಣ/ ಭಾಗಶಃ/ ಗುಣವಾಗಲಿಲ್ಲ/ ಗುಣವಾಗಿರುತ್ತದೆ. ವೈದ್ಯರ ಸೂಚನೆಯಂತೆ ಆಹಾರದಲ್ಲಿ ಪಥ್ಯವನ್ನು ಸಂಪೂರ್ಣವಾಗಿ / ಭಾಗಶಃ/ ಅನುಸರಿಸಲಾಗಿತ್ತು/ ಅನುಸರಿಸಲಿಲ್ಲ. ಈ ಮೇಲಿನ ಸಂಗತಿ ಸತ್ಯವಾದುದೆಂದು ಈ ಮೂಲಕ ದೃಢೀಕರಿಸುತ್ತೇನೆ.

ಔಷಧಿ ವಸ್ತುಗಳ ಸ್ಥಳೀಯ ಹೆಸರುಗಳು	ಔಷಧಿ ತಯಾರಿಸುವ ಕ್ರಮ	ಉಪಯೋಗಿಸುವ ಕ್ರಮ	ಸೂಚನೆ / ಎಚ್ಚರಿಕೆ
ಕಾಡು ಬೋಗಾಡಿನ ಸೊಪ್ಪು, ಮಾದಿರ ಮೆಂತೆ ಸೊಪ್ಪಿನ ಸೊಪ್ಪು, ಬೇಲಿ ಕಳೆ ಬೇರು, ಲವಂಗ, ಏಲಕ್ಕಿ, ಮೆಣಸು, ಬೆಳ್ಳುಳ್ಳಿ, ನಿಂಬೆಹಣ್ಣಿನ ರಸ	ಎಲ್ಲವನ್ನು ಅರೆದು ನಿಂಬೆ ಹಣ್ಣಿನ ರಸದಲ್ಲಿ ಹುಣ್ಣಿಗೆ ಹಚ್ಚುವುದು.	ಗಾಯದ ಮೇಲೆ ಬಟ್ಟೆ ಅದರ ಸುತ್ತ ಹಾಕ್ಕು ಗಾಯ ಒಣಗದಂತೆ ಒಂದು ವಾರ ಹಾಕಬೇಕು.	ಸಾಕು


ಔಷಧ ನೀಡಿದ ವೈದ್ಯರ ಸಹಿ ಗ್ರಾಮಸ್ಥರ ಸಹಿ ಸಂಶೋಧನಾ ವಿದ್ಯಾರ್ಥಿ ಸಹಿ

T R [illegible] [illegible] ಮು. ಹಾಲಪ್ಪ

ಔಷಧ ಪಡೆದವರ ಸಹಿ ಮಾರ್ಗದರ್ಶಕರ ಸಹಿ

Bhadrappa M.

ಚಿತ್ರದುರ್ಗ ಜಿಲ್ಲೆಯ ನಕ್ಷೆ



ತಾಲ್ಲೂಕುವಾರು ಸಂದರ್ಶಿಸಿದ ವೈದ್ಯರ ಸಂಖ್ಯೆ

ಚಳ್ಳಕೆರೆ : 63

ಮೊಳಕಾಲ್ಮೂರು : 27

ಚಿತ್ರದುರ್ಗ : 28

ಹೊಳಲ್ಕೆರೆ : 36

ಹೊಸದುರ್ಗ : 26

ಹಿರಿಯೂರು :25

ಕಠಿಣ ಪದಕೋಶ

1. **ಪಥ್ಯ :** ಸೂಚಿಸಿದ ಆಹಾರವನ್ನು ಮಾತ್ರಸೇವಿಸುವುದು.
2. **ಅಪಥ್ಯ :** ನಿರ್ದಿಷ್ಟ ಅವಧಿಯವರೆಗೆ ಸೇವಿಸಬಾರದ್ದು.
3. **ಹಾಸಿಗೆ ಪಥ್ಯ :** ಸಂಭೋಗ ಕ್ರಿಯೆಯಲ್ಲಿ ತೊಡಗುವಂತಿಲ್ಲ ಎಂಬ ಸೂಚನೆ.
4. **ಪುಟ (ಪೊಂಗು) :** ದ್ರವರೂಪದ ಔಷಧಿಗೆ ಕಬ್ಬಿಣದ ಸರಳವನ್ನು ಕಾಯಿಸಿ ಇಡುವುದು. ಇದಕ್ಕೆ ಪೊಂಗು ಮಾಡುವದೆಂದೂ ಕರೆಯುತ್ತಾರೆ.
5. **ಸೆಲ್ದಿಪದಾರ್ಥ :** ಕರಿದ ಪದಾರ್ಥಗಳು ಹಾಗೂ ಹಸಿರು ತರಕಾರಿಗಳಿಗೆ ಸೆಲ್ದಿ ಪದಾರ್ಥ ಎಂದು ಕರೆಯುತ್ತಾರೆ.
6. **ಬೇಳೆ ಉದುಕ :** ಬೇಳೆಯನ್ನು ಕುದಿಸಿದ ನೀರು. ಇದಕ್ಕೆ ಒಣಮೆಣಸಿನ ಕಾಯಿ ಮತ್ತು ಬೆಳ್ಳುಳ್ಳಿ ಸ್ವಲ್ಪ ಉಪ್ಪನ್ನು ಸೇರಿಸಿಕೊಂಡು ಪಥ್ಯದಲ್ಲಿ ಊಟಮಾಡುವಂತಹುದು.
7. **ಹಚ್ಚರಾಗಿ ಮುದ್ದೆ :** ಬೀಸುವ ಕಲ್ಲಿನಿಂದ ಬಂದ ರಾಗಿ ಹಿಟ್ಟಿ ನಿಂದ ತಯಾರಿಸಿದ ಮುದ್ದೆ.
8. **ಗಲ್ಲೆ ನೀರು :** ತಂಗಟೆ ಗಿಡದ ತೊಗಟೆಯನ್ನು ನೆನಸಿ ಚರ್ಮಹದಮಾಡಲು ಬಳಸುವ ನೀರು.
9. **ಸರುಗ :** ದೇವರಿಗೆ ನೈವೇದ್ಯ ಮಾಡಿರುವ ಅನ್ನವನ್ನು ನೀರಲ್ಲಿ ಕಲಸಿ ಹೊಲದ ಪೈರುಗಳಿಗೆ ಚಲ್ಲುವುದು.
10. **ಕಲಬತ್ತು :** ದೋಣಿಯಾಕಾರದ ಕಲ್ಲು ಮತ್ತು ಅದರಲ್ಲಿ ಅರೆಯಲು ಬಳಸುವ ಗುಂಡುಕಲ್ಲು.
11. **ಮುಳುಬಿಡುವುದು :** ದನದ ಯಾವುದೇ ಕಾಲಿನ ತೊಡೆಯ ಹತ್ತಿರದ ನರ ತಪ್ಪಿರುತ್ತದೆ ಅಥವಾ ಉಳುಕಿರತ್ತದೆ. ಉಳುಕಿರುವ ಭಾಗದಲ್ಲಿ ಕುಳಿಬಿದ್ದಿರುತ್ತದೆ.
12. **ಕೋರು(ರಿ) ಹುಡುಗ :** ಮದೆಯಾಗದ 15 ರಿಂದ 20 ವರ್ಷದೊಳಗಿನ ಯುವಕ.

ಔಷಧಿಗೆ ಬಳಸುವ ಪ್ರಾಣಿಗಳು

1. ಅಳಿಲು ರಕ್ತ – ಮಕ್ಕಳ ಫಿಟ್ಸ್‌ಗೆ (1).
2. ದನಗಳ ದೊಮ್ಮೆ – ಗಾಯಕ್ಕೆ ಕಟ್ಟುವುದು ಹುಳುಬರಲು (117).
3. ಹಂದಿ ತುಪ್ಪ – ಹೆಗಲಬಾವು (73).
4. ಕುಂದಲಿ ಚರ್ಮ – ಹೆಗಲ ಕಣ್ಣು (41).
5. ಕತ್ತೆಯ ಲದ್ದಿ – ದನಗಳು ವಿಷ ತಿಂದಾಗ (45).
6. ಗೋಮೂತ್ರ – ಕೆಮ್ಮು (118).
7. ಕೋಣನ ಸಗಣಿ – ದನಮೇವು ತಿನ್ನಲು (186).
8. ಕುರಿಹೊಟ್ಟೆಯೊಳಗಿನ ಈರಿ – ಸಂಜೆಗಣ್ಣಿಗೆ (87).
9. ಮೇಕೆ ಹೊಟ್ಟೆಯೊಳಗಿನ ವಿಷದ ಗಂಟು – ಮಕ್ಕಳ ಕಿವಿಸೋರುವುದಕ್ಕೆ (91).

ಔಷಧಿಗೆ ಬಳಸುವ ಇತರೆ ವಸ್ತುಗಳು

1. ಸೌಳುಮಣ್ಣು – ಮುಟ್ಟಿನ ವೇಳಿನ ಹೊಟ್ಟೆನೋವಿಗೆ (24).
2. ಬಿಳಿಪೇಪರ್ – ದುಟ್ಟುಬೆಲ್ಲದೊಂದಿಗೆ ಚೇಳು ಮೊಂಡರ (1).
3. ಜಾಜು (ಕವಿಕಲ್ಲು) – ಸರ್ಪಸುತ್ತು (59).

ಔಷಧಿಗೆ ಬಳಸುವ ಪಕ್ಷಿಗಳು

1. ಬೆನ್ನುಮೇಲೆ ಕೆಂಪಗಿರುವ ಪಕ್ಷಿ – ಕೆಂಪುಕರೆಗೆ (175).
2. ಅಡವಿ ಪಾರವಾಳದರಕ್ತ – ಲಕ್ವಾ (117).
3. ಗರುಡ ಪಕ್ಷಿಗರಿ – ಕೋಡುಹುಣ್ಣು (41).
4. ನವಿಲಿನ ಗುಂಡಿಗೆ – ಹಾವಿನ ವಿಷಕ್ಕೆ (70).
5. ಹುಂಜದ ಜುಟ್ಟು – ದನಗಳ ಕಣ್ಣು ಬೆಳ್ಳಗಾದರೆ (45).
6. ನವಿಲುಗರಿ – ಬಿಕ್ಕಳಕೆಗೆ (130).

ಔಷಧಿಗೆ ಬಳಸುವ ಕೀಟಗಳು

1. ತೊಣಚೆ – ನಿಧಾನ ಹೆರಿಗೆಗೆ (175).
2. ಸತ್ತಎತ್ತಿನ ಕೊಂಬಿನಲ್ಲಿ ಗೂಡುಕಟ್ಟಿದ ಹುಳು – ಮೂಲವ್ಯಾಧಿಗೆ (175).
3. ಗಾಣದ ಹುಳು – ಎದೆಹಾಲಿಗೆ (179).
4. ಕುಂಭಾರಹುಳು –ಎದೆಹಾಲಿಗೆ (ಚಳ್ಳಕೆರೆ–5), ಮಕ್ಕಳಫಲ (158).
5. ಕರೆಬಸವಣ್ಣ – ಧನುರ್ವಾಯು (24).
6. ನಾಗರಹಾವಿನ ಪೊರೆ – ಗಳಲಬಾವು (41).
7. ತಗಣಿ –ಹುಚ್ಚಿಗೆ (140), ಲಕ್ವಾ (ಚಿತ್ರದುರ್ಗ–19), ಹಿಡಿಕೆರೋಗ (199).
8. ಏಡಿ ಕಷಾಯ – ಒಳಜ್ವರಕ್ಕೆ (164).
9. ಇಲಿಪಿಚ್ಚಿಗೆ – ಮಕ್ಕಳ ಹೊಟ್ಟೆನೋವಿಗೆ (91).
10. ಮನೆಯಲ್ಲಿ ಗೂಡುಕಟ್ಟುವ ಕಣಜ/ಕಡಜೀರಿಗೆ ಮಣ್ಣು – ಮಕ್ಕಳ ಭೇದಿಯಾಗಲು (158).

* * *

ಅನುಬಂಧ - 4

ಪರಾಮರ್ಶನ ಗ್ರಂಥಗಳು

1. ವಿವಿಧ ಲೇಖಕರು, 2006. 'ಅಸ್ತ್ರ', 'ಗ್ರಾಮೀಣ ಸಸ್ಯಸಿರಿ', ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು

2. ಆನಂದರಾಮ ಮಡಿ ಎಸ್, 1988. 'ಸಸ್ಯಗಳ ಪರಿಸರ ವಿಜ್ಞಾನ', ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

3. ಅನಂತರಾಮನ್ ಎನ್, 2002. 'ಆಯುರ್ವೇದ ಚಿಕಿತ್ಸಾ ಮಾರ್ಗದರ್ಶಿ', ಸಾಹಿತ್ಯ ಸಿಂಧು ಪ್ರಕಾಶನ, ಬೆಂಗಳೂರು.

4. ಅಶೋಕ ಪೈ ಕೆ.ಎ., 2002. 'ಮನೋಲೋಕ', ಪುರೋಗಾಮಿ, ಬೆಂಗಳೂರು.

5. ಅನಂತರಾಮನ್ ಎನ್, 2002. 'ಆಯುರ್ವೇದೀಯ ಆಹಾರ ಕ್ರಮ', ಸಾಹಿತ್ಯಸಿಂಧು ಪ್ರಕಾಶನ, ಬೆಂಗಳೂರು.

6. ಅಂಬಳಿಕೆ ಹಿರಿಯಣ್ಣ, 1994. 'ಜಾನಪದ : ಕೆಲವು ಅಧ್ಯಯನಗಳು', ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

7. ಅರವಿಂದ ಮಾಲಗತ್ತಿ (ಸಂ), 1998. 'ಜಾನಪದ ಸೈದ್ಧಾಂತಿಕ ಪ್ರಜ್ಞೆ ಮತ್ತು ದೇಶೀವಾದ', ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

8. ಅಮರೇಶ ನುಗಡೋಣಿ (ಸಂ), 2008, 'ಕನ್ನಡ ಸಂಶೋದನೆಯ ವೈಧಾನಿಕತೆಗಳು' ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

9. ಈಶ್ವರಲಾಲ್ ಬಿ.ಸೇಡಂಕರ್, 2000. 'ಸಸ್ಯಲೋಕ' (ವೈಜ್ಞಾನಿಕ ಲೇಖನಗಳು), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

10. ಕರವೀರಪ್ರಭು ಕ್ಯಾಲಕೊಂಡ, 2004. 'ಸಾಂಕ್ರಾಮಿಕ ರೋಗಗಳು', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

11. 'ಕನ್ನಡ ಶೈಲಿ ಕೈಪಿಡಿ', 2006. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

12. ಕೃಷ್ಣಯಜುರ್ವೇದಿ, 2001. 'ಜನಪದವೈದ್ಯ', ಜನಪದ ಪ್ರಕಾಶನ, ಬೆಂಗಳೂರು.

13. ಕೃಷ್ಣಸ್ವಾಮಿ ಅಜ್ಜಂಪುರ, 1993. 'ವನಸಿರಿ', ಸ್ವರ್ಣಾಂಬ ಪಬ್ಲಿಕೇಷನ್ಸ್, ಬೆಂಗಳೂರು.

14. ಕಿದಿಯೂರು ಗುರುರಾಜ ಭಾಗವತ, 2002. 'ಆಯುರ್ವೇದ ದ್ರವ್ಯಗುಣ ಸಾರ ಸಂಗ್ರಹ,' ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

15. ಕಾಳೇಗೌಡ ನಾಗವಾರ ಮತ್ತು ಅಂಬಳಿಕೆ ಹಿರಿಯಣ್ಣ(ಸಂ), 2000. 'ಜೀಶಂಪ-ಅವರ ಜಾನಪದ ಬರಹಗಳು', ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಬೆಂಗಳೂರು.

16. ಕಲ್ಪನಾ ಅರುಣ್, 2005. 'ಗೃಹ ಸಂಜೀವಿನಿ' ನವಭಾರತ ಪ್ರಕಾಶನ, ಬೆಂಗಳೂರು.

17. ಕಪನೀತಯ್ಯ ಎನ್. 1999. 'ಜಲಚಿಕಿತ್ಸೆ', ಪೂಜಾ ಪುಸ್ತಕ ಭಂಡಾರ, ಬೆಂಗಳೂರು.

18. ಕೃಷ್ಣಶಾಸ್ತ್ರೀ ಬೆಳಗೆರೆ, 2007. 'ಯೋಗ್ದಾಗೆಲ್ಲಾ ಐತೆ', ಅಭಿನವ, ವಿಜಯನಗರ, ಬೆಂಗಳೂರು.

19. ಕರ್ನಾಟಕ ರಾಜ್ಯಕೋಶ-01, ಸಸ್ಯ ಸಂಪುಟ, 2001. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

20. ಗೀತಾಚಾರ್ಯ ನಾ, 1999. 'ಅಂತರ ಶಿಸ್ತೀಯ ಸಂಶೋಧನ ವಿಧಿವಿಧಾನಗಳು', ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಬೆಂಗಳೂರು.

21. ಗೋಪಾಲಕೃಷ್ಣರಾವ್ ಎಂ, 1997. 'ಉಪಯುಕ್ತ ಗಿಡ ಮೂಲಿಕೆಗಳು', ಸಾಹಿತ್ಯ ಭಂಡಾರ ಪ್ರಕಾಶನ, ಬೆಂಗಳೂರು.

22. ಗೋಪಾಲ ದಾಬಡೆ ಮತ್ತು ಶಾರದ ಗೋಪಾಲ, 1992. 'ನಮ್ಮ ಆರೋಗ್ಯ ನಮ್ಮ ಕೈಯಲ್ಲಿ', ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು.

23. ಗೋವಿಂದರಾಜು ಟಿ.(ಸಂ), 2003. 'ಜನಪದ ವೈದ್ಯ' ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

24. ಗುರುಪ್ರಸಾದ್ ಕಾಗಿನೆಲೆ, 2005. 'ವೈದ್ಯ ಮತ್ತೊಬ್ಬ', ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು.

25. ಗೋಪಾಲ ಕೃಷ್ಣರಾವ್ ಎಂ, 1998. 'ಬಡವರ ವೈದ್ಯ', ಸಾಹಿತ್ಯ ಭಂಡಾರ, ಬೆಂಗಳೂರು.

26. ಗಣನಾಥ ಎಕ್ಕಾರು, 2000. 'ಜನಪದ ಆಟಗಳು' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

27. ಜವರೇಗೌಡ, 1991. 'ಜಾನಪದ ಅಧ್ಯಯನ' ಚೇತನಾ ಬುಕ್ ಹೌಸ್, ಮೈಸೂರು.

28. ಜೈಶೂರ್. ಬಿ.ಜಿ, 2002. 'ಸುಪ್ರಸಿದ್ಧ ವೈದ್ಯ ವಿಜ್ಞಾನಿಗಳು', ಕಾವ್ಯಕಲಾ ಪ್ರಕಾಶನ, ಬೆಂಗಳೂರು.

29. ತಾಳ್ತಂಜೆ ವಸಂತಕುಮಾರ, 1998. 'ಸಾಂಸ್ಕೃತಿಕ ಸಂಶೋಧನೆ : ಒಂದು ಮುನೋಟ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

30. ತಿಪ್ಪೇರುದ್ರ ಸ್ವಾಮಿ ಎಚ್, 2007. 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ', ಡಿ.ವಿ.ಕೆ. ಮೂರ್ತಿ, ಮೈಸೂರು.

31. ತಿರುಕ (ಶ್ರೀ ರಾಘವೇಂದ್ರ ಸ್ವಾಮೀಜಿ), 1991. 'ಸ್ವಯಂವೈದ್ಯ' ಅನಾಥ ಸೇವಾಶ್ರಮ, ವಿಶ್ವಸ್ತ ಸಮಿತಿ, ಮಲ್ಲಾಡಿಹಳ್ಳಿ

32. ತಿರುಕ (ಶ್ರೀ ರಾಘವೇಂದ್ರ ಸ್ವಾಮೀಜಿ), 1996. 'ಗೃಹವೈದ್ಯ ಕೈಪಿಡಿ', ಅನಾಥ ಸೇವಾಶ್ರಮ, ವಿಶ್ವಸ್ತ ಸಮಿತಿ, ಮಲ್ಲಾಡಿ ಹಳ್ಳಿ.

33. ತಿರುಕ, 1994. 'ವನೌಷಧಿಗಳ ಗುಣಧರ್ಮ ಮತ್ತು ವಿವಿಧ ಶಬ್ಧಕೋಶ' ಅನಾಥಸೇವಾಶ್ರಮ, ಮಲ್ಲಾಡಿಹಳ್ಳಿ

34. ದೇವರಾಜ್ .ಡಿ.ಎಲ್, 1978. 'ಮನೆಮದ್ದು', ಪ್ರಕಾಶಕ ಸಾಹಿತ್ಯ, ಬೆಂಗಳೂರು.

35. ದೇವೇಂದ್ರ ಕುಮಾರ ಹಕಾರಿ, 1988. 'ಜಾನಪದ ಭಂಡಾರ' ಕುವೆಂಪು ಅಧ್ಯಯನ ಕೇಂದ್ರ, ಬೆಂಗಳೂರು.

36. ಥಾಕು ಸುಕ್ರುಗೌಡ, 1997. 'ಕರ್ನಾಟಕ ಔಷಧಿ ಸಸ್ಯಗಳ ಪರಂಪರೆ – 1'

37. ಧನ್ಯಕುಮಾರ ಇಜಾರಿ, 2004. 'ಜೈನ ವೈದ್ಯಕೀಯ ಪರಂಪರೆ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

38. ದೇವರಾಜ್.ಟಿ.ಎಲ್, 2003. 'ಗಿಡಮೂಲಿಕೆಗಳು', ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

39. ನಾಗಲೋಟಮಠ. ಸ.ಜ, 1972. 'ಗುಹ್ಯರೋಗಗಳು', ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

40. ನಿರುಪಮಾ, 2002. 'ಸಂಶೋಧನಾ ವಿಧಾನಗಳು', ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

41. ನಾರಾಯಣ ಕೆ.ವಿ, 2007. 'ಕನ್ನಡ ಜಗತ್ತು ಅರ್ಧಶತಮಾನ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

42. ನಾಯಕ್.ಎನ್. ಆರ್. (ಸಂ), 1993. 'ಹಾಲಕ್ಕಿ ಒಕ್ಕಲಿಗರ ಸಂಸ್ಕೃತಿ', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

43. ನಿರಂಜನಾರಾಧ್ಯ ಎಚ್.ಎಸ್. ಮತ್ತು ಪ್ರಕಾಶ ಸಿ.ರಾವ್, 1990. 'ಔಷದ ನೀತಿ ಮತ್ತು ಶ್ರೀ ಸಾಮಾನ್ಯ', ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು.

44. ಪತಂಜಲಿ ಕೆ.ವಿ., 2005. 'ಊಟಕ್ಕೊಂದು ಆಯುರ್ವೇದ ಕೈಪಿಡಿ', ಭಾಗ್ಯ ಲಕ್ಷ್ಮೀ ಪ್ರಕಾಶನ, ಬೆಂಗಳೂರು.

45. ಪರಮಶಿವಯ್ಯ ಜೀ.ಶಂ, 1997. 'ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು,' ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು.

46. ಪುಟ್ಟಣ್ಣ ಎಂ.ಎಸ್, 1997. 'ಚಿತ್ರದುರ್ಗದ ಪಾಳಯಗಾರರು', ಹರ್ಷ ಪ್ರಿಂಟರ್ಸ್, ಮೈಸೂರು.

47. ಪರಮಶಿವಯ್ಯ ಜೀ.ಶಂ. (ಪ್ರಸಂ), 1994. 'ಜಾನಪದ ಗಂಗೋತ್ರಿ', ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

48. ಪೂರ್ಣಚಂದ್ರ ತೇಜಸ್ವಿ ಕೆ.ಪಿ, 2004. 'ಸಹಜ ಕೃಷಿ' ಪುಸ್ತಕ ಪ್ರಕಾಶನ, ಮೈಸೂರು.

49. ಬೀಜದ ಬುಟ್ಟಿ, 2002. ಗ್ರೀನ್ ಪ್ರತಿಷ್ಠಾನ, ಬೆಂಗಳೂರು.

50. ಬೋನ್ಸ್ಲೆ ಶ್ರೀನಿವಾಸ್, 2005. 'ಹಿತ್ತಲಗಿಡ', ಸಾಧನಾ ಪ್ರಕಾಶನ, ಬೆಂಗಳೂರು.

51. ಬೋರಲಿಂಗಯ್ಯ ಹಿ.ಚಿ., 1991. 'ಗಿರಿಜನ ನಾಡಿಗೆ ಪಯಣ', ರಾಗಿ ರೊಟ್ಟಿ ಪ್ರಕಾಶನ, ಬೆಂಗಳೂರು.

52. ಬೋರಲಿಂಗಯ್ಯ ಹಿ.ಚಿ., 2002. 'ಹಾಲಕ್ಕಿ ಒಕ್ಕಲಿಗರ ಜ್ಞಾನ ಪರಂಪರೆ', ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ರಾಜಾಜಿನಗರ, ಬೆಂಗಳೂರು.

53. ಭಟ್ ಎಲ್.ಜಿ., 1998. 'ಹಾಲಕ್ಕಿ ಒಕ್ಕಲಿಗರು', ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು.

54. ಬೋರಲಿಂಗಯ್ಯ ಹಿ.ಚಿ. (ಸಂ), 1996. 'ಕರ್ನಾಟಕ ಜನಪದ ಕಲೆಗಳ ಕೋಶ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

55. ಮಳಲಿ ವಸಂತಕುಮಾರ್, 2006. 'ಕರ್ನಾಟಕ ಜನಪದ ವೈದ್ಯ', ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಗೋಕುಲಂ, ಮೈಸೂರು.

56. ಮಾಗಡಿ ಆರ್. ಗುರುದೇವ, 2002. 'ಕರ್ನಾಟಕದ ಸಸ್ಯಗಳ ಸಸ್ಯಶಾಸ್ತ್ರೀಯ, ಕನ್ನಡ, ಕೊಂಕಣಿ ಮತ್ತು ತುಳು ಹೆಸರುಗಳು', ದಿವ್ಯ ಚಂದ್ರ ಪ್ರಕಾಶನ, ಬೆಂಗಳೂರು.

57. ಮಾಗಡಿ ಆರ್. ಗುರುದೇವ, 2000. 'ಮನೆ ಔಷಧಿಗಳು', ದಿವ್ಯಚಂದ್ರ ಪ್ರಕಾಶನ, ಬೆಂಗಳೂರು.

58. ಮಾಗಡಿ ಆರ್. ಗುರುದೇವ, 2001 ಮತ್ತು 2007. 'ಕರ್ನಾಟಕದ ಔಷಧೀಯ ಸಸ್ಯಗಳು' ಮಾಲಿಕೆ–1 ಮತ್ತು 2, ದಿವ್ಯಚಂದ್ರ ಪ್ರಕಾಶನ, ಬೆಂಗಳೂರು.

59. ಮಂತ್ರಯೋಗಿ ಪಂಡಿತ ಶ್ರೀ ರೇವಣ್ಣ ಶಾಸ್ತ್ರಿಗಳು, 2004. 'ಮಹಾಜಾದು ಮಂತ್ರ ವಿದ್ಯಾನಿಧಿ', ಮೆ॥ ಪಿ.ಸಿ. ಶಾಬಾದಿಮಠ ಬುಕ್ ಡಿಪೊ, ಗದಗ.

60. ಮಧುಸೂದನ ಡಿ.ಪಿ, 2003. 'ವೈದ್ಯಶಾಸ್ತ್ರ ದೀಪಿಕಾ' ಓರಿಯಂಟಲ್‌ರೀಸರ್ಚ್ ಇನ್‌ಸ್ಟಿಟ್ಯೂಟ್, ಮೈಸೂರು.

61. ಮೂರ್ತಿ ವಿ.ಎನ್, 1994. 'ಯಾವ ವ್ಯಾಧಿಗೆ ಯಾವ ತರಕಾರಿ', ಸಂತೋಷ್ ಪಬ್ಲಿಕೇಷನ್ಸ್, ಬೆಂಗಳೂರು.

62. ಮೂರ್ತಿ ವಿ.ಎನ್. 1993. 'ಯಾವ ವ್ಯಾಧಿಗೆ ಯಾವ ಸೊಪ್ಪು?", ಸಂತೋಷ್ ಪಬ್ಲಿಕೇಷನ್ಸ್, ಬೆಂಗಳೂರು.

63. ಮೋ. ಕ. ಗಾಂಧಿ, ಕೋಪರ್ಡೆಯ.ನಾ(ಸಂ), 2005. 'ಪ್ರಕೃತಿ ಚಿಕಿತ್ಸೆ', ಸಮಾಜ ಪುಸ್ತಕಾಲಯ, ಧಾರವಾಡ.

64. ಯಜ್ಞನಾರಾಯಣ ಉಡುಪ, 1994. 'ಪುರಾಣ ಭಾರತ ಕೋಶ', ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

65. ರಂಗೇಗೌಡ ಸಿ.ಆರ್. ಮತ್ತು ಮಾಗಡಿ ಆರ್. ಗುರುದೇವ, 1993. 'ಜನಪದ ಪಶುರೋಗ ಚಿಕಿತ್ಸೆ', ಗಾಯತ್ರಿ ಪ್ರಕಾಶನ, ಬೆಂಗಳೂರು.

66. ರಂಗಸ್ವಾಮಿ ಅರ್ಚಕ ಬಿ, 1971. 'ಹುಟ್ಟಿದ ಹಳ್ಳಿ', ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

67. ರಾಮಕೃಷ್ಣ ಜಿ. 2006. 'ಭಾರತೀಯ ವಿಜ್ಞಾನದ ಹಾದಿ : ಒಂದು ಅವಲೋಕನ' ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

68. ರಾಮಚಂದ್ರೇಗೌಡ ಹಿ.ಶಿ, 1988. 'ಜಾನಪದ ತಡಕಾಟ' ಮಾನವಿ ಪ್ರಕಾಶನ, ಮೈಸೂರು.

69. ರೇಣುಕಾಭಟ್ ಬಿ.ಕೆ, ಸುನಂದ ಬಿ.ಪಿ. 'ಪೂಜಾರ್ಹ ಔಷಧೀಯ ಸಸ್ಯಗಳು', ಜನಪದ ಪ್ರಕಾಶನ, ಯಶವಂತಪುರ, ಬೆಂಗಳೂರು.

70. ರಾಮಚಂದ್ರೇಗೌಡ ಹಿ.ಶಿ (ಸಂ), 2004. 'ಜಾನಪದ ಗ್ರಹಿಕೆ ; ಪರಿಕಲ್ಪನೆ', ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.

71. ರಮೇಶ್ ಸ.ಚಿ, 2003. 'ಮಾಟ–ಮಂತ್ರ–ಮೋಡಿ,' ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

72. ರಹಮತ್ ತರೀಕೆರೆ, 2007. 'ಕನ್ನಡ ಸಂಶೋಧನೆ ತಾತ್ವಿಕ ವಿಚಾರ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

73. ರವೀಂದ್ರನಾಥ ಕೆ.(ಸಂ), 2008. 'ಅಧ್ಯಯನದ ವಿಧವಿಧಾನಗಳು', ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

74. ರಂಗಸ್ವಾಮಿ ಎ., 1996. 'ಚಾವುಂಡರಾಯನ ಲೋಕೋಪಕಾರ : ಒಂದು ಅಧ್ಯಯನ' ದರ್ಶನಕೀರ್ತಿ ಪ್ರಕಾಶನ, ಮೈಸೂರು.

75. ರಾಜಶೇಖರಪ್ಪ ಬಿ., 2001. 'ನಿರಂತರ' ಶ್ರೀ ಲೋಕ ಪಾವನಿ ಪ್ರಕಾಶನ, ಪಾಂಡವಪುರ.

76. ಲಲಿತಾಭಟ್, 2002. 'ಮಹಿಳೆ ಮತ್ತು ಕುಟುಂಬ ಯೋಜನೆ', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

77. ಲಕ್ಕಪ್ಪ ಗೌಡ ಎಚ್.ಜೆ(ಸಂ.), 2000. 'ಕರ್ನಾಟಕ ಬುಡಕಟ್ಟುಗಳು' ಸಂ–1, ಸಂ–2, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

78. ಲೀಲಾವತಿ ಎಂ, 2002. 'ಮೂಢನಂಬಿಕೆ ಮತ್ತು ಮಹಿಳೆ', ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು.

79. ಲಕ್ಕಪ್ಪಗೌಡ. ಎಚ್.ಜೆ. (ಸಂ), 1997. 'ಜಾನಪದ ಕೈಪಿಡಿ', ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

80. ಲಕ್ಕಪ್ಪಗೌಡ ಎಚ್.ಜೆ(ಪ್ರ.ಸಂ) 1997. 'ಜಾನಪದ ಗಂಗೋತ್ರಿ', ಸಂಪುಟ–8 (ಸಂಚಿಕೆ 2&3) ಮತ್ತು 9, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

81. ವಾಲೀಕಾರ ಚೆನ್ನಣ್ಣನ, 1998. 'ಹೈದರಾಬಾದ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ'.

82. ವಿವೇಕಾನಂದ ಟಿ.ಎಸ್, 1996. 'ಹಸಿರು ಕೊಳಲು', ಇಂದ್ರಪ್ರಸ್ಥ ಪ್ರಕಾಶನ, ಗವಿಪುರಂ, ಬೆಂಗಳೂರು.

83. ವಿವೇಕರೈ ಬಿ.ಎ, 1985. 'ಅನ್ವಯಿಕ ಜಾನಪದ', ಮಂಗಳ ಗಂಗೋತ್ರಿ, ಮಂಗಳೂರು.

84. ವೀರಾರಾವ್, 1986. 'ಆಹಾರ ವಿಜ್ಞಾನಕ್ಕೆ ಪ್ರಥಮ ಪರಿಚಯ' ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು.

85. ವೇದಬ್ರಹ್ಮ ಪಂಡಿತರತ್ನ ಚಂದ್ರಶೇಖರಶಾಸ್ತ್ರಿ, 'ಮನೆಯಲ್ಲೇ ಔಷಧಿ', ಪ್ರಕಾಶಕರು – ಮೆಸರ್ಸ್ ಟಿ.ನಾರಾಯಣ ಅಯ್ಯಂಗಾರ್, ಬೆಂಗಳೂರು.

86. ವಸುಂಧರಾ ಭೂಪತಿ (ಸಂ), 2008. 'ಆಹಾರ ಮತ್ತು ಆರೋಗ್ಯ', ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

87. ವಸುಂಧರಾ ಭೂಪತಿ (ಸಂ) 2005. 'ವೈದ್ಯಲೋಚನ', ನವಕರ್ನಾಟಕ ಪ್ರಕಾಶನ, ಬೆಂಗಳೂರು.

88. ವಿಲಾಸ ಬಿ. ನಾಯಿಕವಾಡಿ, 1996. 'ಗುದ ಹಾಗೂ ನೆಟ್ಟಗರುಳುಗಳ ಸಾಮಾನ್ಯ ವ್ಯಾಧಿಗಳು,' ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

89. ವಸುಂಧರಾ ಭೂಪತಿ, 2006. 'ಔಷಧೀಯ ಗುಣವುಳ್ಳ ಉಪಯುಕ್ತ ಸೊಪ್ಪು ತರಕಾರಿಗಳು', ದಿವ್ಯಚಂದ್ರ ಪ್ರಕಾಶನ, ಬೆಂಗಳೂರು.

90. ವಾಲಿ ಎಂ.ಎನ್, 2006. 'ಕೃಷಿ ಜಾನಪದ' ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

91. ವಿರೂಪಾಕ್ಷಿ ಪೂಜಾರಹಳ್ಳಿ, 2002. 'ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

92. ವೀರಣ್ಣ ದಂಡೆ ಮತ್ತು ಶ್ರೀಪಾದ ಶೆಟ್ಟಿ (ಸಂ) 2006. 'ಸುವರ್ಣ ಜಾನಪದ ಲೇಖನಗಳು', ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

93. ಶಂಕರ್ ಪಿ.ಎಸ್, 1995. 'ಕ್ಯಾನ್ಸರ್', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

94. ಶಂಕರ ನಾರಾಯಣ ತೀ.ನಂ.(ಸಂ), 1998. 'ಕರ್ನಾಟಕ ಜನಪದ ಮಹಾಕಾವ್ಯಗಳು', ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

95. ಶಂಕರ ನಾರಾಯಣ ತೀ.ನಂ, 1982. 'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು', ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

96. ಶಿರೂರ ಬಿ.ವ್ಹಿ, 1992. 'ಸಂಶೋಧನ ಸ್ವರೂಪ', ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ.

97. ಶಿವಕುಮಾರ ಸ್ವಾಮಿ, 2004. 'ಆರೋಗ್ಯ ದರ್ಪಣ', ರಾಜಲಕ್ಷ್ಮೀ ಪ್ರಕಾಶನ, ಬನಶಂಕರಿ, ಬೆಂಗಳೂರು.

98. ಶಿವರಾಮ ಶೆಟ್ಟಿ ಬಿ, 2000. 'ಸಸ್ಯ ಜಾನಪದ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

99. ಶಿವಲೀಲಾ ಎಚ್.ಬಿ, 2006. 'ಆಹಾರ ಪೋಷಣೆ : ಪರಿಚಯ', ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

100. ಶ್ರೀಕಂಠಶಾಸ್ತ್ರಿ ಎಸ್, 2006, 'ಭಾರತೀಯ ಸಂಸ್ಕೃತಿ', ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು.

101. ಶ್ರೀಕಂಠ ಕೂಡಿಗೆ (ಸಂ), 2001. 'ಜಾನಪದ ವಿವಿಧ ಮುಖಗಳು,' ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

102. ಶೇಷ ಅಯ್ಯಂಗಾರ್ ಹೆಚ್. (ಸಂ), 2002. 'ಲೋಕೋಪಕಾರಂ' (ಚಾವುಂಡರಾಯ) ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

103. ಶಂಕರ ನಾರಾಯಣ ತೀ.ನಂ, 1999. 'ಜಾನಪದ ಸಮೀಕ್ಷೆ – ವಿಶ್ಲೇಷಣೆ', ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.

104. ಸತ್ಯನಾರಾಯಣ ಭಟ್.ಪಿ, 1997. 'ಬೆಂಗಳೂರು ಜಿಲ್ಲೆಯ ಬರಗಾಲ ವೈದ್ಯರು', ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ.

105. ಸತ್ಯವತಿ ಆದ್ಯ, 1983. 'ಪೂಜಾವೃಕ್ಷಗಳು,' ಐಬಿಹೆಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು.

106. ಸ್ವಾಮಿ ರಾಮ, 1996. 'ಹಿಮಾಲಯದ ಮಹಾತ್ಮರ ಸನ್ನಿಧಿಯಲ್ಲಿ', ಕಾಮದೇನು ಪ್ರಕಾಶನ, ಬೆಂಗಳೂರು.

107. ಸ್ವಾಮಿ ಬಿ.ಎಸ್, 'ಮಲೆಯ ಮಾದೇಶ್ವರ'.

108. ಸಿದ್ದಲಿಂಗಯ್ಯ, 1997. 'ಗ್ರಾಮದೇವತೆಗಳು', ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು.

109. ಸುಮಿತ್ರ ಎಂ, 2002. 'ಕಣಿಯರ ಸಂಸ್ಕೃತಿ', ಮೈತ್ರೀಯ ಪ್ರಕಾಶನ, ಬೆಂಗಳೂರು.

110. ಸುಶೀಲಾ ಚಂದ್ರಶೇಖರ್, 2006. 'ಪಥ್ಯರಹಿತ ಮನೆಔಷಧಿ,' ಪದ್ಮಶ್ರೀ ಪ್ರಕಾಶನ, ಬೆಂಗಳೂರು.

111. ಸೋಮಶೇಖರ್ ಬಿ.ಎಸ್, 2008. 'ತಾವರೆಯೆಲೆ ಮೇಲಿಟ್ಟ ತುತ್ತು', ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

112. ಸೋಮೇಶ್ವರ ನಾ, 2008. 'ಮನುಕುಲವನ್ನು ಬೆಳಗಿದ 50 ವೈದ್ಯಕೀಯ ಸಂಶೋಧನೆಗಳು', ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು.

113. ಹನುಮಂತರಾವ್ ಬಿ. ದೊಡ್ಡಮನಿ, 2004. 'ಜಾನಪದ ಹಬ್ಬಗಳು ಮತ್ತು ಉತ್ಸವಗಳು', ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

114. ಹರೀಶ ಸಿ.ಆರ್, 2003. 'ಲಾಭದಾಯಕ ಔಷಧಿ ಗಿಡಗಳು', ಚೌಕಿ ಸಮುಚ್ಚಯ ಸಂಪನ್ಮೂಲ, ಮಂಗಳೂರು.

115. ಹೆಗಡೆ ಎಲ್.ಆರ್, 1995. 'ಪಶುವೈದ್ಯ ರತ್ನಾಕರ', ಸಾಹಿತ್ಯ ಪ್ರಕಾಶನ, ದಾಜಿಬಾನ ಪೇಟೆ, ಹುಬ್ಬಳ್ಳಿ.

116. ಹೊನ್ನಗಿರಿಯಪ್ಪ ಟಿ.ಜಿ, 2005. 'ನಮಗೆ ಕಾಯಿಲೆಗಳು ಏಕೆ ಬರುತ್ತವೆ?' ದಿವ್ಯಚಂದ್ರ ಪ್ರಕಾಶನ, ಬೆಂಗಳೂರು.

117. ಹೆಗಡೆ ಆರ್.ಪಿ. (ಅನುವಾದಕರು) 2005. 'ಸುರಪಾಲನ ವೃಕ್ಷಾಯುರ್ವೇದ', ಅಂಕಿತ ಪುಸ್ತಕ, ಬೆಂಗಳೂರು.

ನಿಘಂಟುಗಳು

118. 'ಕನ್ನಡ ಜಾನಪದ ಕೋಶ', ನಾಗೇಗೌಡ ಎಚ್.ಎಲ್. (ಪ್ರಸಂ), ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು.

119. 'ಸಂಕ್ಷಿಪ್ತ ಕನ್ನಡ ನಿಘಂಟು' (ಪರಿಷ್ಕೃತ), 2001. ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

120. ಪ್ರೊ. ಜಿ.ವಿ. ಯವರ 'ಕನ್ನಡ ಕ್ಲಿಷ್ಟಪದ ಕೋಶ', 2006. ಪ್ರಿಸಮ್ ಬುಕ್ಸ್ ಪ್ರೈ.ಲಿ. ಬೆಂಗಳೂರು.

ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧಗಳು

121. ಡಾ. ಮಂಜುನಾಥ, 2006. ಕರ್ನಾಟಕ ಜಾನಪದದ ಮೇಲೆ ಜಾಗತೀಕರಣದ ಪ್ರಭಾವ ಒಂದು ಅಧ್ಯಯನ, ಬೆಂಗಳೂರು ವಿಶ್ವವಿದ್ಯಾಲಯ.

122. ಕೃಷ್ಣಮೂರ್ತಿ ಹನೂರು, ಬೇಡನಾಯಕರು, ಬೆಂಗಳೂರು ವಿಶ್ವವಿದ್ಯಾಲಯ.

ಇಂಗ್ಲೀಷ್ ಕೃತಿಗಳು

121. Hidden Harvests, Green Foundation, Bangalore.

122. Magadi R. Gurudeva, 2001. `Botanical and Vernacular Names of South Indian Plants', Divyachandra Prakashana, Bangalore.

123. Pamela K. Metz, `Herbal Medicines of THE TROPICAL JUNGLE', Premier publishing pvt. ltd, chennai-600090.

124. Gyanendra pandey, 1992. `Medicinal Flowers' Indian Books centre, Delhi.

125. Prof. Dr. P.H. KULKARNI, 1998. `Ayurveda Minerals' Indian Books centre, Delhi.

* * *